ಕರ್ನಾಟ ಪುಸ್ತಕಮಾಲೆ

ಕನ್ನಡ ಪಂಡಿತ ಪರಂಪರೆ

Kannada Scholarship Tradition

ಸಂಪಾದಕರು

ಆರ್ವಿಯಸ್. ಸುಂದರಂ

ಕರ್ನಾಟ

ಅಭಿಜಾತ ಕನ್ನಡ ಕೇಂದ್ರ

Kannada Pandita Parampare

Kannada Scholarship Tradition by different authors

© 2026 Tattva Heritage Foundation

First Edition: July 2026

ISBN: 978-81-985025-7-5

Editor
R. V. S. Sundaram

Karṇāṭa: Centre for Classical Kannada (karnata.org)
Executive Board
R.V.S Sundaram, Gil Ben-Herut, and Manish Maheshwari

Published by
Tattva Heritage Foundation
Kolkata, India

All rights reserved. No part of this publication may be reproduced, stored, or transmitted in any form without the prior written permission of the publisher.

The views and interpretations expressed in this book are those of the authors. The publisher does not take responsibility for any errors or omissions.

For permissions, enquiries, rights-related matter, please contact:

Manish Maheshwari
Tattva Heritage Foundation
namaste@tattvaheritage.org

Cover design by Basavaraju, Mysuru.

Printed at Keerthan Graphics, Mysuru.

Ph. 9916226213

ಅಧಿಕೃತ ಮಾರಾಟಗಾರರು

ಅಭಿರುಚಿ ಪ್ರಕಾಶನ

386, 14ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಸರಸ್ವತಿಪುರಂ, ಮೈಸೂರು–09

ಚರವಾಣಿ: 99805 60013

ಮುನ್ನುಡಿ

ಆಧುನಿಕ ಕನ್ನಡ ಸಾಹಿತ್ಯ ಎಷ್ಟು ವೈವಿಧ್ಯಮಯವಾಗಿದೆಯೋ ಪ್ರಾಚೀನ ಸಾಹಿತ್ಯ ಅಷ್ಟೇ ವೈವಿಧ್ಯಮಯವೂ ಸಂಪದ್ಭರಿತವೂ ಆಗಿದೆ. ಸಾಹಿತ್ಯಾಧ್ಯಯನ ಮಾಡುವವರಿಗೆ ಆಧುನಿಕ ಸಾಹಿತ್ಯ, ಪ್ರಾಚೀನ ಸಾಹಿತ್ಯ ಎಂಬ ಭೇದ ಭಾವನೆ ಇರಬಾರದು. ಕನ್ನಡದಲ್ಲಿ ಶಾಸನ ಸಾಹಿತ್ಯ ಅತ್ಯಂತ ವಿಸ್ತಾರವಾಗಿದೆ. ಹಳಗನ್ನಡ ಸಾಹಿತ್ಯ ವಿವಿಧ ಪ್ರಕಾರಗಳಿಂದ, ಭಾಷಾಪ್ರಯೋಗಗಳಿಂದ, ಛಂದೋವೈವಿಧ್ಯದಿಂದ ಸೂಕ್ಷ್ಮ ಅಧ್ಯಯನ ಮಾಡಲು ಯೋಗ್ಯವಾಗಿದೆ. ಈ ಅಧ್ಯಯನದ ಫಲವನ್ನು ಕಳೆದ ಇನ್ನೂರು ವರ್ಷಗಳಲ್ಲಿ ಒದಗಿಸಿಕೊಟ್ಟ ಪಂಡಿತ ಪರಂಪರೆಯ ಬಗ್ಗೆ ಕನ್ನಡಿಗರೆಲ್ಲರೂ ತಿಳಿಯಬೇಕಾಗಿದೆ; ತಿಳಿದು ಹೆಮ್ಮೆ ಪಡಬೇಕಾಗಿದೆ. ಈ ಅಭಿಜಾತ ಪಂಡಿತರ ಕಾರ್ಯದೀಕ್ಷೆ, ನಿರಂತರ ಪರಿಶ್ರಮ, ಭಾಷಾಪಾಂಡಿತ್ಯ, ಸಾಧನೆ ಅತ್ಯುನ್ನತವಾಗಿದ್ದು ಮಾರ್ಗದರ್ಶಕವಾಗಿದೆ. ಅಂಥ ಅರವತ್ತು ಜನ ಪಂಡಿತರ ಜೀವನ ಪರಿಚಯ ಇಲ್ಲಿದೆ.

ಇವರಲ್ಲಿ ಕೆಲವರು ವಿದೇಶೀ ವಿದ್ವಾಂಸರು. ಇಲ್ಲಿಗೆ ಧರ್ಮಪ್ರಚಾರಕರಾಗಿ ಬಂದು, ಇಲ್ಲಿಯ ಭಾಷೆಯನ್ನು ಕಲಿತು, ಅಭಿಜಾತ ಕನ್ನಡ ಸಾಹಿತ್ಯಕ್ಕೆ ಮಹೋಪಕಾರ ಮಾಡಿದ್ದಾರೆ. ಕನ್ನಡಭಾಷೆ ಮತ್ತು ಸಾಹಿತ್ಯದ ಅಧ್ಯಯನಕ್ಕೆ ಅವರು ಕೊಟ್ಟ ಹೊಸ ತಿರುವು ಗಮನಿಸತಕ್ಕದ್ದು. ಕನ್ನಡದಲ್ಲಿರುವ ಸಾವಿರಾರು ಶಾಸನಗಳನ್ನು ಸಂಗ್ರಹಿಸಿ, ಕನ್ನಡ ಶಾಸನ ಸಾಹಿತ್ಯದ ಹಿರಿಮೆಯನ್ನು ಜಗತ್ತಿಗೆ ತಿಳಿಯಪಡಿಸುವ ಉದ್ದೇಶದಿಂದ ಶಾಸನಗಳನ್ನು ಸಂಗ್ರಹಿಸಿ, ಪ್ರಕಟಿಸಿ, ಅವುಗಳ ಬಗೆಗೆ ಲೇಖನಗಳನ್ನೂ ಬರೆದಿದ್ದಾರೆ. ಅಲ್ಲದೆ ಈ ವಿದ್ವಾಂಸರು ಅಪ್ರಕಟಿತ ಗ್ರಂಥಗಳನ್ನು ಸಂಪಾದಿಸಿ, ಅವುಗಳಿಗೆ ವಿದ್ವತ್ಪೂರ್ಣ ಪೀಠಿಕೆಗಳನ್ನು ಬರೆದು ಪ್ರಕಟಿಸಿದ್ದಾರೆ.

ಪ್ರಸ್ತುತ ಕೃತಿಯಲ್ಲಿ ೬೦ ಜನ ವಿದ್ವಾಂಸರ ಜೀವನ ಮತ್ತು ಸಾಧನೆಯನ್ನು ಕುರಿತ ಲೇಖನಗಳಿವೆ. ಇವರಲ್ಲಿ ಕೆಲವರ ಮನೆಮಾತು ಜರ್ಮನ್, ತೆಲುಗು,

ತಮಿಳು, ತುಳು, ಕೊಂಕಣಿ, ಮರಾಠಿ ಮತ್ತು ಇತರ ಭಾಷೆಗಳು. ಆದರೆ ಕನ್ನಡ ಸಾಹಿತ್ಯದ ಅನನ್ಯತೆಯನ್ನು, ಭವ್ಯತೆಯನ್ನು ಗಮನಿಸಿ ಆ ಭಾಷೆಗೆ ಮತ್ತು ಸಾಹಿತ್ಯಕ್ಕೆ ಅದ್ಭುತವಾದ ಕೊಡುಗೆಯನ್ನು ನೀಡಿದ್ದಾರೆ. ಗ್ರಂಥ ಸಂಪಾದನೆ, ಹಳಗನ್ನಡ ಕಾವ್ಯವಿಮರ್ಶೆ, ಶಾಸನಗಳ ಸಂಶೋಧನೆ, ನಿಘಂಟು ರಚನೆ, ಛಂದಸ್ಸು, ವ್ಯಾಕರಣ, ಕಾವ್ಯಮೀಮಾಂಸೆ ಮೊದಲಾದ ಕ್ಷೇತ್ರಗಳಲ್ಲಿ ಇಂಥ ಮಹನೀಯರ ಕೃಷಿ ಚಿರಸ್ಮರಣೀಯವಾಗಿದೆ. ಇವರಲ್ಲಿ ಕೆಲವರು ಕನ್ನಡೇತರ ಪ್ರದೇಶಗಳಲ್ಲಿದ್ದು ಮದ್ರಾಸು ವಿಶ್ವವಿದ್ಯಾಲಯದಂಥ ಸಂಸ್ಥೆಗಳಿಂದ ಅಭಿಜಾತ ಸಾಹಿತ್ಯದ ಪ್ರಕಟನೆಗಳನ್ನು ತಂದಿದ್ದಾರೆ.

ಅಭಿಜಾತ ಸಾಹಿತ್ಯಕ್ಕೆ ಮಹತ್ತರವಾದ ಕೊಡುಗೆಯನ್ನು ನೀಡಿದ ಪಂಡಿತರ ಕಥೆಗಳು ಅತ್ಯಂತ ಆಸಕ್ತಿಕರವಾಗಿರುತ್ತವೆ. ಇಂದಿನ ಯುವಪೀಳಿಗೆ ಇವರಿಂದ ಕಲಿಯಬೇಕಾಗಿರುವುದು ಬಹಳಷ್ಟಿದೆ. ಕಿಟೆಲ್, ಬಿ.ಎಲ್. ರೈಸ್, ಆರ್. ನರಸಿಂಹಾಚಾರ್, ಎಚ್. ಶೇಷಯ್ಯಂಗಾರ್, ಗೋವಿಂದ ಪೈ, ಮುಳಿಯ ತಿಮ್ಮಪ್ಪಯ್ಯ, ಡಿ.ಎಲ್. ನರಸಿಂಹಾಚಾರ್, ಎಂ. ಚಿದಾನಂದಮೂರ್ತಿ, ಎಂ.ಎಂ. ಕಲಬುರ್ಗಿ, ಕಮಲಾ ಹಂಪನಾ ಮೊದಲಾದವರು ಅಭಿಜಾತ ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿದ ಸೇವೆ ಬೆರಗು ಗೊಳಿಸುವಂಥದ್ದು.

ಈ ಪಂಡಿತರ ಜೀವನಚರಿತ್ರೆಯನ್ನು ಪರಿಶೀಲಿಸಿದಾಗ ಇವರ ಪಾಂಡಿತ್ಯ, ಪರಿಶ್ರಮ, ನಿಷ್ಠೆ, ವಿಸ್ತಾರವಾದ ಪರಿಶೀಲನೆ, ಸೂಕ್ಷ್ಮದೃಷ್ಟಿ ಯಾವ ಸಾಹಿತ್ಯ ವಿದ್ಯಾರ್ಥಿಗಾದರೂ ಸ್ಫೂರ್ತಿಯನ್ನು ನೀಡುವಂಥದ್ದು. ಇಂಥ ಅನೇಕ ಮಹನೀಯರ ಬಗೆಗೆ ಈಗಾಗಲೇ ಹಲವು ಪುಸ್ತಕಗಳು, ಲೇಖನಗಳು ಪ್ರಕಟವಾಗಿವೆ. ಆದರೆ ವಿದ್ವತ್‌ಪ್ರಪಂಚವನ್ನು ಸಮೃದ್ಧಗೊಳಿಸಿದ ಮಹನೀಯರನ್ನು, ಅವರ ಜೀವನ ಶೈಲಿಯನ್ನು, ಪರಿಶ್ರಮದ ಪದ್ಧತಿಗಳನ್ನು ಮತ್ತೊಮ್ಮೆ ತಿಳಿದುಕೊಳ್ಳುವ ಆವಶ್ಯಕತೆ ಇದೆ.

ಈ ಪುಸ್ತಕದಲ್ಲಿ ಪ್ರಸಕ್ತರಾದ ಪಂಡಿತರು ಸುಮಾರು ಇನ್ನೂರು ವರ್ಷಗಳ ಕಾಲಾವಧಿಯಲ್ಲಿ ಕನ್ನಡ ಅಭಿಜಾತ ಸಾಹಿತ್ಯಕ್ಕೆ ಅಮೂಲ್ಯವಾದ ಕೊಡುಗೆಯನ್ನು ನೀಡಿದ್ದಾರೆ. ಇವರು ೧೯ನೆಯ ಶತಮಾನದ ಪ್ರಾರಂಭಕಾಲದಿಂದ ಇಪ್ಪತ್ತೊಂ

ದನೆಯ ಶತಮಾನದ ಇತ್ತೀಚಿನ ಕಾಲದ ತನಕ ತಮ್ಮ ಕೃತಿಗಳ ಮೂಲಕ ವಿದ್ವತ್ತನ್ನು ಮೆರೆದವರು. ಭವಿಷ್ಯತ್ತಿನ ಸಂಶೋಧಕರಿಗೆ, ಸಾಹಿತ್ಯ ಪ್ರೇಮಿಗಳಿಗೆ ಇವರಿಂದ ಸ್ಫೂರ್ತಿ ದೊರೆತು ಆ ನಿಟ್ಟಿನಲ್ಲಿ ಕೃಷಿಯನ್ನು ಮುಂದುವರಿಸಬೇಕೆಂಬುದು ನಮ್ಮ ಸದಾಶಯ.

ಹಿರಿಯರ ಸಾಹಿತ್ಯಕೃತಿಗಳು ನಮ್ಮ ಮೇಲೆ ಅತೀವ ಪ್ರಭಾವ ಬೀರುತ್ತವೆ. ಕೇಂದ್ರ ಸಾಹಿತ್ಯ ಅಕಾಡೆಮಿ 'ಭಾರತೀಯ ಸಾಹಿತ್ಯ ನಿರ್ಮಾಪಕರು' ಎಂಬ ಶೀರ್ಷಿಕೆಯಲ್ಲಿ ಖ್ಯಾತ ಸಾಹಿತಿಗಳನ್ನು ಕುರಿತಂತೆ ಅನೇಕ ಪುಸ್ತಕಗಳನ್ನು ಪ್ರಕಟಿಸಿದೆ. ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಮೈಸೂರು ವಿಶ್ವ ವಿದ್ಯಾ ನಿಲಯ, ಕನ್ನಡ ವಿಶ್ವವಿದ್ಯಾಲಯ ಮತ್ತಿತರ ಸಂಸ್ಥೆಗಳು ಈ ರೀತಿಯ ಜೀವನ ಚರಿತ್ರೆಗಳನ್ನು ಪ್ರಕಟಿಸಿವೆ. ಪ್ರಸ್ತುತ ಕೃತಿಯಲ್ಲಿ ಸಂಕ್ಷಿಪ್ತವಾಗಿರುವ ಜೀವನಚಿತ್ರಗಳನ್ನು ಓದಿದವರು ಇನ್ನೂ ಹೆಚ್ಚಿನ ವಿವರಗಳಿಗಾಗಿ ಬೇರೆ ಪುಸ್ತಕಗಳನ್ನು ಓದಿ ಅದರ ಪ್ರಯೋಜನ ಪಡೆಯಬೇಕೆಂಬ ಆಶಯದಿಂದ ಈ ಕೃತಿಯನ್ನು ಕೈಗೆತ್ತಿಕೊಳ್ಳಲಾಗಿದೆ.

ಇಂಥ ಉಪಯುಕ್ತ ಕೃತಿಗಳ ಪ್ರಕಟನೆಯಲ್ಲಿ ಆಸಕ್ತಿ ತೋರಿ ಕನ್ನಡ ಸಾಹಿತ್ಯ ಸೇವೆಗೆ ತೊಡಗಿದ ಮನೀಶ್ ಮಹೇಶ್ವರಿ ಅವರಿಗೆ ಧನ್ಯವಾದಗಳು. ಈ ಪುಸ್ತಕದಲ್ಲಿರುವ ಲೇಖನಗಳನ್ನು ಸಕಾಲಕ್ಕೆ ಕೊಟ್ಟು ಸಹಕರಿಸಿದ ಎಲ್ಲಾ ಲೇಖಕರಿಗೂ ಆಭಾರಿಯಾಗಿದ್ದೇವೆ. ಇದರ ಸಂಪಾದನ ಕಾರ್ಯದಲ್ಲಿ ಹಾಗೂ ಕರಡು ತಿದ್ದುವಲ್ಲಿ ಸಹಕಾರ ನೀಡಿದ ಡಾ. ಅಕ್ಕಮಹಾದೇವಿ ಅವರಿಗೆ ಹಾಗೂ ಡಾ. ಮಾಲಿನಿ ಅಭ್ಯಂಕರ್ ಅವರಿಗೆ ಧನ್ಯವಾದಗಳು.

*****

ಪರಿವಿಡಿ

1.	ಹರ್ಮನ್ ಮೊಗ್ಲಿಂಗ್	– ಗೌರಮ್ಮ ಎಚ್.	03
2.	ರೆವರೆಂಡ್ ಎಫ್. ಕಿಟೆಲ್	– ಕಲಾಶ್ರೀ ಎಚ್. ಎಂ.	10
3.	ಬಿ.ಎಲ್. ರೈಸ್	– ಗೌರಮ್ಮ ಎಚ್.	21
4.	ಇ.ಪಿ. ರೈಸ್	– ಬಿ. ವೆಂಕಟರಾಮಣ್ಣ	31
5.	ಕೆ.ಬಿ. ಪಾಠಕ್	– ಅಕ್ಕಮಹಾದೇವಿ	35
6.	ಸೋಸಲೆ ಅಯ್ಯಾಶಾಸ್ತ್ರಿ	– ಗೀತಾ ನಾವಲ್	40
7.	ಆರ್. ನರಸಿಂಹಾಚಾರ್	– ನಾಗರತ್ನಮ್ಮ	46
8.	ಎಸ್.ಜಿ. ನರಸಿಂಹಾಚಾರ್	– ಅನ್ನಪೂರ್ಣ ಎನ್.ಎಸ್.	53
9.	ಶಿವಶಂಕರಶಾಸ್ತ್ರೀ	– ಗೀತಾ ನಾವಲ್	59
10.	ಆರ್. ಶಾಮಶಾಸ್ತ್ರಿ	– ಪವಿತ್ರ ಬಿ.	69
11.	ಬೆಳ್ಳಾವೆ ವೆಂಕಟ ನಾರಣಪ್ಪ	– ಗೀತಾ ನಾವಲ್	75
12.	ಫ.ಗು. ಹಳಕಟ್ಟಿ	– ನಾಗರತ್ನಮ್ಮ	83
13.	ಚನ್ನಪ್ಪ ಉತ್ತಂಗಿ	– ರಾಧಾಮಣಿ ಎಂ.ಎ.	87
14.	ಎಂ. ಗೋವಿಂದ ಪೈ	– ನಾಗರತ್ನಮ್ಮ	95
15.	ಬಿ.ಎಂ. ಶ್ರೀಕಂಠಯ್ಯ	– ಪೂರ್ಣಿಮಾ ಸಿ.ಎಸ್.	100
16.	ಟಿ.ಎಸ್. ವೆಂಕಣ್ಣಯ್ಯ	– ಪೂರ್ಣಿಮಾ ಸಿ.ಎಸ್.	105
17.	ಎ. ವೆಂಕಟಸುಬ್ಬಯ್ಯ	– ಪವಿತ್ರ ಬಿ.	110
16.	ಮುಳಿಯ ತಿಮ್ಮಪ್ಪಯ್ಯ	– ರಾಧಾಮಣಿ ಎಂ.ಎ.	117
19.	ಎ. ಶಾಂತಿರಾಜ ಶಾಸ್ತ್ರೀ	– ಪವಿತ್ರ ಬಿ.	126

20. ಶೇಷಯ್ಯಂಗಾರ್ ಎಚ್.	–	ಸಂತೋಷಿ ಸುಬ್ರಹ್ಮಣ್ಯ	133
21. ಎ.ಆರ್. ಕೃಷ್ಣಶಾಸ್ತ್ರಿ	–	ನಾಗರತ್ನಮ್ಮ	139
22. ಪಂಡಿತ ಚಂದ್ರಶೇಖರ ಶಾಸ್ತ್ರಿ	–	ಅನ್ನಪೂರ್ಣ ಎನ್.ಎಸ್.	145
23. ಶಿ.ಶಿ. ಬಸವನಾಳ	–	ಮಾಲಿನಿ ಎನ್. ಅಭ್ಯಂಕರ್	151
24. ರಾಳ್ಳಪಲ್ಲಿ ಅನಂತಕೃಷ್ಣ ಶರ್ಮ	–	ಗೀತಾ ನಾವಲ್	158
25. ಕೆ.ಜಿ. ಕುಂದಣಕಾರ	–	ಗೀತಾ ನಾವಲ್	166
26. ಶಂ.ಬಾ. ಜೋಷಿ	–	ಗೀತಾ ನಾವಲ್	175
27. ಆರ್.ಎಸ್. ಪಂಚಮುಖಿ	–	ಅನ್ನಪೂರ್ಣ ಎನ್.ಎಸ್.	184
28. ಎಸ್.ಸಿ. ನಂದೀಮಠ	–	ರಾಧಾಮಣಿ ಎಂ.ಎ.	193
29. ಸೇಡಿಯಾಪು ಕೃಷ್ಣಭಟ್ಟ	–	ಸಂತೋಷಿ ಸುಬ್ರಹ್ಮಣ್ಯ	200
30. ಕೋಟ ಶಿವರಾಮ ಕಾರಂತ	–	ಸಣ್ಣಪಾಪಯ್ಯ	206
31. ಎಸ್. ಶ್ರೀಕಂಠಶಾಸ್ತ್ರಿ	–	ಬಿ. ವೆಂಕಟರಾಮಣ್ಣ	214
32. ಎಸ್. ಅನಂತರಂಗಾಚಾರ್	–	ವೀರಣ್ಣ ಎಂ.ಡಿ.	221
33. ಕುವೆಂಪು	–	ಸಣ್ಣಪಾಪಯ್ಯ	226
34. ತೀ.ನಂ. ಶ್ರೀಕಂಠಯ್ಯ	–	ನಾಗರತ್ನಮ್ಮ	233
35. ಡಿ.ಎಲ್. ನರಸಿಂಹಾಚಾರ್	–	ಬಿ. ವೆಂಕಟರಾಮಣ್ಣ	238
36. ಆ.ನೇ. ಉಪಾಧ್ಯೆ	–	ಗೀತಾ ನಾವಲ್	245
37. ಎಂ. ಮರಿಯಪ್ಪಭಟ್ಟ	–	ಅಕ್ಕಮಹಾದೇವಿ	256
38. ಕೆ. ವೆಂಕಟರಾಮಪ್ಪ	–	ಬಿ. ವೆಂಕಟರಾಮಣ್ಣ	265
39. ರಂ.ಶ್ರೀ. ಮುಗಳಿ	–	ಬಿ. ವೆಂಕಟರಾಮಣ್ಣ	271
40. ತ.ಸು. ಶಾಮರಾಯ	–	ವೀರಣ್ಣ ಎಂ.ಡಿ.	278
41. ಸ.ಸ. ಮಾಳವಾಡ	–	ವಿನೋದ	283

42. ಎಂ.ವಿ. ಸೀತಾರಾಮಯ್ಯ	–	ಮಾಲಿನಿ ಎನ್. ಅಭ್ಯಂಕರ್	287
43. ಸಂ.ಶಿ. ಭೂಸನೂರುಮಠ	–	ಬಿ. ವೆಂಕಟರಾಮಣ್ಣ	294
44. ಎಚ್. ದೇವೀರಪ್ಪ	–	ಅನ್ನಪೂರ್ಣ ಎನ್.ಎಸ್.	298
45. ಜಿ. ವೆಂಕಟಸುಬ್ಬಯ್ಯ	–	ಬಿ. ವೆಂಕಟರಾಮಣ್ಣ	307
46. ತೆಕ್ಕುಂಜ ಗೋಪಾಲಕೃಷ್ಣಭಟ್ಟ	–	ಗೀತಾ ನಾವಲ್	313
47. ಜಿ.ಎಸ್. ಗಾಯಿ	–	ಬಿ. ವೆಂಕಟರಾಮಣ್ಣ	321
48. ಜಿ. ವರದರಾಜರಾವ್	–	ಪೂರ್ಣಿಮಾ ಸಿ.ಎಸ್.	326
49. ಎಲ್. ಬಸವರಾಜು	–	ವೀರಣ್ಣ ಎಂ.ಡಿ.	332
50. ಆರ್.ಸಿ. ಹಿರೇಮಠ	–	ಅಕ್ಕಮಹಾದೇವಿ	338
51. ಟಿ. ಕೇಶವಭಟ್ಟ	–	ಸುಂದರ ಕೇನಾಜೆ	346
52. ಎನ್. ಬಸವಾರಾಧ್ಯ	–	ಗೌರಮ್ಮ ಎಚ್.	353
53. ಶ್ರೀನಿವಾಸ ಹಾವನೂರ	–	ಬಿ. ವೆಂಕಟರಾಮಣ್ಣ	361
54. ಎಚ್. ತಿಪ್ಪೇರುದ್ರಸ್ವಾಮಿ	–	ನಾಗರತ್ನಮ್ಮ	368
55. ಬಿ.ಎಸ್. ಸಣ್ಣಯ್ಯ	–	ಅಕ್ಕಮಹಾದೇವಿ	373
56. ಬಾ.ರಾ. ಗೋಪಾಲ್	–	ಮಾಲಿನಿ ಎನ್. ಅಭ್ಯಂಕರ್	381
57. ಎಂ. ಚಿದಾನಂದಮೂರ್ತಿ	–	ನಾಗರತ್ನಮ್ಮ	387
58. ಕಮಲಾ ಹಂಪನಾ	–	ಅಕ್ಕಮಹಾದೇವಿ	394
59. ಎಂ.ಎಂ. ಕಲಬುರ್ಗಿ	–	ಬಿ. ವೆಂಕಟರಾಮಣ್ಣ	399
60. ಎಂ.ಬಿ. ನೇಗಿನಹಾಳ	–	ಗಿರೀಶ್ ಎಂ.	405

ಕನ್ನಡ ಪಂಡಿತ ಪರಂಪರೆ

Kannada Scholarship Tradition

ಹರ್ಮನ್ ಮೊಗ್ಲಿಂಗ್

(೧೮೧೧-೧೮೮೧)

ಗೌರಮ್ಮ ಎಚ್.

ಹೊಸಗನ್ನಡ ಸಾಹಿತ್ಯರಂಗದಲ್ಲಿ ಹಲವು ವಿದೇಶಿ ಮಿಶನ್‌ಗಳು ಕೆಲಸ ನಿರ್ವಹಿಸಿ ಕನ್ನಡ ಸಾಹಿತ್ಯದ ಹಿರಿಮೆ ಗರಿಮೆಯನ್ನು ಎತ್ತರಕ್ಕೇರಿಸಿವೆ. ಅವುಗಳಲ್ಲಿ ಬಾಸೆಲ್ ಮಿಶನ್ ಪಾತ್ರ ಹಿರಿದಾದುದು. ೧೮೩೪ ರಿಂದ ೨೦ನೇ ಶತಮಾನದ ಆರಂಭದವರೆಗೆ ನೂರಕ್ಕಿಂತ ಹೆಚ್ಚು ಮಿಶನರಿಗಳು ಜರ್ಮನಿಯಿಂದ ಭಾರತಕ್ಕೆ ಬಂದರು. ಅವರುಗಳಪೈಕಿ ಹರ್ಮನ್ ಮೊಗ್ಲಿಂಗ್ ಒಬ್ಬರು. ಹರ್ಮನ್ ಮೊಗ್ಲಿಂಗ್ ೧೮೧೧ರ ಮೇ ೨೯ರಂದು ಜರ್ಮನಿಯ ಗೂಗ್ಲಿಂಗನ್ ಎಂಬಲ್ಲಿ ಜನಿಸಿದರು. ಗೂಗ್ಲಿಂಗನ್ ನಲ್ಲಿ ಮೊಗ್ಲಿಂಗ್ ತಂದೆ ಲ್ಯಾಟಿನ್ ಶಾಲೆಯಲ್ಲಿ ಅಧ್ಯಾಪಕರಾಗಿದ್ದರು. ಮೊಗ್ಲಿಂಗ್ ಮೂರು ವರ್ಷದ ಎಳೆಯ ವಯಸ್ಸಿನಲ್ಲೇ ತಾಯಿಯನ್ನು ಕಳೆದುಕೊಂಡರು. ಆದರೆ ತಾಯಿ ಕಲಿಸಿದ ಪ್ರಾರ್ಥನಾ ಗೀತೆಗಳು ಅವರ ಮನದ ಭಿತ್ತಿಯಲ್ಲಿ ಹಾಗೇ ಉಳಿದುವು. ಬಾಲಕ ಮೊಗ್ಲಿಂಗ್ ಶಿಕ್ಷಣ ತಂದೆಯ ಶಾಲೆಯಲ್ಲಿ ಪ್ರಾರಂಭವಾಯಿತು. ಮೊಗ್ಲಿಂಗ್‌ಗೆ ಚಿಕ್ಕ ವಯಸ್ಸಿನಿಂದಲೂ ಭಾಷಾಪ್ರಭುತ್ವ ಚೆನ್ನಾಗಿತ್ತು. ತರಗತಿಯಲ್ಲಿ ಶಿಕ್ಷಕರು ಒಂದು ಪದ್ಯವನ್ನು ಹೇಳಿ ಲ್ಯಾಟಿನ್ ಭಾಷೆಗೆ ತರ್ಜುಮೆ ಮಾಡುವಂತೆ ಹೇಳಿದರೆ ಅದನ್ನು ಎಲ್ಲರಿಗಿಂತ ಮೊದಲು ಮಾಡಿ ಮುಗಿಸುತ್ತಿದ್ದರು. ಶಾಲಾ ಅಭ್ಯಾಸ ಪೂರ್ಣಗೊಂಡ ಬಳಿಕ ಅವರು ೧೮೨೯ರಲ್ಲಿ ಟೂಬೆಂಗೆನ್ ವಿಶ್ವವಿದ್ಯಾಲಯಕ್ಕೆ ಸೇರಿ ಅಲ್ಲಿ ಐದು ವರ್ಷಗಳ ಕಾಲ ವಿದ್ಯಾಭ್ಯಾಸ ಮಾಡಿದರು.

ಹರ್ಮನ್ ಮೊಗ್ಲಿಂಗ್‌ಗೆ ತಾರುಣ್ಯದಲ್ಲಿದ್ದಾಗಲೇ ಮಿಶನರಿ ಪ್ರವೃತ್ತಿಗಳು ಮೈಗೂಡಿದ್ದುವು. ಅವರು ಸ್ವಪ್ರೇರಣೆಯಿಂದಲೇ ಬಾಸೆಲ್ ಮಿಶನ್‌ಗೆ ಹೋಗಿ ತಾವು

ಮಿಶನರಿ ಆಗುವ ಆಸೆಯನ್ನು ವ್ಯಕ್ತಪಡಿಸಿದರಂತೆ. ಆ ಪ್ರಕಾರ ಸ್ವಲ್ಪ ದಿನ ತರಬೇತಿ ಪಡೆದ ಬಳಿಕ ಅವರು ೧೮೩೬ರ ಕೊನೆಯಲ್ಲಿ ತಮ್ಮ ಇನ್ನಿಬ್ಬರು ಜೊತೆಗಾರರೊಂದಿಗೆ ಸುವಾರ್ತಕರಾಗಿ ಮಂಗಳೂರಿಗೆ ಬಂದರು. ಮುಂದೆ ಧಾರವಾಡ–ಹುಬ್ಬಳ್ಳಿಗೆ ತೆರಳಿ ಅಲ್ಲಿ ಸುವಾರ್ತ ಪ್ರಸಾರವನ್ನು ಕೈಗೊಳ್ಳಬೇಕೆಂದು ನಿರ್ಣಯವಾದ ಬಳಿಕ ಅವರು ಧಾರವಾಡಕ್ಕೆ ಬಂದರು.

ಮೊಗ್ಲಿಂಗ್ ನಿರ್ವಹಿಸುತ್ತಿದ್ದ ಕಾರ್ಯಗಳ ಹಿಂದೆ ಧಾರ್ಮಿಕ ಉದ್ದೇಶವಿದ್ದರೂ ಅದರೊಟ್ಟಿಗೆ ಜನರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಬದುಕನ್ನು ಹಸನುಗೊಳಿಸುವ ತುಡಿತವೂ ಇತ್ತು. ಒಂದಷ್ಟು ಮಟ್ಟಿಗೆ ಧಾರ್ಮಿಕ ಸಹಿಷ್ಣುತೆಯೂ ಇತ್ತು. ತನ್ನ ಧರ್ಮದ ಶ್ರೇಷ್ಠತೆಯನ್ನು ತಿಳಿಯಪಡಿಸುವ ಮೊದಲು ಅನ್ಯ ಧರ್ಮದ ಒಳಿತನ್ನು ತಿಳಿದುಕೊಳ್ಳುವ ಉದ್ದೇಶದಿಂದ ಹುಬ್ಬಳ್ಳಿಯ ವೀರಶೈವ ಮಠದೊಂದಿಗೆ ತಾವಿದ್ದಷ್ಟು ದಿನ (೧೮೩೭–೩೮) ಬೌದ್ಧಿಕ ಸಂವಾದದಲ್ಲಿ ತೊಡಗಿ ಕೊಳ್ಳುತ್ತಿದ್ದರು. ಅಲ್ಲಿ ಗುರುಸಿದ್ದಪ್ಪ ಎಂಬ ವೀರಶೈವ ಪಂಡಿತನಿಂದ ಬಸವ ಪುರಾಣ ವನ್ನು ಓದಿಸಿ ಕೇಳಿಸಿಕೊಂಡು ಅದರ ಕುರಿತು ಚರ್ಚೆ ನಡೆಸುತ್ತಿದ್ದರು. ಮಠದ ಜಾತ್ರೆ ಯಲ್ಲಿ ಭಾಗವಹಿಸುತ್ತಿದ್ದರು. ಕಾಲಜ್ಞಾನದ ಕುರಿತು ವೀರಶೈವ ವಿದ್ವಾಂಸರೊಂದಿಗೆ ವಿದ್ವತ್ಪೂರ್ಣ ಚರ್ಚೆ ನಡೆಸುತ್ತಿದ್ದರು.

ಮೊಗ್ಲಿಂಗ್‌ರ ಶಿಕ್ಷಣದ ಅಭಿವೃದ್ಧಿಗಾಗಿ ವಿಶೇಷವಾಗಿ ಪರಿಶ್ರಮಿಸಿದರು. ಧಾರವಾಡದಲ್ಲಿ ಬಾಸೆಲ್ ಮಿಶನ್ ಇಂಗ್ಲಿಷ್ ಶಾಲೆ (೧೮೩೭), ಮಂಗಳೂರಿನಲ್ಲಿ ಮಿಶನ್ ಶಾಲೆ (೧೮೪೦), ಉಡುಪಿಯಲ್ಲಿ ಬ್ರಾಹ್ಮಣ ಹುಡುಗಿಯರ ಶಾಲೆ, ಮಂಗಳೂರಿನಲ್ಲಿ ದೈವಶಾಸ್ತ್ರ ತರಬೇತಿ ಶಾಲೆ(೧೮೩೮)ಗಳನ್ನು ಕನ್ನಡ ಮಾಧ್ಯಮದಲ್ಲಿ ಆರಂಭಿಸಿ ಈ ಶಾಲೆಗಳಲ್ಲಿ ಬೈಬಲ್ ಅಧ್ಯಯನದ ಜೊತೆಗೆ ಇತಿಹಾಸ, ಭೂಗೋಳ, ಖಗೋಳಶಾಸ್ತ್ರ, ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ಅಧ್ಯಯನ ಮಾಡಲು ವ್ಯವಸ್ಥೆ ಮಾಡಿದರು.

ಮೊಗ್ಲಿಂಗ್ ಕೊಡವರ ಶೈಕ್ಷಣಿಕ ಅಭಿವೃದ್ಧಿಯ ಕಡೆಗೂ ವಿಶೇಷ ಗಮನ ಹರಿಸಿದರು. ಸರಕಾರದ ಧನಸಹಾಯ ದೊರೆಯುವ ಮೊದಲೇ ಕೊಡಗಿನಲ್ಲಿ ಏಕಮೇವ ಇಂಗ್ಲಿಷ್ ಶಾಲೆಯನ್ನು ತಮ್ಮ ಆಡಳಿತದ ಸುಪರ್ದಿಗೊಳಪಡಿಸಿಕೊಂಡು ನಡೆಸತೊಡಗಿದರು. ತಾವಾಗಿಯೇ ಮದ್ರಾಸ್‌ವರೆಗೆ ಹೋಗಿ ಕೊಡಗಿನ ಶೈಕ್ಷಣಿಕ

ಅಭಿವೃದ್ಧಿ ಯೋಜನೆಗಳನ್ನು ಮಂಜೂರು ಮಾಡಿಸಿಕೊಂಡು ಬಂದರು. ಸರಕಾರ ಅವರಿಗೆ ಕೊಡುತ್ತಿದ್ದ ೨೫೦ ರೂಪಾಯಿಗಳ ಮಾಸಿಕ ಸಂಬಳದಲ್ಲಿ ಬಹುಪಾಲು ಹಣವನ್ನು ಕೊಡಗಿನ ಶಾಲೆಗಳ ಅಭಿವೃದ್ಧಿಗೆ ವಿನಿಯೋಗಿಸಿದರು.

ಮೊಗ್ಲಿಂಗ್ ನಿರ್ವಹಿಸಿದ ಸಾಹಿತ್ಯಕ ಸೇವೆಯನ್ನು ಧರ್ಮಪ್ರಸಾರದ ಉದ್ದೇಶದಿಂದ ರಚಿತವಾದ ಕೃತಿಗಳು ಹಾಗೂ ಕನ್ನಡ ಭಾಷೆ ಮತ್ತು ಸಾಹಿತ್ಯದ ಸಂರಕ್ಷಣೆಗಾಗಿ ಮಾಡಿದ ಕಾರ್ಯಗಳೆಂದು ಎರಡು ವಿಧವಾಗಿ ಗುರುತಿಸಿಕೊಳ್ಳ ಬಹುದು.

ಕ್ರೈಸ್ತ ಧರ್ಮದ ಮತಪ್ರಚಾರಕ್ಕಾಗಿ ರೆವೆಗಲ್ ಅವರ ಜೊತೆ ಸೇರಿ ಮೊಗ್ಲಿಂಗ್ ರಚಿಸಿದ ಕ್ರೈಸ್ತ ಗೀತೆಗಳು ಎಂಬ ಕೃತಿ ಕ್ರೈಸ್ತಮತೀಯರು ಹಾಡಲು ಅನುಕೂಲವಾಗುವಂತೆ ರಚಿತವಾಗಿರುವ ಪ್ರಾರ್ಥನಾಗೀತೆಗಳನ್ನು ಒಳಗೊಂಡಿದೆ. ಹೆಬಿಕ್ ಮತ್ತು ಮೊಗ್ಲಿಂಗ್ ಜೊತೆಗೂಡಿ ೧೮೪೨ರಲ್ಲಿ 'ಹೃದಯದರ್ಪಣ'ವೆಂಬ ಕೃತಿಯನ್ನು ಹೊರತಂದರು. ಇದು ಅನ್ಯ ಭಾಷೆಗಳಿಗೂ ಅನುವಾದಗೊಂಡ ಮಹತ್ತ್ವದ ಕೃತಿಯಾಗಿದೆ. ಇದು ಇಂಗ್ಲಿಷ್‌ನಲ್ಲಿ Heart Book ಎಂದು ಪ್ರಸಿದ್ಧವಾಗಿದೆ

ಧಾರ್ಮಿಕ ಹಿನ್ನೆಲೆ ಇಲ್ಲದೆ ಶುದ್ಧ ಸಾಹಿತ್ಯಕ ದೃಷ್ಟಿಯಿಂದ ಮೊಗ್ಲಿಂಗ್ ಸಲ್ಲಿಸಿದ ಸೇವೆ ಅನುಪಮವಾದದ್ದು. ಅದು ಬಿಬ್ಲಿಯೋಥೀಕಾ ಕರ್ನಾಟಿಕಾದ ಮೂಲಕ ಆರಂಭಗೊಂಡಿತು. ಮೊಗ್ಲಿಂಗ್ ಲಂಡನ್ನಿನ ಈಸ್ಟ್ ಇಂಡಿಯಾ ಕಂಪನಿಗೆ ಈ ಯೋಜನೆಗೆ ಸಹಾಯ ಮಾಡುವಂತೆ ಮನವಿ ಸಲ್ಲಿಸಿದರು. ಮೊಗ್ಲಿಂಗ್‌ರ ಈ ಮನವಿಯನ್ನು ತಿರಸ್ಕರಿಸಿದ ಈಸ್ಟ್ ಇಂಡಿಯಾ ಕಂಪನಿಯ ಅಧಿಕಾರಿಗಳು ಬಿಬ್ಲಿಯೋಥೀಕಾ ಕರ್ನಾಟಿಕಾ ಯೋಜನೆಗೆ ನೆರವು ನೀಡಲು ನಿರಾಕರಿಸಿದರು. ಕ್ರಿಶ್ಚಿಯನ್ ಧರ್ಮಪ್ರಚಾರಕರಾಗಿದ್ದ ಮೊಗ್ಲಿಂಗ್ ಕ್ರಿಶ್ಚಿಯನೇತರ ಕನ್ನಡ ಕಾವ್ಯಗಳ ಪ್ರಕಟನೆಯ ಕೆಲಸ ನಿರ್ವಹಿಸುವುದು ಬಾಸೆಲ್‌ನ ಅಧಿಕಾರಿಗಳಿಗೆ ಇಷ್ಟವಾಗುತ್ತಿರಲಿಲ್ಲ. ಇದು ಶ್ರಮಗೇಡಿನ ಕೆಲಸ ಎಂದು ನಿಂದಿಸಿದರು. ಆದರೂ ಮೊಗ್ಲಿಂಗ್ ಕನ್ನಡ ಕಾವ್ಯಗಳನ್ನು ಸಂಗ್ರಹಿಸುವ, ಸಂಪಾದಿಸುವ ಹಾಗೂ ಬಿಬ್ಲಿಯೋಥೀಕಾ ಕರ್ನಾಟಿಕಾದಲ್ಲಿ ಪ್ರಕಟಿಸುವ ಕೆಲಸವನ್ನು ಕೈ ಬಿಡಲಿಲ್ಲ. ಜೈಮಿನಿಭಾರತ (೧೮೪೮) ಈ ಮಾಲಿಕೆಯಲ್ಲಿ ಮೊದಲು ಪ್ರಕಟವಾಯಿತು. ಈ ಹೊತ್ತಿನಲ್ಲಿಯೇ ತೊರವೆ

ರಾಮಾಯಣದ ಸಂಪಾದನೆಯ ಕೆಲಸವನ್ನು ಕೈಗೆತ್ತಿಕೊಳ್ಳಲಾಯಿತು. ಆದರೆ ಮದ್ರಾಸ್ ಸರ್ಕಾರದ ವಶದಲ್ಲಿದ್ದ ತೊರವೆ ರಾಮಾಯಣದ ಹಸ್ತಪ್ರತಿ ಪಾಠಾಂತರಕ್ಕಾಗಿ ಲಭ್ಯವಾಗಬಹುದೆಂದು ೨೦ಳ ಪುಟಗಳಲ್ಲಿ ಮುದ್ರಣಕ್ಕಾಗಿ ಸಿದ್ಧವಾಗಿದ್ದ ತೊರವೆ ರಾಮಾಯಣದ ಪ್ರಕಟನೆಯ ಕೆಲಸವನ್ನು ಅರ್ಧಕ್ಕೆ ನಿಲ್ಲಿಸಲಾಯಿತು. ೧೮೫೦ರಲ್ಲಿ ದಾಸರ ಪದಗಳು ಎಂಬ ನೂರು ಹಾಡುಗಳಿರುವ ಸಂಕಲನವನ್ನು ಪ್ರಕಟಿಸಲಾಯಿತು. ವಿದೇಶಿ ಮಿಶನರಿಯಿಂದ ಅಚ್ಚಾದ ಪ್ರಥಮ ದಾಸರ ಹಾಡಿನ ಸಂಕಲನವಾಗಿ ಇದು ಗುರುತಿಸಲ್ಪಟ್ಟಿತು. ಕನಕದಾಸರ ಹರಿಭಕ್ತಿಸಾರವನ್ನು ಈ ಮಾಲಿಕೆಯಲ್ಲಿಯೇ ಹೊರತಂದರು. ಜನರೊಡನೆ ನಿಕಟ ಸಂಪರ್ಕದಲ್ಲಿ ಇದ್ದುದರಿಂದ ಜನತೆಯ ಬಾಯಲ್ಲಿದ್ದ ಪಡೆನುಡಿಗಳು ಅವರನ್ನು ಆಕರ್ಷಿಸಿದುವು. ಕನ್ನಡದ ಲೋಕೋಕ್ತಿಗಳ ಮಹತ್ತ್ವವನ್ನರಿತು ೩೦೦೦ ಗಾದೆಗಳನ್ನು ಸಂಗ್ರಹಿಸಿ ೧೮೪೭ರಲ್ಲಿ ಪ್ರಕಟಿಸಿದರು. ಕುಮಾರವ್ಯಾಸ ಭಾರತ, ಭೀಮಕವಿಯ ಬಸವಪುರಾಣ, ವಿರೂಪಾಕ್ಷ ಪಂಡಿತನ ಚನ್ನಬಸವಪುರಾಣಗಳನ್ನು ಪ್ರಕಟಿಸಿದರು.

ಮುಂದೆ ದಾಸರ ಪದಗಳು ಪುಸ್ತಕದಲ್ಲಿದ್ದ ಪುರಂದರದಾಸ ಮತ್ತು ಕನಕದಾಸರ ೨ಳ ಕೀರ್ತನೆಗಳನ್ನು, ಜೈಮಿನಿಭಾರತದ ಹಲವು ಸರ್ಗಗಳನ್ನು ಪೀಠಿಕೆಯೊಡನೆ ಜರ್ಮನ್ ಭಾಷೆಗೆ ಅನುವಾದ ಮಾಡಿ ಜರ್ಮನಿಯ ಪ್ರಾಚ್ಯವಿದ್ಯಾ ವಿಷಯಕವಾದ ZDMG ಪತ್ರಿಕೆಯಲ್ಲಿ ಪ್ರಕಟಿಸಿದರು. ಕೊಡಗಿನ ರಾಜೇಂದ್ರ ನಾಮೆಯ(೧೮೫೭) ಇಂಗ್ಲಿಷ್ ಅವತರಣಿಕೆಯನ್ನು ತಿದ್ದಿ ಕನ್ನಡ ಅವತರಣಿಕೆಯನ್ನು ಒತ್ತಕ್ಷರ ಇಲ್ಲದೆ ಮುದ್ರಿಸಿದ ಕೀರ್ತಿ ಇವರದು. ಡಬ್ಲ್ಯೂ ಬಾರ್ತ್ ಅವರು ಜರ್ಮನ್ ಭಾಷೆಯಲ್ಲಿ ಬರೆದಿದ್ದ ಸಭಾಚರಿತ್ರೆಯನ್ನು ಮೊಗ್ಲಿಂಗ್ ಕನ್ನಡಕ್ಕೆ ಅನುವಾದ ಮಾಡಿದರು.

ಮೊಗ್ಲಿಂಗ್ ೧೮೪೩ರ ಜುಲೈ ೧ ರಂದು 'ಮಂಗಳೂರು ಸಮಾಚಾರ' ಮತ್ತು ೧೮೪೪ ರಲ್ಲಿ ಬಳ್ಳಾರಿಯಲ್ಲಿ 'ಕನ್ನಡ ಸಮಾಚಾರ' ಪತ್ರಿಕೆಗಳನ್ನು ಪ್ರಾರಂಭಿಸಿದರು. ಅವರಿಗೆ ಸ್ಥಳೀಯರಾಗಿದ್ದ ಅತ್ತಾವರ ಅನಂತಾಚಾರಿ ಮತ್ತು ಪಾಂಡುರಂಗಶೆಟ್ಟಿ ಇವರುಗಳ ಸಹಕಾರ ದೊರೆಯಿತು. ಕಲ್ಲಚ್ಚು ಮುದ್ರಣಕ್ಕೆ ಅಚ್ಚುಮೊಳೆಗಳನ್ನು ತಯಾರಿಸುವ ಕೆಲಸವನ್ನು ಇವರು ನಿರ್ವಹಿಸಿದರು. ಈ ಪತ್ರಿಕೆಗಳು ಕನ್ನಡದ ಮೊದಲ ಪತ್ರಿಕೆಗಳೆಂದು ಗುರುತಿಸಲ್ಪಟ್ಟವು. ಆ ಮೂಲಕ ಮೊಗ್ಲಿಂಗ್ ಕನ್ನಡದಲ್ಲಿ

ಪತ್ರಿಕಾಸಾಹಿತ್ಯ ಆರಂಭಿಸಿದ ಮೊದಲಿಗರೆನಿಸಿಕೊಂಡರು. 'ಕನ್ನಡ ಸುವಾರ್ತಿಕ'ವನ್ನು ೧೮೫೭ರಲ್ಲಿ ಅವರು ಪ್ರಾರಂಭಿಸಿದರು.

ಮೊಗ್ಲಿಂಗರ ಜೊತೆ ಇನ್ನೊಬ್ಬ ಮಿಶನರಿಯಾದ ಗಾಡ್ ಫ್ರೆ ವೈಗಲ್ ಕನ್ನಡ ಕಟ್ಟುವ ಕೆಲಸದಲ್ಲಿ ತೊಡಗಿಕೊಂಡಿದ್ದರು. ಆತನು ೧೮೫೫ರಲ್ಲಿ ತೀರಿಕೊಂಡಾಗ ಅವನ ಹೆಂಡತಿ ಪೌಲೀನೆಯನ್ನು ರೆ. ಗುಂಡರ್ಟ್ ರವರ ಸೂಚನೆಯಂತೆ ಮೊಗ್ಲಿಂಗ್ ವಿವಾಹವಾದರು. ಪೌಲೀನೆ ಮೊಗ್ಲಿಂಗನ ಹೆಂಡತಿಯಾಗಿ ಕೊಡಗಿನ ಆನಂದಪುರವನ್ನು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹೊಸದಾಗಿ ರೂಪಿಸುವಲ್ಲಿ ಸಹಕರಿಸಿದಳು. ಕೊಡಗಿನ ಆಲ್ಮಂಡದಲ್ಲಿದ್ದ ಇಂಗ್ಲಿಷ್ ಶಾಲೆಯಲ್ಲಿ ಶಿಕ್ಷಕಿಯಾಗಿದ್ದ ಪೌಲೀನೆ ಭಾಷಾಂತರ ಕೆಲಸದಲ್ಲಿಯೂ ಮೊಗ್ಲಿಂಗ್‌ಗೆ ಸಹಾಯ ಮಾಡುತ್ತಿದ್ದಳು. ಸರ್ಕಾರ ಅವರಿಗೆ ನೀಡುತ್ತಿದ್ದ ಗೌರವ ಸಂಭಾವನೆಯ ಹಣದಿಂದ ಆಲ್ಮಂಡದಲ್ಲಿ ಜೀತವಿಮುಕ್ತ ಕೆಂಬಟ್ಟೆ ಹೊಲೆಯರ ಮಕ್ಕಳಿಗಾಗಿ ಕನ್ನಡ ಶಾಲೆಯನ್ನು ತೆರೆದರು. ಪೌಲೀನೆ ನೀಡಿದ ಬೆಂಬಲದಿಂದ ಮೊಗ್ಲಿಂಗ್ ೧೩೦ ಕೆಂಬಟ್ಟೆ ಹೊಲೆಯರನ್ನು ಮತಾಂತರ ಮಾಡಿ ಆ ಊರಿಗೆ ಆನಂದಪುರವೆಂದು ಪುನರ್ ನಾಮಕರಣ ಮಾಡಿದರು. ಜೊತೆಗೆ ಪೌಲೀನೆಳ ಪ್ರೇರಣೆಯಿಂದ ಸ್ವತಂತ್ರ ಕೂರ್ಗ್ ಮಿಶನ್‌ನನ್ನು ಸ್ಥಾಪಿಸಿದರು. ಪೌಲೀನೆ ಬಾಸೆಲ್ ಮಿಶನ್ ಮತ್ತು ಮೊಗ್ಲಿಂಗ್ ನಡುವಿನ ಸಂಘರ್ಷವನ್ನು ಬಗೆಹರಿಸಿ ಮತ್ತೆ ಬಾಸೆಲ್ ಮಿಶನ್ ಮತ್ತು ಮೊಗ್ಲಿಂಗ್ ನಡುವಿನ ಸಂಬಂಧವನ್ನು ಗಟ್ಟಿಮಾಡಿದಳು.

ಮೊಗ್ಲಿಂಗ್ ಕನ್ನಡಕ್ಕೆ ಸಂಬಂಧಿಸಿದ ಕೆಲಸಕ್ಕೆ ಆದ್ಯತೆ ನೀಡುತ್ತಿದ್ದರು. ಅವರಿಗೆ ಕನ್ನಡ ಭಾಷೆಯ ಪರಿಣತಿಯೂ ಇತ್ತು. ರೀವ್‌ನ ಕೋಶ, ಕೃಷ್ಣಮಾಚಾರಿ ಬರೆದ ವ್ಯಾಕರಣಗಳಿಂದ ಕನ್ನಡ ಭಾಷೆಯನ್ನು ಆಳವಾಗಿ ಅಭ್ಯಾಸ ಮಾಡಿದ್ದರು. ಕನ್ನಡ ವಾಙ್ಮಯವನ್ನು ಇನ್ನೂ ಚೆನ್ನಾಗಿ ತಿಳಿಯಬೇಕು, ಬೆಳೆಸಬೇಕೆಂಬ ತುಡಿತ ಅವರಿಗಿತ್ತು. 'ನನ್ನೊಡನೆ ಈ ಕಾಡು ಪ್ರದೇಶದಲ್ಲಿ ಇರುವುದಕ್ಕೆ ಕನ್ನಡ ಮುನಿಯೊಬ್ಬನು ಒಪ್ಪುವುದಿಲ್ಲವಾದರೂ ಉತ್ತಮವಾದ ಕನ್ನಡ ಪುಸ್ತಕಗಳನ್ನು ತಯಾರಿಸುವ ಕೆಲಸದಲ್ಲಿ ನಾನು ಮಗ್ನನಾಗಿರುವೆನು' ಎಂದು ೧೮೫೬ ರಲ್ಲಿ ಮಿಶನ್ನಿಗೆ ಸಲ್ಲಿಸಿದ ಕೊಡಗಿನ ವಿವರಗಳ ವಾರ್ಷಿಕ ವರದಿಯಲ್ಲಿ ಉಲ್ಲೇಖಿಸಿರುವ ಮಾತುಗಳು ಇದಕ್ಕೆ ಸಾಕ್ಷಿಯಾಗಿವೆ. ಮುಂಬೈ ಕರ್ನಾಟಕವನ್ನು ಸದರ್ನ್ ಮರಾಠ ಎಂದು ತಪ್ಪಾಗಿ ತಿಳಿಯುತ್ತಿದ್ದಾಗ ಮೊಗ್ಲಿಂಗ್ ೧೮೪೯ರಲ್ಲಿ ತಾವು ಸಲ್ಲಿಸಿದ ಮಿಶನ್

ವರದಿಯಲ್ಲಿ 'ದಕ್ಷಿಣ ಮಹಾರಾಷ್ಟ್ರವೆನ್ನುವ ಪ್ರದೇಶವೆಲ್ಲ ಕನ್ನಡನಾಡೇ ಆಗಿದೆ' ಎಂಬುದಾಗಿ ಬರೆದು ಕನ್ನಡದ ವಿಸ್ತಾರವನ್ನು ಎತ್ತಿ ಹೇಳಿದರು. ಹುಟ್ಟಿನಿಂದಲೇ ಭಾಷಾಪ್ರಭುತ್ವ ಹೊಂದಿದ್ದ ಮೊಗ್ಲಿಂಗ್ ಕನ್ನಡ ಭಾಷೆಯ ಮೇಲೂ ಪ್ರಭುತ್ವ ಸಾಧಿಸಿದರು. ಅವರು ಕನ್ನಡದ ಸಂಪರ್ಕಕ್ಕೆ ಬಂದಂತೆಲ್ಲ ಭಾಷೆಯೊಡನೆ ಅವರಿಗೆ ಬಂಧ ಹೆಚ್ಚುತ್ತಾ ಹೋಯಿತು. ಕನ್ನಡ ಲಿಪಿ ಸುಧಾರಣೆ, ಹಳಗನ್ನಡ ಕೃತಿಗಳ ಪ್ರಕಟನೆ, ಕನ್ನಡ ಕಾವ್ಯಗಳ ಜರ್ಮನ್ ಅನುವಾದ ಮೊದಲಾದ ಅವರ ಕನ್ನಡದ ಕೆಲಸಗಳು ಮತಪ್ರಚಾರಕ್ಕೂ ಮಿಗಿಲಾಗಿ ನಡೆದುವು. ಕನ್ನಡದಲ್ಲಿ ಕ್ರೈಸ್ತಧರ್ಮಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥಗಳನ್ನು ಬರೆದವರಲ್ಲಿ ಮೊಗ್ಲಿಂಗ್ ಮೊದಲಿಗರು.

ಬಾಸೆಲ್ ಮಿಶನ್‌ನಿಂದಲೂ ಈಸ್ಟ್ ಇಂಡಿಯಾ ಕಂಪನಿಯಿಂದಲೂ ತನ್ನ ಸಹವರ್ತಿ ಸೇವಾವ್ರತಿಗಳಿಂದಲೂ ಕನ್ನಡ ಗ್ರಂಥಗಳ ಪ್ರಕಟನೆಗೆ ಸಹಾಯ ಒದಗದಿದ್ದಾಗ ಕನ್ನಡ ಕೃತಿಗಳ ಪ್ರಕಟನೆಗಾಗಿ ಅವರು ಶ್ರಮಿಸುತ್ತಿದ್ದ ರೀತಿ, ಆ ಮೂಲಕ ವ್ಯಕ್ತವಾದ ಕನ್ನಡ ಪ್ರೇಮವನ್ನು ಮೆಚ್ಚಿ ಈಸ್ಟ್ ಇಂಡಿಯಾ ಕಂಪನಿಯ ಅಧಿಕಾರಿಯಾಗಿದ್ದ ವಾಲ್ಡರ್ ಎಲಿಯಟ್ ತಮ್ಮ ಧನಸಹಾಯ ನೀಡಿ ಮೊಗ್ಲಿಂಗ್‌ರ ಕನ್ನಡ ಕೆಲಸವನ್ನು ಬೆಂಬಲಿಸಿದರು. ಇಂತಹ ಹಲವರ ಸಹಕಾರ ಮತ್ತು ಪ್ರೋತ್ಸಾಹಗಳೊಂದಿಗೆ ಕನ್ನಡವನ್ನು ಮೊಗ್ಲಿಂಗ್ ಉಳಿಸಿ ಬೆಳೆಸಿದರು. 'ತಾನು ಮಾಡುವ ಕನ್ನಡ ಕಾವ್ಯ ಪ್ರಕಟನಾ ಕೆಲಸದಿಂದ ಮುಂದೆ ಹುಟ್ಟಲಿರುವ ಕನ್ನಡದ ಮಕ್ಕಳಿಗೆ ಅನುಕೂಲವಾಗುತ್ತದೆ. ಏಕೆಂದರೆ ಇನ್ನೂ ನೂರು ವರ್ಷ ಕಳೆದರೆ ಕನ್ನಡದ ಹಸ್ತಪ್ರತಿಗಳು ಸಿಗಲಾರವು'. ಕ ೧೮೫೩ರಲ್ಲಿ ಮೊಗ್ಲಿಂಗ್ ಬರೆದ ಈ ಮಾತುಗಳನ್ನು ಗಮನಿಸಿದಾಗ ಅವರ ಕನ್ನಡ ಪ್ರೇಮ ಮನವರಿಕೆ ಆಗುತ್ತದೆ. ೧೮೬೮ರಲ್ಲಿ ಪ್ಯಾಸ್ಟರ್ ಹುದ್ದೆಯಿಂದ ನಿವೃತ್ತರಾದರೂ ಅವರು ಕನ್ನಡದ ಕೆಲಸವನ್ನು ನಿಲ್ಲಿಸಲಿಲ್ಲ. ಬೈಬಲ್ ತತ್ತ್ವಜ್ಞಾನದ ವ್ಯಾಖ್ಯಾನವನ್ನು ಕನ್ನಡಕ್ಕೆ ಭಾಷಾಂತರಿಸಿ ಅದನ್ನು ಮಂಗಳೂರಿಗೆ ಮುದ್ರಣಕ್ಕಾಗಿ ಕಳುಹಿಸಿಕೊಡುತ್ತಿದ್ದರು.

ಕನ್ನಡಕ್ಕೆ ಮೊದಲ ಡಾಕ್ಟೊರೇಟ್ ತಂದುಕೊಟ್ಟ ಕೀರ್ತಿ ಮೊಗ್ಲಿಂಗ್ ಅವರಿಗೆ ಸಲ್ಲುತ್ತದೆ. ವಿಶೇಷವಾಗಿ ಬಿಬ್ಲಿಯೋಥೀಕಾ ಕರ್ನಾಟಿಕಾದಲ್ಲಿ ನಿರ್ವಹಿಸಿದ ಕೆಲಸವನ್ನು ಗಮನಿಸಿ ಜರ್ಮನಿಯ ಟೂಬಿಂಗೆನ್ ವಿಶ್ವವಿದ್ಯಾಲಯ ೧೯೫೮ರಲ್ಲಿ ಮೊಗ್ಲಿಂಗ್‌ಗೆ

ಗೌರವ ಡಾಕ್ಟೊರೇಟ್ ನೀಡಿ ಗೌರವಿಸಿತು. ಇಂಥ ಅನನ್ಯ ವಿದ್ವಾಂಸ ೧೮೮೧ರ ಮೇ ೧೦ ರಂದು ನಿಧನರಾದರು.

ಕನ್ನಡದ ಹಿರಿಮೆಯನ್ನು ಯೂರೋಪಿಗೂ ಕೊಂಡೊಯ್ದ ಮೊಗ್ಲಿಂಗ್ ಒಬ್ಬ ಮಾನವೀಯ ಗುಣವುಳ್ಳ ವ್ಯಕ್ತಿಯಾಗಿ, ಸಮಾಜ ಸುಧಾರಕನಾಗಿ ಮಾಡಿದ ಕೆಲಸಗಳು ಗಮನಾರ್ಹವಾದವು. ಕ್ರೈಸ್ತ ಧರ್ಮಪ್ರಚಾರಕ್ಕೆಂದು ಬಂದರೂ ಕನ್ನಡಭಾಷೆ ಮತ್ತು ಸಂಸ್ಕೃತಿಯನ್ನು ಅರಿತು ಬೆಳೆಸುವ ಮೂಲಕ ಅವರು ಕನ್ನಡ ಭಾಷೆ ಮತ್ತು ಕನ್ನಡನಾಡಿಗೆ ಕೊಟ್ಟ ಕೊಡುಗೆ ಕನ್ನಡ ನೆಲದಲ್ಲಿ ಅವರ ಹೆಸರನ್ನು ಶಾಶ್ವತವಾಗಿ ಉಳಿಸಿದೆ.

❐ ❐ ❐

ರೆವರೆಂಡ್ ಫರ್ಡಿನಾಂಡ್ ಕಿಟೆಲ್

(೧೮೩೨–೧೯೦೩)

ಕಲಾಶ್ರೀ ಎಚ್.ಎಂ.

ಮೂಲತಃ ಜರ್ಮನಿ ಸಂಜಾತರಾಗಿಯೂ ಭಾರತವನ್ನು 'ನಮ್ಮ ಹಿಂದೂ ದೇಶ' ಎಂದು ಉದ್ಗರಿಸಿದ ಧೀಮಂತ ವ್ಯಕ್ತಿ ರೆವರೆಂಡ್ ಫರ್ಡಿನಾಂಡ್ ಕಿಟೆಲ್. ವೃತ್ತಿಯಿಂದ ಧರ್ಮಗುರುವಾಗಿ, ಪ್ರವೃತ್ತಿಯಿಂದ ಸಾಹಿತಿಯಾಗಿ, ಸಂಶೋಧಕರಾಗಿ, ಭಾಷಾಶಾಸ್ತ್ರಜ್ಞರಾಗಿ ಸಮಾಜಸೇವಕರಾಗಿ ನಮ್ಮೊಡನಿದ್ದು ನಮ್ಮಂತೆ ಬಾಳಿ ಬದುಕಿದ ಒಂದು ಉದಾತ್ತ ಚೇತನ. 'ಕನ್ನಡದ ಸಂತ' ಎಂದು ನಾಡಿನ ಗೌರವಕ್ಕೆ ಪಾತ್ರರಾಗಿ, ಜನಮಾನಸದಲ್ಲಿ ಶಾಶ್ವತವಾಗಿ ನೆಲೆಯೂರಿರುವ ಕಿಟೆಲರ ಬದುಕು ಕೂಡ ಅನೇಕ ಆಕಸ್ಮಿಕಗಳ ಆಗರವಾಗಿದೆ.

ಜರ್ಮನಿಯ ವಾಯವ್ಯ ಪ್ರಾಂತ್ಯದ ಸಣ್ಣನಗರ ರೆಸ್ಟರ್ ಹ್ಯಾಫ್, ಅಲ್ಲಿಯ ಧಾರ್ಮಿಕ ಪ್ರಚಾರಕ ಗ್ರಾಟ್ ಫ್ರೈಡ್ ಗಾಢವಾದ ಧಾರ್ಮಿಕ ಹಿನ್ನೆಲೆಯುಳ್ಳ ಮುತ್ಸದ್ದಿಯಾಗಿದ್ದವರು, ಅವರ ಪತ್ನಿ ಹೆಲೆನ್. ಈ ದಂಪತಿಗಳ ಮಗ ಫರ್ಡಿನೆಂಡ್ ಕಿಟೆಲ್. ಇವರು ಏಪ್ರಿಲ್ ೭, ೧೮೩೨ ರಂದು ಜನಿಸಿದರು. ಬಾಲ್ಯದಿಂದಲೂ ಔಪಚಾರಿಕ ಶಿಕ್ಷಣಕ್ರಮದಲ್ಲಿ ಒಲವಿರದ ಕಿಟೆಲ್ ಅವರಿಗೆ ತಂದೆಯಂತೆ ಧಾರ್ಮಿಕಶಾಸ್ತ್ರಗಳ ಬಗೆಗೆ ವಿಶೇಷ ಆಕರ್ಷಣೆಯಿತ್ತು. ಹೀಗಾಗಿ ಕಿಟೆಲ್ ತಮ್ಮ ಪ್ರಾಥಮಿಕ ಶಿಕ್ಷಣವನ್ನು, ಆರಿಕ್ನಲ್ಲೂ ಹೈಸ್ಕೂಲು ಶಿಕ್ಷಣವನ್ನು ಔರಿಚ್ನಲ್ಲೂ ಪೂರ್ಣಗೊಳಿಸಿದರು. ಅನಂತರ ಬಾಸೆಲ್ಮಿಷನ್‌ನಲ್ಲಿ ಮೂರು ವರ್ಷಗಳ ಶಾಲಾಶಿಕ್ಷಣವನ್ನು ಮುಂದುವರಿಸಿದ ಕಿಟೆಲ್ ಅವರನ್ನು ತಂದೆಯವರ ಇಚ್ಛೆಗನುಸಾರವಾಗಿ ಸಂಚಾರಿ ಮಿಶನರಿಯಾಗಿ ಕಾರ್ಯನಿರ್ವಹಿಸಲು ಭಾರತಕ್ಕೆ ಕಳುಹಿಸಿಕೊಡಲಾಯಿತು. ೧೮೫೩ ಅಕ್ಟೋಬರ್ ೧೬ರಂದು ಗುರುದೀಕ್ಷೆ ಪಡೆದುಕೊಂಡಾಗ ಕಿಟೆಲ್ ಅವರಿಗೆ ೨೧ ವರ್ಷವಷ್ಟೇ.

ಕರ್ನಾಟಕ ರಾಜ್ಯದ ಧಾರವಾಡಕ್ಕೆ ಧಾರ್ಮಿಕ ಪ್ರಚಾರಕರಾಗಿ ಅವರು ನೇಮಕಗೊಂಡಿದ್ದೇ ಒಂದು ಪುಣ್ಯ ಕ್ಷಣವಾಯಿತು. ಧಾರವಾಡದಲ್ಲಿ ತಮ್ಮ ಕಾರ್ಯೋದ್ದೇಶಕ್ಕಾಗಿ ಕಿಟೆಲರಿಗೆ ಕನ್ನಡ ಕಲಿಕೆ ಅನಿವಾರ್ಯವಾಯಿತು. ಅದೇ ಕಾರಣವಾಗಿ ತಮ್ಮನ್ನು ತಾವು ಕನ್ನಡನಾಡು–ನುಡಿಯ ವಿಕಾಸಕ್ಕೆ ಅರ್ಪಿಸಿಕೊಂಡು ಬಿಟ್ಟರು. ಕನ್ನಡ ಭಾಷೆಯ ಕಲಿಕೆಯನ್ನು ಬಲು ಉತ್ಸಾಹದಿಂದ ಪ್ರಾರಂಭಿಸಿದ ಕೆಲವೇ ದಿನಗಳಲ್ಲಿ ಕಿಟೆಲ್ ಅವರನ್ನು 'ಕನ್ನಡ ವ್ಯಸನಿ'ಯನ್ನಾಗಿಸಿಬಿಟ್ಟಿತು. ಕನ್ನಡದ ಬಗೆಗಿನ ಕಿಟೆಲರ ಈ ಅನನ್ಯ ಒಲವು ಮತ್ತು ಆಕರ್ಷಣೆಗಳನ್ನು ಮನಗಂಡ ಜರ್ಮನಿಯ ಮಿಶನ್ ಕೂಡ ತನ್ನ ಧರ್ಮಪ್ರಚಾರಕ ನೇಮಕಾತಿಯಿಂದ ಅವರನ್ನು ಮುಕ್ತಗೊಳಿಸಿ, ಅವರು ತಮ್ಮ ಸೇವಾಕೈಂಕರ್ಯವನ್ನು ಕನ್ನಡನಾಡು–ನುಡಿಗೆ ಮೀಸಲಾಗಿರಿಸಲು ಅನುವು ಮಾಡಿಕೊಟ್ಟಿತು.

ಧಾರವಾಡದಲ್ಲಿ ಹರ್ಮನ್ ಮೊಗ್ಲಿಂಗ್ ಎಂಬ ಪ್ರಖ್ಯಾತ ಭಾಷಾಶಾಸ್ತ್ರಜ್ಞರ ಬಳಿ ಸಹಾಯಕರಾಗಿ ಕಾರ್ಯ ನಿರ್ವಹಿ ಸಲು ಕಿಟೆಲರು ಮೊದಲಿಗೆ ನೇಮಕಗೊಂಡರು. ಮೊಗ್ಲಿಂಗ್ ಅವರು ಕನ್ನಡದ ಪ್ರಪ್ರಥಮ ದಿನಪತ್ರಿಕೆಯಾದ 'ಮಂಗಳೂರು ಸಮಾಚಾರ' ವನ್ನು ಧಾರವಾಡದ ಬಾಸೆಲ್ ಮಿಶನ್ನಿಂದ ಪ್ರಕಟಿಸಿದ್ದರು. ಇಂತಹ ಕಾರ್ಯಕ್ಷೇತ್ರದಲ್ಲಿ ಕಿಟೆಲ್‌ರು ತಮಗೆ ದೊರೆತ ಭಾಷಾ ಕಲಿಕೆಯ ಸದವಕಾಶವನ್ನು ಸಂಪೂರ್ಣವಾಗಿ ಯಶಸ್ವಿಯಾಗಿ ಬಳಸಿಕೊಂಡರು. ಪ್ರಾದೇಶಿಕ ಭಾಷೆಯಾದ ಉತ್ತರಕರ್ನಾಟಕ ಕನ್ನಡವನ್ನು ಕಲಿತು ಅತ್ಯಂತ ಕ್ಷಿಪ್ರಗತಿಯಲ್ಲಿ ಅದರಲ್ಲಿ ಪರಿಣತಿಯನ್ನು ಕೂಡ ಸಾಧಿಸಿದರು. ಈಗಾಗಲೇ ತಮ್ಮ ಶಾಲಾ ಮುಖ್ಯೋಪಾಧ್ಯಾಯರಿಂದ ತಮ್ಮ ವ್ಯಕ್ತಿತ್ವದ ಉತ್ತಮಿಕೆಗಾಗಿ ಪ್ರಶಂಸೆಗೆ ಪಾತ್ರರಾಗಿದ್ದ ಕಿಟೆಲರು ತಮ್ಮ ಕಲಿಕಾಸಕ್ತಿಯಲ್ಲಿಯ ಶ್ರದ್ಧೆಯಿಂದ ಸ್ಥಳೀಯ ಸಂಪ್ರದಾಯಗಳು ಮತ್ತು ಸಂಗೀತ ಕಲೆಗಳಲ್ಲಿ ಅಪಾರವಾದ ಅಭಿರುಚಿಯನ್ನು ಬೆಳೆಸಿಕೊಂಡರು.

ಬಾಲ್ಯದಿಂದಲೇ ಭಾಷೆಗಳ ಕಲಿಕೆಯಲ್ಲಿ ವಿಶೇಷ ಅಭಿರುಚಿ ಹೊಂದಿದ್ದ ಕಿಟೆಲರು ಭಾರತಕ್ಕೆ ಬರುವ ಮುನ್ನವೇ ವಿದೇಶಿ ಭಾಷೆಗಳಾದ ಹೀಬ್ರೂ, ಗ್ರೀಕ್, ಲ್ಯಾಟಿನ್, ಫ್ರೆಂಚ್ ಮತ್ತು ಇಂಗ್ಲಿಷ್ ಭಾಷೆಗಳ ಮೇಲೆ ಹಿಡಿತ ಸಾಧಿಸಿದ್ದರು. ತಾವು ಭಾರತದಲ್ಲಿ, ಅದರಲ್ಲೂ ಕರ್ನಾಟಕದಲ್ಲಿದ್ದ ಅವಧಿಯಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ವಿಶೇಷವಾಗಿ ಅಭ್ಯಸಿಸಿದರು. ಅವರ ಭಾಷೆಗಳ ಮೇಲಣ ಈ

ಪ್ರೇಮವೇ ಅವರು ಕನ್ನಡ ಭಾಷೆಯ ಉನ್ನತಿಗೆ ಉದಾತ್ತ ಕೊಡುಗೆಗಳನ್ನು ನೀಡುವಂತೆ ಪ್ರೇರೇಪಿಸಿತು.

ಕಿಟೆಲ್ ಧಾರವಾಡಕ್ಕೆ ಬಂದ ದಿನಗಳಲ್ಲಿ ಹಸ್ತಪ್ರತಿಗಳಲ್ಲಿದ್ದ ನೂರಾರು ಕನ್ನಡ ಪದ್ಯಗಳು ಅವರಿಗೆ ಲಭ್ಯವಾದುವು. ಅವುಗಳ ಶೈಲಿ, ಲಯ, ಸ್ವರೂಪ ಮತ್ತು ರೂಪಕಗಳು ಕಿಟೆಲರನ್ನು ಬಲುವಾಗಿ ಸೆಳೆದುವು. ಇಂತಹ ಪದ್ಯಗಳ ಸಂಗ್ರಹಣಾ ಕಾರ್ಯವನ್ನು ತಮ್ಮ ಸಂಚಾರ ಧರ್ಮಪ್ರಚಾರದೊಂದಿಗೆ ಕಿಟೆಲರು ಮುಂದುವರಿಸಿದರು.

೧೮೫೫ರಲ್ಲಿ ಕಿಟೆಲರು ಮೊದಲಿಗೆ ಬೈಬಲಿನ ಹೊಸ ಒಡಂಬಡಿಕೆಯ ಕೆಲವು ಭಾಗಗಳನ್ನು ಕನ್ನಡಕ್ಕೆ ಅನುವಾದ ಮಾಡುವುದರ ಮೂಲಕ ತಮ್ಮ ಕನ್ನಡದ ಮೇಲಣ ಪ್ರೇಮವನ್ನು ಪ್ರಕಟಿಸಿದರು. ೧೮೫೮ರಲ್ಲಿ 'ಡೇನಿಯಲನೂ ಅವರ ಜೊತೆಗಾರರೂ', 'ಸಂಸಾರಕ್ರಮ', 'ಉಭಯಮಾರ್ಗ ನಂಬಿ ಜೀವಿಸಿರಿ' ಮುಂತಾದ ಪ್ರಬಂಧಗಳನ್ನು ಅಚ್ಚು ಮಾಡಿದರು. ಇದರೊಂದಿಗೆ ವಿದ್ಯಾರ್ಥಿಗಳಲ್ಲಿ ಕನ್ನಡದ ಬಗೆಗೆ ಸದಭಿರುಚಿ ಮೂಡಿಸುವಂತಹ ಕೆಲವು ಉತ್ತಮ ಗುಣಮಟ್ಟದ ಪಠ್ಯಪುಸ್ತಕಗಳನ್ನು ಕೂಡ ರಚಿಸಿದರು. ಇವುಗಳು ಬಲು ಪ್ರಸಿದ್ಧಿ ಹೊಂದಿ ಸಾವಿರಾರು ಪ್ರತಿಗಳು ಮಾರಾಟವಾಗಿ, ಪುನರ್ ಮುದ್ರಣ ಸಹ ಆಗಿವೆ.

೧೮೬೨ರಲ್ಲಿ ಕಿಟೆಲರ ಕನ್ನಡದ ಸ್ವತಂತ್ರ ಕೃತಿ 'ಕಥಾಮಾಲೆ' ಪ್ರಕಟವಾಯಿತು. ಕ್ರಿಸ್ತನ ಬದುಕನ್ನು ಕುರಿತಂತೆ ಒಂದು ಸಾಂಪ್ರದಾಯಿಕ ಸಂಗೀತ ರೂಪಕದಲ್ಲಿರುವ ಇದರಲ್ಲಿ ೨೮೦ ಭಾಮಿನೀಷಟ್ಪದಿ, ೭೫ ವಾರ್ಧಕ ಷಟ್ಪದಿ ಮತ್ತು ೧೭೫ ಪೂರ್ವಿ ರಾಗದ ಹಾಡುಗಳಿವೆ. 'ಶ್ರೀ ಯೇಹೋವಾಯ ನಮಃ' ಎಂದು ಆರಂಭವಾಗುವ ಈ ಕಾವ್ಯ ಖಂಡಕಾವ್ಯದ ರೂಪದಲ್ಲಿದೆ. ದೇಶೀ ಶೈಲಿಯ ಬೈಬಲ್ನ ೧೪ನೆಯ ಒಡಂಬಡಿಕೆಯ ಭಾಗದ ಷಟ್ಪದಿ ರೂಪದ ಈ ರಚನೆ ನಿರೂಪಣಾ ರೂಪದಲ್ಲಿದ್ದು ಬಲು ಸುಂದರವಾಗಿದೆ.

೧೮೬೨ ಮತ್ತು ೧೮೬೩ರಲ್ಲಿ ಮಂಗಳೂರಿನ 'ವಿಚಿತ್ರ ವರ್ತಮಾನ ಸಂಗ್ರಹ' ಮತ್ತು 'ಸಚಿತ್ರ ಕನ್ನಡ' ಎಂಬ ಎರಡು ಕನ್ನಡ ಮಾಸಪತ್ರಿಕೆಗಳಲ್ಲಿ ಸಂಪಾದಕರಾಗಿ ಕಾರ್ಯನಿರ್ವಹಿಸಿದರು. ೧೮೬೪ರಲ್ಲಿ ವಿದ್ವಾಂಸ ಮತ್ತು ಕನ್ನಡಾಭಿಮಾನಿಯಾದ ಬಿ.ಎಲ್. ರೈಸ್ ಅವರ 'ಅರುಣೋದಯ' ಪತ್ರಿಕೆಯಲ್ಲೂ

ಸಹ-ಸಂಪಾದಕರಾಗಿ, ಭಾರತದೇಶದ ಸಾಂಸ್ಕೃತಿಕತೆಯನ್ನು ಕುರಿತಂತೆ ಅನೇಕ ಮಾಹಿತಿಪೂರ್ಣ ಲೇಖನಗಳನ್ನು ಬರೆದಿದ್ದಾರೆ.

೧೮೬೪ರಲ್ಲೇ ಇಂಗ್ಲಿಷ್ ಇತಿಹಾಸಕಾರ ಹೆನ್ರಿ ಮಾರಿಸ್ ರಚಿತ 'History of England' ಎಂಬ ಕೃತಿಯನ್ನು ಅತ್ಯಂತ ಸಮರ್ಥವಾಗಿ ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿದರು. ೧೮೪೬ರಲ್ಲಿ ಅವರ ಮತ್ತೊಂದು ಅಪೂರ್ವವಾದ 'ಪಂಚತಂತ್ರ' ಕೃತಿ ಪ್ರಕಟವಾಗಿದೆ. ೧೮೬೫ರಲ್ಲಿ "ಕೊಡವ ಸಂಪ್ರದಾಯಗಳು" ಎಂಬ ಲೇಖನದಲ್ಲಿ ಅವರು ಮಡಿಕೇರಿಯಲ್ಲಿದ್ದ ಸಂದರ್ಭದಲ್ಲಿ ಕಂಡ ಭೂತಾರಾಧನೆಯ ಬಗೆಗಿನ ಐತಿಹಾಸಿಕ ಹಿನ್ನೆಲೆಯ ಪ್ರಸ್ತಾವನೆಯೊಂದಿಗೆ ತಮ್ಮ ಅಭಿಮತವನ್ನು ವ್ಯಕ್ತಪಡಿಸಿದ್ದಾರೆ.

೧೮೬೫ರಲ್ಲೆ ಕಿಟೆಲರು 'ಕನ್ನಡ ಸಂಗೀತಗಳು' ಎಂಬ ಸಂಕಲನ ಕೃತಿಯನ್ನು ಸಹ ಪ್ರಕಟಿಸಿದರು. ಇದು ಅವರಿಗೆ ಕರ್ನಾಟಕ ಸಂಗೀತ ಪರಂಪರೆಯ ಬಗೆಗಿದ್ದ ವಿಶೇಷ ಒಲವನ್ನು ವ್ಯಕ್ತಪಡಿಸುವ ಗ್ರಂಥವಾಗಿದ್ದು, ಇದರಲ್ಲಿ ಅವರೇ ಸ್ವತಃ ರಚಿಸಿರುವ ಕೆಲವು ಧಾರ್ಮಿಕ ಸ್ತುತಿ ಪದ್ಯಗಳು ಸೇರ್ಪಡೆಯಾಗಿವೆ. ಇದೇ ಸಾಲಿನಲ್ಲಿ ಪ್ರಕಟನೆಯನ್ನು ಪ್ರಾರಂಭಿಸಿದ 'ವೃತ್ತಾಂತ ಬೋಧಿನಿ' ಎಂಬ ಸಾಹಿತ್ಯಕ ಪತ್ರಿಕೆಯಲ್ಲಿ ಕನ್ನಡ ಸಾಹಿತ್ಯ ಚರಿತ್ರೆಗೆ ಸಂಬಂಧಪಟ್ಟಂತೆ ಲೇಖನಗಳನ್ನು ಪ್ರಕಟಿಸಿದರು. ಈ ಲೇಖನಗಳು ಮುಂದೆ ಬಂದ ಸಾಹಿತ್ಯ ಚರಿತ್ರಕಾರರಿಗೆ ಒಂದು ಮಾರ್ಗಸೂಚಿಯಂತಿವೆ. ೧೮೬೫ ನಿಜಕ್ಕೂ ಕನ್ನಡನುಡಿಗೆ ಒಂದು ಉತ್ಕೃಷ್ಟವಾದ ಕಾಲವಾಗಿತ್ತು. ಕುಮಾರವ್ಯಾಸ ಭಾರತ, ಗಿರಿಜಾ ಕಲ್ಯಾಣ, ಬಸವಪುರಾಣ, ಪ್ರಭುಲಿಂಗಲೀಲೆ ಮೊದಲಾದ ಮಧ್ಯಕಾಲೀನ ಕವಿಗಳ ಕಾವ್ಯ ಭಾಗಗಳ ಸಂಗ್ರಹವನ್ನು, ಅದರೊಂದಿಗೆ ತಮ್ಮ ವೈಯಕ್ತಿಕ ರಚನೆಗಳ ಪದ್ಯಗಳನ್ನು ಸೇರಿಸಿ ಒಂದು ಕೃತಿಯನ್ನು ಪ್ರಕಟಿಸಿದರು. ವಿಶೇಷವೆಂದರೆ ಈ ಪದ್ಯಗಳಿಗೆ ಪೂರಕವಾದಂತಹ ವಿಸ್ತೃತ ಶಬ್ದಕೋಶವನ್ನೂ ಸೇರ್ಪಡೆ ಮಾಡಿರುವುದಾಗಿದೆ.

೧೮೬೮ರಲ್ಲಿ ತಮ್ಮ ವಿದೇಶಿ ವಿದ್ವಾಂಸ ಗೆಳೆಯರೊಟ್ಟಿಗೆ 'ಕರ್ನಾಟಕ ವಾಗ್ವಿಧಾಯಿನಿ' ಎಂಬ ಸಾಹಿತ್ಯ ಪತ್ರಿಕೆಯಲ್ಲಿ 'ಕನ್ನಡ ವ್ಯಾಕರಣ' ವನ್ನು ಕಂತುಗಳ ರೂಪದಲ್ಲಿ ಪ್ರಕಟಿಸಿದರು. ಇದರಲ್ಲಿ ಕಿಟೆಲ್‌ರೊಂದಿಗೆ ಬಿ.ಎಲ್. ರೈಸ್ ಮತ್ತು ಸ್ಯಾಂಡರ್ಸನ್ ಕೂಡ ತಮ್ಮ ಕನ್ನಡ ಪಾಂಡಿತ್ಯವನ್ನು ಪ್ರದರ್ಶಿಸಿದರು. ಇದೇ

ಸಾಲಿನಲ್ಲಿ ಕಿಟೆಲ್‌ರು ತಾವು ಹಿಂದೂಧರ್ಮದ ವೇದೋಪನಿಷತ್ತುಗಳು, ದ್ವೈತಾದ್ವೈತಾದಿ ಸಂಗತಿಗಳ ಬಗೆಗೆ ಪಡೆದಿದ್ದ ಅಪಾರಜ್ಞಾನದ ವಿವರಗಳೊಂದಿಗೆ ಕ್ರಿಸ್ತಸಭೆಯ ಉಗಮ ಮತ್ತು ಅದರ ಸ್ವರೂಪವನ್ನು ಈ ಕೃತಿಯಲ್ಲಿ ವಿಶಿಷ್ಟವಾಗಿ ನಿರೂಪಿಸಿದ್ದಾರೆ. 'ಕ್ರೈಸ್ತ ಸಭಾ ಚರಿತ್ರೆ'ಯ ಗದ್ಯ ಗಮನಿಸತಕ್ಕದ್ದಾಗಿದೆ.

೧೮೭೨ ರಲ್ಲಿ 'ಯಜ್ಞ ಸುಧಾನಿಧಿ' ಎಂಬ ಕೃತಿಯಲ್ಲಿ ಹಿಂದೂ ಹಾಗೂ ಕ್ರೈಸ್ತಧರ್ಮಗಳ ತೌಲನಿಕ ವಿವೇಚನೆ ಇದೆ. ಅವರ 'ಶಾಲಾ ವ್ಯಾಕರಣ' ವೆಂಬ ಸರಳ ವ್ಯಾಕರಣ ಕೃತಿಯು ವಿದ್ಯಾರ್ಥಿಗಳಿಗೆಂದೇ ರಚಿತವಾಗಿದೆ. ೧೮೭೨ರಲ್ಲೇ 'ಮಂಗರಾಜ ನಿಘಂಟು' ಎಂಬ ಶಬ್ದಕೋಶವನ್ನು ರಚಿಸಿದರು. ೧೪ನೇ ಶತಮಾನದ ಕವಿ ಮಂಗರಾಜ ಮತ್ತು ಅವನ ಕೃತಿಗಳನ್ನು ಈ ಗ್ರಂಥದ ಮೂಲಕ ಕನ್ನಡಿಗರಿಗೆ ಪರಿಚಯಿಸಿದ ಕೀರ್ತಿ ಕಿಟೆಲರಿಗೆ ಸಲ್ಲಬೇಕು.

ಕನ್ನಡನಾಡಿನ ವಿದ್ವಜ್ಜನರ ಪ್ರಶಂಸೆಗೆ ಪಾತ್ರವಾದ ಕಿಟೆಲರ ಮಹತ್ತ್ವದ ಕೃತಿಯೆಂದರೆ ೧೮೭೨ರ ಸಾಲಿನಲ್ಲೇ ಪ್ರಕಟವಾದ ಕೇಶಿರಾಜನ 'ಶಬ್ದಮಣಿ ದರ್ಪಣ'. ಈ ವ್ಯಾಕರಣ ಗ್ರಂಥಸಂಪಾದನೆಗಾಗಿ ಕಿಟೆಲರು ಆಧರಿಸಿದ್ದು ಒಟ್ಟು ಒಂಬತ್ತು ಹಸ್ತಪ್ರತಿಗಳನ್ನು. ವಿಶೇಷವೆಂದರೆ ಈ ಸೂತ್ರಗಳ ಸಾರಾಂಶವನ್ನು ಇಂಗ್ಲಿಷಿಗೆ ಭಾಷಾಂತರಿಸಿದ್ದಾಗಿತ್ತು. ಇಂದಿಗೂ ಕಿಟೆಲರು ಈ ಕೃತಿಗಾಗಿ ಬರೆದ ಮೌಲ್ಯಯುತವಾದ ಮುನ್ನುಡಿ ಗ್ರಂಥಸಂಪಾದನೆ ಪ್ರಕಾರಕ್ಕೆ ಮಾಹಿತಿಪೂರ್ಣವಾದ ಕೈಪಿಡಿಯಾಗಿದೆ. ಒಟ್ಟಾರೆ ೨೬ ಪುಟಗಳ ದೀರ್ಘವಾದ ಈ ಮುನ್ನುಡಿಯಲ್ಲಿ ಕೇಶಿರಾಜನ ಕಾಲ, ಶಬ್ದಮಣಿದರ್ಪಣದ ಟೀಕಾಕಾರ, ತುಳು ಮತ್ತು ಬಡಗ ಭಾಷೆಯೊಂದಿಗೆ ಕನ್ನಡ ಭಾಷೆಯ ತೌಲನಿಕ ಸಂಗತಿಗಳು ಪ್ರಸ್ತಾವಗೊಂಡಿದ್ದು, ಕಿಟೆಲರ ಅಧ್ಯಯನದ ಪಾಂಡಿತ್ಯವನ್ನು ಸೂಚಿಸುತ್ತದೆ. ೧೮೭೨ರಲ್ಲೇ 'Indian Antiquary' ಎಂಬ ಇಂಗ್ಲಿಷ್ ನಿಯತಕಾಲಿಕೆಯಲ್ಲಿ ಒಟ್ಟು ೨೪ ವಿದ್ವತ್‌ಪೂರ್ಣ ಲೇಖನಗಳು ಪ್ರಕಟವಾಗಿವೆ. ಇಂಗ್ಲಿಷ್ ಭಾಷೆಯಲ್ಲಿ ಬರೆದ ಈ ಲೇಖನಗಳಲ್ಲಿ ದ್ರಾವಿಡ ಸಂಖ್ಯಾವಾಚಕಗಳನ್ನು, ಅದರೊಂದಿಗೆ ಅನೇಕ ದ್ರಾವಿಡ ಶಬ್ದಗಳ ನಿಖರ ನಿಷ್ಪತ್ತಿಯನ್ನು ಕುರಿತಂತೆ ಮೌಲಿಕವಾದ ಸಂಗತಿಯನ್ನು ಚರ್ಚಿಸುತ್ತಾರೆ.

೧೮೭೩ರಲ್ಲಿ ಕಿಟೆಲ್ ಕನ್ನಡಕ್ಕೆ ತಂದ 'ಹೊಸ ಒಡಂಬಡಿಕೆ' ಗ್ರಂಥವನ್ನು ಮಂಗಳೂರಿನ ಬಾಸೆಲ್ ಮಿಷನ್ ಅವರು ಪ್ರಕಟಿಸಿ, ಅದಕ್ಕೊಂದು ಸ್ಥಾನಮಾನ

ದೊರಕುವಂತೆ ಮಾಡಿದರು. ಇದು ಕಿಟೆಲರನ್ನು ಹೆಚ್ಚು ಪ್ರಸಿದ್ಧರಾಗುವಂತೆ ಮಾಡಿತು.

ಅದೇ ಸಾಲಿನಲ್ಲಿ ಕಿಟೆಲ್ ಕರ್ನಾಟಕದ ದಾಸಪರಂಪರೆ ಮತ್ತು ಅದರ ಸಾಹಿತ್ಯವನ್ನು ಕುರಿತಂತೆ ಆಳವಾದ ಸಂಶೋಧನೆ ಪ್ರಾರಂಭಿಸಿ ಪುರಂದರದಾಸರು, ಕನಕದಾಸರು, ವಿಜಯದಾಸರು, ವೆಂಕಟದಾಸರ ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿದರು. ಅಲ್ಲದೆ ಕೆಲವು ಕೀರ್ತನೆಗಳನ್ನು ಇಂಗ್ಲಿಷ್ ಭಾಷೆಗೆ ತರ್ಜುಮೆ ಮಾಡಿದರು.

೧೮೭೫ರಲ್ಲಿ 'ಕರ್ನಾಟಕ ಕಾವ್ಯಮಾಲೆ' ಕೃತಿ ಪ್ರಕಟಗೊಂಡಿದೆ. ಇದರಲ್ಲಿ ಅವರು ೧೮೬೮ರಲ್ಲಿ 'ಸಂಣ ಕರ್ಣಾಟಕ ಕಾವ್ಯಮಾಲೆ'ಯಲ್ಲಿ ಪ್ರಕಟಿತಗೊಂಡಿದ್ದ ಕಾವ್ಯಗಳ ವಿಸ್ತೃತ ರೂಪಗಳನ್ನು ಪರಿಷ್ಕರಿಸಿ ನೀಡಲಾಗಿದೆ.

೧೮೭೫ರಲ್ಲೇ ಕಿಟೆಲರ ಮತ್ತೊಂದು ಮಹತ್ತ್ವಪೂರ್ಣ ಕೊಡುಗೆ ಕನ್ನಡನಾಡಿಗೆ ಲಭ್ಯವಾಗಿದೆ. ೧೪ ಹಸ್ತಪ್ರತಿಗಳನ್ನು ತಮ್ಮ ಸಂಪಾದನ ಕಾರ್ಯದಲ್ಲಿ ಬಳಸಿಕೊಂಡ ಕಿಟೆಲರು, ನಾಗವರ್ಮನ 'ಛಂದೋಂಬುಧಿ'ಯನ್ನು ಕೃತಿ ರೂಪದಲ್ಲಿ ಕನ್ನಡಿಗರಿಗೆ ನೀಡಿದರು. ತಾಳೆಗರಿಗಳಲ್ಲಿ, ಹಸ್ತಪ್ರತಿಯಲ್ಲಿ ಹುದುಗಿದ್ದ ಈ ಅನರ್ಘ್ಯರತ್ನವನ್ನು ಪ್ರಥಮ ಬಾರಿಗೆ ಪುಸ್ತಕ ರೂಪದಲ್ಲಿ ಪ್ರಕಟಿಸಿದ ಕೀರ್ತಿ ಕಿಟೆಲರದು.

ಗ್ರಂಥಸಂಪಾದನೆಯ ಬಗೆಗೆ ಅರಿವಿಲ್ಲದಂತಹ ಕಾಲಘಟ್ಟದಲ್ಲಿ ಅದನ್ನು ಕನ್ನಡನಾಡಿಗೆ ಪರಿಚಯಿಸಿದ ಹೆಗ್ಗಳಿಕೆ ಕಿಟೆಲರಿಗೆ ಸಂಪೂರ್ಣವಾಗಿ ಸಲ್ಲಬೇಕು. 'ಗ್ರಂಥಸಂಪಾದನಪಿತಾಮಹ'ರೆಂದೇ ಪ್ರಸಿದ್ಧರಾದ ಕಿಟೆಲರು ಅದರ ಅಧ್ಯಯನದ ರೂಪು-ರೇಷೆಗಳನ್ನು ಹೆಚ್ಚು ತಾಂತ್ರಿಕವಾಗಿ ರೂಪಿಸಿದ್ದಲ್ಲದೆ ಸ್ವತಃ ಗ್ರಂಥಸಂಪಾದನೆ ಮಾಡಿ ಸೂಕ್ತ ಮಾದರಿಗಳನ್ನು ನೀಡಿದರು.

೧೮೫೭ರಲ್ಲಿ 'Lingayat Legends' (ಲಿಂಗಾಯಿತ ಧರ್ಮದ ಪೌರಾಣಿಕತೆ) ಎಂಬ ಲೇಖನವನ್ನು 'ಜೈನ, ವೈಷ್ಣವ ಮತ್ತು ಶೈವ ಸಾಹಿತ್ಯ' ಎಂಬ ಸಂಶೋಧನಾತ್ಮಕ ಲೇಖನವನ್ನು ಪ್ರಕಟಿಸಿದ್ದಾರೆ. ಇವು ಕನ್ನಡ ಸಾಹಿತ್ಯ ಚರಿತ್ರೆಯ ಬಗೆಗೆ ಬೆಳಕು ಚೆಲ್ಲುತ್ತವೆ. ಅವರ ಸಂಶೋಧನಾಸಕ್ತಿಯ ಫಲವಾಗಿ ನಿಜಗುಣ ಶಿವಯೋಗಿ ಕವಿ ವೀರಶೈವನೆಂದು ಚರಿತ್ರೆಯಲ್ಲಿ ದಾಖಲಾಗಿದೆ.

೧೮೭೬ರಲ್ಲಿ ಕಿಟೆಲರು ಪ್ರಕಟಿಸಿದ 'Washerman Virasena' ಎಂಬ ಕಥೆಯಲ್ಲಿ ಸಂಕ್ಷಿಪ್ತವಾಗಿ ವೀರಶೈವಪುರಾಣದ ವಿವರವನ್ನು ಕೂಡ ವಿಶ್ಲೇಷಣಾತ್ಮಕ ವಾಗಿ ನೀಡಿದ್ದಾರೆ. ೧೮೭೭ರಲ್ಲಿ 'ಕರ್ನಾಟಕ ಕಾವ್ಯಮಂಜರಿ' ಎಂಬ ಹಳಗನ್ನಡ ಕಾವ್ಯಗಳ ಕೆಲವು ಪದ್ಯಗಳ ಸಂಕಲನವನ್ನು ಪ್ರಕಟಿಸಿದ್ದಾರೆ.

ಕಿಟೆಲರಿಗೆ ಕನ್ನಡ ನಾಡು-ನುಡಿಯ ಮೇಲಣ ಗೌರವಾದರಗಳು, ಕನ್ನಡ ಸಾಹಿತ್ಯ ಮತ್ತು ಭಾಷೆಯಲ್ಲಿ ಅವರು ಸಾಧಿಸಿದ ಪಾಂಡಿತ್ಯ, ಅವರ ಅಧ್ಯಯನ ಮತ್ತು ಸಂಶೋಧನಾಸಕ್ತಿಗಳು ಅಚ್ಚರಿ ಮೂಡಿಸುವಂತಿವೆ. ಅವರು ಕನ್ನಡಕ್ಕೆ ನೀಡಿದ ಈ ಕೊಡುಗೆಗಳು ಕೂಡ ಅಮೂಲ್ಯವಾದುವು.

ಕಿಟೆಲರ ಈ ಪ್ರವೃತ್ತಿಯನ್ನು ಗಮನಿಸಿದ ಬಾಸೆಲ್ ಮಿಶನ್ ಮೆಚ್ಚುಗೆ ವ್ಯಕ್ತಪಡಿಸಿ, ೧೮೭೧ರಲ್ಲೇ ಕನ್ನಡ-ಇಂಗ್ಲಿಷ್ ನಿಘಂಟು ರಚನೆಗೆ ಮುಂದಾಗಲು ಸೂಚನೆ ನೀಡಿತು. ಕಿಟೆಲರ ಈ ಮಹತ್ಕಾರ್ಯಕ್ಕೆ ಬಾಸೆಲ್ ಮಿಶನ್ ನೀಡಿದ ಪ್ರೇರಣೆಯನ್ನು ಕನ್ನಡಿಗರು ಸದಾ ಸ್ಮರಿಸುತ್ತಾರೆ. ಇದಕ್ಕಾಗಿ ಬಾಸೆಲ್ ಮಿಶನ್‌ನ ರೆವರೆಂಡ್ ಜೊಸ್‌ಹನ್ಸ್ ಅವರು ಕನ್ನಡ ಭಾಷೆಗೆ ಅಗತ್ಯವಿರುವ ಇಂತಹ ನಿಘಂಟಿನ ಅಗತ್ಯವನ್ನು ಕಿಟೆಲರಿಗೆ ಮನಗಾಣಿಸಿದರು. ಅಷ್ಟೇ ಅಲ್ಲ, ಕಿಟೆಲರ ಜೀವಿತಾವಧಿಯ ಈ ಮಹತ್ತರ ಯೋಜನೆಗೆ ವಿಪುಲ ಸಮಯಾವಕಾಶದ ಅಗತ್ಯವನ್ನು ಮನಗಂಡ ಮಿಶನ್ ಅವರನ್ನು ತನ್ನ ಸಂಸ್ಥೆಯ ಕರ್ತವ್ಯಗಳಿಂದ ಬಿಡುಗಡೆಗೊಳಿಸಿ, ಕಿಟೆಲರು ತಮ್ಮ ಸರ್ವಸ್ವವನ್ನೂ ಇದಕ್ಕಾಗಿ ಧಾರೆ ಎರೆಯಲು ಅನುವು ಮಾಡಿಕೊಟ್ಟಿತು. ಈ ನಿರೀಕ್ಷೆಯನ್ನು ಕಿಟೆಲರು ಸಮರ್ಥವಾಗಿ ನಿರ್ವಹಿಸಿದರು.

ಕಿಟೆಲರಿಗೆ ತಾವು ಭಾರತಕ್ಕೆ ಬಂದ ದಿನಗಳಲ್ಲಿ ಮುಂದೆ ತಾವು ಇಂತಹ ಮಹತ್ತ್ವದಕೋಶವೊಂದರ ರಚನೆಗೆ ಮುಂದಾಗಬಹುದೆಂಬ ಅರಿವಿತ್ತೇನೋ! ಕನ್ನಡ ನಾಡಿಗೆ ಬಂದು ಕನ್ನಡಭಾಷೆಯನ್ನು ಕಲಿಯುವ ದಿನಗಳಿಂದಲೇ ಕನ್ನಡದ ಪದಗಳಿಗೆ ಆಕರ್ಷಿತರಾಗಿ ಪದಗಳ ಸಂಗ್ರಹಣೆಗೆ ತೊಡಗಿದ್ದರು.

ಕಿಟೆಲ್ ಕೋಶದ ಪ್ರಸಿದ್ಧಿ ಮತ್ತು ಪ್ರಸ್ತುತತೆಯನ್ನು ಮನಗಂಡ ಜರ್ಮನಿಯ ಹಿರಿಯ ಮಿಶನರಿಗಳು ಮತ್ತು ಹಿತೈಷಿಗಳಾದ ರೆವರೆಂಡ್ ಮೊಗ್ಲಿಂಗ್ ಮತ್ತು

ರೆವರೆಂಡ್ ಎಲಿಯಟರು ಕಿಟೆಲರಿಗೆ ಪತ್ರ ಬರೆದು, ಅವರು ಇನ್ನಷ್ಟು ಉತ್ತಮ ಮತ್ತು ಉಪಯುಕ್ತ ಕಾರ್ಯಯೋಜನೆಗಳನ್ನು ಹಮ್ಮಿಕೊಳ್ಳಲು ಹುರಿದುಂಬಿಸಿದರು.

ಕಿಟೆಲರ ಮುಂದೆ ಅನೇಕ ಸವಾಲುಗಳಿದ್ದುವು. ಈಗಾಗಲೆ ತನ್ನ ಸಹ-ಮಿಶನರಿಗಳು ಉಳಿದ ದ್ರಾವಿಡ ಭಾಷೆಗಳಲ್ಲಿ ಅತ್ಯಂತ ಉತ್ಕೃಷ್ಟವಾದ ನಿಘಂಟುಗಳನ್ನು ರಚಿಸಿ ಪ್ರಸಿದ್ಧರಾಗಿದ್ದರು. ಕಿಟೆಲರಿಗೆ ಇವುಗಳೆಲ್ಲದಕ್ಕಿಂತ ಭಿನ್ನವಾದ ಅಷ್ಟೇ ಉತ್ತಮ ನಿಘಂಟು ರಚಿಸಬೇಕೆಂಬ ಮಹದಾಸೆಯಿತ್ತು. ರಚನೆಗೆ ಕೈಹಾಕುವ ಮುನ್ನವೇ ಅದರ ತಯಾರಿಗಾಗಿ ಕಿಟೆಲರು ರೂಪಿಸಿಕೊಂಡಿದ್ದ ಮಾರ್ಗಸೂಚಿಯೇ ಯೋಜನೆಯ ಯಶಸ್ಸನ್ನು ಪ್ರತಿಬಿಂಬಿಸಿತ್ತು. ಉಳಿದ ದ್ರಾವಿಡಭಾಷಾತಜ್ಞರು ಮತ್ತು ನಿಘಂಟುಕಾರರಿಗಿಂತ ಭಿನ್ನವಾದ ನಿಲುವನ್ನು ಕಿಟೆಲರು ನಾಡು-ನುಡಿ-ಸಾಹಿತ್ಯ-ಪರಂಪರೆಯ ಬಗೆಗೆ ತಳೆದಿದ್ದರು. ತಾವು ಅನುಸರಿಸಿದ ಭಾಷೆಯ ತಾಂತ್ರಿಕ ಅಂಶಗಳ ಬಗೆಗೆ ಕಿಟೆಲರು ಶ್ರಮದಾಯಕ ಹಾಗೂ ಬದ್ಧತೆಯಿಂದ ಅಧ್ಯಯನ ಮಾಡಿದ್ದರು. ಎಪ್ಪತ್ತೆರಡು ವರ್ಷಗಳ ಅನಂತರ ಮದ್ರಾಸು ವಿಶ್ವವಿದ್ಯಾಲಯ ನಿಘಂಟಿನ ವಿಸ್ತೃತ ಮತ್ತು ಪರಿಷ್ಕೃತ ಆವೃತ್ತಿಯನ್ನು ಮೊದಲಿಗೆ ಪ್ರಕಟಿಸಿತು. ಆ ವಿಶೇಷ ಸಂದರ್ಭದಲ್ಲಿ 'ಅಭಿನವ ಕಿಟೆಲ್' ಎಂದೇ ಪ್ರಸಿದ್ಧರಾದ ಹಿರಿಯ ವಿದ್ವಾಂಸರಾದ ಎಂ. ಮರಿಯಪ್ಪಭಟ್ಟರು "ಕನ್ನಡ ಶಬ್ದಕೋಶ ಜಗತ್ತಿನಲ್ಲಿ ಕಿಟೆಲ್ ಅವರ ಹೆಸರು ಅಜರಾಮರವಾಗಿದೆ. ಕನ್ನಡ ಮತ್ತು ದ್ರಾವಿಡ ಭಾಷಾಶಾಸ್ತ್ರದ ವಿದ್ಯಾರ್ಥಿಗಳು ಇದರ ಉಪಯುಕ್ತತೆ ಬಗೆಗೆ ಅವಜ್ಞರಾಗಿರಲು ಸಾಧ್ಯವೇ ಇಲ್ಲ!" ಎಂದು ನಿಘಂಟಿನ ಪ್ರಯೋಜನದ ಅಗಾಧತೆಯ ಅರಿವನ್ನು ತಿಳಿಸಿಕೊಟ್ಟಿದ್ದಾರೆ. ೭೦,೦೦೦ ಪದಗಳ ೧೭೫೨ ಪುಟಗಳ, ೨೪ ವರ್ಷಗಳಲ್ಲಿ ಸಿದ್ಧವಾದ ನಿಘಂಟು, ಕೇವಲ ಪದಕೋಶ ಮಾತ್ರವಾಗಿರಲಿಲ್ಲ, ಕನ್ನಡಿಗರ ಹೃದಯದ ಮಿಡಿತವಾಗಿತ್ತು

೧೮೭೨ರ ಹೊತ್ತಿನಲ್ಲಿ ಕಿಟೆಲರು ಶಬ್ದಕೋಶದ ರಚನೆಗಾಗಿ ಯೋಜನೆ ರೂಪಿಸಿದಾಗ ಅವರಿಗೆ ಲಭ್ಯವಾಗಿದ್ದ ಕೃತಿಗಳೆಂದರೆ ಅವರ ಸಮಕಾಲೀನ ಮಿಶನರಿಗಳು ತಾವು ತೆರಳಿದ್ದ ಮತ್ತು ವಾಸ್ತವ್ಯ ಹೂಡಿದ್ದ ಪ್ರಾದೇಶಿಕ ಭಾಷೆಗಳ ನಿಘಂಟುಗಳಾಗಿದ್ದುವು. ಕನ್ನಡದಲ್ಲಿ ಅಷ್ಟೊತ್ತಿಗಾಗಲೇ ರೆವರೆಂಡ್ ಡಬ್ಲೂ. ರೀವ್ ೧೮೩೨ರಲ್ಲಿ ಪ್ರಕಟಿಸಿದ್ದ ಕನ್ನಡ-ಇಂಗ್ಲಿಷ್ ನಿಘಂಟು, ತಮಿಳಿನಲ್ಲಿ ರೆವರೆಂಡ್ ರಾಟಿಲರ್, ತೆಲುಗಿನಲ್ಲಿ ಎ.ಡಿ. ಕ್ಯಾಂಪ್‌ಬೆಲ್ ಮತ್ತು ಸಿ.ಪಿ. ಬ್ರೌನ್ ವಿರಚಿತ ತೆಲುಗು-ಇಂಗ್ಲಿಷ್ ನಿಘಂಟುಗಳು, ಎ. ಮನಾರ್ ಅವರ ತುಳು-ಇಂಗ್ಲಿಷ್

ನಿಘಂಟು, ಮೋನಿಯರ್ ವಿಲಿಯಮ್ಸ್ ಸಂಸ್ಕೃತ–ಇಂಗ್ಲಿಷ್ ನಿಘಂಟು, ರೆವರೆಂಡ್ ಗುಂಡರ್ಟ್ ಅವರ ಮಲಯಾಳಂ–ಇಂಗ್ಲಿಷ್ ನಿಘಂಟು, ಕಾಲ್ಡ್‌ವೆಲ್ ಅವರ ದ್ರಾವಿಡ ಮತ್ತು ದಕ್ಷಿಣ ಭಾರತೀಯ ಭಾಷಾ ಕುಟುಂಬಗಳ ತೌಲನಿಕ ವ್ಯಾಕರಣ – ಮುಂತಾದ ಮಹತ್ತ್ವದ ಕೃತಿಗಳನ್ನು ಕಿಟೆಲರು ತಮ್ಮ ನಿಘಂಟು ಪೂರ್ವತಯಾರಿ ಸಂದರ್ಭದಲ್ಲಿ ಸಮಗ್ರವಾಗಿ ಅಧ್ಯಯನ ಮಾಡಿದ್ದರು. ಕಿಟೆಲರಿಗೆ ಈ ಶಬ್ದಕೋಶಗಳ ಅವಲೋಕನ ಮತ್ತು ಅಧ್ಯಯನಗಳು ತಮ್ಮ ನಿಘಂಟು ರಚನೆಯ ನಿಖರ ಸ್ವರೂಪವನ್ನು ನಿರ್ಧರಿಸಲು ಸಹಕರಿಸಿದುವು.

ನಿಘಂಟು ರಚನೆಯಲ್ಲಿ ತಾವು ಎಂಟು ಪ್ರಮುಖ ಆಧಾರಗಳನ್ನು ಪರಿಶೀಲಿಸಿರುವುದಾಗಿ, ಅವುಗಳ ವಿವರವನ್ನು ಕೃತಿಯ ಮುನ್ನುಡಿಯಲ್ಲಿ ನೀಡಿದ್ದಾರೆ. ಹಳಗನ್ನಡದ ಹದಿನೆಂಟು ಕಾವ್ಯಗಳು, ಹದಿನೆಂಟು ನಡುಗನ್ನಡ ಕಾವ್ಯಗಳು ಮತ್ತು ಹೊಸಗನ್ನಡದ ಕೆಲವು ರಚನೆಗಳನ್ನು ಕಿಟೆಲರು ಕೂಲಂಕಷವಾಗಿ ಅಧ್ಯಯನ ಮಾಡಿರುವುದಾಗಿ ತಿಳಿಸಿದ್ದಾರೆ. ಅದರೊಂದಿಗೆ ಹಳೇ ಮೈಸೂರು, ದಕ್ಷಿಣ ಕನ್ನಡ, ಉತ್ತರ ಕನ್ನಡಗಳ ಭಿನ್ನ ನೆಲೆಯ ಗಾದೆಗಳನ್ನು ಸಂಗ್ರಹಿಸಿದ್ದಾರೆ. ಆಗ ಕನ್ನಡಿಗರಲ್ಲಿ ಚಲಾವಣೆಯಲ್ಲಿದ್ದ ಸಂಸ್ಕೃತವಲ್ಲದ ದೇಶೀ ಮತ್ತು ಗ್ರಾಮೀಣ ಪದಗಳು ಮತ್ತು ದ್ರಾವಿಡ ಭಾಷೆ ಮತ್ತು ಇಂಗ್ಲಿಷ್ ನಿಘಂಟುಗಳಲ್ಲಿದ್ದ ಭಾಷಾ ಆಕರಗಳನ್ನು ಆಧರಿಸಿ, ಪ್ರತಿಯೊಂದು ಪದವನ್ನು ಬಲುಶ್ರದ್ಧೆಯಿಂದ ಪರಿಶೀಲಿಸಿ, ಅದಕ್ಕೆ ಪೂರಕವಾದ ಈ ಎಲ್ಲಾ ಮೂಲ ಪಠ್ಯದ ಸಂಖ್ಯೆಯನ್ನು ಕೂಡ ತಪ್ಪದೇ ನಮೂದಿಸಿದ್ದಾರೆ.

ಕ್ರಮಬದ್ಧ ಕೋಶದ ರಚನೆಯ ವಿಶಿಷ್ಟತೆ ಈ ನಿಘಂಟಿನಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಶಬ್ದಕೋಶದಲ್ಲಿ ಪದಗಳನ್ನು ಜೋಡಿಸುವಾಗ ಸಂಸ್ಕೃತ ಪದಗಳನ್ನು ರೋಮನ್ ಅಕ್ಷರಗಳಲ್ಲಿ, ಕನ್ನಡ ಪದಗಳನ್ನು ಪ್ರಾಚೀನ ರೂಪದಲ್ಲಿ ನಮೂದಿಸಿರುತ್ತಾರೆ. ಸುಮಾರು ೪೦೦ಕ್ಕೂ ಹೆಚ್ಚು ದ್ರಾವಿಡ ಭಾಷೆಗಳ ಪದಗಳು ಸಂಸ್ಕೃತದಲ್ಲಿ ಬಳಕೆಯಾಗಿದ್ದು ಅವುಗಳ ವಿವರ ನೀಡುತ್ತಾರೆ. ಲಿಪ್ಯಂತರದಲ್ಲಿ ಸಂಜ್ಞೆಗಳ ಪಟ್ಟಿ ಇದೆ. ಮುಂದೆ ಆ ಪದದ ವಿವಿಧ ರೂಪಗಳನ್ನು, ಸಮಾಸಗಳಲ್ಲಿ ಅದು ಪ್ರಯೋಗವಾಗಿರುವ ರೀತಿಯನ್ನು ನೀಡಿರುತ್ತಾರೆ. ಮೂಲವಾಕ್ಯಗಳ ಮತ್ತು ಆ ಮಾತು ಪ್ರಯೋಗವಾಗಿರುವ ಗಾದೆಗಳನ್ನು ಉದ್ಧರಿಸಿದ್ದಾರೆ. ಅಷ್ಟೇ ಅಲ್ಲ, ಅದನ್ನು ಉಪಯೋಗಿಸುವವರಿಗೆ ಆ ನಿರ್ದಿಷ್ಟ ಪದಕ್ಕೆ ಸಂಬಂಧಪಟ್ಟಂತೆ ಪೂರಕವಾಗಿ ಪರಿಶೀಲಿಸಬಹುದಾದ ಸಾಧ್ಯತೆಗಳ ಮಾಹಿತಿ ಅಲ್ಲಿದೆ.

ಅಕ್ಷರಗಳನ್ನು ಜೋಡಿಸುವಲ್ಲೂ ಕೂಡ ಕಿಟೆಲರು ಪೂರಕ ಕೃತಿಗಳ ಶೀರ್ಷಿಕೆ, ಪರಿಚ್ಛೇದ, ಪುಟಸಂಖ್ಯೆಗಳು, ಅವುಗಳು ಗದ್ಯದ ಸ್ವರೂಪದಲ್ಲಿದ್ದರೆ, ಆ ಸಾಲಿನ ಸಂಖ್ಯೆಯನ್ನು ಕೂಡ ನಿಖರವಾಗಿ ಉಲ್ಲೇಖಿಸುತ್ತಾರೆ. ಪ್ರತಿಯೊಂದು ಪದಕ್ಕೂ ಇಂಗ್ಲಿಷ್‌ನ ಅರ್ಥಗಳಿವೆ. ಈ ನಿಘಂಟಿನ ವಿಶಿಷ್ಟತೆಯೆಂದರೆ ಪ್ರತಿಯೊಂದು ಪದಗಳಿಗೂ ಇತರ ದ್ರಾವಿಡ ಭಾಷೆಗಳಲ್ಲಿರುವ ಪದಗಳನ್ನು ಕೂಡ ಒದಗಿಸಿರುವುದಾಗಿದೆ. ಈ ನಿಘಂಟು ರಚನೆಯ ಸಂದರ್ಭದಲ್ಲಿ ತಮ್ಮ ಸಹೋದ್ಯೋಗಿ ರೆವರೆಂಡ್ ಜೆಗ್ಲರ್ ಅವರಿಂದ ಗಿಡಗಳು ಮತ್ತು ನಾರು-ಬೇರುಗಳ ಹೆಸರುಗಳನ್ನು ಸಂಗ್ರಹಿಸಲು ನೆರವು ಪಡೆಯುತ್ತಾರೆ. ಕಿಟೆಲ್‌ರಿಗೆ ಪ್ರಾದೇಶಿಕ ಪದಗಳ ಸಂಗ್ರಹ ಮತ್ತು ಅವುಗಳಿಗೆ ಅಲ್ಲಿನ ಸ್ಥಳೀಯ ಬಳಕೆಯ ಬಗೆಗೆ ಹುಬ್ಬಳಿಯ ವಸ್ತ್ರದ ಶಿವಲಿಂಗಯ್ಯ ಎಂಬ ಶಾಲಾಶಿಕ್ಷಕರು ಸಹಕರಿಸಿದ್ದಾರೆ.

ಕಿಟೆಲ್ ಅವರ ನಿಘಂಟಿನ ರಚನೆಗೆ ಕೀರ್ತಿ ಮತ್ತು ಪ್ರಶಂಸೆಗಳ ಮಹಾಪೂರವೇ ಹರಿದು ಬಂದುದನ್ನು ಗಮನಿಸಿದ ಮತ್ತೋರ್ವ ವಿದೇಶಿ ಕನ್ನಡ ವಿದ್ವಾಂಸ ಫ್ಲೀಟ್ ಅವರು, ಕಿಟೆಲರಿಗೆ ಮತ್ತೊಂದು ಗುರುತರವಾದ ಜವಾಬ್ದಾರಿಯನ್ನು ವಹಿಸಿದರು. ಕನ್ನಡ ವ್ಯಾಕರಣವನ್ನು ಕುರಿತಂತೆ ಇಂಗ್ಲಿಷ್ ಭಾಷೆಯಲ್ಲಿ ಕೃತಿ ರಚಿಸಲು ಫ್ಲೀಟ್ ಸಲಹೆ ಕೊಟ್ಟರು. ಆ ಸೂಚನೆಯ ಮೇರೆಗೆ ಕಿಟೆಲರು ತಮ್ಮ ಜೀವಿತೋದ್ದೇಶದ ಅಂತಿಮ ಕೃತಿಯಾಗಿ 'A Grammer of the Kannada Language' ಪುಸ್ತಕವನ್ನು ಇಂಗ್ಲಿಷ್‌ನಲ್ಲಿ ಬರೆದು ಪೂರ್ಣಗೊಳಿಸಿದರು. ಸುಮಾರು ೪೮೩ ಪುಟಗಳು ಮತ್ತು ೨೮ ಅಧ್ಯಾಯಗಳಿಂದ ಕೂಡಿದ್ದ ಈ ಕೃತಿಯು ಸಮಗ್ರ ಹಾಗೂ ಸಮರ್ಪಕವಾದ ಕನ್ನಡ ವ್ಯಾಕರಣ ಗ್ರಂಥವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ಕೃತಿಯಲ್ಲಿ ಹಳಗನ್ನಡ ಮತ್ತು ಹೊಸಗನ್ನಡಗಳ ವಿವಿಧ ಮಜಲುಗಳ ವಿವರಗಳೊಂದಿಗೆ ವ್ಯಾಕರಣ ವಿಶೇಷಗಳ ಪ್ರಸ್ತಾಪವಿದೆ. ಪೂರಕವಾಗಿ ಅನೇಕ ಪ್ರಾದೇಶಿಕ ಭಿನ್ನತೆಯ, ಜನಪದ ಬಳಕೆಯ ವೈವಿಧ್ಯಮಯ ಪ್ರಯೋಗಗಳನ್ನು ನೀಡಿದ್ದಾರೆ. ಈ ಕೃತಿ ಕೂಡ ಜರ್ಮನಿಯ ಬಾಸೆಲ್ ಮಿಷನ್ ಮುದ್ರಣಾಲಯದಲ್ಲಿ ಅಚ್ಚಾಗಿ ೧೯೦೩ ಡಿಸೆಂಬರ್ ೧೮ರಂದು ಕಿಟೆಲರ ಕೈ ಸೇರಿತು.

ನಿಘಂಟಿನ ರಚನೆಯ ಕಾಲಕ್ಕೆ ಹತ್ತಾರು ಹಸ್ತಪ್ರತಿಗಳ ಶಾಸ್ತ್ರೀಯ ಅಧ್ಯಯನ ಮಾಡಿ, ಪದಗಳ ಸಂಗ್ರಹಣೆಗಾಗಿ ಅನೇಕ ಕ್ಷೇತ್ರಕಾರ್ಯಗಳ ಭೇಟಿಗಳಂತಹ

ಪ್ರಯಾಸದಾಯಕ ದಿನಗಳು ಅಷ್ಟರಲ್ಲಾಗಲೇ ಕಿಟೆಲರ ಆರೋಗ್ಯವನ್ನು ಸಾಕಷ್ಟು ಹದಗೆಡಿಸಿದ್ದುವು. ನಿರಂತರ ಅಧ್ಯಯನ ಮತ್ತು ಬರಹದ ದೈನಂದಿನ ದಿನಚರಿಯು ಅವರ ಕಣ್ಣು ದೃಷ್ಟಿಯನ್ನು ಮಂದವಾಗಿಸಿದ್ದುವು. ಇಂತಹ ವಿಷಮ ಸಂದರ್ಭದಲ್ಲಿ ತಮ್ಮ ಕೈಸೇರಿದ ಈ ವ್ಯಾಕರಣ ಕೃತಿಯನ್ನು ಕೈಗಳಿಂದ ಸ್ಪರ್ಶಿಸಿದ ಕಿಟೆಲ್‌ರು ಭಾವುಕರಾದರು. ಈ ಕ್ಷಣಕ್ಕಾಗಿಯೆ ಜೀವಹಿಡಿದಿಟ್ಟವರಂತೆ, ಬದುಕಿನ ಅಂತಿಮ ದಿನದಲ್ಲೂ ತಮ್ಮ ಸಾರ್ಥಕತೆಯನ್ನು ಮೆರೆದು ಅಂದರೆ ಮಾರನೇ ದಿನವೇ ೧೯೦೫ ಡಿಸೆಂಬರ್ ೧೯ರಂದು ತಮ್ಮ ೭೧ನೇ ವಯಸ್ಸಿನಲ್ಲಿ ಇಹಲೋಕ ತ್ಯಜಿಸಿದರು.

ಕಿಟೆಲರ ಅವಿಸ್ಮರಣೀಯ ಮತ್ತು ಅನುಪಮ ಕೊಡುಗೆಯಾದ ಕನ್ನಡ-ಇಂಗ್ಲಿಷ್ ನಿಘಂಟು (೧೮೯೪) ರಚನೆಗಾಗಿ ಜರ್ಮನಿಯ ಟ್ಯೂಬಿಂಗನ್ ವಿಶ್ವವಿದ್ಯಾಲಯ ಕಿಟೆಲರಿಗೆ ಗೌರವ ಡಾಕ್ಟೊರೇಟ್ (ಡಿ.ಲಿಟ್) ಪದವಿಯನ್ನು ನೀಡಿ ಗೌರವಿಸಿತು. ೧೯೪೮ರಲ್ಲಿ ಬೆಂಗಳೂರಿನ ಆಸ್ಟಿನ್ ನಗರ 'ಕಿಟೆಲ್ ನಗರ' ಎಂಬುದಾಗಿ ಮರು ನಾಮಕರಣಗೊಂಡಿದೆ. ಬೆಂಗಳೂರು ನಗರದ ಮಹಾತ್ಮಾಗಾಂಧೀಜಿ ರಸ್ತೆಯ ಕೊನೆಯಲ್ಲಿ ಮತ್ತು ಧಾರವಾಡ ನಗರಗಳಲ್ಲಿ ಕಿಟೆಲರ ಪುತ್ಥಳಿಗಳನ್ನು ಸ್ಥಾಪಿಸಲಾಗಿದೆ. ಭಾರತೀಯ ಅಂಚೆ ಇಲಾಖೆ ಅವರ ಅಂಚೆ ಚೀಟಿ ಬಿಡುಗಡೆ ಮಾಡಿದೆ. ಧಾರವಾಡ ನಗರದಲ್ಲಿ ಕಿಟೆಲರ ಹೆಸರಿನ ಕಲಾ ಮತ್ತು ವಿಜ್ಞಾನ ಪದವಿ ಕಾಲೇಜುಗಳಿವೆ.

❐ ❐ ❐

ಬೆಂಜಮಿನ್ ಲೂಯಿ ರೈಸ್

(೧೮೩೭–೧೯೨೭)

ಗೌರಮ್ಮ ಎಚ್.

ಬೆಂಜಮಿನ್ ಲೂಯಿ ರೈಸ್‌ರವರು ಬಿ. ಎಲ್. ರೈಸ್ ಎಂದೇ ಪ್ರಖ್ಯಾತರು. ಕನ್ನಡ ಸಾಹಿತ್ಯಲೋಕಕ್ಕೆ ಇವರಿತ್ತ ಕೊಡುಗೆ ಅಪಾರ. ಇವರು ಇತಿಹಾಸಕಾರರಾಗಿ, ಪುರಾತತ್ವಶಾಸ್ತ್ರಜ್ಞರಾಗಿ, ಶಾಸನತಜ್ಞರಾಗಿ, ಶಿಕ್ಷಣತಜ್ಞರಾಗಿ ನೀಡಿದ ಕೊಡುಗೆ ಅನುಪಮವಾದದ್ದು. ಮೈಸೂರು ಪ್ರಾಂತ್ಯದ ಶಾಸನಶಾಸ್ತ್ರದ ಪಿತಾಮಹರೆನಿಸಿಕೊಂಡಿದ್ದ ಬಿ.ಎಲ್. ರೈಸ್‌ರವರು ಕರ್ನಾಟಕದ ಇತಿಹಾಸ, ಸಂಸ್ಕೃತಿ ಮತ್ತು ಭಾಷೆಯ ಅಧ್ಯಯನಕ್ಕೆ ಭದ್ರ ಬುನಾದಿ ಹಾಕಿದರು.

ಬಿ.ಎಲ್. ರೈಸ್ ೧೮೩೬ರ ಜುಲೈ ೧೭ರಂದು ಬೆಂಗಳೂರಿನಲ್ಲಿ ಜನಿಸಿದರು. ಇವರ ತಂದೆ ಬೆಂಜಮಿನ್ ಹೋಲ್ಡ್ ರೈಸ್. ಇವರು ಧರ್ಮೋಪದೇಶಕ್ಕಾಗಿ ಕರ್ನಾಟಕಕ್ಕೆ ಬಂದ ಏಳೇ ತಿಂಗಳಲ್ಲಿ ಕನ್ನಡವನ್ನು ಕಲಿತು ಕನ್ನಡದಲ್ಲಿ ಧರ್ಮಬೋಧನೆ ಮಾಡಲು ಆರಂಭಿಸಿದರು. ಇವರು ಬೆಂಗಳೂರಿನ ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ಚರ್ಚಿನಲ್ಲಿ ಧರ್ಮಬೋಧಕರಾಗಿದ್ದರು.

ಬಿ.ಎಲ್. ರೈಸ್ ಪ್ರಾಥಮಿಕ ಶಿಕ್ಷಣ ಬೆಂಗಳೂರಿನಲ್ಲಿ ನಡೆಯಿತು. ಮುಂದೆ ಹೆಚ್ಚಿನ ವ್ಯಾಸಂಗಕ್ಕಾಗಿ ಅವರು ತಮ್ಮ ಮೂಲಸ್ಥಳವಾದ ಇಂಗ್ಲೆಂಡಿನ ಹಾರೋ ನಗರಕ್ಕೆ ತೆರಳಿ ಅಲ್ಲಿ ಪದವೀಧರರಾದರು. ಅನಂತರ ಅಲ್ಲಿಯೇ ಕರ್ತವ್ಯ ನಿರ್ವಹಿಸುತ್ತಾ ಐ.ಸಿ.ಎಸ್. ಪರೀಕ್ಷೆಗೆ ತಯಾರಿ ನಡೆಸುತ್ತಿದ್ದರು. ಈ ಹೊತ್ತಿಗೆ ಅವರಿಗೆ ಮೈಸೂರು ಶಿಕ್ಷಣ ಇಲಾಖೆಯಿಂದ ಉದ್ಯೋಗದ ಆಹ್ವಾನ ಬಂದಿತು. ಬೆಂಗಳೂರಿನಲ್ಲಿ ಹುಟ್ಟಿದ ಕುವರನಿಗೆ ಬೆಂಗಳೂರಿನಲ್ಲೇ ಉದ್ಯೋಗ ಮಾಡುವ ಸದವಕಾಶ ದೊರೆತಿದ್ದರಿಂದ ಅವರು ೧೮೬೦ರಲ್ಲಿ ಬೆಂಗಳೂರಿಗೆ ಮರಳಿ ಇಲ್ಲಿಯ ಸೆಂಟ್ರಲ್

ಕಾಲೇಜಿನಲ್ಲಿ ಐದು ವರ್ಷ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿದರು. ಇದೇ ವೇಳೆಯಲ್ಲಿ ಅವರು ತಾನು ಒಬ್ಬ ವಿದ್ಯಾರ್ಥಿಯಂತೆ ಕನ್ನಡ ಸೆಕೆಂಡರಿ ಪರೀಕ್ಷೆಗೆ ಕುಳಿತು ಅದರಲ್ಲಿ ಉತ್ತೀರ್ಣರಾದರು. ಅಷ್ಟೇ ಅಲ್ಲದೆ ಕಲಿಯಲು ಕನ್ನಡದಲ್ಲಿ ಪಠ್ಯಪುಸ್ತಕಗಳು ಇಲ್ಲವೆಂದು ತಾವೇ ಶಾಲಾಮಕ್ಕಳ ಉಪಯೋಗಕ್ಕಾಗಿ ಕನ್ನಡದಲ್ಲಿ ಪುಸ್ತಕ ಬರೆದರು.

ಮುಂದೆ ಮೈಸೂರು ಮತ್ತು ಕೊಡಗು ಪ್ರಾಂತ್ಯದ ಇನ್‌ಸ್ಪೆಕ್ಟರ್ ಆಗಿ ಅಧಿಕಾರ ವಹಿಸಿಕೊಂಡು ಅಲ್ಲಿ ಕೆಲಸ ನಿರ್ವಹಿಸುವತ್ತ ಮೈಸೂರು ಮತ್ತು ಕೊಡಗು ಪ್ರಾಂತ್ಯಗಳಲ್ಲಿ ಸಂಚರಿಸುವಾಗ ಕನ್ನಡ ನಾಡು ನುಡಿಯ ಬಗೆಗೆ ಅವರಿಗೆ ಆಳವಾದ ಜ್ಞಾನ ದೊರೆಕಿತು. ಬಿ.ಎಲ್. ರೈಸ್ ಅವರಿಗೆ ಆಗಲೆ ಕನ್ನಡ ತಿಳಿದಿತ್ತು. ಅವರ ಮನೆಯಲ್ಲಿ ಕನ್ನಡದ ವಾತಾವರಣವಿತ್ತು. ಅವರ ತಾಯಿ ತನ್ನ ಗಂಡನ ಕೆಲಸಕ್ಕೆ ನೆರವಾಗುವ ದೃಷ್ಟಿಯಿಂದ ಕನ್ನಡ ಕಲಿತಿದ್ದಷ್ಟಲ್ಲದೆ ಅವರು ಸ್ಥಳೀಯ ಹೆಣ್ಣು ಮಕ್ಕಳ ಜೊತೆ ಸರಳವಾಗಿ ಬೆರೆಯುತ್ತಾ ಅಕ್ಕಪಕ್ಕದ ಮಕ್ಕಳನ್ನು ಸೇರಿಸಿ ಅವರಿಗೆ ಕನ್ನಡದ ಅಕ್ಷರಾಭ್ಯಾಸವನ್ನು ಮಾಡಿಸುತ್ತಿದ್ದರು. ಈ ಎಲ್ಲಾ ಕಾರಣದಿಂದ ಬಿ.ಎಲ್. ರೈಸ್ ಅವರಿಗೆ ಕನ್ನಡದ ಜ್ಞಾನವಿತ್ತು. ಅದು ಇನ್ನೂ ವಿಸ್ತಾರಗೊಳ್ಳುವ ಅವಕಾಶ ಈಗ ಒದಗಿ ಬಂದಿತು. ಮುಂದೆ ಅವರು ಶಿಕ್ಷಣ, ಆಡಳಿತ ಮತ್ತು ಶಾಸನ ಈ ಮೂರು ರಂಗಗಳಲ್ಲಿ ನಿರ್ವಹಿಸಿದ ಕಾರ್ಯ ಚಟುವಟಿಕೆಯಲ್ಲಿ ಇದು ಕಾಣಿಸಿಕೊಂಡಿತು.

ಅನಂತರ ಬಿ.ಎಲ್. ರೈಸ್ ೧೮೬೮ ರಿಂದ ೧೮೮೩ರ ಅವಧಿಯಲ್ಲಿ ಮೈಸೂರು ಸಂಸ್ಥಾನದ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರಾಗಿ ಸೇವೆ ಸಲ್ಲಿಸಿದರು. ಇವರಿಗೆ ಶಿಕ್ಷಣದ ಬಗ್ಗೆ ಇದ್ದ ಕಾಳಜಿ ವಿದ್ವತ್ತು ಮತ್ತು ಕಾರ್ಯದಕ್ಷತೆಯನ್ನು ಗುರುತಿಸಿ ೧೮೮೨ರಲ್ಲಿ ಹಂಟರ್ ಶಿಕ್ಷಣ ಆಯೋಗದ ಕಾರ್ಯದರ್ಶಿಯನ್ನಾಗಿ ಇವರನ್ನು ನೇಮಕ ಮಾಡಲಾಯಿತು. ಕಲ್ಕತ್ತೆಯಲ್ಲಿ ಇದ್ದುಕೊಂಡು ಅವರು ಈ ಆಯೋಗದ ಕೆಲಸವನ್ನು ಸಮರ್ಥವಾಗಿ ನಿರ್ವಹಿಸಿದರು. ಶಾಸನಗಳ ಅಧ್ಯಯನದ ಬಗೆಗೆ ಇವರಿಗಿದ್ದ ತಾದಾತ್ಮ್ಯ ಹಾಗೂ ಅಂದಿನ ಮಹಾರಾಜರು ಐತಿಹಾಸಿಕ ಸಾಮಗ್ರಿಗಳ ಸಂರಕ್ಷಣೆಗೆ ತೋರಿದ ಕಾಳಜಿಯಿಂದ ೧೮೮೪ರಲ್ಲಿ ಮೈಸೂರು ಸಂಸ್ಥಾನದಲ್ಲಿ ಪ್ರಾಚ್ಯವಸ್ತು ಇಲಾಖೆ ಸ್ಥಾಪನೆಯಾಯಿತು. ಶಿಕ್ಷಣ ಇಲಾಖೆಯ ಕೆಲಸದ ಜೊತೆಗೆ ಹೆಚ್ಚುವರಿಯಾಗಿ ಈ ಇಲಾಖೆಯ ಮುಖ್ಯಸ್ಥರಾಗಿ ರೈಸ್ ನೇಮಕಗೊಂಡರು. ಮುಂದೆ ಶಿಕ್ಷಣ ಇಲಾಖೆಯಿಂದ ಇವರನ್ನು

ಪ್ರಾಚ್ಯವಸ್ತು ಇಲಾಖೆಯ ಪೂರ್ಣಾವಧಿ ನಿರ್ದೇಶಕರನ್ನಾಗಿ ನೇಮಕ ಮಾಡಲಾಯಿತು. ಈ ಸ್ಥಾನ ದಲ್ಲಿದ್ದುಕೊಂಡು ತಾವು ನಿವೃತ್ತಿ ಹೊಂದುವವರೆಗೂ ಅವಿಶ್ರಾಂತವಾಗಿ ಸೇವೆ ಸಲ್ಲಿಸಿದರು. ಈ ಎಲ್ಲಾ ಅಧಿಕಾರ ಸ್ಥಾನದಲ್ಲಿದ್ದುಕೊಂಡು ರೈಸರು ಕನ್ನಡಿಗರು ಎಂದೆಂದಿಗೂ ಮರೆಯಲಾರದಂತಹ ಕಾರ್ಯಗಳನ್ನು ನಿರ್ವಹಿಸಿದರು

ಗೆಝೆಟಿಯರ್ ಎಂದರೆ ಒಂದು ಪ್ರಾಂತ್ಯದ ಅಥವಾ ಜಿಲ್ಲೆಯ ಸಮಸ್ತ ವಿವರಗಳನ್ನು ಒದಗಿಸುವ ಸರ್ಕಾರದ ಅಧಿಕೃತ ದಾಖಲೆ. ೧೮೬೭ರ ಸುಮಾರಿಗೆ ಭಾರತದ ವಿವಿಧ ಪ್ರಾಂತ್ಯಗಳಲ್ಲಿ ಗೆಝೆಟಿಯರುಗಳ ರಚನಕಾರ್ಯ ಪ್ರಾರಂಭವಾಗಿತ್ತು. ಶಿಕ್ಷಣಾಧಿಕಾರಿಯಾಗಿದ್ದರಿಂದ ಕೊಡಗಿನ ಶೈಕ್ಷಣಿಕ ಇತಿಹಾಸ ಮತ್ತು ಅದರ ಭಾವಿ ಯೋಜನೆಗಳ ವರದಿಯನ್ನು ರೈಸ್ ಅವರು ಸಿದ್ಧಪಡಿಸಬೇಕಿತ್ತು, ಮೈಸೂರು ಮತ್ತು ಕೊಡಗಿನ ಗೆಝೆಟಿಯರ್ ಸಿದ್ಧಪಡಿಸುವ ಹೊಣೆಯೂ ರೈಸರ ಮೇಲಿತ್ತು. ಈ ಕಾರ್ಯನಿರ್ವಹಣೆಯ ಸಲುವಾಗಿ ಅವರು ಸಂಸ್ಥಾನದಲ್ಲಿ ಎಲ್ಲ ಕಡೆ ಸಂಚರಿಸುತ್ತಿದ್ದಾಗ ಚಾರಿತ್ರಿಕ ವಿಷಯಗಳು, ಸ್ಥಳಪುರಾಣಗಳು, ಪುರಾತನ ಗ್ರಂಥಗಳನ್ನು ಸಂಗ್ರಹಿಸುತ್ತ ಅಲ್ಲಲ್ಲಿ ದೊರೆಯುವ ಶಾಸನಗಳು, ವೀರಗಲ್ಲುಗಳು, ಪ್ರಶಸ್ತಿಗಳು, ಮರಣ ಶಾಸನಗಳು, ರಾಜಾಜ್ಞೆಗಳನ್ನು ಕಲೆಹಾಕಿ ಅವುಗಳನ್ನು ಓದುವ ಹವ್ಯಾಸ ಬೆಳೆಸಿಕೊಂಡರು. ಅಲ್ಲಿ ದೊರೆಯುವ ಇಂತಹ ದಾಖಲೆಗಳು ನೂರಕ್ಕೆ ನೂರರಷ್ಟು ಕನ್ನಡದವೇ ಆಗಿದ್ದರೂ ವಿವಿಧ ಕಾಲಘಟ್ಟದಲ್ಲಿ ಕಂಡುಬರುವ ಭಾಷೆಯ ವೈವಿಧ್ಯದಿಂದ ಅವುಗಳನ್ನು ಓದುವುದು ಕಷ್ಟಸಾಧ್ಯವಾದ ಕೆಲಸವಾಗಿತ್ತು. ಹೆಚ್ಚು ಶ್ರಮ, ತಾಳ್ಮೆ ಮತ್ತು ಸಾಮರ್ಥ್ಯವನ್ನು ಕೋರುವ ಈ ಕೆಲಸವನ್ನು ರೈಸರು ಸಮರ್ಥವಾಗಿ ನಿರ್ವಹಿಸಿದರು. ನಾಡಿನಾದ್ಯಂತ ಹೀಗೆ ಸಂಚರಿಸುತ್ತಾ ಅವರು ಪಡೆದ ಜ್ಞಾನ, ಅನುಭವ, ಐತಿಹಾಸಿಕ ಸಾಮಗ್ರಿಗಳನ್ನು ಆಧಾರವಾಗಿಟ್ಟುಕೊಂಡು ಮೈಸೂರು ಗೆಝೆಟಿಯರ್‌ನ ಮೂರು ಸಂಪುಟಗಳನ್ನು ಪ್ರಕಟಿಸಿದರು. ಪ್ರಥಮ ಸಂಪುಟ ಕೊಡಗು ಗೆಝೆಟಿಯರ್ ಆಗಿದೆ. ಇದರಲ್ಲಿ ಕೊಡಗಿನ ಸಂಪೂರ್ಣ ಮಾಹಿತಿಯನ್ನು ಒದಗಿಸುವ ಕೆಲಸವನ್ನು ರೈಸ್ ಮಾಡಿದ್ದಾರೆ. ದ್ವಿತೀಯ ಸಂಪುಟ Mysore by district ದಲ್ಲಿ ಜಿಲ್ಲಾವಾರು ಮಾಹಿತಿಯನ್ನು ಒದಗಿಸಿದ್ದಾರೆ. ಮೈಸೂರು ಪ್ರಾಂತ್ಯದ ಪ್ರತಿ ಜಿಲ್ಲೆಯ ಸಮಗ್ರ ಮಾಹಿತಿಯನ್ನು ಇದರಲ್ಲಿ ಒದಗಿಸಲಾಗಿದೆ. ತೃತೀಯ ಸಂಪುಟ ಕೊಡಗಿನ ವಿಷಯಕ್ಕೆ ಸಂಬಂಧಿಸಿದೆ. ಅವರು ಪ್ರಕಟಿಸಿದ ಈ ಗೆಝೆಟಿಯರ್‌ಗಳು

ಭಾರತದ ಬೇರೆ ಯಾವುದೇ ಪ್ರದೇಶಗಳಲ್ಲಿ ಪ್ರಕಟವಾಗಿದ್ದ ಗೆಝೆಟಿಯರ್‌ಗಳಿಗಿಂತ ನಿರ್ದಿಷ್ಟ ಮತ್ತು ಸತ್ಯನಿಷ್ಠತೆಯಿಂದ ಕೂಡಿದ್ದುವು. ಕೊಡಗು ಮತ್ತು ಮೈಸೂರು ಪ್ರಾಂತ್ಯಗಳಲ್ಲಿ ಸಂಚರಿಸಿ ಸಂಗ್ರಹಿಸಿದ ಸ್ಥಳಪುರಾಣಗಳು, ಐತಿಹಾಸಿಕ ದಾಖಲೆಗಳು, ಚಾರಿತ್ರಿಕ ಅಂಶಗಳನ್ನು ಬಳಸಿಕೊಂಡು ಒಂದು ಶುಷ್ಕ ಮಾಹಿತಿಯಂತಲ್ಲದೆ ಓದುಗರಲ್ಲಿ ಆಸಕ್ತಿ ಮೂಡುವಂತೆ ಗೆಝೆಟಿಯರ್‌ಗಳನ್ನು ರಚಿಸಿದರು. ಹೀಗಾಗಿ ಮುಂದಿನ ಗೆಝೆಟಿಯರ್‌ಗಳ ರಚನೆಗೆ ಇವು ಮಾದರಿಯಾಗಿ ಉಳಿದುವು. ಬಿ. ಎಲ್. ರೈಸ್ ನಿರ್ವಹಿಸಿದ ಇಂತಹ ಮಹತ್ತರ ಕೆಲಸ ಅವರಿಗೆ ಅಖಿಲ ಭಾರತ ಪ್ರಶಸ್ತಿಯನ್ನು ದೊರಕಿಸಿ ಕೊಟ್ಟಿತು. ಅಷ್ಟಲ್ಲದೆ ರೈಸರು ನಿರ್ವಹಿಸಿದ ಈ ಕೆಲಸವನ್ನು ಮೆಚ್ಚಿಕೊಂಡ ಕೇಂದ್ರ ಸರ್ಕಾರದ ಆಗಿನ ದೊಡ್ಡ ಅಧಿಕಾರಿ ಡಬ್ಲ್ಯೂ. ಡಬ್ಲ್ಯೂ. ಹಂಟರ್ ಅವರು ರೈಸ್ ಬಗ್ಗೆ ವಿಶೇಷವಾದ ಮೆಚ್ಚುಗೆ ಮಾತನಾಡಿದರು. ೨೦ ವರ್ಷಗಳ ನಂತರ ಆ ಗೆಝೆಟಿಯರ್‌ಗಳನ್ನು ಪರಿಷ್ಕರಿಸುವ ಕಾರ್ಯವನ್ನು ರೈಸರೇ ನಿರ್ವಹಿಸುವ ಮೂಲಕ ಅವುಗಳ ಉತ್ಕೃಷ್ಟತೆಯನ್ನು ಮತ್ತಷ್ಟು ಹೆಚ್ಚಿಸಿದರು.

ರೈಸ್ ಮೈಸೂರು ಪ್ರಾಂತ್ಯದ ಹಳ್ಳಿ ಹಳ್ಳಿಗಳಲ್ಲಿ ಸುತ್ತಿ ಶಾಸನಗಳ ಪರಿವೀಕ್ಷಣೆ ಮಾಡಿ ಅವುಗಳ ಪಡಿಯಚ್ಚನ್ನು ತೆಗೆದುಕೊಂಡು ಅವುಗಳಲ್ಲಿರುವ ಪಠ್ಯವನ್ನು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಪ್ರಕಟಿಸುವುದರ ಜೊತೆಗೆ ಅನುವಾದವನ್ನು ಮಾಡಿದರು. ಶಾಸನ ಕ್ಷೇತ್ರದಲ್ಲಿ ಇವರು ನಿರ್ವಹಿಸಿದ ಕೆಲಸವನ್ನು ಎಪಿಗ್ರಾಫಿಯಾ ಕರ್ನಾಟಿಕಾ ಎಂಬ ಮಾಲಿಕೆಯಲ್ಲಿ ೮,೮೬೯ ಶಾಸನಗಳನ್ನು ೧೨ ಸಂಪುಟಗಳಲ್ಲಿ ಪ್ರಕಟಿಸಿದರು. ತಾವು ನಿರ್ವಹಿಸಿದ ಶಾಸನಗಳ ಸಂಗ್ರಹದ ಇತಿಹಾಸವನ್ನು ರೈಸ್ ತಮ್ಮ ಕೃತಿಯಾದ Mysore and Coorg from inscription ನ ಮುನ್ನುಡಿಯಲ್ಲಿ ಹೀಗೆ ಹೇಳಿದ್ದಾರೆ: "ಮೈಸೂರು ಅರಸ ಚಿಕ್ಕದೇವರಾಜರು (೧೬೭೨-೧೭೦೪) ಆಳುತ್ತಿರು ವಾಗ ತನ್ನ ರಾಜ್ಯದಲ್ಲಿದ್ದ ಶಾಸನಗಳ ಯಾದಿ ಮತ್ತು ಅವುಗಳ ಪ್ರತಿಗಳನ್ನು ಮಾಡಿಸಿಟ್ಟಿದ್ದನು. ಈತನ ಉದ್ದೇಶ ದೇವಾಲಯಗಳಿಗಾಗಿ ಬಿಟ್ಟ ದತ್ತಿಗಳನ್ನು ಪರಿಶೀಲಿಸುವುದಾಗಿತ್ತು. ಆದರೆ ಅರಸೊತ್ತಿಗೆಯು ಹೈದರಾಲಿ ಮತ್ತು ಆತನ ಪುತ್ರ ಟಿಪ್ಪುಸುಲ್ತಾನರ ವಶಕ್ಕೆ ಹೋದಾಗ ೧೮ನೇ ಶತಮಾನದ ಕೊನೆಯ ಭಾಗದಲ್ಲಿ ಟಿಪ್ಪುಸುಲ್ತಾನನ ಆಜ್ಞೆಯ ಮೇರೆಗೆ ಅರಮನೆ ಗ್ರಂಥಾಲಯದ ಗ್ರಂಥಗಳ ಜೊತೆಗೆ ಶಾಸನಗಳ ಪ್ರತಿಗಳನ್ನು, ಯಾದಿಯನ್ನು ಕುದುರೆಗಳಿಗೆ ಕಾಳನ್ನು ಬೇಯಿಸುವ ಒಲೆಗೆ ಹಾಕಿ ಉರಿಸಲಾಯಿತು. ೧೭೭೯ರಲ್ಲಿ ಪುನಃ ಮೈಸೂರು ಅರಸೊತ್ತಿಗೆ ಹಿಂದೂರಾಜರ ವಶಕ್ಕೆ ಬಂದಾಗ ಪುನಃ

ಶಾಸನಗಳ ಪರಿವೀಕ್ಷಣೆಯ ಕಾರ್ಯ ಪ್ರಾರಂಭವಾಯಿತು. ಈ ಕಾರ್ಯವನ್ನು ಕರ್ನಲ್ ಮೆಕೆಂಝಿ ಪ್ರಾರಂಭಿಸಿದರು." ಇದೇ ಕಾಲಕ್ಕೆ ಮುಖ್ಯ ಕಮಿಷನರ್ ಆಗಿದ್ದ ಬೌರಿಂಗ್ ಹಲವು ಶಾಸನಗಳ ಛಾಯಾಚಿತ್ರವನ್ನು ತೆಗೆದಿದ್ದರು. ಜೊತೆಗೆ ಕಮಿಷನರ್ ಬೌರಿಂಗ್ ಆದೇಶದ ಮೇರೆಗೆ ಮೇಜರ್ ಡಿಕನ್‌ಸನ್ ಎಂಬುವವರು ತಾವು ಸಂಗ್ರಹಿಸಿದ್ದ ಶಾಸನಗಳ ಪ್ರತಿಗಳನ್ನು ರೈಸರಿಗೆ ನೀಡಿದರು. ಇದು ಮುಂದಿನ ಕಾರ್ಯಗಳಿಗೆ ಚಾಲನೆ ನೀಡಲು ಸಹಾಯಕವಾಯಿತು. ರೈಸರು ತಾವು ಸಂಗ್ರಹಿಸಿದ್ದನ್ನು ಸೇರಿಸಿ ಮೈಸೂರು ಶಾಸನ ಸಂಪುಟಗಳನ್ನು ಸಿದ್ಧಪಡಿಸಿದರು. ಅವರ ಮನೆ ಈಗಿನ ಸ್ಯಾಂಕಿರೋಡಿನ ವಿಂಡ್ಸರ್‌ಮ್ಯಾನರ್ ಹೋಟೆಲ್‌ನ ಬಳಿ ಹೈಗ್ರೌಂಡಿ ನಲ್ಲಿದ್ದ ನಿವೇಶನದಲ್ಲಿ ಸುಸಜ್ಜಿತವಾಗಿ ನಿರ್ಮಾಣಗೊಂಡಿತ್ತು. ಅಲ್ಲಿ ಶಾಸನ ಸಂಪುಟಗಳ ರಚನಾಕಾರ್ಯ ಪ್ರಾರಂಭ ಗೊಂಡಿತು. ಇದು ಆಗಿನ ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಅದರ ಭಾಗವಾಗಿಯೇ ಈ ಸಂಪುಟಗಳು ಪ್ರಕಟಗೊಂಡವು. ಇದು ಕರ್ನಾಟಕ ಶಾಸನಗಳನ್ನು ಕುರಿತು ಪ್ರತ್ಯೇಕವಾಗಿ ಪ್ರಕಟವಾದ ಮೊದಲಗ್ರಂಥ ಎಂದು ಗುರುತಿಸಲಾಯಿತು. ಈ ಕೆಲಸವನ್ನು ರೈಸರು ಒಂದು ಹವ್ಯಾಸದಂತಲ್ಲದೆ ಒಂದು ವ್ರತದಂತೆ ಸ್ವೀಕರಿಸಿದ್ದರು.

ರೈಸರ ಶಿಫಾರಸ್ಸಿನ ಮೇರೆಗೆ ಅಂದಿನ ಮಹಾರಾಜರ ಸಚಿವಾಲಯದಲ್ಲಿ ಪುರಾತತ್ತ್ವ ಅಧ್ಯಯನ ಕೇಂದ್ರ ಹೊಸ ಇಲಾಖೆಯಾಗಿ ೧೮೮೫ರಲ್ಲಿ ಪ್ರಾರಂಭವಾಯಿತು. ಆಗ ರೈಸರು ಶಿಕ್ಷಣ ಇಲಾಖೆಯ ಕೆಲಸದ ಜೊತೆಗೆ ಪುರಾತತ್ತ್ವ ಇಲಾಖೆಯ ಮುಖ್ಯಸ್ಥರಾಗಿಯೂ ಕಾರ್ಯನಿರ್ವಹಿಸತೊಡಗಿದರು. ತಮ್ಮ ಅಧಿಕಾರ ಕ್ಷೇತ್ರಕ್ಕೆ ಒಳಪಡುವ ಜಿಲ್ಲೆಗಳಲ್ಲಿರುವ ಸಮಸ್ತ ಶಾಸನಗಳನ್ನು ಕ್ರಮಬದ್ಧವಾಗಿ ಪ್ರಕಟಿಸಬೇಕೆಂದು ರೈಸರು ಎಪಿಗ್ರಾಫಿಯಾ ಕರ್ನಾಟಿಕಾ ಯೋಜನೆ ಅಡಿಯಲ್ಲಿ ಕೊಡಗು ಶಾಸನಗಳ ಸಂಪುಟವನ್ನು ೧೮೮೬ರಲ್ಲಿ ಹೊರ ತಂದರು. ದಿವಾನ್ ಕೆ. ಶೇಷಾದ್ರಿ ಅಯ್ಯರ್ ಅವರ ದೂರಾಲೋಚನೆಯ ಪರಿಣಾಮವಾಗಿ ೧೮೮೮ ರಲ್ಲಿ ಪುರಾತತ್ತ್ವ ಶಾಖೆಯು ಪ್ರತ್ಯೇಕ ಸಿಬ್ಬಂದಿಯೊಂದಿಗೆ ಕಾರ್ಯೋನ್ಮುಖವಾಯಿತು. ರೈಸರನ್ನು ಶೈಕ್ಷಣಿಕ ಕಾರ್ಯ ಗಳಿಂದ ಬಿಡುಗಡೆಗೊಳಿಸಿ ಅವರಿಗೆ ಪುರಾತತ್ತ್ವ ಇಲಾಖೆಯ ಸಂಪೂರ್ಣ ಅಧಿಕಾರವನ್ನು ವಹಿಸಲಾಯಿತು. ಆಗ ಪ್ರತಿ ಜಿಲ್ಲೆಗೂ ಸಂಬಂಧಿಸಿದ ಶಾಸನಸಂಪುಟಗಳು ಹೊರಬರತೊಡಗಿದುವು. ರೈಸ್ ಅವರು

ಎಪಿಗ್ರಾಫಿಯಾ ಕರ್ನಾಟಿಕಾದ ೧೨ ಸಂಪುಟಗಳು ಹೊರಬಂದ ಮೇಲೆ ನಿವೃತ್ತರಾಗಲು ಬಯಸಿದರು.

ರೈಸ್ ಕನ್ನಡ ಭಾಷೆಯ ಜೊತೆಗೆ ತೆಲುಗು, ತಮಿಳು ಮತ್ತು ಸಂಸ್ಕೃತ ಭಾಷೆಗಳನ್ನು ಅಭ್ಯಸಿಸಿದ್ದರಿಂದ ಶಾಸನಗಳನ್ನು ಓದಲು, ಅರ್ಥೈಸಲು, ಅವುಗಳನ್ನು ಕುರಿತು ಹೆಚ್ಚಿನ ಕೆಲಸ ಮಾಡಲು ಸಾಧ್ಯವಾಯಿತು. ಶಾಸನಗಳ ಮೇಲೆ ಹೀಗೆ ಅವರು ಮಾಡಿದ ಕೆಲಸ ಕರ್ನಾಟಕದ ಸಮಗ್ರ ಇತಿಹಾಸ ರಚನೆಗೆ ಬಹುದೊಡ್ಡ ಆಕರವಾಯಿತು. ಇವರು ಹೊರತಂದ ಶಾಸನ ಸಂಪುಟಗಳಲ್ಲಿ ೮೮೬೯ ಶಾಸನಗಳು ಸೇರ್ಪಡೆಗೊಂಡವು. ಇದರಲ್ಲಿ ಮೊದಲಿಗೆ ದೊರೆತಿದ್ದು ಕೇವಲ ಕೆಲವು ನೂರು ಶಾಸನಗಳು ಮಾತ್ರ. ರೈಸರು ಸಾವಿರಾರು ಶಾಸನಗಳನ್ನು ಹುಡುಕಿ ಹೊರ ತೆಗೆದು ಅವುಗಳ ಎಲ್ಲ ವಿವರಗಳನ್ನು ಶಾಸನ ಸಂಪುಟಗಳಲ್ಲಿ ಸೇರ್ಪಡೆಗೊಳಿಸಿದರು. ಬೇರೆ ಯಾವ ಭಾರತೀಯ ಸಂಶೋಧಕರು ರೈಸರು ಹುಡುಕಿ ತೆಗೆದಷ್ಟು ಶಾಸನಗಳನ್ನು ಕಂಡುಹಿಡಿದಿಲ್ಲವೆಂಬ ಅಭಿಪ್ರಾಯವನ್ನು ವಿದ್ವಾಂಸರು ವ್ಯಕ್ತಪಡಿಸಿದ್ದಾರೆ. ಮೆಕೆಂಜೆ, ಬುಕ್ಕನ್ಸನ್ ಮತ್ತು ಡಿಕನ್ಸನ್ ಶಾಸನಗಳನ್ನು ಸಂಗ್ರಹಿಸುವ ಕೆಲಸವನ್ನಷ್ಟೆ ಮಾಡಿದ್ದರು. ಎಲಿಯಟ್ ಕೇವಲ ಉತ್ತರ ಕನ್ನಡ ನಾಡಿನ ಶಾಸನಗಳನ್ನಷ್ಟೇ ಸಂಗ್ರಹಿಸಿದ್ದ. ಹೀಗಾಗಿ ಸಮಗ್ರ ಇತಿಹಾಸ ರಚನೆಗೆ ಇವು ಪೂರ್ಣ ಪ್ರಮಾಣದ ವಸ್ತುವನ್ನು ಒದಗಿಸುತ್ತಿರಲಿಲ್ಲ. ಇಂಥ ಕೊರತೆಯನ್ನು ರೈಸರ ಕೆಲಸ ತುಂಬಿಕೊಟ್ಟಿತು. ಈ ಆಕರಗಳು ರಾಜಮನೆತನಗಳ ಚರಿತ್ರೆ, ಇತರ ಐತಿಹಾಸಿಕ ಘಟನೆಗಳು ಮತ್ತು ಸಾಂಸ್ಕೃತಿಕ ಅಂಶಗಳನ್ನು ಪರಾಮರ್ಶಿಸಲು ಸಹಕಾರಿಯಾದುವು. ಭಾರತದ ಇತಿಹಾಸ ರಚನೆಯ ದೃಷ್ಟಿಯಿಂದಲೂ ಹಲವು ಹೊಸ ವಿಷಯಗಳು ರೈಸರಿಂದಾಗಿ ಗುರುತಿಸಲ್ಪಟ್ಟವು. ಬೆಂಗಳೂರಿನಲ್ಲಿ ರೋಮನ್ ನಾಣ್ಯಗಳು ದೊರೆತಾಗ ರೈಸರು ಆ ಕುರಿತು ಪುಸ್ತಕವೊಂದನ್ನು ಪ್ರಕಟಿಸಿದರು. ಇದರಿಂದ ರೋಮ್ ಮತ್ತು ಭಾರತದ ನಡುವಿನ ಸಂಬಂಧದ ಅಧ್ಯಯನ ಸಾಧ್ಯವಾಯಿತು. ರೈಸರ ಕ್ಷೇತ್ರಕಾರ್ಯದಿಂದ ದೊರೆತ ಅಶೋಕನ ಶಾಸನಗಳಿಂದಾಗಿ ಅಶೋಕನ ಸಾಮ್ರಾಜ್ಯವು ದಕ್ಷಿಣದವರೆಗೂ ಹಬ್ಬಿತ್ತು ಎಂಬುದು ಸ್ಪಷ್ಟವಾಯಿತು. ಈ ಅಂಶಗಳನ್ನು ರೈಸರು ಗ್ರಂಥರೂಪದಲ್ಲಿ ಪ್ರಕಟಿಸಿದಾಗ ಅಂದಿನ ಏಷಿಯಾಟಿಕ್ ಸೊಸೈಟಿಯ ಅಧ್ಯಕ್ಷರು ತಮ್ಮ ವಾರ್ಷಿಕ ಭಾಷಣದಲ್ಲಿ the most important discovery made in India during the year 1892 ಎಂದು ಪ್ರಶಂಸಿಸಿದರು. ಕರ್ನಾಟಕದ ಶಾತವಾಹನರ ಸಂಬಂಧ, ಶ್ರವಣಬೆಳಗೊಳದ

ಜೈನ ಪರಂಪರೆ, ಮಹಾವಳಿ, ಬಾಣ, ನೊಳಂಬ ಮುಂತಾದ ಸಣ್ಣ ರಾಜಮನೆತನಗಳ ವಿಷಯಗಳು ರೈಸರ ಸಂಶೋಧನೆಗಳಿಂದ ಬೆಳಕಿಗೆ ಬಂದುವು. ರೈಸರು ಮಾಡಿದ ಶಾಸನಗಳ ಶೋಧನೆ ಮತ್ತು ಅಧ್ಯಯನದ ಸಮಗ್ರ ಸಾರ ಅವರು ಬರೆದ ಲೇಖನಗಳ ಮೂಲಕ ಇಂಡಿಯನ್ ಆಂಟಿಕ್ವರಿ, ಜರ್ನಲ್ ಆಫ್ ರಾಯಲ್ ಏಷಿಯಾಟಿಕ್ ಸೊಸೈಟಿ, ಮಿಥಿಕ್ ಸೊಸೈಟಿ ಮೊದಲಾದ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಭಾರತದ ಚರಿತ್ರೆಯ ಅಧ್ಯಯನದಲ್ಲಿ ಪ್ರತಿಯೊಬ್ಬ ಇತಿಹಾಸಕಾರನು ರೈಸರು ಪ್ರಕಟಿಸಿದ ಎಪಿಗ್ರಾಫಿಯಾ ಕರ್ನಾಟಿಕಾ ಅಥವಾ ರೈಸರ ಬೇರೆ ಯಾವುದೇ ಲೇಖನ, ಪುಸ್ತಕವನ್ನು ಪರಾಮರ್ಶಿಸದಿದ್ದರೆ ಆ ಅಧ್ಯಯನ ಅಪೂರ್ಣ ಎಂಬಷ್ಟರ ಮಟ್ಟಿಗೆ ರೈಸರು ಭಾರತದ ಇತಿಹಾಸ ರಚನೆಯಲ್ಲಿ ಆದ್ಯರಾಗಿದ್ದಾರೆ.

ರೈಸರು ನಿರ್ವಹಿಸಿದ ಮಹತ್ತ್ವಪೂರ್ಣ ಕೆಲಸಗಳು ಕೇವಲ ಶಾಸನಗಳ ಶೋಧ ಮತ್ತು ಅಧ್ಯಯನ ಪ್ರಕಟನೆಗಷ್ಟೇ ಸೀಮಿತವಾಗಿರಲಿಲ್ಲ. ಅವರು ಸಂಸ್ಕೃತದ ಪುನರುಜ್ಜೀವನ ಹಾಗೂ ಹಳಗನ್ನಡ ಕಾವ್ಯ ಪ್ರಕಟನೆಯಲ್ಲಿಯೂ ಮಹತ್ತ್ವಪೂರ್ಣ ಕೆಲಸವನ್ನು ನಿರ್ವಹಿಸಿದ್ದಾರೆ. ಸಂಸ್ಕೃತದಲ್ಲಿ ವಿಶೇಷ ಆಸಕ್ತಿ ಹೊಂದಿದ್ದ ಅವರು ಅದರಲ್ಲಿ ಪರಿಣತರಾಗಿದ್ದರು. ಗ್ರಂಥ ಸಂಪಾದನೆ ಒಂದು ಶಾಸ್ತ್ರವಾಗಿ ಪಾಶ್ಚಿಮಾತ್ಯರ ಮೂಲಕವೇ ಹೊರಹೊಮ್ಮಿತು. ಕರ್ನಾಟಕದಲ್ಲಿ ಪಶ್ಚಿಮಾತ್ಯ ವಿದ್ವಾಂಸರಾದ ಕಿಟೆಲ್, ಜಿ. ಗ್ಯಾರೆಟ್ ಮತ್ತು ಬಿ.ಎಲ್. ರೈಸ್ ಮೂಲಕ ಶಾಸ್ತ್ರೀಯವಾಗಿ ಗ್ರಂಥಸಂಪಾದನೆ ಮಾಡುವ ಕೆಲಸ ಮೊದಲ್ಗೊಂಡಿತು. ಹಸ್ತಪ್ರತಿಗಳನ್ನು ಸಂಗ್ರಹಿಸುವ ಹಸ್ತಪ್ರತಿ ಸೂಚಿಗಳನ್ನು ತಯಾರಿಸುವ ಮತ್ತು ಗ್ರಂಥಪರಿಷ್ಕರಣ ಮಾಡಿ ಪ್ರಕಟಿಸುವ ಈ ಮೂರು ಹಂತದ ಕೆಲಸಗಳನ್ನು ನಿರ್ವಹಿಸಲಾಯಿತು.

ಮೈಸೂರಿನ ಪ್ರಾಚ್ಯವಸ್ತು ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿರುವಾಗ ಕುದುರೆ ಸವಾರಿ ಮಾಡುತ್ತ ಮೈಸೂರು ಸಂಸ್ಥಾನದ ಹಳ್ಳಿಗಳಲ್ಲಿ ಸಂಚರಿಸುವಾಗ ಶಾಸನಗಳ ಪರಿವೀಕ್ಷಣೆಯೊಟ್ಟಿಗೆ ಹಸ್ತಪ್ರತಿಗಳ ಸಂಗ್ರಹ ಕಾರ್ಯವನ್ನು ರೈಸ್ ಮಾಡುತ್ತಿದ್ದರು. ಹೀಗೆ ಸಂಗ್ರಹಿಸಿದ ಹಸ್ತಪ್ರತಿಗಳ ವಿವರಗಳನ್ನು ಪ್ರತಿ ವರ್ಷ ಪ್ರಕಟವಾಗುತ್ತಿದ್ದ ಮೈಸೂರು ಪ್ರಾಚ್ಯ ವಸ್ತು ಇಲಾಖೆಯ ವಾರ್ಷಿಕ ವರದಿಯಲ್ಲಿ ಪ್ರಕಟ ಮಾಡುತ್ತಿದ್ದರು. ಇವರು ಹಸ್ತಪ್ರತಿಗಳನ್ನು ಸಂಗ್ರಹಿಸಿದ್ದಷ್ಟೇ ಅಲ್ಲದೆ ಅದು ಭಂಡಾರ ರೂಪದಲ್ಲಿ ನೆಲೆಗೊಳ್ಳಲು ಕಾರಣಕರ್ತರಾದರು. ಮೈಸೂರು ಮಹಾರಾಜ ಹತ್ತನೇ ಚಾಮರಾಜ ಒಡೆಯರ್ ಅವರು ೧೮೯೧ರಲ್ಲಿ ಹಸ್ತಪ್ರತಿ ಭಂಡಾರವನ್ನು

ಅರಮನೆಯಲ್ಲಿ ಪ್ರಾರಂಭಿಸಿದರು. ಸಂಸ್ಕೃತದ ಮತ್ತು ಕನ್ನಡದ ಅಪರೂಪದ ತಾಳೆಗರಿ ಮತ್ತು ಕಾಗದ ಹಸ್ತಪ್ರತಿಗಳನ್ನು ಸಂಗ್ರಹಿಸಿ, ಸಂರಕ್ಷಿಸಿ, ಸಂಪಾದಿಸಿ ಪ್ರಕಟಿಸಲಾಗುತ್ತಿತ್ತು. ಮುಂದೆ ಈ ಭಂಡಾರ ಓರಿಯಂಟಲ್ ಲೈಬ್ರರಿಯಾಗಿ ಹೆಸರು ಪಡೆದು ಸಾರ್ವಜನಿಕರಿಗೆ ತೆರೆಯಲ್ಪಟ್ಟಿತು. ತದನಂತರ ಪ್ರಾಚ್ಯವಿದ್ಯಾ ಸಂಶೋಧನಾಲಯ ಎಂದಾಗಿ ೧೯೧೬ ರಿಂದ ಮೈಸೂರು ವಿಶ್ವವಿದ್ಯಾನಿಲಯದ ಕಾರ್ಯವ್ಯಾಪ್ತಿಗೆ ಒಳಪಟ್ಟು ಇಂದಿಗೂ ಕಾರ್ಯನಿರ್ವಹಿಸುತ್ತಿದೆ.

ಸಂಸ್ಕೃತ ಕೃತಿಗಳ ಅನ್ವೇಷಣೆ ಮತ್ತು ರಕ್ಷಣೆಗಾಗಿ ಇದ್ದ ಭಾರತ ಸರ್ಕಾರದ ಯೋಜನೆಯನ್ವಯ ರೈಸ್ ಮೈಸೂರು ಸಂಸ್ಥಾನ ಮತ್ತು ಕೊಡಗುಗಳಲ್ಲಿ ದೊರೆತ ಹಸ್ತಪ್ರತಿ ಸೂಚಿಯನ್ನು ತಯಾರಿಸಿದರು. ಅಮರಕೋಶ ಸಂಸ್ಕೃತ ಕೃತಿಯನ್ನು ವ್ಯವಸ್ಥಿತವಾಗಿ ಪರಿಷ್ಕರಿಸಿ ಪ್ರಕಟಿಸಿದರು. ಹಸ್ತಪ್ರತಿಗಳನ್ನು ಸಂಗ್ರಹಿಸಿ, ಅವುಗಳ ಸಾಹಿತ್ಯ ಪ್ರಕಾರಗಳನ್ನು ಗುರುತಿಸಿ, ಸಂಪಾದಿಸಿ ಪ್ರಕಟಿಸುವ ಕೆಲಸವನ್ನು ಅತ್ಯಂತ ಆಸಕ್ತಿಯಿಂದ ನಿರ್ವಹಿಸುತ್ತಾ ಬಂದರು. ಬಿಬ್ಲಿಯೋಥೀಕಾ ಕರ್ನಾಟಿಕಾ ಯೋಜನೆಯ ಅಡಿಯಲ್ಲಿ ತಾವು ಪರಿಷ್ಕರಿಸಿದ ಗ್ರಂಥಗಳ ಜೊತೆಗೆ ಬೇರೆಯವರು ಪರಿಷ್ಕರಿಸಿದ ಗ್ರಂಥಗಳನ್ನು ಪ್ರಕಟಿಸಿದರು. ಟಿ. ರಾಮಾನುಜ ಯ್ಯಂಗಾರರು ಸಂಗ್ರಹಿಸಿದ್ದ ರಾಮಾಯಣವನ್ನು ಪರಿಷ್ಕರಿಸಿ, ಅದನ್ನು ಕನ್ನಡ ಇಂಗ್ಲಿಷ್ ಶಬ್ದಾರ್ಥಗಳೊಂದಿಗೆ ೧೮೬೮ರಲ್ಲಿ ಪ್ರಕಟಿಸಿದರು. ಪಂಪ ಭಾರತ, ಪಂಪ ರಾಮಾಯಣ, ಕರ್ಣಾಟಕ ಶಬ್ದಾನುಶಾಸನ, ಕರ್ಣಾಟಕ ಭಾಷಾಭೂಷಣ, ಕವಿರಾಜಮಾರ್ಗ, ಕಾವ್ಯಾವಲೋಕನ ಮೊದಲಾದ ಅಪೂರ್ವ ಕೃತಿಗಳು ಈ ಯೋಜನೆ ಅಡಿಯಲ್ಲಿ ಪ್ರಕಟಗೊಂಡವು. ರೈಸರು ಪುರಾತತ್ತ್ವ ಇಲಾಖೆಗೆ ಆರ್. ನರಸಿಂಹಾಚಾರ್‌ರನ್ನು ನೇಮಿಸಿಕೊಂಡು ಕನ್ನಡ ಸಾಹಿತ್ಯಲೋಕಕ್ಕೆ ಬಹುದೊಡ್ಡ ಉಪಕಾರ ಮಾಡಿದರು. ಆರ್. ನರಸಿಂಹಾಚಾರ್ಯರು ಶಾಸನ ಇಲಾಖೆ ಕೆಲಸಗಳನ್ನು ಮಾಡುವುದರ ಜೊತೆ ಜೊತೆಗೆ ನೂರಾರು ಕನ್ನಡ ಸಾಹಿತ್ಯ ಕೃತಿಗಳ ಹಸ್ತಪ್ರತಿಗಳನ್ನು ಓದಿ ಕರ್ನಾಟಕ ಕವಿಚರಿತೆಯ ಮೂರು ಸಂಪುಟಗಳನ್ನು ಹೊರತಂದರು. ಇದು ಹಳಗನ್ನಡ ಸಾಹಿತ್ಯದ ಪುನರುಜ್ಜೀವನಕ್ಕೆ ರೈಸರು ಕೊಟ್ಟ ಕಾಣಿಕೆ ಎಂದೇ ಹೇಳಬಹುದು. ಇದರೊಟ್ಟಿಗೆ ಆರ್. ನರಸಿಂಹಾಚಾರ್ಯರ ವಿದ್ವತ್ತು ಮತ್ತು ಸಂಶೋಧನ ಮಾರ್ಗಗಳು ಬೆಳಕಿಗೆ ಬಂದುವು. ರೈಸರು ಆರ್. ನರಸಿಂಹಾಚಾರ್ಯರ ಈ ಕೆಲಸವನ್ನು ಬಹಳವಾಗಿ ಮೆಚ್ಚಿಕೊಂಡರು. ಅಷ್ಟು ಮಾತ್ರವಲ್ಲದೆ ನಿವೃತ್ತರಾಗಿ ಸ್ವದೇಶಕ್ಕೆ

ಮರಳಿದ ಅನಂತರವೂ ಈ ಕವಿಚರಿತೆಯ ಸಂಪುಟಗಳನ್ನು ಇಂಗ್ಲಿಷಿಗೆ ಅನುವಾದ ಮಾಡಬೇಕೆಂಬ ಅಪೇಕ್ಷೆ ಅವರಿಗಿತ್ತು.

ಪ್ರಾಚೀನ ಕಾವ್ಯದ ಗ್ರಂಥಸಂಪಾದನೆಯಲ್ಲಿ ವಿದ್ವತ್ಪೂರ್ಣ ಹಾಗೂ ದೀರ್ಘವಾದ ಪೀಠಿಕೆಯನ್ನು ಬರೆಯುವ ಸಂಪ್ರದಾಯ ಬಿ. ಎಲ್. ರೈಸರಿಂದಲೇ ಮೊದಲ್ಗೊಂಡಿತು. ಕವಿಯ ಕಾಲ, ದೇಶ ಮೊದಲಾದ ವಿಚಾರಗಳ ಜೊತೆಗೆ ಕೃತಿಯ ಸಾರಾಂಶವನ್ನು ಬರೆಯುವ ಪದ್ಧತಿಯನ್ನು ರೈಸ್ ಅನುಸರಿಸಿದರು. ಗ್ರಂಥಸಂಪಾದನೆಯಲ್ಲಿ ಈ ಪದ್ಧತಿಯನ್ನು ಇಂದಿಗೂ ಮುಂದುವರಿಸಿಕೊಂಡು ಬರಲಾಗುತ್ತಿದೆ.

ರೈಸ್ ಈ ಎಲ್ಲಾ ಕೆಲಸಗಳ ಜೊತೆಗೆ ಮಹತ್ತ್ವಪೂರ್ಣ ಸಂಶೋಧನಾತ್ಮಕ ಲೇಖನಗಳನ್ನೂ ಬರೆದಿದ್ದಾರೆ. ಇವರು ಸು.೫೦ಕ್ಕೂ ಹೆಚ್ಚು ಸಂಶೋಧನಾತ್ಮಕ ಲೇಖನಗಳನ್ನು ಇಂಗ್ಲಿಷ್‌ನಲ್ಲಿ ಬರೆದು ಪ್ರಕಟಿಸಿದ್ದಾರೆ. ಮಹಿಷಮಂಡಲ, ಜೈನವೈಷ್ಣವರ ಒಪ್ಪಂದ, ಚಾಲುಕ್ಯ ಮತ್ತು ಪಲ್ಲವರು, ಗಂಗ ಮತ್ತು ಬಾಣ ವಂಶಗಳು, ಕವಿ ಪಂಪ ಮುಂತಾದ ಲೇಖನಗಳನ್ನು ಅವರು ಬರೆದಿದ್ದಾರೆ. ರೈಸರು ನಿರ್ವಹಿಸಿದ ಈ ಎಲ್ಲಾ ಮಹತ್ವಪೂರ್ಣ ಕಾರ್ಯಗಳನ್ನು ಗುರುತಿಸಿದ ಬ್ರಿಟಿಷ್ ಸರ್ಕಾರ ೧೮೮೪ರಲ್ಲಿ ಸಿ.ಐ.ಸಿ.(Companion of the Indian Empire) ಪ್ರಶಸ್ತಿ ಯನ್ನೂ ಮದ್ರಾಸ್ ವಿಶ್ವವಿದ್ಯಾಲಯ ೧೮೮೭ರಲ್ಲಿ ಗೌರವ ಡಾಕ್ಟೊರೇಟ್ ಪದವಿಯನ್ನೂ ಕೊಟ್ಟು ಸನ್ಮಾನಿಸಿವೆ.

ಕನ್ನಡನಾಡಿನಲ್ಲಿ ಹುಟ್ಟಿ ಬೆಳೆದ ರೈಸ್ ರವರು ಕನ್ನಡ ನಾಡು ಮತ್ತು ನುಡಿಯ ಬಗ್ಗೆ ಅಪಾರವಾದ ಪ್ರೀತಿ ಮತ್ತು ಅಭಿಮಾನವನ್ನು ಇಟ್ಟುಕೊಂಡಿದ್ದರು. ಅವರಿಗಿದ್ದ ಕನ್ನಡ ಪ್ರೀತಿ ಎಷ್ಟು ಎಂಬುದಕ್ಕೆ ಒಂದು ಸಂದರ್ಭವನ್ನು ಉದಾಹರಿಸಬಹುದು. ಅವರು ತೀರಿಕೊಳ್ಳುವುದಕ್ಕೆ ಮೂರು ವರ್ಷ ಮುಂಚೆ ಇಂಗ್ಲೆಂಡಿನಲ್ಲಿ ಅಂತಾರಾಷ್ಟ್ರೀಯ ವಸ್ತುಪ್ರದರ್ಶನವೊಂದು ನಡೆಯಿತು. ಆ ಪ್ರದರ್ಶನಕ್ಕೆ ಮೈಸೂರಿನ ಮಳಿಗೆಯ ನೇತೃತ್ವವನ್ನು ಸೋಸಲೆ ಗರಳಪುರಿ ಶಾಸ್ತ್ರಿಗಳು ವಹಿಸಿಕೊಂಡು ಇಂಗ್ಲೆಂಡಿಗೆ ಹೋಗಿದ್ದರು. ವೆಂಬರ್ಲಿಯಲ್ಲಿ ನಡೆದ ಈ ಪ್ರದರ್ಶನವನ್ನು ವೀಕ್ಷಿಸಲು ರೈಸ್ ಕೂಡಾ ಹೋಗಿದ್ದರು. ಆಗ ಮೈಸೂರಿನ ಮಳಿಗೆಗೆ ಭೇಟಿ ನೀಡಿ ಶಾಸ್ತ್ರಿಗಳನ್ನು ನೋಡಿ ಸಂತೋಷಪಟ್ಟು ಇಂಗ್ಲಿಷಲ್ಲಿ ಮಾತು ಪ್ರಾರಂಭಿಸಿದ ಶಾಸ್ತ್ರಿಗಳಿಗೆ 'ಆಹಾ! ಕನ್ನಡ ಎಷ್ಟು ಚಂದ! ಎಷ್ಟು ಮಧುರ! ಕನ್ನಡದಲ್ಲಿ

ಮಾತನಾಡುವ' ಎಂದರಂತೆ! ರೈಸರು ಮೂಲತಃ ವಿದೇಶಿಗರಾದರೂ ಉನ್ನತ ಶಿಕ್ಷಣವನ್ನು ಇಂಗ್ಲೆಂಡಿನಲ್ಲಿ ಪಡೆದಿದ್ದರೂ ಕನ್ನಡ ಭಾಷೆಯ ಬಗ್ಗೆ ಅಪಾರವಾದ ಪ್ರೇಮವನ್ನು ಇಟ್ಟುಕೊಂಡಿದ್ದರು. ಕನ್ನಡನಾಡಿನ ಬಗ್ಗೆ ವಿಶೇಷವಾಗಿ ಬೆಂಗಳೂರಿನ ಬಗ್ಗೆ ಅವರಿಗೆ ಅಭಿಮಾನವಿತ್ತು. ಹೀಗಾಗಿಯೇ ಅವರು ಗತಿಸಿ ನೂರಾರು ವರ್ಷಗಳಾದರೂ ಇಂದಿಗೂ ಕನ್ನಡಿಗರ ಪಾಲಿಗೆ ಪ್ರಾತಃಸ್ಮರಣೀಯರಾಗಿದ್ದಾರೆ.

ಬಿ.ಎಲ್. ರೈಸ್ ೯೦ ವರ್ಷಗಳ ತುಂಬು ಜೀವನ ನಡೆಸಿ ೧೯೨೭ರ ಜುಲೈ ೧೦ರಂದು ಇಹಲೋಕ ತ್ಯಜಿಸಿದರು. ಅವರ ನೆನಪಿಗಾಗಿ ಬೆಂಗಳೂರು ಮಹಾನಗರ ಪಾಲಿಕೆಯು ಸೇಂಟ್ ಥಾಮಸ್ ಟೌನ್ ಪ್ರದೇಶವನ್ನು ಬಿ. ಎಲ್. ರೈಸ್ ನಗರವೆಂದು ಘೋಷಿಸುವ ಮೂಲಕ ಅವರ ನೆನಪನ್ನು ಚಿರಸ್ಥಾಯಿಗೊಳಿಸಿದೆ.

❐ ❐ ❐

ಇ.ಪಿ.ರೈಸ್

(೧೮೪೯–೧೯೩೬)

ಬಿ. ವೆಂಕಟರಾಮಣ್ಣ

ಇ.ಪಿ. ರೈಸ್ ಕನ್ನಡಕ್ಕಾಗಿ ದುಡಿದ ಪಾಶ್ಚಾತ್ಯ ವಿದ್ವಾಂಸರಲ್ಲೊಬ್ಬರು. ೧೮೪೯ ಏಪ್ರಿಲ್ ೨೬ರಂದು ಬೆಂಗಳೂರಿನಲ್ಲಿ ಜನಿಸಿದರು. ಎಡ್ವರ್ಡ್ ಪೀಟರ್ ರೈಸ್ ಎಂಬುದು ಇವರ ಪೂರ್ಣ ಹೆಸರು. ಕ್ರೈಸ್ತಧರ್ಮ ಪ್ರಚಾರಕರಾಗಿದ್ದ ಇವರ ತಂದೆ ಬೆಂಜಮಿನ್ ಹೋಲ್ಟ್ ರೈಸ್‌ರು ಬೆಂಗಳೂರಿನ ಲಂಡನ್ ಮಿಷನರಿ ಸೊಸೈಟಿಯಲ್ಲಿ ಕೆಲಸ ನಿರ್ವಹಿಸಿದರು. 'ಶಾಸನಾಧ್ಯಯನ ಪಿತಾಮಹ' ಎಂದೇ ಹೆಸರು ಮಾಡಿರುವ ಬೆಂಜಮಿನ್ ಲೂಯಿ ರೈಸ್ ಇವರ ಹಿರಿಯ ಸಹೋದರರು. ಹಾಗಾಗಿ ಈ ಮೂವರನ್ನು ಕನ್ನಡ ಸಾಹಿತ್ಯ ವಲಯದಲ್ಲಿ ಒಂದೇ ಕುಟುಂಬದ ತ್ರಿಮೂರ್ತಿ ವಿದ್ವಾಂಸರೆಂದು ಗುರುತಿಸಲಾಗಿದೆ. ಬೆಂಗಳೂರಿನಲ್ಲಿ ಇವರು ಮೊದಲು ತಂದೆಯೊಂದಿಗೆ ಕನ್ನಡ ಭಾಷೆ–ಸಾಹಿತ್ಯಗಳನ್ನು ಅಭ್ಯಾಸಮಾಡಿದರು. ಬೆಂಗಳೂರು ಮತ್ತು ಚಿಕ್ಕಬಳ್ಳಾ ಪುರಗಳಲ್ಲಿ ಕ್ರೈಸ್ತಧರ್ಮಪ್ರಚಾರಕರಾಗಿ ೧೮೭೩–೯೫ರ ತನಕ ಕೆಲಸ ನಿರ್ವಹಿಸಿದರು. ಅನಂತರ ಬೆಂಗಳೂರು ಲಂಡನ್ ಮಿಷನ್ ಹೈಸ್ಕೂಲ್‌ನ ಮುಖ್ಯೋಪಾಧ್ಯಾಯರಾಗಿಯೂ ಸ್ವಲ್ಪ ಕಾಲ ಸೇವೆ ಸಲ್ಲಿಸಿದರು. ಒಟ್ಟಿನಲ್ಲಿ ಧರ್ಮಪ್ರಚಾರ, ವಿದ್ಯಾಪ್ರಸಾರ ಮತ್ತು ಸಾಮಾಜಿಕಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿ ಕೊಂಡು ಅವಿಶ್ರಾಂತವಾಗಿ ದುಡಿದು ೧೯೧೫ರಲ್ಲಿ ಸ್ವದೇಶಕ್ಕೆ ತೆರಳಿದರು.

ಇ.ಪಿ.ರೈಸ್ ಅವರು ಕ್ರೈಸ್ತಧರ್ಮದ ಇತಿಹಾಸ ಮತ್ತು ಆಚರಣೆಯನ್ನು ಕುರಿತು ಕನ್ನಡದಲ್ಲಿ ಹಲವು ಕೃತಿಗಳನ್ನು ರಚಿಸಿದ್ದಾರೆ. ೧೮೯೦ರಲ್ಲಿ ಹಳೆಯ ಒಡಂಬಡಿಕೆ(ಓಲ್ಡ್ ಟೆಸ್ಟಮೆಂಟ್)ಯನ್ನು ಸರಳಗನ್ನಡದಲ್ಲಿ ಬರೆದು ಪ್ರಕಟಿಸಿದರು. ೧೯೦೮ರಲ್ಲಿ ಹೊಸ ಒಡಂಬಡಿಕೆಯನ್ನು ಆಧರಿಸಿ ಮೋಸಸ್‌ನ ಧರ್ಮಶಾಸ್ತ್ರದಲ್ಲಿ ಆದಿಕಾಂಡವೆಂಬ ಮೊದಲ ಭಾಗವನ್ನು, ೧೯೦೯ರಲ್ಲಿ ಮೋಸಸ್‌ನ ಧರ್ಮ

ಶಾಸ್ತ್ರದಲ್ಲಿ ಯಾತ್ರಾಕಾಂಡವೆಂಬ ದ್ವಿತೀಯ ಭಾಗವನ್ನು ಬರೆದು ಪ್ರಕಟಿಸಿದರು. ಹೊಸ ಒಡಂಬಡಿಕೆಯ ಆಧಾರದಿಂದ ರಚಿತವಾದ ಇದರಲ್ಲಿ ೧೦೭ ಪುಟಗಳಿವೆ. ಕನ್ನಡ ಬೈಬಲ್ ಕೀರ್ತನೆಗಳು ಎಂಬ ೭೪ ಪುಟಗಳ ಹೊತ್ತಿಗೆ ಮತ್ತು ಕನ್ನಡ ಬೈಬಲ್ ಬಗ್ಗೆ ಹಲವು ಲೇಖನಗಳನ್ನು ಬರೆದರು.

ಇಂಗ್ಲಿಷ್‌ನಲ್ಲಿ ಇವರು ಮೂರು ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ೧೯೧೫ರಲ್ಲಿ ಪ್ರಕಟಿಸಿದ 'ಎ ಹಿಸ್ಟರಿ ಆಫ್ ಕೆನರೀಸ್ ಲಿಟರೇಚರ್' ಎಂಬುದು ಕನ್ನಡದ ಮೊದಲ ಸಾಹಿತ್ಯ ಚರಿತ್ರೆಯಾಗಿದೆ. ಕನ್ನಡಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ಇದು ಮಹತ್ತ್ವದ ಕೃತಿಯಾಗಿದೆ. ಜೊತೆಗೆ ಕನ್ನಡಸಾಹಿತ್ಯವನ್ನು ಒಟ್ಟಾಗಿ ಗ್ರಹಿಸಿದ ಮೊದಲ ಪ್ರಯತ್ನವೆನ್ನಬಹುದು. ಈ ಕೃತಿಯಲ್ಲಿ ೧೨ ಅಧ್ಯಾಯಗಳಿದ್ದು, ಜೈನ, ವೀರಶೈವ, ವೈಷ್ಣವ, ಆಧುನಿಕ ಎಂಬ ನಾಲ್ಕು ವಿಭಾಗಗಳಲ್ಲಿ ಕನ್ನಡ ಸಾಹಿತ್ಯದ ಸ್ಥೂಲ ಪರಿಚಯವನ್ನು ಮಾಡಿಕೊಡಲಾಗಿದೆ. ಧರ್ಮ ಪ್ರಚಾರಕರಾಗಿ ಮತ್ತು ಶಿಕ್ಷಣಕ್ಷೇತ್ರದಲ್ಲಿ ಅಮೂಲ್ಯಸೇವೆ ಸಲ್ಲಿಸಿದ ತಮ್ಮ ತಂದೆಯವರ ಜೀವನ ಚರಿತ್ರೆಯನ್ನು ಬೆಂಜಮಿನ್ ರೈಸ್ 'ಫಿಫ್ಟಿ ಇಯರ್ಸ್ ಇನ್ ದಿ ಮಾಸ್ಟರ್ ಸರ್ವಿಸ್' ಎಂಬ ಹೆಸರಿನಲ್ಲಿ ರೆಲಿಜಿಯಸ್ ಟ್ರ್ಯಾಕ್ಟ್ ಸೊಸೈಟಿ ಪ್ರಕಟಿಸಿದೆ. ಮೂರನೆಯದಾದ 'ದಿ ಮಹಾಭಾರತ ಅನಲಿಸಿಸ್ ಅಂಡ್ ಇಂಡೆಕ್ಸ್' ಎಂಬ ಕೃತಿಯನ್ನು ೧೯೩೪ರಲ್ಲಿ ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರಕಟಿಸಿದೆ.

ಇವರ ಕೃತಿಗಳನ್ನು ಪ್ರಧಾನವಾಗಿ ಎರಡು ರೀತಿಯಲ್ಲಿ ವಿಭಾಗಿಸಬಹುದು. ಮೊದಲನೆಯದು ಧರ್ಮ ಪ್ರಚಾರಕರಾಗಿ ರಚಿಸಿದ ಕನ್ನಡ ಕೃತಿಗಳು, ಎರಡನೆಯದು ಇತರ ವಿಚಾರಗಳನ್ನು ಕುರಿತು ಇಂಗ್ಲಿಷ್ ಭಾಷೆಯಲ್ಲಿ ರಚಿಸಿದ ಕೃತಿಗಳು. ಕ್ರೈಸ್ತಧರ್ಮ ಪ್ರಚಾರದ ಭಾಗವಾಗಿ ಬೈಬಲನ್ನು ಮತ್ತು ಬೇರೆ ಧಾರ್ಮಿಕ ಕೃತಿಗಳನ್ನು ಭಾಷಾಂತರ ಮಾಡಿದರು.

ಕನ್ನಡಸಾಹಿತ್ಯದ ಇತಿಹಾಸದ ದೃಷ್ಟಿಯಿಂದ ರೈಸ್ ಅವರ 'ಹಿಸ್ಟರಿ ಆಫ್ ಕೆನರೀಸ್ ಲಿಟರೇಚರ್' ಅತ್ಯಂತ ಪ್ರಮುಖ ಕೃತಿ. ಈ ಕೃತಿಯ ರಚನೆಯ ಮೊದಲು ಕನ್ನಡಸಾಹಿತ್ಯವನ್ನು ಒಟ್ಟಾಗಿ ಗ್ರಹಿಸುವ ಪ್ರಯತ್ನ ಆಗಿರಲಿಲ್ಲ. ಇದರಲ್ಲಿ ಅನೇಕ ಕಾವ್ಯಭಾಗಗಳನ್ನು ಇಂಗ್ಲಿಷ್‌ಗೆ ಭಾಷಾಂತರಿಸಿದ್ದಾರೆ. ಸೋಮೇಶ್ವರ ಶತಕ, ಬಸವ

ಪುರಾಣ, ಸರ್ವಜ್ಞನ ವಚನಗಳು ಮೊದಲಾದವುಗಳಲ್ಲಿ ಕೆಲವು ಭಾಗಗಳನ್ನು ಅನುವಾದಿಸಲಾಗಿದೆ.

ಶ್ರವಣಬೆಳಗೊಳದ 'ಸುರಚಾಪಂಬೋಲೆ ' ಎಂಬ ಪ್ರಸಿದ್ಧ ಶಾಸನಕ್ಕೆ ಇ.ಪಿ. ರೈಸ್ ಅನುವಾದ ಹೀಗಿದೆ:

Swift fading as the rainbow's hue
My legs shall be the pillers, my body
Or lightning flash or morning dew,
To whom do pleasure wealth and fame
For many years remain the same?
Then why should I, whose thoughts aspire
To reach the highest good, desire
Here on the earth long days to spend. (p.22)

ಬಸವೇಶ್ವರನ ವಚನವನ್ನು ಇ.ಪಿ. ರೈಸ್ ಪರಿಚಯ ಮಾಡಿದ ವಿಧಾನ ಹೀಗಿದೆ:

Those who have means will not devote them to the building of a temple to god (Siva). Then I, though a poor man will build Thee one, O Lord. My legs shall be the pillars, my body the shrine, my head the golden finial. Hearken, O Kūḍalasaṅgama deva! The fixed temple of stone will come to an end; but this movable temple of the spirit will not perish. (p.57)

ಕನ್ನಡಸಾಹಿತ್ಯದ ವಿಮರ್ಶೆಯನ್ನು ಮಾಡುತ್ತ ಇವರು ನೀಡಿರುವ ಕೆಲವು ಅಭಿಪ್ರಾಯ ಗಳು ಗಮನಿಸತಕ್ಕಂತಿವೆ, ಈ ಪ್ರಾರಂಭಿಕ ಕೃತಿಯಲ್ಲಿ ಅನೇಕ ಅಂಶಗಳು ಅಪೂರ್ಣ ವಾಗಿವೆ. ಕೆಲವು ದೋಷಗಳು ಇವೆ. ಈ ಕೃತಿಯನ್ನು ಸಂಗಮನಾಥ ಜಿ.ಹಂಡಿ ಮತ್ತು ಪೌಲಿನಾ ಎಂ. ನಂದಗಾಂ ಅವರು ಕನ್ನಡ ಭಾಷೆಗೆ ಭಾಷಾಂತ ರಿಸಿದ್ದಾರೆ.

'ದಿ ಮಹಾಭಾರತ ಅನಾಲಿಸಿಸ್ ಅಂಡ್ ಇಂಡೆಕ್ಸ್' ಮಹಾಭಾರತದ ಅಧ್ಯಯನ ಭಾರತೀಯಸತ್ತ್ವ ಮತ್ತು ಪ್ರಾಚೀನ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳ ಬಯಸುವವರಿಗೆ ಅತ್ಯಗತ್ಯ ಕೃತಿಯಾಗಿದೆ. ಮಹಾಭಾರತ ತನ್ನ ಬೃಹತ್ ಮತ್ತು

ಮಹತ್ತುಗಳಿಂದ ಭಾರತೀಯರಿಗೆ ಪವಿತ್ರ ಕೃತಿಯಾಗಿದೆ. ವಿಶೇಷವೆಂದರೆ ಇ.ಪಿ. ರೈಸ್ ಈ ಕೃತಿಯನ್ನು ಪ್ರವೇಶಿಸಲು ಒಂದು ಭೂಪಟ ಮಾದರಿಯ ಕೈಪಿಡಿಯನ್ನು ರಚಿಸಿ, ಓದುಗರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಪ್ರೊ. ಜಾಕೋಬಿ ಜರ್ಮನ್ ಭಾಷೆಯಲ್ಲಿ ಇದೇ ಸ್ವರೂಪದ ಕೃತಿಯೊಂದನ್ನು ಬರೆದಿರುವ ತಿಳಿವಳಿಕೆ ನಮಗೆ ಮೊದಲು ಇರಲಿಲ್ಲವೆಂದು ರೈಸ್ ಅವರು ಹೇಳಿಕೊಂಡಿದ್ದಾರೆ. ಇವರು ವಿಷಯಾನುಕ್ರಮವಾಗಿ ಹೆಸರುಗಳು, ಕಲ್ಪಗಳು, ಯುಗಗಳು ಮುಂತಾದವುಗಳಿಗೆ ಸಮರ್ಪಕ ರೀತಿಯಲ್ಲಿ ವಿವರಣೆ ನೀಡಿದ್ದಾರೆ.

ರೈಸ್ ಅವರು ತಮಗೆ ಬೇರೆಬೇರೆ ಸಂದರ್ಭಗಳಲ್ಲಿ ದೊರೆತಿದ್ದ ಅನೇಕ ಅಮೂಲ್ಯ ವಸ್ತುಗಳನ್ನು ಬೆಂಗಳೂರಿನ ವಸ್ತುಸಂಗ್ರಹಾಲಯಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಎರಡು ಬೆಳ್ಳಿಯ ನಾಣ್ಯಗಳು, ಮೃತಪ್ರಾಣಿಯ ಶಿರಸ್ಸು, ಜಲಜೀವಿಗಳು ಮತ್ತು ಹೆಬ್ಬಾವಿನ ಮೊಟ್ಟೆಗಳನ್ನು ಕೊಡುಗೆಯಾಗಿ ನೀಡಿರುವುದು ಸರ್ಕಾರಿ ವಸ್ತು ಸಂಗ್ರಹಾಲಯದ ವಾರ್ಷಿಕ ವರದಿ (೧೮೯೬–೯೭) ಯಲ್ಲಿ ದಾಖಲಾಗಿದೆ.

ರೈಸ್ ಅವರ ಅಧ್ಯಯನಶೀಲತೆ, ಕನ್ನಡ ಸಾಹಿತ್ಯ ಪ್ರೇಮ, ಭಾಷಾಪ್ರೀತಿಗಳು ಅವರ ಕೃತಿಗಳಲ್ಲಿ ಎದ್ದು ಕಾಣುತ್ತವೆ. ತಾವು ರಚಿಸಿದ ಕನ್ನಡ ಸಾಹಿತ್ಯ ಚರಿತ್ರೆಯನ್ನು ಆರ್. ನರಸಿಂಹಾಚಾರ್ಯರಿಗೆ ಅರ್ಪಿಸಿದ್ದಾರೆ.

ರೈಸ್ ಅವರು ನಿಧನರಾದ ವಿಷಯ ತಿಳಿದ ಅನಂತರ ಅವರನ್ನು ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ತುಂಬಾ ಗೌರವಪೂರ್ವಕವಾಗಿ ಸ್ಮರಿಸಲಾಗಿದೆ. 'ಕನ್ನಡ–ಆಂಗ್ಲೇಯ ಮಹೋಪಕಾರಿಗಳಲ್ಲಿ ಪ್ರಮುಖರಾಗಿದ್ದ ಶ್ರೀಮಾನ್ ಇ.ಪಿ.ರೈಸ್ ಅವರು ಈಚೆಗೆ ಇಂಗ್ಲೆಂಡಿನಲ್ಲಿ ಕಾಲಾಧೀನರಾದರೆಂದು ಕೇಳಿ ವಿಷಾದಿಸುತ್ತೇವೆ. ಅಣ್ಣಂದಿರೂ (ಬಿ.ಎಲ್.ರೈಸ್) ತಮ್ಮಂದಿರೂ ಕನ್ನಡದ ಅಭಿಮಾನಿಗಳಾಗಿ ಕನ್ನಡ ಜನಪದ ಮತ್ತು ಕನ್ನಡ ಸಾಹಿತ್ಯದ ಗುಣವಿಶೇಷಗಳನ್ನು ಇಂಗ್ಲಿಷ್ ಪ್ರಪಂಚಕ್ಕೆ ತಿಳಿಸುವುದರಲ್ಲಿ ವಿಶೇಷ ಉಪಕಾರ ಮಾಡಿದ್ದಾರೆ (ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಸಂ.೨೧, ೧೯೩೬ ಜುಲೈ, ಪು.೨೫೦).

❐ ❐ ❐

ಕೆ.ಬಿ. ಪಾಠಕ್

(೧೮೫೦–೧೯೩೪)

ಅಕ್ಕಮಹಾದೇವಿ

ಕಾಶೀನಾಥ ಬಾಪೂಜಿ ಪಾಠಕ್ ಪ್ರಸಿದ್ಧ ಭಾಷಾವಿದ್ವಾಂಸರು, ಇತಿಹಾಸಕಾರರು. ಮೂಲತಃ ಸೊಲ್ಲಾಪುರದವರಾದ ಇವರ ಕುಟುಂಬ ಹುಬ್ಬಳ್ಳಿಗೆ ಬಂದು ನೆಲಸಿತು. ಪಾಠಕ್ ೧೩–೧೦–೧೯೫೦ರಂದು ಜನಿಸಿದರು. ಇವರ ತಂದೆ ಬಾಪುಶಾಸ್ತ್ರಿಗಳು ಹೆಸರಾಂತ ಘನಪಾಠಿಗಳಾಗಿದ್ದರು. ತಮ್ಮಂತೆ ಮಗನೂ ವೈದಿಕ ವಿದ್ಯೆಯನ್ನು ಕಲಿಕೆಯಬೇಕೆಂದು ಬಯಸಿದ್ದರು. ಆದರೆ ಪಾಠಕ್ ಇಂಗ್ಲಿಷ್ ವಿದ್ಯೆ ಕಲಿಯಲು ಬಯಸಿ ಬೆಳಗಾವಿ ಕೊಲ್ಲಾಪುರಗಳಲ್ಲಿ ಓದಿ ಬಿ.ಎ. ಪದವಿ ಗಳಿಸಿದರು.

೧೮೭೭ರಲ್ಲಿ ಬೆಳಗಾವಿಯ ಸರ್ಕಾರಿ ಹೈಸ್ಕೂಲಿನಲ್ಲಿ ಪ್ರಥಮ ಸಹಾಯ ಕರಾಗಿ, ಅಧ್ಯಾಪಕರಾಗಿ ಸೇವೆಗೆ ಸೇರಿದರು. ಆಗ ವಿಖ್ಯಾತ ವಿದ್ವತ್ ಪತ್ರಿಕೆಯಾಗಿದ್ದ ಇಂಡಿಯನ್ ಆ್ಯಂಟಿಕ್ವರಿ ಪಾಠಕ್ ಅವರ ಗಮನವನ್ನು ಸೆಳೆಯಿತು. ಇದರಿಂದಾಗಿ ಬರೆವಣಿಗೆಗೆ ಪ್ರೇರಣೆ ದೊರೆಯಿತು. ಅನಂತರ ೧೮೮೪ರಲ್ಲಿ ಮಿರಜದ ಸೀನಿಯರ್ ಚೀಫ್ ಅವರಿಗೆ ಟ್ಯೂಟರ್ ಆಗಿ ನೇಮಕಗೊಂಡು ಕೊಲ್ಲಾಪುರದಲ್ಲಿ ಕೆಲವು ವರ್ಷವಿದ್ದರು. ಮುಂದೆ ೧೮೮೯ರಲ್ಲಿ ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಪ್ರಾಚ್ಯ ಭಾಷೆಗಳ ಪ್ರೊಫೆಸರ್‌ರ ಸಹಾಯಕ ಹುದ್ದೆಗೆ ಆರ್.ಜಿ. ಭಂಡಾರ್ಕರ್ ಅವರ ಒತ್ತಾಯದ ಮೇರೆಗೆ ಸೇರಿಕೊಂಡರು. ಈ ವೇಳೆಯಲ್ಲಿ ಸಂಸ್ಕೃತ ಅಧ್ಯಯನದಲ್ಲಿ ಆಸಕ್ತಿ ಬೆಳೆಸಿಕೊಂಡರು. ೧೮೬೯ರ ತನಕ ಅನೇಕ ಸಂಶೋಧನ ಲೇಖನಗಳನ್ನು ನಾಡು–ನುಡಿಗೆ ಸಂಬಂಧಿಸಿದಂತೆ ನಿರಂತರವಾಗಿ ಬರೆಯತೊಡಗಿದರು.

ಪಾಠಕ್ ಅವರ ಬರೆವಣಿಗೆಯನ್ನು ಗುರುತಿಸಿ ಬಿ.ಎಲ್. ರೈಸ್ ಅವರು ತಮ್ಮ ಇಲಾಖೆಯ(ಪ್ರಾಕ್ತನಶಾಸ್ತ್ರ) ಸಹಾಯಕ ಹುದ್ದೆಗೆ ಕರೆಸಿಕೊಂಡರು. ಇಲ್ಲಿ ಎರಡು ವರ್ಷಗಳ ಕಾಲ ಕನ್ನಡಪರ ಕೆಲಸಗಳನ್ನು ಮಾಡಿದರು. ಮತ್ತೆ ಮುಂಬಯಿ ಸರ್ಕಾರದ ಸೇವೆಗೆ ಹಿಂತಿರುಗಿದರು. ಕಾರವಾರ, ಠಾಣಾ, ಕೊಲ್ಲಾಪುರಗಳಲ್ಲಿ ಮುಖ್ಯೋಪಾಧ್ಯಾಯರಾಗಿ ಕೆಲವು ಕಾಲ ಸೇವೆ ಸಲ್ಲಿಸಿದರು.

೧೯೦೧ರಲ್ಲಿ ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿ ನೇಮಕವಾದರು. ೧೯೦೮ರಲ್ಲಿ ವಯೋನಿವೃತ್ತಿಯಾದರು. ಇದೇ ವರ್ಷ ಮುಂಬೈ ವಿಶ್ವವಿದ್ಯಾಲಯ ಪಾಠಕ್ ಅವರನ್ನು ಭಗವಾನ್ ಇಂದ್ರಜೀ ಲೆಕ್ಚರರ್ ಎಂದು ನಿಯಮಿಸಿ ದತ್ತಿ ಉಪನ್ಯಾಸ ನೀಡಲು ಆಹ್ವಾನಿಸಿತು.

೧೯೨೫ರಲ್ಲಿ ಪಾಠಕ್ ಅವರನ್ನು ಪುಣೆಯ ಭಂಡಾರ್ಕರ್ ಪ್ರಾಚ್ಯ ಸಂಶೋಧನ ಸಂಸ್ಥೆಯ ಗೌರವ ಸದಸ್ಯರನ್ನಾಗಿ ನೇಮಕ ಮಾಡಲಾಯಿತು. ಜರ್ಮನಿಯ ಬಿಂಗನ್ ವಿಶ್ವವಿದ್ಯಾಲಯವು ಇದೇ ವರ್ಷ ಪಾಠಕ್ ಅವರಿಗೆ ಸಂಸ್ಕೃತ ಮತ್ತು ಜೈನ ಸಾಹಿತ್ಯದಲ್ಲಿ ಕೈಗೊಂಡ ಮೌಲಿಕ ಸೇವೆಗಾಗಿ ಗೌರವ ಡಾಕ್ಟೊರೇಟ್ ಪದವಿ ನೀಡಿತು. ೧೯೩೦ರಲ್ಲಿ ಪಾಠಕ್ ಅವರ ೮೦ನೇ ವರ್ಷದ ಕಾಣಿಕೆಯಾಗಿ ದೇಶ-ವಿದೇಶಗಳ ವಿದ್ವಾಂಸರ ಸಂಶೋಧನ ಲೇಖನಗಳನ್ನು ಒಳಗೊಂಡ ಅಭಿನಂದನ ಗ್ರಂಥವನ್ನು ಅರ್ಪಿಸಲು ಪ್ರಾಚ್ಯ ಸಂಶೋಧನ ಸಂಸ್ಥೆ ಸಿದ್ಧತೆ ಮಾಡಿಕೊಂಡಿತ್ತಾದರೂ ಅದು ತಡವಾಯಿತು. ಪಾಠಕ್ ಅವರು ೦೨ ಸೆಪ್ಟೆಂಬರ್ ೧೯೩೮ರಂದು ಹುಬ್ಬಳ್ಳಿಯಲ್ಲಿ ಮೃತರಾದರು. ಅಭಿನಂದನ ಗ್ರಂಥ ಅವರ ಮರಣಾನಂತರ ೧೯೩೪ ಅಕ್ಟೋಬರ್ ೧೫ರಂದು ಪ್ರಕಟವಾಯಿತು. ನಿವೃತ್ತಿಯ ಬಳಿಕವೂ ಪಾಠಕ್ ಅವರು ಸುಮಾರು ೩೦ ವರ್ಷಗಳ ಕಾಲ ಸಂಶೋಧನೆಯಲ್ಲಿ ಉತ್ಸಾಹದಿಂದ ತೊಡಗಿಸಿಕೊಂಡಿದ್ದರು.

ಜೆ.ಎಫ್.ಫ್ಲೀಟ್ ಅವರು ಬೆಳಗಾವಿಯಲ್ಲಿ ಕಲೆಕ್ಟರ್ ಆಗಿದ್ದುಕೊಂಡು ಇಂಡಿಯನ್ ಆಂಟಿಕ್ವರಿ ಪತ್ರಿಕೆಗೆ ಕನ್ನಡಕ್ಕೆ ಸಂಬಂಧಿಸಿದಂತೆ ಲೇಖನಗಳನ್ನು ಬರೆಯುತ್ತಿದ್ದರು. ಪಾಠಕ್ ಅವರು ಆ ಲೇಖನಗಳನ್ನು ಓದಿ ಕೆಲವು ಹಳಗನ್ನಡ ಪದಗಳ ತಪ್ಪುಗಳನ್ನು ಗುರುತಿಸಿ, ಸರಿಯಾದ ಅರ್ಥಗಳನ್ನು ಲೇಖನಗಳಲ್ಲಿ ಬರೆಯತೊಡಗಿದರು. ದೇಶೀ ವಿದ್ವಾಂಸರಲ್ಲಿ ಇಂತಹ ಪ್ರತಿಭಾವಂತರು, ಧೈರ್ಯಶಾಲಿಗಳು ಇರುವುದನ್ನು ಗುರುತಿಸಿದ ಫ್ಲೀಟ್ ಅವರು ಪಾಠಕ್ ಅವರನ್ನು ತಮ್ಮೊಡನೆ ಕೆಲಸ ಮಾಡಲು ಬಯಸಿದ್ದರು. ಕೆಲವು ದಿವಸ ಪಾಠಕ್ ಫ್ಲೀಟ್ ಜೊತೆಗೂಡಿ ಉತ್ತರ ಕರ್ನಾಟಕದ ಕೆಲವು ಜೈನಮಿತ್ರರ ನೆರವಿನಿಂದ ದಿಗಂಬರ ಜೈನ ಸಂಪ್ರದಾಯದ ಹಲವಾರು ಅಪ್ರಕಟಿತ ಹಸ್ತಪ್ರತಿಗಳ ಅವಲೋಕನವನ್ನು ಮಾಡಿದರು. ಇದರಿಂದಾಗಿ ಪಾಠಕ್ ಅವರಿಗೆ ಚಾರಿತ್ರಿಕ ವಿಚಾರಗಳತ್ತ ಮಾರ್ಗದರ್ಶನ ದೊರೆತಂತಾಯಿತು. ಇಂಡಿಯನ್ ಆಂಟಿಕ್ವರಿ, ರಾಯಲ್

ಏಷ್ಯಾಟಿಕ್ ಸೊಸೈಟಿಯ ಬೊಂಬಾಯಿ ಶಾಖೆಯ ಪತ್ರಿಕೆಗಳಲ್ಲಿ ಪಾಠಕರ ಕೆಲವು ಸಂಶೋಧನ ಲೇಖನಗಳು ಪ್ರಕಟವಾದುವು. ಇದನ್ನು ಗಮನಿಸಿದ ಫ್ಲೀಟ್ ಅವರು ಹೆಚ್ಚಿನ ಸಂಬಳ ಮತ್ತು ಬಡ್ತಿಯೊಂದಿಗೆ ತಮ್ಮ ಸಹಾಯಕರನ್ನಾಗಿ ನೇಮಿಸಿಕೊಳ್ಳಲು ಆಹ್ವಾನಿಸಿದಾಗ, ಪಾಠಕ್ ಅವರು ಅದನ್ನು ತಿರಸ್ಕರಿಸಿದರು. ಇದಕ್ಕೆ ಕಾರಣ ಅವರಿಗೆ ಜೈನಸಾಹಿತ್ಯದಲ್ಲಿ ಹೆಚ್ಚು ಆಸಕ್ತಿ ಇತ್ತು. ಈ ಅಧ್ಯಯನಕ್ಕೆ ವಿದ್ಯಾ ಇಲಾಖೆಯೇ ಯುಕ್ತವೆಂದು ಅವರು ಜೈನಸಾಹಿತ್ಯದ ಸಂಶೋಧನೆಯಲ್ಲಿ ನಿರತರಾದರು.

ಪಾಠಕ್ ಅವರು ಕೊಲ್ಲಾಪುರದಲ್ಲಿದ್ದಾಗ ಅಲ್ಲಿಯ ಜೈನಮಠದ ಸರಸ್ವತೀಭಂಡಾರದ ಉಪಯೋಗವನ್ನು ಪಡೆದು ಕೊಂಡಿದ್ದಲ್ಲದೆ ಡೆಕ್ಕನ್ ಕಾಲೇಜಿನ ಖ್ಯಾತ ವಿದ್ವಾಂಸರಾದ ಆರ್.ಬಿ. ಭಂಡಾರ್ಕರ್ ಅವರ ಪರಿಚಯವನ್ನು ಪಡೆದು, ಅವರ ಸಹಕಾರದಿಂದ ಅಲ್ಲಿಯ ಜೈನ ಗ್ರಂಥಗಳು ಮತ್ತು ಪಾರಿಭಾಷಿಕ ಶಬ್ದಗಳನ್ನು ಸರಿಯಾದ ರೀತಿಯಲ್ಲಿ ಗ್ರಹಿಸುವಲ್ಲಿ ಸಮರ್ಥರಾದರು. ಪಾಠಕ್‌ರು ಡೆಕ್ಕನ್ ಕಾಲೇಜಿಗೆ ಸೇರಿಕೊಂಡಾಗ ಅನೇಕ ಸಂಶೋಧನ ಲೇಖನಗಳನ್ನು ಬರೆದರು. ಮ್ಯಾಕ್ಸ್‌ಮುಲ್ಲರ್ ಅವರ ಅಧ್ಯಕ್ಷತೆಯಲ್ಲಿ ೧೮೮೩ರಲ್ಲಿ ಲಂಡನ್ನಿನಲ್ಲಿ ನಡೆದ ಒಂಬತ್ತನೇ ವಿಶ್ವ ಪ್ರಾಚ್ಯ ಸಮ್ಮೇಳನದಲ್ಲಿ ಪಾಠಕ್‌ರು ಮಂಡಿಸಿದ 'ದಿಗಂಬರ ಸಾಹಿತ್ಯದಲ್ಲಿ ಕುಮಾರಿಲನ ಸ್ಥಾನ' ಎಂಬ ಪ್ರಬಂಧವನ್ನು ಫ್ಲೀಟ್, ಲೀಮನ್ ಮುಂತಾದವರು ಮುಕ್ತಕಂಠದಿಂದ ಶ್ಲಾಘಿಸಿದರು. ಇವರು ಈ ಅವಧಿಯಲ್ಲಿ ಶಂಕರಾಚಾರ್ಯರ ಕಾಲವನ್ನು ಕುರಿತು ಬರೆದ ಲೇಖನ ವಿದ್ವಾಂಸರ ಗಮನ ಸೆಳೆಯಿತು.

ಪಾಠಕರು ಮೈಸೂರು ಸಂಸ್ಥಾನದ ಪ್ರಾಕ್ತನಶಾಸ್ತ್ರ ಇಲಾಖೆಗೆ ಸೇರಿದ ಮೇಲೆ ನಿರ್ದೇಶಕ ಬಿ.ಎಲ್.ರೈಸ್ ಕವಿರಾಜ ಮಾರ್ಗ ಕೃತಿಯ ಸಂಪಾದನೆಯ ಕೆಲಸವನ್ನು ಪಾಠಕರಿಗೆ ವಹಿಸಿದರು. ಪಾಠಕರು ಬಿ.ಎಲ್.ರೈಸ್ ಅವರ ಪ್ರೋತ್ಸಾಹದಿಂದ ಕನ್ನಡದ ಮೊದಲ ಲಭ್ಯಕೃತಿಯಾದ ಕವಿರಾಜಮಾರ್ಗವನ್ನು ಶಾಸ್ತ್ರೀಯವಾಗಿ ಸಂಪಾದಿಸಿದರು. ಈ ಕೃತಿಯ ಉಪೋದ್ಘಾತದಲ್ಲಿ ರಾಷ್ಟ್ರಕೂಟ ಮನೆತನದ ಇತಿಹಾಸ ವನ್ನು ವಿವರವಾದ ವಸ್ತು ವಿಮರ್ಶೆಯನ್ನು ನೀಡಲಾಗಿದೆ. ಇದು ೧೮೮೮ರಲ್ಲಿ ಬಿಬ್ಲಿಯೋಥೀಕಾ ಕರ್ನಾಟಿಕಾದ ಐದನೆಯ ಪ್ರಕಟನೆಯಾಗಿ ಹೊರಬಂದಿತು. ಮೂರು ಹಸ್ತಪ್ರತಿಗಳ ಸಹಾಯದಿಂದ ರೋಮನ್ ಲಿಪ್ಯಂತರದೊಂದಿಗೆ ಇಂಗ್ಲಿಷ್ ಭಾಷೆಯ ಉಪೋದ್ಘಾತದೊಂದಿಗೆ

ಕವಿರಾಜಮಾರ್ಗ ಮುದ್ರಿತವಾಯಿತು. ಈ ಕೃತಿ ಕನ್ನಡ ಸಾಹಿತ್ಯಕ್ಕೆ, ಕನ್ನಡ ಸಂಸ್ಕೃತಿಗೆ ಪಾಠಕ್ ಅವರು ಕೊಟ್ಟ ಅಮೋಘ ಕಾಣಿಕೆಯಾಗಿದೆ. ರಾಷ್ಟ್ರಕೂಟರ ಬಗೆಗಿನ ಐತಿಹಾಸಿಕ ವಿಚಾರಗಳು ಸಾಹಿತ್ಯ ಮತ್ತು ಚಾರಿತ್ರಿಕ ಪ್ರಮಾಣಗಳನ್ನಾಧರಿಸಿ ನೃಪತುಂಗನೇ ಗ್ರಂಥಕರ್ತನೆಂಬ ನಿರ್ಣಯ ಮಂಡನೆ, ಕವಿರಾಜಮಾರ್ಗಪೂರ್ವದ ಕವಿಗಳ ವಿಚಾರ, ಕನ್ನಡನಾಡಿನ ಸೀಮೆಗಳನ್ನು ಭೌಗೋಳಿಕವಾಗಿ ಗುರುತಿಸುವಿಕೆ, ಸಂಸ್ಕೃತ ಸಾಹಿತ್ಯ ಚರಿತ್ರೆಯ ಮೇಲೆ ಈ ಗ್ರಂಥ ಚೆಲ್ಲುವ ಬೆಳಕನ್ನು ವಿಶದಪಡಿಸಿದೆ ಎಂದು ಸದಾನಂದ ಪಾಟೀಲ ಅವರು ಮಹಾಮಾರ್ಗ ಕೃತಿಗೆ ಬರೆದ ಲೇಖನದಲ್ಲಿ ತಿಳಿಸಿದ್ದಾರಾದರೂ ಕವಿರಾಜಮಾರ್ಗ ಬರೆದವರು ಶ್ರೀವಿಜಯನೆಂದು ಮುಂದಿನ ವಿದ್ವಾಂಸರು ನಿರ್ಧರಿಸಿದ್ದನ್ನು ಗಮನಿಸಬಹುದು. ತತ್ಕಾಲೀನ ಧಾರ್ಮಿಕ ಸ್ಥಿತಿಗತಿ, ನಿರೂಪಣೆ, ಆಕರಗಳು, ಲಭ್ಯ ಸಾಮಗ್ರಿಯೊಂದಿಗೆ ಅವುಗಳ ತುಲನೆ, ಕೊನೆಯದಾಗಿ ಸಂಪಾದನ ಸಾಮಗ್ರಿಯನ್ನು ಈ ಪ್ರಕಟನೆ ಒಳಗೊಂಡಿದೆ. ಈ ಕೃತಿಯ ಸಂಪಾದನೆಯಲ್ಲಿ ಬಿ. ಶ್ರೀನಿವಾಸ ಅಯ್ಯಂಗಾರರು ನೆರವು ನೀಡಿರುವುದನ್ನು ಸ್ಮರಿಸಿದ್ದಾರೆ.

ಬಿ.ಎಲ್.ರೈಸ್ ಅವರು ೧೮೯೮ರಲ್ಲಿ ಸಂಪಾದಿಸಿದ ಪಂಪನ 'ವಿಕ್ರಮಾರ್ಜುನ ವಿಜಯ'ದ ಪರಿಷ್ಕರಣಕ್ಕೆ ಪಾಠಕರು ಆಶ್ವಾಸಾನುಗುಣವಾಗಿ ಕಥಾ ಸಂಗ್ರಹವನ್ನು ಇಂಗ್ಲಿಷ್‌ನಲ್ಲಿ ಬರೆದರು. ಪಾಠಕ್ ಅವರಿಗೆ ಹಳಗನ್ನಡ ಭಾಷಾಜ್ಞಾನದ ಮೇಲೆ ಇದ್ದ ಪ್ರಭುತ್ವವನ್ನು ಇದು ತೋರಿಸುತ್ತದೆ. ಇವರು ಕರ್ನಾಟಕದ ಇತಿಹಾಸಕ್ಕೆ ಸಂಬಂಧಿಸಿದ ಸಂಶೋಧನೆಯನ್ನು(೧೮೯೮–೧೯೦೮) ಮಾಡಿದ್ದಾರೆ. 'ಮುಂಬಯಿ ಆಧಿಪತ್ಯದ ಕನ್ನಡ ಜಿಲ್ಲೆಗಳ ಶಾಸನಗಳು' ಎಂಬ ವಿಷಯವನ್ನು ಮುಂಬಯಿ ವಿಶ್ವವಿದ್ಯಾಲಯದಲ್ಲಿ ನೀಡಿದ ಉಪನ್ಯಾಸಕ್ಕೆ ಆಯ್ದುಕೊಂಡಿದ್ದರು.

ಭಂಡಾರ್ಕರ್ ಪ್ರಾಚ್ಯಸಂಶೋಧನಸಂಸ್ಥೆಯ ಪತ್ರಿಕೆ, ಇಂಡಿಯನ್ ಆಂಟಿಕ್ವರಿ, ಎಪಿಗ್ರಾಫಿಯ ಇಂಡಿಕಾ, ರಾಯಲ್ ಏಷಿಯಾಟಿಕ್ ಸೊಸೈಟಿಯ ಮುಂಬೈ ಶಾಖಾ ಪತ್ರಿಕೆಗಳಲ್ಲಿ ಸುಮಾರು ೬೫ ಸಂಶೋಧನ ಲೇಖನಗಳನ್ನು ಪ್ರಕಟಿಸಿದ್ದಾರೆ. ೧೮೯೪ರಲ್ಲಿ ಪಾಠಕ್‌ರು ಸಿದ್ಧಪಡಿಸಿದ 'The Meghaduta of Kalidasa as embodied in the Parsvabyudaya of Jinasena' ಎಂಬ ಗ್ರಂಥವು ೧೯೦೬ರಲ್ಲಿ ಪುನರ್ ಮುದ್ರಣ ಕಂಡಿದೆ.

ಜೈನಶಾಸ್ತ್ರಕ್ಕೆ ಅಪಾರ ಕೊಡುಗೆ ನೀಡಿರುವ ಪಾಠಕರು ಭಾಷೆ, ವ್ಯಾಕರಣ, ಗ್ರಂಥಸಂಪಾದನೆ, ಶಾಸನ ಮುಂತಾದ ಕ್ಷೇತ್ರಗಳಲ್ಲಿ ದುಡಿದಿದ್ದಾರೆ. ಕರ್ನಾಟಕ ಇತಿಹಾಸಕ್ಕೆ ಸಂಬಂಧಿಸಿದ ಕದಂಬ, ಗಂಗ, ಚಾಲುಕ್ಯ, ರಾಷ್ಟ್ರಕೂಟ, ಯಾದವ, ಶಿಲಾಹಾರ ಮನೆತನಗಳಿಗೆ ಸೇರಿದ ಅನೇಕ ಶಾಸನಗಳನ್ನು ಪ್ರಕಟಿಸಿದ್ದಾರೆ. ಹೊಸದಾಗಿ ಸುಮಾರು ೨೦ ಶಾಸನಗಳನ್ನು ಬೆಳಕಿಗೆ ತಂದಿದ್ದಾರೆ. ಸಿದ್ದಾಪುರ, ಹದಲಿ, ತೊರೆಗಲ್ಲು, ತೇರದಾಳ ಮುಂತಾದ ಸ್ಥಳಕ್ಕೆ ಸೇರಿದ ಶಾಸನಗಳು ಅದರಲ್ಲಿ ಸೇರಿವೆ.

ಇಂಡಿಯನ್ ಆ್ಯಂಟಿಕ್ವರಿ ಪತ್ರಿಕೆಗೆ(ಸಂ.೧೩, ಪು.೯೬) ತೊರೆಗಲ್ಲಿನ ಕನ್ನಡ ಶಾಸನ ಕುರಿತು ಬರೆಯುವಾಗ 'ಪಂಚಮಹಾಶಬ್ದ' ಎಂಬ ಪದದ ಅರ್ಥ ವಿವೇಚನೆಗೆ ಪೋಷಕವಾಗಿ ಹಳಗನ್ನಡ ಗದ್ಯಗ್ರಂಥ ವಡ್ಡಾರಾಧನೆಯಿಂದ ಗದ್ಯ ಭಾಗವೊಂದನ್ನು ಉದ್ಧರಿಸಿದ್ದು ಆ ಗ್ರಂಥಸಂಪಾದನೆಯ ಇತಿಹಾಸದ ಒಂದು ವಿಶೇಷವೂ ಗಣ್ಯವೂ ಆದ ಉಲ್ಲೇಖವೆನ್ನಲಾಗಿದೆ. ಅನಂತರ ಫ್ಲೀಟ್ ಮತು ಆರ್. ನರಸಿಂಹಾಚಾರ್ ಆ ಗ್ರಂಥದ ಬಗ್ಗೆ ಸೂಚನೆ ನೀಡಿದ್ದಾರೆ.

ಇದೇ ರೀತಿ ಪಾಠಕರು 'ಪಾಳಿದ್ವಜ'ದ ಸ್ವರೂಪವನ್ನು ವಿವರಿಸಿದ್ದಾರಲ್ಲದೆ, ಪೂಜ್ಯಪಾದ, ಸಮಂತಭದ್ರ, ಅಕಲಂಕದೇವ ಮೊದಲಾದ ಆಚಾರ್ಯರ ಕುರಿತು ಚರ್ಚಿಸಿದ್ದಾರೆ.

ಪಾಠಕರ ಬರೆಹವನ್ನು ಕುರಿತು ಟಿ.ವಿ.ವೆಂಕಟಾಚಲಶಾಸ್ತ್ರಿಯವರು "ಪಾಠಕರು ಬರೆದಿರುವ ಸಂಶೋಧನ ಲೇಖನಗಳು ಈಗಿನ ಗಣನೆಯಂತೆ ಮೇಲ್ನೋಟಕ್ಕೆ ಬಹಳವೇನೂ ಅಲ್ಲವೆಂದು ತೋರಬಹುದು. ಆದರೆ ಅವು ತಾವೇ ಗುರುತಿಸಿದ ಶಾಸನಗಳ ಹಾಗೂ ಹಸ್ತಪ್ರತಿಗಳ ಅಭ್ಯಾಸದಿಂದ ಸಾಧ್ಯವಾದ ಪರಿಶ್ರಮಪೂರ್ಣ ರಚನೆಗಳು ಎನ್ನುವುದನ್ನು ಮರೆಯುವಂತಿಲ್ಲ. ಅವರ ಬರೆವಣಿಗೆಗಳಲ್ಲಿ ಕಾಣುವ ಒಂದು ದೊಡ್ಡ ಗುಣವೆಂದರೆ, ಅವರು ಯಾವುದೇ ವಿವೇಚನೆಯಿಲ್ಲದೆ ನಿರ್ಣಯಗಳನ್ನು ಊಹೆ, ಅನುಮಾನಗಳಿಂದ ಕೈಗೊಳ್ಳದೆ ಶಾಸನಗಳು ಹಾಗೂ ಸಾಹಿತ್ಯಗ್ರಂಥಗಳ ಉದ್ಧೃತಿಗಳ ಪ್ರಬಲವಾದ ಸಾಕ್ಷ್ಯಾಧಾರ ಗಳನ್ನು ಅವಲಂಬಿಸಿ ಕೈಗೊಳ್ಳುತ್ತಿದ್ದರು ಎನ್ನುವುದೇ ಆಗಿದೆ" ಎಂದಿದ್ದಾರೆ (ಮಾರ್ಗದರ್ಶಕ ಮಹನೀಯರು, ಪು.೩೩).

ಸೋಸಲೆ ಅಯ್ಯಾಶಾಸ್ತ್ರಿ

(೧೮೫೫-೧೯೩೫)

ಗೀತಾ ನಾವಲ್

ಸೋಸಲೆ ಅಯ್ಯಾಶಾಸ್ತ್ರಿಗಳು ಮೈಸೂರು ಸಂಸ್ಥಾನವು ರಾಜಾಡಳಿತಕ್ಕೆ ಒಳಪಟ್ಟಿದ್ದ ಕಾಲಕ್ಕೆ ಮೈಸೂರು ಜನತೆಗೆ ಚಿರಪರಿಚಿತರು. ಸಾಹಿತ್ಯ, ಸಂಗೀತ, ಚಿತ್ರಕಲೆ, ವ್ಯಾಕರಣ, ತರ್ಕಶಾಸ್ತ್ರ, ಕಾವ್ಯಮೀಮಾಂಸೆಗಳನ್ನು ಕುರಿತಂತೆ ದಿನಬೆಳಗೂ ಸಂವಾದಗಳಿಂದ ತುಂಬಿ ಮೈಸೂರು ಸಾಂಸ್ಕೃತಿಕ ರಾಜಧಾನಿ ಎನಿಸಲು ಕಾರಣರಾದ ವಿದ್ವಾಂಸರುಗಳಲ್ಲಿ ಅಯ್ಯಾಶಾಸ್ತ್ರಿಗಳ ಪಾಲು ಹಿರಿದಾದದ್ದು. ಇವರು ಮೈಸೂರಿನ ತಿರುಮಕೂಡಲು ನರಸೀಪುರದ ಸೋಸಲೆ ಗ್ರಾಮದಲ್ಲಿ ಮಾರ್ಚ್ ೨೦, ೧೮೫೫ ರಂದು ಜನಿಸಿದರು. ತಂದೆ ವೇದಬ್ರಹ್ಮ ಗರಳಪುರಿಶಾಸ್ತ್ರಿ ಮತ್ತು ತಾಯಿ ಶ್ರೀಮತಿ ಸುಬ್ಬಮ್ಮನವರು. ದೋರಸಮುದ್ರದಿಂದ ಆನೆಗೊಂದಿ ಸಂಸ್ಥಾನಕ್ಕೆ ಬಂದು ಅಲ್ಲಿಯ ರಾಜಾಡಳಿತದಲ್ಲಿ ಮಂತ್ರಿಗಳಾಗಿದ್ದ ತಮ್ಮಣ್ಣಶಾಸ್ತ್ರಿಗಳ ವಂಶಾವಳಿಯಲ್ಲಿ ಬಂದ ಅಯ್ಯಾಶಾಸ್ತ್ರಿಗಳು ಸಾಮವೇದಿಗಳು. ಇವರ ತಂದೆ ಮೈಸೂರು ಸಂಸ್ಥಾನದ ಅರಸರಾಗಿದ್ದ ಮೂರನೇ ಕೃಷ್ಣರಾಜ ಒಡೆಯರ್ ಅವರ ಆಸ್ಥಾನದಲ್ಲಿ ಪ್ರಕಾಂಡ ಪಂಡಿತರೆಂದು ಖ್ಯಾತನಾಮರಾಗಿದ್ದರು. ಹುಟ್ಟು ಹೆಸರು ವೆಂಕಟಸುಬ್ಬಶರ್ಮ ಎಂಬುದಾದರೂ ತಂದೆಯವರು ಪ್ರೀತಿಯಿಂದ ಕರೆಯುತ್ತಿದ್ದ 'ಅಯ್ಯಾ' ಎಂಬ ಹೆಸರೇ ಜನಪ್ರಿಯವಾಯಿತು.

ಅಯ್ಯಾಶಾಸ್ತ್ರಿಗಳು ತಮ್ಮ ೬-೭ ನೇ ವಯಸ್ಸಿನವರೆಗೂ ಸೋಸಲೆಯಲ್ಲಿ ಇದ್ದರು. ತದನಂತರ ಗರಳಪುರಿಶಾಸ್ತ್ರಿಯವರು ಮೈಸೂರು ಅರಮನೆಯ ಸಂಪರ್ಕಕ್ಕೆ ಬಂದು ಮೈಸೂರಿನಲ್ಲಿ ನೆಲಸಿದ ಕಾರಣ, ಮೈಸೂರು ನಿವಾಸಿ

ಯಾದರು. ಅವರ ಬಾಲ್ಯ ಶಿಕ್ಷಣ ಮನೆಯಲ್ಲಿಯೇ ತಂದೆಯವರಲ್ಲಿ ಆಯಿತು. ಉಪನಯನಾನಂತರ ವೇದಬ್ರಹ್ಮ ಮ.ಗು. ಶ್ರೌತ್ರಿಯವರಲ್ಲಿ ಸಾಮವೇದಾ ಭ್ಯಾಸವಾಯಿತು. ಆ ಸಮಯದಲ್ಲಿ ಗರಳಪುರಿಯವರ ಮನೆ ಸಾಹಿತ್ಯ, ಅಲಂಕಾರಶಾಸ್ತ್ರ, ಕಾವ್ಯಾಭ್ಯಾಸಗಳ ಸಣ್ಣ ಶಾಲೆಯಂತಿತ್ತು. ಸುಮಾರು ೨೦ ರಿಂದ ೩೦ ವಿದ್ಯಾರ್ಥಿಗಳು ಗರಳಪುರಿ ಯವರಲ್ಲಿ ಕಲಿಯುತ್ತಿದ್ದರು. ಅವರ ಪಟ್ಟಶಿಷ್ಯ ಪೆರಿಯಸ್ವಾಮಿ ತಿರುಮಲಾಚಾರ್ಯರೇ ಗರಳಪುರಿಯವರ ಅನಂತರ ಅಯ್ಯಾಶಾಸ್ತ್ರಿಗಳಿಗೆ ಗುರುವಾದರು. ಅವರ ಮಾರ್ಗದರ್ಶನದಲ್ಲಿ ಅಯ್ಯಾಶಾಸ್ತ್ರಿಗಳು ಕಾವ್ಯ, ಅಲಂಕಾರಶಾಸ್ತ್ರ, ವ್ಯಾಕರಣ ಮತ್ತು ತರ್ಕಶಾಸ್ತ್ರಗಳನ್ನು ಕಲಿತರು. ಕೆಲಕಾಲ ಅವರು ಹೆಚ್ಚಿನ ಓದಿಗಾಗಿ ಕುಂಭಕೋಣಂಗೆ ತೆರಳಿ ಅಲ್ಲಿ ಪಂಡಿತ ಶೇಷಾಚಾರ್ಯರಲ್ಲೂ ಕಲಿತರು. ಬಾಲ್ಯದಿಂದಲೂ ಅವರಿಗೆ ತಮ್ಮ ತಂದೆ ಹಾಗೂ ಗುರು ಪೆರಿಯಸ್ವಾಮಿ ತಿರುಮಲಾಚಾರ್ಯರಂತೆ ಕಾವ್ಯರಚನಾ ಕೌಶಲ ಸಿದ್ಧಿಸಿತ್ತು. ಆ ಮಧ್ಯೆ ಅವರು ಸಂಗೀತದಲ್ಲೂ ಆಸಕ್ತರಾಗಿ ಕಲಿತರಲ್ಲದೆ, ಚಿತ್ರವನ್ನು ರಬ್ಬರ್ ಅಥವಾ ಫ್ಲೆಕ್ಸಿಗ್ಲಾಸ್ ಮಾಧ್ಯಮವನ್ನು ಬಳಸಿ ರಚಿಸಿದ ಬಳಿಕ ಅದನ್ನು ಕಾಗದ ಅಥವಾ ಬಟ್ಟೆ ಮುಂತಾದವುಗಳ ಮೇಲೆ ವರ್ಗಾಯಿಸುವಂತಹ ಅಪೂರ್ವ ಗ್ರಾಫಿಕ್ ಕಲೆಯಲ್ಲೂ ಪರಿಣತಿ ಸಾಧಿಸಿದರು. ತಮ್ಮ ೧೪ನೇ ವಯಸ್ಸಿನಲ್ಲಿ ಚಾಮರಾಜನಗರದ ಮಹಾಪಂಡಿತ ಶ್ರೀಕಂಠಶಾಸ್ತ್ರಿಯವರ ಮಗಳನ್ನು ವಿವಾಹವಾದರು.

ಸರಿಸುಮಾರು ಇದೇ ಕಾಲಕ್ಕೆ, ಆಗ ಮೈಸೂರಿನ ಪ್ರಸಿದ್ಧ 'ಹೂವಿನ ಬೀದಿ'ಯಲ್ಲಿ ವಾಸವಿದ್ದ ಅಳಿಯ ಲಿಂಗರಾಜ ಅರಸು ಅವರ ಸಂಪರ್ಕದಿಂದ ಪ್ರಭಾವಿತರಾಗಿ ಯಕ್ಷಗಾನ ಹಾಗೂ ನಾಟಕಗಳತ್ತ ಆಸಕ್ತರಾದುದರಿಂದಲೂ ಗರಳ ಪುರಿಯವರ ಕಾವ್ಯಸಿದ್ಧಿಯ ಪ್ರಭಾವದಿಂದಲೂ ಕಾವ್ಯಮೀಮಾಂಸೆಯನ್ನೂ ನಾಟಕಗಳನ್ನೂ ಹೆಚ್ಚು ಹೆಚ್ಚು ಓದಿಕೊಂಡರು. ಅಳಿಯ ಲಿಂಗರಾಜರಂತೆಯೇ ಅಂದು ನಾಟಕಗಳಲ್ಲಿ ಪ್ರಸಿದ್ಧರಾಗಿದ್ದ ಬಸವಪ್ಪಶಾಸ್ತ್ರಿಗಳ ಪ್ರಭಾವಕ್ಕೆ ಸಿಲುಕಿ ಕನ್ನಡದಲ್ಲಿ ಕಾವ್ಯಪ್ರಯೋಗ ಮಾಡಲಾರಂಭಿಸಿದರು. ಸಂಸ್ಕೃತ ಭಾಷೆಯಲ್ಲಿ ಪರಿಣತಿ ಹಾಗೂ ಸಾಮವೇದಾಭ್ಯಾಸಗಳೆಲ್ಲದರ ಬಲದಿಂದಲೂ ಅಯ್ಯಾಶಾಸ್ತ್ರಿಗಳು ಮೊತ್ತ ಮೊದಲನೆ ಯದಾಗಿ, ೧೪೮೧ರಲ್ಲಿ ಚಾಮರಾಜ ಒಡೆಯರ್ ಅವರ ಪಟ್ಟಾಭಿಷೇಕ ಸಂದರ್ಭ ವನ್ನು ಕುರಿತಂತೆ ಚಂಪೂಕಾವ್ಯವೊಂದನ್ನು ರಚಿಸಿದರು. ಸಂಸ್ಕೃತ ಭಾಷೆಯ 'ಚಾಮರಾಜೇಂದ್ರ ಪಟ್ಟಾಭಿಷೇಕಮ್' ಎಂಬ ಈ ಕೃತಿಯು ಅಳಿಯ

ಲಿಂಗರಾಜರ ಸಮ್ಮುಖದಲ್ಲಿ ತಿದ್ದುಪಡಿಯಾಗಿ ವಾಚನಕ್ಕೆ ಸಿದ್ಧವಾಯಿತೆನ್ನಲಾಗಿದೆ. ಇದೇ ಕಾಲಕ್ಕೆ ಪೆರಿಯಸ್ವಾಮಿ ತಿರುಮಲಾಚಾರ್ಯರು ಮೈಸೂರಿನ ಹಲವಾರು ಪ್ರತಿಷ್ಠಿತರೊಂದಿಗೂ ವಿದ್ವಾಂಸರೊಂದಿಗೂ ಸಮಾಲೋಚಿಸಿ ಸದ್ವಿದ್ಯಾಪಾಠ ಶಾಲೆಯನ್ನು ಪ್ರಾರಂಭಿಸಿದರು. ಅಲ್ಲಿಯಷ್ಟೇ ಅಲ್ಲದೆ ಅಯ್ಯಾಶಾಸ್ತ್ರಿಗಳು ಭಾಷೋಜ್ಜೀವಿನಿ ಶಾಲೆಯಲ್ಲೂ ಹಲವಾರು ವರ್ಷಗಳ ಕಾಲ ಸಂಸ್ಕೃತ ಹಾಗೂ ಕನ್ನಡ ಭಾಷಾ ಬೋಧಕರಾಗಿ ಹೆಸರು ಮಾಡಿದರು. ಜೊತೆಜೊತೆಗೆ (ಸು. ೧೮೮೭–೮೮) ಚಾಮರಾಜ ಒಡೆಯರ ಆದೇಶದ ಪ್ರಕಾರ ಮೈಸೂರಿನ ಅರಮನೆಯ ಆಡಳಿತಕ್ಕೆ ಒಳಪಟ್ಟಿದ್ದ ಜಗನ್ಮೋಹನ ಮುದ್ರಾಕ್ಷರ ಶಾಲೆಯಲ್ಲಿ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳ ಪರಿಶೋಧನ ಕಾರ್ಯಕ್ಕೂ ನೇಮಕಗೊಂಡರು. ಆ ಸಂದರ್ಭದಲ್ಲಿ ಕರ್ಣಾಟಕ ಶಬ್ದಾನುಶಾಸನಂ, ಕರ್ಣಾಟಕ ಕಾದಂಬರಿ, ನಾಗರಸನ ಕರ್ಣಾಟಕ ಭಗವದ್ಗೀತೆ ಮತ್ತು ಕರ್ಣಾಟಕ ವಚನಭಾಗವತ ಮುಂತಾದವುಗಳನ್ನು ಪರಿಷ್ಕರಿಸಿ ಸಂಪಾದಿಸಿದರು.

ಈ ಎಲ್ಲ ಕಾರ್ಯಬಾಹುಳ್ಯದೊಂದಿಗೇ ಮೇಲಿಂದ ಮೇಲೆ ಅವರ ಕನ್ನಡ ಕಾವ್ಯಗಳು ಹೊರಬಂದುವು. ಮೈಸೂರು ಮಹಾರಾಜ ಚರಿತಂ ಎಂಬ ಚಂಪೂಕಾವ್ಯ, ಶೇಷರಾಮಾಯಣಂ ಎಂಬ ವಾರ್ಧಕ ಷಟ್ಪದಿ ಕಾವ್ಯ, ದಮಯಂತೀ ಚರಿತ್ರೆ, ಯಕ್ಷಪ್ರಶ್ನೆ, ರಾಜಭಕ್ತಿಲಹರಿ ಮತ್ತಿತರ ಷಟ್ಪದಿ ಕಾವ್ಯಗಳು ಹೊರಬಂದುವು. ಗರಳಪುರಿಶಾಸ್ತ್ರಿಯವರ ನಿಧನಾನಂತರ (೨೬–೩–೧೮೭೭) ಅರಮನೆಯ ರಾಜಗುರು ಗಳಾಗಿ ಅಧಿಕಾರಸ್ಥರಾಗಿದ್ದ ಕಾರಣ ಅರಮನೆಯ ಒಳಾಡಳಿತಕ್ಕೆ ಸಂಬಂಧಿಸಿ ದಂತೆಯೂ ಶಾಸ್ತ್ರಿಗಳನ್ನು ಆಪ್ತವಲಯದಲ್ಲಿ ಗುರುತಿಸಿಕೊಳ್ಳಲಾಯಿತು. ಚಾಮರಾಜ ಒಡೆಯರ್ ಅವರು ಶಾಸ್ತ್ರಿಯವರ ಗುಣ, ಪಾಂಡಿತ್ಯ, ಸನ್ನಡತೆಗಳಿಂದ ಆಕರ್ಷಿತರಾಗಿ ಅವರನ್ನು ರಾಜಕುಮಾರಿಯರಿಗೆ ಉಪಾಧ್ಯಾಯರಾಗಿ ನೇಮಿಸಿದರು. ಅಯ್ಯಾ ಶಾಸ್ತ್ರಿಗಳು ಅವರಿಗಾಗಿ ಕವಿತೆಗಳನ್ನೂ ಹಾಡುಗಳನ್ನೂ ರಚಿಸಿ ಕಲಿಸು ತ್ತಿದ್ದರು. ಅಂತಹದ್ದೊಂದು ಸಮಯದಲ್ಲಿ ಅಯ್ಯಾಶಾಸ್ತ್ರಿಗಳ ಮೇಲೆ ಮಹಾರಾಜ ರಿಗಿದ್ದ ಮೆಚ್ಚುಗೆಯು ಗೌರವಪೂರ್ವಕವಾಗಿ ಬದಲಾಗುವುದಕ್ಕೆ ಒಂದು ಸಂದರ್ಭ ಕೂಡಿಬಂತು.

ಭಾರತದ ಪೂರ್ವ ಸಮಾಜದಲ್ಲಿಯ ರಾಜಾಸ್ಥಾನಗಳಲ್ಲಿ ಪಂಡಿತರು, ಭಾಷಾಶಾಸ್ತ್ರಕೋವಿದರು, ಸಂಗೀತಗಾರರು ಮೊದಲಾದವರಿಗೆ ಭಾರತದ ಇತರ

ಭಾಗಗಳಿಂದ ಆಗಮಿಸುತ್ತಿದ್ದ ವಿವಿಧ ಕ್ಷೇತ್ರದ ಪಂಡಿತ ಮಾನ್ಯರೊಂದಿಗೆ ಸ್ಪರ್ಧೆಗಳು, ಸವಾಲುಗಳು ಎದುರಾಗುವ ಸಂದರ್ಭಗಳಿರುತ್ತಿದ್ದುವು. ಇದು ಅಂದಂದಿನ ರಾಜರ ಪ್ರತಿಷ್ಠೆ ಗೌರವಗಳಿಗೆ ಹಾಗೂ ಸಾಂಸ್ಕೃತಿಕ ಹೆಗ್ಗಳಿಕೆಗೆ ನಿಕಷದಂತೆಯೂ ಇರುತ್ತಿತ್ತು. ಇಂತಹದೊಂದು ಸಂದರ್ಭ ಎದುರಾದಾಗ ಅಯ್ಯಾಶಾಸ್ತ್ರಿಗಳು ಉತ್ತರಭಾರತದ ಜ್ಞಾನಸುಂದರಿ ಎಂಬ ವಿದುಷಿಯನ್ನು ತಮ್ಮ ಕವಿತಾಸಾಮರ್ಥ್ಯದಿಂದ ಸೋಲಿಸಿ ರಾಜರಿಂದಲೂ ಪಂಡಿತಮಾನ್ಯರಿಂದಲೂ ಶಹಬ್ಬಾಸ್‌ಗಿರಿಗೆ ಪಾತ್ರರಾಗಿ 'ಮಹಾವಿದ್ವಾನ್'(೧೯೦೫) ಎಂಬ ಬಿರುದನ್ನೂ ಹಾಗೂ ಕೆಲಕಾಲದ ಅನಂತರ (೧೯೧೨) 'ಕವಿತಿಲಕ' ಎಂಬ ಬಿರುದನ್ನೂ ಮುಡಿಗೇರಿಸಿಕೊಂಡರು.

ಅಯ್ಯಾಶಾಸ್ತ್ರಿಗಳಿಗೆ ಭಾಷಾಪ್ರೌಢಿಮೆಯೂ ನಾಟಕರಚನೆಗಳತ್ತ ಇದ್ದ ಒಲವೂ ಪ್ರಭುಗಳಿಗೂ ಇದ್ದ ಕಾರಣ, ಚಾಮರಾಜ ಒಡೆಯರ್ ಅವರು ತಮ್ಮೊಂದಿಗೆ ಅಯ್ಯಾಶಾಸ್ತ್ರಿಗಳನ್ನು ಬೊಂಬಾಯಿಗೆ ಕರೆದೊಯ್ದು ಮರಾಠಿ ಹಾಗೂ ಪಾರ್ಸಿ ನಾಟಕಗಳನ್ನು ಅವರೊಂದಿಗೆ ವೀಕ್ಷಿಸುತ್ತ, ಚರ್ಚಿಸುತ್ತ ಇದ್ದರು. ಇದರಿಂದ ಶಾಸ್ತ್ರಿಗಳಿಗೆ ನಾಟಕಗಳ ವಿವಿಧ ವಸ್ತು, ರೂಪ, ರಚನಾ ವೈಶಿಷ್ಟ್ಯಗಳಲ್ಲಿ ಇದ್ದ ಆಸಕ್ತಿ ದುಪ್ಪಟ್ಟಾಯಿತು. ಜೊತೆಜೊತೆಗೆ ಮದರಾಸು, ಬೊಂಬಾಯಿ, ಕಲ್ಕತ್ತಾ, ಕಾಶಿ ಹಾಗೂ ದಿಲ್ಲಿ ಮೊದಲಾದ ಪ್ರದೇಶಗಳಿಗೆ ಪ್ರಭುಗಳೊಂದಿಗೆ ತೆರಳಿ ಅಲ್ಲಿಯ ಪಂಡಿತರು, ಶಿಕ್ಷಣವೇತ್ತರು ಹಾಗೂ ಇನ್ನಿತರ ಜ್ಞಾನದಾಹಿ ಸಾಮಾಜಿಕ ಪ್ರಮುಖರೊಂದಿಗೆ ಸಂವಾದಿಸುವ ಅವಕಾಶವೂ ಲಭಿಸಿತು. ಸ್ವಯಂಸ್ಫೂರ್ತಿಯ ಒಲುಮೆಯಿಂದಲೂ ಒಡೆಯರ ಬೆಂಬಲದಿಂದಲೂ ಅಯ್ಯಾಶಾಸ್ತ್ರಿಗಳು ಕಾಳಿದಾಸನ 'ವಿಕ್ರಮೋರ್ವಶೀಯ' ನಾಟಕವನ್ನು ಕನ್ನಡಕ್ಕೆ ಅನುವಾದಿಸಿದರು (೧೮೯೧). ಹಾಗೆಯೇ ಹಿಂದಿ ಮತ್ತು ಉರ್ದು ಭಾಷಾರೂಪಗಳ ಸಂಯೋಜಿತ ಭಾಷೆಯೆನಿಸಿದ ಹಿಂದೂಸ್ಥಾನಿ ಭಾಷೆಯಲ್ಲಿದ್ದ ಪ್ರತಾಪಸಿಂಹಚರಿತ್ರೆಯನ್ನೂ ಅನುವಾದಿಸಿದರು. ಇದರೊಂದಿಗೆ ಅಯ್ಯಾಶಾಸ್ತ್ರಿಗಳ 'ಶ್ರೀರಾಮಾಯಣ ನಾಟಕ' ಎಂಬ ಸ್ವರಚಿತ ನಾಟಕವೂ ೧೯೦೪ ರಲ್ಲಿ ಪ್ರಕಟವಾಯಿತು. ನಳಚರಿತ್ರೆಯೂ ಅವರ ಮತ್ತೊಂದು ಸ್ವರಚಿತ ನಾಟಕ. ಕಾಲದ ಜಾಯಮಾನಕ್ಕೆ ತಕ್ಕಂತೆ ಅವರ ಕೆಲವು ಕಿರುಕೃತಿಗಳೂ ಪ್ರಕಟವಾದುವು. ಮುಖ್ಯವಾಗಿ ಆಶೀರ್ವಚನಪಂಚಕ, ಭಗವತ್ಪಾದಾಚಾರ್ಯ ಪ್ರಶಂಸೆ ಹಾಗೂ ದಶಸ್ತೋತ್ರಗಳು ವಿದ್ವನ್ಮನ್ನಣೆ ಪಡೆದುವು. ಮೈಸೂರು ಸಂಸ್ಥಾನದ ಶಾಲೆಗಳಲ್ಲಿ ಅಂದು ವ್ಯಾಪಕವಾಗಿ ಸೋಮವಾರ, ಮಂಗಳವಾರಗಳಂದು ಮೊಳಗುತ್ತಿದ್ದ

'ಸ್ವಾಮಿದೇವನೆ ಲೋಕಪಾಲನೆ ತೇ ನಮೋಸ್ತು ನಮೋಸ್ತುತೇ' ಎಂಬ ಗೀತೆ ದಶಸ್ತೋತ್ರದ್ದು. ಅನಂತರ ಅದು ಕನ್ನಡ ಚಲನಚಿತ್ರ 'ಸ್ಕೂಲ್ ಮಾಸ್ಟರ್' (೧೯೫೮) ನಲ್ಲಿಯೂ ಜನಪ್ರಿಯವಾಯಿತು.

ಚಾಮರಾಜ ಒಡೆಯರ್ ಅವರ ಇಚ್ಛೆಯಂತೆ ಅಯ್ಯಾಶಾಸ್ತ್ರಿಗಳು ತಮ್ಮ ತಂದೆಯವರ 'ಚಂಪೂರಾಮಾಯಣ ಯುದ್ಧಕಾಂಡ' ಎಂಬ ಕಾವ್ಯವನ್ನೂ ಹಾಗೂ 'ಶ್ರೀಕೃಷ್ಣಭೂಪಾಲೀಯಂ' ಎಂಬ ಅಲಂಕಾರಗ್ರಂಥಗಳನ್ನೂ ಸಂಪಾದಿಸಿ ಪ್ರಕಟಿಸಿದರು. ೧೮೯೪ರಲ್ಲಿ ಚಾಮರಾಜ ಒಡೆಯರ್ ಅವರ ಕಾಲಾನಂತರ ವಾಣೀವಿಲಾಸ ಸನ್ನಿಧಾನಂಗಳ ಆದೇಶದಂತೆ ಯುವರಾಜರುಗಳಾದ ನಾಲ್ಕನೇ ಕೃಷ್ಣರಾಜ ಒಡೆಯರ್ ಮತ್ತು ಕಂಠೀರವ ನರಸಿಂಹರಾಜ ಒಡೆಯರ್ ಅವರಿಗೆ ರಾಜೋಚಿತವಾದ ಭಾಷೆ, ಸಾಹಿತ್ಯ ಹಾಗೂ ಕಲೆಗಳ ಕುರಿತಂತೆ ಗುರುಗಳಾಗಿ ಕಾರ್ಯನಿರ್ವಹಿಸಿದರು.

ಆಧುನಿಕಕಾಲಕ್ಕೆ ಪಾದಾರ್ಪಣಗೊಳ್ಳುತ್ತಿದ್ದಂತೆ ಅಯ್ಯಾಶಾಸ್ತ್ರಿಗಳ ವಿದ್ಯೆ, ಪಾಂಡಿತ್ಯ, ವಾಕ್ಚಾತುರ್ಯಗಳಿಗೆ ಮತ್ತೊಂದು ಮಗ್ಗುಲಿನ ಮರ್ಯಾದೆ ಸಲ್ಲಲಾರಂಭಿಸಿತು. ಖ್ಯಾತ ಭೌತಶಾಸ್ತ್ರಜ್ಞರಾದ ಹೋಮಿ ಜಹಾಂಗೀರ್ ಬಾಬಾ ಅವರ ತಾತನವರಾದ ಹೋರ್ ಮಸ್ ಜಿ ಜಹಾಂಗೀರ್ ಬಾಬಾ ಅವರು ಮಹಾರಾಜ ಕಾಲೇಜಿನ ಹೆಡ್ ಮಾಸ್ಟರ್ ಆಗಿದ್ದ ಕಾಲಕ್ಕೆ ಅಂದರೆ, ೧೮೯೦ ರ ಹೊತ್ತಿಗೆ ಅವರು ಮೈಸೂರಿನ ಎಜುಕೇಷನ್ ಸೊಸೈಟಿಯ ಸೆಕ್ರೆಟರಿ ಆಗಿಯೂ ಕಾರ್ಯನಿರ್ವಹಿಸುತ್ತಿದ್ದರು. ಇನ್ಸ್‌ಪೆಕ್ಟರ್ ಜನರಲ್ ಆಫ್ ಎಜುಕೇಷನ್ ಸಹಾ ಆಗಿದ್ದ ಅವರೊಂದಿಗೆ ಪಠ್ಯಪುಸ್ತಕ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸುವ ಗೌರವ ಅಯ್ಯಾಶಾಸ್ತ್ರಿಗಳಿಗೆ ಪ್ರಾಪ್ತವಾಯಿತು. ಬಳಿಕ ೧೮೯೦ರ ಆ ಕಾಲದಲ್ಲೇ ಬಿ. ಎಲ್. ರೈಸ್ ಅವರಿಗೆ ಕರ್ಣಾಟಕ ಶಬ್ದಾನುಶಾಸನ ಎಂಬ ಭಟ್ಟಾಕಳಂಕನ ಪ್ರಸಿದ್ಧ ವ್ಯಾಕರಣ ಗ್ರಂಥವನ್ನು ಸಂಪಾದಿಸಲು ಸಹಾಯಮಾಡಿದರು. ೧೯೧೩ ರಿಂದ ಮೂರು ವರ್ಷಗಳ ಕಾಲ ಮಹಾರಾಜ ಸಂಸ್ಕೃತ ಪಾಠಶಾಲೆಯ ಕ್ರಿಯಾಸಮಿತಿ ಸದಸ್ಯರಾಗಿ ನೇಮಕಗೊಂಡರು. ಪ್ರಸಿದ್ಧ ತತ್ತ್ವಶಾಸ್ತ್ರಜ್ಞರೂ ಚಿಂತಕರೂ ೧೯೨೧ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳೂ ಆಗಿದ್ದ ಡಾ. ಬ್ರಜೇಂದ್ರನಾಥ್ ಶೀಲ್ ಅವರು ಅಯ್ಯಾಶಾಸ್ತ್ರಿಗಳಿಂದ ಕನ್ನಡಸಾಹಿತ್ಯವನ್ನು ಕುರಿತಂತೆ ಮೂರು ದಿನಗಳ ಕಾಲ ಉಪನ್ಯಾಸವನ್ನು ಮಾಡಿಸಿದ್ದರು. ೧೯೧೪ರಲ್ಲಿ ಅಯ್ಯಾಶಾಸ್ತ್ರಿಗಳು

ಕರ್ನಾಟಕ ಸಾಹಿತ್ಯ ಪರಿಷತ್ತಿನ ಸದಸ್ಯರಾಗಿಯೂ ಕಾರ್ಯ ನಿರ್ವಹಿಸಿದರು. ೧೯೨೦ರಲ್ಲಿ ಅಯ್ಯಾ ಶಾಸ್ತ್ರಿ ಗಳು 'ಕರ್ನಾಟಕ ಕಾವ್ಯಕಲಾನಿಧಿ' ಮಾಲಿಕೆಯ ಸಂಪಾದಕ ರಾಗಿ ಕಾರ್ಯನಿರ್ವ ಹಿಸಿದರು.

ರಾಜಮಹಾರಾಜರ ಕಾಲಕ್ಕೆ ತಕ್ಕಂತೆ ಪಂಡಿತಮಾನ್ಯ ಆಸ್ಥಾನಗಳಲ್ಲಿ ಕೀರ್ತಿ ವಂತರೆಂದು ಹೆಸರು ಮಾಡಿದ ಅಯ್ಯಾ ಶಾಸ್ತ್ರಿಗಳು ಆಧುನಿಕ ಕಾಲದ ಹೊಸಗಾಳಿ ಯಲ್ಲೂ ಶಿಕ್ಷಣತಜ್ಞರೆಂದು ಹೆಸರಾಗಿ ೧೯೩೪ರ ಏಪ್ರಿಲ್ ೧೭ ರಂದು ಕಾಲವಶ ರಾದರು.

ಆಧಾರ

Sons of Sarasvatī, Chinya Ravishankar, Permanent Black, Ashoka University, Ranikher, 2017.

❐ ❐ ❐

ಆರ್. ನರಸಿಂಹಾಚಾರ್

(೧೮೬೧–೧೯೩೬)

ನಾಗರತ್ನಮ್ಮ

ಕನ್ನಡ ಕವಿಗಳ ಚರಿತ್ರೆ ಎಂದ ಕೂಡಲೇ ನೆನಪಿಗೆ ಬರುವ ಮೊದಲ ಹೆಸರು ಆರ್. ನರಸಿಂಹಾಚಾರ್. ಇವರು ಮಂಡ್ಯ ಜಿಲ್ಲೆಯ ಮಂಡ್ಯದಕೊಪ್ಪಲಿನಲ್ಲಿ ಏಪ್ರಿಲ್ ೯. ೧೮೬೧ರಂದು ಜನಿಸಿದರು. ತಂದೆ ತಿರುನಾರಾಯಣ ಪೆರುಮಾಳ್, ತಾಯಿ ಸಿಂಗಮ್ಮಾಳ್. ತಂದೆಯಿಂದಲೇ ಸಂಸ್ಕೃತ ಅಭ್ಯಾಸವಾಯಿತು. ಮನೆಮಾತು ತಮಿಳು. ಕನ್ನಡ–ಇಂಗ್ಲಿಷ್ ಭಾಷೆಗಳನ್ನು ಚೆನ್ನಾಗಿ ಬಲ್ಲವರು. ಪ್ರಾಥಮಿಕ ವಿದ್ಯಾಭ್ಯಾಸ ಮಂಡ್ಯದ ಕೊಪ್ಪಲಿನಲ್ಲಿ, ಮೆಟ್ರಿಕ್ಯುಲೇಷನ್ ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿ ನಲ್ಲಿ(೧೮೭೮), ಎಫ್.ಎ. ಹಾಗೂ ಬಿ.ಎ. ವ್ಯಾಸಂಗವನ್ನು ಬೆಂಗಳೂರಿ ನಲ್ಲಿ(೧೮೮೨) ಮುಗಿಸಿ, ಕನ್ನಡ ಎಂ.ಎ. ಪದವಿ(೧೮೯೨)ಯನ್ನು ಮದ್ರಾಸ್ ವಿಶ್ವವಿದ್ಯಾಲಯದಿಂದ ಪಡೆದರು.

ಆರಂಭದಲ್ಲಿ ಚಿಕ್ಕಮಗಳೂರು, ಶಿವಮೊಗ್ಗ ಹಾಗೂ ಹಾಸನಗಳಲ್ಲಿ ಪ್ರೌಢಶಾಲಾ ಅಧ್ಯಾಪಕರಾಗಿ, ಅನಂತರ ಮೈಸೂರಿನ ಮಹಾರಾಜ ಮತ್ತು ಮಹಾರಾಣಿ ಕಾಲೇಜುಗಳಲ್ಲಿ ವೃತ್ತಿ ನಿರ್ವಹಿಸಿದರು. ೧೮೯೪ರಲ್ಲಿ ವಿದ್ಯಾ ಇಲಾಖೆಯಲ್ಲಿ ಭಾಷಾಂತರಕಾರರಾಗಿಯೂ ೧೮೯೯ರಲ್ಲಿ ಮೈಸೂರಿನ ಪ್ರಾಚ್ಯವಸ್ತು ಸಂಶೋಧನಾ ಇಲಾಖೆಯಲ್ಲಿ ಬಿ.ಎಲ್.ರೈಸ್ ಅವರಿಗೆ ಸಹಾಯಕರಾಗಿಯೂ ದುಡಿದರು. ಅನಂತರ ಅದೇ ವಿಭಾಗದಲ್ಲಿ ನಿರ್ದೇಶಕ(೧೯೦೬)ರಾಗಿ ನೇಮಕ ಗೊಂಡರು.

೧೯ ವರ್ಷಗಳ ಸುದೀರ್ಘ ಅವಧಿಯಲ್ಲಿ ಮೈಸೂರು ಸಂಸ್ಥಾನದ ಆದ್ಯಂತ ಸಂಚರಿಸಿ ಸುಮಾರು ೫೦೦೦ ಶಾಸನಗಳನ್ನು, ೪೦೦೦ ನಾಣ್ಯಗಳನ್ನು ಸಂಗ್ರಹಿಸಿದರು. ಪುರಾತತ್ವ ಇಲಾಖೆಯ ವರದಿಗಳಲ್ಲಿ ಹಿಂದೂ, ಜೈನ,

ಮಹಮ್ಮದೀಯರಿಗೆ ಸಂಬಂಧಪಟ್ಟ ಸುಮಾರು ೧೦೦೦ ಕಟ್ಟಡಗಳನ್ನು ಪರಿಶೀಲಿಸಿ, ಅವುಗಳ ವಾಸ್ತು ವಿಷಯಗಳನ್ನು ಕುರಿತು ಟಿಪ್ಪಣಿ ಬರೆದರು. ಇವರ ಅವಧಿಯಲ್ಲಿ ೧೦೦ ಕನ್ನಡ ಮತ್ತು ಸಂಸ್ಕೃತ ಹಸ್ತಪ್ರತಿಗಳು ಪ್ರತಿ ಮಾಡಲ್ಪಟ್ಟವು.

ಇವರ ಕೃತಿಗಳು ಕನ್ನಡ ಅಭಿಜಾತ ಸಾಹಿತ್ಯಕ್ಕೆ ಅತ್ಯಮೂಲ್ಯ ಕೊಡುಗೆ ಗಳಾಗಿವೆ. 'ಕರ್ಣಾಟಕ ಕವಿಚರಿತೆ' ಭಾಗ–೧(೧೯೦೯), ಭಾಗ–೨(೧೯೧೯), ಭಾಗ–೩(೧೯೨೯), 'ಕಾವ್ಯಾವಲೋಕನ' (ನಾಗವರ್ಮ–೧೯೦೩), 'ಕರ್ಣಾಟಕ ಭಾಷಾ ಭೂಷಣ'(ನಾಗವರ್ಮ–೧೯೦೩), 'ಕರ್ಣಾಟಕ ಶಬ್ದಾನುಶಾಸನ' (ಭಟ್ಟಾಕಳಂಕ–೧೯೨೩), 'ನೀತಿಮಂಜರಿ' (೧೯೨೧), 'ನೀತಿವಾಕ್ಯ ಮಂಜರಿ' (೧೯೨೮), 'ಶಾಸನ ಪದ್ಯಮಂಜರಿ' (೧೯೨೩), 'ನಗೆಗಡಲು' (ಅನುವಾದ–೧೯೩೩), 'History of Kannada Literature' (೧೯೩೪) ಮೊದಲಾದವು ಇವರ ನಿರಂತರ ಕೃಷಿಗೆ ನಿದರ್ಶನಗಳು. ಆರ್. ನರಸಿಂಹಾಚಾರ್ ಅವರಿಗೆ ವಿಶೇಷ ಗೌರವವನ್ನು ತಂದುಕೊಟ್ಟ ಕೃತಿ 'ಕರ್ಣಾಟಕ ಕವಿಚರಿತೆ'. ಮೂರು ಸಂಪುಟಗಳಲ್ಲಿ ಕನ್ನಡದ ಒಟ್ಟು ೧೧೪೪ ಕವಿಗಳ ಚರಿತ್ರೆಯನ್ನು ಒಳಗೊಂಡಿದೆ. ಸಂಪುಟ–೧: ಆರಂಭದಿಂದ ೧೪ನೆಯ ಶತಮಾನದ ಕೊನೆಯವರೆಗೆ ೨೪೦ ಕವಿಗಳ ವಿವರಗಳೊಂದಿಗೆ ೧೯೦೯ರಲ್ಲಿ ಎಸ್.ಜಿ.ನರಸಿಂಹಾಚಾರ್ ಅವರ ಸಹ ಸಂಪಾದಕತ್ವದಲ್ಲಿ ಪ್ರಕಟಗೊಂಡಿತು. ಇದು ೧೯೨೪ರಲ್ಲಿ ಆರ್. ನರಸಿಂಹಾಚಾರ್ ಅವರಿಂದಲೇ ಪರಿಶೀಲನೆಗೊಂಡು ಪುನಃ ಮುದ್ರಣವಾಯಿತು. ಅನಂತರ ಕನ್ನಡ ಸಾಹಿತ್ಯ ಪರಿಷತ್, ಇದನ್ನು ಪರಿಶೋಧಿಸಿ ಪ್ರಕಟಿಸಿತು(೧೯೬೧). ಸಂಪುಟ–೨: ೧೫–೧೭ನೇ ಶತಮಾನದ ಕೊನೆಯವರೆಗಿನ ೩೦೧ ಕವಿಗಳ ವಿವರಗಳೊಂದಿಗೆ ೧೯೧೯ರಲ್ಲಿ ಪ್ರಕಟವಾಯಿತು. ೧೯೭೩ರಲ್ಲಿ ಕನ್ನಡ ಸಾಹಿತ್ಯ ಪರಿಷತ್ ಇದನ್ನು ಪರಿಷ್ಕರಿಸಿ ಮುದ್ರಣಗೊಳಿಸಿತು. ಸಂಪುಟ–೩: ೧೮ ಮತ್ತು ೧೯ನೇ ಶತಮಾನದ ಕೊನೆಯವರೆಗೆ ೩೫೨ ಕವಿಗಳ ವಿವರಗಳೊಂದಿಗೆ ೧೯೨೯ರಲ್ಲಿ ಪ್ರಕಟವಾಯಿತು.

ಇವುಗಳ ಪ್ರತಿಯೊಂದು ಸಂಪುಟದ ಉಪೋದ್ಘಾತದಲ್ಲಿ ಉಕ್ತವಾಗಿರುವ ವಿಷಯಗಳು ಬಹು ಉಪಯುಕ್ತವಾಗಿವೆ. ಪಂಚದ್ರಾವಿಡ, ದ್ರಾವಿಡ ಭಾಷೆಗಳ ಪ್ರಾಚೀನತೆ, ಅವು ಪ್ರಚಾರದಲ್ಲಿರುವ ದೇಶಗಳು, ಇತರ ದ್ರಾವಿಡ ಭಾಷೆಗಳು, ದ್ರಾವಿಡರ ನಾಗರಿಕತೆ, ದ್ರಾವಿಡ ಮತ್ತು ಗೌಡ ಭಾಷಾವರ್ಗಗಳ ಪರಸ್ಪರ ಸಂಬಂಧ, ಗ್ರಾಂಥಿಕ ದ್ರಾವಿಡಭಾಷೆ, ಕನ್ನಡಭಾಷೆ, ಕರ್ಣಾಟಕ ಶಬ್ದದ ವ್ಯುತ್ಪತ್ತಿ, ಆ ಶಬ್ದದ

ಪೂರ್ವ ಪ್ರಯೋಗಗಳು, ಅದರ ವಿಪರೀತಾರ್ಥ, ಕನ್ನಡ ನಾಡಿನ ಪ್ರಾಚೀನತೆ, ಕನ್ನಡ ಭಾಷೆಯ ಪ್ರಾಚೀನತೆ, ಕನ್ನಡ ವರ್ಣಮಾಲೆ, ಕನ್ನಡ ಶಬ್ದಗಳು, ಕನ್ನಡ ಭಾಷೆಯ ಅವಸ್ಥಾಂತರಗಳು, ಕನ್ನಡ ಕವಿಗಳು, ಕನ್ನಡ ಗ್ರಂಥಗಳು, ಕನ್ನಡ ಭಾಷೆಗೆ ಪ್ರೋತ್ಸಾಹ ಮೊದಲಾದ ವಿಷಯಗಳನ್ನು ವಿದ್ವತ್ಪೂರ್ಣವಾಗಿ ವಿವರಿಸಿದ್ದಾರೆ.

ಅವರೇ ಹೇಳಿಕೊಂಡಿರುವಂತೆ ಈ ಗ್ರಂಥದಲ್ಲಿ ಕವಿಯ ಹೆಸರು, ಗ್ರಂಥ ರಚನಾ ಕಾಲ, ಬಳಿಕ ಆ ಕವಿಯಿಂದ ರಚಿತವಾದ ಗ್ರಂಥಗಳ ಹೆಸರು ಇರುತ್ತವೆ. ಆ ಕವಿ ತನ್ನ ಕವಿತಾಚಾತುರರ್ಯ, ಗುಣಗಳು ಮೊದಲಾದವನ್ನು ಹೇಳಿಕೊಳ್ಳುವ ಪದ್ಯಗಳನ್ನು ಉದ್ಧರಿಸಲಾಗಿದೆ. ಬಳಿಕ ಕವಿಕೃತವಾದ ಗ್ರಂಥಗಳನ್ನು ಒಂದೊಂದಾಗಿ ಅದರ ಸ್ವರೂಪ, ಪ್ರತಿಪಾದ್ಯ ವಿಷಯ, ಕಥಾಗರ್ಭ, ಆಶ್ವಾಸಸಂಖ್ಯೆ, ಇಷ್ಟ ದೇವತಾ ಸ್ತುತಿ, ಗುರು ಪರಂಪರೆ, ಗ್ರಂಥಬಂಧ, ಗ್ರಂಥ ರಚನೆಗೆ ಕಾರಣ, ಲಿಪಿಕಾರನ ಹೆಸರು, ಪ್ರತಿ ಮಾಡಿದ ಕಾಲ ಮೊದಲಾದವನ್ನು ವಿವರಿಸಲಾಗಿದೆ.

ಕನ್ನಡ ಸಾಹಿತ್ಯ ಚರಿತ್ರೆಗೆ ಕಿಟೆಲ್, ಇ.ಪಿ.ರೈಸ್ ತಮ್ಮ ಇಂಗ್ಲಿಷ್ ಲೇಖನಗಳ ಮೂಲಕ ಈ ಮೊದಲೇ ಅಂಕುರಾರ್ಪಣ ಮಾಡಿದ್ದರು. ಇದರ ಬಗ್ಗೆ ನರಸಿಂಹಾಚಾರ್ಯರು ಪ್ರಥಮ ಸಂಪುಟದ ಮೊದಲ ಮುದ್ರಣದ ಅವತರಣಿಕೆಯಲ್ಲಿ ತಾವೇ ಕೊಂಚಮಟ್ಟಿಗೆ ತಿಳಿಸಿ ಅವುಗಳ ಕುಂದು-ಕೊರತೆಗಳನ್ನು ಸೂಚಿಸಿದ್ದಾರೆ. ತಮ್ಮ ಶೋಧನೆಗಳು ಯಾವುವು ಎನ್ನುವುದನ್ನು ಎತ್ತಿ ಹೇಳಿದ್ದಾರೆ. ನೂರಾರು ತಾಳೆಯೋಲೆಯ, ಕಾಗದದ ಹಾಗೂ ಮುದ್ರಿತ ಗ್ರಂಥಗಳ ಶೋಧನೆ, ಅಧ್ಯಯನ, ವಿಮರ್ಶೆಗಳ ಫಲವಾಗಿ ರಚಿತವಾಗಿರುವ ವಿಸ್ತೃತವೂ ಪ್ರಮಾಣಭೂತವೂ ಆದ ಉದ್ಗ್ರಂಥವಿದು. ಸಾಹಿತ್ಯಗುಣ ಎದ್ದುಕಾಣುವ ಗ್ರಂಥಾಂತರ್ಗತವಾಗಿರುವ ಗದ್ಯಪದ್ಯಗಳನ್ನು ಯಥೋಚಿತವಾಗಿ ಉದ್ಧರಿಸಿ ಕವಿ ಚರಿತೆಗೆ ಒಂದು ಸಮಗ್ರತೆ ಬರುವಂತೆ ಮಾಡಿದುದು ಆಚಾರ್ಯರು ತೋರಿಸಿದ ಹೊಸತನವಾಗಿದೆ.

ನರಸಿಂಹಾಚಾರ್ಯರ ಜೀವಿತ ಕಾಲದಲ್ಲಿಯೇ ಕಿರಿಯ ಸಮಕಾಲೀನ ವಿದ್ವಾಂಸರಾಗಿದ್ದ ಎ. ವೆಂಕಟಸುಬ್ಬಯ್ಯನವರೂ ಇತರ ಕೆಲವರೂ 'ಕರ್ಣಾಟಕ ಕವಿಚರಿತೆ'ಯ ಕೆಲ ಕವಿಕಾವ್ಯ ವಿಚಾರಗಳನ್ನು ಪುನರ್ವಿಮರ್ಶೆಗೆ ಎತ್ತಿಕೊಂಡು ಎಲ್ಲೆಲ್ಲಿ ತಿದ್ದುಪಡಿಗಳು ಸೇರ್ಪಡೆಗಳು ಆಗಬೇಕಿವೆ ಎನ್ನುವುದನ್ನು ಲೇಖನ

ಮಾಲೆಯಾಗಿ ಪ್ರಕಟಿಸಿದ್ದಾರೆ. ಅದಕ್ಕೆ ಆಚಾರ್ಯರು ಉತ್ತರಗಳನ್ನು ಹೇಳಿದ್ದಾರೆ. ಕೆಲವು ಕಡೆ ಅವನ್ನು ಒಪ್ಪದೇ ತಮ್ಮ ನಿಲುವು ನಿರ್ಣಯಗಳನ್ನೇ ಎತ್ತಿಹಿಡಿದಿದ್ದಾರೆ. ಕೆಲವೆಡೆ ಅವರ ವಾದಸರಣಿ ತುಂಬಾ ದೀರ್ಘವಾಗಿಯೇ ಇದೆ. ''ಕೆಲವು ಕನ್ನಡ ಕವಿಗಳ ಜೀವನ ಕಾಲ ವಿಚಾರ'' ಎಂಬ ಹೆಸರಿನಲ್ಲಿ ಪುಸ್ತಕರೂಪದಲ್ಲಿ ಲೇಖನಮಾಲೆ ಪ್ರಕಟವಾದ ಮೇಲೆ(೧೯೨೭) ಮತ್ತೆ ಆಕ್ಷೇಪಗಳಿಗೆ ಪ್ರತ್ಯುತ್ತರವನ್ನು ಪ್ರಬುದ್ಧ ಕರ್ನಾಟಕ ಪತ್ರಿಕೆಯಲ್ಲಿ(೧೨.೦೨.೧೯೩೦, ಪು.೧-೪೮) ಬರೆದರು. ಈ ಪ್ರತಿಕ್ರಿಯೆ ಕನ್ನಡ ಸಂಶೋಧನೆಯಲ್ಲಿ ನೂತನ ಮಾರ್ಗವನ್ನೇ ತೋರಿಸಿಕೊಟ್ಟಿತು.

ಕವಿಚರಿತೆಯ ಮೂರು ಸಂಪುಟಗಳು ಪ್ರಕಟವಾದ ಮೇಲೂ ಅದಕ್ಕೆ ಅನುಬಂಧ ರೂಪವಾಗಿ ಕೆಲವು ಸೇರ್ಪಡೆಗಳನ್ನು ಎರಡು ಕಂತುಗಳಲ್ಲಿ ಮಾಡಿದ್ದಾರೆ. ಇವುಗಳು ಶಾಸನಕವಿಗಳಿಗೆ ಸಂಬಂಧಿಸಿದಂಥವು. ಶಾಂತಿನಾಥ (೧೧೨೦), ತ್ರಿವಿಕ್ರಮ ಪಂಡಿತ (೧೧೪೯), ಮಾರಮರಸ(೧೧೯೯), ರೇಚಣ್ಣಭಟ್ಟ (೧೧೪೦), ಬಾಚ(೧೨೧೬), ಕರಿಬಸವಾರ್ಯ(ಸು.೧೪೦೦) ಮೊದಲಾದವರು ಈ ಕವಿಗಳು.

ಗ್ರಂಥಸಂಪಾದನ ಕಾಲದಲ್ಲಿ ಹಸ್ತಪ್ರತಿಗಳನ್ನು ಕಣ್ಣಲ್ಲಿ ಕಣ್ಣಿಟ್ಟು ಓದಿ, ಕವಿ-ಕಾಲ-ದೇಶ-ಮತ; ಕೃತಿ ಸ್ವರೂಪ-ವೈಶಿಷ್ಟ್ಯಗಳ ಬಗೆಗೆ ಹೆಕ್ಕಿ ತೆಗೆದು, ತಮಗೆ ದೊರೆತ ಆಧಾರಗಳ ಮೇಲಿಂದ ಖಚಿತ ವಿವರಗಳನ್ನು ನೀಡಿದ್ದಾರೆ. ಇದು ಅಸಾಧಾರಣ ಶಕ್ತಿಯ ವ್ಯಕ್ತಿಗಳಿಂದ ಮಾತ್ರ ಸಾಧ್ಯ. ಕನ್ನಡದ ಯಾವುದೇ ಕವಿಯ ವಿಷಯವನ್ನು ತಿಳಿದುಕೊಳ್ಳಲು ಬಯಸುವವರಿಗೆ ಪ್ರಥಮ ಆಕರಗಳಾಗಿರುವ ಕವಿಚರಿತೆ ಸಂಪುಟಗಳಿಗೆ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಒಂದು ಚಾರಿತ್ರಿಕ ಮಹತ್ವವುಂಟು.

ಇವರು ಒಳ್ಳೆಯ ಗ್ರಂಥಸಂಪಾದಕರೂ ಹೌದು. 'ಕಾವ್ಯಾವಲೋಕನ' ಕೃತಿಯನ್ನು ಮೊದಲ ಬಾರಿಗೆ ಒಂದೇ ಸಂಪುಟದಲ್ಲಿ ಪ್ರಕಟಿಸಿದರು. ನರಸಿಂಹಾಚಾರ್ಯರ ಇಂಗ್ಲಿಷ್ ಉಪೋದ್ಘಾತ ಬೆಲೆಯುಳ್ಳದ್ದಾಗಿದೆ. ಈ ಕೃತಿಯ ಕರ್ತರು ಇಮ್ಮಡಿ ನಾಗವರ್ಮ. ಅನಂತರ ದೊರೆತ ಈ ಕವಿಯ ಕೃತಿ 'ವರ್ಧಮಾನ ಪುರಾಣಂ'(ಸಂ.ಬಿ.ಎಸ್.ಸಣ್ಣಯ್ಯ) ಗ್ರಂಥದಿಂದ ಈ ನಾಗವರ್ಮ ೧೦೪೨ರಲ್ಲಿ ಬಾಳಿದನೆನ್ನುವುದು ಖಚಿತವಾಗಿದೆ. 'ಕಾವ್ಯಾವಲೋಕನ' ಗ್ರಂಥದಂತೆ 'ಕರ್ಣಾಟಕ

ಭಾಷಾಭೂಷಣ' ಎರಡನೆಯ ಮುದ್ರಣವನ್ನು ಹಾಗೂ ಭಟ್ಟಾಕಳಂಕನ 'ಶಬ್ದಾನುಶಾಸನ' ಕೃತಿಗಳನ್ನು ಆಚಾರ್ಯರು ಸಂಪಾದಿಸಿ ಪ್ರಕಟಿಸಿದ್ದಾರೆ. 'ಕಾದಂಬರಿ', 'ಛಂದೋಂಬುಧಿ'ಗಳ ನಾಗವರ್ಮನು 'ಕಾವ್ಯಾವಲೋಕನ', 'ಭಾಷಾಭೂಷಣ'ಗಳ ನಾಗವರ್ಮನಿಂದ ಭಿನ್ನನೆಂಬು ದನ್ನು ಸಪ್ರಮಾಣವಾಗಿ ಪ್ರತಿಪಾದಿಸಿದ್ದಾರೆ. ಈ ಗ್ರಂಥಗಳಿಗೆ ಇವರು ಸೇರಿಸಿರುವ ಪರಿಶಿಷ್ಟಗಳು ಉಪಯುಕ್ತವಾಗಿವೆ. 'ಕಾವ್ಯಾವಲೋಕನ' ಮೈಸೂರು ವಿಶ್ವವಿದ್ಯಾನಿಲಯದಿಂದ ೧೯೩೯ ಮತ್ತು ೧೯೬೭ರಲ್ಲಿ ಪುನಃ ಮುದ್ರಣವಾಗಿವೆ.

ಆಚಾರ್ಯರು ಚಂದ್ರವಳ್ಳಿ, ತಲಕಾಡು ಮತ್ತು ಹಳೆಬೀಡುಗಳಲ್ಲಿ ನಡೆಸಿದ ಭೂಸಂಶೋಧನೆಗಳಿಂದ ಆಂಧ್ರ, ರೋಮನ್, ಚೀನಿ ಮತ್ತು ದೇಶೀಯ ಅರಸರ ಸಹಸ್ರಾರು ನಾಣ್ಯಗಳನ್ನು(ಸು.೪೧೦೦) ಅಭ್ಯಸಿಸಿ, ಸಂಶೋಧಿಸಿ ಅನೇಕ ಲೇಖನಗಳನ್ನು ಪ್ರಕಟಿಸಿದ್ದಾರೆ. ಕನ್ನಡ, ಇಂಗ್ಲಿಷ್ ಭಾಷೆಗಳಲ್ಲಿ ಪ್ರವೀಣರಾಗಿದ್ದ ಆಚಾರ್ಯರು ಸವ್ಯಸಾಚಿಗಳೆಂದರೆ ತಪ್ಪಾಗಲಾರದು. ಇಂಡಿಯನ್ ಆಂಟಿಕ್ವರಿ ಹಾಗೂ ಮಿಥಿಕ್ ಸೊಸೈಟಿ ಪತ್ರಿಕೆಗಳಲ್ಲೂ ತಮ್ಮ ಸಂಶೋಧನ ಲೇಖನಗಳನ್ನು ಪ್ರಕಟಿಸಿದ್ದಾರೆ. ಅವರು RAS (ರಾಯಲ್ ಏಷಿಯಾಟಿಕ್ ಸೊಸೈಟಿ)ಯ ಸದಸ್ಯರಾಗಿದ್ದರು.

ಶ್ರವಣಬೆಳಗೊಳದ ಶಾಸನಗಳನ್ನು ಈ ಹಿಂದೆ ಬಿ.ಎಲ್. ರೈಸ್ ಅವರು ಪ್ರಕಟಿಸಿದ್ದರು(೧೮೮೯). ಅಲ್ಲಿ ಕೇವಲ ೧೪೪ ಶಾಸನಗಳಿದ್ದುವು. ಆರ್.ನರಸಿಂಹಾಚಾರ್ ಅದನ್ನು ಪರಿಷ್ಕರಿಸಿ ಹೊಸದಾಗಿ ೩೫೬ ಶಾಸನಗಳನ್ನು ಸೇರಿಸಿ ಒಟ್ಟು ೫೦೦ ಶಾಸನಗಳುಳ್ಳ ಸಂಪುಟವನ್ನು ಹೊರತಂದರು. ಪ್ರಾರಂಭದ ೯೦ ಪುಟದ ಪ್ರಸ್ತಾವನೆ ಆಚಾರ್ಯರ ವಿದ್ವತ್ತಿಗೆ ಹಿಡಿದ ಕನ್ನಡಿಯಾಗಿದೆ. ಶ್ರವಣಬೆಳಗೊಳದ ವಾಸ್ತುಶಿಲ್ಪವನ್ನು ಕುರಿತು ಮೊದಲ ಬಾರಿಗೆ ಇಲ್ಲಿ ವಿಸ್ತೃತವಾಗಿ ಚರ್ಚಿಸಲಾಗಿದೆ.

೧೯೨೩ರಲ್ಲಿ ಪ್ರಕಟವಾದ ಶಾಸನಪದ್ಯಮಂಜರಿಯಲ್ಲಿ ಸಾಹಿತ್ಯ ಅಂಶಗಳನ್ನೊಳಗೊಂಡ ಶಾಸನಗಳಿಂದಾಯ್ದ ೧೪೪೬ ಪದ್ಯಗಳಿವೆ. ಕವಿತೆಯ ಶೈಲಿಯ ಮತ್ತು ಸೊಬಗಿನ ರಸವನ್ನು ಸ್ವಲ್ಪಮಟ್ಟಿಗಾದರೂ ಆಸ್ವಾದನೆ ಮಾಡಬೇಕೆಂಬ ಉದ್ದೇಶದಿಂದ ಈ ಶಾಸನ ಭಾಗಗಳನ್ನು ಸಂಗ್ರಹಿಸಿಕೊಡಲಾಗಿದೆ. ಈ ಪುಸ್ತಕಕ್ಕಾಗಿ ಆಯ್ಕೆಮಾಡಿದ ಶಾಸನಗಳ ಸಂಖ್ಯೆ ೨೮೩. ಇವುಗಳಲ್ಲಿ ಬಾಂಬೆ ಪ್ರಾಂತ್ಯದಲ್ಲಿರುವ

೨೪ ಶಾಸನ ಬಿಟ್ಟರೆ ಉಳಿದವೆಲ್ಲ ಮೈಸೂರು ಸಂಸ್ಥಾನದವು. ಅವು ಸುಮಾರು ೭೦೦ ರಿಂದ ೧೪೬೫ರವರೆಗಿನ ಕಾಲಾವಧಿಯವು. ಅವನ್ನು ಆ ಆನುಪೂರ್ವಿಯಲ್ಲಿಯೇ ಕೊಟ್ಟಿರುವುದರಿಂದ ಕನ್ನಡ ಭಾಷೆಯ ಇತಿಹಾಸ ತಿಳಿದುಬರುತ್ತದೆ.

ಕೃಷ್ಣರಾಜಪೇಟೆಯಲ್ಲಿ ಸಿಕ್ಕ ಎರಡನೆಯ ಹರಿಹರನ ಶಾಸನವು ಬುಕ್ಕನು ಮರಣಹೊಂದಿದ ನಿಶ್ಚಿತ ಕಾಲವನ್ನು ತಿಳಿಸುತ್ತದೆ. ೧೯೧೬ರಲ್ಲಿ ಶೃಂಗೇರಿಯ ದಾಖಲೆಗಳನ್ನು ಅಭ್ಯಸಿಸಿ ಶೃಂಗೇರಿ ಮಠಾಧೀಶ್ವರ ಮತ್ತು ವಿಜಯನಗರದ ಪ್ರಾರಂಭದ ಕಾಲವನ್ನು ಆಚಾರ್ಯರು ನಿರ್ಣಯಿಸಿದ್ದಾರೆ. ಮುಳಬಾಗಿಲಿನಲ್ಲಿ ದೊರೆತ ಗಂಗರ ತಾಮ್ರಶಾಸನ ಮತ್ತು ಶೃಂಗೇರಿ ಮಠದಲ್ಲಿಯ ಶಾಸನಗಳು ಎಷ್ಟು ಮಹತ್ವವಾಗಿವೆಯೆಂಬುದನ್ನು ಅವರು ತೋರಿಸಿಕೊಟ್ಟಿದ್ದಾರೆ. ಗಂಗರಾಜರಾದ ದುರ್ವಿನೀತ ಮತ್ತು ಶ್ರೀವಿಕ್ರಮರನ್ನು ಕುರಿತು ಹೊಸದಾಗಿ ದೊರೆತ ಶಾಸನಾಧಾರಗಳನ್ನು ೧೯೧೬–೧೭ರಲ್ಲಿ ಗುರುತಿಸಿದ್ದಾರೆ. ಸುಮಾರು ಕ್ರಿ.ಶ.೫೦೦ರ ಪುನಾಡ ಶಾಸನವನ್ನು ಇವರು ಶೋಧಿಸಿದ್ದಾರೆ. ಟಿಪ್ಪು ಶೃಂಗೇರಿ ಗುರುಗಳಿಗೆ ದತ್ತಿ ಕೊಟ್ಟಿದ್ದನ್ನು ಪ್ರಸ್ತಾಪಿಸಿ, ಜನರು ತಿಳಕೊಂಡಷ್ಟು ಅವನು ಕ್ರೂರಿಯಲ್ಲವೆಂದು ಆಚಾರ್ಯರು ಅಭಿಪ್ರಾಯಪಟ್ಟಿದ್ದಾರೆ.

೧೯೧೭–೧೮ರಲ್ಲಿ ಎರಡನೆಯ ಹರಿಹರನ ಡಂಬಳ ಶಾಸನವನ್ನು, ಕದಂಬ ಭೋಗಿವರ್ಮನ ತಗರೆಯ ತಾಮ್ರಶಾಸನವನ್ನು ಸಂಶೋಧಿಸಿದ್ದಾರೆ. ಎರಡನೆಯ ಗಂಗ ರಾಚಮಲ್ಲನು ಸುಮಾರು ಕ್ರಿ.ಶ.೯೦೦ರಲ್ಲಿ ನೇತ್ರಶಿವನೆಂಬ ಗುರುವಿಗೆ ದಾನಕೊಟ್ಟಿದ್ದನ್ನು ಆಚಾರ್ಯರು ಗುರುತಿಸಿದರು. ಮುಳಬಾಗಿಲು ಮಠದ ತಾಮ್ರಶಾಸನವು ಭಾಗವತ ಸಂಪ್ರದಾಯದ ವಿಷಯವಾಗಿ ಹೇಳುತ್ತದೆಂದು ಹೇಳಿದ್ದಾರೆ. ನರಸಿಂಹಾಚಾರ್ಯರು ೧೯೨೦ರಲ್ಲಿ ಕಾರ್ಲಾ, ಕನ್ಹೇರಿ, ಬಾದಾಮಿ, ಎಲ್ಲೋರ ಮತ್ತು ಅಜಂತಾಗಳಿಗೆ ಭೇಟಿಕೊಟ್ಟು ಆ ಸ್ಥಳಗಳಲ್ಲಿಯ ಗುಹೆಗಳ ಬಗ್ಗೆ ಮಹತ್ತ್ವದ ಸಂಗತಿಗಳನ್ನು ದಾಖಲಿಸಿದ್ದಾರೆ. ೧೯೦೯ರಲ್ಲಿ ಭಾಸಕವಿಯ 'ಸ್ವಪ್ನವಾಸವದತ್ತ' ಎಂಬ ನಾಟಕವನ್ನು ಕಂಡುಹಿಡಿದರು. ಇವಲ್ಲದೆ ಗಂಗರ ಚರಿತ್ರೆ, ಸಾಯಣ–ಮಾಧವ, ಬೇಲೂರು, ಸೋಮನಾಥಪುರ ಮತ್ತು ದೊಡ್ಡಗದ್ದವಹಳ್ಳಿಯ ಹೊಯ್ಸಳ ದೇವಸ್ಥಾನಗಳನ್ನು ಕುರಿತು ಕೃತಿ ರಚಿಸಿದ್ದಾರೆ.

ಆರ. ನರಸಿಂಹಾಚಾರ್ ಅವರು ಪ್ರಾಕ್ತನ ವಿಮರ್ಶ ವಿಚಕ್ಷಣ(೧೯೧೩–ಮೈಸೂರು ಸಂಸ್ಥಾನ), ರಾವ್‌ಬಹದ್ದೂರ್–(೧೯೧೬–ಬ್ರಿಟಿಷ್ ಸರ್ಕಾರ) ಅಭಿನವ ಕನ್ನಡ ಸೀಮಾಪುರುಷ, ಮಹಾಮಹೋಪಾಧ್ಯಾಯ(೧೯೩೨–೩೪ ಬ್ರಿಟಿಷ್ ಸರ್ಕಾರ) ಎಂಬ ಬಿರುದುಗಳನ್ನು ಪಡೆದರು. ನಾಲ್ಕನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ(೧೯೧೪–ಕ.ಸಾ.ಪ.), ಪ್ರಾಚ್ಯ ವಿದ್ಯಾವೈಭವ(೧೯೨೪–ಕಲ್ಕತ್ತೆಯ ಅಖಿಲ ಭಾರತ ಸಾಹಿತ್ಯ ಸಂಘ)ದ ಅಧ್ಯಕ್ಷತೆ ಹಾಗೂ ೧೯೦೭ರಲ್ಲಿ ಧಾರವಾಡದಲ್ಲಿ ನಡೆದ ಗ್ರಂಥಕರ್ತರ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು.

ಇವರು ಸರ್ ಜಾನ್ ಮಾರ್ಷಲ್, ಸರ್ ಜಾನ್‌ಫ್ಲೀಟ್, ವಿನ್ಸೆಂಟ್‌ಸ್ಮಿತ್, ಬಿ.ಎಲ್. ರೈಸ್, ಎಫ್.ಡಬ್ಲ್ಯೂ. ಥಾಮಸ್, ಸ್ಟೆನ್‌ಕೋನೋ ಹಾಗೂ ಎಲ್.ಡಿ. ಬಾರ್ನೆಟ್ ಮತ್ತು ಗ್ರಿಯರ್‌ಸನ್ ಮೊದಲಾದ ಪಾಶ್ಚಾತ್ಯ ವಿದ್ವಾಂಸರ ಸಂಶೋಧನ ಕಾರ್ಯಕ್ಕೆ ಹೆಗಲೆಣೆಯಾಗಿ ನಿಲ್ಲುತ್ತಾರೆ. ಇವರು ೦೬.೧೨.೧೯೩೬ರಂದು ಇಹ ಲೋಕ ತ್ಯಜಿಸಿದರು.

❐ ❐ ❐

ಎಸ್.ಜಿ. ನರಸಿಂಹಾಚಾರ್

(೧೮೬೨-೧೯೦೭)

ಅನ್ನಪೂರ್ಣ ಎನ್. ಎಸ್.

ಕನ್ನಡ ಸಾಹಿತ್ಯ ಇತಿಹಾಸದಲ್ಲಿ ಕೆಲ ಮಹನೀಯರು ತಮ್ಮ ಕೃತಿಗಳಿಂದ ಪ್ರಸಿದ್ಧರಾಗುತ್ತಾರೆ; ಇನ್ನೂ ಕೆಲವರು ಮಹಾಕೃತಿಗಳನ್ನು ಉಳಿಸುವ ಮೂಲಕ ಅಮರರಾಗುತ್ತಾರೆ. ಎಸ್.ಜಿ. ನರಸಿಂಹಾಚಾರ್ಯರು ಈ ಎರಡನೇ ವರ್ಗಕ್ಕೆ ಸೇರಿದ ಮಹಾನ್ ಪಂಡಿತರು. ಅವರು ಕವಿ, ಅನುವಾದಕ, ಶಿಕ್ಷಕ, ಸಂಪಾದಕ ಮತ್ತು ಸಂಶೋಧಕರಾಗಿ ಕನ್ನಡ ನವೋದಯದ ಪೂರ್ವಭಾಗದಲ್ಲಿ ಮಹತ್ವದ ಸೇವೆಸಲ್ಲಿಸಿದವರು. ಹಸ್ತಪ್ರತಿಗಳ ಯುಗದಿಂದ ಮುದ್ರಣ ಯುಗಕ್ಕೆ ಕನ್ನಡ ಸಾಹಿತ್ಯವನ್ನು ಸುರಕ್ಷಿತವಾಗಿ ಸಾಗಿಸಿದ ಸದ್ದಿಲ್ಲದ ಸಾಧಕರಲ್ಲಿ ಪ್ರಮುಖರು.

ಎಸ್.ಜಿ. ನರಸಿಂಹಾಚಾರ್ಯರು ೧೧ ಸೆಪ್ಟೆಂಬರ್ ೧೮೬೨ರಂದು ಮೈಸೂರು ಜಿಲ್ಲೆಯ ಐತಿಹಾಸಿಕ ನಗರವಾದ ಶ್ರೀರಂಗ ಪಟ್ಟಣದಲ್ಲಿ ಜನಿಸಿದರು. ಇವರದು ಶ್ರೀವೈಷ್ಣವ ಸಂಪ್ರದಾಯದ ಕುಟುಂಬವಾಗಿತ್ತು. ತಂದೆ ಅಳಸಿಂಗರಾಚಾರ್ಯರು ಭಗವದ್ಭಕ್ತರು, ಪಂಡಿತರು, ಆಯುರ್ವೇದಜ್ಞಾನ ಹೊಂದಿದವರು. ಇವರು ನರಸಿಂಹಸ್ವಾಮಿ ದೇವಾಲಯದಲ್ಲಿ ಕೈಂಕರ್ಯ ನಿರ್ವಹಿಸು ತ್ತಿದ್ದರು. ತಾಯಿ ಸೀತಮ್ಮ ಧಾರ್ಮಿಕ, ಸಂಸ್ಕಾರವಂತ ಮಹಿಳೆ. ಕುಟುಂಬದಲ್ಲಿ ಭಕ್ತಿ, ಶಾಸ್ತ್ರಪರಂಪರೆ, ಅತಿಥಿಸತ್ಕಾರ ಇವುಗಳು ಜೀವನ ಪದ್ಧತಿಯಾಗಿದ್ದುವು. ಚಿಕ್ಕವಯಸ್ಸಿನಲ್ಲೇ ತಂದೆಯನ್ನು ಕಳೆದುಕೊಂಡರು. ಈ ದುಃಖಕರ ಘಟನೆ ಅವರ ಜೀವನದಲ್ಲಿ ಸಂಕಷ್ಟ ತಂದರೂ ಕುಟುಂಬದ ವಿದ್ಯಾಸಂಸ್ಕಾರ ಮತ್ತು ಆತ್ಮಸ್ಥೈರ್ಯವು ಅವರನ್ನು ಅಧ್ಯಯನದ ದಾರಿಯಲ್ಲಿ ಮುನ್ನಡೆಸಿತು.

ನರಸಿಂಹಾಚಾರ್ಯರ ಪ್ರಾಥಮಿಕ ವಿದ್ಯಾಭ್ಯಾಸ ಶ್ರೀರಂಗಪಟ್ಟಣದಲ್ಲಿ ನಡೆಯಿತು. ಅನಂತರ ಅವರು ಮೈಸೂರಿಗೆ ತೆರಳಿ ಉನ್ನತ ಶಿಕ್ಷಣ ಪಡೆದರು. ಅವರು ಬಿ.ಎ. ಪದವಿ ಪಡೆದಿದ್ದರು ಎಂಬುದು ದಾಖಲೆಗಳಿಂದ ತಿಳಿದುಬರುತ್ತದೆ. ಸಂಸ್ಕೃತ ಸಾಹಿತ್ಯ, ಕನ್ನಡ ಶಾಸ್ತ್ರೀಯ ಕಾವ್ಯ, ಇಂಗ್ಲಿಷ್ ಭಾಷೆ ಮತ್ತು ಸಾಹಿತ್ಯ ಅವರ

ಅಧ್ಯಯನ ಕ್ಷೇತ್ರಗಳು. ಸಂಸ್ಕೃತ, ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಅವರಿಗೆ ಸಮಾನ ಪಾಂಡಿತ್ಯ ಇತ್ತು.

ಆ ಕಾಲದಲ್ಲಿ ಮೈಸೂರು ರಾಜ್ಯವು ಶಿಕ್ಷಣ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿತ್ತು. ಶಿಕ್ಷಣತಜ್ಞರಾದ ಬಿ. ಎಲ್. ರೈಸ್ ಮತ್ತು ಕೆ. ಶೇಷಾದ್ರಿ ಅಯ್ಯರ್ ಮೊದಲಾದವರ ಪ್ರಭಾವದಿಂದ ವಿದ್ಯಾ ವಾತಾವರಣ ಸಮೃದ್ಧವಾಗಿತ್ತು. ಈ ಹಿನ್ನೆಲೆ ನರಸಿಂಹಾಚಾರ್ಯರ ಸಂಶೋಧನ ಮನೋಭಾವ ಮತ್ತು ಸಾಹಿತ್ಯಾಸಕ್ತಿಯನ್ನು ಮತ್ತಷ್ಟು ವಿಸ್ತರಿಸಿತು. ಆ ಕಾಲದಲ್ಲಿ ಮೈಸೂರು ರಾಜ್ಯದಲ್ಲಿ ಶೈಕ್ಷಣಿಕ ವಾತಾವರಣ ಉತ್ತಮವಾಗಿತ್ತು.

ನರಸಿಂಹಾಚಾರ್ಯರ ಸಂಸ್ಕೃತ ಅಧ್ಯಯನಕ್ಕೆ ಪೆರಿಯಸ್ವಾಮಿ ತಿರುಮಲಾಚಾರ್ಯರು ಗುರುಗಳಾಗಿ ಇದ್ದರೆಂದು ತಿಳಿದುಬರುತ್ತದೆ. ಅವರು ಪಾಂಡಿತ್ಯಪೂರ್ಣ ಸಂಸ್ಕೃತ ಪರಂಪರೆಯಡಿ ಶಾಸ್ತ್ರಾಭ್ಯಾಸ ಮಾಡಿದ್ದರು. ಅವರ ಸುತ್ತಮುತ್ತಲಿನ ಪಾಂಡಿತ್ಯ ವಲಯವು ಕನ್ನಡ ನವೋದಯದ ಮುಂಚೂಣಿ ವಲಯವಾಗಿತ್ತು. ಸ್ವಾಮಿ ವಿವೇಕಾನಂದರ ಸಾಕ್ಷಾತ್ ಶಿಷ್ಯರಾಗಿ ಅವರೊಂದಿಗೆ ಕೊಂಚಕಾಲ ದೇಶಸಂಚಾರ ಮಾಡಿದ ಎಸ್.ಜಿ. ನರಸಿಂಹಾಚಾರ್ಯರು, ನಾಟಕಶಿರೋಮಣಿ ವರದಾ ಚಾರ್ಯರು, ಪ್ರಖ್ಯಾತ ಕಾದಂಬರಿಕಾರ ಬಿ. ವೆಂಕಟಾಚಾರ್ಯರು, ಕರ್ಣಾಟಕ ಕಾವ್ಯಮಂಜರಿಯ ಪ್ರವರ್ತಕರಲ್ಲಿ ಒಬ್ಬರಾದ ಎಂ.ಎ. ರಾಮಾನುಜಯ್ಯಂಗಾರ್, ಕರ್ಣಾಟಕ ಗ್ರಂಥಮಾಲೆ ಮತ್ತು ವಿದ್ಯಾದಾಯಿನಿ ಪತ್ರಿಕೆಗಳ ಪ್ರವರ್ತಕರಾಗಿಯೂ ಹಿಂದಿನ ಮೈಸೂರು ಸಂಸ್ಥಾನದಲ್ಲಿ ವಿದ್ಯಾಧಿಕಾರಿಗಳಾಗಿಯೂ ಇದ್ದ ಎಂ. ಶಾಮರಾಯರು, 'ಕರ್ಣಾಟಕ ಭಾಷಾ ವ್ಯಾಕರಣೋಪನ್ಯಾಸ ಮಂಜರಿ' ಕರ್ತೃಗಳಾದ ರಾ. ರಘುನಾಥರಾಯರು ಮೊದಲಾದವರ ನಿಕಟಸಂಪರ್ಕವನ್ನು ಎಸ್. ಜಿ. ನ. ಪಡೆದಿದ್ದರು.

ಎಸ್.ಜಿ. ನರಸಿಂಹಾಚಾರ್ ಎಂ.ಎ. ರಾಮಾನುಜಯ್ಯಂಗಾರ್ ಅವರದು ಒಂದು ಖ್ಯಾತಿಯ ಜೋಡಿ. ಇಬ್ಬರೂ ತಮಿಳು ಮನೆತನದ ಶ್ರೀವೈಷ್ಣವ ಪಂಥೀಯರು; ಒಂದೇ ಜಿಲ್ಲೆಯ ಸಾಹಿತಿಗಳು, ಹುಟ್ಟಿದ ವರ್ಷವೂ ಒಂದೇ ೧೮೬೨, ಇಬ್ಬರ ವಿದ್ಯಾಭ್ಯಾಸವೂ ಅವರ ಹುಟ್ಟುಜಿಲ್ಲೆಯಲ್ಲಿ ಹಾಗೂ ಮೈಸೂರು ನಗರದಲ್ಲಿ ನಡೆಯಿತು. ಇಬ್ಬರಿಗೂ ಸಂಸ್ಕೃತ ಕಲಿಸಿದವರು ಒಬ್ಬರೇ ಗುರುಗಳು; ಅವರು ಸದ್ವಿದ್ಯಾಪಾಠಶಾಲೆಯ ಸ್ಥಾಪಕರೂ ತಮ್ಮ ಕಾಲದ ಹಿರಿಯ ವಿದ್ವಾಂಸರೂ

ಆಗಿದ್ದ ಪೆರಿಯಸ್ವಾಮಿ ತಿರುಮಲಾಚಾರರು. ಇಷ್ಟು ಮಾತ್ರವಲ್ಲದೆ ಇಬ್ಬರೂ ಹಿಂದಿನ ಮೈಸೂರು ಸರ್ಕಾರದ ವಿದ್ಯಾ ಇಲಾಖೆಯಲ್ಲಿಯೂ ಅದರ ಶಾಖೆಯಾದ ಭಾಷಾಂತರ ಇಲಾಖೆಯಲ್ಲಿಯೂ ಕೆಲಸಮಾಡಿದವರು: ಅಂದಿನ ಶಿಕ್ಷಣ ಸಂಪ್ರದಾಯಕ್ಕೆ ಅನುಗುಣವಾಗಿ ಸಂಸ್ಕೃತ ಕನ್ನಡಗಳಲ್ಲಿಯೂ ಇಂಗ್ಲಿಷ್ ಭಾಷೆಯಲ್ಲಿಯೂ ಸಮದಂಡಿಯಾದ ಪರಿಚಯ ಪ್ರಭುತ್ವಗಳನ್ನು ಸಂಪಾದಿಸಿ ಒಟ್ಟಿಗೆ ಸಾಹಿತ್ಯಕೃಷಿಗೆ ತೊಡಗಿದವರು.

ಇವರ ಸ್ನೇಹ–ಸಾಹಚರ್ಯಗಳು ಹೆಚ್ಚು ನಿಕಟವಾಗಲು ಇವಕ್ಕಿಂತ ಹೆಚ್ಚಿನ ಸಾಮ್ಯಗಳು ಇನ್ನೇನು ಬೇಕು? ಎಫ್. ಕಿಟ್ಟೆಲ್, ಬಿ.ಎಲ್. ರೈಸ್ ಅವರು ಹಾಕಿಕೊಟ್ಟ ಮೇಲ್ಪಂಕ್ತಿಯನ್ನು ಹಿಡಿದು ಗ್ರಂಥಸಂಪಾದನೆಯ ಕ್ಷೇತ್ರದಲ್ಲಿ ಮುನ್ನಡೆದ ಈ ಧುರೀಣರು ಪ್ರಾಚೀನ ಕನ್ನಡ ಸಾಹಿತ್ಯದ ಸಂರಕ್ಷಣೆ ಪ್ರಕಟನೆಗಳ ಸಲುವಾಗಿ ಮಾಡಿರುವ ಕೆಲಸ ಅನನ್ಯವಾದುದು, ಅದ್ಭುತವಾದುದು. "ಕನ್ನಡ ಗ್ರಂಥ ಸಂಪಾದನೆಯ ಚರಿತ್ರೆಯಲ್ಲಿ ಮಾಸದ ಪ್ರಕಾಶದಿಂದ ತೊಳಗುತ್ತಿರುವ ಎರಡು ಪ್ರಥಮವರ್ಗದ ತಾರೆಗಳು ಎಂದರೆ ಎಸ್. ಜಿ. ನರಸಿಂಹಾಚಾರ್ಯರು ಮತ್ತು ಎಂ. ಎ. ರಾಮಾನುಜಯ್ಯಂಗಾರರು... ಇಂಗ್ಲಿಷಿಗೇ ಪ್ರಾಶಸ್ತ್ಯ ಇದ್ದ ಆ ಕಾಲದಲ್ಲಿ ಸರ್ಕಾರದ ಪ್ರೋತ್ಸಾಹವಾಗಲಿ ಸಾರ್ವಜನಿಕರ ಉತ್ಸಾಹವಾಗಲಿ ಸಾಕಷ್ಟಿಲ್ಲದಿದ್ದಾಗ ಈ ಇಬ್ಬರು ಮಹಾವಿದ್ವಾಂಸರು ಮಾಡಿದ ಕೆಲಸದ ಮಹತ್ವವನ್ನು ಈಚಿನವರಾದ ನಾವು ಮನಗಾಣ ಬಹುದಾಗಿದೆ. ಇವರ ಕಾವ್ಯಲಾಲಸೆಯಲ್ಲಿ, ಭಾಷಾಪ್ರೇಮದಲ್ಲಿ ಸ್ವಲ್ಪಭಾಗವನ್ನಾದರೂ ನಾವು ಗಳಿಸಿಕೊಂಡರೆ ಕೃತಾರ್ಥರಾಗಬಹುದು" ಎಂಬುದಾಗಿ ಡಿ. ಎಲ್. ನರಸಿಂಹಾಚಾರ್ಯರು ಮೆಚ್ಚುನುಡಿಯಾಡಿರುವುದರಲ್ಲಿ ಅತಿಯೋಕ್ತಿ ಯೇನಿಲ್ಲ.

ಎಂ.ಎ. ರಾಮಾನುಜಯ್ಯಂಗಾರರು, ಆರ್. ನರಸಿಂಹಾಚಾರ್ಯರು, ಬಿ. ವೆಂಕಟಾಚಾರ್ಯರು, ಬಸವಪ್ಪ ಶಾಸ್ತ್ರಿ, ನಂಜನಗೂಡು ಸುಬ್ಬಾಶಾಸ್ತ್ರಿ, ಡಿ.ವಿ. ಗುಂಡಪ್ಪ ಮೊದಲಾದ ಮಹನೀಯರು ಇವರ ಆಪ್ತ ಸ್ನೇಹಕ್ಕೆ ಪಕ್ಕಾಗಿದ್ದರು. ಇವರಲ್ಲಿ ಹಲವರು ತಮ್ಮ ಕೃತಿಗಳ ಬಗೆಗೆ ನರಸಿಂಹಾಚಾರ್ಯರ ಅಭಿಪ್ರಾಯವನ್ನು ಕೇಳುತ್ತಿದ್ದರು. ಭಾಷೆ ಸಾಹಿತ್ಯಗಳ ವಿಷಯದಲ್ಲಿ ಎಸ್.ಜಿ.ನ. ಅವರ ಸಲಹೆ ಸೂಚನೆ ವಿಮರ್ಶೆಗಳಿಗೆ ಆ ಕಾಲದ ವಿದ್ವಾಂಸರು ತುಂಬ ಬೆಲೆಕೊಡುತ್ತಿದ್ದರು. ಹೀಗಾಗಿ ಅವರು ಅನೇಕ ಪಂಡಿತರಿಗೆ ಮೌನ ಗುರುಗಳಾಗಿದ್ದರು. ಇದರಿಂದ ಅವರು 'ಪಂಡಿತರ ಪಂಡಿತ' ಎಂಬ ಗೌರವಕ್ಕೂ ಪಾತ್ರರಾದರು.

ನರಸಿಂಹಾಚಾರ್ಯರ ಔದ್ಯೋಗಿಕ ಜೀವನವು ಅವರ ಕನ್ನಡ ಸೇವೆಗೆ ಪೂರಕವಾಗಿತ್ತು. ೧೮೮೭ರಲ್ಲಿ ಮೈಸೂರು ಸರ್ಕಾರದ ಶಿಕ್ಷಣ ಇಲಾಖೆಯಲ್ಲಿ ಅವರು ಸೇವೆ ಪ್ರಾರಂಭಿಸಿದರು. ಅನಂತರ ಮೈಸೂರು ಓರಿಯೆಂಟಲ್ ಲೈಬ್ರರಿಯಲ್ಲಿ ಪಂಡಿತರಾಗಿ, ಅನಂತರ ಗ್ರಂಥಪಾಲಕರಾಗಿ, ಬಳಿಕ ಮೈಸೂರು ಸರ್ಕಾರದ ಕನ್ನಡ ಭಾಷಾಂತರಕಾರರಾಗಿ ಸೇವೆಯನ್ನು ಸಲ್ಲಿಸಿದರು. ಆಡಳಿತ ಸಂಬಂಧಿತ ದಾಖಲೆಗಳ ಕನ್ನಡಾನುವಾದ ಕಾರ್ಯಗಳನ್ನು ನಿರ್ವಹಿಸಿದರು. ಈ ಕೆಲಸದ ಮೂಲಕ ಅವರು ಕನ್ನಡ ಭಾಷೆಯ ಆಡಳಿತಪರ ಬಳಕೆಗೆ ಸಹ ಕೊಡುಗೆ ನೀಡಿದರು. ಈ ಹುದ್ದೆಗಳು ಕೇವಲ ಆಡಳಿತಪದವಿಗಳಲ್ಲ; ಅವು ಕನ್ನಡ ಸಾಹಿತ್ಯಸೇವೆ ಮಾಡಲು ಅವರಿಗೆ ದೊರೆತ ವೇದಿಕೆಗಳಾಗಿ ಮಾರ್ಪಟ್ಟವು.

ಗ್ರಂಥಸಂಪಾದನೆಯು ಎಸ್.ಜಿ. ನರಸಿಂಹಾಚಾರ್ಯರ ಜೀವನಸಾಧನೆಯ ಮಹತ್ತ್ವದ ಭಾಗವೆನ್ನಬಹುದು. ಕನ್ನಡ ಪ್ರಾಚೀನ ಗ್ರಂಥಗಳ ವೈಜ್ಞಾನಿಕ ಸಂಪಾದನೆಯು ಕನ್ನಡ ಸಾರಸ್ವತ ಲೋಕಕ್ಕೆ ನರಸಿಂಹಾಚಾರ್ಯರು ನೀಡಿದ ಅತ್ಯಂತ ಮಹತ್ವದ ಕೊಡುಗೆಯಾಗಿದೆ. ಪಂಪನ 'ಆದಿಪುರಾಣ' (೧೯೦೦) ಮೈಸೂರು ಓರಿಯೆಂಟಲ್ ಲೈಬ್ರರಿಯ ಮೊದಲ ಕನ್ನಡ ಪ್ರಕಟನೆ. ಹಸ್ತಪ್ರತಿಗಳ ಹೋಲಿಕೆ, ಪಾಠಭೇದ ಪರಿಶೀಲನೆ, ಉಪೋದ್ಘಾತ ರಚನೆ – ಇವೆಲ್ಲವೂ ಆಧುನಿಕ ಸಂಶೋಧನ ವಿಧಾನಗಳನ್ನು ಪ್ರತಿಬಿಂಬಿಸುತ್ತವೆ. ರುದ್ರಭಟ್ಟನ 'ಜಗನ್ನಾಥವಿಜಯ' (೧೯೦೪) ಈ ಕೃತಿಯೂ ವಿಮರ್ಶಾತ್ಮಕ ಸಂಪಾದನೆಯ ಮಾದರಿಯಾಗಿದೆ. ಈ ಪ್ರಕಟನೆಗಳು ಕನ್ನಡ ಗ್ರಂಥಸಂಪಾದನಾ ಇತಿಹಾಸದಲ್ಲಿ ಮೈಲುಗಲ್ಲುಗಳಾಗಿವೆ.

ಎಸ್.ಜಿ. ನರಸಿಂಹಾಚಾರ್ಯರು ಸ್ವತಂತ್ರವಾಗಿ ರಚಿಸಿದ ಹಾಗೂ ಅನುವಾದಿಸಿದ ಕಾವ್ಯಾನುವಾದ ಗ್ರಂಥಗಳಲ್ಲಿ ದೊರೆಯುತ್ತಿರುವ ಗ್ರಂಥಗಳಿಗಿಂತ ದೊರೆಯದಿರುವ ಗ್ರಂಥಗಳೇ ಹೆಚ್ಚು. 'ಪ್ರೋಷಿತಪ್ರಿಯಸಮಾಗಮಂ' (೧೮೯೩) ೧೯೧೧), 'ದಿಲೀಪ ಚರಿತೆ' (೧೮೯೭), 'ಅಲ್ಲಾವುದ್ದೀನ್ ಮತ್ತು ಅದ್ಭುತದೀಪ' (೧೮೯೯); 'ಅಜನೃಪಚರಿತೆ' (೧೯೦೦), 'ಉತ್ತರ ರಾಮಚರಿತಂ' (೧೯೦೦–೦೧), 'ಭಾರತವೀರಚರಿತೆ' (೨ನೆಯ ಮುದ್ರಣ ೧೯೨೬; ೩ನೆಯ ಮುದ್ರಣ ೧೯೩೬) ಕೃತಿಗಳು ದೊರೆತರೆ, 'ಗಲಿವರನ ದೇಶಸಂಚಾರ', 'ಈಸೋಪನ ನೀತಿಕಥೆಗಳು', 'ಗಯ್ಯಾಳಿಯನ್ನು ಸಾಧುಮಾಡುವಿಕೆ', 'ಭಾರವಿ' 'ಮುಕುಂದಮಾಲೆ' ಇವು ದೊರಕುತ್ತಿಲ್ಲ. ನರಸಿಂಹಾಚಾರ್ಯರು ಸ್ವತಃ ಕವಿಯೂ ಆಗಿದ್ದರು. 'ದಿಲೀಪ ಚರಿತೆ',

(ಕಾಳಿದಾಸನ ರಘುವಂಶದ ಮೊದಲ ಎರಡು ಸರ್ಗಗಳ ಅನುವಾದ). 'ಅಜ ನೃಪಚರಿತೆ', (ರಘುವಂಶದ ಅಜನ ಕಥೆಯನ್ನು ಆಧರಿಸಿದ ಕೃತಿ). 'ಪ್ರೋಷಿತಪ್ರಿಯ ಸಮಾಗಮಂ' (ಸಂಸ್ಕೃತ ಕಾವ್ಯ ಶೈಲಿಯ ಕನ್ನಡ ರೂಪಾಂತರ). ಶೈಕ್ಷಣಿಕ ಕೃತಿಗಳು ಕನ್ನಡ ಳನೇ ಮತ್ತು ೬ನೇ ಪುಸ್ತಕಗಳು (ಅಂದಿನ ಮೈಸೂರು ರಾಜ್ಯದ ಶಾಲಾ ಪಠ್ಯಪುಸ್ತಕಗಳು). ಆರ್. ನರಸಿಂಹಾಚಾರ್ಯರೊಂದಿಗೆ ಸೇರಿ 'ಕರ್ಣಾಟಕ ಕವಿ ಚರಿತೆ' ಮೊದಲ ಸಂಪುಟದ ರಚನೆಯಲ್ಲಿ ಪಾಲ್ಗೊಂಡರು. ಕವಿಗಳ ಜೀವನ ಮತ್ತು ಕೃತಿವಿಮರ್ಶೆಗೆ ಸಂಬಂಧಿಸಿದ ಸಂಶೋಧನ ಮಾಹಿತಿ ಒದಗಿಸಿದರು. ಅವರ ಕಾವ್ಯಗಳಲ್ಲಿ ಸಂಸ್ಕೃತ ಕಾವ್ಯದ ಶೈಲೀಶುದ್ಧತೆ ಮತ್ತು ಕನ್ನಡದ ಸರಳತೆಯ ಸಂಯೋಜನೆ ಕಂಡುಬರುತ್ತದೆ.

ಎಸ್.ಜಿ. ನರಸಿಂಹಾಚಾರ್ಯರು ಸೌಜನ್ಯ, ಮೈತ್ರಿಗಳಿಂದ ಮಿತ್ರಗೋಷ್ಠಿ ಯಲ್ಲಿ ಎಲ್ಲರಿಗೂ ಬೇಕಾದವರಾಗಿದ್ದರು. ಕಾವ್ಯ ಲಕ್ಷಣ, ಕವಿಕಥೆ, ದೇಶದ ಚರಿತ್ರೆ, ಮತತತ್ತ್ವ, ಸಮಾಜಶುದ್ಧಿ ಮೊದಲಾದವನ್ನು ಕುರಿತು ಚರ್ಚಿಸುತ್ತಿದ್ದರು. ಸಂಭಾಷಣೆಯಲ್ಲಿ ಸರಸರೂ ಕುಶಲಿಗಳೂ ಆಗಿದ್ದರು ಎಂದು ತಿಳಿಯುವುದು. ಪ್ರಾಣಿದಯೆ, ಕಷ್ಟಸಹಿಷ್ಣುತೆ, ರಾಜಭಕ್ತಿ ಅವರಲ್ಲಿ ಸಹಜವಾಗಿದ್ದುವು. ಕಾಲದ ಸದ್ವಿನಿಯೋಗದ ವಿಷಯದಲ್ಲಿ ಅವರಲ್ಲಿ ತುಂಬ ಎಚ್ಚರವಿದ್ದಿತು. ಕೀಳು ವಿನೋದಗಳಲ್ಲಿ ದ್ಯೂತಮದ್ಯಪಾನಗಳಲ್ಲಿ ಕಾಲವನ್ನು ಕಳೆಯದೆ, ದೊಡ್ಡ ವಿಷಯಕ್ಕೆ ಮನಸ್ಸು ಮಾಡುವ ಅಭ್ಯಾಸವನ್ನು ಚಿಕ್ಕಂದಿನಿಂದಲೇ ರೂಢಿಸಿಕೊಳ್ಳಬೇಕು, ತೆರೆದಿಟ್ಟ ಪುಸ್ತಕದಂತಿರುವ ಪ್ರಕೃತಿಯ ವೈಭವವನ್ನು ನೋಡಿ ನಲಿಯಲೂ ವಿಶ್ಲೇಷಿಸಲೂ ಪ್ರಯತ್ನಿಸಬೇಕು. ಇದು ಕಷ್ಟವಾದರೆ ಮಿತ್ರಗೋಷ್ಠಿಯಲ್ಲಿ ವನಭೋಜನಾದಿಗಳಲ್ಲಿ ಸಂತೋಷಪಟ್ಟರೂ ಸಾಕು–ಎಂಬುದಾಗಿ ಅವರು ಹೇಳುತ್ತಿದ್ದರೆಂದು ಅವರೊಂದಿಗಿನ ಒಂದು ಸಂಭಾಷಣೆಯನ್ನು ಡಿ.ವಿ.ಜಿ ನೆನಪುಮಾಡಿಕೊಂಡಿದ್ದಾರೆ. 'ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀ', 'ಕಾಲದ ಬೆಲೆ', 'ಗೋವಿನ ಚರಿತ್ರೆ', 'ಚಾಮರಾಜೇಂದ್ರ ಮರಣವಾರ್ತೆ', 'ನಾಲ್ವಡಿ ಕೃಷ್ಣರಾಜ ಒಡೆಯರವರ ಪಟ್ಟಾಭಿಷೇಕ ಮಹೋತ್ಸವ', 'ಬಿಡುವು' ಇಂತಹ ಕೆಲವೇ ಕವಿತೆಗಳನ್ನು ಗಮನಿಸಿದರೂ ಎಸ್.ಜಿ. ನರಸಿಂಹಾಚಾರ್ಯರು ಮತ್ತು ಅವರ ಮನೋಧರ್ಮದ ಲಹರಿ ನಮಗೆ ತಿಳಿಯುತ್ತದೆ. ಎಸ್.ಜಿ. ನರಸಿಂಹಾಚಾರ್ಯರು ಸಂಪ್ರದಾಯ–ಆಧುನಿಕತೆ, ಸರಸತೆ–ಪಾಂಡಿತ್ಯ, ವಿಜ್ಞಾನ–ಸಾಹಿತ್ಯಗಳನ್ನು ಮೈಗೂಡಿಸಿ ಕೊಂಡಿದ್ದ

ಪುಣ್ಯಶಾಲಿಗಳು ಹಾಗೂ ಹೊಸಗನ್ನಡ ಸಾಹಿತ್ಯದ ಕಣ್ಮಣಿಗಳು ಆಗಿದ್ದರೆಂಬುದು ತಿಳಿಯುತ್ತದೆ.

ಎಂ.ಎ. ರಾಮಾನುಜಯ್ಯಂಗಾರರೊಂದಿಗೆ ಅವರು ೧೮೯೨ರಲ್ಲಿ 'ಕರ್ಣಾಟಕ ಕಾವ್ಯಮಂಜರಿ' ಪತ್ರಿಕೆಯನ್ನು ಆರಂಭಿಸಿದರು. ಅನಂತರ 'ಕರ್ಣಾಟಕ ಕಾವ್ಯಕಲಾನಿಧಿ' ಮಾಲೆಯೂ ಪ್ರಾರಂಭವಾಯಿತು. ಇವರ ಈ ಪ್ರಕಟನ ಕಾರ್ಯಗಳ ಮೂಲಕ ಸುಮಾರು ೪೦ಕ್ಕೂ ಹೆಚ್ಚು ಪ್ರಾಚೀನ ಕೃತಿಗಳು ಬೆಳಕಿಗೆ ಬಂದುವು. ಮಧ್ಯಕಾಲೀನ ಕನ್ನಡ ಸಾಹಿತ್ಯ ಮರುಜೀವ ಪಡೆಯಿತು. ಪಂಡಿತ ಸಂಪ್ರದಾಯ ದಿಂದ ಜನಸಾಮಾನ್ಯರ ವಾಚನಲೋಕಕ್ಕೆ ಕನ್ನಡ ಸಾಹಿತ್ಯ ಪ್ರವೇಶಿಸಿತು.

ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಎಸ್.ಜಿ. ನರಸಿಂಹಾಚಾರ್ಯರು ಕನ್ನಡ ಶಿಕ್ಷಣ ವ್ಯವಸ್ಥೆಯು ರೂಪುಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸಿದರು. 'ಕನ್ನಡ ನಾಲ್ಕನೆಯ ಪುಸ್ತಕ' (೧೮೯೭) 'ಕನ್ನಡ ಆರನೆಯ ಪುಸ್ತಕ' (೧೯೦೨) ಪಠ್ಯಪುಸ್ತಕ ರಚನೆಗೆ ಸಹಕಾರ ನೀಡಿದರು. ಪಠ್ಯನಿಯಾಮಕ ಸಮಿತಿಗಳ ಸದಸ್ಯರಾಗಿದ್ದರು. ಪರೀಕ್ಷಕರಾಗಿ ಸೇವೆ ಸಲ್ಲಿಸಿದರು. ತಮ್ಮ ಕಾಲದ ಹಳೆಯ ಮೈಸೂರು ಸಂಸ್ಥಾನದಲ್ಲಿ ಕನ್ನಡ ಭಾಷೆ ಸಾಹಿತ್ಯಗಳ ಅಭಿವೃದ್ಧಿಗಾಗಿ ಏರ್ಪಟ್ಟ ಸಮಿತಿಗಳಲ್ಲಿಯೂ ಪಠ್ಯನಿಯಾಮಕ ಸಮಿತಿಗಳಲ್ಲಿಯೂ ವಿವಿಧ ಮಟ್ಟದ ಪರೀಕ್ಷಾಮಂಡಲಿಗಳಲ್ಲಿಯೂ ಎಸ್.ಜಿ. ನರಸಿಂಹಾಚಾರ್ಯರು ಸಕ್ರಿಯವಾಗಿ ಪಾಲು ಗೊಂಡಿದ್ದರು.

ಕನ್ನಡ ಪಂಡಿತ ಸಂಪ್ರದಾಯಕ್ಕೆ ಮಹತ್ವದ ಕೊಡುಗೆ ನೀಡಿರುವ ಇವರು, ಹಸ್ತಪ್ರತಿ ಸಂಗ್ರಹ, ಪಾಠನಿರ್ಣಯ, ಉಪೋದ್ಘಾತ ರಚನೆ, ಶಾಸ್ತ್ರೀಯ ಸಂಪಾದನಾ ವಿಧಾನದಲ್ಲಿ ಅಪಾರ ಪರಿಣತಿಯನ್ನು ಸಾಧಿಸಿದ್ದರು. ಪಂಡಿತವಲಯದಲ್ಲಿ ಅಪಾರ ಗೌರವವನ್ನು ಹೊಂದಿದ್ದ ಶ್ರೀಯುತರಿಗೆ ಹಲವಾರು ಗೌರವ ಮತ್ತು ಪುರಸ್ಕಾರಗಳು ಲಭಿಸಿವೆ. ಧಾರವಾಡದಲ್ಲಿ ನಡೆದ ಕರ್ಣಾಟಕ ಗ್ರಂಥಕಾರರ ಪ್ರಥಮ ಸಮ್ಮೇಳನದ ಅಧ್ಯಕ್ಷತೆಯ ಗೌರವ ಇವರಿಗೆ ಸಂದಿದೆ (೧೯೦೭).

ನರಸಿಂಹಾಚಾರ್ಯರು ಭಾಷಾಸಾಹಿತ್ಯಗಳ ಸೇವೆಯನ್ನು ಅವಿಶ್ರಾಂತವಾಗಿ ಕೈಕೊಂಡವರು. ಅವರು ತಮ್ಮ ೪೫ ವರ್ಷ ವಯಸ್ಸಿನಲ್ಲಿಯೇ ಡಿಸೆಂಬರ್ ೨೨, ೧೯೦೭ ರಂದು ಬೆಂಗಳೂರಿನಲ್ಲಿ ನಿಧನರಾದರು.

❐ ❐ ❐

ಶಿವಶಂಕರಶಾಸ್ತ್ರೀ

(೧೮೬೪-೧೯೪೨)

ಗೀತಾ ನಾವಲ್

ಆಧುನಿಕ ಕನ್ನಡ ಸಾರಸ್ವತ ಲೋಕದ ಪೂರ್ವಪಂಡಿತ ಮಾನ್ಯರನ್ನು ಸ್ಮರಿಸುವಾಗ, ಭಾರತ ಸರಕಾರದಿಂದ 'ಮಹಾ ಮಹೋಪಾಧ್ಯಾಯ'ರೆಂದು ಬಿರುದಾಂಕಿತರಾದ ಶಿವಶಂಕರಶಾಸ್ತ್ರೀ ಅವರನ್ನು ವಿಶೇಷ ಕಾರಣಗಳಿಂದ ನೆನಪಿಸಿಕೊಳ್ಳಬೇಕು. ಸಂಸ್ಕೃತ ಮತ್ತು ಕನ್ನಡ ಉಭಯಭಾಷಾ ಸಾಹಿತ್ಯಗಳಲ್ಲಿ ಅನೇಕ ಅಪೂರ್ವ ಕೃತಿಗಳನ್ನು ರಚಿಸಿರುವ ಶಾಸ್ತ್ರಿಗಳು ಶಾಸ್ತ್ರೀಯ ಗ್ರಂಥಗಳ ಶೋಧನ, ಸಂಪಾದನ ಮತ್ತು ಪರಿಷ್ಕರಣ ಕಾರ್ಯಗಳಲ್ಲಿ ಗಂಭೀರವಾಗಿ ತೊಡಗಿಸಿಕೊಂಡವರು. ಜ್ಯೋತಿಷ, ಗಣಿತ, ಖಗೋಳಶಾಸ್ತ್ರ, ತತ್ತ್ವಶಾಸ್ತ್ರ ಮೊದಲಾದ ವಿಷಯಗಳಲ್ಲಿ ಆಳವಾಗಿ ಅಧ್ಯಯನ ಮಾಡಿದ್ದರಿಂದಲೂ ಆ ವಿಷಯಗಳನ್ನು ಕುರಿತ ಸ್ಥಾಪಿತ ತೀರ್ಮಾನಗಳನ್ನು ತರ್ಕಬದ್ಧವಾಗಿ ವಿವೇಚಿಸುವ ಜ್ಞಾನದಿಂದಲೂ ಅವರನ್ನು 'ಸಿದ್ಧಾಂತಿ'ಗಳೆಂಬ ಗೌರವನಾಮದಿಂದಲೇ ಸ್ಮರಿಸುವುದು ವಾಡಿಕೆ. ಅವರ ತಂದೆ ಸುಬ್ರಹ್ಮಣ್ಯಶಾಸ್ತ್ರಿಯವರೂ ಉಭಯಭಾಷಾಪಂಡಿತರೂ ಸಿದ್ಧಾಂತಿಗಳೂ ಆಗಿದ್ದವರು. ಮೂಲತಃ ಆಂಧ್ರದಿಂದ ವಲಸೆಬಂದ ಇವರು ತೆಲುಗು ಮನೆಮಾತಿನ ವೆಲನಾಡು ಉಪಪಂಗಡದ, ಅದ್ವೈತ ಬ್ರಾಹ್ಮಣ ಕುಟುಂಬಕ್ಕೆ ಸೇರಿದವರು. ತಂದೆ ಮಕ್ಕಳಿಬ್ಬರೂ ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಕನ್ನಡ ಪಂಡಿತರಾಗಿ ಸೇವೆ ಸಲ್ಲಿಸಿದವರು. ಬಹುಗ್ರಂಥಕರ್ತರೂ ಉದ್ದಾಮ ಪಂಡಿತರೂ ಗ್ರಂಥಪರಿಷ್ಕರಣ ಕ್ಷೇತ್ರದಲ್ಲಿ ನಿಸ್ಸೀಮರೂ ಎಂದು ಖ್ಯಾತರಾಗಿದ್ದ ಸುಬ್ರಹ್ಮಣ್ಯಶಾಸ್ತ್ರಿಗಳ ಸಾಮರ್ಥ್ಯಗಳನ್ನೆಲ್ಲ ಬಟ್ಟಿ ಯಿಳಿಸಿಕೊಂಡಂತಿದ್ದವರು ಶಿವಶಂಕರಶಾಸ್ತ್ರಿಗಳು. ಕನ್ನಡ ಮತ್ತು ಸಂಸ್ಕೃತ ಸಾಹಿತ್ಯಗಳ ಆಳವಾದ ಅಧ್ಯಯನ ಹಾಗೂ ದೀರ್ಘಕಾಲದ ಅಧ್ಯಾಪನಗಳಿಂದ ರೂಢಿಸಿಕೊಂಡ ಜ್ಞಾನದಿಂದ ಕನ್ನಡ ಸಾಹಿತ್ಯ ಕ್ಷೇತ್ರಕ್ಕೂ ಸಂಸ್ಕೃತಕ್ಕೂ ಅವರು ನೀಡಿದ ಕೊಡುಗೆ ಅನನ್ಯವಾದದ್ದು. ಅನೇಕ ಸಂಸ್ಕೃತ

ಗ್ರಂಥಗಳನ್ನೂ ಕಾವ್ಯ ನಾಟಕಗಳನ್ನೂ ಕನ್ನಡಕ್ಕೆ ಅನುವಾದಿಸಿರುವುದಲ್ಲದೆ ಸ್ವತಂತ್ರ ರಚನೆಗಳಲ್ಲೂ ಸಕ್ರಿಯರಾದದ್ದು ವಿಶೇಷ. ಇಂದಿನಂತೆ ಗ್ರಂಥ ಪ್ರಕಟನೆ ಸಾಧ್ಯವಾಗದ ಹಾಗೂ ಯಾವುದೇ ರೀತಿಯ ಆಧುನಿಕ ಸೌಲಭ್ಯಗಳಿಲ್ಲದಿದ್ದ ಕಾಲದಲ್ಲೂ ಧೃತಿಗೆಡದೆ ಗ್ರಂಥಗಳನ್ನು ಅವರು ಮದರಾಸಿನಲ್ಲಿದ್ದ ತಮ್ಮದೇ 'ವಸುಮತಿ ಪ್ರೆಸ್' ಮೂಲಕ ಹೊರತಂದುದಲ್ಲದೆ, ಕೆಲವನ್ನು ಧಾರವಾಡ, ಬಳ್ಳಾರಿ, ಮೈಸೂರು ಗಳಲ್ಲಿಯೂ ಪ್ರಕಟಿಸಿದ್ದರು. ಆದರೆ ಅವುಗಳ ಪ್ರಾಮುಖ್ಯವನ್ನರಿತು ರಕ್ಷಿಸುವಲ್ಲಿ ಇದ್ದ ಅಸಮರ್ಪಕ ನಿರ್ವಹಣೆಯೋ, ಅಸೌಲಭ್ಯಗಳೋ ಕಾರಣವಾಗಿ ಅವು ಇಂದು ಲಭ್ಯವೂ ಇಲ್ಲ ಹಾಗೂ ಮರು ಪ್ರಕಟನೆಯ ಭಾಗ್ಯವನ್ನೂ ಕಾಣ ಲಾಗದಿರುವುದು ದುರದೃಷ್ಟದ ಸಂಗತಿ.

ಹತ್ತೊಂಬತ್ತನೇ ಶತಮಾನದ ಉತ್ತರಾರ್ಧದಲ್ಲಿ ಬೆಂಗಳೂರಿನಲ್ಲಿ ಜನಿಸಿದ ಶಿವಶಂಕರಶಾಸ್ತ್ರಿಗಳ ಪ್ರಾಥಮಿಕ ಶಿಕ್ಷಣ ತಂದೆಯವರಲ್ಲಿಯೇ ಆಯಿತು. ತದನಂತರ ಅವರು ಅತ್ಯಂತ ಸಣ್ಣವಯಸ್ಸಿನಲ್ಲಿಯೇ ಕೃತಿರಚನೆಗೆ ತೊಡಗಿದರು. ಅವರ ಮೊತ್ತಮೊದಲ ಕೃತಿ 'ಅನುತಾಪಿಕಾಪ್ರೇಕ್ಷಣಿಕ' ವು ರಚಿತವಾದದ್ದು ಅವರ ೧೩ನೇ ವಯಸ್ಸಿನಲ್ಲಿ. ಆ ಕಾಲಕ್ಕೆ ಕನ್ನಡವು ಸ್ಪಷ್ಟವಾಗಿ ಆಧುನಿಕ ಭಾಷಾಶೈಲಿಗೆ ಹೊರಳಿಕೊಂಡಿತ್ತು. ಮದರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲೂ ಪ್ರೆಸಿಡೆನ್ಸಿ ಕಾಲೇಜಿನಲ್ಲೂ ಸರಿಸುಮಾರು ೩೦ ವರ್ಷಗಳ ಕಾಲ ಕನ್ನಡ ಪಂಡಿತರಾಗಿ ಸೇವೆ ಸಲ್ಲಿಸಿದ ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳ ಬರೆಹಗಳು ಪ್ರಾಚೀನತೆಯತ್ತಲೇ ಹೆಚ್ಚು ಒಲಿದಿದ್ದುವು. ತಮ್ಮ ನಿವೃತ್ತಿಯ ಬಳಿಕ ಬೆಂಗಳೂರಿಗೆ ಬಂದು ನೆಲಸಿದ (೧೯೨೧) ಪೂರ್ವದಲ್ಲೇ ಅವರು ಹಲವಾರು ಕೃತಿಗಳನ್ನು ರಚಿಸಿದ್ದರು. ಬೆಂಗಳೂರಿನ ಬಸವನಗುಡಿಯ ಹತ್ತಿರವಿದ್ದ ಕುಮಾರಸ್ವಾಮಿಶೈಲದ ದೇವಾಲಯ ಅವರ ಸಾಹಿತ್ಯೇತರ ಆಕರ್ಷಣೆಯ ಮಹಾ ಕ್ಷೇತ್ರವಾಯಿತು. 'ನರಹರಿರಾಯನ ಗುಡ್ಡ' ವೆಂದೇ ಜನರ ಬಾಯಲ್ಲಿ ಪ್ರಸಿದ್ಧವಾದ ಈ ದೇವಾಲಯವನ್ನು ಅಭಿವೃದ್ಧಿಪಡಿಸಿ ಅಲ್ಲಿ ಸ್ವತಃ ಮುಂದೆ ನಿಂತು ಅಷ್ಟಭುಜ ಗಣಪತಿಯ ಮೂರ್ತಿಯನ್ನು ಪ್ರತಿಷ್ಠಾಪಿಸಿ ಜನಮನಕ್ಕೆ ಹತ್ತಿರವಾದರು. ಕುಮಾರಸ್ವಾಮಿ ಶೈಲದಲ್ಲಿ ಹೋಗಿ ನೆಲೆಸುವಂತೆ ಅವರಿಗೆ ಸ್ವಪ್ನದಲ್ಲಿ ಭಗವ ತ್ಪ್ರೇರಣೆಯಾಗಿತ್ತೆಂದು ಅವರೇ ಸ್ವತಃ ಡಿ.ವಿ. ಗುಂಡಪ್ಪನವರೊಂದಿಗೆ ಹೇಳಿಕೊಂಡಿದ್ದರೆಂದು ತಮ್ಮ ಜ್ಞಾಪಕಚಿತ್ರಶಾಲೆಯಲ್ಲಿ ಗುಂಡಪ್ಪನವರು ನೆನಪಿಸಿಕೊಂಡಿದ್ದಾರೆ. ಮಹಾ ದೈವಭಕ್ತರೂ ಮಂತ್ರ ತಂತ್ರವಿದರೂ

ಆದ ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು 'ಕುಮಾರಸ್ವಾಮಿಶೈಲಮಾಹಾತ್ಮ್ಯ' ಎಂಬ ಚಂಪೂ ಪ್ರಬಂಧವನ್ನೂ ಹಳಗನ್ನಡ ಶೈಲಿಯಲ್ಲಿ ರಚಿಸಿದ್ದಾರೆ. ಹಿಡಿದ ಕೆಲಸದ ಪಟ್ಟು ಬಿಡದೆ ಅದರಲ್ಲೇ ತೊಡಗಿಕೊಂಡು ಮುಗಿಸುವ ಹಟವಾದಿಗಳಾದ ಸಿದ್ಧಾಂತಿಗಳು ಪಂಚಸಹಸ್ರನಾಮಗಳ ಸ್ತೋತ್ರಮಾಲಿಕೆಯನ್ನು ರಚಿಸಿದ್ದರು. ಅದರ ಕುರಿತಂತೆ ಡಿವಿಜಿಯವರ ಮಾತುಗಳನ್ನೇ ಸ್ಮರಿಸಿಕೊಳ್ಳಬಹುದು. "ಶಿವಶಂಕರ ಶಾಸ್ತ್ರಿಗಳು ಇನ್ನೊಂದು ಪ್ರಯತ್ನ ಮಾಡಿದ್ದರು. ವೆಂಕಟೇಶ ಸಹಸ್ರನಾಮ, ಶಿವಸಹಸ್ರನಾಮ, ಲಲಿತಾ ಸಹಸ್ರನಾಮ, ಗಣೇಶ ಸಹಸ್ರನಾಮ, ಸೂರ್ಯ ಸಹಸ್ರನಾಮ– ಈ ಐದು ಸಹಸ್ರನಾಮಗಳನ್ನು ಆಧಾರವಾಗಿಟ್ಟುಕೊಂಡು ಆ ಒಂದೊಂದು ನಾಮದ ಮೇಲೂ ಅದರ ಅರ್ಥವನ್ನು ತೋರಿಸುವಂತೆ ಒಂದು ಪದ್ಯ ಬರೆಯತಕ್ಕದ್ದು. ಹೀಗೆ ಒಟ್ಟು ಐದು ಸಾವಿರ ಪದ್ಯ. ಇದರಲ್ಲಿ ಮೊದಲನೆಯ ಐನೂರು–ಎಂಟುನೂರು ಪದ್ಯಗಳನ್ನು ಬೆಂಗಳೂರು ಪ್ರೆಸ್ಸಿನಲ್ಲಿ ಒಳ್ಳೆಯ ನುಣುಪು ಕಾಗದದಲ್ಲಿ ಅಂದವಾಗಿ ಮುದ್ರಣ ಮಾಡಿಸಿದ್ದರು. ಪದ್ಯಗಳ ಜೊತೆಗೆ ಅಲ್ಲಲ್ಲಿ ಆ ದೇವತಾ ಮೂರ್ತಿಗಳ ಚಿತ್ರಗಳೂ ಇದ್ದುವು..... ಆ ಪಾಂಡಿತ್ಯ, ಆ ಧೋರಣೆ, ಆ ಎದೆಗಾರಿಕೆ ಮತ್ತು ಆ ಹಟ ಇವನ್ನು ನಾನು ಇನ್ನೆಲ್ಲಿಯೂ ಕಂಡವನಲ್ಲ" (ಉದ್ಧೃತ; ಸಾಹಿತ್ಯಸನ್ನಿಧಿ). ಶಿವಶಂಕರಶಾಸ್ತ್ರಿಗಳ ಭಾಷಾ ಬಳಕೆ, ಅದರ ನಿರ್ದುಷ್ಟ ವ್ಯಾಕರಣ, ಛಂದಸ್ಸುಗಳ ಪ್ರಯೋಗ, ಅದನ್ನು ಬಳಸುವಲ್ಲಿ ಎದ್ದು ಕಾಣುವ ಪಾಂಡಿತ್ಯ, ಶಾಸ್ತ್ರಸಮ್ಮತ ಜ್ಞಾನಗಳು ಎಲ್ಲವೂ ಪಂಡಿತ ಮಾನ್ಯರ ಮೆಚ್ಚುಗೆಗೆ ಪಾತ್ರವಾದವುಗಳೇ.

ಶಾಸ್ತ್ರಿಗಳ ಪ್ರಯೋಗಗಳು ಕಠಿಣವಾಗುತ್ತವಾದ ಕಾರಣ ಸಾಮಾನ್ಯ ಓದುಗರಿಗೆ ಕಷ್ಟವೆನಿಸುತ್ತದೆ. ಅಲ್ಲದೆ ಆ ರೀತಿಯ ಭಾಷಾಪ್ರಯೋಗಗಳು ವ್ಯಾಕರಣಶಾಸ್ತ್ರ ರೀತ್ಯಾ ಸರಿಯೆನಿಸಿದರೂ ಹಳಗನ್ನಡ ವ್ಯಾಮೋಹವು ವಿಪರೀತ ವಾಯಿತು ಎನಿಸುವುದೂ ಇದೆ. ಬಹುತೇಕ ಸಿದ್ಧಾಂತಿಗಳ ಆಸುಪಾಸಿನ ಕಾಲಕ್ಕೇ ಸೇರಿದವರಾದ ಅನೇಕ ವಿದ್ವಾಂಸರು ಸಂಸ್ಕೃತ, ಹಳಗನ್ನಡ, ಸನಾತನ ಧರ್ಮ, ಭಾಷಾ ಪಾಂಡಿತ್ಯ ಮುಂತಾದವುಗಳತ್ತಲೇ ಹೆಚ್ಚು ಆಕರ್ಷಿತರಾಗಿದ್ದರು. ಆದರೂ ಭಾಷಾಲಾಲಿತ್ಯವನ್ನು ಕಾಪಾಡಿಕೊಂಡೇ ತಮ್ಮ ಕಾವ್ಯಪ್ರಯೋಗಗಳಿಂದ ಹೆಸರಾಗಿದ್ದುದನ್ನು ನೋಡಬಹುದು. ಆದರೆ ಸಿದ್ಧಾಂತಿಗಳಿಗೆ ಭಾಷಾಪ್ರೌಢಿಮೆ ಹಾಗೂ ಹಳಗನ್ನಡ ಪ್ರಯೋಗಗಳ ಮೇಲಿದ್ದ ಅಪರಿಮಿತ ವ್ಯಾಮೋಹ ಅವರ

ಅನೇಕ ರಚನೆಗಳು ಕಾವ್ಯಬಂಧಗಳ ಪ್ರಾಯೋಗಿಕ ಮಾದರಿ ಗಳಾಗಿಯಷ್ಟೇ ಮನಸೆಳೆದವು ಎನ್ನಬಹುದು. ಆ ಕಾಲದ ಕಾವ್ಯಪ್ರಿಯರಿಗೂ ವಿದ್ಯಾವಂತ ಸಮೂಹಕ್ಕೂ ಸಿದ್ಧಾಂತಿಗಳ ಕಾವ್ಯ ಪ್ರಯೋಗಗಳ ಕುರಿತಂತೆಯೂ, ಭಾಷಾಬಳಕೆಯ ಕುರಿತಂತೆಯೂ ಆಕ್ಷೇಪಗಳಿದ್ದುದು ಸ್ವತಃ ಸಿದ್ಧಾಂತಿಗಳಿಗೇ ಸ್ಪಷ್ಟವಾಗಿ ತಿಳಿದಿ ತ್ತೆಂಬುದು ಅವರ 'ಶ್ರೀಷಡ್ದೇವತಾಸಹಸ್ರನಾಮಕಲ್ಪವೃಕ್ಷ'ದ ಪ್ರಸ್ತಾವನೆಯಿಂದ ಸ್ಪಷ್ಟವಾಗುತ್ತದೆ. ೧೯೨೨ರಲ್ಲಿ ಪ್ರಕಟವಾದ ಇದು ೬೦೦೦ ಪದ್ಯಗಳಿರುವ ಮಹಾಗ್ರಂಥ. ಇದರ ಪೂರ್ಣರೂಪದ ಕೃತಿಯು ಪ್ರಕಟವಾಗಿರುವ ಕುರಿತು ವಿದ್ವಾಂಸ ವಲಯದಲ್ಲಿ ಅನುಮಾನಗಳಿವೆ. ಈ ಗ್ರಂಥದಲ್ಲಿ ಸೂರ್ಯ, ಗುಹಾಂಬಾ, ಲಲಿತಾ, ವಿಷ್ಣು, ಗಣೇಶ, ಶಿವ, ಷಣ್ಮುಖ ಮೊದಲಾದ ದೇವಾಧಿದೇವತೆಯರ ಸ್ತುತಿಗಳು ಅನುಕ್ರಮವಾಗಿ ಬಂದಿವೆ. ಇವು ವಿವಿಧ ವರ್ಣವೃತ್ತಗಳು, ಕಂದ ಮತ್ತು ಷಟ್ಪದೀ ಪ್ರಭೇದಗಳಲ್ಲಿ ರಚಿತವಾಗಿವೆ. ಅಲ್ಲದೆ ಅವುಗಳೊಂದಿಗೆ ಆಯಾ ದೇವರ ಚಿತ್ರಗಳನ್ನೂ ಕೊಡಲಾಗಿದೆ. ಪ್ರತಿ ಪದ್ಯಗಳಿಗೂ ಅಡಿಟಿಪ್ಪಣಿಗಳಾಗಿ ಟೀಕೆಗಳನ್ನೂ ನೀಡಲಾಗಿದೆ.

ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳ ಉಸಿರಿನಲ್ಲಿಯೇ ಹಳಗನ್ನಡ ವ್ಯಾಮೋಹ ಬೆರೆತುಹೋಗಿತ್ತೆಂಬುದಕ್ಕೆ ಮತ್ತೊಂದು ಸೂಕ್ತ ಉದಾಹರಣೆ ಅವರ ಜೀವನ ಚರಿತ್ರೆಯ ಭಾಗಶಃ ರೂಪವಾಗಿ ಸೃಷ್ಟಿಗೊಂಡ ೧೯೨೧ರಲ್ಲಿ ಪ್ರಕಟವಾದ 'ಜೀವನಕೃತಜ್ಞತೆ' ಎಂಬ ಕಾವ್ಯರೂಪ. ಇದರಲ್ಲಿ ಅವರು ತಮ್ಮ ಬಾಲ್ಯಕಾಲದ ವೃತ್ತಿಯಿಂದ ಮೊದಲುಗೊಂಡು ನಿವೃತ್ತರಾಗುವವರೆಗಿನ ತಮ್ಮ ಜೀವನದ ಪ್ರಮುಖ ಘಟನೆಗಳನ್ನೂ ಹಾಗೂ ವಿವಿಧ ಪಂಡಿತ ಮಾನ್ಯರ ಬಗೆಗೆ ತಮಗಿದ್ದ ಸದ್ಭಾವನೆಗಳನ್ನೂ ಸುಮಾರು ೧೪೦ ವಿವಿಧ ಜಾತಿಯ ಹಳಗನ್ನಡ ವೃತ್ತಗಳಲ್ಲಿ ಪ್ರಕಟಿಸಿದ್ದಾರೆ. ಅವರ ಅತ್ಯಂತ ಸುಸಂಸ್ಕೃತ ಚಿಂತನ ವಿಧಾನ, ಪಂಡಿತಮಾನ್ಯರನ್ನು ವಿಶೇಷ ಗೌರವಾದರಗಳಿಂದ ನೆನೆಯುವಂತಹ ನೀತಿವಂತ ನಡೆವಳಿಕೆಗಳನ್ನು ಅರಿಯುವುದಕ್ಕೆ ಈ ಕಾವ್ಯಬಂಧ ಸಹಕಾರಿಯಾಗಿದೆ. ಈ ಕೃತಿಯ ಕುರಿತಂತೆ ಮ.ಪ್ರ.. ಪೂಜಾರ ಅವರು ''ಕನ್ನಡ ವಾಙ್ಮಯದಲ್ಲಿ ಇದೊಂದು ಹೊಸ ತೆರದ ಗ್ರಂಥವು. ಕೃತಜ್ಞತಾಜ್ಞಾಪನದ ಮೂಲಕ ತಮ್ಮ ಜೀವನ ಚರಿತದ ಮುಖ್ಯಾಂಶಗಳನ್ನು ಬರೆದಿರುವುದೂ ಅದರಲ್ಲಿಯೂ ಪದ್ಯರೂಪವಾಗಿ ಬರೆದಿರುವುದೂ ಅಪೂರ್ವವಾಗಿದೆ'' ಎಂದಿದ್ದಾರೆ (ಕಸಾಪ.6–4, ಜನವರಿ 1922, ಪು. 311–13,

ಉದ್ಧೃತ). ಅವರ ಜೀವನದ ಬಹ್ವಂಶಗಳು ಲಭ್ಯವಿಲ್ಲ. ಅದಕ್ಕಿದ್ದ ಏಕೈಕ ಆಕರವಾಗಿದ್ದ ಈ ಕೃತಿಯೂ ಇಂದು ಲಭ್ಯವಿಲ್ಲದುದು ಕನ್ನಡ ವಿದ್ವದ್ವಲಯದ ದುರದೃಷ್ಟವೆಂದೇ ಹೇಳಬಹುದು. ಸಿದ್ಧಾಂತಿಗಳಿಗಿದ್ದ ಸಂಸ್ಕೃತ ಭಾಷಾಪ್ರೌಢಿಮೆ, ವೈದಿಕ ಜೀವನ ವಿಧಾನಗಳು, ಅದರೊಂದಿಗೆ ಹಳಗನ್ನಡದ ಕುರಿತಂತೆ ಇದ್ದ ಅತ್ಯಭಿಮಾನಗಳು ಎಲ್ಲವೂ ಅವರ ಬರೆಹದ ಭಾಷೆಯ ಮೇಲೆ ಪ್ರಭಾವ ಬೀರಿದ್ದುದು ನಿಜವಾದರೂ ಅವೆಲ್ಲವನ್ನೂ ಮೀರಿದ ಕವಿತ್ವ ಪ್ರತಿಭೆಯು ಕನ್ನಡ ಸಾಹಿತ್ಯಕ್ಷೇತ್ರದಲ್ಲೊಂದು ಅಸ್ಮಿತೆಯನ್ನು ತಂದಿದೆ. ಈ ಕುರಿತಂತೆ ಅಂದಿನ ವಿದ್ವಾಂಸವಲಯದಲ್ಲೂ ಮೆಚ್ಚುಗೆ ವ್ಯಕ್ತವಾಗಿತ್ತು. ಮದರಾಸು ವಲಯದಲ್ಲಿ ಅವರು ಗಳಿಸಿಕೊಂಡ ವಿದ್ವಜ್ಜನ ಪ್ರಿಯತೆಯ ಪರಿಣಾಮವಾಗಿ, ಕನ್ನಡ ಸಾಹಿತ್ಯ ಪರಿಷತ್ತು ತನ್ನ ಮೊತ್ತಮೊದಲ ಸಂಚಿಕೆಯಲ್ಲಿ(೧–೧, ಏಪ್ರಿಲ್ ೧೯೧೬) ಆಹ್ವಾನಿತ ಪಂಡಿತರ ಅತ್ಯುತ್ತಮ ಲೇಖನಗಳಲ್ಲಿ ಒಂದು ಎಂದು ಅವರ 'ಸದುದ್ದೇಶಪಂಚಕ' ಎಂಬ ಲೇಖನವನ್ನು ಆಯ್ಕೆ ಮಾಡಿ ಪ್ರಕಟಿಸಿತು. ಅದರಲ್ಲಿ ಶಾಸ್ತ್ರಿಗಳು ಸೂಚಿಸಿದ ಐದು ವೈಚಾರಿಕ ಉದ್ದೇಶಗಳು ಪರಿಶೀಲನಾರ್ಹವಾದವು:

1. ಕರ್ನಾಟಕದ ಸರ್ವಜನಮಾನ್ಯವಾದ ಭಾಷೆ ಯಾವುದು ಎಂದು ಚಿಂತಿಸುತ್ತ ವ್ಯಾವಹಾರಿಕ ಮತ್ತು ಗ್ರಾಂಥಿಕ ಭಾಷೆಗಳ ಸ್ವರೂಪ, ಗ್ರಾಮ್ಯಭಾಷಾವಿಚಾರ, ಮಾತೃಭಾಷಾಭಿಮಾನ, ವ್ಯಾಕರಣವಿಚಾರ, ಗ್ರಾಂಥಿಕ ಭಾಷೆಯ ದುಃಸ್ಥಿತಿ, ವ್ಯಾಕರಣ ಸಂಸ್ಕರಣ ಪದ್ಧತಿ–ಈ ಮುಂತಾದವುಗಳ ಕುರಿತಂತೆ ದೀರ್ಘವಾಗಿ ಚರ್ಚಿಸಿರುವ ಅಂಶಗಳು.
2. ಗ್ರಾಂಥಿಕ ಭಾಷೆಯನ್ನು ಏಕರೂಪಕ್ಕೆ ತರುವುದರ ಕುರಿತಂತೆ ಚಿಂತನೆಗಳು.
3. ಕನ್ನಡ ಶಾಲೆಗಳಲ್ಲಿ ಏಕರೂಪ ಪಠ್ಯಕ್ರಮ ಜಾರಿ ಕುರಿತು.
4. ಕಿರು ಕೈಪಿಡಿಗಳಂತಹ ಪುಸ್ತಕಗಳಲ್ಲಿ ಜ್ಞಾನಪ್ರಸಾರಕ್ಕೆ ತಕ್ಕ ಗ್ರಂಥಗಳಲ್ಲಿ ಪ್ರಕಟವಾಗಿರುವ ಚಿಂತನೆಗಳನ್ನು ಪ್ರಚಾರ ಮಾಡುವುದು.
5. ಏಕರೂಪ, ನಿರ್ದುಷ್ಟ ಪಾರಿಭಾಷಿಕಗಳನ್ನು ನಿರ್ಣಯಿಸುವುದು.

ಪರಿಷತ್ತಿನ ಚಿಂತನೆಗಳೂ ಇದಕ್ಕನುಗುಣವಾಗಿಯೇ ಇತ್ತೆಂದು ತೋರುವುದು. ಏನೇ ಆದರೂ ಅನಂತರದ ಕಾಲದಲ್ಲಿ ಪರಿಷತ್ತಿನ ನಿರ್ಣಯಗಳಲ್ಲಿ

ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳ ಅಭಿಪ್ರಾಯಗಳು ಬೇರೆ ಬೇರೆ ರೂಪಗಳಲ್ಲಿ ಅವತರಿಸಿರುವುದು ಕಂಡು ಬರುತ್ತದೆ. ಸಿದ್ಧಾಂತಿಗಳ ಖಚಿತಾಭಿಪ್ರಾಯಗಳು, ದೂರದೃಷ್ಟಿ, ಕನ್ನಡ ಭಾಷೆಯ ಬೆಳೆವಣಿಗೆ ಹಾಗೂ ಅಭಿವೃದ್ಧಿಯ ಬಗೆಗೆ ಅವರಿಗಿದ್ದ ಕಾಳಜಿ ಮುಂತಾದವುಗಳನ್ನು ಅವರ 'ಸದುದ್ದೇಶಪಂಚಕ' ಪ್ರಬಂಧವು ಬೀಜರೂಪವಾಗಿ ಧರಿಸಿದೆಯೆಂಬುದನ್ನು ಗಮನಿಸಬಹುದು.

ಸಿದ್ಧಾಂತಿಗಳ ಕಾಲಕ್ಕಾಗಲೇ ಭಾರತವೂ ಕನ್ನಡ ನೆಲವೂ ಸಾಕಷ್ಟು ಪರಭಾಷಾ ಹಿಡಿತಕ್ಕೆ ಸಿಲುಕಿ ಅನಿವಾರ್ಯವಾದ ಭಾಷೆ ಮತ್ತು ಸಂಸ್ಕೃತಿ ಸಂಕರಗಳಿಗೆ ಒಳಗಾಗಿದ್ದುದು ಅವರನ್ನು ಅತೀವವಾಗಿ ಕಾಡಿತ್ತು. ಇದನ್ನು ಅವರ ಲೇಖನಗಳು ಹಾಗೂ ಗ್ರಂಥಗಳಲ್ಲಿಯ ಹಲವು ಹತ್ತು ಚಿಂತನಕ್ರಮಗಳಲ್ಲಿ ಕಾಣಬಹುದು. ವಿದೇಶಮೂಲದ ಸಂಸ್ಕೃತಿಯ ಗಂಧಗಾಳಿಯು ತಂದಿದ್ದ ನವನಾಗರಿಕ ಭಾವಲಹರಿಗಳು, ಸ್ವದೇಶದ ಸನಾತನ ಧರ್ಮವು ರೂಪಾಂತರಕ್ಕೊಳಗಾಗುತ್ತಿದ್ದ ಪ್ರಕ್ರಿಯೆಗಳು ದೇಶಭಾಷೆ–ಪರಭಾಷೆಗಳ ಸಂಕರದಿಂದ ಆಗುತಿದ್ದ ಕದಲಿಕೆ ಬದಲಿಕೆಗಳ ಕುರಿತಂತೆ ಅವರಿಗೆ ಸಾಕಷ್ಟು ಅಸಮಾಧಾನವಿದ್ದುದೂ ಸುಸ್ಪಷ್ಟ. ಭಾಷೆಯ ಅನುದಿನದ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿಯ ಹೊಸತನಕ್ಕೆ ಮೈಮನಸ್ಸುಗಳ ವಿರೋಧದ ನಡುವೆಯೂ ಆಧುನಿಕವಾಗಿ ಭಾಷಾಭಿವೃದ್ಧಿಯ ಕುರಿತಂತೆ ಸಿದ್ಧಾಂತಿಗಳು ಚಿಂತಿಸಿದುದು ಅವರ 'ಸದುದ್ದೇಶ ಪಂಚಕ' ದಲ್ಲಿ ನಿಚ್ಚಳವಾಗಿ ಎದ್ದು ಕಾಣುತ್ತದೆ. ಆದ್ಯಾಗ್ಯೂ ಅವರ ಸೃಜನಶೀಲ ಗದ್ಯಪದ್ಯಗಳಲ್ಲಿಯ ಭಾಷಾವೈಖರಿಯನ್ನು ಕಂಡು ಅವರನ್ನು "ಕೇಶಿರಾಜನ 'ಶಬ್ದಮಣಿದರ್ಪಣ'ದ ಮಠಕ್ಕೆ ಸೇರಿದವರು" ಎಂದು ವಿದ್ವಾಂಸರು (ಟಿ.ವಿ.ವಿ. ಸಾಹಿತ್ಯ ಸನ್ನಿಧಿ ಪು.183) ಅಭಿಪ್ರಾಯಪಡುವಷ್ಟು ಹಳಗನ್ನಡಕ್ಕೆ ಶರಣಾಗಿರುವುದು ಕಂಡುಬರುತ್ತದೆ. ಇದರಲ್ಲಿ ಅತಿಶಯೋಕ್ತಿಯೇನಿಲ್ಲ.

ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳ ಮಹತ್ತ್ವದ ಕೃತಿಗಳಲ್ಲಿ ಕರ್ನಾಟಕ 'ಕಥಾಸರಿತ್ಸಾಗರದಲ್ಲಿ ಮೊದಲನೆಯ ಪೀಠಿಕಾ ಲಂಬಕವು'ಎಂಬುದೂ ಒಂದು. ೧೯೦೬ರಲ್ಲಿ ಪ್ರಕಟವಾದ ಇದು ಸೋಮದೇವನ ಸಂಸ್ಕೃತ 'ಕಥಾಸರಿತ್ಸಾಗರ'ದ ಮೊದಲನೆಯ ಪೀಠಿಕಾಲಂಬಕದ ಕನ್ನಡ ಗದ್ಯರೂಪ. ಉಪೋದ್ಘಾತದಲ್ಲಿ, ತಾವು ಈ ಗ್ರಂಥವನ್ನು "ಕನ್ನಡಿಗರ ಮನ್ನಣೆಗೆಂದು ಎಲ್ಲ ಜನರುಲ್ಲಾಸಪಡುವಂತೆ ಕರ್ನಾಟ ವಚನರಚನೆಯಾಗಿ" ರಚಿಸಿರುವುದಾಗಿಯೂ ಹೇಳಿಕೊಂಡಿದ್ದಾರೆ.'ಕಥಾಸರಿತ್ಸಾ

ಗರ'ದ ಕನ್ನಡ ಭಾಷಾಂತರಗಳಲ್ಲಿ ಸಿದ್ಧಾಂತಿಯವರ ಪ್ರಯತ್ನವೇ ಮೊತ್ತ ಮೊದಲನೆಯ ಪ್ರಯತ್ನವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಸಿದ್ಧಾಂತಿಯವರ ಕನ್ನಡ ಭಾಷಾಭಿಮಾನ, ಅಧ್ಯಾಪನ, ಕೃತಿರಚನೆಗಳ ಮಹತ್ತ್ವವನ್ನರಿತು ಕನ್ನಡನಾಡು ಇವರನ್ನು ಗೌರವಾದರಗಳಿಂದ ೧೯೨೩ರಲ್ಲಿ ಬಿಜಾಪುರದ ಒಂಬತ್ತನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿಸಿತು. ತಮ್ಮ ಸಮ್ಮೇಳನಾಧ್ಯಕ್ಷ ಭಾಷಣದಲ್ಲಿ ಕನ್ನಡದ ಅಭಿವೃದ್ಧಿಗಾಗಿ ಅವರು ಪ್ರಕಟಿಸಿದ ಸಲಹೆ ಸೂಚನೆಗಳು ಇಂದಿಗೂ ಮನನೀಯವಾದ ಹಾಗೂ ಅತ್ಯಂತ ವ್ಯಾವಹಾರಿಕವಾದ ನಡೆಗಳಾಗಿವೆ.

"ನಮ್ಮ ಸ್ವದೇಶೀ ಭಾಷಾಗ್ರಂಥಗಳನ್ನು ವಿಶೇಷ ಪ್ರವಚನ ಪ್ರಚಾರಕ್ಕೆ ತಂದು ಕೊಳ್ಳುವುದು ನಮ್ಮ ಮುಖ್ಯ ಕರ್ತವ್ಯ ವಾಗಿರುವುದು".

"ಪ್ರಾಚೀನ ಕಾವ್ಯಗಳಲ್ಲಿರುವ ವೈದ್ಯ ಜ್ಯೋತಿಷ ಶಿಲ್ಪ ತಂತ್ರ ಬೋಧಕ ಗಳಾದ ಗ್ರಂಥಗಳನ್ನು ಪರಿಶೋಧಿಸಿ ಹೊರ ಪಡಿಸಬೇಕು".

"ಲೋಕಕ್ಕೆ ಈ ಕಾಲದಲ್ಲಿ ಪರಭಾಷಾಸಾಂಕರ್ಯರೋಗವು ಪ್ರಬಲಿಸಿರು ವಾಗ ಸ್ವದೇಶಭಾಷಾಸೇವೆಗೆ ಬನ್ನಿರೆಂಬ ಪಥ್ಯಪಾನವು ಪುರಾಣ ಶ್ರವಣದಂತೆ ಪೂರಯಿಸುತ್ತಿರುವುದು".

"ನಮ್ಮ ಈ ಕನ್ನಡನಾಡಿಗರೆಲ್ಲರೂ ತಿಂಗಳಿಗೊಮ್ಮೆ ತಲೆಗೊಂದು ಕಾಸು ಕನ್ನಡಕ್ಕೆ ಎಂದು ಪ್ರತಿ ಕುಟುಂಬದಿಂದಲೂ ದ್ರವ್ಯ ಸಹಾಯವನ್ನು ಪಡೆದವರಾಗಿ, ಅದನ್ನು ಕರ್ಣಾಟ ಪರಿಷತ್ತಿಗೆ ಮೂಲಧನವಾಗಿ ಬೆಳೆಯಿಸಿಕೊಂಡು ಬರುವಂ ತಾಗಲಿ".

ಸಂಸ್ಕೃತ, ಕನ್ನಡ, ತಮಿಳು, ತೆಲುಗು ಭಾಷೆಗಳಲ್ಲಿ ಪರಿಣತರಾದ ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳಿಗೆ ಬಹುಮುಖೀ ಸಾಹಿತ್ಯ ಸೃಷ್ಟಿ ಅಸಾಧ್ಯವೇನಾಗಿರಲಿಲ್ಲ. ನಿರಂತರವಾಗಿ ಅವರು ಮಾಡಿದ ಕನ್ನಡ ಸಾಹಿತ್ಯಕೃಷಿ ಅಸಾಧಾರಣವಾದುದು. ಕನ್ನಡ ಕಾವ್ಯಗಳ ಪರಿಷ್ಕರಣ, ಸಂಪಾದನೆ ಮತ್ತು ಪ್ರಕಟನೆ; ಸಂಸ್ಕೃತ ಗ್ರಂಥಗಳ ಗದ್ಯಾನುವಾದಗಳು, ಟೀಕೆ–ವ್ಯಾಖ್ಯಾನಗಳು; ಚಂಪೂ, ಷಟ್ಪದಿ, ಕಂದ, ಶ್ಲೋಕಗಳು ಹಾಗೂ ವಿವಿಧ ಛಂದೋವೃತ್ತಗಳಲ್ಲಿ ಗ್ರಂಥರಚನೆಗಳು; ಸಂಸ್ಕೃತ ನಾಟಕಗಳು ಹಾಗೂ ಲಕ್ಷಣಗ್ರಂಥಗಳ ಅನುವಾದಗಳು; ಶತಕ ಗ್ರಂಥಗಳು; ಕಥಾಗದ್ಯಗಳು,

ನಕ್ಷತ್ರಮಾಲೆಯಂತಹ ಅಪರೂಪ ಕಾವ್ಯಕೃಷಿ; ಜೀವನ ಚರಿತ್ರೆ– ಹೀಗೆ ಹಲವು ಪ್ರಕಾರಗಳ ಹಲವಾರು ಚಿಂತನೆಗಳ ಕಣಜದಂತೆ ಮುಗಿಲೆತ್ತರದ ಸಾಧನೆ ಮಾಡಿದವರು ಸಿದ್ಧಾಂತಿಗಳು. ಜ್ಯೋತಿಷ ಶಾಸ್ತ್ರದಲ್ಲೂ ಅವರದ್ದು ಅಸಾಧಾರಣ ಪ್ರತಿಭೆ. ಗಣಿತಶಾಸ್ತ್ರದ ಹಿನ್ನೆಲೆಯಲ್ಲಿ ಜ್ಯೋತಿಷ ನಡೆಗಳನ್ನು ಎಣಿಸುತ್ತ ಸಾಮಾನ್ಯ ಜನರಿಗೆ ಜ್ಯೋತಿಷ ಶಾಸ್ತ್ರದ ತಿಳಿವಳಿಕೆ ಮೂಡಿಸುತ್ತ ಅವರ ಮನೋಸ್ಥಿತಿಗತಿಗಳಿಗೆ ಸಾಂತ್ವನ ನೀಡಿದವರು. (ಜ್ಞಾಪಕ ಚಿತ್ರಶಾಲೆ)

ಸಿದ್ಧಾಂತಿಗಳ ಅತಿಪ್ರಮುಖವಾದ ಕೃತಿಗಳನ್ನಷ್ಟೇ ಪಟ್ಟಿಮಾಡಿದರೂ ಅವರ ಕಾರ್ಯಬಾಹುಳ್ಯವು ಎಷ್ಟು ವಿಸ್ತಾರವಾದುದು ಎಷ್ಟು ಮಹತ್ವ ಪೂರ್ಣ ವಾದುವು ಎಂಬುದು ಬೆರಗುಗೊಳಿಸುತ್ತದೆ.

ಗ್ರಂಥ ಸಂಪಾದನೆ, ಟೀಕೆ, ವ್ಯಾಖ್ಯಾನಗಳು, ಅನುವಾದಗಳು:

1. ಸಾಮುದ್ರಿಕ ಶಾಸ್ತ್ರವು(1882–1889)
   (ಹರಗೌರೀ ಸಾಮುದ್ರಿಕ, ವರಾಹಮಿಹಿರ ಸಾಮುದ್ರಿಕ, ಗರ್ಗಸಾಮುದ್ರಿಕಗಳ ಸಂಕಲನ)
2. ಮಡಿವಾಳಯ್ಯಗಳ ಚರಿತ್ರವು– ನುಲಿಯ ಚಂದಯ್ಯನ ಶಾರದೆ(1883):
   (ಅವರ ಚರಿತ್ರೆಗೆ ಸಂಬಂಧಿಸಿದ ರಚನೆ)
3. ಚೆನ್ನಮಲ್ಲೇಶನ ದೀಪದ ಕಲಿಯರ ಕಾವ್ಯವು (1883; 1895)–9 ಸಂಧಿಗಳ ಸಾಂಗತ್ಯ ಕಾವ್ಯ.
4. ಸಿದ್ಧರಾಮೇಶ್ವರ ಪುರಾಣವು (1884, 1889): ರಾಘವಾಂಕನ ಸಿದ್ಧರಾಮಚಾರಿತ್ರದ ಪರಿಷ್ಕರಣ ಮತ್ತು ಗದ್ಯಾನುವಾದ.
5. ಶ್ರೀ ಸೋಮೇಶ್ವರಶತಕಂ (1893): ಪ್ರತಿಪದ, ಟೀಕಾತಾತ್ಪರ್ಯ, ವಿಶೇಷ ವಿವರಣ ಸಹಿತ.
6. ಶಬರಶಂಕರವಿಲಾಸ ಕಾವ್ಯಾರ್ಥಾಶಯ ಬೋಧಿನೀ ಟೀಕೆ (1887), ಷಡಕ್ಷರಿಯ ಚಂಪೂ ಕಾವ್ಯದ ಕನ್ನಡ ಟೀಕೆ.
7. ಉನ್ಮತ್ತರಾಘವ ಪ್ರೇಕ್ಷಣಿಕಂ(1887) : ಸಂಸ್ಕೃತ ರಾಮಾಯಣ ಉಪರೂಪಕದ ಭಾಷಾಂತರ.

8. ಗರಳಪುರೀ ಮಾಹಾತ್ಮ್ಯ(1894) : ಸ್ಕಾಂದಪುರಾಣಾಂತರ್ಗತ, ನಂಜನಗೂಡು ಕ್ಷೇತ್ರಮಹಿಮೆಯ ಭಾಷಾಂತರ, ಭಾಮಿನೀಷಟ್ಪದಿ.
9. ಕರ್ಣಾಟಕ ಚಂದ್ರಾಲೋಕಂ (1897) : ಜಯದೇವನ ಸಂಸ್ಕೃತ ಕಾವ್ಯ ಲಕ್ಷಣಗ್ರಂಥದ ಅರ್ಥಾಲಂಕಾರ ಭಾಗಃ 200 ಕಂದಪದ್ಯಗಳಲ್ಲಿ ಕನ್ನಡಿಸಿ, 'ಅಲಂಕಾರ ಚಂದ್ರಿಕೆ' ಎಂಬ ತಾತ್ಪರ್ಯ ಟೀಕಾವಿವರಣವನ್ನೂ ಕೊಡ ಲಾಗಿದೆ.
10. ಕರ್ಣಾಟಕ ನರಕಾಸುರ ವಿಜಯ ವ್ಯಾಯೋಗಂ (1901) ಧರ್ಮ ಪಂಡಿತನ ಸಂಸ್ಕೃತ ನಾಟಕದ ಭಾಷಾಂತರ.
11. ಅಭಿನವ ಕಾದಂಬರಿ(1903) ಬಾಣಭಟ್ಟನ ಕಾದಂಬರೀ ಗದ್ಯಕಾವ್ಯದ ಕಂದಪದ್ಯರೂಪ ಅನುವಾದ.

ಸ್ವತಂತ್ರ ಕಾವ್ಯಗಳು:

1. ನಳೋಪಾಖ್ಯಾನ. ಚಂಪೂ ಪ್ರಬಂಧವು (1888 ಮತ್ತು 1892)
2. ಸನ್ಮತಿ ಶತಕ– 108 ಉತ್ಪಲಮಾಲಾ ವೃತ್ತಗಳ ನೀತಿಪದ್ಯಗಳು.
3. ಭಾಷಾ ಸಂಘಪೋಷಿಣೀ ಎಂಬ ಕಂದ ಪದ್ಯ ಶತಕಂ (1893)
4. ಶ್ರೀರಾಮವಂದನಾನಂದಂ (1921)(ಅಷ್ಟೋತ್ತರ ಶತರಾಮನಾಮ)
5. ಶ್ರೀ ಷಡ್ದೇವತಾಪಸಹಸ್ರನಾಮ ಕಲ್ಪವೃಕ್ಷ (1922)
6. ಸದ್ಬೋಧಾನಂದಲಹರಿಯೊಳಗೆ ಸುಬೋಧತರಂಗವು(1908) ಅನುವಾ ದಿತ ಗ್ರಂಥದ ಸಂಪಾದನೆ ಮತ್ತು ಟೀಕಾ ಸಹಿತ ಸಮುಚ್ಚಯ.
7. ಜೀವನ ಕೃತಜ್ಞತೆ (1921)
8. ಶ್ರೀ ಶಂಕರಗುರುಚರಿತಂ(1927)
9. ವೈದಿಕ ಜೀವನ ಕೃತಜ್ಞತೆ(ಅಪ್ರಕಟಿತ)

೫೦ ವರ್ಷಗಳ ಅವಧಿಯಲ್ಲಿ ಶಿವಶಂಕರ ಶಾಸ್ತ್ರಿಗಳು ಒಟ್ಟು ೩೪ ಗ್ರಂಥಗಳನ್ನು ಹೊರತಂದಂತೆ ತಿಳಿದುಬಂದಿದ್ದರೂ ಎಲ್ಲವೂ ಲಭ್ಯವಾಗಿಲ್ಲ. ಕೆಲವು ವಿವಿಧ ಕನ್ನಡ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಅವರಿಗಿದ್ದ ಕನ್ನಡ ಮತ್ತು ಸಂಸ್ಕೃತ ಉಭಯ ಭಾಷಾಪಾಂಡಿತ್ಯವನ್ನು ಗಮನಿಸಿ ಭಾರತ ಸರ್ಕಾರವು ಅವರಿಗೆ ಪ್ರತಿಷ್ಠಿತ 'ಮಹಾಮಹೋಪಾಧ್ಯಾಯ' ಬಿರುದನ್ನು, ಮೈಸೂರು ಸಂಸ್ಥಾನವು 'ವಿದ್ಯಾನಿಧಿ'

ಬಿರುದನ್ನೂ(೧೯೩೮) ಪ್ರದಾನ ಮಾಡಿದುವು. ಅವರ ಕಾಯಕನಿಷ್ಠೆ ಹಾಗೂ ಗ್ರಂಥರಚನೆಗಳಿಗೆ ಪುರಸ್ಕಾರವಾಗಿ ೧೯೨೩ ರ ಕನ್ನಡ ಸಾಹಿತ್ಯ ಪರಿಷತ್ತಿನ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿ ಒಲಿಯಿತು. ಮೈಸೂರು, ಶೃಂಗೇರಿ ಮೊದಲಾದ ಕಡೆಗಳಲ್ಲಿ ಅವರಿಗೆ ಬಿರುದು, ಬಹುಮಾನಗಳು ಲಭ್ಯವಾಗಿದ್ದುವು. ಅವರು ನಿವೃತ್ತರಾದ ಬಳಿಕ ಅವರಿಗೆ ೪೫ ರೂಗಳ ನಿವೃತ್ತಿವೇತನವೂ ಮೈಸೂರು ಸಂಸ್ಥಾನವು ವಿದ್ವಾಂಸರನ್ನು ಗುರುತಿಸಿ ಸನ್ಮಾನಿಸುವ ಪರಿಪಾಠದ ಮೈಸೂರು ದೊರೆಗಳ ಮರ್ಯಾದೆಯ ೧೨ ರೂಪಾಯಿಗಳ ಮಾಸಾಶನವೂ ದೊರೆತಿತ್ತು. ೧೯೪೨ರಲ್ಲಿ ಶ್ರೀಯುತರು ಮೃತರಾದರು.

❐ ❐ ❐

ಆರ್. ಶಾಮಶಾಸ್ತ್ರಿ

(೧೮೬೮-೧೯೪೪)

ಪವಿತ್ರ ಬಿ.

ನಾಡಿನ ಹೆಮ್ಮೆಯ ವಿದ್ವಾಂಸರಾದ ಶಾಮಶಾಸ್ತ್ರಿಗಳು ಜಾಗತಿಕ ಮಟ್ಟದಲ್ಲಿ ಭಾರತದ ಕೀರ್ತಿಯನ್ನು ಬೆಳಗಿದವರು. ಇವರು ೧೮೬೮ರ ಜನವರಿ ೧೧ರಂದು ಹಾಸನ ಜಿಲ್ಲೆಯ ರುದ್ರಪಟ್ಟಣದ 'ಬೆಟ್ಟದಮರ ಸಂಕೇತಿ' ಕುಟುಂಬದಲ್ಲಿ ಜನಿಸಿದರು. ತಂದೆ ವೆಂಕಟರಮಣಯ್ಯ, ತಾಯಿ ಪುಟ್ಟಮ್ಮ. ಸಂಸ್ಕೃತ ಕಲಿಯಲು ಮೈಸೂರಿಗೆ ಬಂದ ಇವರು, ೧೮೯೧ರಲ್ಲಿ ವಿದ್ವತ್ ಪದವಿ ಪಡೆದರು. ತದನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಓದಿ, ೧೮೯೯ರಲ್ಲಿ ಮದ್ರಾಸ್ ವಿಶ್ವವಿದ್ಯಾಲಯದಿಂದ ಬಿ.ಎ. ಪದವಿ ಪಡೆದರು. ದಿವಾನ್ ಸರ್ ಕೆ. ಶೇಷಾದ್ರಿ ಅಯ್ಯರ್ ಅವರ ಆಶ್ರಯದಲ್ಲಿ ಬೆಳೆದ ಶಾಸ್ತ್ರಿಗಳು, ಅವರ ಮಾರ್ಗದರ್ಶನದಲ್ಲೇ ಸಂಸ್ಕೃತ ಮತ್ತು ಇಂಗ್ಲಿಷ್ ಎರಡರಲ್ಲೂ ಪ್ರೌಢಿಮೆ ಸಾಧಿಸಿದರು.

ಪ್ರಾಚೀನ ಸಾಹಿತ್ಯಲೋಕದಲ್ಲಿ ಶಾಮಶಾಸ್ತ್ರಿಗಳ ಹೆಸರು ಚಿರಸ್ಥಾಯಿಯಾಗಲು ಮುಖ್ಯ ಕಾರಣ ಕೌಟಿಲ್ಯನ 'ಅರ್ಥಶಾಸ್ತ್ರ'ದ ಶೋಧ. ೧೯೦೫ರಲ್ಲಿ ಮೈಸೂರಿನ ಓರಿಯಂಟಲ್ ಲೈಬ್ರರಿಯಲ್ಲಿ ಗ್ರಂಥಪಾಲಕರಾಗಿದ್ದಾಗ, ತಂಜಾವೂರಿನ ಪಂಡಿತರೊಬ್ಬರು ನೀಡಿದ ಕಟ್ಟುಗಳಲ್ಲಿ ಈ ಅಪೂರ್ವ ಹಸ್ತಪ್ರತಿ ಪತ್ತೆಯಾಯಿತು. ಆವರೆಗೆ ಈ ಗ್ರಂಥ ಕೇವಲ ಉಲ್ಲೇಖಗಳಲ್ಲಿ ಮಾತ್ರ ಇತ್ತೇ ಹೊರತು ಯಾರಿಗೂ ಲಭ್ಯವಿರಲಿಲ್ಲ. ಅತ್ಯಂತ ಕ್ಲಿಷ್ಟಕರವಾದ ಪಾರಿಭಾಷಿಕ ಪದಗಳಿಂದ ಕೂಡಿದ್ದ ಈ ಕೃತಿಯನ್ನು ಹಗಲಿರುಳು ಶ್ರಮಿಸಿ ೧೯೦೯ರಲ್ಲಿ ಮೂಲ ಸಂಸ್ಕೃತ ಆವೃತ್ತಿಯನ್ನು ಹಾಗೂ ೧೯೧೫ರಲ್ಲಿ ಇಂಗ್ಲಿಷ್ ಅನುವಾದವನ್ನು ಪ್ರಕಟಿಸಿದರು. ಈ ಶೋಧನೆಯು

ಭಾರತೀಯ ರಾಜನೀತಿ ಶಾಸ್ತ್ರವು ಮೆಕಿಯಾವೆಲ್ಲಿಗಿಂತಲೂ ಸಾವಿರಾರು ವರ್ಷಗಳ ಹಿಂದೆಯೇ ಪ್ರಬುದ್ಧವಾಗಿತ್ತು ಎಂಬುದನ್ನು ಸಾಬೀತುಪಡಿಸಿತು.

ಶಾಸ್ತ್ರಿಗಳು ಕೇವಲ ಅರ್ಥಶಾಸ್ತ್ರಕ್ಕೆ ಸೀಮಿತವಾಗಲಿಲ್ಲ. ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ (ORI) ಮೂಲಕ ಅನೇಕ ಮಹತ್ತ್ವದ ಕೃತಿಗಳನ್ನು ಹೊರತಂದರು. ಇವರು ಸಂಪಾದಿಸಿದ ೧೯ ಸಂಸ್ಕೃತ ಗ್ರಂಥಗಳಲ್ಲಿ 'ಬೌಧಾಯನ ಗೃಹ್ಯಸೂತ್ರ', 'ಅಭಿಲಷಿತಾರ್ಥ ಚಿಂತಾಮಣಿ' ಮತ್ತು 'ಸರಸ್ವತೀ ವಿಲಾಸ' ಪ್ರಮುಖವಾದವು. ಈ ಕೃತಿಗಳು ಪ್ರಾಚೀನ ಭಾರತದ ಸಂಪ್ರದಾಯ ಮತ್ತು ನ್ಯಾಯಾಂಗ ಪದ್ಧತಿಯ ಮೇಲೆ ಬೆಳಕು ಚೆಲ್ಲುತ್ತವೆ.

ಹಳೆಯ ಕನ್ನಡ ಕೃತಿಗಳ ಸಂರಕ್ಷಣೆಯಲ್ಲಿ ಶಾಸ್ತ್ರಿಗಳ ಪಾತ್ರ ದೊಡ್ಡದು. ಕುಮಾರವ್ಯಾಸ ಭಾರತದ 'ವಿರಾಟಪರ್ವ', 'ಉದ್ಯೋಗ ಪರ್ವ', 'ಕೆಳದಿ ನೃಪ ವಿಜಯ' ಮತ್ತು ಲಕ್ಷ್ಮೀಶನ 'ಜೈಮಿನಿ ಭಾರತ'ದಂತಹ ಕೃತಿಗಳನ್ನು ವೈಜ್ಞಾನಿಕವಾಗಿ ಸಂಪಾದಿಸಿದರು.

ಶಾಸ್ತ್ರಿಗಳ ಸಾಧನೆಯನ್ನು ಗುರುತಿಸಿ ದೇಶವಿದೇಶಗಳಿಂದ ಅನೇಕ ಗೌರವಗಳು ಲಭಿಸಿದವು. ೧೯೧೯ರಲ್ಲಿ ವಾಷಿಂಗ್ಟನ್‌ನ ಓರಿಯಂಟಲ್ ವಿಶ್ವವಿದ್ಯಾನಿಲಯದಿಂದ ಮತ್ತು ೧೯೨೧ರಲ್ಲಿ ಕಲ್ಕತ್ತಾ ವಿಶ್ವವಿದ್ಯಾ ಲಯದಿಂದ ಗೌರವ ಡಾಕ್ಟೊರೇಟ್ ಪದವಿ ಲಭಿಸಿತು. ೧೯೨೧ರಲ್ಲಿ ಈ ಪ್ರತಿಷ್ಠಿತ ಸಂಸ್ಥೆಯ ಸದಸ್ಯತ್ವ ಮತ್ತು 'ಕ್ಯಾಂಪ್‌ಬೆಲ್ ಸ್ಮಾರಕ ಚಿನ್ನದ ಪದಕ' ಇವರಿಗೆ ಸಂದಿತು.

ಇವರ ಕೀರ್ತಿ ಭಾರತದ ಆಚೆಗೂ ವಿಸ್ತರಿಸಿತು. ಒಮ್ಮೆ ಮೈಸೂರಿನ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು ಜರ್ಮನಿಗೆ ಭೇಟಿ ನೀಡಿದ್ದಾಗ, ಅಲ್ಲಿಯ ಪ್ರಾಧ್ಯಾಪಕರೊಬ್ಬರು ಕುತೂಹಲದಿಂದ "ತಾವು ಡಾ.ಶಾಮಶಾಸ್ತ್ರಿಗಳ ಮೈಸೂರಿ ನವರೇ?" ಎಂದು ಪ್ರಶ್ನಿಸಿದರಂತೆ. ಶಾಮಶಾಸ್ತ್ರಿಗಳ ಜಗತ್ಪ್ರಸಿದ್ಧ ವಿದ್ವತ್ತನ್ನು ಕಂಡು ಬೆರಗಾದ ಅರಸರು, ಸ್ವದೇಶಕ್ಕೆ ಮರಳಿದ ಅನಂತರ ಶಾಸ್ತ್ರಿಗಳನ್ನು ಅರಮನೆಗೆ ಕರೆಸಿ, "ನಮ್ಮ ದೇಶದಲ್ಲಿ ನೀವು ನಮ್ಮ ಪ್ರಜೆ, ಆದರೆ ಹೊರದೇಶದಲ್ಲಿ ನಾವು ನಿಮ್ಮ ಪ್ರಜೆ" ಎಂದು ಗೌರವದಿಂದ ನುಡಿದರು.

೧೯೧೨ ರಿಂದ ೧೯೧೮ರವರೆಗೆ ಶಾಮಶಾಸ್ತ್ರಿಗಳು ಬೆಂಗಳೂರಿನ ಚಾಮರಾಜ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಪ್ರಾಂಶುಪಾಲರಾಗಿ ಸೇವೆಸಲ್ಲಿಸಿದರು.

ಸಂಸ್ಕೃತ ವಿದ್ವತ್ ಪರೀಕ್ಷಾ ಮಂಡಳಿ ಮತ್ತು ಪತ್ರಿಕಾ ಸಂಪಾದಕೀಯ ಸಮಿತಿಗಳ ಸದಸ್ಯರಾಗಿ ಕಾರ್ಯನಿರ್ವಹಿಸಿದ ಇವರು, ಪಾಠಶಾಲೆಯ ಏಳಿಗೆಗಾಗಿ ಶ್ರಮಿಸಿದರು. ಸಂಸ್ಕೃತ ಭಾಷೆಯಲ್ಲಿಯೇ ಪಾಂಡಿತ್ಯಪೂರ್ಣ ಉಪನ್ಯಾಸಗಳನ್ನು ನೀಡುತ್ತಿದ್ದ ಇವರು, ಶ್ರೇಷ್ಠ ಅಧ್ಯಾಪಕರಾಗಿಯೂ ಹೆಸರಾಗಿದ್ದರು.

ಶಾಮಶಾಸ್ತ್ರಿಯವರ ವೃತ್ತಿಜೀವನದ ಮಹತ್ವದ ಘಟ್ಟಗಳಾದ ಗ್ರಂಥಸಂಪಾದನೆ ಮತ್ತು ಶಾಸನಶಾಸ್ತ್ರದ ಸೇವೆಯನ್ನು ಗಮನಿಸಬೇಕಾಗಿದೆ. ೧೯೧೮ರಲ್ಲಿ ಪುರಾತತ್ತ್ವ ಇಲಾಖೆಯ ನಿರ್ದೇಶಕರಾದ ಅನಂತರ, ಪ್ರಾಚೀನ ಸಾಹಿತ್ಯದ ಮತ್ತೊಂದು ಪ್ರಕಾರವಾದ 'ಶಾಸನ ಸಾಹಿತ್ಯ'ದ ಮೇಲೆ ಅವರು ಗಮನ ಹರಿಸಿದರು. ದಕ್ಷಿಣ ಭಾರತದ ಶಾಸನಗಳು ('South Indian Inscriptions') ಸರಣಿಯ ೯ನೇ ಸಂಪುಟದ ಎರಡು ಭಾಗಗಳನ್ನು ಸಂಪಾದಿಸಿದರು. ಇದರಲ್ಲಿ ನೂರಾರು ಕನ್ನಡ ಶಾಸನಗಳನ್ನು ಓದಿ, ಅವುಗಳ ಐತಿಹಾಸಿಕ ಮಹತ್ತ್ವವನ್ನು ದಾಖಲಿಸಿದ್ದಾರೆ. ದೇವನಾಗರಿ ಲಿಪಿಯ ಉಗಮವು ಭಾರತೀಯ ಮೂಲದ್ದು ಎಂಬುದನ್ನು ತಾಂತ್ರಿಕ ಸಾಕ್ಷ್ಯಗಳೊಂದಿಗೆ ಸಾಬೀತುಪಡಿಸಿ, ಪಾಶ್ಚಾತ್ಯ ವಿದ್ವಾಂಸರ ವಾದವನ್ನು ಖಂಡಿಸಿದರು.

ಪ್ರಾಚೀನ ಗ್ರೀಕ್ ಸಾಹಿತ್ಯಕ್ಕೂ ಕನ್ನಡಕ್ಕೂ ಇರುವ ಸಂಬಂಧವನ್ನು ಗುರುತಿಸಿದ ಮೊದಲ ಕನ್ನಡಿಗ ಶಾಮಶಾಸ್ತ್ರಿಗಳು. ಕ್ರಿ.ಶ. ೨ನೇ ಶತಮಾನದ ಆಕ್ಸಿರಿಂಕಸ್ ಪ್ಯಾಪಿರಸ್‌ನಲ್ಲಿ ದೊರೆತ ಗ್ರೀಕ್ ನಾಟಕದಲ್ಲಿರುವ ಕೆಲವು ಶಬ್ದಗಳು 'ಕನ್ನಡ' ಶಬ್ದಗಳೆಂದು ಅವರು ವಿಸ್ತಾರವಾಗಿ ಪ್ರತಿಪಾದಿಸಿದರು. ಇದು ಕನ್ನಡ ಭಾಷೆಯ ಪ್ರಾಚೀನತೆಯನ್ನು ಜಾಗತಿಕ ಮಟ್ಟದಲ್ಲಿ ಎರಡು ಸಾವಿರ ವರ್ಷಗಳ ಹಿಂದೆ ಕರೆದೊಯ್ಯಲು ಸಹಕಾರಿಯಾಯಿತು.

ಪ್ರಾಚೀನ ವೈದಿಕ ಸಾಹಿತ್ಯವನ್ನು ಕೇವಲ ಧಾರ್ಮಿಕ ದೃಷ್ಟಿಯಿಂದ ನೋಡದೆ, ವೈಜ್ಞಾನಿಕ ಮತ್ತು ಗಣಿತದ ದೃಷ್ಟಿಯಿಂದ ಶಾಸ್ತ್ರಿಗಳು ವಿಶ್ಲೇಷಿಸಿದರು. ಶಾಮಶಾಸ್ತ್ರಿ ಅವರು 'Vedanga Jyoutisha' ಮೊದಲಾದ ಗ್ರಂಥಗಳ ಮೂಲಕ ವೈದಿಕ ಕಾಲದ ಕಾಲಗಣನೆ, ಋತುಚಕ್ರ ಮತ್ತು ಗ್ರಹಣಗಳ ಚಕ್ರವನ್ನು ಗಣಿತದ ನೆರವಿನಿಂದ ವಿವರಿಸಿದರು. ಪ್ರಾಚೀನ ಭಾರತದ ಭೂ ಕಂದಾಯ ಪದ್ಧತಿ, ತೆರಿಗೆ ವಿಧಾನ, ಸ್ಮೃತಿಗಳಲ್ಲಿ ಮಹಿಳೆಯರ ಹಕ್ಕುಗಳು ಮತ್ತು ಚಾಣಕ್ಯನ ಸರ್ಕಾರಿ

ವ್ಯವಸ್ಥೆಗಳ ಬಗ್ಗೆ ಆಳವಾದ ವಿವೇಚನೆ ನಡೆಸಿದ್ದಾರೆ. ದೇವನಾಗರಿ ಲಿಪಿಯ ಉಗಮ ಮತ್ತು ಪ್ರಾಚೀನ ಗುಪ್ತಲೇಖನ (Cryptography) ವಿಧಾನಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಅಭಿನವ ಕಾಳಿದಾಸ, ಅಪ್ಪಯ್ಯ ದೀಕ್ಷಿತರು, ಕೇಶಿರಾಜ ಮತ್ತು ಅರ್ಥಶಾಸ್ತ್ರದ ಕರ್ತೃತ್ವ ಹಾಗೂ ಕಾಲಮಾನದ ಕುರಿತು ಚರ್ಚಿಸಿದ್ದಾರೆ. ಭಾರತೀಯ ನ್ಯಾಯಾಂಗದಲ್ಲಿ ಸತ್ಯದ ಕಲ್ಪನೆ, ವೇದಗಳಲ್ಲಿನ ಪಾಪ ಮತ್ತು ಮುಕ್ತಿಯ ಸ್ವರೂಪ ಹಾಗೂ ಅವಿದ್ಯೆಯ ಕುರಿತಾದ ಚಿಂತನೆಯನ್ನು ನಡೆಸಿದ್ದಾರೆ. ವೈದಿಕ ಪಂಚಾಂಗ, ಅಶ್ವಿನೀ ದೇವತೆಗಳು, ವಿಷ್ಣುವಿನ ಅವತಾರಗಳು ಮತ್ತು ವೈದಿಕ ಗ್ರಹಣ ಚಕ್ರಗಳ ಕುರಿತಾದ ಇವರ ಲೇಖನಗಳು ಜಾಗತಿಕ ವಿದ್ವಾಂಸರ ಗಮನ ಸೆಳೆದಿವೆ. ವಿಕ್ರಮ ಹಾಗೂ ಶಾಲಿವಾಹನ ಶಕೆಗಳು, ದ್ರಾವಿಡ ಸಂಸ್ಕೃತಿ, ದೇವಾಲಯ ವಾಸ್ತುಶಿಲ್ಪ ಮತ್ತು ಜೈನ ಧರ್ಮದ ದೈನಂದಿನ ವಿಧಿಗಳ ಬಗ್ಗೆ ಸಂಶೋಧನ ಬರಹಗಳನ್ನು ನೀಡಿದ್ದಾರೆ. ವೇದಗಳಲ್ಲಿ ಅಡಗಿರುವ ಗೂಢ ಸಂಕೇತಗಳು ಖಗೋಳವಿಜ್ಞಾನಕ್ಕೆ ಸಂಬಂಧಿಸಿವೆ ಎಂಬುದನ್ನು ಅವರು ಸಾಧಾರವಾಗಿ ನಿರೂಪಿಸಿದರು.

ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ಅವರು ನೀಡಿದ ಉಪನ್ಯಾಸಗಳ ಸಂಕಲನ 'Evolution of Indian Polity' ಪ್ರಾಚೀನ ಭಾರತದ ಆಡಳಿತ ಪದ್ಧತಿಯ ಸಮಗ್ರ ಚಿತ್ರಣವನ್ನು ನೀಡುತ್ತದೆ. ಕಲ್ಕತ್ತಾ ವಿಶ್ವವಿದ್ಯಾಲಯದ ಉಪಕುಲಪತಿ ಸರ್ ಆಶುತೋಷ್ ಮುಖರ್ಜಿಯವರ ಆಹ್ವಾನದ ಮೇರೆಗೆ, ಭಾರತೀಯ ಆಡಳಿತ ಪದ್ಧತಿಯ ವಿಕಾಸದ ಕುರಿತು ಶಾಸ್ತ್ರಿಗಳು ನೀಡಿದ ಉಪನ್ಯಾಸಗಳು ೧೯೨೦ರಲ್ಲಿ ಪುಸ್ತಕ ರೂಪದಲ್ಲಿ ಪ್ರಕಟವಾದುವು.

ತೈತ್ತಿರೀಯ ಸಂಹಿತೆ, ಮಹಾಭಾರತ ಮತ್ತು ಶಾಸನಗಳ ಆಧಾರದ ಮೇಲೆ ಭಾರತೀಯ ಸಂವಿಧಾನಾತ್ಮಕ ಚರಿತ್ರೆಯನ್ನು ಅವರು ಕಟ್ಟಿಕೊಟ್ಟರು. ಇಂದಿನ ಪ್ರಜಾಪ್ರಭುತ್ವದ ಮೌಲ್ಯಗಳಾದ ಸಮಾನತೆ ಮತ್ತು ನ್ಯಾಯ–ಇವು ಪ್ರಾಚೀನ ಭಾರತದಲ್ಲಿ 'ಧರ್ಮ' ಮತ್ತು 'ನೀತಿ'ಯ ರೂಪದಲ್ಲಿತ್ತು ಎಂದು ಅವರು ವಾದಿಸಿದರು.

ಶಾಸ್ತ್ರಿಗಳ ಜೀವನವು 'ಸರಳ ಬದುಕು – ಉದಾತ್ತ ಚಿಂತನೆ'ಗೆ ಮಾದರಿಯಾಗಿತ್ತು. ವೃದ್ಧಾಪ್ಯದಲ್ಲೂ ಯುವಕರಂತೆ ಸಂಶೋಧನೆಯಲ್ಲಿ ತೊಡಗಿದ್ದರು. ಹಸ್ತಪ್ರತಿಗಳನ್ನು ಓದುವುದೇ ಅವರಿಗೆ ಪರಮ ಹವ್ಯಾಸವಾಗಿತ್ತು.

೧೯೨೭ರಲ್ಲಿ ಗಾಂಧೀಜಿಯವರನ್ನು ಭೇಟಿ ಮಾಡಿದಾಗ, ಭಾರತದ ಸುಸ್ಥಿರ ಅಭಿವೃದ್ಧಿಗೆ ಪ್ರಾಚೀನ 'ವಿಹಾರ'ಗಳಂತಹ ಸಂಸ್ಕೃತಿ ಕೇಂದ್ರಗಳು ಅಗತ್ಯವೆಂದು ಅವರು ಸಲಹೆ ನೀಡಿದ್ದರು.

೧೯೪೪ ಜನವರಿ ೨೩ರಂದು ಶಾಮಶಾಸ್ತ್ರಿಗಳು ನಿಧನರಾದಾಗ, ಭಾರತವು ಒಬ್ಬ ನಿಷ್ಠಾವಂತ ಸಂಶೋಧಕನನ್ನು ಮತ್ತು ಪ್ರಾಚೀನ ಸಾಹಿತ್ಯದ ಕಾವಲುಗಾರನನ್ನು ಕಳೆದುಕೊಂಡಿತು. ಅವರು ಕೌಟಿಲ್ಯನ 'ಅರ್ಥಶಾಸ್ತ್ರ'ವನ್ನು ಪತ್ತೆಹಚ್ಚದಿದ್ದರೆ, ಭಾರತದ ಇತಿಹಾಸವು ಅಪೂರ್ಣವಾಗುತ್ತಿತ್ತು. ಭಾರತೀಯ ಸಂಸ್ಕೃತಿ, ಭಾಷೆ ಮತ್ತು ಚರಿತ್ರೆಯನ್ನು ಜಗತ್ತಿನ ಕಣ್ಣೆದುರು ಗೌರವಯುತವಾಗಿ ನಿಲ್ಲಿಸಿದ ಆರ್. ಶಾಮಶಾಸ್ತ್ರಿಗಳು ಕನ್ನಡ ನಾಡಿನ ಪಂಡಿತಪರಂಪರೆಯಲ್ಲಿ ಅವಿಸ್ಮರಣೀಯರು..

ಶಾಮಶಾಸ್ತ್ರಿ ಅವರ ಪ್ರಮುಖ ಕೃತಿಗಳು:

೧. ಅರ್ಥಶಾಸ್ತ್ರ (ಮೂಲ ಸಂಸ್ಕೃತ): ಸಂಪಾದನೆ: ಆರ್. ಶಾಮಶಾಸ್ತ್ರಿ, ಓರಿಯಂಟಲ್ ಲೈಬ್ರರಿ, ಮೈಸೂರು (೧೯೦೯).

Kautilya's Arthashastra (English): ಅನುವಾದ: R. Shamasastry, Government Press, Bangalore (೧೯೧೫).

Evolution of Indian Polity: University of Calcutta (೧೯೨೦).

Gavam Ayana (The Vedic Era): Graha Matha Press, Mysore (೧೯೨೧).

Drapsa (Vedic Cycle of Eclipses): Mysore (೧೯೩೬).

South Indian Inscriptions (Vol. 9): Archaeological Survey of India, Madras (೧೯೩೯).

೨. ಸಂಪಾದಿತ ಕೃತಿಗಳು:

ಸಂಸ್ಕೃತ: ಬೌಧಾಯನ ಗೃಹ್ಯಸೂತ್ರ, ಅಭಿಲಷಿತಾರ್ಥ ಚಿಂತಾಮಣಿ, ಸರಸ್ವತೀ ವಿಲಾಸ (ORI ಪ್ರಕಟಣೆಗಳು).

ಕನ್ನಡ: ವಿರಾಟಪರ್ವ, ಉದ್ಯೋಗ ಪರ್ವ (ಕುಮಾರವ್ಯಾಸ ಭಾರತ), ಕೆಳದಿ ನೃಪ ವಿಜಯ, ಜೈಮಿನಿ ಭಾರತ.

೩. ಸಂಶೋಧನ ಪ್ರಬಂಧಗಳು:

ಲಿಪಿಶಾಸ್ತ್ರ: 'ದೇವನಾಗರಿ ಲಿಪಿಯ ಉಗಮ ಮತ್ತು ವಿಕಾಸ' (ಭಾರತೀಯ ಮೂಲದ ಪ್ರತಿಪಾದನೆ).

ಭಾಷಾಶಾಸ್ತ್ರ: 'ಆಕ್ಸಿರಿಂಕಸ್ ಪ್ಯಾಪಿರಸ್' (ಗ್ರೀಕ್ ನಾಟಕಗಳಲ್ಲಿ ಕನ್ನಡ ಪದಗಳ ಕುರಿತಾದ ಸಂಶೋಧನೆ).

ವಿಜ್ಞಾನ: 'ವೈದಿಕ ಜ್ಯೋತಿಷ ಮತ್ತು ಕಾಲಗಣನೆ' (ವಿವಿಧ ವಿದ್ವತ್ ಪತ್ರಿಕೆಗಳಲ್ಲಿ ಪ್ರಕಟಿತ).

❐ ❐ ❐

ಬೆಳ್ಳಾವೆ ವೆಂಕಟನಾರಣಪ್ಪ

(೧೮೭೨–೧೯೪೩)

ಗೀತಾ ನಾವಲ್

ಕನ್ನಡ ಭಾಷೆ, ನಿಘಂಟು, ವಿಜ್ಞಾನ, ಅಧ್ಯಾಪನ, ನಾಗರಿಕ ಸೇವೆ– ಹೀಗೆ ಹಲವು ಕ್ಷೇತ್ರಗಳಲ್ಲಿ ಕೃಷಿ ಮಾಡಿ 'ಬೆವೆಂ' ಎಂದೇ ಖ್ಯಾತರಾದವರು ಬಹುಮುಖೀ ವ್ಯಕ್ತಿತ್ವದ ಬೆಳ್ಳಾವೆ ವೆಂಕಟನಾರಣಪ್ಪ. ಇವರು ೧೦.೦೨.೧೮೭೨ ರಂದು ವೆಂಕಟ ಕೃಷ್ಣಯ್ಯ–ಲಕ್ಷ್ಮೀದೇವಿ ದಂಪತಿಗೆ ತುಮಕೂರಿನ ಬೆಳ್ಳಾವೆಯಲ್ಲಿ ಜನಿಸಿದರು. ಇವರ ಪ್ರಾಥಮಿಕ ವಿದ್ಯಾಭ್ಯಾಸ ಅಂದಿನ ಕಾಲದಲ್ಲಿದ್ದಂತೆ ಕೂಲಿಮಠದಲ್ಲಿಯೇ ನಡೆಯಿತು. ಬಳಿಕ ತುಮಕೂರು ಹಾಗೂ ಬೆಂಗಳೂರಿನಲ್ಲಿ ವ್ಯಾಸಂಗ ಮುಂದುವರಿಸಿ, ಮದರಾಸು ವಿಶ್ವವಿದ್ಯಾಲಯದಿಂದ ಭೌತಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದರು. ತದನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಭೌತಶಾಸ್ತ್ರದ ಅಧ್ಯಾಪಕರಾದರು. ಆ ಕಾಲೇಜಿನ ಆಡಳಿತ ವರ್ಗದ ಅಪೇಕ್ಷೆಯನುಸಾರ ೧೪ ವರ್ಷಗಳ ಕಾಲ ಎಂ.ಎ. ತರಗತಿಗಳಿಗೆ 'ಮಾನವ ಶರೀರಶಾಸ್ತ್ರ' (Physiology) ವನ್ನು ಬೋಧಿಸಿದರು. ಇದು ಜೀವವಿಜ್ಞಾನದ ಒಂದು ಪ್ರಮುಖ ಶಾಖೆ. ಈ ವಿಷಯವನ್ನು ಅರ್ಥಮಾಡಿಕೊಳ್ಳಲು ಕೆಲಮಟ್ಟಿಗಾದರೂ ಭೌತವಿಜ್ಞಾನ ಹಾಗೂ ರಸಾಯನ ವಿಜ್ಞಾನದ ಮೂಲ ತತ್ತ್ವ ವನ್ನಾದರೂ ಅಧ್ಯಯನ ಮಾಡಬೇಕಾದ ಅಗತ್ಯವಿದೆ ಎಂಬುದನ್ನು ಅವರು ಅನುಭವದಿಂದ ಅರಿತಿದ್ದರು. ಹಾಗಾಗಿ ಒಂದು ವಿಷಯದ ಒಳಹೊಗಲು ಬೇಕಾದ ತಳಮಟ್ಟದ ಅಭ್ಯಾಸಕ್ಕೆ ಅನುವಾಗುವಂತೆ ವಿದ್ಯಾರ್ಥಿಗಳನ್ನು ಬೆಳೆಸುವುದು ಅಧ್ಯಾಪಕನ ಕರ್ತವ್ಯ ಎಂದೇ ನಂಬಿ ಅತ್ಯಂತ ಜವಾಬ್ದಾರಿಯುತವಾಗಿ ತರಗತಿಗಳನ್ನು ನಡೆಸುವುದು ಅವರ ಪದ್ಧತಿಯಾಗಿತ್ತು. ಹಾಗಾಗಿ ಅವರು ಅಧ್ಯಾಪಕ ವೃತ್ತಿಯಿಂದ ನಿವೃತ್ತರಾಗುವವರೆಗೂ ಪೂರ್ವಸಿದ್ಧತೆ ಇಲ್ಲದೆ ತರಗತಿಗೆ ಪ್ರವೇಶಿಸಿದವರಲ್ಲವೆಂದು ತಿಳಿದುಬರುತ್ತದೆ.

ಕರ್ನಾಟಕದಲ್ಲಿ ಆಗ ಇಂಗ್ಲಿಷ್ ವ್ಯಾಮೋಹ ದಟ್ಟವಾಗಿ ಆವರಿಸಿಕೊಳ್ಳುತ್ತ ಕನ್ನಡದ ಕಂಪು ನಿಧಾನವಾಗಿ ಪೇಲವವಾಗುತ್ತ ಇದ್ದುದು, ಅಂದಿನ ಆಧುನಿಕ ಶಿಕ್ಷಣ ಪದ್ಧತಿಗೆ ಮತ್ತು ವಿಜ್ಞಾನದ ಕಲಿಕೆಗೆ ಇಂಗ್ಲಿಷ್ ಅನಿವಾರ್ಯ ವೆಂಬಂತಾಗಿದ್ದುದು ಇದ್ದೇ ಇತ್ತು. ಸಂಸ್ಕೃತಕ್ಕೆ ರಾಜಭಾಷೆಯ ಕಿರೀಟವಿದ್ದರೆ ಇಂಗ್ಲಿಷ್ ಭಾಷೆಗೆ ಶ್ರೇಷ್ಠತೆಯ ವ್ಯಸನ! ಈ ಪರಿಸ್ಥಿತಿಯಲ್ಲಿಯೂ ಕನ್ನಡದ ಕೆಲಸಗಳು ಸಾಗುತ್ತಲೇ ಇದ್ದುವು. ಹಲವಾರು ಪಂಡಿತ ಮಾನ್ಯರು ಕನ್ನಡದ ಕಟ್ಟಾಳುಗಳಾಗಿ ನೆಲದ ಭಾಷೆ ಮತ್ತು ಸಾಹಿತ್ಯಗಳನ್ನು ಶ್ರೀಮಂತಗೊಳಿಸುತ್ತಿದ್ದುದು ಇದ್ದೇ ಇತ್ತು. ಬೆಳ್ಳಾವೆಯವರಿಗೆ ವಿಜ್ಞಾನ ವಿಷಯದಲ್ಲಿ ಅಗಾಧ ಪರಿಶ್ರಮವಿದ್ದಂತೆಯೇ ಕನ್ನಡ ಭಾಷೆ, ಕನ್ನಡ ಜನ ಹಾಗೂ ಕನ್ನಡ ನೆಲದ ಬಗ್ಗೆ ಅಪಾರ ಅಭಿಮಾನವಿತ್ತು. ಕನ್ನಡ ಜನರು ವಿಜ್ಞಾನ ವಿಚಾರಗಳನ್ನು ಕಲಿತು ತಮ್ಮ ಜ್ಞಾನದ ಹರಹನ್ನು ಹೆಚ್ಚಿಸಿಕೊಳ್ಳಬೇಕು ಎಂಬ ಅಭಿಲಾಷೆ ಅವರಿಗಿತ್ತು. ''ಇದು ವಿಜ್ಞಾನಯುಗ. ನಮ್ಮ ದೇಶದ ಆರ್ಥಿಕಸ್ಥಿತಿ ಉತ್ತಮಗೊಳ್ಳಬೇಕಾದರೆ ಪಾಶ್ಚಾತ್ಯದೇಶಗಳಲ್ಲಿಯಂತೆ ಜನಸಾಮಾನ್ಯರಲ್ಲಿ ವಿಜ್ಞಾನ ವಿಚಾರಗಳನ್ನು ಹರಡಬೇಕು'' ಎಂದು ಬಲವಾಗಿ ನಂಬಿದ್ದರು ('ಜೀವವಿಜ್ಞಾನ': ಮುನ್ನುಡಿ. ಪು.೧೧೧). ಅದಕ್ಕಾಗಿ ಅವರು ಕನ್ನಡದಲ್ಲಿ ವಿಜ್ಞಾನವನ್ನು ಜನಪ್ರಿಯ ಗೊಳಿಸಲು ಕ್ಲಿಷ್ಟವಾದ ವೈಜ್ಞಾನಿಕ ವಿಷಯಗಳನ್ನು ಸರಳೀಕರಿಸಿ ವಿವರಿಸುವ ಪ್ರಯತ್ನ ಮಾಡಿದರು. ವಿಜ್ಞಾನದ ಪಾರಿಭಾಷಿಕ ಪದಗಳ ಮೂಲಸ್ವರೂಪವೂ ಅರ್ಥ ಬಾಹುಳ್ಯವೂ ಕೆಡದಂತೆ ಪದಗಳನ್ನು ಆಯ್ದು ಬಳಸಿದರು. ಹೊಸ ಪೀಳಿಗೆಯ ವಿದ್ಯಾರ್ಥಿಗಳಿಗೂ ವಿಜ್ಞಾನವನ್ನು ತಿಳಿಯಬೇಕೆಂಬ ಆಸಕ್ತಿ ಇರುವ ಸಾಮಾನ್ಯ ಓದುಗರಿಗೂ ಅರ್ಥವಾಗುವಂತೆ ಜೀವವಿಜ್ಞಾನ, ಭೌತವಿಜ್ಞಾನ ಹಾಗೂ ಕೃಷಿವಿಜ್ಞಾನದಂತಹ ವಿಷಯಗಳನ್ನು ಕುರಿತು ಲೇಖನಗಳನ್ನು ಬರೆದರು. ಹಾಗೆಯೇ ಹಲವಾರು ವಿಷಯತಜ್ಞರಿಂದಲೂ ಬರೆಯಿಸಿದರು. ಅವರ 'ಜೀವವಿಜ್ಞಾನ'ವೆಂಬ ಕೃತಿಯು ಒಳಗೊಂಡಿರುವ ವಿಷಯ ವೈವಿಧ್ಯಗಳನ್ನೂ ಅವುಗಳಿಗೆ ಅವರು ಬಳಸಿರುವ ಸುಲಭಗ್ರಾಹ್ಯ ಪಾರಿಭಾಷಿಕಗಳನ್ನು ನೋಡಿದರೆ ಅವರ ಪರಿಶ್ರಮದ ಮೌಲ್ಯವೇನೆಂಬುದು ಅರಿವಾಗುತ್ತದೆ. ಭೂಮಂಡಲದ ರಚನೆ, ಅದು ಒಳಗೊಂಡಿರುವ ವಿವಿಧ ಜೀವರಾಶಿಗಳ ಹುಟ್ಟು, ಜೀವದ ನೆಲೆ, ನಮ್ಮ ಭೂಮಿಯ ವಯಸ್ಸು ಮುಂತಾದವುಗಳ ಕುರಿತಂತೆ ಅತ್ಯಂತ ವೈಜ್ಞಾನಿಕವಾಗಿ ಮೂಲಭೂತ ಅಂಶಗಳನ್ನು ಸರಳಗನ್ನಡದಲ್ಲಿ ವಿವರಿಸಲಾಗಿದೆ. ಸೂಕ್ಷ್ಮಜೀವಿಯಾದ ಅಮೀಬದ ರಚನೆ,

ಕಾರ್ಯ, ಅದರ ವಂಶಾಭಿವೃದ್ಧಿ ಅದರ ವಿವಿಧ ಜಾತಿಗಳ ಕುರಿತು ಆಮೂಲಾಗ್ರ ಶೋಧ ಕಾರ್ಯದಂತೆ ವಿವರಗಳಿವೆ; ಹಾಗೆಯೇ ಮನುಷ್ಯನ ರಚನೆ ಹೇಗಾಯಿತು, ಅವನ ದೇಹದ ವಿವಿಧ ಅಂಗಗಳಾದ ಅಸ್ಥಿಪಂಜರ, ಸ್ನಾಯುಗಳು, ನರಗಳು ರಕ್ತಪರಿಚಲನೆ ಇತ್ಯಾದಿ ಶರೀರಶಾಸ್ತ್ರ ವಿಚಾರಗಳು; ಸ್ಪರ್ಶೇಂದ್ರಿಯ, ರಸನೇಂದ್ರಿಯ, ಘ್ರಾಣೇಂದ್ರಿಯ, ಶ್ರೋತ್ರೇಂದ್ರಿಯ, ಚಕ್ಷುರಿಂದ್ರಿಯ ಎಂದು ನಮ್ಮ ಪಂಚೇಂದ್ರಿಯಗಳನ್ನು ಅವುಗಳ ಕಾರ್ಯಸ್ವರೂಪಗಳನ್ನು ತಟ್ಟನೇ ಅರಿವಿಗೆ ತಂದಿಡುವಂತಹ ಪದಗಳಲ್ಲಿ ವಿವರಿಸಿರುವುದು ಅನನ್ಯ ಪ್ರಯತ್ನ. ಅಂತೆಯೇ ಸಸ್ಯವರ್ಗದ ಪ್ರಭೇದಗಳು, ಅವುಗಳ ಕಾರ್ಯವಿಧಾನ; ಮನುಷ್ಯೇತರ ಪ್ರಾಣಿವರ್ಗದ ವಿವರ, ಕೀಟ ಪ್ರಪಂಚ, ಅಣುಜೀವಿಗಳು, ಅಳಿದುಹೋದ ಜೀವರೂಪಗಳು, ವಿಕಾಸವಾದ– ಹೀಗೆ ಅತ್ಯಂತ ವಿಸ್ತೃತವಾಗಿ ವಿಜ್ಞಾನದ ವಿವಿಧಾಂಗಗಳನ್ನು 'ಜೀವವಿಜ್ಞಾನ' ಕೃತಿ ಸೆರೆಹಿಡಿದಿದೆ. ಪಾರಿಭಾಷಿಕಗಳ ಬಳಕೆಗೆ ವಿಶೇಷ ಎಚ್ಚರವಹಿಸಿರುವುದು ಅಭಿನಂದ ನಾರ್ಹವಾಗಿದೆ.

ಲೇಖನ, ಅಧ್ಯಾಪನ ಹಾಗೂ ಅಧ್ಯಯನಗಳಲ್ಲೇ ನಿರತರಾಗಿದ್ದ ಬೆಳ್ಳಾವೆಯವರ ಕುರಿತು ವಿದ್ಯಾರ್ಥಿಗಳಿಗೂ ಬಹಳಷ್ಟು ಅಧ್ಯಾಪಕ ವರ್ಗಕ್ಕೂ ದಿನೇದಿನೇ ಮೆಚ್ಚುಗೆಯೂ ಗೌರವವೂ ಅಧಿಕವಾಗುತ್ತಿದ್ದಂತೆ, ಕುಯುಕ್ತಿಗಳಿಂದಲೂ ಪಿತೂರಿಗಳಿಂದಲೂ ಅವರ ಖ್ಯಾತಿಗೆ ಕಳಂಕ ತರುವ ಪ್ರಯತ್ನಗಳೂ ಕಾಲೇಜಿನಲ್ಲಿ ನಿರಂತರವಾಗಿ ನಡೆಯುತ್ತಲೇ ಇತ್ತು. ಅಂತಹ ಕೆಟ್ಟ ಮನಸ್ಸುಗಳ ಕಾರಣದಿಂದಾಗಿ ಬೆಳ್ಳಾವೆಯವರಿಗೆ ಮುಂಬಡ್ತಿಗಳನ್ನು ತಡೆಹಿಡಿಯುವ ಅಥವಾ ಅವರ ಪಾಠ ಪ್ರವಚನಗಳಲ್ಲಿ ತಪ್ಪು ಸೃಷ್ಟಿಸಿ ಕಿರಿಕಿರಿಯನ್ನುಂಟು ಮಾಡುವ ಪ್ರಯತ್ನಗಳೂ ಇದ್ದುವು. ಇಷ್ಟೆಲ್ಲಾ ಅಡೆತಡೆಗಳು, ನೋವು ನಿರಾಶೆಗಳು ಇದ್ದಾಗಲೂ ಬೆಳ್ಳಾವೆಯವರಿಗೆ ವಿಜ್ಞಾನವಿಷಯಗಳನ್ನು ಕನ್ನಡ ಜನಕ್ಕೆ ತಲುಪಿಸಬೇಕೆಂಬ ಪ್ರಯತ್ನದಲ್ಲಿದ್ದ ಬದ್ಧತೆ, ಕನ್ನಡದಲ್ಲಿ ವಿಜ್ಞಾನವನ್ನು ತಂದಿಡಬೇಕೆಂಬುದರತ್ತ ಇದ್ದ ಆಸಕ್ತಿ ಅತಿಶಯವಾದದ್ದು. ಇದು ಕಾರ್ಯರೂಪಕ್ಕಿಳಿಯಬೇಕಾದರೆ ಬೇರೊಂದು ಮಾರ್ಗವೂ ಬೇಕೆಂದು ಆಶಿಸಿದ ಪರಿಣಾಮವಾಗಿ ೧೯೧೮ ರಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ 'ಕರ್ನಾಟಕ ಸಂಘ'ತಲೆ ಎತ್ತಿತು. ಕನ್ನಡದ ಕಟ್ಟಾಳುಗಳೆನಿಸಿದ್ದ ಟಿ.ಎಸ್. ವೆಂಕಣ್ಣಯ್ಯ ಹಾಗೂ ಎ.ಆರ್. ಕೃಷ್ಣಶಾಸ್ತ್ರಿಗಳು ಬೆಳ್ಳಾವೆಯವರೊಂದಿಗೆ ಕೈಜೋಡಿಸಿದರು. ಕನ್ನಡದ ಮೇರು ಪ್ರತಿಭೆಗಳಾದ ಬಿ. ಎಂ. ಶ್ರೀಕಂಠಯ್ಯ, ಮಾಸ್ತಿ ವೆಂಕಟೇಶ

ಅಯ್ಯಂಗಾರ್, ಬಿ.ಪುಟ್ಟಸ್ವಾಮಯ್ಯ. ಸರ್. ಮಿರ್ಜಾ ಇಸ್ಮಾಯಿಲ್, ಡಾ. ಎಸ್. ಸುಬ್ಬರಾವ್, ಡಿ. ಕೆ. ಭಾರದ್ವಾಜ್ ಮೊದಲಾದವರು ತಮ್ಮ ಯಶಸ್ಸಿಗೆ ಕಾರಣ 'ಬೆವೆಂ ಮೇಷ್ಟ್ರು' ಎಂದೇ ಎದೆ ಯುಬ್ಬಿಸಿ ಅಭಿಮಾನದಿಂದ ನೆನಪಿಸಿಕೊಂಡುದಿತ್ತು.

ಇದೇ ರೀತಿ ಹಲವಾರು ಉದಯೋನ್ಮುಖ ವಿಜ್ಞಾನ ಲೇಖಕರು ಬೆಳೆಯುವುದಕ್ಕೂ ಬೆವೆಂ ಕಾರಣರಾದದ್ದು ಅವರ ಯಶಸ್ಸಿನ ಮತ್ತೊಂದು ಪುಟ. ಅವರು 'ಪವನಶಾಸ್ತ್ರ'ದ (meteorology) ಪರಿವೀಕ್ಷಕರಾಗಿದ್ದ ನುಂಗಿಪುರಂ ವೆಂಕಟೇಶ ಅಯ್ಯಂಗಾರ್ ಅವರೊಂದಿಗೆ 'ಕರ್ನಾಟಕ ವಿಜ್ಞಾನ ಪ್ರಚಾರಿಣೀ ಸಭಾ' ಎಂಬ ಸಂಘಟನೆಯನ್ನು ಹುಟ್ಟುಹಾಕಿದ್ದಲ್ಲದೆ ಕನ್ನಡದ ಮೊತ್ತಮೊದಲ 'ವಿಜ್ಞಾನ' ಎಂಬ ಮಾಸಪತ್ರಿಕೆಯನ್ನೂ ಪ್ರಕಟಿಸುತ್ತಿದ್ದರು. ಇವುಗಳ ಮೂಲಕ ವಿಜ್ಞಾನಕ್ಕೆ ಸಂಬಂಧಿಸಿದ ಲೇಖನಗಳು, ಉಪನ್ಯಾಸಗಳು ಹಾಗೂ ವಿಚಾರ ವಿಮರ್ಶೆಗಳು ಸಾಧ್ಯವಾಗಬೇಕು ಎಂಬ ಮಹದಾಸೆ ಅವರದ್ದು. ವಿಜ್ಞಾನವೆಂಬುದು ಹಲವಾರು ವೈಜ್ಞಾನಿಕಶಾಖೆಗಳ ವಿಸ್ತಾರವಾದ ಶಾಸ್ತ್ರ. ಆ ವಿಷಯದ ಕುರಿತು ಆಯಾ ಶಾಖೆಗಳಲ್ಲಿ ನುರಿತವರು ತೊಡಗಿಕೊಂಡಲ್ಲಿ ಕಿರಿಯ ಪೀಳಿಗೆಗೊಂದು ಉತ್ತಮ ಮಾರ್ಗದರ್ಶನ ದೊರೆತಂತಾಗುತ್ತದೆ ಎಂಬ ಅವರ ದೂರದರ್ಶಿತ್ವ ಮೆಚ್ಚುವಂಥದ್ದು. ವಿಜ್ಞಾನದ ಹಲವು ಶಾಖೆಗಳ ಕುರಿತಂತೆ ಅವರ ವಿವರಣೆಯೂ ಅನುಪಮವಾದದ್ದು: ಜೀವವಿಜ್ಞಾನವೂ ಬಹಳ ವಿಸ್ತಾರವಾದ ಶಾಸ್ತ್ರ. ಇದು ಸಸ್ಯವಿಜ್ಞಾನವೆಂದೂ ಪ್ರಾಣಿ ವಿಜ್ಞಾನವೆಂದೂ ಎರಡು ದೊಡ್ಡ ಭಾಗಗಳಾಗಿವೆ. ಇವಕ್ಕೆ ಸಂಬಂಧಪಟ್ಟ ಅನೇಕ ವಿಷಯಗಳನ್ನು ಬೇರೆ ಬೇರೆ ಶಾಸ್ತ್ರಗಳಾಗಿ ವಿಂಗಡಿಸಿರುತ್ತಾರೆ. 'ಶರೀರವಿಜ್ಞಾನ, ಅಂಗರಚನಾಶಾಸ್ತ್ರ, ಭ್ರೂಣಶಾಸ್ತ್ರ, ಪ್ರಾಚೀನ ಜೀವಾವಶಿಷ್ಟಶಾಸ್ತ್ರ, ವಿಕಾಸವಾದ, ಆನುವಂಶಿಕ ತತ್ತ್ವ–ಇಂತಹ ವಿಸ್ತಾರವಾದ ಶಾಸ್ತ್ರದ ಕೇವಲ ಪ್ರಧಾನ ವಿಷಯಗಳನ್ನಾದರೂ ಇಂಗ್ಲಿಷನ್ನರಿಯದ ನಮ್ಮ ಜನರಿಗೆ ತಿಳಿಸುವುದು' ಎಂದು ತಮ್ಮ ಕಾರ್ಯಚಟುವಟಿಕೆಗಳ ಹಿಂದಿನ ಉದ್ದೇಶವನ್ನು ತಮ್ಮ ಪುಸ್ತಕದಲ್ಲಿ ಹೇಳಿಕೊಂಡಿದ್ದಾರೆ (ಜೀವವಿಜ್ಞಾನ–ಮುನ್ನುಡಿ). ಈ ಪುಸ್ತಕದ ಪ್ರತಿಯೊಂದು ಅಧ್ಯಾಯ ದಲ್ಲಿಯೂ ಮುಖ್ಯವಾದ ಹಾಗೂ ಅತ್ಯಗತ್ಯವಾದ ವಿವರಗಳನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಬೇಕೆನಿಸಿದ ಸಂದರ್ಭಗಳಲ್ಲಿ ರೇಖಾಚಿತ್ರಗಳನ್ನೂ ಸ್ವತಃ ರಚಿಸಿರುವುದು ಅವರ ಬದ್ಧತೆಗೆ ನಿದರ್ಶನ.

ಬೆಳ್ಳಾವೆಯವರ ಕ್ರಿಯಾಶೀಲತೆಯು ವಿಜ್ಞಾನದ ವಿಷಯಕ್ಕಷ್ಟೇ ಸೀಮಿತ ವಾಗಿರಲಿಲ್ಲ. ಮನೆಮಾತು ತೆಲುಗು. ಆದ್ದರಿಂದ ಆ ಭಾಷೆಯತ್ತಲೂ ಅವರಿಗೆ ವಿಶೇಷ ಸೆಳೆತವಿತ್ತು. ಹಾಗಾಗಿ ಮುಲಕನಾಡು ಸಂಘದ ಅಧ್ಯಕ್ಷರಾಗಿಯೂ ಹಲವು ವರ್ಷಗಳು ಅವರು ಸೇವೆ ಸಲ್ಲಿಸಿದರು. ಡಿವಿಜಿ ಅವರಿಗೆ 'ಬೆವೆಂ ಅವರದು ಬಹುಮುಖೀ ವ್ಯಕ್ತಿತ್ವ'ವೆಂಬ ಅಭಿಮಾನವಿತ್ತು. ಅದಕ್ಕೆ ತಕ್ಕಂತೆ ಬೆಳ್ಳಾವೆಯವರ ಚಟುವಟಿಕೆಗಳೂ ಇದ್ದುವು. ಬೆವೆಂ ಸೆಂಟ್ರಲ್ ಕಾಲೇಜಿನ ಹಾಸ್ಟೆಲ್ ವಾರ್ಡನ್ ಆಗಿದ್ದು 'ಹಳೆಯ ವಿದ್ಯಾರ್ಥಿಗಳ ಸಂಘ'ವನ್ನು ಹುಟ್ಟುಹಾಕಿದರು. ಅದಾಗಲೇ ಆ ಕಾಲೇಜಿನಿಂದ ಹೊರಬಂದ ವಿದ್ಯಾರ್ಥಿಗಳು ತಮ್ಮ ವಿದ್ಯಾಸಂಸ್ಥೆಯೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ಅವರವರು ತಂತಮ್ಮ ವೃತ್ತಿಗಳಲ್ಲಿ ನಿರತರಾಗಿದ್ದಾಗಲೂ ತಮ್ಮ ವಿದ್ಯಾಸಂಸ್ಥೆಯ ಏಳಿಗೆಯಲ್ಲಿ ಪಾಲ್ಗೊಳ್ಳಲಿ, ಆ ಮೂಲಕ ತಂತಮ್ಮ ನೆನಪುಗಳನ್ನೂ ಅಲ್ಲಿ ಜೀವಂತವಾಗಿರಿಸಲಿ ಎಂಬುದೂ ಅವರ ಅಭಿಪ್ರಾಯವಾಗಿತ್ತು. ಈ ಎಲ್ಲದರ ಮಧ್ಯೆ ಅವರು ತಮ್ಮ ಅಧ್ಯಾಪನ ಸೇವೆಯ ಸಂದರ್ಭದಲ್ಲಿ ಅನುಭವಿಸುತ್ತಲಿದ್ದ ಹಲವು ರೀತಿಯ ಅಡೆತಡೆಗಳಿಂದ ಬೇಸತ್ತು ತಮ್ಮ ವೃತ್ತಿಗೆ ೧೫.೦೨.೧೯೨೩ ರಂದು ರಾಜೀನಾಮೆ ನೀಡಿ ವ್ಯವಸಾಯಕ್ಕಿಳಿದಿದ್ದರು. ಕೆಲವು ವರ್ಷಗಳು ಅಗ್ರಿಕಲ್ಚರ್ ಅಂಡ್ ಎಕ್ವಿಪ್‌ಮೆಂಟ್ ಯೂನಿಯನ್ ಸದಸ್ಯರಾಗಿದ್ದರು. ತಮಿಳುನಾಡಿನ ಕಾವೇರಿ ನೀರಿನ ಹಂಚಿಕೆಯ ನಿಷ್ಪಕ್ಷಪಾತ ತೀರ್ಪು ನೀಡಲು ಸರ್ಕಾರವು ನೇಮಿಸಿದ ಸಮಿತಿಯ ಸದಸ್ಯರಾಗಿಯೂ ಗಮನ ಸೆಳೆದಿದ್ದರು. ಜೊತೆಗೆ ಬೆಂಗಳೂರಿನ ಸಿಟಿ ಕೋ-ಆಪರೇಟಿವ್ ಸೊಸೈಟಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು. ಶ್ರೀ ರಾಮಕೃಷ್ಣ ವಿದ್ಯಾರ್ಥಿ ಸಂಸ್ಥೆಯ ಸ್ಥಾಪಕ ಸದಸ್ಯರಾಗಿದ್ದರು. ಮಾಗಡಿ ಕರಣಿಕರ ವೈದಿಕ ಧರ್ಮಶಾಲೆಯ ನಿರ್ದೇಶಕರೂ ಆಗಿ ಸೇವೆ ಸಲ್ಲಿಸಿದರು.

ವಿಜ್ಞಾನಕ್ಷೇತ್ರದಷ್ಟೇ ಮುತುವರ್ಜಿಯಿಂದ ಬೆಳ್ಳಾವೆಯವರು ಕನ್ನಡ ಶಾಸ್ತ್ರೀಯ ಸಾಹಿತ್ಯ ಕ್ಷೇತ್ರಕ್ಕೂ ಗಮನಾರ್ಹ ಕೊಡುಗೆ ನೀಡಿದ್ದಾರೆ. ಕನ್ನಡ ಐದನೆಯ ಪುಸ್ತಕ, ಗುಣಸಾಗರ ಇವು ಅವರ ಸ್ವತಂತ್ರ ಕೃತಿಗಳು. ಶಬ್ದಮಣಿದರ್ಪಣ, ಪಂಪರಾಮಾಯಣ, ಸೋಮೇಶ್ವರಶತಕ, ಪಂಪಭಾರತನಿಘಂಟು, ಚಾವುಂಡರಾಯ ಪುರಾಣ, ಕುಸುಮಾವಳಿಕಾವ್ಯ ಮೊದಲಾದ ಕೃತಿಗಳನ್ನೂ ಸಂಪಾದಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಆಂಗ್ಲ-ಕನ್ನಡ ನಿಘಂಟು ಸಂಪಾದಕ ಮಂಡಳಿಯ ಸದಸ್ಯರೂ ಹೌದು. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿಯೂ

ಕೋಶಾಧಿಕಾರಿಗಳಾಗಿಯೂ ಪರಿಷತ್ಪತ್ರಿಕಾಮಂಡಳಿಯ ಸದಸ್ಯರಾಗಿಯೂ ಪರಿಷನ್ಮಂದಿರದ ನಿರ್ಮಾಣದಲ್ಲಿಯೂ ಅಹರ್ನಿಶಿ ದುಡಿದು ಅವರು ನೀಡಿದ ಕೊಡುಗೆ ನಿತ್ಯಸ್ಮರಣೀಯವಾದದ್ದು. ಹೀಗೆ ಕನ್ನಡ ನಾಡು, ನುಡಿಯ ಕೈಂಕರ್ಯದಲ್ಲಿ ತೊಡಗಿಕೊಂಡ ಅವರನ್ನು ಯಾವುದಾದರೂ ಸರ್ಕಾರಿ ಸಂಸ್ಥೆಯಲ್ಲಿ ನೆಲೆಗೊಳಿಸಬೇಕೆಂದು ಆಶಿಸಿ ಮೈಸೂರು ರಾಜ್ಯದ ಅಂದಿನ ಕೌನ್ಸಿಲರ್ ಆಗಿದ್ದ ಸಿ. ಎಸ್, ಬಾಲಸುಂದರಂ ಅಯ್ಯರ್, ಶಿಕ್ಷಣ ಇಲಾಖೆಯ ಚೀಫ್ ಆಗಿಯೂ ಇದ್ದವರು, ಡಿವಿಜಿ ಅವರನ್ನು ಕರೆದು ಬೆವೆಂ ಅವರ ಕುರಿತು ಅತೀವ ಮೆಚ್ಚುಗೆ ವ್ಯಕ್ತಪಡಿಸಿದರಂತೆ. ಹಾಗೂ ಅವರ ವಿದ್ವತ್ತು ಪರಿಶ್ರಮಗಳಿಗೆ ತಕ್ಕ ಪದವಿ ಅವರಿಗೆ ಸಂದಿಲ್ಲ, ಶಿಕ್ಷಣ ಇಲಾಖೆಗೆ ಇಂಥವರ ಸೇವೆ ಅತ್ಯಗತ್ಯ ಎಂದು ಭಾವಿಸಿ ತಮ್ಮಿಂದಾದ ಸಹಾಯ ಮಾಡುವುದಾಗಿ ಹೇಳಿದರಂತೆ. ಆದರೆ ಬೆಳ್ಳಾವೆಯವರು ಅದನ್ನು ನಯವಾಗಿ ತಳ್ಳಿಹಾಕಿ ''ನಾನೀಗ ಸ್ವತಂತ್ರವಾಗಿ ನನ್ನಿಷ್ಟದ ಕೆಲಸವನ್ನು ತೃಪ್ತಿಯಿಂದ ಮಾಡುತ್ತಿದ್ದೇನೆ. ಮತ್ತೆ ಯಾವುದೇ ಬಂಧನಗಳಿಗೆ ಒಳಗಾಗಲು ನನಗಿಷ್ಟವಿಲ್ಲ'' ಎಂದರೆಂದು ಡಿವಿಜಿ ಬರೆಯುತ್ತಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ ಕೇವಲ ಆಡಳಿತಾತ್ಮಕ ಚಟುವಟಿಕೆಗಳಲ್ಲಿ ತೃಪ್ತಿ ಹೊಂದದೆ ಬೆಳ್ಳಾವೆಯವರು ಕನ್ನಡದ ಪ್ರಾಚೀನ ಕೃತಿಗಳ ಪರಿಷ್ಕರಣ ಹಾಗೂ ಮುದ್ರಣವನ್ನು ಕೈಗೊಂಡಿದ್ದರು. ಶಬ್ದಮಣಿದರ್ಪಣದಂತಹ ಶಾಸ್ತ್ರಗ್ರಂಥಗಳ ಜತೆಗೆ ಪಂಪಭಾರತ, ಪಂಪರಾಮಾಯಣದಂತಹ ಮಹಾ ಕಾವ್ಯಗಳನ್ನೂ ಪ್ರಕಟಿಸಿದರು. ೧೯೩೦ರಲ್ಲಿ ಪಂಪಭಾರತದ ಪರಿಷ್ಕರಣ ಕಾರ್ಯವನ್ನು ಆರಂಭಿಸಲಾಯಿತು. ಬೆಳ್ಳಾವೆ ಅವರ ವಿದ್ವತ್ತು, ಪರಿಷ್ಕರಣಕಾರ್ಯದ ನಿಷ್ಠೆ, ನಿಪುಣತೆ ಪಂಪಭಾರತದ ಮುದ್ರಣದಲ್ಲಿ ಎದ್ದು ಕಾಣುತ್ತದೆ. ಅನಂತರದಲ್ಲಿ ಬಂದ ಪಂಪಭಾರತದ ಮುದ್ರಣಗಳಿಗೆ ಪರಿಷತ್ತಿನ ಪ್ರಕಟನೆ ಒಂದು ಮಾದರಿಯಾಯಿತು.

ಯಾವುದೇ ಲೇಖನ, ಪುಸ್ತಕ ಸಂಪಾದನ ಕಾರ್ಯಗಳಲ್ಲಿ ತೊಡಗಿಕೊಂಡರೂ ಆಯಾ ವಿಭಾಗದ ವಿದ್ವಾಂಸರು ಬೆಳ್ಳಾವೆಯವರ ಕುರಿತಂತೆ ಅಪಾರ ಮೆಚ್ಚುಗೆಯನ್ನೂ, ಗೌರವವನ್ನೂ ಹೊಂದುತ್ತಿದ್ದುದು ಅವರ ಕಾರ್ಯ ವೈಖರಿಯಿಂದ. ಪ್ರತೀ ಪುಟದಲ್ಲೂ ಇರುವ ತಪ್ಪು ಭಾಷಾಪ್ರಯೋಗಗಳು, ವ್ಯಾಕರಣದೋಷಗಳು, ಅಕ್ಷರಸ್ಖಾಲಿತ್ಯಗಳು, ಪ್ರಿಂಟಿಂಗ್‌ನಲ್ಲಿ ಸ್ಪಷ್ಟತೆ, ಗುಣಮಟ್ಟ ಇವುಗಳ ವಿಷಯದಲ್ಲಿ ಬೆಳ್ಳಾವೆಯವರದು ಅತ್ಯಂತ ಶಿಸ್ತುಬದ್ಧ ಕಾರ್ಯವೈಖರಿ.

ಇಷ್ಟೆಲ್ಲಾ ಶ್ರಮವಹಿಸಿ ಒಂದು ಪುಸ್ತಕ ಹೊರಬಂದು ಕೈಸೇರಿದಾಗ 'ನಾಶನವಾಗಿ ಹೋಯಿತಪ್ಪ' ಎಂದು ಸಮಾಧಾನದ ಉಸಿರು ಹೊರಚೆಲ್ಲುತ್ತಿದ್ದರು. 'ನಾಶನ' ಎಂಬ ಅವರ ಪದಪ್ರಯೋಗ ಎಲ್ಲಾ ಪ್ರಯತ್ನಗಳೂ ಕೊನೆಗೂ ಫೈಸಲ್ ಆಯಿತೆಂಬ ಅರ್ಥವುಳ್ಳದ್ದಾಗಿತ್ತು. 'ಫೈಸಲಾಗಿದೆ' 'ನಾಶನವಾಯಿತು' – ಈ ಪದಗಳು ಅವರು ಸಮಾಧಾನಗೊಂಡ ಅನಂತರದ ಅತಿ ಪ್ರಸಿದ್ಧ ಪ್ರತಿಕ್ರಿಯೆ ಎಂದು ಅವರ ಆಪ್ತರು ಕಿಚಾಯಿಸುತ್ತಿದ್ದರೆಂದು ಡಿವಿಜಿ ನೆನಪಿಸಿಕೊಳ್ಳುತ್ತಾರೆ. ಬೆಳ್ಳಾವೆಯವರ ನಿರಂತರ ಕನ್ನಡ ಸೇವೆಯನ್ನು ಪರಿಗಣಿಸಿ ಮೈಸೂರು ದೊರೆಗಳು ಅವರಿಗೆ 'ರಾಜಸೇವಾಸಕ್ತ' ಬಿರುದನ್ನು ಪ್ರದಾನ ಮಾಡಿದರು. ಈ ಗೌರವ ಸನ್ಮಾನದ ಹಿಂದೆ, ಅವರನ್ನು ಅತಿ ಎತ್ತರದ ಸ್ಥಾನದಲ್ಲಿಟ್ಟು ಗೌರವಿಸುತ್ತಿದ್ದ ಅವರ ಶಿಷ್ಯರಾದ ಮಿರ್ಜಾ ಇಸ್ಮಾಯಿಲ್ ಅವರ ಪರಿಶ್ರಮವಿತ್ತು. ಸಾಮಾನ್ಯವಾಗಿ ಯಾವುದೇ ಪದವಿ, ಸನ್ಮಾನಗಳಿಗೆ ಹಾತೊರೆಯದ, ದೊರೆತರೂ ಬೀಗದ ಬೆಳ್ಳಾವೆಯವರಿಗೆ ಈ ಸಂದರ್ಭವು ಸಂತೋಷವನ್ನು ತಂದಿತ್ತು ಎಂದೂ ಡಿವಿಜಿಯವರು ನೆನಪಿಸಿಕೊಳ್ಳುತ್ತಾರೆ. ೧೯೩೨ರಲ್ಲಿ ಇವರ ಕನ್ನಡದ ಕೈಂಕರ್ಯವನ್ನು ಗಮನಿಸಿ ಜಮಖಂಡಿಯಲ್ಲಿ ಜರುಗಿದ ೨೨ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿಯೂ ಗೌರವಿಸಲಾಯಿತು.

ಬೆವೆಂ ಅವರ ಸಾಮಾಜಿಕ ಸೇವೆಯಲ್ಲಿ ಅತಿ ಮುಖ್ಯವಾಗಿ ಉಲ್ಲೇಖಿಸ ಬೇಕಾದದ್ದು ಅವರು ಬೆಂಗಳೂರು ನಗರದಲ್ಲಿ ಹಮ್ಮಿಕೊಂಡ ಕೆಲವು ಕಾರ್ಯ ಕ್ರಮಗಳು. ಬೆಂಗಳೂರು ದಕ್ಷಿಣದಲ್ಲಿರುವ ಬಸವನಗುಡಿಯಲ್ಲಿ ಪಾರಂಪರಿಕ ಬ್ಯೂಗಲ್ ರಾಕ್‌ಗಾರ್ಡನ್‌ನ ಹಿಂದಿರುವ ಮಲ್ಲಿಕಾರ್ಜುನ ದೇವಸ್ಥಾನದ ಧರ್ಮದರ್ಶಿಯಾಗಿದ್ದ ಸಂದರ್ಭದಲ್ಲಿ ಶಿಥಿಲಾವಸ್ಥೆಗೆ ತಲುಪಿದ್ದ ದೇವಸ್ಥಾನದ ಜೀರ್ಣೋದ್ಧಾರ ಮಾಡಿದರು. ಹಾಗೆಯೇ ದೊಡ್ಡ ಬಸವಣ್ಣ, ದೊಡ್ಡ ಗಣಪತಿ, ಚಾಮರಾಜಪೇಟೆಯಲ್ಲಿರುವ ರಾಮೇಶ್ವರನ ಗುಡಿ, ಗವಿಗಂಗಾಧರೇಶ್ವರ ದೇವಸ್ಥಾನಗಳ ಧರ್ಮದರ್ಶಿಗಳೂ ಆಗಿ ಅವುಗಳ ಕಾರ್ಯಕಲಾಪಗಳಿಗೊಂದು ನಿರ್ದಿಷ್ಟ ಶಿಸ್ತು ಹಾಗೂ ಅವುಗಳ ಸೌಂದರ್ಯವರ್ಧನೆಗೂ ಬಹುಕಾಲ ಬಾಳಿಕೆಗೂ ಅನುವಾಗುವಂತೆ ಕ್ರಮಗಳನ್ನು ಕೈಗೊಂಡರು. ಹಾಗೆಯೇ ರಾಕ್‌ಗಾರ್ಡನ್ ಸುತ್ತ ಮುತ್ತ ಇರುವ ದೇವಸ್ಥಾನಗಳು, ಸಾಂಕೇತಿಕವಾಗಿಯೂ ಪಾರಂಪರಿಕವಾಗಿಯೂ ಇರುವ ಪ್ರತಿಮೆಗಳು ಮತ್ತು ವಿವಿಧ ರೀತಿಯ ವಾಸ್ತು ಕೆತ್ತನೆಗಳನ್ನು ರಕ್ಷಿಸುವತ್ತ

ಸಂಬಂಧಿಸಿದ ಸಂಸ್ಥೆಗಳ ಅಧಿಕಾರಿಗಳನ್ನು ತೊಡಗಿಸುವುದರಲ್ಲಿ ಇವರ ಪಾತ್ರ ಮಹತ್ತರವಾದುದು. ಒಬ್ಬ ವ್ಯಕ್ತಿಯು ತನ್ನಲ್ಲಿರುವ ಸಾಮರ್ಥ್ಯವನ್ನು, ಸಾಮಾಜಿಕ ಪ್ರಜ್ಞೆಯನ್ನು, ಭಾಷಾಭಿಮಾನವನ್ನು ಹಾಗೂ ಜೀವನ ಪ್ರೀತಿಯನ್ನು ಹೇಗೆ ಋಣಪ್ರಜ್ಞೆಯಿಂದ ಬಳಸಿಕೊಳ್ಳಬಹುದು ಎಂಬುದಕ್ಕೆ ಬೆವೆಂ ಸಾಕ್ಷಿಯಾಗಿದ್ದರು. ಬೆವೆಂ ನೋಡಲು ಸಪೂರವಾದ ಎತ್ತರದ ದೇಹದ ಸುಂದರ ಮೈಕಟ್ಟಿನ ಪುರುಷ ಎಂಬಂತೆಯೇ ಅವರ ಸಾಧನೆಯನ್ನು ಪ್ರತಿಬಿಂಬಿಸುವಂತೆ ಅವರನ್ನು 'The towering Personality of the city' ಎಂದು ಮಾದರಿ ಬೆಂಗಳೂರಿನ ಜನ ಗೌರವಿಸಿದರು. ಬೆಂಗಳೂರಿನ ಯುವಜನತೆ ತಾವು ವಾಸಿಸುವ ಪ್ರದೇಶಗಳನ್ನು ಹೇಗೆಲ್ಲ ಉನ್ನತೀಕರಿಸ ಬಹುದು ಎಂಬುದಕ್ಕೆ ಬೆವೆಂ ಒಬ್ಬ ಮಾದರಿ ನಿದರ್ಶನವಾಗಿದ್ದರೆನ್ನಬಹುದು. ಬೆಂಗಳೂರಿನ ದಟ್ಟವಾದ ಜನಸಂದಣಿಯಲ್ಲೂ ಎತ್ತರವಾಗಿ ಎದ್ದು ಕಾಣುತ್ತಿದ್ದ ಅವರ ಆಕಾರದಂತೆಯೇ ಅವರ ಸಾಧನೆಗಳೂ ಅತ್ಯುನ್ನತವಾಗಿ ಎದ್ದು ಕಾಣುತ್ತವೆ ಎಂಬುದು ಅತಿಶಯೋಕ್ತಿಯಲ್ಲ. ೦೩.೦೮.೧೯೪೩ ರಲ್ಲಿ ಈ ವಯೋಮಾನದ ವ್ಯಕ್ತಿತ್ವವು ದೈವಾಧೀನವಾದರೂ ಅವರ ಯಶೋಮಾರ್ಗವು ಚಿರಸ್ಥಾಯಿಯಾಗಿ ಜನಮಾನಸದಲ್ಲಿದೆ.

❐ ❐ ❐

ಫ.ಗು. ಹಳಕಟ್ಟಿ

(೧೮೮೦-೧೯೬೪)

ನಾಗರತ್ನಮ್ಮ

'ವಚನ ಪಿತಾಮಹ' ಎಂದು ಖ್ಯಾತಿವೆತ್ತ ಫ.ಗು. ಹಳಕಟ್ಟಿಯವರು ಧಾರವಾಡದ ನೇಕಾರ ಕುಟುಂಬದಲ್ಲಿ ಗುರುಬಸಪ್ಪ ಮತ್ತು ದಾನಮ್ಮ ದಂಪತಿಗಳ ಮಗನಾಗಿ ೧೮೮೦ ಜುಲೈ ೨ರಂದು ಜನಿಸಿದರು. ತಂದೆ ಗುರುಬಸಪ್ಪ ವಿದ್ಯಾವಂತರು ಹಾಗೂ ಸುಸಂಸ್ಕೃತರು. ಪ್ರಾಥಮಿಕ ಶಾಲೆ ಮತ್ತು ಟ್ರೇನಿಂಗ್ ಕಾಲೇಜುಗಳಲ್ಲಿ ಶಿಕ್ಷಕರಾಗಿ, ವಿದ್ಯಾ ಇಲಾಖೆಯ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದವರು. ಸ್ವತಃ ಹಲವಾರು ಕೃತಿಗಳನ್ನು ರಚಿಸಿದ್ದಾರೆ.

ಬಾಲ್ಯಜೀವನ ಹಾಗೂ ಪ್ರಾಥಮಿಕ ಶಿಕ್ಷಣ ಧಾರವಾಡದಲ್ಲಿ ಮುಗಿಸಿ, ೧೪ನೇ ವರ್ಷದವರಿದ್ದಾಗಲೇ ಮೆಟ್ರಿಕ್ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾದರು. ಮುಂಬಯಿಯ ಸೇಂಟ್ ಜ಼ೇವಿಯರ್ ಕಾಲೇಜಿನಲ್ಲಿ ಬಿ.ಎ ಅನಂತರ ಎಂ.ಎ. ಮತ್ತು ಎಲ್.ಎಲ್.ಬಿ.(೧೯೦೪) ಪದವಿಗಳನ್ನು ಗಳಿಸಿದರು. ಬೆಳಗಾವಿಯ ಆರ್.ಎಸ್. ಚೌಗಲಾ ಎಂಬ ಹಿರಿಯ ನ್ಯಾಯಾಧೀಶರ ಮಾರ್ಗ ದರ್ಶನದಲ್ಲಿ ವಕೀಲಿ ವೃತ್ತಿಯನ್ನು ಆರಂಭಿಸಿ ಸ್ವಲ್ಪಕಾಲ ಪಬ್ಲಿಕ್ ಪ್ರಾಸಿಕ್ಯೂಟರ್ (ಸರ್ಕಾರಿ ವಕೀಲ) ಆಗಿ ಸೇವೆ ಸಲ್ಲಿಸಿದರು.

ಫ.ಗು.ಹಳಕಟ್ಟಿಯವರು ಕನ್ನಡದ ಹಿರಿಯ ತಲೆಮಾರಿನ ಸಂಶೋಧಕರಲ್ಲಿ ಪ್ರಮುಖರು. ವಚನ ಸಾಹಿತ್ಯದ ಸತತ ಅಧ್ಯಯನದಿಂದ ತೀವ್ರ ಜಿಜ್ಞಾಸೆಗೊಳಗಾದ ಇವರು ತಾತ್ತ್ವಿಕ ವಿವೇಚನೆ ಕೈಗೊಂಡು ಸೈದ್ಧಾಂತಿಕ ವಿಶ್ಲೇಷಣೆಗೆ ತೊಡಗಿದರಲ್ಲದೆ, ಸತ್ಯದ ಬೆನ್ನು ಬಿದ್ದು ಸಂಶೋಧನೆಯಲ್ಲಿ ನಿರತರಾದರು. ವಚನ ಸಾಹಿತ್ಯದ ಸಂಪಾದನೆಯ ಮೂಲಕ ಗುಣಮಟ್ಟದ ಕೃತಿಗಳನ್ನು ರಚಿಸಿ ಆ ಮಾರ್ಗದಲ್ಲಿ ಅಡಿಯಿಟ್ಟ ಮೊದಲಿಗರೆನಿಸಿಕೊಂಡರು.

ವಿದ್ಯಾರ್ಥಿ ದೆಸೆಯಲ್ಲೇ ಸಾಹಿತ್ಯಾಸಕ್ತಿಯನ್ನು ಬೆಳೆಸಿಕೊಂಡ ಇವರು ಪ್ರಭುದೇವರ ವಚನ, ಷಟ್‌ಸ್ಥಲತಿಲಕದಂತಹ ತಾಳೆಯೋಲೆಕಟ್ಟುಗಳನ್ನು ಕುತೂಹಲ ದಿಂದ ಅಧ್ಯಯನ ಮಾಡಿದರು. ಬಿಜಾಪುರ ಜಿಲ್ಲೆಯಲ್ಲೆಲ್ಲಾ ಸಂಚರಿಸಿ, ವಚನಗಳ ತಾಳೆಯೋಲೆಯ ಕಟ್ಟುಗಳನ್ನು ಸಂಗ್ರಹಿಸಿದರು. ೧೯೨೦ರ ಹೊತ್ತಿಗೆ ಸಾವಿರಾರು ಸಂಖ್ಯೆಯಲ್ಲಿ ತಾಳೆಯೋಲೆಗಳು ಹಾಗೂ ಹಸ್ತಪ್ರತಿಗಳು ಸಂಗ್ರಹವಾದುವು. ಹಸ್ತಪ್ರತಿಗಳ ಸಂಖ್ಯೆ ವಿಪುಲವಾಗಿದ್ದು ಅವುಗಳನ್ನು ಮುದ್ರಣಕ್ಕೆ ಸಿದ್ಧಪಡಿಸಲು ಕೆಲವರನ್ನು ನೇಮಿಸಿಕೊಂಡರು. ಸಂಗ್ರಹಿಸಿದ್ದನ್ನು ವಿಶ್ಲೇಷಿಸಿ, ವರ್ಗೀಕರಿಸಿ ವಚನಗಳು, ರಗಳೆಗಳು, ಶೂನ್ಯಸಂಪಾದನೆ ಮತ್ತಿತರ ಕೃತಿಗಳನ್ನು ಪ್ರತ್ಯೇಕವಾಗಿ ಗುರುತಿಸುವ ಕೈಂಕರ್ಯವನ್ನು ಕೈಗೊಂಡರು. ಕೇವಲ ವಚನಗಳೇ ಅಲ್ಲದೆ ಹರಿಹರನಂತಹ ಕನ್ನಡದ ಹೆಮ್ಮೆಯ ಕವಿಯೊಬ್ಬನ ರಗಳೆಗಳು ಈ ತಾಳೆ ಯೋಲೆಗಳಲ್ಲಿ ಹುದುಗಿದ್ದುದು ವಿಶೇಷ. ಅಂದಿನ ಕಾಲದಲ್ಲಿ ದೊರೆತ ಒಂದೆರಡು ಪ್ರತಿಗಳ ನೆರವಿನಿಂದ ವಚನಕಾಲದ ಗ್ರಂಥಗಳನ್ನು ಪ್ರಕಟಿಸುವುದು ಸುಲಭವೇನು ಆಗಿರಲಿಲ್ಲ. ಆದರೆ ಈ ವಿಷಯದ ಬಗ್ಗೆ ಅವರಿಗೆ ಆಳವಾದ ಅರಿವು ಇತ್ತು.

ವಚನ ವಾಙ್ಮಯವನ್ನು ಕುರಿತು ಅವರು ರಚಿಸಿದ ಮೌಲಿಕ ಕೃತಿ 'ವಚನಶಾಸ್ತ್ರಸಾರ' ಭಾಗ-೧ ೧೯೨೩ರಲ್ಲಿ ಪ್ರಕಟಗೊಂಡಿತು. ''ವಚನ ವಾಙ್ಮಯದ ಸಂಶೋಧನೆಯಲ್ಲಿ ವಚನಗಳಿಗೆ ಒಂದು ಶಾಸ್ತ್ರದ ಸ್ವರೂಪ ಇದ್ದದ್ದು ನನಗೆ ಕಂಡುಬಂದದ್ದರಿಂದ ಅದನ್ನು ಹಾಗೆ ಕರೆಯಲು ನನಗೆ ಯಾವ ಪ್ರತ್ಯವಾಯವೂ ಕಂಡುಬರಲಿಲ್ಲ. ಅವುಗಳ ಈ ಸ್ವರೂಪ ಸಾರ್ವಜನಿಕರಿಗೆ ಗೊತ್ತಾಗಬೇಕು ಎಂದು ನಾನು ಈ ಗ್ರಂಥಕ್ಕೆ ವಚನಶಾಸ್ತ್ರ ಎಂದು ಹೆಸರಿಟ್ಟೆನು.'' ಹೀಗೆ ಈ ವಾಙ್ಮಯಕ್ಕೆ ಒಂದು ಶಾಸ್ತ್ರವೆಂದು ಕರೆಯುವ ರೂಢಿಯು ಈಗ ಬಂದುಬಿಟ್ಟಿದೆ ಎಂದಿದ್ದಾರೆ.

ವಚನಸಾಹಿತ್ಯ ಕುರಿತ ನಿರಂತರ ಅಧ್ಯಯನ ಮತ್ತು ತೀವ್ರ ಚಿಂತನೆಗಳ ಫಲವೇ ವಚನಶಾಸ್ತ್ರಸಾರ ಭಾಗ-೨(೧೯೨೧). ಈ ಕೃತಿಯು ಸೃಷ್ಟಿಯ ರಚನೆ, ಕರಣ ಹಸಿಗೆ, ಕ್ರಿಯೆ ಮತ್ತು ಸಕೀಲಗಳು, ಷಟ್‌ಸ್ಥಲ ಮತ್ತು ಏಕೋತ್ತರ ಶತಸ್ಥಲ ಎಂಬ ಐದು ಭಾಗಗಳಲ್ಲಿ ಹರಡಿಕೊಂಡಿದೆ. ಷಟ್‌ಸ್ಥಲದ ಮೂಲತತ್ವಗಳನ್ನು ಸಂಶೋಧಿಸಿ, ಆಯಾ ವಚನಕಾರರ ವಚನಗಳನ್ನು ನಿದರ್ಶಿಸಿ ವಿವರಿಸಲು ಯತ್ನಿಸಲಾಗಿದೆ. ಈ ಕೃತಿಯನ್ನು ಭಾರತೀಯ ಸೈದ್ಧಾಂತಿಕ ಹಿನ್ನೆಲೆಯಲ್ಲಿ ನೋಡಿದಾಗ ತುಂಬಾ ಪ್ರಮುಖ ವೆನಿಸುತ್ತದೆ.

೧೯೩೯ರಲ್ಲಿ ಪ್ರಕಟಗೊಂಡ ವಚನಶಾಸ್ತ್ರಸಾರ ಭಾಗ-೩ ಒಟ್ಟು ನಾಲ್ಕು ಭಾಗಗಳನ್ನು ಒಳಗೊಂಡಿದ್ದು ವೀರಶೈವ ಆಚಾರಗಳ ವಿವರಣೆಗೆ ಮೀಸಲಾಗಿದೆ. ಮೂರು ಭಾಗಗಳಲ್ಲಿ ಸುಮಾರು ೧೪೫ ಶರಣರ ಚರಿತ್ರೆಗಳನ್ನು ಹಾಗೆಯೇ ಮತ್ತೊಂದು ಭಾಗದಲ್ಲಿ ಶಿವಶರಣೆಯರ ಚರಿತ್ರೆಗಳನ್ನು ಪ್ರಕಟಿಸಿದ್ದಾರೆ. ೭೭೦ ಶರಣರನ್ನು ಕುರಿತ ಅಮರಗಣಾಧೀಶ್ವರರ ಚರಿತ್ರೆಗಳನ್ನು ರೂಪಿಸಿದರು. 'ಶಿವಾನುಭವ ಶಬ್ದಕೋಶ' ಹಳಕಟ್ಟಿಯವರು ಸಮಗ್ರ ಅನುಭವದ ನೆಲೆಯಲ್ಲಿ ರಚಿಸಿದ ಕೃತಿಯಾಗಿದ್ದು, ಅವರ ಸಂಶೋಧನ ಕೃತಿಗಳಲ್ಲಿ ಶಿಖರಪ್ರಾಯವಾಗಿದೆ. ವಚನಶಾಸ್ತ್ರಸಾರದ ರಚನೆಯ ಬಳಿಕ ಸುಮಾರು ೨೫೦ ವಚನಕಾರರ ಕೃತಿಗಳು ಪ್ರಕಟಗೊಂಡವು.

ಹಳಕಟ್ಟಿ ಅವರಿಂದ ಮೊತ್ತಮೊದಲು ಪ್ರಕಟಗೊಂಡ ಶೂನ್ಯ ಸಂಪಾದನೆ(೧೯೩೦) ಅಪರೂಪದ ಕೃತಿ. ಅವರ ಸಂಶೋಧನ ಮಾರ್ಗದ ಮಹತ್ತ್ವದ ಮೈಲುಗಲ್ಲು. ಸಟೀಕೆಯೊಂದಿಗೆ ಐದು ಭಾಗಗಳಲ್ಲಿ ಹೊರಬಂದ ಈ ಕೃತಿ ಪ್ರಕಟವಾದ ಅನಂತರ ವಚನ ಸಾಹಿತ್ಯವು ನಾಡಿನ ವಿದ್ವಾಂಸರ ಗಮನ ಸೆಳೆದು ಅವರನ್ನು ಚಿಂತನೆಗೆ ಹಚ್ಚಿತು. ಶೂನ್ಯ ಸಂಪಾದನೆಯ ಐದು ಭಾಗಗಳಿಗೆ ಹಳಕಟ್ಟಿ ಅವರು ಕೊಟ್ಟ ಟಿಪ್ಪಣಿ ಮತ್ತು ಪ್ರಸ್ತಾವನೆಗಳು ಅವರ ಸಂಶೋಧನೆಯ ವ್ಯಾಪ್ತಿಯನ್ನು ಸ್ಪಷ್ಟವಾಗಿ ನಿದರ್ಶಿಸುತ್ತವೆ.

ಕಟ್ಟಿಯವರ 'ಶಿವಾನುಭವ ಶಬ್ದಕೋಶ' ಮತ್ತು ಮೂರು ಸಂಪುಟಗಳಲ್ಲಿ ಪ್ರಕಟವಾಗಿರುವ ಶಿವಶರಣರ ಚರಿತ್ರೆಗಳು ಅವರ ವ್ಯಾಸಂಗದ ವ್ಯಾಪಕತೆಗೆ ಕನ್ನಡಿ ಹಿಡಿಯುತ್ತವೆ. ಅಂತೆಯೇ ಅವರ ಕೃತಿಗಳು ಸಮಕಾಲೀನ ಸಂಶೋಧನ ಸಂದರ್ಭದಲ್ಲಿ ಗಮನಿಸತಕ್ಕವೆನಿಸುತ್ತವೆ. ಅವರಿಂದ ರಚಿತಗೊಂಡ ಲೇಖನಗಳ ಸೂಚಿಯೇ ನೂರು ಪುಟ ಮೀರುತ್ತದೆ. ಇವರು ಪ್ರಕಟಿಸಿದ ಗ್ರಂಥಗಳು ೭೦ಕ್ಕೂ ಹೆಚ್ಚಿವೆ.

ಹಳಕಟ್ಟಿ ಅವರು ತಾಳೆಯೋಲೆಗಳನ್ನು ಸಂಗ್ರಹಿಸುವುದಕ್ಕೂ ಮೊದಲು ಕವಿಚರಿತೆಕಾರರು ಗುರುತಿಸಿದ್ದು ಕೇವಲ ೫೦ ವಚನಕಾರರನ್ನು ಮಾತ್ರ. ಹಳಕಟ್ಟಿ ಅವರು ಸಂಗ್ರಹಿಸಿದ ತಾಳೆಯೋಲೆಗಳಿಂದ ೨೫೦ ಹೆಚ್ಚು ವಚನಕಾರರು ಬೆಳಕಿಗೆ ಬಂದರು. ಆ ತನಕ ಪ್ರಸಿದ್ಧರಾಗಿದ್ದ ಹಾಗೂ ಅಪ್ರಸಿದ್ಧರಾಗಿದ್ದ ವಚನಕಾರರ

ವಚನಗಳನ್ನೆಲ್ಲ ಶಿವಾನುಭವ ಪತ್ರಿಕೆಯಲ್ಲಿ ಪ್ರಕಟಿಸ ತೊಡ ಗಿದರು. ಹೀಗೆ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದಂತೆಯೇ ಅವುಗಳನ್ನು ಪ್ರತ್ಯೇಕ ಗ್ರಂಥರೂಪದಲ್ಲಿ ಹೊರತಂದರು. ಮೊದಲು ಪ್ರಕಟಿಸಿದ್ದು ಬಸವೇಶ್ವರರ ವಚನಗಳು ಮತ್ತು ಮಹದೇವಿಯಕ್ಕನ ವಚನಗಳು. ಅನಂತರ ಗಣದಾಸಿ ವೀರಣ್ಣನವರ ವಚನಗಳು, ದೇವರ ದಾಸಿಮಯ್ಯನ ವಚನಗಳು, ಸಕಲೇಶ ಮಾದರಸ, ಆದಯ್ಯ ಮೊದಲಾದವರ ವಚನಗಳ ಅನೇಕ ಕೃತಿಗಳನ್ನು ಪ್ರಕಟಿಸಿದರು. ಇದರ ಜೊತೆಗೆ ಗೂಳೂರು ಸಿದ್ಧ ವೀರಣಾಚಾರ್ಯನ ಶೂನ್ಯ ಸಂಪಾದನೆಯನ್ನು ಪ್ರಕಟಿಸಿದರು.

ಅಷ್ಟೇ ಮುಖ್ಯವಾದ ಮತ್ತೊಂದು ಕಾರ್ಯವೆಂದರೆ ಹರಿಹರ ಕವಿಯ ೪೦ಕ್ಕೂ ಹೆಚ್ಚಿನ ರಗಳೆಗಳ ಹಸ್ತಪ್ರತಿಗಳನ್ನು ಸಂಗ್ರಹಿಸಿದ್ದು ಹಾಗೂ ಪ್ರಕಟಿಸಿದ್ದು. ವಾಸ್ತವವಾಗಿ ಸುಮಾರು ೧೯೩೦ರ ಹೊತ್ತಿಗೆ ಹರಿಹರ ಕವಿಯ ಅನೇಕ ರಗಳೆಗಳು ಆ ಕಾಲಕ್ಕೆ ಅಲಭ್ಯ ಎಂಬಂತೆ ಇದ್ದವು. ಅಂತಹ ಕಾಲದಲ್ಲಿ ಹಳಕಟ್ಟಿ ಅವರು ರಗಳೆಗಳನ್ನು ಸಂಗ್ರಹಿಸಿದ್ದಲ್ಲದೆ, ಶಿವಾನುಭವ ಪತ್ರಿಕೆಯಲ್ಲಿ ಹರಿಹರನ ಒಟ್ಟು ೪೨ ರಗಳೆಗಳನ್ನು ಪ್ರಕಟಿಸಿ ಪರಿಚಯಿಸಿದ್ದಾರೆ.

ಹಳಕಟ್ಟಿ ಅವರಿಗೆ ಅನೇಕ ಪ್ರಶಸ್ತಿಗಳು, ಪುರಸ್ಕಾರಗಳು ಲಭಿಸಿವೆ. ೧೯೩೧ರಲ್ಲಿ ಮುಂಬಯಿ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾದರು. ೧೯೫೬ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಗೌರವ ಡಿ.ಲಿಟ್ ಪದವಿಯನ್ನಿತ್ತು ಗೌರವಿಸಿತು. ೧೯೨೮ರಲ್ಲಿ ಮೂರನೇ ಕರ್ನಾಟಕ ಏಕೀಕರಣ ಪರಿಷತ್ತಿನ ಅಧ್ಯಕ್ಷರಾಗಿ ಆಯ್ಕೆಯಾದರು. ೧೯೩೩ರಲ್ಲಿ ಧಾರವಾಡದಲ್ಲಿ ನಡೆದ ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷರಾದರು. ಅವರ ಸಾಹಿತ್ಯಸೇವೆಯನ್ನು ಗುರುತಿಸಿದ ಕನ್ನಡ ಸಾಹಿತ್ಯ ಪರಿಷತ್ತು ೧೯೨೬ರಲ್ಲಿ ಬಳ್ಳಾರಿಯಲ್ಲಿ ನಡೆದ ಕನ್ನಡ ಸಾಹಿತ್ಯಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಿ ಗೌರವಿಸಿತು. ಸರ್ಕಾರದಿಂದ ರಾವ್‌ಬಹದ್ದೂರ್, ರಾವ್ ಸಾಹೇಬ್ ಎಂಬ ಪ್ರತಿಷ್ಠಿತ ಪದವಿಯನ್ನು ಪಡೆದರು. ಬಿ.ಎಲ್.ಡಿ.ಇ. ಸಂಸ್ಥೆಯನ್ನು ಕಟ್ಟಿ, ಬಿಜಾಪುರ ಭಾಗದಲ್ಲಿ ಶೈಕ್ಷಣಿಕ ಕ್ರಾಂತಿಯನ್ನು ಉಂಟು ಮಾಡಿದರು. ಇವರು ೨೯.೦೬.೧೯೬೪ರಂದು ನಿಧನರಾದರು.

❐ ❐ ❐

ಚನ್ನಪ್ಪ ಉತ್ತಂಗಿ

(೧೮೮೧–೧೯೬೨)

ರಾಧಾಮಣಿ ಎಂ.ಎ.

'ತಿರುಳ್ಗನ್ನಡದ ತಿರುಕ' ಎಂಬ ಕೀರ್ತಿಗೆ ಪಾತ್ರರಾಗಿರುವ ಉತ್ತಂಗಿಯವರು, 'ಸರ್ವಜ್ಞನ ವಚನ'ಗಳ ಸಂಪಾದನೆಗಾಗಿ ಹೆಚ್ಚು ಖ್ಯಾತರಾಗಿದ್ದಾರೆ. ಸರ್ವಜ್ಞನ ಪದಗಳನ್ನು ಪ್ರಸಿದ್ಧಿಪಡಿಸಿದ ಕೀರ್ತಿ, ರೆವರೆಂಡ್ ಚನ್ನಪ್ಪ ಉತ್ತಂಗಿ ಅವರಿಗೆ ಸಲ್ಲುತ್ತದೆ. ಇದಕ್ಕಾಗಿ ಅವರು ತಮ್ಮ ಜೀವನದ ಅಮೂಲ್ಯ ಸಮಯವನ್ನು ಮುಡಿಪಿಟ್ಟಿದ್ದರು. ಇವರ ಶೋಧದ ಪ್ರಯತ್ನದಿಂದಾಗಿ ಇಂದು ಸರ್ವಜ್ಞನ ವಚನಗಳು ಎಲ್ಲರ ಮನೆಮಾತಾಗಿವೆ. ೧೯೨೮ ವಚನಗಳ ಪುಸ್ತಕವನ್ನು ಪ್ರಕಟ ಮಾಡಲು ಸುಮಾರು ೯ ವರ್ಷಗಳೇ ಬೇಕಾದುವು. ಕ್ರೈಸ್ತಧರ್ಮಕ್ಕೆ ಸೇರಿದ ಉತ್ತಂಗಿಯವರು, ಕನ್ನಡದ ಸೇವೆಯನ್ನು ದೇವರ ಕೆಲಸವೆಂದೇ ತಿಳಿದಿದ್ದರು.

ಚನ್ನಪ್ಪ ಉತ್ತಂಗಿ ಅವರು ೨೮ ಅಕ್ಟೋಬರ್, ೧೮೮೧ರಂದು ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ ತಾಲ್ಲೂಕಿನ, ಉತ್ತಂಗಿ ಗ್ರಾಮದ, ಗೌಡರ ಮನೆತನದಲ್ಲಿ ಜನಿಸಿದರು. ಇವರ ತಂದೆ ದಾನಿಯೇಲಪ್ಪ ತಾಯಿ ಸುಭದ್ರವ್ವ. ಅವರ ಪೂರ್ವಜರು ಕ್ರೈಸ್ತಧರ್ಮವನ್ನು ಸ್ವೀಕರಿಸಿ ಅನೇಕ ದಶಕಗಳೇ ಆಗಿದ್ದುವು. ಚನ್ನಪ್ಪನವರದು ಮೂರನೆಯ ತಲೆಮಾರು. ಗದಗ ಮತ್ತು ಬೆಟಗೇರಿಗಳ, "ಕ್ರೈಸ್ತ ಅನಾಥಾಶ್ರಮಗಳ" ಮೇಲ್ವಿಚಾರಣೆಯ ಜವಾಬ್ದಾರಿ ಇವರ ಮನೆತನಕ್ಕೆ ಬಂದಿತ್ತು. ಚನ್ನಪ್ಪನವರಿಗೆ ಬಾಲ್ಯದಿಂದಲೂ ಕ್ರಿಸ್ತಭಕ್ತಿ ತಾಯಿಯಿಂದ ಬಳುವಳಿಯಾಗಿ ಬಂದಿತ್ತು. ಅವರ ತಂದೆ ಪ್ರಾಥಮಿಕ ಶಾಲಾಶಿಕ್ಷಕರಾಗಿ ಕೆಲಸ ಮಾಡುವುದಲ್ಲದೇ ಉತ್ತಮ ಬಡಗಿಯೂ ಆಗಿದ್ದರು ಮತ್ತು ಯಂತ್ರಕಲಾಕೌಶಲವನ್ನು ಬಲ್ಲ ಪ್ರಯೋಗಶೀಲರಾಗಿದ್ದರು. ಹಾಗಾಗಿ ಬಾಲಕರಾಗಿದ್ದಾಗಲೇ ಚನ್ನಪ್ಪ ಅವರಿಗೆ ತಮ್ಮ ತಂದೆಯಿಂದ ಯಂತ್ರಗಳ ಬಗೆಗೆ ಆಸಕ್ತಿ ಸಹಜವಾಗಿ ಬಂದಿತ್ತು. ಮನೆಯಲ್ಲಿದ್ದ ದೊಡ್ಡ ಗಡಿಯಾರದ ಪೆಂಡುಲಂಗೆ ಕೈ ಗಡಿಯಾರವನ್ನು ತಗುಲಿ ಹಾಕಿದರೆ ಎರಡು ಗಡಿಯಾರಗಳು ತೋರಿಸುವ ಕಾಲ ಒಂದೇ ಇರಬಲ್ಲುದೆ ಎಂಬುದು ಚನ್ನಪ್ಪನವರ ಕುತೂಹಲವಾಗಿತ್ತು. ತಂದೆ

ಮನೆಯಲ್ಲಿಲ್ಲದಿದ್ದಾಗ ಚಿಕ್ಕ ಗಡಿಯಾರವನ್ನು ದೊಡ್ಡ ಗಡಿಯಾರದ ಪೆಂಡುಲಂ ಮೇಲೆ ಇಟ್ಟು ಎರಡೂ ಗಡಿಯಾರಗಳನ್ನು ಪರೀಕ್ಷಿಸುತ್ತ ಯಾವುದೇ ವ್ಯತ್ಯಾಸವಿಲ್ಲದ್ದನ್ನು ಕಂಡುಕೊಂಡವರು. ಅಷ್ಟೇ ಅಲ್ಲದೇ ಆ ಕಾಲಕ್ಕಾಗಲೇ ಬಂದಿದ್ದ ಉಗಿಬಂಡಿಯನ್ನು ನೋಡಿ ಹಬೆಯ ಶಕ್ತಿಯನ್ನು ಪರೀಕ್ಷಿಸುವ ಪ್ರಯೋಗವನ್ನು ಮನೆಯಲ್ಲಿಯೇ ಮಾಡಿ ಸಮಾಧಾನಪಟ್ಟುಕೊಂಡರು. ಬಹುಶಃ ಈ ಯಂತ್ರ ಜ್ಞಾನದ ಮೇಲಿರುವ ತೀವ್ರವಾದ ಆಸಕ್ತಿ, ಪ್ರೇಮಗಳ ಕಾರಣದಿಂದಾಗಿಯೇ ಅವರ ಮನಸ್ಸು ಓದಿನಲ್ಲಿ ಅಷ್ಟೊಂದು ಆಸಕ್ತಿ ತಾಳಲಿಲ್ಲ.

ಉತ್ತಂಗಿಯವರೇ ಕೆಲವು ಸಂದರ್ಭದಲ್ಲಿ ತಮಗೆ ಜ್ಞಾಪಕಶಕ್ತಿ ಕಡಿಮೆ ಎಂದು ಹೇಳಿಕೊಂಡಿದ್ದಾರೆ, ಆದರೆ ಇದು ಜ್ಞಾಪಕಶಕ್ತಿಯ ಕೊರತೆಗಿಂತ ಅವರಲ್ಲಿದ್ದ ಯಂತ್ರಜ್ಞಾನದ ಮೇಲಿನ ಪ್ರೇಮವನ್ನು ಸೂಚಿಸುತ್ತದೆ. ತಂದೆ ದಾನಿಯೇಲಪ್ಪನವರಿಗೆ ತನ್ನ ಮಗ ಯಂತ್ರಜ್ಞಾನಿಯಾಗುವುದಕ್ಕಿಂತ ಹೆಚ್ಚಿನ ಆಸಕ್ತಿಯನ್ನು ಓದಿನ ಕಡೆ ಕೊಡಲಿ, ಬುದ್ಧಿವಂತನಾಗಿ ಅಧಿಕಾರ ಪಡೆಯಲಿ ಎಂಬ ಆಸೆಯಿಟ್ಟುಕೊಂಡಿದ್ದರು. ಓದಿನಲ್ಲಿ ಹೆಚ್ಚು ಆಸಕ್ತಿ ತೋರದ ಮಗನನ್ನು ಆಗಾಗ ದಂಡಿಸಿದ್ದುಂಟು. ಯಂತ್ರಗಳ ಬಗೆಗೆ ಒಲವು ಹೊಂದಿದ್ದ ಚನ್ನಪ್ಪನವರು ಕನ್ನಡ ಐದನೆಯ ವರ್ಗ ತೇರ್ಗಡೆಯಾದಾಗ ಅವರಿಗೆ ಹತ್ತು ವರ್ಷ ಮಾತ್ರ. ತಂದೆ ದಾನಿಯೇಲಪ್ಪನವರಿಗೆ ಮಗನಿಗೆ ಇಂಗ್ಲಿಷ್ ಕಲಿಸುವ ಬಯಕೆಯಿತ್ತು. ಆಗಿನ ಕಾಲದಲ್ಲಿ ಕ್ರೈಸ್ತ ಬಾಲಕರಿಗೆ ಇಂಗ್ಲಿಷ್ ಕಲಿಸುವುದು ಒಳ್ಳೆಯದಲ್ಲ, ಆದ್ದರಿಂದ ಅವರು ಹಾಳಾಗುತ್ತಾರೆಂಬ ನಂಬಿಕೆಯಿತ್ತು. ಆದರೆ ರೆ.ಥಿಗ್ಲರ್, ರೆವರೆಂಡ್ ಅರ್ನೆಸ್ಟ್ ಮತ್ತು ರೆ. ಹರ್ಮನ್ ರಿಚ್ ಇವರುಗಳು ಈ ರೀತಿಯ ನಂಬಿಕೆ ತಪ್ಪೆಂದು ಮನವರಿಕೆ ಮಾಡಿಸಿ, ಕ್ರೈಸ್ತ ಯುವಕರೂ ಇಂಗ್ಲಿಷ್ ಕಲಿಯುವುದಕ್ಕೆ ಬೇಕಾದ ಸೌಲಭ್ಯವನ್ನು ಕಲ್ಪಿಸಿಕೊಟ್ಟರು. ಇದರಿಂದಾಗಿ ಗದಗಿನಲ್ಲಿದ್ದ ಮಾಧ್ಯಮಿಕ ಶಾಲೆಯನ್ನು ಧಾರವಾಡಕ್ಕೆ ಬದಲಾಯಿಸಿ 'ಸ್ಟೂಡೆಂಟ್ಸ್ ಹೋಮ್' ಆರಂಭಿಸಿದರು. ಇದು ೧೮೯೨ರಲ್ಲಿ ಆರಂಭವಾದರೂ ಉತ್ತಂಗಿ ಚನ್ನಪ್ಪನವರು ಮನೆಯಲ್ಲಿದ್ದುಕೊಂಡೇ ಆ ಶಾಲೆಯಲ್ಲಿ ಅಧ್ಯಯನ ಮಾಡಿ ೧೮೯೭ರಲ್ಲಿ ವಿದ್ಯಾರ್ಥಿನಿಲಯ ಸೇರಿದರು.

ಧಾರವಾಡದ ಮಿಷನ್ ಹೈಸ್ಕೂಲಿನಲ್ಲಿ ಕ್ರೈಸ್ತ ಮಕ್ಕಳಿಗೆ ಪ್ರವೇಶವನ್ನು ನೀಡಿರಲಿಲ್ಲ. ಅದಕ್ಕಾಗಿ ದಾನಿಯೇಲಪ್ಪನವರಿಗೆ ತಮ್ಮ ಮಗ ಚನ್ನಪ್ಪನ ಪ್ರಾಥಮಿಕ ವಿದ್ಯಾಭ್ಯಾಸದ ಕೊನೆಯ ಹಂತವಾದ ಮುಲ್ಕಿ ಪರೀಕ್ಷೆಯಲ್ಲಿ ಆದರೂ

ತೇರ್ಗಡೆಯಾಗಲಿ ಎಂಬುದು ಆಸೆಯಾಗಿತ್ತು. ಆದರೆ ಮನೆಯಲ್ಲಿ ಎಷ್ಟೇ ಕಲಿಸಲು ಪ್ರಯತ್ನಿಸಿದರೂ ಸಾಧ್ಯವಾಗಿರಲಿಲ್ಲ. ಇದನ್ನು ತಿಳಿದ 'ಸ್ಟೂಡೆಂಟ್ಸ್ ಹೋಮ್' ನ ಮುಖ್ಯೋಪಾಧ್ಯಾಯರಾದ ರೆವರೆಂಡ್ ರಿಚ್, ಚನ್ನಪ್ಪನವರ ಮೇಲೆ ವಿಶೇಷ ಆಸಕ್ತಿ ತೋರಿಸಿದರು. ಅವರ ತಂದೆಗಿಂತಲೂ ಹೆಚ್ಚಿನ ಪ್ರೀತಿ ಅಕ್ಕರೆಯಿಂದ ಅವರನ್ನು ನೋಡಿಕೊಂಡರು. ರೆವರೆಂಡ್ ರಿಚ್ ಅವರು ಬೀರಿದ ಪ್ರಭಾವ ಚನ್ನಪ್ಪನವರಿಗೆ ಅಪೂರ್ವವಾದ ರೀತಿಯಲ್ಲಿ ವಿಚಾರಶಕ್ತಿಯನ್ನು ಬೆಳೆಸಿತು. ಆದರೆ ಮೆಟ್ರಿಕ್ ಪರೀಕ್ಷೆಯಲ್ಲಿ ಇವರು ಫೇಲಾದರು. ಮತ್ತೊಮ್ಮೆ ಪರೀಕ್ಷೆ ಕಟ್ಟಲು ಚನ್ನಪ್ಪನವರಿಗೆ ಅಂತಹ ಆಸಕ್ತಿಯೇನು ಇರಲಿಲ್ಲ. ತಾಯಿಯವರ ಇಚ್ಛೆಯಂತೆ ಮಂಗಳೂರಿನ ದೈವಜ್ಞಾನ ಎಂಬ ಕ್ರೈಸ್ತ ಶಾಲೆಗೆ ಸೇರಿಕೊಂಡರು. ಅಲ್ಲಿ ಕ್ರೈಸ್ತಧರ್ಮೋಪದೇಶಕರು ಪರದೇಶದಿಂದ ತರಿಸಿದ ಮುಂಗೈ ತೋಳಿನ ಸಮವಸ್ತ್ರಗಳನ್ನು ವಿದ್ಯಾರ್ಥಿಗಳಿಗೆ ಕೊಡುತ್ತಿದ್ದರು. ಆದರೆ ಚನ್ನಪ್ಪನವರಿಗೆ ಅದು ಇಷ್ಟವಿರಲಿಲ್ಲ, ಖಾದಿ ಅಂಗಿಯನ್ನು ತೊಡಲು ಇಷ್ಟಪಡುತ್ತಿದ್ದರು. ಇದರಿಂದಾಗಿ ಅವರ ಹಿರಿಯ ಅಧಿಕಾರಿಗಳಿಂದ ವಿರೋಧವನ್ನು ಕಟ್ಟಿಕೊಳ್ಳಬೇಕಾಗಿ ಬಂತು. ಮಿತವ್ಯಯದಿಂದಾಗಿ ಅವರ ಗೆಳೆಯರೂ ಪ್ರಭಾವಿತರಾಗಿ ಖಾದಿಯನ್ನೇ ಇಷ್ಟಪಡತೊಡಗಿದರು. ಮುಂದೆ ಸರ್ವಾನುಮತದ ಕಲ್ಪನೆಯಿಂದ ಧರ್ಮೋಪದೇಶಕರಿಗೆಲ್ಲಾ ಖಾದಿಯೇ ಸಮವಸ್ತ್ರವಾಯಿತು. ಅಲ್ಲದೆ ಅವರು ಇನ್ನು ಹೆಚ್ಚು ಹೆಚ್ಚು ಅಧ್ಯಯನಶೀಲರಾದರು. ೧೯೦೪ರಲ್ಲಿ ಕೊನೆಯ ಪರೀಕ್ಷೆಯಲ್ಲಿ ಪ್ರಥಮದರ್ಜೆಯಲ್ಲಿ ಪಾಸಾದರು.

೧೯೦೮ರಲ್ಲಿ ಚನ್ನಪ್ಪ ಅವರಿಗೆ ಉಪನ್ಯಾಸಕರ ಹುದ್ದೆ ಸಿಕ್ಕಿತು. ಚನ್ನಪ್ಪನವರದು ಸ್ವತ್ರಂತ್ರವಾಗಿ ಯೋಚಿಸುವ ಪ್ರವೃತ್ತಿ. ಶಾಲೆಯಲ್ಲಿ ಓದುತ್ತಿದ್ದಾಗಲೇ ಬಾಸೆಲ್ ಮಿಷನ್‌ನ ಕೆಲವು ಗೆಳೆಯರ ಸಹಕಾರದಿಂದ ಒಂದು ಪತ್ರಿಕೆಯನ್ನು ಪ್ರಕಟಿಸಿದರು. ಬಾಸೆಲ್ ಮಿಷನ್‌ನವರಿಗೆ ಇದು ಸರಿಬೀಳಲಿಲ್ಲ. ಸತ್ಯಕ್ಕಾಗಿ ಪ್ರತಿಭಟಿಸುವ ಚನ್ನಪ್ಪನವರ ಗುಣ ಸ್ವಭಾವದಿಂದ ಧರ್ಮಶಿಕ್ಷಣ ಸಂಸ್ಥೆಯವರು ಅವರನ್ನು ಹೊರಗೆ ಹಾಕುವವರೆಗೆ ಪರಿಸ್ಥಿತಿ ನಿರ್ಮಾಣವಾಗಿತ್ತು. ಧೈರ್ಯವಂತರಾದ ಚನ್ನಪ್ಪ ಅವರನ್ನು ಎದುರು ಹಾಕಿಕೊಳ್ಳುವುದು ಆಡಳಿತವರ್ಗಕ್ಕೂ ಇಷ್ಟವಿರಲಿಲ್ಲ, ಹಾಗಾಗಿ ಅಲ್ಲೇ ಮುಂದುವರಿದರು.

ಚನ್ನಪ್ಪನವರು ೧೯೦೮ ರಲ್ಲಿ ಸುಭದ್ರಕ್ಕಳನ್ನು ಮದುವೆಯಾದರು. ಆಗ ಅವರಿಗೆ ೨೭ ವರ್ಷ ವಯಸ್ಸು, ಸುಭದ್ರಕ್ಕಳಿಗೆ ೧೯ ವರ್ಷ. ಈಕೆ ತನ್ನ ಅತ್ತೆಯ

ಕೈಯಲ್ಲಿ ಕಲಿತವಳು, ಮದುವೆಯಾದ ಬಳಿಕವೂ ಶಿಕ್ಷಣ ಮುಂದುವರಿಸಿ ಎಲ್ಲ ರೀತಿಯಲ್ಲೂ ಗಂಡನಿಗೆ ಸಹಕಾರಿಯಾಗಿ ನಿಂತು ಸೇವೆ ಮಾಡಿದ ಆದರ್ಶ ಗೃಹಿಣಿಯಾಗಿದ್ದರು. ಚನ್ನಪ್ಪನವರು ೧೯೦೮ ರಿಂದ ೧೯೪೨ರ ತನಕ ಧಾರವಾಡ, ಗದಗ, ಮುಂಡರಗಿ, ಹಾವೇರಿ, ಹುಬ್ಬಳ್ಳಿಗಳನ್ನು ತಮ್ಮ ಕೇಂದ್ರ ಸ್ಥಳಗಳನ್ನಾಗಿ ಮಾಡಿಕೊಂಡು ಕ್ರೈಸ್ತ ಬೋಧಕರಾಗಿ ಕಾರ್ಯನಿರ್ವಹಿಸಿದರು. ಗ್ರೀಕ್, ಇಂಗ್ಲಿಷ್ ಹಾಗೂ ಕನ್ನಡಗಳಲ್ಲಿ ವಿದ್ವತ್ ಪಡೆದ ಇವರ ಕ್ರೈಸ್ತಶ್ರದ್ಧೆ ಅದ್ವಿತೀಯವಾಗಿತ್ತು. ಆ ಕಾರಣದಿಂದಲೇ ಕನ್ನಡ ಭಾಷೆಯ ಬೈಬಲ್ ಪರಿಷ್ಕರಣ ಸಮಿತಿಯ ಕಾರ್ಯದರ್ಶಿಯಾಗಿ ನೇಮಕ ಗೊಂಡು, ಅದರ ಉತ್ತಮವಾದ ಭಾಷಾಂತರಕ್ಕೆ ಕಾರಣಕರ್ತರಾದರು.

ಅನಾಥ ಗಂಡು ಮಕ್ಕಳ ಶಾಲೆಯ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುವಾಗ ಅವರನ್ನು ಸ್ವಂತ ಮಕ್ಕಳಂತೆ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಕಲಿಯುವ ಮಕ್ಕಳಲ್ಲಿ ದಡ್ಡರಾದವರನ್ನು ಕರೆದು ಖಾಸಗಿಯಾಗಿ ಪಾಠ ಹೇಳಿಕೊಟ್ಟು, ಅವರಲ್ಲಿದ್ದ ಕೀಳರಿಮೆ ಭಾವನೆಯನ್ನು ದೂರಮಾಡುತ್ತಿದ್ದರು. ಬೋಧನೆ ಎಂಬುದು ಅವರ ಬದುಕಿನ ವಿಧಾನವಾಗಿತ್ತು. ಅಸ್ಪೃಶ್ಯರ ಕೇರಿಯ ಜನರ ಜೊತೆಯಲ್ಲಿದ್ದು, ಅವರೊಂದಿಗೆ ಊಟೋಪಚಾರ ಮಾಡಿ, ಅವರ ಕೇರಿಯನ್ನೆಲ್ಲ ಶುಚಿ ಮಾಡುವುದಲ್ಲದೇ ಕ್ರಿಸ್ತ ಹಾಗೂ ಬಸವಣ್ಣನವರಂತ ಆದರ್ಶ ಪುರುಷರ ಕಥೆಗಳನ್ನು ಹೇಳಿ ಅವರನ್ನು ಹುರಿದುಂಬಿಸುತ್ತಿದ್ದರು.

ಅವರ ಬೋಧನೆಯ ಕ್ರಮವು ಅಪೂರ್ವವಾಗಿತ್ತು ಎಂದರೆ, ನಮ್ಮ ದೇಶದಲ್ಲಿ ಜನಪ್ರಿಯವಾಗಿದ್ದ ಕೀರ್ತನೆಗಳು, ಹರಿಕಥೆಗಳನ್ನು ಮಾಡುವ ಪದ್ಧತಿಗಳನ್ನು ಅನುಸರಿಸಿದ್ದಲ್ಲದೆ ದೇಶೀಯ ಹಬ್ಬಗಳನ್ನು ಆಚರಿಸುವಾಗ ಕ್ರಿಸ್ತನ ಉಪದೇಶದ ಸಾರವನ್ನು ಜನಸಾಮಾನ್ಯರ ಹೃದಯಕ್ಕೆ ಮುಟ್ಟುವಂತೆ ಹೇಳುತ್ತಿದ್ದರು. 'ಕ್ರೈಸ್ತ ಧರ್ಮವೂ ನಾಗರಪಂಚಮಿ ಹಬ್ಬವೂ' ಎಂಬ ಚರ್ಚಾಗೋಷ್ಠಿಯಲ್ಲಿ ಮಂಡಿಸಿದ ಒಂದು ಪ್ರಬಂಧ ಭಾಷೆ, ಭಾವ, ಶೈಲಿ, ವಿವೇಚನಾ ರೀತಿ ದೃಷ್ಟಿಗಳಿಂದ ರೆ. ಅರ್ನೆಸ್ಟರ ಮೆಚ್ಚುಗೆಯನ್ನು ಪಡೆಯಿತು. ದೇಶೀ ಸಂತರು, ಶರಣರು– ಇಂತಹವರ ಕಥೆಗಳನ್ನೂ ಪ್ರಸಂಗಗಳನ್ನೂ ಬಳಸಿಕೊಂಡು ಇವರು ಬೋಧಿಸುತ್ತಿದ್ದ ರೀತಿ ಪಂಡಿತ ಪಾಮರರೆಲ್ಲರ ಅಪಾರ ಮೆಚ್ಚುಗೆಗೆ ಕಾರಣವಾಯಿತು. ಹೀಗಿರುವಾಗ ಅರ್ನೆಸ್ಟ್ ಅವರು ಕಾರಣಾಂತರಗಳಿಂದ ಜರ್ಮನಿಗೆ ಹೋಗಬೇಕಾದ ಸಂದರ್ಭ

ಎದುರಾಯಿತು. ರೆ.ಬಿ. ಲೂಥಿಯವರು ಅವರ ಸ್ಥಾನಕ್ಕೆ ನೇಮಕಗೊಂಡರು. ಮಂಗಳೂರಿನ ಕ್ರೈಸ್ತ ದೈವಜ್ಞಾನದ ಶಾಲೆಯಲ್ಲಿ ಪ್ರಾಧ್ಯಾಪಕರಾಗಿದ್ದು ಚನ್ನಪ್ಪನವರ ಮೇಲೆ ಕಿಡಿಕಾರುತ್ತ, ಚನ್ನಪ್ಪನವರಿಗೆ ಅವರು ಕೊಡಬಾರದ ಕಿರುಕುಳ ಕೊಟ್ಟರು. ಕ್ರೈಸ್ತ ಧರ್ಮಬೋಧಕರಾಗಿದ್ದ ಇವರು ಅನ್ಯಧರ್ಮಗಳ ಬಗ್ಗೆ ಅಪಾರ ಗೌರವವಿಟ್ಟುಕೊಂಡ ಕಾರಣದಿಂದ ಅವರ ವಿರೋಧಕ್ಕೆ ಗುರಿಯಾಗಿದ್ದರು. ಬಸವಣ್ಣನವರನ್ನು ಕುರಿತು ಅವರು ನೀಡುತ್ತಿದ್ದ ಭಾಷಣಗಳನ್ನು ಕೇಳಿ ಧರ್ಮದ್ರೋಹಿ ಕ್ರಮ ಎಂದು ಖಂಡಿಸಿದರು. ಅದರಲ್ಲಿಯೂ ಸರ್ವಜ್ಞನನ್ನು ಕುರಿತು ಚನ್ನಪ್ಪನವರು ನಡೆಸುವ ಅಧ್ಯಯನ ಮತ್ತು ಸಂಶೋಧನೆಯನ್ನು ಧರ್ಮವಿರೋಧಿ ನಡೆ ಎಂದು ಘೋಷಿಸಿದರು. ಈ ಎಲ್ಲಾ ಟೀಕೆಗಳಿಗೆ ಸಮಾಧಾನವಾಗಿ, ಆದರೆ ದಿಟ್ಟವಾಗಿ ಉತ್ತರಿಸಿದ ಚನ್ನಪ್ಪನವರು 'ಬನಾರಸಕ್ಕೆ ಬೆಳ್ಳೆಹೇಮಿನ ವಿನಂತಿ' ಎಂಬ ತಮ್ಮ ಪುಸ್ತಕವನ್ನು ಓದಬೇಕೆಂದೂ ದೇಶೀಯ ಸಾಹಿತ್ಯದ ಸೇವೆ ಮಾಡುವಾಗ ಕಿಟೆಲ್ ಮೊದಲಾದವರ ಹಾದಿಯಲ್ಲಿ ನಡೆಯಬೇಕೆಂದೂ ಸೂಚಿಸಿದರು.

ಉತ್ತಂಗಿ ಚನ್ನಪ್ಪ ಅವರು ೧೯೫೦ ರಲ್ಲಿ ವಿದ್ವಾಂಸರಾದ, ಎಸ್.ಎಸ್. ಭೂಸನೂರಮಠ ಅವರೊಂದಿಗೆ ಮೋಳಿಗೆ ಮಾರಯ್ಯ, ಅಕ್ಕಮಹಾದೇವಿಯ ವಚನಗಳ ಸಂಪಾದನೆಯ ಹೊಣೆಯನ್ನು ಹೊತ್ತುಕೊಂಡರು. ಒಬ್ಬ ಬರೆಯುವವನನ್ನು ನೇಮಿಸಿಕೊಂಡು ಅವನಿಗೆ ಪ್ರತಿ ತಿಂಗಳೂ ಸಂಬಳ ಕೊಟ್ಟು, ಪ್ರತಿದಿನವೂ ಸುಮಾರು ಆರು ಗಂಟೆ ಕೆಲಸ ಮಾಡಲು ಹೇಳಿ, ೧೮ ತಿಂಗಳ ಕಾಲಾವಧಿಯಲ್ಲಿ ವಚನಗ್ರಂಥದ ಕೈಬರಹ ಪ್ರತಿಗಳ ಸಂಪೂರ್ಣ ಸಂಗ್ರಹಣ, ಶುದ್ಧೀಕರಣ, ಮತ್ತು ಸಂಯೋಜನೆಗಳನ್ನು ದೃಷ್ಟಿಕೋನಗಳನ್ನಿಟ್ಟುಕೊಂಡು ಅದನ್ನು ಸಿದ್ಧಪಡಿಸಿದರು. ತಮ್ಮ ಬಿಡುವಿನ ಸಮಯವನ್ನೆಲ್ಲಾ ಕನ್ನಡ ಪ್ರಾಚೀನ ಸಾಹಿತ್ಯ ಗ್ರಂಥಗಳ ಸಂಪಾದನೆಯಲ್ಲಿಯೇ ಕಳೆದರು. ವಿಮರ್ಶಾತ್ಮಕ ಸಂಶೋಧನೆ ಅವರ ವಿಶೇಷ ಆಸಕ್ತಿಯ ವಿಷಯಗಳಲ್ಲಿ ಒಂದಾಗಿತ್ತು. ಇದರ ಜೊತೆಗೆ ಉತ್ತಂಗಿ ಚನ್ನಪ್ಪನವರು, ಸಿದ್ಧರಾಮ ಸಾಹಿತ್ಯವನ್ನು ಸಂಗ್ರಹಿಸಿ ವಿಮರ್ಶಾತ್ಮಕ ಮುನ್ನುಡಿಯನ್ನು ಬರೆಯುವ ಜವಾಬ್ದಾರಿಯನ್ನು ವಹಿಸಿಕೊಂಡರು. ನಾಡಿನ ಉದ್ದಗಲಕ್ಕೂ ಸುತ್ತಾಡಿ, ಸುಮಾರು ೨೦ ಹಸ್ತಪ್ರತಿಗಳನ್ನು ಸಂಗ್ರಹಿಸಿದರು ಹಾಗೂ ಒಟ್ಟು ೨,೦೦೦ ವಚನಗಳನ್ನು ಸಂಗ್ರಹಿಸಿದರು. ಇವರಿಗೆ ವಿದೇಶಿ ಮತ್ತು ಭಾರತೀಯ ತತ್ವಶಾಸ್ತ್ರದ ಪರಿಚಯವಿತ್ತು. ಉಪನಿಷತ್ತು, ಭಗವದ್ಗೀತೆ ಮುಂತಾದ ಉದ್ಗ್ರಂಥಗಳನ್ನು ಅಧ್ಯಯನ ಮಾಡಿದ್ದರು.

ಚನ್ನಪ್ಪನವರ ದೃಷ್ಟಿಯಲ್ಲಿ ಜಗತ್ತಿನ ಅನುಭಾವಿಗಳಾದ ಬಸವ, ಬುದ್ಧ, ಪೈಗಂಬರ್ ಎಲ್ಲರ ದರ್ಶನ ಒಂದೇ. ಅವರೆಲ್ಲರ ಬಗ್ಗೆ ಸಮಾನವಾದ ಗೌರವವನ್ನು ಹೊಂದಿದ್ದರು. ಈ ಹಂತದಲ್ಲಿ ರೆವರೆಂಡ್ ಉತ್ಕರ್ ಅವರಿಂದ ಪ್ರಭಾವಿತರಾಗಿ ಚನ್ನಪ್ಪನವರು ಸರ್ವಜ್ಞನಿಗೆ ತಮ್ಮ ಮನಸ್ಸನ್ನು ಪೂರ್ಣವಾಗಿ ಒಪ್ಪಿಸಿಕೊಂಡರು. ಇದನ್ನು ಇಂಗ್ಲಿಷಿಗೆ ಅನುವಾದಿಸುವ ಸಂದರ್ಭದಲ್ಲಿ ಸರ್ವಜ್ಞನ ವಚನಗಳಲ್ಲಿರುವ ಸ್ಖಲಿತ್ಯಗಳನ್ನು ಗುರುತಿಸಿ ಅವುಗಳನ್ನು ಸರಿಪಡಿಸಬೇಕೆಂದು ತೀರ್ಮಾನ ಮಾಡಿಕೊಂಡರು. ಮೊದಲಿಗೆ ಸರ್ವಜ್ಞನ ವಚನಗಳನ್ನು ಒಂದು ಕಡೆ ಸಂಗ್ರಹಿಸಿ, ಅನಂತರ ಅವುಗಳ ಪಾಠಗಳನ್ನು ಅಧ್ಯಯನ ಮಾಡುವ ಕಾರ್ಯಕ್ಕೆ ತಮ್ಮನ್ನು ಅರ್ಪಿಸಿಕೊಂಡರು. ಸು. ೨೦ ಪ್ರತಿಗಳನ್ನು ಇಟ್ಟುಕೊಂಡು ಅಧ್ಯಯನ ನಡೆಸಿ ೨೦೦೦ಕ್ಕಿಂತಲೂ ಹೆಚ್ಚು ವಚನಗಳ ಪಾಠ ಸಂಶೋಧನೆ ಹಾಗೂ ನಿರ್ಣಯದ ಕಡೆ ಗಮನಹರಿಸಿದರು. ಸರ್ವಜ್ಞನ ಕುರಿತ ಇವರ ಶೋಧನೆ ಮತ್ತು ಅಧ್ಯಯನ ಒಂದು ತಪಸ್ಸಿನಂತೆ ಕೈಗೊಂಡು ಅದರಲ್ಲಿ ಯಶಸ್ವಿಯೂ ಆದರು. ಈ ಬಗೆಯ ನಿರಂತರ ಅಧ್ಯಯನದಿಂದ ಅವರ ಕಣ್ಣಿನ ದೃಷ್ಟಿಯು ಹದಗೆಟ್ಟಿತು.

ಹಸ್ತಪ್ರತಿಗಳನ್ನು ಸಂಗ್ರಹಿಸಿ ಸಿದ್ಧಪಡಿಸಿ, ಸುದೀರ್ಘ ಮುನ್ನುಡಿ ಬರೆದರು. ಅದನ್ನು ಅಚ್ಚುಮಾಡಿಸಲು ಹಣವಿರಲಿಲ್ಲ. ಧಾರವಾಡದ ಕರ್ನಾಟಕ ಪ್ರಿಂಟಿಂಗ್ ಪ್ರೆಸ್‌ನ ಮಾಲೀಕರಾದ ಯಶವಂತರಾವ್ ಜಥಾ ಅವರು ಪ್ರಕಟಿಸಲು ಒಪ್ಪಿಗೆ ನೀಡಿದರು. ಅದಕ್ಕಾಗಿ ಮೊದಲಿಗೆ ೫೦೦ ರೂಪಾಯಿ ಸಾಲ ಮಾಡಬೇಕಾಯಿತು. ಅದೇ ಸಮಯಕ್ಕೆ ಅವರಿಗೆ ಹಾವೇರಿಗೆ ವರ್ಗವಾಯಿತು. ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಇವರಿಗೆ ಆಹ್ವಾನ ಬಂತು. ಚನ್ನಪ್ಪನವರ ಸಾಹಿತ್ಯ ಕೃಷಿಯನ್ನು ಗಮನಿಸಿದ ಅಲ್ಲಿನ ಹಿರಿಯ ಸಾಹಿತಿಗಳು ತಮ್ಮ ಕೈಲಾದ ಸಹಾಯಮಾಡುವುದಾಗಿ ಭರವಸೆ ಕೊಟ್ಟು ಅಭಿನಂದಿಸಿದರು. ಸದಾಶಿವರಾಯರು ತಮ್ಮ ಒಂದು ನಾಟಕ ಪ್ರದರ್ಶನದಿಂದ ಬಂದ ೩೦೦ ರೂಪಾಯಿಯನ್ನು ಕಾಣಿಕೆಯಾಗಿ ತಂದುಕೊಟ್ಟರು.

ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಇವರ ನಿರಂತರ ಸೇವೆಯನ್ನು ಪರಿಗಣಿಸಿ ಇವರಿಗೆ ಪ್ರಶಸ್ತಿ ಮತ್ತು ಗೌರವಗಳು ಅರಸಿ ಬಂದುವು. ೧೯೪೯ ರಲ್ಲಿ ಕಲಬುರ್ಗಿಯಲ್ಲಿ ನಡೆದ ೩೨ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಉತ್ತಂಗಿ ಚನ್ನಪ್ಪನವರು ಆಯ್ಕೆಯಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತು ೧೯೭೧ರಲ್ಲಿ ಉತ್ತಂಗಿಯವರ ಸಮಗ್ರ ಜೀವನ ಚರಿತ್ರೆಯನ್ನು ಮತ್ತು ೧೯೮೨ರಲ್ಲಿ 'ಉತ್ತಂಗಿ ಚನ್ನಪ್ಪನವರು' ಎಂಬ ಗ್ರಂಥವನ್ನು ಪ್ರಕಟಿಸಿ ಅವರನ್ನು ಗೌರವಿಸಿತು. ಉತ್ತಂಗಿ ಚನ್ನಪ್ಪನವರಿಗೆ ದೇವರಾಜ

ಬಹದ್ದೂರ ಪ್ರಶಸ್ತಿ ಲಭಿಸಿದೆ. ಚನ್ನಪ್ಪನವರು ಹಾಸ್ಯಪ್ರಿಯರು ಕೂಡ. ತೀಕ್ಷ್ಣಮತಿತ್ವ, ವಿಮರ್ಶಾತ್ಮಕ ದೃಷ್ಟಿಕೋನ, ಹೊಸ ವಿಷಯಗಳನ್ನು ತಿಳಿಯುವ ಕುತೂಹಲ, ಉಜ್ಜ್ವಲ ರಾಷ್ಟ್ರಪ್ರೇಮ, ಸಮಾಜದ ಹಿತಚಿಂತನೆಗಳು, ಅವರನ್ನು ತಮ್ಮ ಕೆಲಸ ಸಾಧನೆಯ ಯಶಸ್ಸು ಗಳಿಸಲು ಮಹತ್ತ್ವದ ಪಾತ್ರವನ್ನು ವಹಿಸಿದ್ದುವು. ಹೀಗೆ ಅವರು ೩೩ ವರ್ಷಗಳ ಕಾಲ ಕನ್ನಡಮ್ಮನ ಸೇವೆಯನ್ನು ಸತತವಾಗಿ ಮಾಡಿದರು.

ಉತ್ತಂಗಿ ಚನ್ನಪ್ಪನವರದು ವಿಪುಲವೂ ವ್ಯಾಪಕವೂ ಆದ ಆಳವಾದ ಅಧ್ಯಯನವಾಗಿತ್ತು. ಅವರ ವಿದ್ವತ್ತಿನ ವಿಸ್ತಾರ, ವಿಚಾರಪಕ್ವತೆಯನ್ನೂ ತಿಳಿಯ ಬೇಕಾದರೆ ಅವರ ಕೃತಿಗಳನ್ನೂ ಮತ್ತು ಲೇಖನಗಳನ್ನೂ ಗಮನಿಸಬೇಕಾಗುತ್ತದೆ. 'ಬನಾರಸಕ್ಕೆ ಬೆಲ್ಲಹೇಮಿನ ವಿನಂತಿ', 'ಹಿಂದೂ ಸಮಾಜದ ಹಿತಚಿಂತಕ', 'ಮಕ್ಕಳ ಶಿಕ್ಷಣ ಪಟ', 'ನಾರಾಯಣವಾಮನ ತಿಲಕರ ಜೀವನ ಚರಿತ್ರೆ' (ಅನುವಾದ), 'ಸರ್ವಜ್ಞನ ವಚನಗಳು', 'ಬಸವೇಶ್ವರನೂ ಅಸ್ಪೃಶ್ಯರ ಉದ್ಧಾರವೂ', 'ಸಾಧುಸುಂದರ ಸಿಂಗರ ದೃಷ್ಟಾಂತದರ್ಪಣ', 'ಮೋಳಿಗೆ ಮಾರಯ್ಯ ಮತ್ತು ರಾಣಿ ಮಹಾದೇವಿಯರ ವಚನಗಳು', 'ಅನುಭವ ಮಂಟಪದ ಐತಿಹಾಸಿಕತೆ', 'ಸಿದ್ಧರಾಮ ಸಾಹಿತ್ಯ ಸಂಗ್ರಹ', 'ಆದಯ್ಯನ ವಚನಗಳು', 'ಮೃತ್ಯುಂಜಯ' ಇವರ ಕನ್ನಡ ಕೃತಿಗಳು. ಚನ್ನಪ್ಪನವರು ಕವಿತೆಗಳನ್ನೂ ರಚಿಸಿದ್ದಾರೆ, ಸರ್ವಜ್ಞನನ್ನು ಕುರಿತು ಪದ್ಯ ರಚಿಸಿದ್ದಾರೆ, ಮಹಾರಾಷ್ಟ್ರದ ನಾರಾಯಣವಾಮನ ತಿಲಕರ ಹಾಡುಗಳನ್ನು ಅನುವಾದಿಸಿದ್ದಾರೆ. ಬಸವಣ್ಣನವರು, ಶೂನ್ಯಸಂಪಾದನೆ, ಅನುಭವ ಮಂಟಪ, ವಚನಕಾರರು, ಸರ್ವಜ್ಞ ಹಾಗೂ ವೀರಶೈವ ಧರ್ಮವನ್ನು ಕುರಿತು ಅವರು ನಡೆಸಿದ ಆಳವಾದ ಅಧ್ಯಯನ ಹಾಗೂ ಸಾಹಿತ್ಯ ರಚನೆ ಅವರನ್ನು ಸಾಹಿತ್ಯ ಲೋಕದ ಮಾನ್ಯವ್ಯಕ್ತಿಯನ್ನಾಗಿ ಮಾಡಿದೆ. ಬಸವಣ್ಣನ ವಚನಗಳ ಪಾಠನಿರ್ಣಯದಲ್ಲಿ ಚನ್ನಪ್ಪನವರ ಉಪಕಾರವನ್ನು ಬಸವನಾಳ ಅವರು ಹೆಮ್ಮೆಯಿಂದ ಸ್ಮರಿಸಿದ್ದಾರೆ.

ಚನ್ನಪ್ಪ ಅವರು 'ನಾನು ಹುಟ್ಟು ಕನ್ನಡಿಗ, ಕ್ರೈಸ್ತರಾದ ನನ್ನ ತಂದೆ ತಾಯಿಗಳೂ ಹುಟ್ಟು ಕನ್ನಡಿಗರು' ಎಂದು ಹೇಳುವ ಎದೆಗಾರಿಕೆಯನ್ನು ಹೊಂದಿದ್ದರು. 'ನಾನೊಬ್ಬ ತಿಳಿತಿಳಿವಿನ ತಿರುಕ; ತಿರುಳುಗನ್ನಡದ ತಿರುಕ; ಹಾಡಿ ಬೇಡಿದವನಲ್ಲ; ಬೇಡಿ ಬಾಳಿದವನಲ್ಲ' ಎಂದು ಸಂತೋಷಪಡುತ್ತಾರೆ. ಅವರು ನಿವೃತ್ತರಾದದ್ದು ೧೯೪೧ರಲ್ಲಿ. ಆತ್ಮ ಚಿಂತನೆ, ಸಮಾಜ ಸುಧಾರಣೆ, ಅಧ್ಯಯನ ಸಮಾಲೋಚನೆ ಗಳಲ್ಲಿ ತಮ್ಮ ಬದುಕನ್ನು ತೊಡಗಿಸಿಕೊಂಡ ಜೀವನದ

ಸಂಕಷ್ಟಮರೆತು ತಮ್ಮನ್ನು ಕನ್ನಡ ಸಾಹಿತ್ಯಕ್ಕೆ, ಮುಡಿಪಾಗಿಟ್ಟರು. ಬಾಸೆಲ್ ಚರ್ಚಿನ ಭಾರತೀಕರಣ ಮತ್ತು ಭಾರತದ ಸ್ವಾತಂತ್ರ್ಯ, ಇವರ ಕನಸಾಗಿತ್ತು, ಅದು ಅವರ ಜೀವಿತ ಕಾಲದಲ್ಲೇ ಈ ಎರಡೂ ಕನಸುಗಳು ನನಸಾದುವು. ಚನ್ನಪ್ಪನವರು ೨೮-೦೮-೧೯೬೨ ರಂದು ಇಹಲೋಕ ತ್ಯಜಿಸಿದರು.

❐ ❐ ❐

ಗೋವಿಂದ ಪೈ

(೧೮೮೩–೧೯೬೩)

ನಾಗರತ್ನಮ್ಮ

ಮಂಜೇಶ್ವರದ ಗೋವಿಂದ ಪೈ ಕವಿ, ಸಂಶೋಧಕ, ಇತಿಹಾಸತಜ್ಞ, ಕನ್ನಡನಾಡು–ನುಡಿಗಳ ಏಳ್ಗೆಗಾಗಿ ದುಡಿದ ಮಹನೀಯರು. ಮಂಗಳೂರಿನ ಸಾಹುಕಾರ ತಿಮ್ಮ ಪೈ ಹಾಗೂ ದೇವಕಿ ದಂಪತಿಗಳ ಏಳುಮಂದಿ ಮಕ್ಕಳಲ್ಲಿ ಗೋವಿಂದ ಪೈ ಹಿರಿಯರು. ಇವರು ೧೮೮೩ ಮಾರ್ಚ್ ೨೩ರಂದು ಜನ್ಮ ತಾಳಿದರು.

ಗೋವಿಂದ ಪೈ ಅವರು ಮಂಗಳೂರಿನ ಮಿಷನ್ ಶಾಲೆ, ಕೆನರಾ ಹೈಸ್ಕೂಲು, ಸರ್ಕಾರಿ ಕಾಲೇಜುಗಳಲ್ಲಿ ಆರಂಭಿಕ ಶಿಕ್ಷಣವನ್ನು ಮುಗಿಸಿ, ಮದರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಶಿಕ್ಷಣವನ್ನು ಮುಂದುವರಿಸಿದರು. ಕನ್ನಡ, ಇಂಗ್ಲಿಷ್, ಕೊಂಕಣಿ, ಹಿಂದಿ, ಸಂಸ್ಕೃತ ಮುಂತಾದ ಭಾಷೆಗಳಲ್ಲಿ ಪರಿಣತಿ ಪಡೆದಿದ್ದರಲ್ಲದೆ ಪ್ರಾಕೃತ, ಪಾಲಿ, ಲ್ಯಾಟಿನ್, ಗ್ರೀಕ್, ಜರ್ಮನ್, ಅರಬ್ಬೀ, ಮರಾಠಿ, ಬಂಗಾಲಿ, ಉರ್ದು, ಜಪಾನಿ ಭಾಷೆಗಳ ತಕ್ಕಮಟ್ಟಿನ ಪರಿಚಯವೂ ಅವರಿಗಿತ್ತು.

ಗೋವಿಂದ ಪೈ ಅವರ ಸಾಹಿತ್ಯವಾಹಿನಿ ಬಹುಮುಖವಾಗಿ ಹರಿದಿದೆ. ಕಾವ್ಯ(ವೈಶಾಖಿ, ಗೊಲ್ಗೊಥ ಇತ್ಯಾದಿ), ನಾಟಕ(ಹೆಬ್ಬೆರಳು, ಚಿತ್ರಭಾನು), ವಿಮರ್ಶನ ಲೇಖನಗಳು, ಸಂಶೋಧನ ಬರೆಹಗಳು, ಅನುವಾದಗಳು– ಹೀಗೆ ವ್ಯಾಪಿಸಿ ಕೊಂಡಿರುವ ಅವರ ೨೨೬ ಬರೆಹಗಳನ್ನು 'ಗೋವಿಂದ ಪೈ ವಾಙ್ಮಯ ದರ್ಶನ' (ಉಡುಪಿ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ೧೯೬೬) ಕೃತಿಯಲ್ಲಿ ಉಲ್ಲೇಖಿಸುತ್ತಾರೆ. ಗೋವಿಂದ ಪೈ ಅವರ ಹೆಸರಿನ ಹಿಂದೆ 'ರಾಷ್ಟ್ರಕವಿ' ಎಂಬ ವಿಶೇಷಣವಿದ್ದರೂ ಅವರು ಸಂಶೋಧಕರು, ಸತ್ಯಶೋಧಕರು ಕೂಡ ಆಗಿದ್ದರು.

ಕಾಲಮಾನದ ದೃಷ್ಟಿಯಿಂದ ಸೃಜನಶೀಲ ಸಾಹಿತ್ಯ ಅವರ ಪೂರ್ವಾರ್ಧ ಜೀವನದ ಕೃಷಿಯಾದರೆ, ಸಂಶೋಧನೆ ಉತ್ತರಾರ್ಧ ಜೀವನ ಕೃಷಿ. ಮುಂದೆ ಪೈ ಎಂದರೆ ಸಂಶೋಧನೆ; ಸಂಶೋಧನೆ ಎಂದರೆ ಪೈ ಎನ್ನುವಷ್ಟರ ಮಟ್ಟಿಗೆ ಅವರು ಬೆಳೆದರು.

ಪೈ ಅವರ ಸಂಶೋಧನೆ ಅನಂತರ ಕಾಲದ ಸಾಹಿತಿಗಳು ಹಾಗೂ ಇತಿಹಾಸದ ಸಂಶೋಧಕರು ಇವರ ಅಭಿಪ್ರಾಯಗಳನ್ನು ಪರಿಗಣಿಸದೆ ಮುಂದೆ ಹೋಗಲಾರದಷ್ಟು ಪ್ರಭಾವ ಬೀರಿದೆ. ಪೈ ಅವರ ಸಂಶೋಧನ ಬರಹಗಳ ಸಮೀಕ್ಷೆಗೆ ಹಿನ್ನೆಲೆಯಾಗಿ ಅವುಗಳ ಸ್ಥೂಲವಾದ ವಿಭಜನೆ ಅಗತ್ಯ. ಅವುಗಳನ್ನು ಗೋವಿಂದ ಪೈ ಸಂಶೋಧನಾ ಸಂಪುಟದಲ್ಲಿ ಈ ರೀತಿ ವರ್ಗೀಕರಿಸಸಲಾಗಿದೆ. ೧. ಹಳಗನ್ನಡ–ನಡುಗನ್ನಡ ಸಾಹಿತ್ಯ(೫೫ ಲೇಖನಗಳು), ೨. ಹೊಸಗನ್ನಡ ಸಾಹಿತ್ಯ(೧೫ ಲೇಖನಗಳು), ೩. ತುಳುನಾಡಿನ ಇತಿಹಾಸ(೨೧ ಲೇಖನಗಳು) ೪. ಕರ್ನಾಟಕದ ಇತಿಹಾಸ(೨೩ ಲೇಖನಗಳು) ೫. ಭಾರತದ ಇತಿಹಾಸ(೧೬ ಲೇಖನಗಳು) ೬. ವಾಗರ್ಥ(೬ ಲೇಖನಗಳು) ೭. ಧರ್ಮ ತತ್ವಜ್ಞಾನ(೮ ಲೇಖನಗಳು) ೯. ಇಂಗ್ಲಿಷ್‌ನಲ್ಲಿ ಬಂದ ಅವರ ಪ್ರಬಂಧಗಳ ಸಂಖ್ಯೆ ೨೯. ಹೀಗೆ ಪ್ರಕಟವಾದ ಪೈ ಅವರ ಸಂಶೋಧನ ಬರಹಗಳ ಮೊತ್ತ ೧೩೨.

ಪೈ ಅವರು ಸಂಶೋಧನೆಯನ್ನು ತಮ್ಮ ಸಾಂಸ್ಕೃತಿಕ ಹೊಣೆಗಾರಿಕೆಯ ಭಾಗವಾಗಿಯೇ ಪರಿಗಣಿಸಿದ್ದರು. ಇವರ ಎಲ್ಲಾ ಪ್ರಬಂಧಗಳು ವಿವರವಾದ ಅಡಿಟಿಪ್ಪಣಿಗಳಿಂದ, ಆಧಾರಗ್ರಂಥಗಳ ಸಮಗ್ರವಾದ ಪಟ್ಟಿಯಿಂದ, ವಿವರಣೆಗಳಿಂದ ತುಂಬಿರುತ್ತವೆ. ತಮ್ಮದಲ್ಲದ ಅಭಿಪ್ರಾಯಗಳನ್ನು ಅವರೆಂದೂ ತಮ್ಮದೆಂದು ಹೇಳಿಕೊಳ್ಳುತ್ತಿರಲಿಲ್ಲ. ಅವರ ಸಂಶೋಧನೆಯಲ್ಲಿ ಅಲ್ಪತೃಪ್ತಿಯ ಛಾಯೆಯು ಕಂಡುಬರುವುದಿಲ್ಲ. ವಿಷಯವೊಂದರ ಆಳಕ್ಕೆ ಇಳಿದು ಅದರ ಮೂಲ–ಚೂಲಗಳನ್ನು ಶೋಧಿಸುವ ಛಲವು ಅವರಿಗೆ ಕರಗತವೇ ಆಗಿತ್ತು. ಈ ಅರ್ಥದಲ್ಲಿ ನಿಜವಾದ 'ಸಂಶೋಧನ ಪ್ರಜ್ಞೆ'ಯು ಅವರಲ್ಲಿ ಸದಾ ಜಾಗೃತವಾಗಿಯೇ ಇರುತ್ತಿತ್ತು.

ಪೈ ಅವರು ತಮ್ಮ ಸಂಶೋಧನೆಯಲ್ಲಿ ಲಿಖಿತ, ಮೌಖಿಕ ಮತ್ತು ಕೈಫಿಯತ್ತಿನಂಥ ಅಸಾಂಪ್ರದಾಯಿಕ ಹಾಗೂ ಸ್ಥಳ ಪುರಾಣಗಳಂಥ ಅಶಾಸ್ತ್ರೀಯ

ಆಕರಗಳೆಲ್ಲವನ್ನು ಸಮಾನ ದೃಷ್ಟಿಯಿಂದ ಕಂಡವರು. ಅವರ ಸಂಶೋಧನ ವಿಧಾನವು ಮೂಲತಃ ಗ್ರಂಥಾಲಯನಿಷ್ಠವಾದದಾಗಿತ್ತು.

'ಹಳ್ಳಿಹಳ್ಳಿಗೆ ಹೋಗಿ ಅಲ್ಲಲ್ಲಿಯ ಹಳಬರಿಂದ ಆಯಾ ಗ್ರಾಮದ ಐತಿಹ್ಯಗಳನ್ನು, ದಂತಕಥೆಗಳನ್ನು ಕೇಳಿಕೊಳ್ಳಬೇಕು. ಹರಿಜನರನ್ನು, ಕೊರಗರನ್ನು ವಿಚಾರಿಸಿ ಅವರಿಂದ ದೊರೆತಷ್ಟು ಹಳೆಯ ಕಥೆಗಳನ್ನು ಒಟ್ಟುಗೂಡಿಸಬೇಕು' ಎನ್ನುವ ಅವರ ಹೇಳಿಕೆಯು ಕ್ಷೇತ್ರಕಾರ್ಯದ ಬಗೆಗೆ ಅವರಿಗಿದ್ದ ಒಲವನ್ನು ಸ್ಪಷ್ಟಪಡಿಸುತ್ತದೆ. ಇವರ ಸಂಶೋಧನ ಪದ್ಧತಿಯ ಅಧಿಕೃತತೆಯು ಮಾತ್ರ ಅಚ್ಚಳಿಯದೇ ಉಳಿಯುತ್ತದೆ.

ಗೋವಿಂದ ಪೈ ಅವರ ಸಂಶೋಧನೆಗೆ ವಿಷಯಗಳ ಪರಿಮಿತಿಯಿಲ್ಲ. ಕನ್ನಡ ಸಾಹಿತ್ಯದ ಪ್ರಾಚೀನತೆಯ ವಿಸ್ತೃತವಾದ ಚರ್ಚೆಯಿಂದ ತೊಡಗಿ ಪ್ರಾಕ್ತನ ವಿಮರ್ಶನದ ಮುಂದಣ ಹೆಜ್ಜೆಗಳ ಮೂಲಕ ಹಾಯುತ್ತ ಶ್ರೀರಾಮಪಟ್ಟಾಭಿಷೇಕದ ಕರ್ತೃ ಯಾರೆಂಬ ಜಿಜ್ಞಾಸೆಗೆ ಒಳಗಾಗುವ ಅವರ ಅಧ್ಯಯನಶೀಲತೆಯು ಸೀಮಾರಹಿತವೇ ಆಗಿತ್ತು. ಅಳಿಯಕಟ್ಟಿನ ಪ್ರಾಚೀನತೆಯ ನಿರ್ಣಯ, ಕಾರ್ಕಳದ ಗೊಮ್ಮಟ ಬೆಟ್ಟದ ಶಿಲಾಲೇಖಗಳು, ಚಾಳುಕ್ಯ ವಿಕ್ರಮ ಪಟ್ಟಬಂಧದ ತೇದಿ, ಉತ್ತರಕಾಲೀನ ಸಾತವಾಹನರು, ಕರ್ಣಾಟಕವೋ ಕರ್ನಾಟಕವೋ ಅಥವಾ ಕರ್ನಾಟಕ ಪದ ನಿಷ್ಪತ್ತಿ... ಎಲ್ಲವೂ ಅವರ ಕುತೂಹಲವನ್ನು ಕೆರಳಿಸಿದ ಅಂಶಗಳೇ ಆಗಿದ್ದುವು. ಈ ರೀತಿಯ ಸಂಶೋಧನೆಗೆ ಬೇಕಾದ ತಾತ್ತ್ವಿಕ ಪರಿಜ್ಞಾನ, ಪಾರಿಭಾಷಿಕಗಳ ಪರಿಚಯ, ಮಾಹಿತಿ ಸಂಗ್ರಹಗಳನ್ನೇ ಒಂದು ತಪಸ್ಸೆಂಬಂತೆ ನಡೆಸಿಕೊಂಡು ಬಂದರು. ಕೈಲಾದಮಟ್ಟಿಗೆ ಹೊಸ ಹೊಸ ಶಬ್ದಗಳನ್ನು ಸೃಷ್ಟಿಸಿ ನಮ್ಮ ಶಬ್ದಸ್ತೋಮವನ್ನು ಹೆಚ್ಚಿಸಬೇಕು. ಏಕೆಂದರೆ ಹೊಸಹೊಸ ಭಾವನೆಗಳು ಹುಟ್ಟುತ್ತಿರುವಲ್ಲಿ ಅವುಗಳನ್ನು ಯಥಾವತ್ತಾಗಿ ಮೂಡಿಸಲಿಕ್ಕೆ ಹಳೆಯ ಶಬ್ದಸಂಗ್ರಹವು ಸಾಲದು ಎಂಬುದು ಅವರ ಅಭಿಪ್ರಾಯವಾಗಿತ್ತು. ಅದರಂತೆಯೇ ಅವರು ಈಲಾಗಿರಬೇಕು, ಇಮ್ಮೆ ನಗಾಟ ಮುಂತಾದ ಶಬ್ದಗಳನ್ನು ತಮ್ಮ ಬರವಣಿಗೆಗಳಲ್ಲಿ ಧಾರಾಳವಾಗಿ ಪ್ರಯೋಗಿಸಿದರು. ಕನ್ನಡದ ಪ್ರೇರಣಾರ್ಥಕ ಹಾಗೂ ಸಾಧಕಪ್ರತ್ಯಯವಾಗಿರುವ 'ಇಸು'ವನ್ನು ಬಳಸಿಕೊಂಡು ಅಂಕಿಸು, ಪಾನಿಸು, ಕೋಲಾಹಲಿಸು ಮುಂತಾದ ಹೊಸ ಕ್ರಿಯಾಪದಗಳನ್ನು ಅವರು ಸೃಷ್ಟಿಸಿದರು. ಈ ಸಂದರ್ಭದಲ್ಲಿ ಗೋವಿಂದ ಪೈ ಅವರು ಬಳಕೆಗೆ ತಂದ ಎಷ್ಟೋ ರೂಪಗಳು ಮತ್ತು

ತಂತ್ರಗಳು ಕನ್ನಡದಲ್ಲಿ ಪಾರಿಭಾಷಿಕ ಪದಗಳ ಸೃಷ್ಟಿಗೆ ಮಾರ್ಗದರ್ಶನ ಮಾಡಿದಂತೆ ಎನ್ನಲಾಗಿದೆ. (ಉಪಾಧ್ಯಾಯ, ಯು.ಪಿ., ಗೋವಿಂದ ಪೈ ಸಂಶೋಧನಾ ಸಂಪುಟ, ಪು.೨೦೯೦)

ಗೋವಿಂದ ಪೈ ಅವರು ಸಂಶೋಧನೆಯ ಹಲವು ಕ್ಷೇತ್ರಗಳಲ್ಲಿ ಮೊದಲಿಗರಾಗಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಜನಪದ ಕಲಾವೈಭವ(೧೯೫೩) ಎಂಬ ಸಂಶೋಧನಾ ಪ್ರಬಂಧವನ್ನು ಬರೆದ ಪೈ ಅವರು ಕರಾವಳಿ ಜಾನಪದವನ್ನು ಅಧ್ಯಯನ ಮಾಡಿದವರಲ್ಲಿ ಮೊದಲಿಗರು(ಗೋವಿಂದ ಪೈ, ಸಂಶೋಧನಾ ಸಂಪುಟ, ಪು.೪೫). ಪೈ ಅವರ ಸಂಶೋಧನೆಯ ಪ್ರಮುಖ ಲಕ್ಷಣ ಸ್ವೋಪಜ್ಞತೆ. ಅವರು ರಾಷ್ಟ್ರೀಯತೆಯ ಅತಿಗೆ ಹೋಗಲೇ ಇಲ್ಲ; ತಮ್ಮ ಕಾಲಕ್ಕೆ ತೀರಾ ಸಹಜವಾಗಿದ್ದ ಬೌದ್ಧಿಕ ವಸಾಹತುಶಾಹಿಯನ್ನು ಒಪ್ಪಿಕೊಳ್ಳಲೂ ಇಲ್ಲ. ಈ ಮಾತು ಅವರ ಇತಿಹಾಸ ಸಂಶೋಧನೆಯ ಕ್ಷೇತ್ರಕ್ಕೆ ಹೆಚ್ಚು ಸಲ್ಲುತ್ತದೆ. ಪಾಶ್ಚಾತ್ಯ ವಿದ್ವಾಂಸರು ಸ್ವಲ್ಪಮಟ್ಟಿನ ತಿರುಚಿದ ಭಾರತೀಯ ಇತಿಹಾಸವನ್ನು ಹೊಸ ದೃಷ್ಟಿಯಿಂದ ನೋಡಬೇಕಾದ ಅಗತ್ಯವನ್ನು ಪ್ರತಿಪಾದಿಸಿದರು. ಈ ದಿಸೆಯಲ್ಲಿ ತಮ್ಮಿಂದಾದಷ್ಟು ಪ್ರಯತ್ನವನ್ನು ಮಾಡಿದರು. ಭಾರತೀಯ ಸಂಶೋಧಕರು ಕ್ರೈಸ್ತರ ಪಂಚಾಂಗವನ್ನೇ ಮೂಲವಾಗಿರಿಸಿಕೊಂಡು ಭಾರತೀಯ ಶಾಸನಗಳ ತೇದಿಯನ್ನು ಸಮೀಕರಿಸುವ ಪ್ರಯತ್ನ ಮಾಡಿದರು. ಪೈಗಳು ಅಂಥ ವ್ಯಾಮೋಹಕ್ಕೆ ಬಲಿಯಾಗದೆ ಇವುಗಳನ್ನು ಭಾರತೀಯ ಪಂಚಾಂಗಗಳ ಮೇಲಷ್ಟೇ ಸಮೀಕರಿಸುವ ಪ್ರಯತ್ನ ಮಾಡಿದರು.

ಬುದ್ಧ, ಮಹಾವೀರ ಮೊದಲಾದ ಐತಿಹಾಸಿಕ ವ್ಯಕ್ತಿಗಳ ಕಾಲ ನಿರ್ಧಾರದಂತೆಯೇ ಪೈ ಅವರು ಬ್ರಹ್ಮಶಿವ, ಕುಮಾರವ್ಯಾಸ ಮೊದಲಾದ ಕನ್ನಡ ಕವಿಗಳ ಕಾಲವನ್ನು ನಿರ್ಧರಿಸಲು ಪ್ರಯತ್ನಿಸಿದ್ದಾರೆ. ಸಂಶೋಧನ ಬರೆಹಗಳನ್ನು ಬರೆಯಲು ವಿದ್ವದ್ವಲಯಗಳಲ್ಲಿ ಉಳಿಯಗೊಡದೆ ಜನಸಾಮಾನ್ಯರಿಗೂ ಅವು ನಿಲುಕುವಂತೆ ಮಾಡಿದುದು ಪೈ ಅವರ ಇನ್ನೊಂದು ಸಾಧನೆಯಾಗಿದೆ.

ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರವು ಎಂ.ಜಿ.ಎಂ. ಕಾಲೇಜಿನ ಸಂಘ ಸಂಸ್ಥೆಯಾಗಿ ೧೯೬೫ರಲ್ಲಿ ಉಡುಪಿಯಲ್ಲಿ ಸ್ಥಾಪಿತವಾಗಿದೆ. ಇದು ಪೈ ಅವರ ಪುಸ್ತಕ ಭಂಡಾರ ಮತ್ತು ಪ್ರಾಚ್ಯವಸ್ತುಸಂಗ್ರಹಾಲಯವನ್ನು ಹೊಂದಿದೆ.

ಸಾಹಿತ್ಯ ಕ್ಷೇತ್ರಕ್ಕೆ ಗೋವಿಂದ ಪೈ ಅವರು ಸಲ್ಲಿಸಿದ ಮೌಲಿಕ ಸೇವೆಯನ್ನು ಮನ್ನಿಸಿ, ಮದ್ರಾಸು ಸರ್ಕಾರವು ೧೯೪೯ರಲ್ಲಿ ಅವರನ್ನು 'ರಾಷ್ಟ್ರಕವಿ' ಎಂದು ಗೌರವಿಸಿತು. ೧೯೫೦ರಲ್ಲಿ ಮುಂಬಯಿಯಲ್ಲಿ ನಡೆದ ೩ಳನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಗೆ ಭಾಜನರಾದರು. ಇವರ ಹೆಸರಿನಲ್ಲಿ ಗೋವಿಂದ ಪೈ ಸ್ಮಾರಕ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಗೋವಿಂದ ಪೈ ಅವರ ಸಂಶೋಧನ ಪ್ರಬಂಧಗಳನ್ನು ಅವಲೋಕಿಸಿದಾಗ ಪ್ರತಿಯೊಂದು ಸಂಶೋಧನ ಲೇಖನವೂ ಒಂದು ಅಪೂರ್ವವಾದ ಗಣಿ ಎಂದೆನಿಸುತ್ತವೆ. ರಾಷ್ಟ್ರಕವಿ ಗೋವಿದ ಪೈ ಅವರು ೧೯೬೩ರ ಸೆಪ್ಟಂಬರ್ ೬ರಂದು ನಿಧನರಾದರು.

❐ ❐ ❐

ಬಿ.ಎಂ. ಶ್ರೀಕಂಠಯ್ಯ

(೧೮೮೪–೧೯೪೬)

ಪೂರ್ಣಿಮಾ ಸಿ.ಎಸ್.

ಬೆಳ್ಳೂರು ಮೈಲಾರಯ್ಯ ಶ್ರೀಕಂಠಯ್ಯನವರು ಆಧುನಿಕ ಕನ್ನಡ ಸಾಹಿತ್ಯವನ್ನು ಕಟ್ಟಿ ಪೋಷಿಸಿದ ಕನ್ನಡದ ಕಟ್ಟಾಳು. ಇವರು ಜನವರಿ ೩, ೧೮೮೪ರಂದು ಜನಿಸಿದರು. ತಂದೆ ಮೈಲಾರಯ್ಯ., ತಾಯಿ ಭಾಗೀರಥಮ್ಮ. ಶ್ರೀಕಂಠಯ್ಯನವರು ಮೆಟ್ರಿಕ್ಯುಲೇಷನ್ ಮತ್ತು ಎಫ್.ಎ. ಗಳನ್ನು ಮೈಸೂರಿನಲ್ಲಿ ಪೂರೈಸಿ, ಕಾಲೇಜು ಶಿಕ್ಷಣಕ್ಕೆ ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ಸೇರ್ಪಡೆಯಾದರು. ೧೯೦೩ರಲ್ಲಿ ಬಿ.ಎ. ೧೯೦೬ರಲ್ಲಿ ಬಿ.ಎಲ್ ಮತ್ತು ೧೯೦೭ರಲ್ಲಿ ಎಂ.ಎ. ಪದವಿಗಳಿಸಿದರು. ೧೯೦೯ ರಲ್ಲಿ ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿ ಸೇವೆಗೆ ಸೇರ್ಪಡೆಯಾದರು. ೨೫ ವರ್ಷಗಳು ಸೇವೆಸಲ್ಲಿಸಿ ತದನಂತರ ೧೯೩೦ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿಯೂ ಮತ್ತು ೧೯೪೪ರಲ್ಲಿ ಧಾರವಾಡದ ಕೆ.ಇ. ಬೋರ್ಡ್‌ನ ಮುಖ್ಯಸ್ಥರಾಗಿ ಕಲಾಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಸೇವೆಸಲ್ಲಿಸಿದರು. ಅಲ್ಲದೇ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದರು.

ಬಿ.ಎಂ.ಶ್ರೀ ಅವರ 'ಇಂಗ್ಲಿಷ್ ಗೀತಗಳು'(೧೯೨೬) ಅನುವಾದ ಕೃತಿ ಹೆಸರುವಾಸಿಯಾಗಿದೆ. 'ಗದಾಯುದ್ಧ ನಾಟಕಂ' (೧೯೨೬), 'ಅಶ್ವತ್ಥಾಮನ್ '(೧೯೩೦), 'ಪಾರಸಿಕರು (೧೯೩೫), 'ಕನ್ನಡ ಕೈಪಿಡಿ'ಯ ಭಾಗವಾದ 'ಕನ್ನಡ ಛಂದಸ್ಸಿನ ಚರಿತ್ರೆ', (೧೯೩೬), 'ಕನ್ನಡ ಸಾಹಿತ್ಯ ಚರಿತ್ರೆ' (೧೯೪೭) ಮೊದಲಾದವು ಪ್ರಕಟವಾಗಿವೆ.

ಬಿ.ಎಂ.ಶ್ರೀ ಆಧುನಿಕ ಕನ್ನಡ ಕಾವ್ಯದ ಆದ್ಯ ಪ್ರವರ್ತಕರೆಂದು ಹೆಸರು ಪಡೆದವರು. ಅಲ್ಲದೆ ಗ್ರೀಕ್, ಸಂಸ್ಕೃತ ಮತ್ತು ಕನ್ನಡ ಅಭಿಜಾತ ಕೃತಿಗಳನ್ನು ಆಧರಿಸಿ ಅವರು ಬರೆದ ಕೃತಿಗಳು ನವಾಭಿಜಾತ ಕೃತಿಗಳಾಗಿ (ನಿಯೋ–ಕ್ಲಾಸಿಕಲ್) ಕನ್ನಡ ಸಾಹಿತ್ಯಕ್ಕೆ ಮೆರಗನ್ನು ನೀಡಿವೆ.

ಏಜಾಕ್ಸ್ ಸೋಫೋಕ್ಲಿಸ್ಸನ ದುರಂತ ನಾಟಕ. ಇದು ಕ್ರಿ.ಪೂ. ೫ನೆಯ ಶತಮಾನದಲ್ಲಿ ರಚಿತವಾಗಿತ್ತು. ಏಜಾಕ್ಸ್ ಟ್ರಾಯ್ ನಗರದ ಎರಡನೆಯ ನಾಯಕನಾಗಿದ್ದನು. ಯುದ್ಧದಲ್ಲಿ ಅಕಿಲಸ್ಸನು ಸತ್ತ ಅನಂತರ ಅವನ ಕವಚವನ್ನು ತನಗೆ ನೀಡುತ್ತಾನೆಂದು ಏಜಾಕ್ಸನು ಭಾವಿಸಿರುತ್ತಾನೆ. ಆದರೆ ಅಗಮೆಮ್ನನ್ ಮತ್ತು ಮೆನೆಲಾಸ್ ಅದನ್ನು ಒಡಿಸಸ್‌ಗೆ ನೀಡುತ್ತಾರೆ. ಇದರಿಂದ ಕುಪಿತಗೊಂಡ ಏಜಾಕ್ಸ್ ಅವರನ್ನು ಕೊಲ್ಲಲು ಹೊರಡುತ್ತಾನೆ. ಕೊನೆಗೆ ಅವನಿಗೆ ತಾನು ಮಾಡಿದ ಕೃತ್ಯದ ಬಗ್ಗೆ ನಾಚಿಕೆಯಾಗಿ ತಾನು ಪ್ರಾಯಶ್ಚಿತ್ತ ಕೈಗೊಳ್ಳಬೇಕೆಂದು ಹೊರಹೋಗಿ ತನ್ನ ಕತ್ತಿ ಮೇಲೆ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಇದನ್ನು ಆಧಾರವಾಗಿ ತೆಗೆದುಕೊಂಡ ಬಿ. ಎಂ. ಶ್ರೀ ಅವರು ನೇರ ಏಜಾಕ್ಸನನ್ನು ಅನುವಾದಿಸಿದರೆ ಅದು ಭಾರತೀಯ ಮನಸ್ಸಿಗೆ ಒಗ್ಗುವುದಿಲ್ಲವೆಂದು ಮಹಾಭಾರತದಲ್ಲಿ ಕುರುಕ್ಷೇತ್ರ ಯುದ್ಧದ ಕೊನೆಯಲ್ಲಿ ಅಶ್ವತ್ಥಾಮ ಸೈನ್ಯವನ್ನು ಮುನ್ನಡೆಸುವ ಸಂದರ್ಭವನ್ನು ಉಪಯೋಗಿಸಿಕೊಂಡಿದ್ದಾರೆ. ದುರ್ಯೋಧನನ ಸಾವಿಗೆ ತನ್ನ ತಂದೆಯ ಸಾವಿಗೆ ಕಾರಣರಾದ ಪಾಂಡವರನ್ನು ಕೊಂದು ತನ್ನ ಯಜಮಾನನಿಗೆ ಸಂತೋಷ ನೀಡುವ ಸಲುವಾಗಿ ಹೊರಡುವ ಪ್ರಸಂಗವನ್ನು ಇಲ್ಲಿ ತೆಗೆದುಕೊಂಡಿದ್ದಾರೆ.

ಅಶ್ವತ್ಥಾಮನ್(೧೯೨೯) ಈ ಹಿನ್ನೆಲೆಯಲ್ಲಿ ರಚಿತವಾದ ಕೃತಿ. ಗ್ರೀಕ್ ಕಥೆಯಲ್ಲಿ ಅಥೆನಾ ದೇವತೆ ಏಜಾಕ್ಸನಿಗೆ ಬುದ್ಧಿ ಭ್ರಮಣೆ ಮಾಡಿದರೆ ಇಲ್ಲಿ ಅದೇ ಕೋಪ, ಶೋಕಗಳು ಅಶ್ವತ್ಥಾಮನನ್ನು ಬುದ್ಧಿಗೇಡಿಯನ್ನಾಗಿಸುತ್ತವೆ. ಇವನಿಗೆ ಬುದ್ಧಿಭ್ರಮಣೆ ಉಂಟಾಗುವುದು ರುದ್ರನಿಂದ. ಅಶ್ವತ್ಥಾಮನ್ ತನ್ನ ಪೌರುಷಬಲವನ್ನೇ ಹೆಚ್ಚು ನಂಬುತ್ತಾನೆ. ಗುರುವಿನ ಮಗನಾಗಿ, ರುದ್ರದೇವನ ಕೃಪೆಯಿರುವ ಅಶ್ವತ್ಥಾಮ ತನ್ನ ಕೋಪದಿಂದ ಪಾಂಡವರನ್ನು ಕೊಲ್ಲಲು ಹೋಗುವಾಗ ಎಚ್ಚರಿಸಿದ ರುದ್ರದೇವನ ಮಾತನ್ನು ಉಪೇಕ್ಷಿಸುತ್ತಾನೆ. ರುದ್ರದೇವ ಅವನಿಗೆ ಪ್ರತ್ಯಕ್ಷನಾಗಿ 'ಪ್ರಿಯವೀರ ದಾಳಯೇನ್? ವರಮ್ ಆವುದೀವನ್?' ಎಂದು ಕೇಳಿದಾಗ 'ಪಾಂಡವರ ಲೋಕಕೆನ್ನಿನ್ ಪ್ರಳಯಮ್' ಎಂದು ಹೇಳುತ್ತಾನೆ. ಗ್ರೀಕ್ ನಾಟಕದಂತೆಯೇ

ಅಶ್ವತ್ಥಾಮನೂ ಕಾಡು ಪ್ರಾಣಿಗಳನ್ನು ಮನುಷ್ಯರೆಂದು ಭ್ರಮಿಸಿ ಕೊಲ್ಲತೊಡಗುತ್ತಾನೆ. ಅವನ ಕೋಪಕ್ಕೆ ಬಲಿಯಾದವು ಮೂಕ ಪ್ರಾಣಿಗಳು. ಬಿಡಾರದ ಒಳಗೆ ಹೋಗಿ ಪಾಂಡವರೆಂದು ಭಾವಿಸಿ ಅವರ ಮಕ್ಕಳನ್ನು ಕೊಲ್ಲುತ್ತಾನೆ. ಸಂತೋಷದಿಂದ ಹೊರಬರುವ ಅಶ್ವತ್ಥಾಮನಿಗೆ ರುದ್ರನು ತನ್ನ ಮಾಯೆಯಿಂದ ಬಿಡುಗಡೆ ಗೊಳಿಸುತ್ತಾನೆ. ಆಗ ಅಶ್ವತ್ಥಾಮನಿಗೆ ತಾನು ಕೊಂದಿದ್ದು ಪಾಂಡವರನ್ನಲ್ಲ ಅವರ ಮಕ್ಕಳನ್ನು ಎಂದು ಅರಿವಾಗುತ್ತದೆ. ಹಾಗೂ ಪ್ರಾಣಿಗಳನ್ನು ಮನುಷ್ಯರೆಂದು ಕೊಂದದ್ದು ತಿಳಿದ ಅಶ್ವತ್ಥಾಮ ನೊಂದು ಇದು ರುದ್ರನ ಮಾಯೆಯೆಂದು ತಿಳಿದು ಅವನನ್ನು ಖಂಡಿಸುತ್ತಾನೆ. 'ನಾನ್ ಪೋಗಿ ಬರ್ಪೆನ್ ಮುಂದಣದು ಕರೆದವರ ಕೂಟದೊಳ್– ಭಾರತದ ಸಂದ ಸಿಂಹಗಳ್, ಕೌರವ ಸ್ವಾಮಿಯೊಳ್, ಕರ್ಣನೊಳ್, ಭೀಷ್ಮರೊಳ್, ತಂದೆ ಆ ಗುರುವೊಳ್' ಎಂದು ಹೇಳುತ್ತಾ ತಾನು ನೆಟ್ಟ ಖಡ್ಗದ ಮೇಲೆ ಬೀಳುತ್ತಾನೆ. ಭಾರತದ ಅಶ್ವತ್ಥಾಮನು ಚಿರಂಜೀವಿ; ಆದರೆ ಇಲ್ಲಿ ರುದ್ರನ ಮಾಯೆಯ ಪ್ರಭಾವದಿಂದ ಸಾವಿಗೀಡಾಗುತ್ತಾನೆ. ಇದೆಲ್ಲ ಗ್ರೀಕ್ ದುರಂತ ನಾಟಕಗಳ ಸ್ವರೂಪವನ್ನು ಕನ್ನಡದಲ್ಲಿ ಪರಿಚಯ ಮಾಡುವ ಪ್ರಯತ್ನ.

'ಗದಾಯುದ್ಧನಾಟಕಂ'(೧೯೨೬): ರನ್ನನ ಗದಾಯುದ್ಧ ಕಾವ್ಯದ ಮೂಲ ವನ್ನು ಅನುಸರಿಸಿದರೂ ನವಾಭಿಜಾತ ಸಾಹಿತ್ಯಕ್ಕೆ ಅನುಗುಣವಾಗಿ ನಾಟಕದಲ್ಲಿ ಕೆಲವು ಬದಲಾವಣೆಗಳಾಗಿವೆ. ಇದು ಐದು ರಂಗಗಳ ಚಿಕ್ಕ ನಾಟಕ. ಮೊದಲನೆಯ ದರಲ್ಲಿ ಕೃಷ್ಣ ಭೀಮನನ್ನು ಹೊಗಳುತ್ತಿದ್ದಾಗ ದ್ರೌಪದಿ 'ಸಾಹಸಭೀಮ ವಿಜಯಂ' ಎಂದು ಹಂಗಿಸುತ್ತಾಳೆ. ಅವಳ ಕೋಪ ಭೀಮನಿಗೆ ಅರ್ಥವಾಗುತ್ತದೆ. ಅದನ್ನು ಒಪ್ಪಿಕೊಳ್ಳುತ್ತಾನೆ.

ದುರ್ಯೋಧನನನ್ನು ಹುಡುಕಿ ಬರುವ ಅಶ್ವತ್ಥಾಮ ಅವನನ್ನು ನೋಡಿ ಮರುಗಿ ಪ್ರತೀಕಾರವಾಗಿ ಪಾಂಡವರ ತಲೆಗಳನ್ನು ತಂದು ತೋರುವೆ ಎಂದು ಹೊರಡುತ್ತಾನೆ. ಇದರ ಮುಂದಿನ ಅವತರಣಿಕೆಯಾಗಿ ಶ್ರೀ ಅವರ ಅಶ್ವತ್ಥಾಮನ್ ನಾಟಕ ಬಂದಿದೆ. ಪಾಂಡವರ ಶಿರಗಳು ಎಂದು ತೋರಿದ ಅಶ್ವತ್ಥಾಮನಿಗೆ ಇವು ದ್ರೌಪದಿಯ ಸೂನುಗಳ ತಲೆಯೆಂದು ಸುಯೋಧನ ಹೇಳಿ ಅವನಿಗೆ ಮಕ್ಕಳನ್ನು ಕೊಂದ ಪಾಪದ ಪ್ರಾಯಶ್ಚಿತ್ತ ಮಾಡಿಕೋ ಎನ್ನುವಾಗ 'ಇದೆಲ್ಲಂ ಕೃಷ್ಣನ ಮಾಯೆ! ಹರಿಹರಿ! ಹೋಗು, ಇದರ್ಕೆ ಪ್ರಾಯಶ್ಚಿತ್ತಮಂ ಮಾಡು ದೈವದ ಮುಂದೆ ನಾವಲ್ತು' ಎಂದು ಹೇಳಿಸಿದ್ದಾರೆ. ಈ ನಾಟಕದಲ್ಲಿ ಗ್ರೀಕ್ ದುರಂತ ನಾಟಕಗಳಲ್ಲಿ ಬರುವ

ಮೂರು ಅಂಶಗಳಾದ ಸಮಯ, ಸ್ಥಳ ಮತ್ತು ಕ್ರಿಯೆಗಳು ಇದ್ದು ಯಾವುದೂ ಅತಿಶಯವಾಗಿಲ್ಲ.

'ಪಾರಸಿಕರು'(೧೯೩೫) ಈಸ್ಕಿಲಸ್‌ನ ಗ್ರೀಕ್ ನಾಟಕದ ರೂಪಾಂತರವಾಗಿ ಬಂದ ನಾಟಕ. ಇದರ ಎಲ್ಲ ವಸ್ತು, ಪಾತ್ರಗಳು ಗ್ರೀಕ್ ನಾಟಕದ ಮೂಲವನ್ನೇ ಅನುಸರಿಸಿವೆ. ಪಾರಸಿಕರು ಮತ್ತು ಗ್ರೀಕರ ನಡುವೆ ನಡೆಯುವ ಯುದ್ಧದ ಚಿತ್ರಣ ಹಾಗೂ ಪಾರಸಿಕರ ಸೋಲು ಇದನ್ನು ತಿಳಿಸುವ ನಾಟಕ ಇದು. ಈ ನಾಟಕಗಳನ್ನು ಕನ್ನಡದಲ್ಲಿ ತಂದ ಮುಖ್ಯ ಉದ್ದೇಶ ಗ್ರೀಕ್ ಭಾಷೆಯ ಅಭಿಜಾತ ಸಾಹಿತ್ಯವನ್ನು ಕನ್ನಡಿಗರಿಗೆ ಪರಿಚಯ ಮಾಡುವುದು ಹಾಗೂ ಹಳಗನ್ನಡವನ್ನೇ ಬಳಸುತ್ತಾ ಕನ್ನಡದಲ್ಲಿ ನವಾಭಿಜಾತ ಸಾಹಿತ್ಯವನ್ನು ಸೃಷ್ಟಿ ಮಾಡುವುದು. ಶ್ರೀ ಅವರು ತಮ್ಮ ನಾಟಕಗಳ ಭಾಷೆಯ ಪ್ರಯೋಗ ಹಳಗನ್ನಡದಲ್ಲಿ ಮಾಡಿದ್ದರೂ ಅದು ತ್ರಾಸದಾಯಕವಾಗದೆ ಓದಿಸಿಕೊಂಡು ಹೋಗುತ್ತದೆ.

ಬಿಎಂಶ್ರೀ ಇಂಗ್ಲಿಷ್ ಪ್ರಾಧ್ಯಾಪಕರು. ಆದರೆ ಆಧುನಿಕ ಕನ್ನಡ ಸಾಹಿತ್ಯಕ್ಕೆ ಚಾಲನೆ ಕೊಟ್ಟ ಮೇಧಾವಿ ಎಂದು ಹೆಸರು ಪಡೆದರು. 'ಕನ್ನಡ ಕೈಪಿಡಿ'(೧೯೨೭) ಒಂದು ಮಹತ್ತ್ವದ ಕೊಡುಗೆ. ಇದರ ಹಿಂದೆ ಶ್ರೀಕಂಠಯ್ಯನವರ ಕೃಷಿ ಅಡಗಿದೆ. ಕನ್ನಡ ಜನರಿಗೆ ಕನ್ನಡ ಭಾಷೆ, ಸಾಹಿತ್ಯ, ವ್ಯಾಕರಣ, ಛಂದಸ್ಸು ಮೊದಲಾದವನ್ನು ತಿಳಿಸುವುದರ ಜೊತೆಗೆ ಇಂಗ್ಲಿಷ್ ಸಾಹಿತ್ಯದಲ್ಲಿ ಬಂದಂತಹ ಚರಿತ್ರೆಯಂತೆ, ಕನ್ನಡ ಸಾಹಿತ್ಯ ಓದುವ ವಿದ್ಯಾರ್ಥಿಗಳಿಗಾಗಿ ಕನ್ನಡ ಸಾಹಿತ್ಯ ಚರಿತ್ರೆಯ ಕೈಪಿಡಿಯ ಸಿದ್ಧತೆ ಪ್ರಾರಂಭವಾಯಿತು. ಇದಕ್ಕಾಗಿ ರಚಿಸಿದ್ದ ಸಮಿತಿಯ ಅಧ್ಯಕ್ಷರಾಗಿ ಶ್ರೀ ಅವರಿದ್ದರು. ಅವರನ್ನೂ ಒಳಗೊಂಡಂತೆ ಕನ್ನಡ ಕೈಪಿಡಿಯಲ್ಲಿ ಹಲವು ವಿದ್ವಾಂಸರ ಬಳಗವಿತ್ತು. ಕೈಪಿಡಿಯಲ್ಲಿ ಒಟ್ಟು ಐದು ಭಾಗಗಳು. ಮೊದಲ ಭಾಗ– ಹಳಗನ್ನಡ ವ್ಯಾಕರಣ (ಟಿ. ಶ್ರೀನಿವಾಸ ರಾಘವಾಚಾರ್ಯರು ಮತ್ತು ಬಿ. ಕೃಷ್ಣಪ್ಪನವರು), ಎರಡನೆಯ ಭಾಗ– ಕರ್ಣಾಟಕ ಛಂದಸ್ಸು (ಟಿ. ಶ್ರೀನಿವಾಸಾಚಾರ್ಯರು), ಮೂರನೆಯ ಭಾಗ– ಅಲಂಕಾರ(ಎ.ಆರ್. ಕೃಷ್ಣಶಾಸ್ತ್ರಿಗಳು ಮತ್ತು ಕೆ. ವರದಾಚಾರ್ಯರು), ನಾಲ್ಕನೆಯ ಭಾಗ – ಕನ್ನಡ ಭಾಷೆಯ ಚರಿತ್ರೆ– (ಬಿ.ಎಂ. ಶ್ರೀಕಂಠಯ್ಯನವರು ಮತ್ತು ಟಿ.ಎಸ್. ವೆಂಕಣ್ಣಯ್ಯನವರು), ಐದನೆಯ ಭಾಗ– ಕನ್ನಡ ಸಾಹಿತ್ಯದ ಚರಿತ್ರೆ (ಬಿ.ಎಂ. ಶ್ರೀಕಂಠಯ್ಯನವರು). ಶ್ರೀ ಅವರು ಕೈಪಿಡಿಯ ಅಧ್ಯಕ್ಷತೆಯನ್ನು ವಹಿಸುವುದರ ಜೊತೆಗೆ ಎರಡು ಪ್ರಬಂಧಗಳ ಲೇಖಕರಾಗಿಯೂ ತಮ್ಮ ಸೇವೆ ಸಲ್ಲಿಸಿದ್ದಾರೆ.

ಭಾಷೆಯ ಬಗ್ಗೆ ತಿಳಿಸುವಾಗ ಭಾಷೆಯ ಬೆಳವಣಿಗೆಗೆ ಕಾರಣಗಳು ಯಾವುವು ಎಂಬುದನ್ನು ವಿಶದವಾಗಿ ತಿಳಿಸಿ, ಪ್ರಾಂತಭೇದ, ಕಾಲಭೇದಗಳ ಪ್ರಭಾವ ಭಾಷೆಯ ಮೇಲಾಗುವುದನ್ನು ತಿಳಿಸಿದ್ದಾರೆ. ಶಬ್ದ ಪ್ರಕರಣದಲ್ಲಿ ದೇಶ್ಯ, ಅನ್ಯದೇಶ್ಯ– ಅವುಗಳ ವ್ಯಾಪ್ತಿ ಇವುಗಳ ವಿಸ್ತಾರತೆಯೊಂದಿಗೆ ನಾಮ, ಸರ್ವನಾಮ, ಕ್ರಿಯಾಪದ ಮತ್ತು ಅವ್ಯಯಗಳನ್ನು ಒಳಗೊಂಡಂತೆ ಕನ್ನಡ ಭಾಷೆಯ ವಿವರಗಳ ಬಗ್ಗೆ ಚರ್ಚಿಸಿದ್ದಾರೆ.

ಬಿ.ಎಂ. ಶ್ರೀಕಂಠಯ್ಯನವರ ಮುಖ್ಯವಾದ ಕೊಡುಗೆ ಎಂದರೆ ಕನ್ನಡ ಕೈಪಿಡಿಯ ಭಾಗವಾದ ಕನ್ನಡ ಸಾಹಿತ್ಯ ಚರಿತ್ರೆ. ಇಂಗ್ಲಿಷ್ ಸಾಹಿತ್ಯ ಚರಿತ್ರೆಗಳ ನಿಕಟ ಪರಿಚಯ ಇರುವುದರಿಂದ ಕವಿಚರಿತ್ರೆಗಿಂತ ಭಿನ್ನವಾಗಿ ಸಾಹಿತ್ಯ ಚರಿತ್ರೆ ಹೇಗೆ ರಚಿತವಾಗಬೇಕೆಂಬುದನ್ನು ಅವರು ತೋರಿಸಿಕೊಟ್ಟಿದ್ದಾರೆ. ಆದರೆ ಈ ಯೋಜನೆ ಪೂರ್ಣಗೊಂಡಿಲ್ಲ. ಇದನ್ನು ಕುರಿತು ಕುವೆಂಪು ಅವರು ಮುನ್ನುಡಿಯಲ್ಲಿ ಹೇಳಿದ ಮಾತುಗಳು ಶ್ರೀಯವರ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿಯುತ್ತವೆ. ''ಶ್ರೀ ಬಿ.ಎಂ. ಶ್ರೀಕಂಠಯ್ಯನವರಿಗಿದ್ದ ವಿದ್ವತ್ತು, ಪರಿಶ್ರಮ, ಸಹೃದಯತೆ, ರಸಜ್ಞತೆ, ತೋಲನ ಸಾಮರ್ಥ್ಯ, ಸೂಕ್ಷ್ಮದೃಷ್ಟಿ, ಉಕ್ತಿಗಾಂಭೀರ್ಯ, ಒಮ್ಮೊಮ್ಮೆ ದಾಕ್ಷಿಣ್ಯಪರವಾದರೂ ಒಟ್ಟಿನಲ್ಲಿ ನಿಷ್ಪಕ್ಷವಾದ ಋಜುಮತಿ ಮತ್ತು ಪ್ರಥಮವರ್ಗದ ವಿಮರ್ಶಕನಿಗೆ ಸಹಜವಾದ ಸವಿನಯ ಅಧಿಕಾರವಾಣಿ ಇವುಗಳ ಪ್ರಯೋಜನ ಕನ್ನಡನಾಡಿಗೆ ಸಂಪೂರ್ಣವಾಗಿ ಲಭಿಸಿ 'ಕನ್ನಡ ಸಾಹಿತ್ಯ ಚರಿತ್ರೆ' ಅವರ ಕೈಯಿದಲೇ ರಚಿತವಾಗಿದ್ದರೆ, ಸಾಹಿತ್ಯ ಚರಿತ್ರೆ ಮಾತ್ರವಲ್ಲದೆ ಅದೆಂತಹ ರಸವಿಮರ್ಶೆಯ ಜೇನುಗಿಸು ಲಭಿಸುತ್ತಿದ್ದಿತು ಎಂಬುದಕ್ಕೆ ಪ್ರಕಟವಾಗಿರುವ ಈ ಗ್ರಂಥ ಭಾಗವೆ ಸಾಕ್ಷಿಯಾಗಿದೆ'' (ಕನ್ನಡ ಕೈಪಿಡಿ, ಸಂಪುಟ ೨, ನಾಲ್ಕನೆಯ ಮುದ್ರಣ, ೧೯೭೦, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ).

ಬಿ.ಎಂಶ್ರೀ. ಅವರಿಗೆ ೧೯೩೮ರಲ್ಲಿ ಮೈಸೂರು ಮಹಾರಾಜರಿಂದ 'ರಾಜಸೇವಾಸಕ್ತ' ಎಂಬ ಗೌರವ ಲಭಿಸಿತು. ೧೯೨೮ರಲ್ಲಿ ಗುಲಬರ್ಗಾದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇವರನ್ನು 'ಕನ್ನಡದ ಕಣ್ವ' ಎಂದು ಕರೆಯಲಾಗುತ್ತಿತ್ತು. ಶ್ರೀಕಂಠಯ್ಯನವರು ಧಾರವಾಡದಲ್ಲಿ ಕೆಲಸಮಾಡುತ್ತಿದ್ದ ಸಮಯದಲ್ಲಿಯೇ ೧೯೪೬ ಜನವರಿ ೫ ರಂದು ನಿಧನರಾದರು.

❐ ❐ ❐

ಟಿ.ಎಸ್. ವೆಂಕಣ್ಣಯ್ಯ

(೧೮೮೫–೧೯೩೯)

ಪೂರ್ಣಿಮಾ ಸಿ.ಎಸ್.

ತಳುಕಿನ ಸುಬ್ಬಣ್ಣ ವೆಂಕಣ್ಣಯ್ಯ, ಅಥವಾ ಟಿ.ಎಸ್. ವೆಂಕಣ್ಣಯ್ಯ ಕನ್ನಡ ಸಾಹಿತ್ಯಲೋಕದ ಒಬ್ಬ ಪ್ರಮುಖ ವಿದ್ವಾಂಸ, ಲೇಖಕ ಮತ್ತು ಪ್ರಾಧ್ಯಾಪಕ. ಇವರು ಅಕ್ಟೋಬರ್ ೧, ೧೮೮೫ ರಂದು ಚಿತ್ರದುರ್ಗ ಜಿಲ್ಲೆಯ ತಳುಕು ಗ್ರಾಮದಲ್ಲಿ ಜನಿಸಿದರು. ಇವರಿಗೆ ಇಬ್ಬರು ಪತ್ನಿಯರು, ಭಾಗೀರಥಮ್ಮ ಮತ್ತು ರುಕ್ಮಿಣಮ್ಮ.

ವೆಂಕಣ್ಣಯ್ಯ ಚಿತ್ರದುರ್ಗದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ, ಮೈಸೂರಿನಲ್ಲಿ ಬಿ.ಎ. ಪದವಿ, ಅನಂತರ ಮುಂಬಯಿಯಲ್ಲಿ ಕಾನೂನು ವ್ಯಾಸಂಗವನ್ನು ಅಭ್ಯಸಿಸಿದರು. ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಎಂ.ಎ.(ಭಾಷೆಗಳು) ಪದವಿ ಪಡೆದು, ಮುಂದೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮೊದಲ ಕನ್ನಡ ಪ್ರಾಧ್ಯಾಪಕರಾದರು.

ವೆಂಕಣ್ಣಯ್ಯ ಅವರು ಕೆಲವು ಕಾಲ ಅಂಚೆ ಕಚೇರಿಯಲ್ಲಿ ಕೆಲಸ ಮಾಡಿದ್ದರು. ಧಾರವಾಡದ ಮಿಷನ್ ಹೈಸ್ಕೂಲಿನಲ್ಲಿ ಮತ್ತು ಬೆಂಗಳೂರಿನ ಸೇಂಟ್ ಜೋಸೆಫ್ ಕಾಲೇಜಿನಲ್ಲಿಯೂ ಸಹಾಯಕ ಉಪಾಧ್ಯಾಯರಾಗಿದ್ದು ೧೯೧೭ರಲ್ಲಿ ದೊಡ್ಡ ಬಳ್ಳಾಪುರದಲ್ಲಿ ಕನ್ನಡ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿದ್ದರು. ಬೆಂಗಳೂರಿನ ಇಂಗ್ಲಿಷ್ ಹೈಸ್ಕೂಲು ಮತ್ತು ಸೆಂಟ್ರಲ್ ಕಾಲೇಜುಗಳಲ್ಲಿ ಬಡ್ತಿ ಹೊಂದಿ ೧೯೨೭ರಲ್ಲಿ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಪ್ರಾಧ್ಯಾಪಕರಾದರು. ಕನ್ನಡ ಸಾಹಿತ್ಯ ಮತ್ತು ಭಾಷಾ ಅಧ್ಯಯನಕ್ಕೆ ದೃಢವಾದ ಅಡಿಪಾಯವನ್ನು ಹಾಕಿದ

ಪ್ರಮುಖರಲ್ಲಿ ಇವರು ಒಬ್ಬರಾಗಿದ್ದಾರೆ. ಕುವೆಂಪು, ತೀ.ನಂ.ಶ್ರೀ. ಡಿ.ಎಲ್. ನರಸಿಂಹಾಚಾರ್, ಕೆ. ವೆಂಕಟರಾಮಪ್ಪ ಮೊದಲಾದ ಕನ್ನಡ ಎಂ.ಎ. ಮೊದಲ ತಂಡದ ವಿದ್ಯಾರ್ಥಿಗಳು ಇವರ ಶಿಷ್ಯರು.

ವೆಂಕಣ್ಣಯ್ಯನವರಿಗೆ ಇಂಗ್ಲಿಷ್, ಕನ್ನಡ ಭಾಷಾಸಾಹಿತ್ಯಗಳ ವಿಪುಲ ವ್ಯಾಸಂಗದ ಜತೆ ತೆಲುಗು, ಬಂಗಾಲಿ ಭಾಷೆಗಳ ಪರಿಚಯ ಹಾಗೂ ತಮಿಳು ಮತ್ತು ಸಂಸ್ಕೃತಗಳ ಬಗ್ಗೆ ತಕ್ಕಮಟ್ಟಿನ ಜ್ಞಾನವೂ ಇತ್ತು.

ವೆಂಕಣ್ಣಯ್ಯ ಅವರ ಕೃತಿಗಳು:

ಜೀವನ ಚರಿತ್ರೆ, ಶ್ರೀ ರಾಮಕೃಷ್ಣ ಪರಮ ಹಂಸರ ಚರಿತ್ರೆ

(ಎ. ಆರ್. ಕೃಷ್ಣಶಾಸ್ತ್ರಿಗಳ ಜತೆ)

ಸಂಕಲನ: ಕನ್ನಡ ಸಾಹಿತ್ಯ ಮತ್ತು ಇತರ ಲೇಖನಗಳು

ಅನುವಾದ: ಶ್ರೀ ರಾಮಕೃಷ್ಣ ಪರಮಹಂಸರ ಲೀಲಾ ಪ್ರಸಂಗ

ಸಂಪಾದನೆ: ಬಸವರಾಜದೇವರ ರಗಳೆ, ಕರ್ನಾಟಕ ಕಾದಂಬರಿ ಸಂಗ್ರಹ, ಹರಿಶ್ಚಂದ್ರ ಕಾವ್ಯ ಸಂಗ್ರಹ, ಕುಮಾರವ್ಯಾಸ ಭೀಷ್ಮ ಪರ್ವಸಂಗ್ರಹ, ಮತ್ತು ಸಿದ್ಧರಾಮ ಚಾರಿತ್ರ್ಯ

(ಡಿ.ಎಲ್.ಎನ್ ಅವರೊಂದಿಗೆ)

'ಕನ್ನಡ ಸಾಹಿತ್ಯ ಚರಿತ್ರೆ ಮತ್ತು ಇತರ ಲೇಖನಗಳು' ಕನ್ನಡ ಸಾಹಿತ್ಯದ ಪ್ರಾಚೀನತೆಯ ಮೇಲೆ ಬೆಳಕು ಚೆಲ್ಲುವಂಥ ಕೃತಿ. ಕವಿರಾಜಮಾರ್ಗದ ಬಗ್ಗೆ ಹೇಳುತ್ತಾ ಇದಕ್ಕಿಂತಲೂ ನಾಲ್ಕೈದು ಶತಮಾನಗಳ ಹಿಂದಿನಿಂದಲೇ ಕನ್ನಡದಲ್ಲಿ ಕೃತಿ ರಚನೆ ಗಳಾಗಿರಬೇಕು ಎಂದು ಅಭಿಪ್ರಾಯಪಡುತ್ತಾರೆ. ಬೌದ್ಧರು ಕರ್ನಾಟಕದಲ್ಲಿ ಇದ್ದು, ಅವರಿಂದ ವಿಪುಲ ಸಾಹಿತ್ಯ ರಚನೆಯಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. 'ಕವಿರಾಜಮಾರ್ಗ ಗ್ರಂಥದ ಕರ್ತೃ ಯಾರು' ಎಂಬ ಲೇಖನದಲ್ಲಿ ಶ್ರೀವಿಜಯನೆ ಕರ್ತೃ ವಾಗಿದ್ದು ನೃಪತುಂಗ ಅಲ್ಲ ಎನ್ನುವ ಅಂಶವನ್ನು ಪ್ರತಿಪಾದಿಸುತ್ತಾರೆ. 'ಪಂಪಭಾರತ' ಲೇಖನದಲ್ಲಿ ಅದರ ವಿಮರ್ಶೆ ಕಂಡುಬರುತ್ತದೆ. ಪಂಪನಿಗೆ ಆದಿಪುರಾಣಕ್ಕಿಂತ ಹೆಚ್ಚು ಹೆಸರು ತಂದು ಕೊಟ್ಟಿರುವುದು ಪಂಪಭಾರತ ಎಂಬುದನ್ನು ವೆಂಕಣ್ಣಯ್ಯನವರು ಪ್ರತಿಪಾದಿಸುತ್ತಾರೆ. ಪಂಪ ಇದನ್ನು ಲೌಕಿಕ ದೃಷ್ಟಿಯಿಂದ ನೋಡಿದ್ದಾನೆ. ಅವನ 'ಚಲದೊಳ್ ದುರ್ಯೋಧನಂ' ಎಂಬ ಸಾಲು ಇದಕ್ಕೆ ಸಾಕ್ಷಿ ಎಂದು ಸಮರ್ಥಿಸುತ್ತಾರೆ. ಪಂಪಭಾರತ ವ್ಯಾಸಭಾರತದ ಪ್ರತಿಕೃತಿಯಾಗದೆ ಅದರ

ಭಾವಚಿತ್ರದಂತೆ ಕಂಡುಬಂದಿದೆ. ಅರ್ಜುನನಿಗೆ ಅರಿಕೇಸರಿಯನ್ನು ಹೋಲಿಸಿರುವ ಕಾರಣದಿಂದ ಇದರಲ್ಲಿ ಅನೇಕ ಅನೌಚಿತ್ಯಗಳು ಕಂಡುಬರುವುದನ್ನು ಉದಾಹರಣೆ ಸಹಿತ ತೋರಿಸಿದರು. ಅದರಲ್ಲಿಯ ಶಬ್ದ ಬಳಕೆ, ಪಾತ್ರ ಪರಿಚಯಗಳನ್ನು ವಿಸ್ತರಿಸಿ ಹೇಳಿರುವುದು ಕಾಣುತ್ತದೆ. ಮತ್ತೊಂದು ಲೇಖನ 'ಹತ್ತನೆಯ ಶತಮಾನದ ಕರ್ಣಾಟಕ ಸಾಹಿತ್ಯ ಚರಿತ್ರೆ' ಯಲ್ಲಿ ಜನಾಂಗದ ಇತಿಹಾಸಕ್ಕೂ ಮತ್ತು ಸಾಹಿತ್ಯಕ್ಕೂ ಇರುವ ನಿಕಟ ಸಂಬಂಧವನ್ನು ವಿಶದವಾಗಿ ತಿಳಿಸುತ್ತಾ, ರಾಜಕೀಯ, ಸಾಮಾಜಿಕ, ಧಾರ್ಮಿಕ ಹಿನ್ನೆಲೆಯಲ್ಲಿ ಹತ್ತನೆಯ ಶತಮಾನದ ಕನ್ನಡ ಸಾಹಿತ್ಯದ ಗುಣಲಕ್ಷಣಗಳ ವಿಶ್ಲೇಷಣೆ ಇದೆ. 'ಬಸವರಾಜದೇವರ ರಗಳೆ' ಎಂಬ ಲೇಖನದಲ್ಲಿ ಹರಿಹರನ ಈ ಕಾವ್ಯವೇ ಬಸವಣ್ಣನನ್ನು ಕುರಿತ ಅತಿ ಪ್ರಾಚೀನವಾದ ವಿಶ್ವಸನೀಯವಾದ ಗ್ರಂಥ ಎನ್ನಲಾಗಿದೆ. ಮುಂದುವರಿದು ಹರಿಹರನಿಗೆ ರಗಳೆ 'ಕೈವೊಕ್ಕ ನಿಧಿ'ಯಾಗಿ ಸಿಕ್ಕಿತು ಎಂದಿದ್ದಾರೆ ಅದರೊಂದಿಗೆ ಅದರ ಮಿತಿ ಬಗ್ಗೆಯೂ ಇಲ್ಲಿ ಪ್ರಸ್ತಾಪವಿದೆ. ಹರಿಹರನು ತನ್ನ ನೈಪುಣ್ಯದಿಂದ ಬಸವಣ್ಣನ ವ್ಯಕ್ತಿಚಿತ್ರಕ್ಕೆ ಜೀವಕಳೆ ಕೊಟ್ಟಿದ್ದಾನೆ. ಬಸವಣ್ಣನ ಅಲೌಕಿಕ ಕಾರ್ಯಗಳನ್ನು, ಮಹಿಮೆಯನ್ನು ಹರಿಹರನು ಮೇಲಿಂದ ಮೇಲೆ ಉದ್ಘೋಷಿಸಿದರೂ ಆತನ ಆಳವಾದ ಮಾನವ ಹೃದಯವನ್ನು ಮಾತ್ರ ಎಲ್ಲಿಯೂ ಮರೆಮಾಡಿಲ್ಲ ಎಂದು ಹರಿಹರನ ಕೌಶಲದ ಬಗ್ಗೆ ಈ ಲೇಖನದಲ್ಲಿ ಮಾತನಾಡುತ್ತಾರೆ. ಮೊದಲ ಭಾಗದಲ್ಲಿ 'ಬಸವಣ್ಣನವರ ಕುರಿತ ವೀರಶೈವ ಪುರಾಣಗಳು' ಎಂಬ ಬಗ್ಗೆ ಚರ್ಚೆ ನಡೆದಿದೆ. ಬಸವಣ್ಣನ ಬಗ್ಗೆ ಅವನ ಸಮಕಾಲೀನರಾರೂ ಬರೆಯದೆ, ಇವರ ಚರಿತ್ರೆಗೆ ವಚನಗಳು ಮತ್ತು ವೀರಶೈವ ಪುರಾಣಗಳು ಆಧಾರವಾಗಿರುವುದರಿಂದ 'ಬಸವರಾಜ ದೇವರ ರಗಳೆ' ಬಸವಣ್ಣನವರ ಜೀವನ ಚರಿತ್ರೆ ತಿಳಿಯಲು ಅನುಕೂಲವಾಗಿದೆ ಎಂದು ಸಮರ್ಥಿಸುತ್ತಾರೆ. ಹರಿಹರನ ರಗಳೆಯಲ್ಲಿ ಗದ್ಯವೂ ಮಿಶ್ರವಾಗಿದ್ದರಿಂದ ಆಗಿನ ಕಾಲದಲ್ಲಿ ಕನ್ನಡ ಭಾಷೆ ಹೇಗಿತ್ತೆಂದು ತಿಳಿದುಕೊಳ್ಳಲು ಈ ರಗಳೆಗಳು ಒಳ್ಳೆಯ ಸಾಧನಗಳಾಗಿವೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಬಿಜ್ಜಳ ಜೈನನಾಗಿರದೆ ಶೈವನಾಗಿದ್ದನೆಂದು ಅವರ ಮತ್ತೊಂದು ಲೇಖನ 'ಬಿಜ್ಜಳ ಜೈನನೇ?' ಎಂಬುದರಲ್ಲಿ ಶಾಸನಗಳ ಆಧಾರಗಳನ್ನು ನೀಡಿ ಅವರ ಮಾತನ್ನು ಪುಷ್ಟೀಕರಿಸುತ್ತಾರೆ. ಹತ್ತನೆಯ ಶತಮಾನದ ಕನ್ನಡ ಸಾಹಿತ್ಯ ಗುಣಲಕ್ಷಣಗಳನ್ನು ನಿಷ್ಕರ್ಷಿಸಿದಂತೆಯೇ ಹನ್ನೆರಡು ಮತ್ತು ಹದಿಮೂರನೆಯ ಶತಮಾನಗಳ ಕನ್ನಡ ಸಾಹಿತ್ಯ ಚರಿತ್ರೆಯ ಗತಿಯನ್ನೂ

ಸುದೀರ್ಘವಾಗಿ ಚರ್ಚಿಸಿದ್ದಾರೆ. ಇವರ ಪ್ರಕಾರ ವಚನಗಳು ಕೇವಲ ತತ್ತ್ವಬೋಧನೆಗಾಗಿಯೇ ಹುಟ್ಟಿದವಾದ್ದರಿಂದ ಅವುಗಳನ್ನು ಸಾಹಿತ್ಯಪ್ರಪಂಚದಲ್ಲಿ ಮುಖ್ಯವಾದವು ಎಂದು ಪರಿಗಣಿಸಲಾಗುವುದಿಲ್ಲ. ವಚನಗಳನ್ನು ಕುರಿತು ಹೇಳುವಾಗ ಇವು ಕೇವಲ ಮತಧರ್ಮವನ್ನು ಬೋಧಿಸುವುದು ಮಾತ್ರವಲ್ಲದೇ ಅನೇಕ ವೇಳೆ ವಚನಕಾರರು ಸ್ವಂತ ದುಃಖಗಳನ್ನೂ ತಮ್ಮ ಸುತ್ತಮುತ್ತಿನ ಆವರಣದೊಳಗೆ ತಾವು ಹೋರಾಟ ಮಾಡುವುದನ್ನೂ ವಚನಗಳಲ್ಲಿ ವ್ಯಕ್ತಪಡಿಸುತ್ತಾರೆ ಎಂದಿದ್ದಾರೆ. ಇವರು ವ್ಯಕ್ತಪಡಿಸುವ ಭಾವಗಳು ಸ್ವಾನುಭವಜನ್ಯವಾದುದರಿಂದ ಅವುಗಳಲ್ಲಿ ಅಧಿಕಾರವಾಣಿ ಇರುತ್ತದೆ ಎನ್ನುತ್ತಾರೆ.

ಬಾಣನ ಸಂಸ್ಕೃತ 'ಕಾದಂಬರಿ' ಮತ್ತು ನಾಗವರ್ಮನ 'ಕರ್ಣಾಟಕ ಕಾದಂಬರಿ' ಎರಡರ ತುಲನಾತ್ಮಕ ವಿಮರ್ಶೆಯು ಚಿಕ್ಕದಾಗಿ ಚೊಕ್ಕವಾಗಿದೆ. ಬಾಣನು ರಸಋಷಿಯಾದ ಕವಿ ಆಗಿದ್ದೂ ಶಬ್ದ ಚಮತ್ಕಾರಗಳಿಂದ ಅದ್ಭುತವಾಗಿ ವರ್ಣಿಸುವ ಪಂಡಿತನಾಗಿದ್ದಾನೆ. ಈ ಕಾದಂಬರಿಯಲ್ಲಿ ಬಹುಭಾಗ ಪ್ರಣಯವನ್ನು ನಿರೂಪಿಸುವುದೇ ಆಗಿದೆ. ಇದರಲ್ಲಿ ಪುಂಡರೀಕ– ಮಹಾಶ್ವೇತೆಯರ, ಚಂದ್ರಾಪೀಡ– ಕಾದಂಬರಿಯರ ಪ್ರಣಯ ಕಥೆಗಳು ಹಾಸುಹೊಕ್ಕಾಗಿವೆ. ಕಥೆಯನ್ನು ಕವಿ ತಾನೇ ಹೇಳದೆ ಪಾತ್ರಗಳ ಮೂಲಕ ಹೇಳಿಸುವುದು ಇಲ್ಲಿಯ ಮತ್ತೊಂದು ಆಕರ್ಷಣೆ. ಇದರ ಅನುವಾದವಾದ ನಾಗವರ್ಮನ ಕೃತಿ ಮೂಲಗ್ರಂಥವನ್ನು ಅನುಸರಿಸಿದರೂ ಅಲ್ಲಲ್ಲಿ ಸ್ವತಂತ್ರವಾಗಿ ಕವಿ ವಿಸ್ತರಿಸಿದ್ದಾನೆ. ಆದರೂ ಮೂಲ ಸ್ವಾರಸ್ಯಕ್ಕೆ ಕುಂದುಬರದಂತೆ ರಚಿಸಿದ್ದಾನೆಂದು ಅಭಿಪ್ರಾಯಪಟ್ಟಿದ್ದಾರೆ.

ಸಾಹಿತ್ಯಚರಿತ್ರೆಗೆ ಸಂಬಂಧಿಸಿದ ಲೇಖನಗಳಲ್ಲಿ ವೆಂಕಣ್ಣಯ್ಯನವರು ಸಂಶೋಧಕರಾಗಿ ಮಾತ್ರವಲ್ಲದೆ ಚರಿತ್ರಕಾರ ರಾಗಿಯೂ ಕಾಣಿಸುತ್ತಾರೆ. ಕನ್ನಡ ಭಾಷಾಸಾಹಿತ್ಯಗಳ ಪ್ರಾಚೀನತೆಯ ಬಗೆಗೆ ಅವರಿಗೆ ನಿಶ್ಚಿತ ಅಭಿಪ್ರಾಯಗಳಿದ್ದುವು. ವೆಂಕಣ್ಣಯ್ಯನವರದು ತಿಳಿಯಾದ ವಿದ್ವತ್ತು ತುಂಬಿದ ಬರೆಹವಾಗಿದೆ. ಕನ್ನಡ ಸಾಹಿತ್ಯಕ್ಕೆ ಸುದೀರ್ಘ ಇತಿಹಾಸವಿದೆ. ಇದನ್ನು ನದಿಗೆ ಹೋಲಿಸಿ ಅದರ ಮೂಲ ಶೋಧನೆಗೆ ಲೇಖಕರು ತೊಡಗಿದ್ದಾರೆ. 'ಕನ್ನಡ ಸಾಹಿತ್ಯ ಚರಿತ್ರೆ– ಪ್ರಾಚೀನತೆ' ಎಂಬ ಲೇಖನದಲ್ಲಿ ಪ್ರಾಚೀನತೆಯ ಅನ್ವೇಷಣೆ ಮತ್ತು ಪ್ರಾಚೀನ ಕರ್ಣಾಟದಲ್ಲಿ ಜೈನೇತರರ ಪಾತ್ರಗಳು ಎಂಬ ಎರಡು ಘಟ್ಟಗಳಿವೆ. ಇವಕ್ಕೆ ಅನುಕೂಲವಾದ ಆಧಾರಗಳನ್ನು ಪ್ರಸ್ತಾಪಿಸುತ್ತಾರೆ. ಹದಿಮೂರನೆಯ ಶತಮಾನದವರೆಗಿನ ಸಾಹಿತ್ಯ ಚರಿತ್ರೆಯ ರೂಪರೇಖೆಗಳಂತಿರುವ

ಇಲ್ಲಿಯ ಲೇಖನಗಳು ಖಚಿತತೆಗೆ ಹೆಸರಾಗಿವೆ. 'ಬಸವದೇವರಾಜರ ರಗಳೆ'ಯನ್ನು ಕುರಿತು ಹೇಳುವಾಗ ಹನ್ನೆರಡನೆಯ ಶತಮಾನದ ಧಾರ್ಮಿಕ ಮತ್ತು ಸಾಮಾಜಿಕ ಕ್ರಾಂತಿಯ ಸ್ವರೂಪವನ್ನೂ ಲೇಖಕರು ವಿವರಿಸುತ್ತಾರೆ. ಕೃತಿ ಆಚೆಯೂ ಹಲವು ವಿಷಯಗಳನ್ನು ಪರಿಶೀಲಿಸಿ ವಿಶ್ಲೇಸುವುದು ವೆಂಕಣ್ಣಯ್ಯನವರಲ್ಲಿ ಕಾಣುತ್ತದೆ.

ವೆಂಕಣ್ಣಯ್ಯನವರು ಪ್ರಾಚೀನ ಕನ್ನಡ ಕಾವ್ಯಗಳನ್ನು ಸಂಗ್ರಹ ರೂಪದಲ್ಲಿ ಪ್ರಕಟಿಸಿದ್ದಾರೆ. ರವೀಂದ್ರನಾಥ ಠಾಕೂರರು ಸಾಹಿತ್ಯ ವಿಷಯವಾಗಿ ಬರೆದ ಅನೇಕ ಪ್ರಬಂಧಗಳನ್ನು ಕನ್ನಡಿಸಿ 'ಪ್ರಬುದ್ಧ ಕರ್ಣಾಟಕ' ದಲ್ಲಿ ಪ್ರಕಟಿಸಿದರು. ಅದರೊಂದಿಗೆ ಸಾಹಿತ್ಯ ಪರಿಷತ್ಪತ್ರಿಕೆಗೆ ಕನ್ನಡ ಸಾಹಿತ್ಯ ಚರಿತ್ರೆಯ ಮೇಲೆ ಕೆಲವು ಲೇಖನಗಳನ್ನು ಬರೆದರು. 'ಕನ್ನಡ ಕೈಪಿಡಿಗೆ' ಹಳಗನ್ನಡ ವ್ಯಾಕರಣದ ಮತ್ತು ಭಾಷಾಚರಿತ್ರೆಯ ಭಾಗವನ್ನು ಬರೆದಿದ್ದಾರೆ.

ವೆಂಕಣ್ಣಯ್ಯನವರು ದೈಹಿಕವಾಗಿ ಹಾಗೂ ವ್ಯಕ್ತಿತ್ವದ ಪರವಾಗಿ 'ಎತ್ತರದ ವ್ಯಕ್ತಿ'ಯಾಗಿದ್ದರು. ಅಲ್ಲದೆ ಅವರನ್ನು 'ಗುರುಗಳ ಗುರು' ಎಂದು ಹೇಳಬಹುದು. ಕನ್ನಡ ಪಂಡಿತ ಪರಂಪರೆಯಲ್ಲಿ ದೊಡ್ಡ ಹೆಸರುಗಳಾದ ಡಿ.ಎಲ್. ನರಸಿಂಹಾಚಾರ್, ಎಂ.ವಿ. ಸೀತಾರಾಮಯ್ಯ, ಕೆ. ವೆಂಕಟರಾಮಪ್ಪ ಮೊದಲಾದ ಅನೇಕ ಜನರಿಗೆ ಸ್ಫೂರ್ತಿಯ ಸೆಲೆಯಾಗಿದ್ದು ಮುಂದಿನ ತಲೆಮಾರಿನಲ್ಲಿ ಟಿ.ವಿ. ವೆಂಕಟಾಚಲ ಶಾಸ್ತ್ರಿಯಂತಹ ಪ್ರಶಿಷ್ಯರು ತಯಾರಾಗಲು ಕಾರಣಕರ್ತರಾದರು. ಕುವೆಂಪು ಅವರು 'ಶ್ರೀ ರಾಮಾಯಣದರ್ಶನಂ' ಕೃತಿಯನ್ನು ತಮ್ಮ 'ಪ್ರಿಯಗುರು'ಗಳಾದ ವೆಂಕಣ್ಣಯ್ಯನವರಿಗೆ ಸಮರ್ಪಿಸಿದ್ದಾರೆ. ತಳುಕಿನ ವೆಂಕಣ್ಣಯ್ಯನವರು ಇನ್ನೂ ಹೆಚ್ಚಿನ ಕಾಲ ಬದುಕಿದ್ದರೆ ಅವರ ಸಾಹಿತ್ಯ ಸೇವೆ ಮತ್ತಷ್ಟು ವಿಸ್ತಾರವಾಗಿರುತ್ತಿತ್ತು. ವೆಂಕಣ್ಣಯ್ಯನವರು ೧೪, ಫೆಬ್ರವರಿ ೧೯೩೯ರಂದು ನಿಧನರಾದರು.

❐ ❐ ❐

ಎ. ವೆಂಕಟಸುಬ್ಬಯ್ಯ

(೧೮೮೬–೧೯೬೯)

ಪವಿತ್ರ ಬಿ.

೧೯ನೆಯ ಶತಮಾನದ ಅಂತ್ಯ ಮತ್ತು ೨೦ನೆಯ ಶತಮಾನದ ಆರಂಭದ ಕಾಲಘಟ್ಟವು ಮೈಸೂರು ಸಂಸ್ಥಾನದ ಇತಿಹಾಸದಲ್ಲಿ ಒಂದು ಸುವರ್ಣ ಯುಗವೆಂದು ಪರಿಗಣಿಸಲ್ಪಟ್ಟಿದೆ. ಈ ಅವಧಿಯು ಕೇವಲ ರಾಜಕೀಯ ಸ್ಥಿರತೆಯ ಕಾಲವಲ್ಲ, ಬದಲಾಗಿ ಶಿಕ್ಷಣ, ಸಂಶೋಧನೆ ಮತ್ತು ಸಾಂಸ್ಕೃತಿಕ ಪುನರುಜ್ಜೀವನದ ಕಾಲವೂ ಹೌದು. ಈ ಸಂದರ್ಭದಲ್ಲಿದ್ದ ಅನೇಕ ವಿದ್ವಾಂಸರಲ್ಲಿ ಅಂಬಳೆ ವೆಂಕಟಸುಬ್ಬಯ್ಯ ನವರು ಅತ್ಯಂತ ವಿಶಿಷ್ಟವಾದ ಮತ್ತು ಪ್ರಭಾವಶಾಲಿಯಾದ ಬೌದ್ಧಿಕ ವ್ಯಕ್ತಿತ್ವವನ್ನು ಹೊಂದಿದ್ದಾರೆ. ಅವರ ಜೀವನ ಮತ್ತು ಕಾರ್ಯಗಳನ್ನು ವಿಶ್ಲೇಷಿಸುವುದು ಎಂದರೆ ಕೇವಲ ಒಬ್ಬ ವ್ಯಕ್ತಿಯ ಸಾಧನೆಯನ್ನು ಪರಾಮರ್ಶಿಸುವುದಲ್ಲ, ಬದಲಾಗಿ ಆ ಕಾಲದ ಮೈಸೂರಿನ ಬೌದ್ಧಿಕ ಚರಿತ್ರೆಯನ್ನು ಸಂಶೋಧನಾ ಕ್ರಮಗಳೊಂದಿಗೆ ಹೇಗೆ ಸಂಯೋಜಿತವಾಯಿತು ಎಂಬುದನ್ನು ಅರ್ಥಮಾಡಿ ಕೊಳ್ಳುವುದಾಗಿದೆ.

ವೆಂಕಟಸುಬ್ಬಯ್ಯನವರು ೧೮೮೬ರ ಮೇ ೨೬ರಂದು ಜನಿಸಿದರು. ಅವರಪೂರ್ವಿಕರು ಮೂಲತಃ ತಮಿಳುನಾಡಿನಿಂದ ಸತ್ಯಮಂಗಲಂ ಮಾರ್ಗವಾಗಿ ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲ್ಲೂಕಿನ ಅಂಬಳೆ ಎಂಬ ಗ್ರಾಮಕ್ಕೆ ವಲಸೆ ಬಂದು ಅಲ್ಲಿಯೇ ನೆಲಸಿದರು. ಅವರ ಕುಟುಂಬದ ವಂಶಾವಳಿಯು ಪಾಂಡಿತ್ಯದ ಪರಂಪರೆಯನ್ನು ಹೊಂದಿದೆ. ಅವರ ಪ್ರಪಿತಾಮಹರು ವೇದಾಂತಂ ಎಂಬುವರು, ಪಿತಾಮಹರು ವೆಂಕಟರಮಣಭಟ್ಟರು ಮತ್ತು ತಂದೆ ಅಂಬಳೆ ವೆಂಕಟೇಶಯ್ಯನವರು. ಪಿತಾಮಹ ವೆಂಕಟರಮಣಭಟ್ಟರು ವೇದಶಾಸ್ತ್ರಗಳಲ್ಲಿ ಪರಿಣತರಾಗಿದ್ದು, ಅರ್ಚಕ ವೃತ್ತಿಯ ಜೊತೆಗೆ ಕೃಷಿಯನ್ನೂ ನಿರ್ವಹಿಸುತ್ತಿದ್ದರು. ಚಾಮರಾಜನಗರದಲ್ಲಿ ಮನೆ ಮತ್ತು ತೋಟಗಳನ್ನು ಹೊಂದಿದ್ದ ಇವರು ಆ ಕಾಲಕ್ಕೆ ಆರ್ಥಿಕವಾಗಿ ಸುಸ್ಥಿತಿಯಲ್ಲಿದ್ದರು. ಧಾರ್ಮಿಕ ಮತ್ತು ಆರ್ಥಿಕ ಸ್ಥಿರತೆಯು ವೆಂಕಟಸುಬ್ಬಯ್ಯನವರ ಬಾಲ್ಯದಲ್ಲಿ ಶಿಸ್ತುಬದ್ಧ ವಿದ್ಯಾಭ್ಯಾಸಕ್ಕೆ ಭದ್ರ ಬುನಾದಿಯನ್ನು

ಒದಗಿಸಿತು. ಅವರ ತಂದೆಯಾದ ಅಂಬಳೆ ವೆಂಕಟೇಶಯ್ಯನವರು (೧೮೬೬–೧೯೪೬) ತಮ್ಮ ಕಾಲದ ಅತ್ಯಂತ ಪ್ರಬುದ್ಧ ಶಿಕ್ಷಕರಾಗಿದ್ದರು. ಇವರು ಮೈಸೂರು ಮಹಾರಾಜ ಕಾಲೇಜಿನಲ್ಲಿ ವಿಜ್ಞಾನದ ಉಪಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ೧೯೨೧ರಲ್ಲಿ ನಿವೃತ್ತರಾದರು. ತಂದೆಯ ಈ ಶೈಕ್ಷಣಿಕ ಶಿಸ್ತು ಮತ್ತು ಬೌದ್ಧಿಕ ತಾರ್ಕಿಕತೆಯು ವೆಂಕಟಸುಬ್ಬಯ್ಯನವರ ವ್ಯಕ್ತಿತ್ವದ ಮೇಲೆ ಗಾಢವಾದ ಪ್ರಭಾವ ಬೀರಿದೆ.

ವೆಂಕಟಸುಬ್ಬಯ್ಯನವರ ಶಿಕ್ಷಣವು ಮೈಸೂರು ನಗರದ ಶೈಕ್ಷಣಿಕ ವಾತಾವರಣದಲ್ಲಿ ಆರಂಭವಾಯಿತು. ಮಹಾರಾಜ ಕಾಲೇಜಿನ ಮೂಲಕ ೧೯೦೭ರಲ್ಲಿ ಬಿ.ಎ. ಪದವಿ ಪಡೆದ ಬಳಿಕ, ಅವರ ಜ್ಞಾನದ ಹಸಿವು ಅವರನ್ನು ಉನ್ನತ ಶಿಕ್ಷಣದತ್ತ ಸೆಳೆಯಿತು. ಅವರು ಮದರಾಸು ವಿಶ್ವವಿದ್ಯಾಲಯದಿಂದ ಸಂಸ್ಕೃತದಲ್ಲಿ ಎಂ.ಎ. ಪದವಿಯನ್ನು ಮತ್ತು ಮುಂಬಯಿ ವಿಶ್ವವಿದ್ಯಾಲಯದಿಂದ ಎಲ್.ಎಲ್.ಬಿ. ಪದವಿಯನ್ನು ಪಡೆದರು. ಈ ಮೂಲಕ ಅವರು ಸಾಹಿತ್ಯ ಮತ್ತು ಕಾನೂನು ಎರಡೂ ಕ್ಷೇತ್ರಗಳಲ್ಲಿ ಪರಿಣತಿಯನ್ನು ಹೊಂದಿದ್ದರು.

ಅವರ ಜೀವನದ ಅತ್ಯಂತ ಮಹತ್ತ್ವದ ತಿರುವು ಎಂದರೆ ಉನ್ನತ ವ್ಯಾಸಂಗಕ್ಕಾಗಿ ಜರ್ಮನಿಗೆ ತೆರಳಿದ್ದು. ೨೦ನೆಯ ಶತಮಾನದ ಆರಂಭದಲ್ಲಿ ಒಬ್ಬ ಭಾರತೀಯ ವಿದ್ವಾಂಸನು ವಿದೇಶಕ್ಕೆ ಹೋಗಿ ಸಂಶೋಧನೆ ಮಾಡುವುದು ಸುಲಭದ ಮಾತಾಗಿರಲಿಲ್ಲ. ಅವರು ಎರಡು ವರ್ಷಗಳ ಫೆಲೋಷಿಪ್ ಪಡೆದು ಜರ್ಮನಿಗೆ ತೆರಳಿ, ಪ್ರೊಫೆಸರ್ ಮುಲ್ಲರ್ ಹೆಸ್ ಅವರ ಮಾರ್ಗದರ್ಶನದಲ್ಲಿ ಸಂಶೋಧನೆಯನ್ನು ಆರಂಭಿಸಿದರು. ಕೇವಲ ಆರು ತಿಂಗಳ ಅಲ್ಪಾವಧಿಯಲ್ಲಿಯೇ ಅವರು ಸ್ವಿಟ್ಜರ್‌ಲೆಂಡಿನ ಬರ್ನ್ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿಯನ್ನು ಪಡೆದರು. ಅವರ ಸಂಶೋಧನ ಪ್ರಬಂಧವಾದ 'The Kalas' (ಕಲೆಗಳು) ೧೯೧೧ರಲ್ಲಿ ಪ್ರಕಟವಾಯಿತು.

ವಿದೇಶದಲ್ಲಿದ್ದಾಗ ಅವರು ಎದುರಿಸಿದ ಆಹಾರದ ಸಮಸ್ಯೆಗಳು, ಅವರ ಸಂಸ್ಕಾರದ ಗಟ್ಟಿತನವನ್ನು ತೋರಿಸುತ್ತವೆ. ಕಟ್ಟುನಿಟ್ಟಿನ ಶಾಕಾಹಾರಿಯಾಗಿದ್ದ ಅವರು ಅಲ್ಲಿಯ ಬ್ರೆಡ್ ಸಹ ಮುಟ್ಟದೆ ಕೇವಲ ಹಾಲು, ಹಣ್ಣು ಮತ್ತು ಬಾದಾಮಿಯಂತಹ ಬೀಜಪದಾರ್ಥಗಳನ್ನೇ ಸೇವಿಸಿ ದೈಹಿಕವಾಗಿ ಕೃಶರಾದರು. ಈ ಕಾರಣದಿಂದಲೇ

ಅವರು ನಿಗದಿತ ಅವಧಿಗಿಂತ ಮೊದಲೇ ಸಂಶೋಧನೆಯನ್ನು ಮುಗಿಸಿ ಭಾರತಕ್ಕೆ ಮರಳಿದರು. ಇದು ಅವರ ಅಪ್ರತಿಮ ಬೌದ್ಧಿಕ ಸಾಮರ್ಥ್ಯ ಮತ್ತು ಸಂಕಲ್ಪಶಕ್ತಿಗೆ ಸಾಕ್ಷಿಯಾಗಿದೆ.

ಭಾರತಕ್ಕೆ ಮರಳಿದ ತರುವಾಯ ವೆಂಕಟಸುಬ್ಬಯ್ಯನವರು ತಮ್ಮ ಸ್ವತಂತ್ರ ಪ್ರವೃತ್ತಿ ಮತ್ತು ಪಾಂಡಿತ್ಯದ ಕಾರಣದಿಂದಾಗಿ ಅನೇಕ ಸಾಂಸ್ಥಿಕ ಸಂಘರ್ಷಗಳನ್ನು ಎದುರಿಸಬೇಕಾಯಿತು. ಅವರು ಯಾವುದೇ ಉದ್ಯೋಗದಲ್ಲೂ ದೀರ್ಘಕಾಲ ಇರಲು ಸಾಧ್ಯವಾಗಲಿಲ್ಲ. ಇದಕ್ಕೆ ಮುಖ್ಯ ಕಾರಣ ಅವರ ಬೌದ್ಧಿಕ ಸ್ವಾತಂತ್ರ್ಯ ಮತ್ತು ನಿಷ್ಠುರ ಮನೋಭಾವ. ಆರಂಭದಲ್ಲಿ ಕಾಶಿಯಲ್ಲಿ ಇತಿಹಾಸ ಬೋಧಿಸಲು ಅವರು ನೇಮಕವಾದರು. ಆದರೆ ಸಂಸ್ಕೃತದಲ್ಲಿ ಪರಿಣತಿಯನ್ನು ಹೊಂದಿರುವುದರಿಂದ ಸಂಸ್ಕೃತವನ್ನೇ ಬೋಧಿಸುವುದಾಗಿ ಹಠ ಹಿಡಿದರು. ಆಡಳಿತ ಮಂಡಳಿಯೊಂದಿಗೆ ಉಂಟಾದ ಭಿನ್ನಾಭಿಪ್ರಾಯದ ಕಾರಣ ರಾಜೀನಾಮೆ ನೀಡಿ ಮೈಸೂರಿಗೆ ಬಂದರು. ೧೯೧೫–೧೬ರ ಸುಮಾರಿಗೆ ಬೆಂಗಳೂರಿನ ಪುರಾತತ್ತ್ವ ಇಲಾಖೆಯಲ್ಲಿ ಸಹಾಯಕ ನಿರ್ದೇಶಕರಾಗಿ ಸೇರಿದರು. ಆ ಸಂದರ್ಭದಲ್ಲಿ ಆರ್. ನರಸಿಂಹಾಚಾರ್ಯರು ನಿರ್ದೇಶಕರಾಗಿದ್ದರು. ಅಲ್ಲಿಯೂ ಅಯ್ಯನವರು ತಮ್ಮ ಮೇಲಧಿಕಾರಿಯವರ ಕೆಲವು ಅಭಿಪ್ರಾಯಗಳನ್ನು ಸಾರ್ವಜನಿಕವಾಗಿ ಖಂಡಿಸಿದರು, ಇದು ಇಲಾಖೆಯ ಶಿಸ್ತಿಗೆ ಧಕ್ಕೆ ಎಂದು ಪರಿಗಣಿಸಲಾಯಿತು. ಒಮ್ಮೆ ದಿವಾನರಾಗಿದ್ದ ಸರ್ ಎಂ. ವಿಶ್ವೇಶ್ವರಯ್ಯನವರು ವೆಂಕಟಸುಬ್ಬಯ್ಯನವರ ಪಾಂಡಿತ್ಯವನ್ನು ಮೆಚ್ಚಿ ವಿಶೇಷ ಬಡ್ತಿಯನ್ನು ಮಂಜೂರು ಮಾಡಿದರು. ಆದರೆ ಅವರು 'ದಿವಾನರು ನನ್ನನ್ನು ಕಾಸಿಗೆ ಕೊಂಡುಕೊಳ್ಳಲು ನೋಡುತ್ತಿದ್ದಾರೆ' ಎಂದು ಭಾವಿಸಿ ತಕ್ಷಣವೇ ರಾಜೀನಾಮೆ ನೀಡಿದರು.

ಈ ಘಟನೆಗಳು ವೆಂಕಟಸುಬ್ಬಯ್ಯನವರು ಹಣ ಅಥವಾ ಅಧಿಕಾರಕ್ಕಿಂತ ಹೆಚ್ಚಾಗಿ ತಮ್ಮ ಬೌದ್ಧಿಕ ಗೌರವಕ್ಕೆ ಪ್ರಾಮುಖ್ಯ ನೀಡುತ್ತಿದ್ದರು ಎಂಬುದನ್ನು ತೋರಿಸುತ್ತವೆ. ೧೯೨೨ರ ಅನಂತರ ಅವರು ಯಾವುದೇ ಉದ್ಯೋಗವನ್ನು ಹುಡುಕದೆ ಪೂರ್ಣಕಾಲದ ಸಂಶೋಧನೆಯಲ್ಲಿ ತೊಡಗಿಸಿಕೊಂಡರು.

ಎ. ವೆಂಕಟಸುಬ್ಬಯ್ಯನವರ ಸಂಶೋಧನ ವ್ಯಾಪ್ತಿಯು ವಿಸ್ತಾರವಾದುದು. ಅವರು ವೇದಗಳು, ಪಂಚತಂತ್ರ, ಕರ್ನಾಟಕದ ಇತಿಹಾಸ, ಸಾಹಿತ್ಯ ಮತ್ತು

ಖಗೋಳಶಾಸ್ತ್ರಗಳಲ್ಲಿ ಆಳವಾದ ಪರಿಶ್ರಮವನ್ನು ಹೊಂದಿದ್ದರು. ಅವರ ಲೇಖನಗಳು ಕೇವಲ ಭಾರತೀಯ ಪತ್ರಿಕೆಗಳಲ್ಲಿ ಮಾತ್ರವಲ್ಲದೆ ಜರ್ಮನಿ, ಇಂಗ್ಲೆಂಡ್‌ನಂತಹ ವಿದೇಶಿ ವಿದ್ವತ್ ಪತ್ರಿಕೆಗಳಲ್ಲೂ ಪ್ರಕಟವಾಗುತ್ತಿದ್ದುವು.

ಇವರ ಪ್ರಮುಖ ಕೊಡುಗೆ ಎಂದರೆ ವೇದಗಳ ಅರ್ಥವಿಶ್ಲೇಷಣೆ. ಅವರು ವೇದದ ನಿಗೂಢ ಪದಗಳನ್ನು ಬಿಡಿಸಲು ನಿರುಕ್ತ ಮತ್ತು ವ್ಯಾಕರಣದ ಮೊರೆಹೊಕ್ಕರು. ಸಾಯಣಾಚಾರ್ಯರಂತಹ ಸಾಂಪ್ರದಾಯಿಕ ವ್ಯಾಖ್ಯಾನಕಾರರಿಗಿಂತ ಭಿನ್ನವಾಗಿ, ಅವರು ಭಾಷಾಶಾಸ್ತ್ರದ ಆಧಾರದ ಮೇಲೆ ವೈಜ್ಞಾನಿಕವಾಗಿ ಪದಗಳ ಅರ್ಥವನ್ನು ಶೋಧಿಸಿದರು. ನಿತ್ಯ ಎಂಬ ಪದ ವೇದಗಳಲ್ಲಿ ಸುಮಾರು ೩೮ ಬಾರಿ ಬಂದಿದೆ. ಸಾಂಪ್ರದಾಯಿಕವಾಗಿ ಇದನ್ನು 'ಶಾಶ್ವತ' ಅಥವಾ 'ತನ್ನದಾದ' ಎಂಬ ಅರ್ಥದಲ್ಲಿ ಬಳಸಲಾಗಿದೆ. ಆದರೆ ವೆಂಕಟಸುಬ್ಬಯ್ಯನವರು ಪದದ ಮೂಲ ಧಾತು ಮತ್ತು ವಿವಿಧ ಸಂದರ್ಭಗಳನ್ನು ಆಧರಿಸಿ ಅದರ ನೈಜ ಅರ್ಥವನ್ನು ವಿವರಿಸಿದರು. ಅವರ 'Vedic Studies' ನ ಎರಡು ಸಂಪುಟಗಳು ವೇದ ಸಂಶೋಧನ ಕ್ಷೇತ್ರದಲ್ಲಿ ಇಂದಿಗೂ ಅತ್ಯಮೂಲ್ಯ ಆಕರ ಗ್ರಂಥಗಳಾಗಿವೆ.

ಪಂಚತಂತ್ರ ಸಾಹಿತ್ಯದ ಮೇಲೆ ಇವರು ನಡೆಸಿದ ಸಂಶೋಧನೆಯು ಅಂತಾರಾಷ್ಟ್ರೀಯ ಮಟ್ಟದ ಮನ್ನಣೆಯನ್ನು ಗಳಿಸಿದೆ. ಅವರು ಜಗತ್ತಿನ ವಿವಿಧ ಭಾಗಗಳಲ್ಲಿರುವ ಪಂಚತಂತ್ರದ ವಿವಿಧ ಆವೃತ್ತಿಗಳನ್ನು ತುಲನಾತ್ಮಕವಾಗಿ ಅಧ್ಯಯನ ಮಾಡಿದರು. ದುರ್ಗಸಿಂಹನ ಪಂಚತಂತ್ರದ ಕುರಿತಾದ ಅವರ ಲೇಖನವು ಜರ್ಮನ್ ಭಾಷೆಯಲ್ಲಿ ಪ್ರಕಟವಾಗಿತ್ತು. ಫ್ರಾಂಕ್ಲಿನ್ ಎಡ್ಗರ್ಟನ್ ಅವರಂತಹ ಪಾಶ್ಚಾತ್ಯ ವಿದ್ವಾಂಸರು ಅವರ ಪಾಂಡಿತ್ಯವನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.

ಕರ್ನಾಟಕದ ಇತಿಹಾಸ ಮತ್ತು ಶಾಸನಗಳ ಕಾಲನಿರ್ಣಯದಲ್ಲಿ ವೆಂಕಟಸುಬ್ಬಯ್ಯನವರ ಕೊಡುಗೆ ಅಪಾರ. ಅವರು ಖಗೋಳಶಾಸ್ತ್ರದ ಗಣಿತದ ಮೂಲಕ ಶಾಸನಗಳಲ್ಲಿಯ ಕಾಲವನ್ನು ನಿಖರವಾಗಿ ಗುರುತಿಸುವ ವಿಧಾನವನ್ನು ರೂಪಿಸಿದರು. 'Some Saka Dates in Inscriptions' ಎಂಬ ಅವರ ಕೃತಿಯು ಭಾರತೀಯ ಇತಿಹಾಸದ ಕಾಲಗಣನೆಗೆ ಒಂದು ಮಹತ್ತ್ವದ ಕೊಡುಗೆಯಾಗಿದೆ.

ವೆಂಕಟಸುಬ್ಬಯ್ಯನವರ ಕುಟುಂಬದಲ್ಲಿ ಥಿಯಾಸಫಿ (ಬ್ರಹ್ಮವಿದ್ಯಾ) ಪಂಥದ ಪ್ರಭಾವ ಹೆಚ್ಚಾಗಿತ್ತು. ಅವರ ತಂದೆ ವೆಂಕಟೇಶಯ್ಯನವರು ಈ ಪಂಥದ

ತತ್ತ್ವಗಳನ್ನು ಪ್ರಸಾರ ಮಾಡಲು ಬಹಳ ಶ್ರಮಿಸಿದರು. ಮೈಸೂರಿನಲ್ಲಿ 'ದಿವ್ಯಜ್ಯೋತಿ' ಎಂಬ ಪತ್ರಿಕೆಯನ್ನು ನಡೆಸಿ, ಥಿಯಾಸಫಿಯ ಅನೇಕ ಇಂಗ್ಲಿಷ್ ಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಿದರು. ಈ ಪರಿಸರವು ವೆಂಕಟಸುಬ್ಬಯ್ಯನವರಲ್ಲಿ ವಿಶಾಲವಾದ ಆಧ್ಯಾತ್ಮಿಕ ದೃಷ್ಟಿಕೋನವನ್ನು ಬೆಳೆಸಿತು.

ವೆಂಕಟಸುಬ್ಬಯ್ಯನವರೂ ಸಹ ಮಹರ್ಷಿ ಅರವಿಂದರ 'Essays on the Gita' ಮೊದಲಾದ ಗಂಭೀರ ದಾರ್ಶನಿಕ ಗ್ರಂಥಗಳ ಅನುವಾದದಲ್ಲಿ ತೊಡಗಿಸಿಕೊಂಡಿದ್ದರು. ಅವರ ಅನುವಾದವು ಕೇವಲ ಶಬ್ದಾನುವಾದವಾಗಿರದೆ, ಮೂಲ ದಾರ್ಶನಿಕ ಸತ್ತ್ವವನ್ನು ಕನ್ನಡದ ಓದುಗರಿಗೆ ಮುಟ್ಟಿಸುವ ಪ್ರಯತ್ನವಾಗಿತ್ತು. ಈ ಕಾರ್ಯವು ಕನ್ನಡ ಭಾಷೆಯಲ್ಲಿ ಬೌದ್ಧಿಕ ಚರ್ಚೆಗಳನ್ನು ವಿಸ್ತರಿಸಲು ಸಹಕಾರಿಯಾಯಿತು.

ವೆಂಕಟಸುಬ್ಬಯ್ಯನವರ ಜೀವನವು ಕೇವಲ ಬೌದ್ಧಿಕ ಸಾಧನೆಗಳ ಕಥೆಯಲ್ಲ, ಅದು ಸಂಪ್ರದಾಯದ ವಿರುದ್ಧದ ಹೋರಾಟವೂ ಹೌದು. ಅವರು ಸಮುದ್ರ ಪ್ರಯಾಣ ಮಾಡಿ ವಿದೇಶಕ್ಕೆ ಹೋದ ಕಾರಣಕ್ಕಾಗಿ ಅಂದಿನ ಮೈಸೂರು–ನಂಜನಗೂಡು ಕರ್ಮಠ ಬ್ರಾಹ್ಮಣ ಸಮುದಾಯವು ಅವರ ಕುಟುಂಬಕ್ಕೆ ಸಾಮಾಜಿಕ ಬಹಿಷ್ಕಾರವನ್ನು ಹಾಕಿತು. ಈ ಬಹಿಷ್ಕಾರವು ಎಷ್ಟು ತೀವ್ರವಾಗಿತ್ತೆಂದರೆ, ಅವರ ಆಪ್ತ ಬಂಧುಗಳೇ ಅವರಿಂದ ದೂರ ಸರಿದರು. ಮನೆಯಲ್ಲಿ ನಡೆಯುವ ವೈದಿಕ ಕಾರ್ಯಗಳಿಗೆ ಶ್ರೀರಂಗಪಟ್ಟಣದಿಂದ ಪುರೋಹಿತರನ್ನು ಕರೆಸಬೇಕಾದ ಅನಿವಾರ್ಯತೆ ಇತ್ತು. ಆದರೆ ವೆಂಕಟಸುಬ್ಬಯ್ಯನವರ ತಂದೆ ಮತ್ತು ಕುಟುಂಬದವರು ಈ ಎಲ್ಲವನ್ನೂ ಧೈರ್ಯದಿಂದ ಎದುರಿಸಿದರು.

ವೆಂಕಟಸುಬ್ಬಯ್ಯನವರ ವೈಯಕ್ತಿಕ ಜೀವನವು ಸರಳವಾಗಿದ್ದರೂ ನೋವಿನಿಂದ ಕೂಡಿತ್ತು. ಅವರಿಗೆ ಮದುವೆಯಾಗಲು ಇಷ್ಟವಿರಲಿಲ್ಲ, ಆದರೆ ಹಿರಿಯರ ಒತ್ತಾಯದಿಂದ ೧೬ನೇ ವಯಸ್ಸಿನಲ್ಲಿ ವಿವಾಹವಾದರು. ದುರದೃಷ್ಟವಶಾತ್, ಮದುವೆಯಾದ ಒಂದು ವರ್ಷದೊಳಗೇ ಅವರ ಪತ್ನಿ ತೀರಿಕೊಂಡರು. ಅನಂತರ ಅವರು ಪುನಃ ಮದುವೆಯಾಗಲು ನಿರಾಕರಿಸಿ ಆಜೀವ ಬ್ರಹ್ಮಚಾರಿಯಾಗಿ ಉಳಿದರು. ಅವರ ಈ ನಿರ್ಧಾರವು ಅವರ ಬೌದ್ಧಿಕ ಜೀವನಕ್ಕೆ ಪೂರಕವಾಯಿತು, ತಮ್ಮ ಜೀವನದ ಪ್ರತಿಯೊಂದು ಕ್ಷಣವನ್ನೂ ಅವರು ಸಂಶೋಧನೆಗಾಗಿಯೇ ಮೀಸಲಿಟ್ಟರು. ಅವರುತಮ್ಮ ಸಮಯದ ಬಹುಭಾಗವನ್ನು

ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿ ಅಥವಾ ಮಹಾರಾಜ ಕಾಲೇಜಿನ ಗ್ರಂಥಾಲಯದಲ್ಲಿ ಕಳೆಯುತ್ತಿದ್ದರು. ಎಲ್ಲಿಗೆ ಹೋಗಬೇಕಾದರೂ ಕಾಲುನಡಿಗೆಯಲ್ಲೇ ಹೋಗುವುದು ಅವರ ಅಭ್ಯಾಸವಾಗಿತ್ತು. ಸಂಸ್ಕೃತ ಮತ್ತು ರೋಮನ್ ಲಿಪಿಗಳನ್ನು ಹೊಂದಿದ್ದ ವಿಶೇಷ 'ಹ್ಯಾಮಂಡ್' ಟೈಪ್‌ರೈಟರ್ ಬಳಸಿ ತಾವೇ ತಮ್ಮ ಸಂಶೋಧನಾ ಪ್ರಬಂಧಗಳನ್ನು ಸಿದ್ಧಪಡಿಸಿದರು.

ಚದುರಂಗದ ಆಟದಲ್ಲಿ ಅವರಿಗೆ ಹೆಚ್ಚಿನ ಆಸಕ್ತಿ ಇತ್ತು. ಒಮ್ಮೆ ರಾಜಾರಾವ್ ಎಂಬ ಪ್ರಸಿದ್ಧ ಚದುರಂಗ ಆಟಗಾರನೊಂದಿಗೆ ಸತತ ಎರಡು ದಿನಗಳ ಕಾಲ ಆಟವಾಡಿ ಅವನನ್ನು ದಣಿಸಿದ ಪ್ರಸಂಗವು ಅವರ ಏಕಾಗ್ರತೆ ಮತ್ತು ದೃಢತೆಗೆ ಸಾಕ್ಷಿಯಾಗಿದೆ. ವೆಂಕಟಸುಬ್ಬಯ್ಯನವರು ಯಾವುದೇ ಅಧಿಕೃತ ಹುದ್ದೆಯಲ್ಲಿ ಇರದಿದ್ದರೂ ಅವರ ಪಾಂಡಿತ್ಯವನ್ನು ಅರಸಿ ಅನೇಕ ಗಣ್ಯರು ಬರುತ್ತಿದ್ದರು. ಎ.ಎನ್. ನರಸಿಂಹಯ್ಯ ಮತ್ತು ಎಂ. ಲಕ್ಷ್ಮೀನರಸಿಂಹಯ್ಯನಂತಹ ಪ್ರಖ್ಯಾತ ಪ್ರಾಧ್ಯಾಪಕರು ಅವರ ಮಾರ್ಗದರ್ಶನವನ್ನು ಪಡೆಯುತ್ತಿದ್ದರು. ಜರ್ಮನಿಯ ವಿದ್ವಾಂಸರಾದ ಎಚ್. ಲ್ಯೂಡರ್ಸ್ ಅವರಂತಹ ವಿದೇಶಿ ಸಂಶೋಧಕರು ಭಾರತಕ್ಕೆ ಬಂದಾಗ ವೆಂಕಟಸುಬ್ಬಯ್ಯನವರನ್ನು ಭೇಟಿ ಮಾಡಲು ಉತ್ಸುಕರಾಗಿರುತ್ತಿದ್ದರಂತೆ.

ಇವರ ಸಂಶೋಧನೆಯು ಕೆಲವು ಪ್ರಮುಖ ಲಕ್ಷಣಗಳನ್ನು ಹೊಂದಿದೆ: ೧. ಪದನಿಷ್ಪತ್ತಿಗೆ ಒತ್ತು: ಅವರು ಸಾಮಾಜಿಕ ಅಥವಾ ಐತಿಹಾಸಿಕ ಹಿನ್ನೆಲೆಗಿಂತ ಹೆಚ್ಚಾಗಿ ಪದಗಳ ಭಾಷಾಶಾಸ್ತ್ರದ ನೆಲೆಗಟ್ಟಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿದರು. ೨. ತುಲನಾತ್ಮಕ ಅಧ್ಯಯನ: ಜೈನೇತರ ಮತ್ತು ಬೌದ್ಧ ಸಾಹಿತ್ಯದ ಜೊತೆಗೆ ವೈದಿಕ ಸಾಹಿತ್ಯವನ್ನು ಹೋಲಿಸಿ ನೋಡುವ ಗುಣ ಅವರಲ್ಲಿತ್ತು. ೩. ನಿಷ್ಠುರ ವಿಮರ್ಶೆ: ಸತ್ಯದ ಅನ್ವೇಷಣೆಯಲ್ಲಿ ಅವರು ಯಾರನ್ನೂ ಬಿಡುತ್ತಿರಲಿಲ್ಲ. ತಮ್ಮ ಗುರುವಾದ ನರಸಿಂಹಾಚಾರ್ಯರ ಬಗ್ಗೆಯೂ ತೀವ್ರ ವಿಮರ್ಶಾತ್ಮಕ ಲೇಖನಗಳನ್ನು ಬರೆದರು.

ಅವರ 'The Kalas' ಸಂಶೋಧನೆಯು ಭಾರತೀಯ ಕಲೆಗಳ ಪಟ್ಟಿಯನ್ನು ಕೇವಲ ಹೆಸರಿಸುವುದಲ್ಲದೆ, ಅವುಗಳ ನಡುವಿನ ವ್ಯತ್ಯಾಸಗಳನ್ನು ಶಾಸ್ತ್ರೀಯವಾಗಿ ದಾಖಲಿಸಿದೆ. ಉದಾಹರಣೆಗೆ, ಲಲಿತವಿಸ್ತರದಲ್ಲಿರುವ 'ಕರ್ಮ–ಕಲೆಗಳು' ಮತ್ತು ಕಾಮಸೂತ್ರದಲ್ಲಿರುವ 'ಕಾಮ–ಕಲೆಗಳ' ನಡುವಿನ ವ್ಯತ್ಯಾಸವನ್ನು ಅವರು ಸ್ಪಷ್ಟಪಡಿಸಿದ್ದಾರೆ.

ವೆಂಕಟಸುಬ್ಬಯ್ಯನವರ ಜೀವನ ಮತ್ತು ಕಾರ್ಯಗಳು ಮೈಸೂರಿನ ಬೌದ್ಧಿಕ ಇತಿಹಾಸದ ಒಂದು ಅವಿಭಾಜ್ಯ ಅಂಗವಾಗಿದೆ. ಅವರು ಕೇವಲ ಒಬ್ಬ ಪಂಡಿತರಾಗಿರಲಿಲ್ಲ, ಬದಲಾಗಿ ಅನ್ವೇಷಣಾ ಮನೋಭಾವದ ಸಂಶೋಧಕ ರಾಗಿದ್ದರು. ತಮ್ಮ ಇಡೀ ಜೀವನವನ್ನು ಜ್ಞಾನದ ತಪಸ್ಸಿಗಾಗಿ ಮೀಸಲಿಟ್ಟ ಅವರು, ಇಂದಿನ ತಲೆಮಾರಿನ ಸಂಶೋಧಕರಿಗೆ ದೊಡ್ಡ ಮಾರ್ಗದರ್ಶಕರು. ಅವರು ಹಾಕಿಕೊಟ್ಟ ಭಾಷಾಶಾಸ್ತ್ರದ ಮತ್ತು ಶಾಸನಶಾಸ್ತ್ರದ ಬುನಾದಿಯು ಕನ್ನಡ ಮತ್ತು ಸಂಸ್ಕೃತ ಸಂಶೋಧನ ಕ್ಷೇತ್ರಗಳಲ್ಲಿ ಎಂದಿಗೂ ಅಚ್ಚಳಿಯದ ಮುದ್ರೆಯನ್ನು ಒತ್ತಿದೆ.

೧೯೬೯ರ ಮೇ ೬ರಂದು ಅವರು ಇಹಲೋಕವನ್ನು ತ್ಯಜಿಸಿದಾಗ ಮೈಸೂರು ಒಂದು ದೊಡ್ಡ ಜ್ಞಾನನಿಧಿಯನ್ನು ಕಳೆದುಕೊಂಡಿತು. ಆದರೆ ಅವರ ಕೃತಿಗಳ ರೂಪದಲ್ಲಿ ಅವರು ಇಂದಿಗೂ ನಮ್ಮೊಂದಿಗೆ ಇದ್ದಾರೆ. ಅವರ ಜೀವನವು ಸಾಬೀತುಪಡಿಸಿದ ಒಂದು ಮಹತ್ತ್ವದ ಸತ್ಯವೆಂದರೆ, ಸಂಸ್ಥೆಗಳು ಅಥವಾ ಪದವಿಗಳಿಗಿಂತ ವ್ಯಕ್ತಿಯ ಬೌದ್ಧಿಕ ಪ್ರಾಮಾಣಿಕತೆ ಮತ್ತು ಸತ್ಯದ ಅನ್ವೇಷಣೆಯ ಹಂಬಲವು ಜ್ಞಾನದ ಹರವನ್ನು ವಿಸ್ತರಿಸಬಲ್ಲದು. ಮೈಸೂರು ಸಂಸ್ಥಾನದ ಆಧುನಿಕ ಬೌದ್ಧಿಕ ಚರಿತ್ರೆಯಲ್ಲಿ ವೆಂಕಟಸುಬ್ಬಯ್ಯನವರ ಹೆಸರು ಸದಾ ಕಾಲ ಬೆಳಗುವ ನಕ್ಷತ್ರದಂತೆ ಇರುತ್ತದೆ.

ಡಾ. ಎ. ವೆಂಕಟಸುಬ್ಬಯ್ಯನವರ ಪ್ರಮುಖ ಕೃತಿಗಳು:

೧೯೧೧ The Kalas– ಭಾರತೀಯ ಕಲೆ ಮತ್ತು ವಿಜ್ಞಾನಗಳ ವಿಶ್ಲೇಷಣೆ

೧೯೧೮ Some Saka Dates in Inscriptions– ಶಾಸನಗಳ ಕಾಲನಿರ್ಣಯ

೧೯೨೭ ಕೆಲವು ಕನ್ನಡ ಕವಿಗಳ ಜೀವನ, ಕಾಲವಿಚಾರ– ಕನ್ನಡ ಸಾಹಿತ್ಯ ಚರಿತ್ರೆ

೧೯೩೨ Vedic Studies Vol. I– ವೇದಗಳ ಸಂಶೋಧನೆ

೧೯೪೩ ಮನುಧರ್ಮಸಾರ (ಅನುವಾದ)– ಧರ್ಮಶಾಸ್ತ್ರ

೧೯೫೨ Vedic Studies– ವೇದಾರ್ಥ ವಿಶ್ಲೇಷಣೆ

೧೯೬೭ Contributions to the Interpretation of the Rigveda– ಋಗ್ವೇದದ ವಿವರಣೆ

೧೯೭೪ Satyaloka in Rigveda: A Study– ಋಗ್ವೇದದ ಮಂತ್ರಗಳ ವಿಶ್ಲೇಷಣೆ

ಮುಳಿಯ ತಿಮ್ಮಪ್ಪಯ್ಯ

(೧೮೮೮-೧೯೫೦)

ರಾಧಾಮಣಿ ಎಂ.ಎ.

ಕನ್ನಡ ಸಾರಸ್ವತಲೋಕಕ್ಕೆ ದಕ್ಷಿಣ ಕನ್ನಡ ಜಿಲ್ಲೆಯ ಅಪ್ರತಿಮ ಕೊಡುಗೆ ಮುಳಿಯ ತಿಮ್ಮಪ್ಪಯ್ಯನವರು. ಇಪ್ಪತ್ತನೆಯ ಶತಮಾನದ ಕನ್ನಡ ವಿದ್ವಾಂಸರಲ್ಲಿ ಅಗ್ರಮಾನ್ಯರು. ಸ್ವಯಂ ಅಧ್ಯಯನ ಹಾಗೂ ಅವಿರತ ಪರಿಶ್ರಮದ ಮೂಲಕ ಕನ್ನಡ ಸಾಹಿತ್ಯದಲ್ಲಿ ಮೂಲಭೂತ ಸಂಶೋಧನೆಯನ್ನು ಮಾಡಿ ಪ್ರಶಂಸೆಗೆ ಪಾತ್ರರಾದವರು.

ಕನ್ನಡ ಪಂಡಿತರಾಗಿ, ವ್ಯಾಕರಣಕಾರರಾಗಿ ಉತ್ತಮ ಅಧ್ಯಾಪಕರಾಗಿ, ಪತ್ರಕರ್ತರಾಗಿ, ಅಗಾಧ ಜ್ಞಾನಸಂಪನ್ನರಾಗಿ, ಸಂಶೋಧಕರಾಗಿ, ವಿಮರ್ಶಕರಾಗಿ, ಸುಮಧುರ ಕಂಠದ ಗಮಕಿಗಳಾಗಿ, ಚಿತ್ತಾಕರ್ಷಕ ವ್ಯಾಖ್ಯಾನಕಾರರಾಗಿ ತಿಮ್ಮಪ್ಪಯ್ಯ ನವರು ಕನ್ನಡನಾಡಿನಲ್ಲಿ ಸುಪ್ರಸಿದ್ಧರಾಗಿದ್ದಾರೆ.

ಕೇಶವಭಟ್ಟ ಮತ್ತು ಮೂಕಾಂಬಿಕಾ ಎಂಬ ಹವ್ಯಕ ಬ್ರಾಹ್ಮಣ ದಂಪತಿಗಳ ಮಗನಾಗಿ ೦೩.೦೩.೧೮೮೮ರಂದು ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ಸಮೀಪದ ಮುಳಿಯ ಎಂಬ ಒಂದು ಹಳ್ಳಿಯಲ್ಲಿ ತಿಮ್ಮಪ್ಪಯ್ಯ ಜನಿಸಿದರು. ಶ್ರೀಮಂತಿಕೆ, ಸ್ವಾಭಿಮಾನದ ಹಿನ್ನೆಲೆಯಿಂದ ಬಂದ ಮುಳಿಯ ಕುಟುಂಬ ಸಮೀಪದ ವಿಟ್ಲದ ಅರಸುಗಳಿಗೂ ತಲೆಬಾಗದಂತೆ ಬದುಕುತ್ತಿದ್ದರು. ಕುಟುಂಬದ ಪ್ರತಿಷ್ಠೆ ಕಾರಣದಿಂದಾಗಿ ಆದಾಯಕ್ಕಿಂತ ಖರ್ಚನ್ನೇ ಹೆಚ್ಚಾಗಿ ಮಾಡಬೇಕಾದ ಪರಿಸ್ಥಿತಿ ಎದುರಾಯಿತು. ಹಾಗಾಗಿ ತಿಮ್ಮಪ್ಪಯ್ಯನವರ ಕಾಲಕ್ಕೆ ಅವರ ತಾಯಿ ತಂದೆ ಆರ್ಥಿಕ ಸಂಕಷ್ಟಕ್ಕೆ ಸಿಲುಕಬೇಕಾಯಿತು. ಇದರಿಂದಾಗಿ ಚಿಕ್ಕ ವಯಸ್ಸಿನ ತಿಮ್ಮಪ್ಪಯ್ಯನವರ ವಿದ್ಯಾಭ್ಯಾಸದ ಮೇಲೂ ಪರಿಣಾಮ ಬೀರಿತು. ವಾಮನ ಮಾಸ್ತರ್ ಎಂಬುವರು ಅವರ ಶಿಕ್ಷಕರಾಗಿದ್ದರು. ಅವರಲ್ಲಿ ಸುಪ್ತವಾಗಿದ್ದ ಸಂಗೀತ ಪ್ರೇಮವೂ ಎಚ್ಚೆತ್ತುಕೊಂಡಿತು. ಮುಳಿಯದಿಂದ ೨೫-೩೦ ಕಿ.ಮೀ. ದೂರದ ಕಾಸರಗೋಡಿನ ಪಕ್ಕದೂರಾದ ಕೂಡ್ಲು ಎಂಬಲ್ಲಿದ್ದ ಸುಬ್ರಾಯ ಶ್ಯಾನುಭಾಗರಲ್ಲಿಗೆ ಹೋಗಿ, ಅವರಲ್ಲಿ ಸಂಗೀತ ಕಲಿಯಲಾರಂಭಿಸಿದರು. ಮುಂದೆ 'ಪಾರ್ತಿಸುಬ್ಬ' ಗ್ರಂಥಕ್ಕೆ ಬೇಕಾದ ಅನೇಕ

ಮಾಹಿತಿಗಳು ಅವರಿಂದ ದೊರಕಿದುವಂತೆ. ಆದರೆ ಬಾಲಕ ತಿಮ್ಮಪ್ಪಯ್ಯನವರ ಜ್ಞಾನಪಿಪಾಸೆ ಅಲ್ಲಿಗೇ ಹಿಂಗಲಿಲ್ಲ. ಉದ್ದಾಮ ಸಂಸ್ಕೃತ ವಿದ್ವಾಂಸರಾಗಿದ್ದ ಕಲ್ಲಜೆ ಕೃಷ್ಣಶಾಸ್ತ್ರಿಗಳ ಬಳಿ ಮನೆಯಲ್ಲಿದ್ದುಕೊಂಡೇ ಸಂಸ್ಕೃತಾಭ್ಯಾಸ ಮಾಡಿದರು.

ಅತಿಯಾದ ಶಿಕ್ಷಣಾಸಕ್ತಿ ಅವರನ್ನು ಕಾಡಿದ್ದರಿಂದ ೧೯೦೬ರಲ್ಲಿ ಮನೆಯವರಿಗೆ ತಿಳಿಸದೆ ಊರು ಬಿಟ್ಟು ತಿರುವಾಂಕೂರಿಗೆ ಹೋಗಿ ಧರ್ಮಸತ್ರ ವೊಂದರಲ್ಲಿ ಊಟ, ವಸತಿಗೆ ವ್ಯವಸ್ಥೆ ಮಾಡಿಕೊಂಡು ಶಿಕ್ಷಣ ಪಡೆದರು. ಅಲ್ಲಿ ಕೆಲವು ದಿನ ಇದ್ದು ಅನಂತರ ಮರಳಿ ಮೈಸೂರಿಗೆ ಬಂದು ವಾರಾನ್ನದ ಮೂಲಕ ಜೀವನ ಸಾಗಿಸುತ್ತಾ ಸಂಸ್ಕೃತ ಹಾಗೂ ಕನ್ನಡದಲ್ಲಿ ಹೆಚ್ಚಿನ ಅಧ್ಯಯನ ನಡೆಸಿದರು. ಎಲ್ಲೆಲ್ಲಿ ಜ್ಞಾನಭಿಕ್ಷೆಗೆ ಅವಕಾಶವಿತ್ತೋ ಅಲ್ಲಿಗೆಲ್ಲ ಅವರು ಹೋಗಲು ಉತ್ಸುಕರಾಗಿದ್ದರು. ಸಂಗೀತಾಭ್ಯಾಸವನ್ನು ಮುಂದುವರಿಸಿ ತಮ್ಮ ಉತ್ತಮ ಶಾರೀರದಿಂದಾಗಿ ಶ್ರೋತೃಗಳ ಗಮನ ಸೆಳೆದರು. ಓದು ಮತ್ತು ಸಂಗೀತದಲ್ಲಿ ಸಾಕಷ್ಟು ಪರಿಣತಿ ಪಡೆದು ೧೯೧೦ರ ಹೊತ್ತಿಗೆ ಮರಳಿ ಊರಿಗೆ ಬಂದರು. ಆಗಿನ ಕಾಲದಲ್ಲಿ ನಾಲ್ಕನೆಯ ತರಗತಿಯ ಸಾರ್ವಜನಿಕ ಪರೀಕ್ಷೆಯನ್ನು ಸರ್ಕಾರವೇ (ಈಗಿನ ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಪರೀಕ್ಷೆಗಳಂತೆ) ನಡೆಸುತ್ತಿತ್ತು. ತಿಮ್ಮಪ್ಪಯ್ಯನವರು ವಿಟ್ಲಕ್ಕೆ ಹೋಗಿ ಪರೀಕ್ಷೆ ಬರೆದು ಉತ್ತೀರ್ಣರಾದರು. ಸಾಂಪ್ರದಾಯಿಕ ಶಾಲಾ ವಿದ್ಯಾಭ್ಯಾಸವನ್ನು ಮುಂದುವರಿಸಲು ಅವರಿಗೆ ಸಾಧ್ಯವಾಗಲಿಲ್ಲ. ಕಾರಣವೇನೇ ಇರಲಿ, ಮುಂದೆ ಕನ್ನಡ ಜನತೆ 'ನಾಡೋಜ' ಎಂದು ಗೌರವಿಸಿದ ಪಂಡಿತೋತ್ತಮನ ಸಾಂಪ್ರದಾಯಿಕ ವಿದ್ಯಾಭ್ಯಾಸವು ನಾಲ್ಕನೆಯ ತರಗತಿಗೆ ಕೊನೆಗೊಂಡಿತು!

ಕರಾವಳಿ ಭಾಗದವರಾದ ಕಾರಣ, ಯಕ್ಷಗಾನದ ಬಗ್ಗೆ ಅತೀವ ಆಸಕ್ತಿಯನ್ನು ಹೊಂದಿದ್ದರು. ಮುಳಿಯ ತಿಮ್ಮಪ್ಪಯ್ಯನವರಲ್ಲಿದ್ದ ಪುರಾಣಜ್ಞಾನ, ಸಂಗೀತಜ್ಞಾನ ಅವರನ್ನು ಆ ದಾರಿಯಲ್ಲಿ ಹೋಗಲು ಸಹಾಯ ಮಾಡಿದುವು. ಅದರಂತೆ ಅವರು ಅನೇಕ ಯಕ್ಷಗಾನ ಪ್ರದರ್ಶನಗಳಲ್ಲಿ ಭಾಗವಹಿಸಿದರು. ಅಲ್ಲಿ ವೈಯಕ್ತಿಕವಾಗಿ ಕೆಲವು ವಿಚಾರಗಳಿಂದ ಬೇಸರಗೊಂಡು ಆ ಕ್ಷೇತ್ರವನ್ನು ಬಿಟ್ಟರು. ಕಾವ್ಯವಾಚನ, ಪುರಾಣಪಠನಗಳು ತಿಮ್ಮಪ್ಪಯ್ಯನವರ ಮತ್ತೊಂದು ಆಸಕ್ತಿಯ ಕ್ಷೇತ್ರವಾದ್ದರಿಂದ ಆಹ್ವಾನ ಬಂದಲ್ಲಿಗೆ ಹೋಗಿ ಕಾವ್ಯವಾಚನ, ಪಠನ ಮಾಡುತ್ತಿದ್ದರು. ಒಂದು ಸಲ ಅಮ್ಮೆಂಬಳ ಶ್ರೀನಿವಾಸ ಪೈ ಎಂಬವರ ಸಮ್ಮುಖದಲ್ಲಿ ಜೈಮಿನಿಭಾರತ ವಾಚನ

ಮಾಡುವುದನ್ನು ನೋಡಿ, ತಿಮ್ಮಪ್ಪಯ್ಯನವರ ರಸಜ್ಞತೆ, ಶಾರೀರ, ಪಾಂಡಿತ್ಯದ ಆಳವನ್ನು ಪೈಗಳು ಗುರುತಿಸಿ ಮೆಚ್ಚಿದರು. ತಮ್ಮ ಆಡಳಿತಕ್ಕೆ ಸೇರಿದ ಕೆನರಾ ಹೈಸ್ಕೂಲಿಗೆ ೧೯೧೧ರಲ್ಲಿ ಕನ್ನಡ ಪಂಡಿತರನ್ನಾಗಿ ತಿಮ್ಮಪ್ಪಯ್ಯ ಅವರನ್ನು ನೇಮಕ ಮಾಡಿಕೊಂಡರು. ಅಲ್ಲಿ ೧೨.೦೯.೧೯೧೮ರ ತನಕ ಸೇವೆ ಸಲ್ಲಿಸಿದರು. ೧೩.೦೯.೧೯೧೮ರಿಂದ ಮಂಗಳೂರಿನ ಸೇಂಟ್ ಅಲೋಸಿಯನ್ ಕಾಲೇಜಿಗೆ ಅಧ್ಯಾಪಕರಾಗಿ ೩೧.೫.೧೯೪೮ ರ ತನಕ ಕಾರ್ಯನಿರ್ವಹಿಸಿ ನಿವೃತ್ತರಾದರು.

ಕನ್ನಡ ಮಾತನಾಡುವಾಗ ಇಂಗ್ಲಿಷ್ ಪದಗಳ ಬಳಕೆಯನ್ನು ತಿಮ್ಮಪ್ಪಯ್ಯ ನವರು ಆಕ್ಷೇಪಿಸುತ್ತಿದ್ದರು. 'ಕನ್ನಡ ಮಾತನಾಡಿ, ಇಲ್ಲದಿದ್ದರೆ ಆಂಗ್ಲ ಭಾಷೆಯಲ್ಲಿ ಮಾತನಾಡಿ' ಎಂಬುದು ಅವರ ನಿಲುವು. ಅರ್ಥಕ್ಕೆ ಯಾವುದೇ ಭಂಗ ಬರದಂತೆ ಹಳಗನ್ನಡ ಪದ್ಯಗಳನ್ನು ಪದವಿಭಾಗ ಮಾಡಿ, ಅನ್ವಯಾರ್ಥ ಹೇಳಿ ಮನಸ್ಸು ಮುಟ್ಟುವಂತೆ ಪಾಠ ಹೇಳುವುದು ಅವರ ಬೋಧನ ವೈಖರಿಯಾಗಿತ್ತು. ಅಗತ್ಯಬಿದ್ದರೆ ಗಮಕಶೈಲಿಯಲ್ಲಿ ಸುಶ್ರಾವ್ಯವಾಗಿ ಹಾಡುತ್ತಿದ್ದರು. ತಿಮ್ಮಪ್ಪಯ್ಯನವರು ಪಾತ್ರಗಳ ಪರಕಾಯ ಪ್ರವೇಶ ಮಾಡಿ ನೈಜವಾಗಿ ವಿಮರ್ಶೆ ಮಾಡಿ ಅರ್ಥೈಸುತ್ತಿದ್ದರು. ತರಗತಿಗಳಲ್ಲಿ ಪಾಠ ಹೇಳುವ ಸಂದರ್ಭದಲ್ಲಿ ವಿದ್ಯಾರ್ಥಿಗಳ ಕುಚೋದ್ಯದ ಪ್ರಶ್ನೆಗಳಿಗೆ ತಮ್ಮದೇ ಆದ ರೀತಿಯಲ್ಲಿ ತರ್ಕಬದ್ಧ ಹಾಗೂ ವಿನೋದಪೂರ್ಣವಾಗಿ ಉತ್ತರ ನೀಡುತ್ತಿದ್ದರು. ಎಂತಹ ಕೋಪ ಬರಿಸುವ ಸಂದರ್ಭ, ವರ್ತನೆ ಕಂಡುಬಂದರೂ ಅವರು ಸೌಮ್ಯವಾಗಿ 'ಮಂಗ', ಹೆಚ್ಚೆಂದರೆ 'ಮಲೆಮಂಗ', ಎಂದಷ್ಟೇ ಹೇಳಿ ಸುಮ್ಮನಾಗುತ್ತಿದ್ದರಂತೆ. ಯಾವಾಗಲೂ ಸಾಂದರ್ಭಿಕ ರಜೆಯನ್ನು ಬಳಸದಿದ್ದ ಅವರು ತಮ್ಮ ಪತ್ನಿ ತೀರಿಕೊಂಡ ಮರುದಿನವೇ ಕೆಲಸಕ್ಕೆ ಹಾಜರಾಗುವ ಶಿಸ್ತು ಮತ್ತು ನಿರ್ಲಿಪ್ತತೆಯನ್ನು ತೋರಿದ್ದರಂತೆ. ಸರಳವಾದ ಉಡುಪು, ಗಂಭೀರ ಪ್ರವೃತ್ತಿಯ, ಯಾವಾಗಲೂ ಓದು ಬರೆಹಗಳಲ್ಲಿಯೇ ತಲ್ಲೀನರಾಗಿದ್ದ ತಿಮ್ಮಪ್ಪಯ್ಯನವರಿಗೆ ಪಂಪ, ಆಂಡಯ್ಯ, ಮುದ್ದಣರು ಮೆಚ್ಚಿನ ಕವಿಗಳಾಗಿದ್ದರು. ಅಷ್ಟೇ ಅಲ್ಲದೇ ಕವಿರಾಜ ಮಾರ್ಗಕಾರ ಮತ್ತು ಪಾರ್ತಿಸುಬ್ಬರಲ್ಲಿಯೂ ಅಷ್ಟೇ ಆಸಕ್ತಿಯನ್ನು ಹೊಂದಿದ್ದರು.

ತಿಮ್ಮಪ್ಪಯ್ಯನವರು ಹೈಸ್ಕೂಲು ಕನ್ನಡ ಪಂಡಿತ ಹುದ್ದೆಯಿಂದ ಕಾಲೇಜು ಅಧ್ಯಾಪಕರಾಗಿ ಸೇರ್ಪಡೆಗೊಂಡದ್ದು ಅವರ ಜೀವನದಲ್ಲೂ ಸಾಹಿತ್ಯ ಕ್ಷೇತ್ರದಲ್ಲೂ ಮಹತ್ತರ ಬದಲಾವಣೆಗೆ ಕಾರಣವಾಯಿತು. ೧೯೧೩–೧೯೧೯ರ ಅವಧಿ ಅವರ

ಸಾಹಿತ್ಯಜೀವನದ ಒಂದು ಘಟ್ಟವಾದರೆ ೧೯೩೮-೧೯೪೮ ಮತ್ತೊಂದು ಘಟ್ಟವೆನ್ನಬಹುದು. ಮೂವತ್ತೇಳು ವರ್ಷಗಳ ಅವಧಿಯಲ್ಲಿ ಆದರ್ಶ ಅಧ್ಯಾಪಕ ರೆಂದು ಹೆಸರು ಮಾಡಿದರು. ಸಾವಿರಾರು ವಿದ್ಯಾರ್ಥಿಗಳಿಗೆ ಕನ್ನಡದ ದೀಕ್ಷಾಗುರು ಗಳಾಗಿ ಕೆಲಸಮಾಡಿದರು. ಕನ್ನಡ ಭಾಷೆಯನ್ನು ವ್ಯಾಕರಣ ಶುದ್ಧವಾಗಿ ಬಳಸಬೇಕೆನ್ನುವುದು ಅವರ ಅಪೇಕ್ಷೆಯಾಗಿತ್ತು.

ಎರಡನೆಯ ಕಾಲಘಟ್ಟದಲ್ಲಿ ನಾಡೋಜ ಪಂಪ, ಕವಿರಾಜಮಾರ್ಗ ವಿವೇಕ, ಪಾರ್ಶಿಸುಬ್ಬ ಎಂಬ ಸಂಶೋಧನಾತ್ಮಕ ಮೌಲ್ಯವಿರುವ ಕೃತಿಗಳು ಪ್ರಕಟವಾದುವು. ಆದಿಕವಿ ಪಂಪ ಹಾಗೂ ಅವನ ಕೃತಿಗಳಾದ ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯ ಕುರಿತಂತೆ ನಡೆಸಿದ ಸಂಶೋಧನೆಯ ಫಲವಾಗಿ 'ನಾಡೋಜ ಪಂಪ' ಕೃತಿ ಹೊರಬಂದಿದೆ. ಕನ್ನಡದ ಪ್ರಮುಖ ಕವಿಯೊಬ್ಬನನ್ನು ಇಷ್ಟೊಂದು ಆಳವಾಗಿ ಅಧ್ಯಯನ ಮಾಡಿದ ಉದಾಹರಣೆ ಇವರಿಗಿಂತ ಹಿಂದೆ ಕಂಡು ಬರುವುದಿಲ್ಲ. ಹಾಗಾಗಿಯೇ ಈ ಕೃತಿಗೆ ಚಾರಿತ್ರಿಕವಾದ ಸ್ಥಾನ ದೊರಕಿದೆ. ಇದರಲ್ಲಿ ಎರಡು ಮುಖ್ಯ ಭಾಗಗಳಿವೆ. ಮೊದಲಿಗೆ ಪಂಪನ ಕಾಲ, ದೇಶ, ಕುಲ, ಆಶ್ರಯದಾತರ ಬಗ್ಗೆ ಆಧಾರಸಹಿತವಾಗಿ ಚರ್ಚಿಸಲಾಗಿದೆ. 'ಪಂಪ' ಶಬ್ದದ ನಿಷ್ಪತ್ತಿಯನ್ನು ಒಳಗೊಂಡಂತೆ ವೆಂಗಿಮಂಡಲ ಪ್ರದೇಶದ ವ್ಯಾಪ್ತಿ, ಪಂಪನ ಜನ್ಮಸ್ಥಳದ ಬಗೆಗೆ ಇರುವ ಗೊಂದಲ, ಅವನ ಎರಡು ಕೃತಿರಚನೆಯ ಕಾಲದ ಚರ್ಚೆ, ವಿಕ್ರಮಾರ್ಜುನ ವಿಜಯ ಕೃತಿಗೆ ಸಮಸ್ತ ಭಾರತ ಎಂದು ಕರೆದುಕೊಳ್ಳಲು ಇರುವ ಕಾರಣ, ಕಾವ್ಯ ಮತ್ತು ಇತಿಹಾಸದ ಸಮೀಕರಣದ ಉದ್ದೇಶ, ಪಂಪನ ದೇಸೀಯತೆ, ಅದರ ವೈವಿಧ್ಯಗಳ ಅಧ್ಯಯನ, ಸಮಸ್ತಭಾರತಕ್ಕೆ ಪೂರಕವಾಗುವ ಐತಿಹಾಸಿಕ ಅಂಶಗಳ ಒಟ್ಟುನೋಟವನ್ನು ಚರ್ಚಿಸಲಾಗಿದೆ.

ಎರಡನೆಯ ಭಾಗದಲ್ಲಿ ಭಾರತೀಯ ಕಾವ್ಯಮೀಮಾಂಸೆಯನ್ನು ಆಧಾರವಾಗಿಟ್ಟುಕೊಂಡು ಮಹಾಕಾವ್ಯದ ಲಕ್ಷಣ, ಪಂಪನ ಕಾವ್ಯಧರ್ಮದ ಸ್ವರೂಪ, ರಸಸ್ವರೂಪದ ವ್ಯಾಖ್ಯಾನ, ಪಂಪಭಾರತದ ಪಾತ್ರಗಳ ವಿಮರ್ಶೆ ನಡೆಸಿದ್ದಾರೆ. 'ಆದಿಪುರಾಣದ ರಸಪ್ರವಾಹ' ಮತ್ತು 'ಸಮಸ್ತ ಭಾರತದ ಶೈಲಿ' ಎಂಬ ಶೀರ್ಷಿಕೆ ಅಡಿಯಲ್ಲಿ ಈ ವಿವರಗಳು ಚರ್ಚಿಸಲ್ಪಟ್ಟಿವೆ. ೧೯೩೮ರಲ್ಲಿ ಮೊದಲ ಮುದ್ರಣವಾದಾಗ ಅದರ ಅನುಬಂಧದಲ್ಲಿ ೧ನೇ ಅರಿಕೇಸರಿಯ ಕೊಲ್ಲಿಪಾಕ ಶಾಸನ, ಎರಡನೆಯ ಅರಿಕೇಸರಿಯ ವೇಮುಲವಾಡ ಶಾಸನ, ಮುಮ್ಮಡಿ

ಅರಿಕೇಸರಿಯ ಪರಭಣಿ ಶಾಸನವನ್ನು ಕೊಡಲಾಗಿದೆ. 'ಬೇತನಾಟ' ಎಂಬ ಪದಕ್ಕೆ ಬೇರೆ ಬೇರೆ ಮೂಲಗಳಲ್ಲಿ ಋಗ್ವೇದವೂ ಸೇರಿದಂತೆ ದೊರೆಯುವ ಆಕರಗಳನ್ನು ನೀಡಲಾಗಿದೆ. ಗಂಗಾಧರಂ ಶಾಸನದ ಪಠ್ಯ ನಾಡೋಜ ಪಂಪ ಗ್ರಂಥದ ಎರಡನೆಯ ಮುದ್ರಣದಲ್ಲಿದೆ.

ನಾಡೋಜ ಪಂಪ ಕೃತಿಯ ವೈಶಿಷ್ಟ್ಯ ಎಂದರೆ ಅದು ಏಕಕಾಲಕ್ಕೆ ಸಂಶೋಧನೆ ಮತ್ತು ವಿಮರ್ಶೆಯನ್ನು ಒಳಗೊಂಡು ರಚನೆಯಾಗಿರುವುದು. ಪಂಪನ ಕಾಲ, ದೇಶ, ಕೃತಿ ಕುರಿತಾದ ಅವರ ಸಾಮಗ್ರಿ ಸಂಗ್ರಹಣೆಯು ಸಾಹಿತ್ಯಕ ಸಂಶೋಧನೆಯಾಗಿ ಬದಲಾಗಿದೆ. ತರ್ಕಬದ್ಧವಾದ ವಿಮರ್ಶೆಯ ಗುಣ ಮತ್ತು ಒಳನೋಟದಿಂದ ಅದೊಂದು ಉತ್ತಮ ಸಾಹಿತ್ಯಕ ವಿಮರ್ಶೆ ಯಾಗಿಯೂ ಎಲ್ಲರ ಗಮನ ಸೆಳೆದಿದೆ. ಶಾಸನ ಹಾಗೂ ಕಾವ್ಯದ ಒಳಗಿರುವ ಚಾರಿತ್ರಿಕ ಅಂಶಗಳ ಸಹಾಯದಿಂದ ಅದನ್ನು ಒಂದು ಚಾರಿತ್ರಿಕ ಸಂಶೋಧನ ಅಧ್ಯಯನ ಕೃತಿಯಾಗಿಯೂ ರೂಪಿಸುವ ಪ್ರಯತ್ನ ಮಾಡಿದ್ದಾರೆ. ಇದರಿಂದ ಎಷ್ಟೊ ಹೊಸ ಹೊಸ ವಿಚಾರಗಳ ಮೇಲೆ ಬೆಳಕು ಚೆಲ್ಲಿದ್ದಾರೆ. ಇದು ಸ್ವಾತಂತ್ರ್ಯಪೂರ್ವದ ದೇಶೀ ನೆಲೆಯ ಕೃತಿ, ಸಂಶೋಧನೆ ಮತ್ತು ಅಧ್ಯಯನದ ಅನೇಕ ಹೊಸ ಹೊಳಪಿಗೆ ಮಾರ್ಗದರ್ಶನವಾಗಿದೆ ಎಂಬುವುದರಲ್ಲಿ ಯಾವುದೇ ಸಂದೇಹವಿಲ್ಲ.

'ಕವಿರಾಜಮಾರ್ಗ ವಿವೇಕ' ಮುಳಿಯ ತಿಮ್ಮಪ್ಪಯ್ಯನವರ ಮತ್ತೊಂದು ಪ್ರಮುಖ ಗ್ರಂಥ. ಇದು ಮೂಲ ಕೃತಿಗೆ ಬರೆದ ವ್ಯಾಖ್ಯಾನ, ವಿವರಣೆಯನ್ನು ಒಳಗೊಂಡ ಕೃತಿಯೆಂಬುದು ಲೇಖಕರ ಅಭಿಪ್ರಾಯ. ಕವಿರಾಜರ+ ಮಾರ್ಗ= ಕವಿರಾಜಮಾರ್ಗ, ಕವಿಗಳ+ರಾಜಮಾರ್ಗ=ಕವಿರಾಜಮಾರ್ಗ ಎಂಬ ಎರಡು ವಿಧದಲ್ಲಿ ಲೇಖಕರಿಗೆ ಎರಡನೆಯ ಅಭಿಪ್ರಾಯವೇ ಸಮಂಜಸವೆಂದು ತೋರುತ್ತದೆ. 'ಕವಿಗಳಿಗಿದು ಕೈಗನ್ನಡಿ' ಎಂಬ ಮಾತಿನಲ್ಲಿ ಅದನ್ನು ಸೂಚಿಸಿದ್ದಾರೆ. ಅಖಂಡ ಕನ್ನಡನಾಡಿನ ಚರಿತ್ರೆ, ನೃಪತುಂಗ ರಾಜನ ಕಾಲಘಟ್ಟದ ಜನಸಾಮಾನ್ಯರ ವಿಚಾರ, ಭಾಷೆ, ಅಲಂಕಾರ, ಛಂದಸ್ಸನ್ನು ಕುರಿತಾದ ವಿವರಗಳಿಂದ ಕವಿರಾಜಮಾರ್ಗ ಪ್ರಾಚೀನ ಗ್ರಂಥ ಮಾತ್ರವಲ್ಲದೇ, ಮಾರ್ಗಸಾಹಿತ್ಯಕ್ಕೆ ಕೈಗನ್ನಡಿಯಾಗಿದೆ. "ಅವನ ಆ ಗುರಿಯನ್ನು ಈಗಿನ ವಿದ್ವತ್ ಪ್ರಸಾರಕರ ಎದೆಗೊಪ್ಪಿಸುವುದೇ ನನ್ನ ಪ್ರಯತ್ನ" ಎಂಬ ಆಶಯದಿಂದ ಕೃತಿಯ ಮೊದಲ ಭಾಗವನ್ನು ಅವರೇ ೧೯೪೮ರಲ್ಲಿ ಪ್ರಕಟಿಸಿದರು.

ಅನಂತರ ಎರಡನೆಯ ಭಾಗವನ್ನು ಅವರ ಮಗ ಎಂ. ಕೇಶವಭಟ್ಟರು ೧೯೭೩ರಲ್ಲಿ ಪ್ರಕಟಿಸಿದರು.

ಕವಿರಾಜಮಾರ್ಗ ವಿವೇಕದ ಮೊದಲ ಭಾಗದಲ್ಲಿ ಎಂಟು ಮತ್ತು ಒಂಬತ್ತನೆಯ ಶತಮಾನದ ಕನ್ನಡ ದೊರೆ ರಾಷ್ಟ್ರಕೂಟ ಮುಮ್ಮಡಿ ಗೋವಿಂದರಾಜನು ಅಖಂಡ ಭಾರತದ ಚಕ್ರವರ್ತಿಯಾಗಿದ್ದವನು ಎಂಬ ವಿಷಯದಿಂದ ಹಿಡಿದು ಅವನ ಗುಣ, ಸ್ವಭಾವ ಮತ್ತು ದಿಗ್ವಿಜಯವನ್ನು ಆಧಾರಸಹಿತ ದಾಖಲಿಸಿದ್ದಾರೆ. ದಂತಿವರ್ಮನಿಂದ ನೃಪತುಂಗನ ತನಕ(೮೦೨–೮೭೭) ಅವರ ವಂಶಾವಳಿಯ ವಿವರಗಳನ್ನು ನೀಡಲಾಗಿದೆ. ನೃಪತುಂಗನ ಆಡಳಿತ ವೈಖರಿ, ಅವನ ಧರ್ಮ, ಕನ್ನಡದ ವ್ಯಾಪ್ತಿ ಇತ್ಯಾದಿ ಅಂಶಗಳಿವೆ. ಕವಿರಾಜಮಾರ್ಗದ ಕರ್ತೃ ನೃಪತುಂಗನಲ್ಲ, ಅವನ ಆಸ್ಥಾನ ಪಂಡಿತರಲ್ಲಿ ಒಬ್ಬನಾದ ಶ್ರೀವಿಜಯ ಎಂಬ ಹೆಸರು ಪಡೆದ ಜಯಾಖ್ಯ ಅದರ ಕರ್ತೃ ಎಂಬ ಇತ್ಯಾದಿ ಸ್ಥಾಪಿತ ವಿಚಾರಗಳನ್ನು ಪ್ರಸಕ್ತ ಕೃತಿಯಲ್ಲಿ ನಿರೂಪಿಸಲಾಗಿದೆ. ಅನಂತರ ತಿರುಳುಗನ್ನಡ ಸಂಸ್ಕೃತಿಯನ್ನು ಮತ್ತು ಅದರ ವ್ಯಾಪ್ತಿಯನ್ನು ಕ್ರೋಡೀಕರಿಸಲಾಗಿದೆ. ಎರಡನೆಯ ಭಾಗದಲ್ಲಿ ಕನ್ನಡದ ಎರಡು ಮಾರ್ಗಭೇದಗಳೊಂದಿಗೆ ಶಬ್ದದೋಷ–ಶಬ್ದಗುಣ, ಪದ ರಚನಾದೋಷ–ಪದರಚನಾಗುಣ ಇತ್ಯಾದಿ ಅಂಶಗಳ ವಿಸ್ತರಣೆ ಮಾಡಲಾಗಿದೆ. ಮಾರ್ಗಭೇದವನ್ನು ಪದರೂಪಗಳಿಗೆ ಮಾತ್ರ ಸೀಮಿತಗೊಳಿಸದೆ ಅದರ ಬಂಧ, ಅರ್ಥ, ರಸಕ್ಕೆ ಅನ್ವಯ ಗೊಳಿಸಲಾಗಿದೆ. ಜೊತೆಗೆ ಕನ್ನಡದಲ್ಲಿ ಮಾರ್ಗಭೇದ ಅನ್ಯಭಾಷೆಗಳ ಸಂಸರ್ಗದಿಂದ ರೂಪುಗೊಂಡದ್ದಾಗಿರಬೇಕಿಲ್ಲ, ಅದು ಸ್ವತಂತ್ರವಾಗಿಯೇ ರಚಿತವಾಗಿದ್ದಾಗಿರ ಬಹುದೆಂಬ ಮಾತುಗಳನ್ನು ಹೇಳಿರುವುದು ಅತ್ಯಂತ ವೈಶಿಷ್ಟ್ಯಪೂರ್ಣವಾಗಿದೆ. ಕವಿರಾಜಮಾರ್ಗ ಕೃತಿ ಓದುಗರಿಗೆ ಯಾವ ಯಾವ ಕಾರಣದಿಂದ ಮಾನ್ಯ ವಾಗಿದೆಯೋ ಆ ಜಾಡನ್ನು ಬಿಟ್ಟುಕೊಡದೆ ಓದುಗರಿಗೆ ಸುಲಭ ಮಾರ್ಗವನ್ನು ದೊರಕಿಸಿಕೊಡುವಲ್ಲಿ ಕವಿರಾಜಮಾರ್ಗ ವಿವೇಕದ ಸಾರ್ಥಕತೆಯಿದೆ.

'ಪಾರ್ತಿಸುಬ್ಬ' ಮುಳಿಯ ತಿಮ್ಮಪ್ಪಯ್ಯನವರ ಇನ್ನೊಂದು ಸಂಶೋಧ ನಾತ್ಮಕ ಕೃತಿ. ಇದು ದಕ್ಷಿಣ ಕನ್ನಡ ಭಾಗದ ತೆಂಕುತಿಟ್ಟು ಯಕ್ಷಗಾನದಲ್ಲಿ ಅಗ್ರಮಾನ್ಯ ಕವಿ ಎಂಬ ಹೆಸರಿಗೆ ಪಾತ್ರನಾದ ಪಾರ್ತಿಸುಬ್ಬನನ್ನು ಕುರಿತಾದದ್ದು. ೧೯೪೫ರಷ್ಟು ಹಿಂದೆಯೇ ಪ್ರಕಟವಾಗಿದ್ದ ಈ ಗ್ರಂಥದಲ್ಲಿ ಕವಿ ವಿಚಾರ, ಯಕ್ಷಗಾನದ ಸ್ವರೂಪ, ಅವನ ರಾಮಾಯಣ ಪ್ರಬಂಧ ಸಾರ ಕುರಿತಂತೆ ಚಾರಿತ್ರಿಕ ಹಾಗೂ

ಸಂಶೋಧನಾತ್ಮಕ ವಿವರಗಳನ್ನು ಒಳಗೊಂಡಿವೆ. ಅಪ್ಪಟ ದೇಸಿ ಕಲೆಯಾದ ಯಕ್ಷಗಾನದ ಕುರಿತು ಇಷ್ಟೊಂದು ದೀರ್ಘವಾದ ವಿವೇಚನೆಯುಳ್ಳ ಪ್ರಬಂಧ ರಚನೆಯಾಗಿರುವುದು ಅಪರೂಪ. ಇದು ಆ ಕಾರಣದಿಂದ ಮೊದಲನೆಯ ಪ್ರಯತ್ನವೂ ಆಗಿದೆ. ಜೊತೆಗೆ ಈ ಕೃತಿಯು ರಾಮಪಟ್ಟಾಭಿಷೇಕದಿಂದ ರಾವಣ ವಧೆಯ ತನಕ ಯಕ್ಷಗಾನ ಪ್ರಸಂಗದಲ್ಲಿ ರಾಮಾ ಯಣದ ಕಥೆಯನ್ನು ಹೇಳಿರುವುದು ಈ ಕೃತಿಯ ವಿಶೇಷತೆಯಾಗಿದೆ. ಆದ್ದರಿಂದ ತಿಮ್ಮಪ್ಪಯ್ಯನವರ ದೃಷ್ಟಿಯಲ್ಲಿ ಪಾರ್ತಿಸುಬ್ಬ 'ಯಕ್ಷಗಾನ ವಾಲ್ಮೀಕಿ'. ಉಪಲಬ್ಧ ಆಕರಸಾಮಗ್ರಿಗಳ ಆಧಾರದಿಂದ ಕಾಸರಗೋಡಿನ ಕುಂಬಳೆ ಪಾರ್ತಿಸುಬ್ಬನ ಹುಟ್ಟೂರೆಂದು ಮತ್ತು ಅವನ ಆಸಕ್ತಿ ಮಾರ್ಗ ಸಾಹಿತ್ಯಕ್ಕಿಂತ ದೇಶೀ ಸಾಹಿತ್ಯದ ಮೇಲೆ ಇತ್ತು ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಇತಿಹಾಸದಲ್ಲಿ ಮರೆಯಾಗುತ್ತಿದ್ದ ಯಕ್ಷಗಾನ ಕವಿಯೊಬ್ಬನ ಕಾಲ, ದೇಶ, ವೈಯಕ್ತಿಕ ಸಂಗತಿ ಹಾಗೂ ಕೃತಿಗಳ ಬಗ್ಗೆ ಬೆಳಕು ಚೆಲ್ಲುವಲ್ಲಿ ಈ ಕೃತಿ ಉನ್ನತ ಸ್ಥಾನವನ್ನು ಪಡೆದಿದೆ. ಕಾಲದ ದೃಷ್ಟಿಯಿಂದ ಮತ್ತು ಪಾರ್ತಿಸುಬ್ಬನ ಕೃತಿವಿಮರ್ಶೆಯ ಆಕರದ ದೃಷ್ಟಿಯಿಂದಲೂ ಇದು ಮಹತ್ತ್ವದ ಗ್ರಂಥವಾಗಿದೆ.

'ಆದಿಪುರಾಣ ಸಂಗ್ರಹ' (೧೯೩೮) ಮತ್ತು 'ಸಮಸ್ತ ಭಾರತಸಾರ' (೧೯೪೧) ಪಂಪನ ಎರಡು ಕಾವ್ಯಗಳ ಸಂಗ್ರಹರೂಪದ ಗದ್ಯಾನುವಾದ. ಆದಿಪುರಾಣವನ್ನು ಮೊದಲಿಗೆ ಜಿನಸೇನನೆಂಬ ಕವಿ ಸಂಸ್ಕೃತದಲ್ಲಿ ರಚಿಸಿದನು. ಪಂಪ ಕವಿಯು ಅದನ್ನು ಸಂಕ್ಷೇಪವಾಗಿ ಮತ್ತು ಸಾರವತ್ತಾಗಿ ಕನ್ನಡ ಕಾವ್ಯ ರೂಪದಲ್ಲಿ ರಚಿಸಿದನು. 'ಇಂದಿಗೆ ಹಳತಾಗಿ ತೋರುವ ಈ ಕಾವ್ಯವನ್ನು ಇಲ್ಲಿ ಹೊಸಗನ್ನಡದ ನುಡಿಯಲ್ಲಿ ಸಂಗ್ರಹಿಸಿ ವಾಚಕರ ಅಂತರಂಗಕ್ಕೆ ಒಪ್ಪಿಸಬೇಕೆಂಬುದೇ ಬರಹಗಾರನ ಭಾವನೆ'(ಕಥಾಮುಖ, ಪುಟ ೩)ಎಂದಿದ್ದಾರೆ. ಜೈನಪುರಾಣ ಕುರಿತ ವಿವರಗಳನ್ನು ಕಡಿಮೆ ಮಾಡಿ ಕಥನರೂಪದಲ್ಲಿ ರಚನೆ ಮಾಡಿದ್ದಾರೆ. ಅಷ್ಟೇ ಅಲ್ಲದೇ ಪಂಪನ ದೇಸಿ ನುಡಿಗಟ್ಟುಗಳನ್ನು ಬಳಸಿದ್ದಾರೆ. ಸಮಸ್ತ ಭಾರತಸಾರದಲ್ಲಿ ವಿಕ್ರಮಾರ್ಜುನ ವಿಜಯದ ಮುಖ್ಯಕಥೆಗೆ ಯಾವುದೇ ಭಂಗ ಬರದಂತೆ ಗದ್ಯದಲ್ಲಿ ನಿರೂಪಿಸುವ ಪ್ರಯತ್ನವಾಗಿದೆ.

ತಿಮ್ಮಪ್ಪಯ್ಯನವರು ತುಂಬಾ ಗಂಭೀರವಾದ ಸಂಶೋಧನೆಯ ಜೊತೆಗೆ ಸಣ್ಣ ಪುಟ್ಟ ಸಾಹಿತ್ಯ ಪ್ರಯೋಗಗಳನ್ನು ಪ್ರಾರಂಭದಲ್ಲಿ ನಡೆಸಿದ್ದಾರೆ. ಅವರು ನವೋದಯ ಕಾಲದಲ್ಲಿ ಮುಂಚೂಣಿಯಲ್ಲಿದ್ದ ಪ್ರಯೋಗಶೀಲ ಕವಿ. ಕಾದಂಬರಿ,

ನಾಟಕ, ಪದ್ಮಕಾವ್ಯ, ಖಂಡಕಾವ್ಯ, ಸಂಸ್ಕೃತಿ ಮುಂತಾದವುಗಳನ್ನು ಕುರಿತ ಕೃತಿರಚನೆ ಮಾಡಿದ್ದಾರೆ. ಇವು ತಿಮ್ಮಪ್ಪಯ್ಯನವರ ಸಾಹಿತ್ಯ ವ್ಯವಸಾಯದ ಮುಖ್ಯ ಹೆಜ್ಜೆ ಗುರುತುಗಳಾಗಿ ನಿಂತಿವೆಯೇ ಹೊರತು ಮಹತ್ತ್ವದ ರಚನೆಗಳಾಗಿಲ್ಲ. ಅವರಲ್ಲಿ ಗಂಭೀರ ಸಂಶೋಧನ ಪ್ರವೃತ್ತಿಯನ್ನು ಗುರುತಿಸಲು ಸಾಧ್ಯವಿರುವಂತೆ, ಅವರ ರಚನೆಯಲ್ಲಿ ಪ್ರಯೋಗಶೀಲತೆಯ ಪ್ರಯತ್ನವನ್ನು ನೋಡಬಹುದಾಗಿದೆ. ಮುಳಿಯ ತಿಮ್ಮಪ್ಪಯ್ಯನವರ ಶೈಲಿ ಮಾರ್ಗ–ದೇಸಿ ಸಮನ್ವಯ ದೃಷ್ಟಿ ಎರಡು ಇದ್ದರೂ ಅವರು ಹೆಚ್ಚಾಗಿ ದೇಸೀಯತೆಯ ಪಕ್ಷಪಾತಿಯೇ ಆಗಿದ್ದಾರೆ.

ಮುಳಿಯ ತಿಮ್ಮಪ್ಪಯ್ಯ ಅವರು ಪದವಿ ಪ್ರಶಸ್ತಿಗಳಿಗೆ ಎಂದೂ ಹಾತೊರೆದವರಲ್ಲ. ಅವರ ಕಾಲದಲ್ಲಿ ಸಾಹಿತ್ಯಕ್ಷೇತ್ರದ ಬಿರುದುಬಾವಲಿಗಳು, ಪ್ರಶಸ್ತಿ ಸನ್ಮಾನಗಳು ಅತಿ ವಿರಳವಾಗಿದ್ದುವು. ಎಂದರೆ ಪ್ರತಿಭೆ, ವಿದ್ವತ್ತು, ಸಾಧನೆಗಳು ಗುರುತಿಸ ಲ್ಪಡುತ್ತಿದ್ದವು. ಅರ್ಹರಿಗೆ ತಕ್ಕ ಮನ್ನಣೆ ವಿವಿಧ ರೀತಿಗಳಲ್ಲಿ ದೊರಕುತ್ತಿತ್ತು. ಅವರು ತಮ್ಮ ಜೀವಿತ ಕಾಲದಲ್ಲಿ ಯಾವ ಸಮ್ಮಾನಗಳನ್ನೂ ಬಯಸಿದವರಲ್ಲ. ಅವರ ಪ್ರತಿಭೆ ಸಾಧನೆಗಳನ್ನು ಗುರುತಿಸಿ ಅನೇಕ ರೀತಿಯ ಗೌರವ ಸಮ್ಮಾನಗಳು ಅವರನ್ನು ಅರಸಿ ಬಂದಿದ್ದುವು. ಕೇವಲ ಳಿಕರ ವಯಸ್ಸಿನಲ್ಲಿ ಕಾರವಾರದಲ್ಲಿ ನಡೆದ ೧೭ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕೆ ಅವರು ಆಯ್ಕೆಯಾದರು. ಅದು ಕನ್ನಡನಾಡಿನ ವಿದ್ವತ್ ಲೋಕವು ಅವರ ವಿದ್ವತ್ತನ್ನು ಗುರುತಿಸಿದ ದ್ಯೋತಕವೆ ಆಗಿದೆ. ೧೯೪೧ರಲ್ಲಿ ಜರುಗಿದ ಪಂಪನ ಸಹಸ್ರಮಾನೋತ್ಸವದ ಅಧ್ಯಕ್ಷಪೀಠವು ಅವರಿಗೆ ಒಲಿದು ಬಂದಿದ್ದು ಇನ್ನೊಂದು ಗೌರವ. ಶಿಕ್ಷಣವಲಯ, ಕನ್ನಡನಾಡು ಮಾತ್ರವಲ್ಲದೇ ಮದ್ರಾಸು, ಆಂಧ್ರ, ಹೈದರಾಬಾದು, ಕಾಶಿ ಮೊದಲಾದ ವಿದ್ಯಾಪೀಠಗಳು ಅವರ ಪ್ರತಿಭೆ ಮತ್ತು ಪಾಂಡಿತ್ಯವನ್ನು ಗುರುತಿಸಿ ಆಗಾಗ ಪರೀಕ್ಷಕ ಕಾರ್ಯವನ್ನು ವಹಿಸಿಕೊಡುತ್ತಿದ್ದುವು. ಹೀಗೆ ಕರ್ನಾಟಕದ ಒಳಗೂ ಹೊರಗೂ ಅವರ ಕೀರ್ತಿ ಹಬ್ಬಿತ್ತು. ಕನ್ನಡ ಪಂಡಿತರಾಗಿದ್ದರೂ ಮದ್ರಾಸು ವಿಶ್ವವಿದ್ಯಾಲಯದ ಅಕೆಡೆಮಿಕ್ ಕೌನ್ಸಿಲಿನ ಸದಸ್ಯರಾಗಿಯೂ ಅವರು ಸೇವೆ ಸಲ್ಲಿಸಿದ್ದರು. ಅಷ್ಟೇ ಅಲ್ಲದೆ ೧೯೨೦ರಲ್ಲಿ ಕೋಲ್ಕತಾದ 'ಅಖಿಲ ಭಾರತ ಸಾಹಿತ್ಯ ಸಂಘ'ವು ತಿಮ್ಮಪ್ಪಯ್ಯನವರಿಗೆ 'ಕನ್ನಡ ಕಾವ್ಯಾರ್ಣವ' ಎಂಬ ಬಿರುದನ್ನು ನೀಡಿ ಗೌರವಿಸಿತ್ತು. ಇದು ಅವರ ಪಾಂಡಿತ್ಯಕ್ಕೆ ವೈಯಕ್ತಿಕವಾಗಿ ಸಂದ ಗೌರವವಾಗಿದ್ದರೂ ಸೈಂಟ್ ಎಲೋಸಿಯಸ್ ಕಾಲೇಜು ಅದನ್ನೊಂದು ಹೆಮ್ಮೆಯ ವಿಷಯವಾಗಿ ಪರಿಗಣಿಸಿತು. 'ನಾಡೋಜ'

ಎಂದು ಮೊತ್ತಮೊದಲು ಪಂಪನನ್ನು ಬಣ್ಣಿಸಿದವರು ಪ್ರಾಯಶಃ ತಿಮ್ಮಪ್ಪಯ್ಯನವರೇ. ಈಗ 'ನಾಡೋಜ' ಗೌರವವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯವು ಸಾಧಕ ವಿದ್ಯಾಂಸರಿಗೆ ನೀಡುತ್ತಿದೆಯಷ್ಟೆ. 'ನಾಡೋಜ ಪಂಪ' ಗ್ರಂಥವನ್ನು ಬರೆದ ಮೇಲೆ 'ನಾಡೋಜ' ಎನ್ನುವ ಬಿರುದು ಅನೌಪಚಾರಿಕವಾಗಿ ತಿಮ್ಮಪ್ಪಯ್ಯನವರ ಹೆಸರಿನೊಡನೆ ಬೆಸೆದುಕೊಂಡಿತು. ಮುಳಿಯ ತಿಮ್ಮಪ್ಪಯ್ಯನವರು ೧೯೫೦ರಲ್ಲಿ ನಿಧನರಾದರು.

❐ ❐ ❐

ಎ. ಶಾಂತಿರಾಜ ಶಾಸ್ತ್ರೀ

(೧೮೮೮–೧೯೫೨)

ಪವಿತ್ರ ಬಿ.

೨೦ನೇ ಶತಮಾನವು ಜೈನ ವಿದ್ವತ್ ಪರಂಪರೆಯ ಪುನರುಜ್ಜೀವನದ ಪ್ರಮುಖ ಹಂತವೆಂದು ಪರಿಗಣಿಸಬಹುದು. ಈ ಅವಧಿಯಲ್ಲಿ ಪುರಾತನ ಜೈನ ಸಾಹಿತ್ಯ, ತತ್ತ್ವಶಾಸ್ತ್ರವನ್ನು ಆಧುನಿಕ ಸಂಶೋಧನ ವಿಧಾನಗಳ ಮೂಲಕ ಮರುಪರಿಶೀಲಿಸುವ ಕಾರ್ಯ ಪ್ರಾಮುಖ್ಯತೆ ಪಡೆದಿತು. ಈ ಚಳುವಳಿಯಲ್ಲಿ ಪಂಡಿತ ಎ. ಶಾಂತಿರಾಜ ಶಾಸ್ತ್ರಿಗಳು ಪ್ರಮುಖ ಪಾತ್ರವಹಿಸಿದ ವಿದ್ವಾಂಸರಾಗಿ ಹೊರ ಹೊಮ್ಮುತ್ತಾರೆ. ಅವರ ಪಾಂಡಿತ್ಯ, ಪರಿಶೀಲನಾ ಮನೋಭಾವ ಮತ್ತು ಸಂಶೋಧನನಿಷ್ಠೆ ಜೈನ ಅಧ್ಯಯನ ಕ್ಷೇತ್ರಕ್ಕೆ ಹೊಸ ದಿಕ್ಕನ್ನು ನೀಡಿವೆ.

ಶಾಂತಿರಾಜ ಶಾಸ್ತ್ರಿಗಳು ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಚಿಕ್ಕಹಳ್ಳಿ ಎರ್ಲೂರು ಎಂಬಲ್ಲಿ ಜನಿಸಿದರು. ತಂದೆ ಧರಣಪ್ಪಾರ್ಯ ಮತ್ತು ತಾಯಿ ಚೆಲುವಮ್ಮ. ಇವರ ಕುಟುಂಬವು ಪೂರ್ವದಿಂದಲೂ ಜೈನ ಧರ್ಮದ ಆಳವಾದ ಸಂಸ್ಕಾರ ಮತ್ತು ಪಾಂಡಿತ್ಯಕ್ಕೆ ಹೆಸರಾಗಿತ್ತು. ಶಾಸ್ತ್ರಿಗಳ ಪ್ರಾಥಮಿಕ ಮತ್ತು ಧಾರ್ಮಿಕ ವಿದ್ಯಾಭ್ಯಾಸವು ಶ್ರವಣಬೆಳಗೊಳದ ನೇಮಿಸಾಗರ ಮುನಿಗಳ ಮಾರ್ಗದರ್ಶನದಲ್ಲಿ ನಡೆಯಿತು. ಅಲ್ಲಿ ಜೈನ ದರ್ಶನ, ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳಲ್ಲಿ ಅಪ್ರತಿಮ ಪಾಂಡಿತ್ಯ ಗಳಿಸಿದ ಇವರಿಗೆ 'ನ್ಯಾಯತೀರ್ಥ' ಎಂಬ ಗೌರವಾನ್ವಿತ ಪದವಿ ಲಭಿಸಿತು. ಇವರು ಶ್ರೀಮತಿ ಸುಭದ್ರಾದೇವಿಯವರನ್ನು ವಿವಾಹವಾದರು. ಸುಭದ್ರಾ ದೇವಿ ಯವರು ಶಾಸ್ತ್ರಿಗಳ ಗ್ರಂಥರಚನೆ ಮತ್ತು ಪತ್ರಿಕಾ ನಿರ್ವಹಣೆಯಲ್ಲಿ ಸಕ್ರಿಯವಾಗಿ ಸಹಕಾರಿ ಯಾಗಿದ್ದರು.

ಮೈಸೂರು ಸಂಸ್ಥಾನದ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ವಾತಾವರಣ ಶಾಸ್ತ್ರಿಗಳ ಬೌದ್ಧಿಕ ಬೆಳೆವಣಿಗೆಗೆ ಪೋಷಕವಾಗಿತ್ತು. ಅರಸರ ಆಶ್ರಯದಲ್ಲಿ

ಬೆಳೆಯುತ್ತಿದ್ದ ವಿದ್ವತ್ ಪರಂಪರೆಯ ಭಾಗವಾಗಿ ಅವರು ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ ಮತ್ತು ವೈಜ್ಞಾನಿಕ ಸಂಪಾದನೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿದರು. ಇದರ ಫಲವಾಗಿ ಅನೇಕ ಪ್ರಾಚೀನ ಜೈನ ಕೃತಿಗಳು ಮುದ್ರಿತ ರೂಪದಲ್ಲಿ ಲಭ್ಯವಾಗಿ, ಅಪಾರ ಓದುಗವರ್ಗಕ್ಕೆ ತಲುಪುವಂತಾಯಿತು.

ಶಾಸ್ತ್ರಿಗಳ ಕಾರ್ಯವು ಕೇವಲ ಪಠ್ಯಸಂಪಾದನೆಗೆ ಸೀಮಿತವಾಗಿರದೆ, ಸಂಶೋಧನೆ, ಅನುವಾದ ಮತ್ತು ತತ್ತ್ವಚಿಂತನೆಯ ವಿಸ್ತೃತ ವಲಯವನ್ನು ಒಳಗೊಂಡಿತ್ತು. ಪ್ರಾಚೀನ ಜೈನ ಸಾಹಿತ್ಯದ ಅರ್ಥವಿಸ್ತಾರವನ್ನು ಆಧುನಿಕ ಓದುಗರಿಗೆ ಗ್ರಾಹ್ಯವಾಗುವಂತೆ ಮಾಡುವುದರೊಂದಿಗೆ, ಅದರ ಐತಿಹಾಸಿಕ ಮತ್ತು ತಾತ್ತ್ವಿಕ ಮಹತ್ತ್ವವನ್ನು ಸಮಗ್ರವಾಗಿ ಅನಾವರಣಗೊಳಿಸುವುದು ಅವರ ಪ್ರಮುಖ ಧ್ಯೇಯವಾಗಿತ್ತು. ಈ ಮೂಲಕ ಅವರು ಜೈನಧರ್ಮ ಮತ್ತು ಸಾಹಿತ್ಯವನ್ನು ಕೇವಲ ಧಾರ್ಮಿಕ ಪರಿಧಿಯಿಂದ ಹೊರತೆಗೆದು, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಅಧ್ಯಯನದ ಕ್ಷೇತ್ರಕ್ಕೆ ತರುವಲ್ಲಿ ಯಶಸ್ವಿಯಾದರು. ಹೀಗಾಗಿ, ಪಂಡಿತ ಎ. ಶಾಂತಿರಾಜ ಶಾಸ್ತ್ರಿಗಳ ಜೀವನ ಮತ್ತು ಕೃತಿಗಳು ಕನ್ನಡ ಸಾಹಿತ್ಯ, ಜೈನಶಾಸ್ತ್ರ ಅಧ್ಯಯನ ಮತ್ತು ಇತಿಹಾಸ ಸಂಶೋಧನಾ ಕ್ಷೇತ್ರಗಳಲ್ಲಿ ಮಹತ್ತ್ವದ ಅಧ್ಯಯನ ವಿಷಯಗಳಾಗಿವೆ. ಈ ಪ್ರಬಂಧವು ಅವರ ಪಾಂಡಿತ್ಯ, ಸಂಶೋಧನಾ ವಿಧಾನಗಳು ಮತ್ತು ಸಾಹಿತ್ಯಿಕ ಕೊಡುಗೆಗಳನ್ನು ವಿಶ್ಲೇಷಿಸುವ ಮೂಲಕ, ಅವರ ಸಮಗ್ರ ಸಾಧನೆಯನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವಾಗಿದೆ. ಹೀಗಾಗಿ, ಪಂಡಿತ ಎ. ಶಾಂತಿರಾಜ ಶಾಸ್ತ್ರಿಗಳ ಜೀವನ ಮತ್ತು ಕೃತಿಗಳು ಕನ್ನಡ ಸಾಹಿತ್ಯ, ಜೈನಶಾಸ್ತ್ರ ಅಧ್ಯಯನ ಮತ್ತು ಇತಿಹಾಸ ಸಂಶೋಧನಾ ಕ್ಷೇತ್ರಗಳಲ್ಲಿ ಮಹತ್ತ್ವದ ಅಧ್ಯಯನ ವಿಷಯಗಳಾಗಿವೆ.

ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿ, ಶಾಸ್ತ್ರಿಗಳು ಸಲ್ಲಿಸಿದ ಸೇವೆ ಸಂಶೋಧನ ಕ್ಷೇತ್ರಕ್ಕೆ ಬಹುದೊಡ್ಡ ಕೊಡುಗೆ. ಹಸ್ತಪ್ರತಿ ವಿಭಾಗದಲ್ಲಿ ಸಹಾಯಕ ವಿದ್ವಾಂಸರಾಗಿ ಅವರು ಮಾಡಿದ ಕೆಲಸಗಳು ಹೀಗಿವೆ:

ಮೂಡುಬಿದಿರೆ, ಕಾರ್ಕಳ ಮತ್ತು ಶ್ರವಣಬೆಳಗೊಳದಂತಹ ಪ್ರಮುಖ ಕೇಂದ್ರಗಳಿಗೆ ಪ್ರವಾಸ ಕೈಗೊಂಡು ಅಳಿವಿ ನಂಚಿನಲ್ಲಿದ್ದ ಸಾವಿರಾರು ತಾಳೆಗರಿಗಳನ್ನು ಸಂಗ್ರಹಿಸಿದರು. ಸಂಗ್ರಹಿಸಿದ ಹಸ್ತಪ್ರತಿಗಳ ಕಾಲ ಮತ್ತು ಕರ್ತೃತ್ವವನ್ನು ವೈಜ್ಞಾನಿಕ

ವಾಗಿ ವರ್ಗೀಕರಿಸಿದರು. ಅಪರೂಪದ ಜೈನ ಸಾಹಿತ್ಯ ಕೃತಿಗಳನ್ನು ಲಿಪ್ಯಂತರಗೊಳಿಸಿ ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿದರು.

ಶಾಂತಿರಾಜ ಶಾಸ್ತ್ರಿಗಳು ಕನ್ನಡ ಗ್ರಂಥ ಸಂಪಾದನೆಯ ಕ್ಷೇತ್ರದಲ್ಲಿ ಹೊಸ ಇತಿಹಾಸ ಬರೆದವರು. ಇವರ ಸಂಪಾದನ ಕಾರ್ಯವು ಕೇವಲ ಪಠ್ಯದ ನಕಲಾಗಿರದೆ, ಕವಿ–ಕೃತಿ ವಿಮರ್ಶೆ, ವಿವರವಾದ ಪ್ರಸ್ತಾವನೆ, ಪಾರಿಭಾಷಿಕ ಪದಕೋಶ ಮತ್ತು ವಿಮರ್ಶಾತ್ಮಕ ಟಿಪ್ಪಣಿಗಳನ್ನು ಒಳಗೊಂಡಿರುತ್ತಿತ್ತು.

ಶಾಂತಿರಾಜ ಶಾಸ್ತ್ರಿಗಳ ಪ್ರಮುಖ ಸಂಪಾದಿತ ಕೃತಿಗಳು: ನೇಮಿಜಿನೇಶ ಸಂಗತಿ–ಮಂಗರಸನ ಕಾಲದ ನಿರ್ಣಯದೊಂದಿಗೆ ಸಂಪಾದಿಸಿದ ಕಾವ್ಯ. ನಾಗಕುಮಾರ ಚರಿತೆ–ಭಾಮಿನೀಷಟ್ಪದಿಯ ಪ್ರಮುಖ ಕೃತಿ. ಶತಕತ್ರಯ–ರತ್ನಾಕರವರ್ಣಿಯ ಶತಕಗಳ ಸಂಕಲನ. ಪ್ರಮೇಯ ರತ್ನಾಲಂಕಾರ–ಸಂಸ್ಕೃತ ಶಾಸ್ತ್ರ ಗ್ರಂಥದ ಸಂಪಾದನೆ.

ಶಾಸ್ತ್ರಿಗಳ ಸಾಹಿತ್ಯಕ ಬದುಕಿನ ಶ್ರೇಷ್ಠ ಸಾಧನೆ ಎಂದರೆ ಸಂಸ್ಕೃತದ 'ಮಹಾಪುರಾಣ'ವನ್ನು (ಆದಿಪುರಾಣ ಮತ್ತು ಉತ್ತರಪುರಾಣ) ಕನ್ನಡಕ್ಕೆ ತಂದದ್ದು. ಒಟ್ಟು ೭೬ಪರ್ವಗಳನ್ನು ಒಳಗೊಂಡ ಈ ಬೃಹತ್ ಕೃತಿಗಾಗಿ ಅವರು ಒಂಬತ್ತು ವರ್ಷಗಳ ಕಾಲ ನಿರಂತರ ಶ್ರಮಿಸಿದರು. ಡಾ. ಹಾ.ಮಾ. ನಾಯಕರು ಈ ಕಾರ್ಯವನ್ನು ಕುರಿತು, ''ಶಾಂತಿರಾಜ ಶಾಸ್ತ್ರಿಗಳು ಈ ದೈತ್ಯ ಕೆಲಸವನ್ನು ಒಂದು ತಪಸ್ಸಿನಂತೆ ನಿರ್ವಹಿಸಿದರು... ಇದು ಕನ್ನಡ ಸಾಹಿತ್ಯಕ್ಕೆ ಒಂದು ಅಕ್ಷಯ ನಿಧಿ''ಎಂದು ಪ್ರಶಂಸಿಸಿದ್ದಾರೆ.

ಸಮಾಜ ಸುಧಾರಣೆ, ಧಾರ್ಮಿಕ ಜಾಗೃತಿ ಮತ್ತು ಸಮುದಾಯದ ಸಂಘಟಿತ ಪ್ರಗತಿಗಾಗಿ ಶಾಸ್ತ್ರಿಗಳು ಪತ್ರಿಕೋದ್ಯಮವನ್ನು ಅತ್ಯಂತ ಪರಿಣಾಮಕಾರಿ ಯಾದ ಸಾಧನವಾಗಿ ಬಳಸಿಕೊಂಡರು. ಅವರ ದೃಷ್ಟಿಯಲ್ಲಿ ಪತ್ರಿಕೆಗಳು ಕೇವಲ ಸುದ್ದಿಮಾಧ್ಯಮಗಳಲ್ಲ; ಅವು ಜ್ಞಾನಪ್ರಸಾರ, ಚಿಂತನೆಗಳ ವಿನಿಮಯ ಮತ್ತು ಸಮಾಜಮುಖಿ ಚಳವಳಿಗಳ ವೇದಿಕೆಗಳಾಗಿರಬೇಕು. ಈ ಹಿನ್ನೆಲೆಗಳಲ್ಲಿ ಅವರು ಕೈಗೊಂಡ ಪ್ರಮುಖ ಪ್ರಯತ್ನಗಳು ಗಮನಿಸತಕ್ಕವು.

೧೯೧೨ರಲ್ಲಿ ಪ್ರಾರಂಭವಾದ 'ಜೈನಬಂಧು'ಪತ್ರಿಕೆ ಜೈನಸಮುದಾಯದ ಒಳಸಂಘಟನೆಗೆ ಮಹತ್ತ್ವದ ಮೈಲುಗಲ್ಲಾಗಿತ್ತು. ಈ ಪತ್ರಿಕೆಯ ಮೂಲಕ ಶಾಸ್ತ್ರಿಗಳು

ಜೈನಧರ್ಮದ ತತ್ತ್ವಗಳನ್ನು ಸರಳ ಹಾಗೂ ಬೋಧನಾತ್ಮಕ ಶೈಲಿಯಲ್ಲಿ ಪರಿಚಯಿಸಿದರು.

ಸಮುದಾಯದ ಶೈಕ್ಷಣಿಕ ಹಿನ್ನಡೆಯನ್ನು ನಿವಾರಿಸುವುದು ಇದರ ಪ್ರಮುಖ ಉದ್ದೇಶವಾಗಿತ್ತು. ಜೈನ ಯುವಜನರಲ್ಲಿ ಅಧ್ಯಯನಾಸಕ್ತಿ ಮತ್ತು ನೈತಿಕ ಮೌಲ್ಯಗಳ ಬೆಳವಣಿಗೆಯನ್ನು ಉತ್ತೇಜಿಸಲಾಯಿತು. ಧಾರ್ಮಿಕ ಆಚರಣೆಗಳ ಜೊತೆಗೆ ಸಾಮಾಜಿಕ ಜವಾಬ್ದಾರಿತನದ ಅರಿವು ಮೂಡಿಸುವ ಲೇಖನಗಳು ಪ್ರಕಟವಾಗುತ್ತಿದ್ದುವು. ವಿವಿಧ ಪ್ರದೇಶಗಳ ಜೈನ ಸಮುದಾಯಗಳ ನಡುವೆ ಬಾಂಧವ್ಯವನ್ನು ಬಲಪಡಿಸುವಲ್ಲಿ ಈ ಪತ್ರಿಕೆ ಪ್ರಮುಖ ಪಾತ್ರವಹಿಸಿತು. ಇದರಿಂದ ಜೈನಬಂಧು ಕೇವಲ ಧಾರ್ಮಿಕ ಪತ್ರಿಕೆಯಾಗಿ ಮಾತ್ರ ಉಳಿಯದೆ, ಸಮುದಾಯದ ಸಂಘಟನಾ ಚಟುವಟಿಕೆಗಳಿಗೆ ಕೇಂದ್ರಬಿಂದುವಾಗಿ ರೂಪುಗೊಂಡಿತು.

೧೯೧೭ರಲ್ಲಿ ಆರಂಭವಾದ 'ವಿವೇಕಾಭ್ಯುದಯ'ಪತ್ರಿಕೆ ಶಾಸ್ತ್ರಿಗಳ ವಿಶಾಲವಾದ ಸಾಂಸ್ಕೃತಿಕ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತದೆ. ಆರ್ಥಿಕ ಸಂಕಷ್ಟಗಳ ನಡುವೆಯೂ ಅವರು ಈ ಪತ್ರಿಕೆಯನ್ನು ನಿರಂತರವಾಗಿ ನಡೆಸಿದುದು ಅವರ ಬದ್ಧತೆಯನ್ನು ಸ್ಪಷ್ಟಪಡಿಸುತ್ತದೆ.

ಸಾಹಿತ್ಯ, ಸಂಸ್ಕೃತಿ ಮತ್ತು ತತ್ತ್ವಚಿಂತನೆಗಳ ಪ್ರಸಾರ ಇದರ ಪ್ರಮುಖ ಧ್ಯೇಯವಾಗಿತ್ತು. ಕನ್ನಡ ಸಾಹಿತ್ಯದ ವಿಸ್ತರಣೆಗೆ ಹಾಗೂ ಹೊಸ ಲೇಖಕರ ಉತ್ತೇಜನಕ್ಕೆ ವೇದಿಕೆಯಾಗಿತ್ತು. ಸಮಾಜದಲ್ಲಿ ವೈಚಾರಿಕ ಚಿಂತನೆ ಮತ್ತು ವಿವೇಕವನ್ನು ಬೆಳೆಸುವ ಲೇಖನಗಳು ಪ್ರಕಟವಾಗುತ್ತಿದ್ದುವು. ಧಾರ್ಮಿಕ ಚಿಂತನೆಗಳನ್ನು ಸಮಕಾಲೀನ ಸಾಮಾಜಿಕ ಸಮಸ್ಯೆಗಳೊಂದಿಗೆ ಸಂವಾದಗೊಳಿಸುವ ಪ್ರಯತ್ನವೂ ಇಲ್ಲಿ ಕಂಡುಬರುತ್ತದೆ. ಈ ಪತ್ರಿಕೆಯ ಮೂಲಕ ಶಾಸ್ತ್ರಿಗಳು ಧರ್ಮ ಮತ್ತು ಆಧುನಿಕತೆ ನಡುವೆ ಸಮತೋಲನ ಸಾಧಿಸುವ ಬೌದ್ಧಿಕ ವಾತಾವರಣವನ್ನು ನಿರ್ಮಿಸಿದರು.

ಒಟ್ಟಿನಲ್ಲಿ, ಶಾಸ್ತ್ರಿಗಳ ಪತ್ರಿಕೋದ್ಯಮವು ಕೇವಲ ಮಾಹಿತಿ ಹಂಚಿಕೆಗೆ ಸೀಮಿತವಾಗಿರದೆ, ಅದು ಒಂದು ಸಾಮಾಜಿಕ ಚಳವಳಿಯ ರೂಪ ಪಡೆದಿತ್ತು. ಅವರ ಸಂಘಟನಾ ಚತುರತೆ, ವಿಚಾರಪ್ರಚಾರದ ದಕ್ಷತೆ ಮತ್ತು ಧ್ಯೇಯನಿಷ್ಠೆ, ಜಾಗೃತಿ ಮತ್ತು ಸಾಂಸ್ಕೃತಿಕ ಪುನರುಜ್ಜೀವನಕ್ಕೆ ದಾರಿತೋರಿಸಿತು.

ಶಾಸ್ತ್ರಿಗಳ ಸಂಶೋಧನ ಕಾರ್ಯವು ಕೇವಲ ಪಠ್ಯ ಸಂಪಾದನೆಗೆ ಸೀಮಿತವಾಗಿರದೆ, ಐತಿಹಾಸಿಕ ನಿಖರತೆ, ಮೂಲಾಧಾರಗಳ ವಿಮರ್ಶಾತ್ಮಕ ಪರಿಶೀಲನೆ ಮತ್ತು ಪಠ್ಯಪರಂಪರೆಯ ಪುನಾರಚನೆ ಎಂಬ ಮೂರು ಪ್ರಮುಖ ಆಧಾರಗಳ ಮೇಲೆ ನಿರ್ಮಿತವಾಗಿದೆ.

ಶಾಸ್ತ್ರಿಗಳು ಸಂಪಾದಿಸಿದ 'ನೇಮಿಜಿನೇಶ ಸಂಗತಿ' ಕೃತಿ ಅವರ ಸಂಶೋಧನ ವಿಧಾನಕ್ಕೆ ದಿಟ್ಟ ಉದಾಹರಣೆಯಾಗಿದೆ. ಈ ಕೃತಿಯ ವಿಮರ್ಶಾತ್ಮಕ ಸಂಪಾದನೆಯ ಸಂದರ್ಭದಲ್ಲಿ ಅವರು ಪಾಠಾಂತರಗಳನ್ನು ಸೂಕ್ಷ್ಮವಾಗಿ ಹೋಲಿಸಿ, ಮೂಲಪಾಠದ ವಿಶ್ವಾಸಾರ್ಹ ಆವೃತ್ತಿಯನ್ನು ಸ್ಥಾಪಿಸಲು ಪ್ರಯತ್ನಿಸಿದರು. ಕೃತಿಯೊಳಗಿನ ವಂಶಾವಳಿ ಉಲ್ಲೇಖಗಳು, ಭೂಗೋಳೀಯ ಸೂಚನೆಗಳು ಮತ್ತು ಕಾಲಪ್ರಮಾಣದ ಲಕ್ಷಣಗಳನ್ನು ವಿಶ್ಲೇಷಿಸಿ, ಮೂರನೆಯ ಮಂಗರಸನು ಕಲ್ಲಹಳ್ಳಿ ಅರಮನೆಯ ಜೈನ ಮನೆತನದ ದೊರೆಯೆಂದು ನಿರ್ಣಯಿಸಿದರು. ಶಾಸನಾಧಾರಗಳು, ವಂಶವೃಕ್ಷ ದಾಖಲೆಗಳು ಹಾಗೂ ಇತರ ಸಾಹಿತ್ಯಕ ಮೂಲಗಳನ್ನು ಪರಸ್ಪರ ಹೋಲಿಕೆ ಮಾಡುವ ಮೂಲಕ ತಮ್ಮ ನಿರ್ಣಯಕ್ಕೆ ದೃಢವಾದ ಆಧಾರ ಒದಗಿಸಿದರು. ಈ ವಿಧಾನವು ಕೇವಲ ಪಠ್ಯಾರ್ಥ ಸ್ಪಷ್ಟೀಕರಣವಲ್ಲ; ಅದು ಇತಿಹಾಸದ ಪುನರ್‌ನಿರ್ಮಾಣಕ್ಕೆ ಸಂಬಂಧಿಸಿದ ಶಾಸ್ತ್ರೀಯ ಪ್ರಯತ್ನವಾಗಿದೆ. ಮೈಸೂರು ಅರಸರ ಮತ್ತು ಕಲ್ಲಹಳ್ಳಿಯ ಜೈನ ಮನೆತನದ ನಡುವಿನ ಸಂಬಂಧವನ್ನು ಶಾಸ್ತ್ರಿಗಳು ಸಾಕ್ಷ್ಯಾಧಾರಗಳೊಂದಿಗೆ ಪುನರ್‌ಸ್ಥಾಪಿಸಿದರು. ಇದರಿಂದ ಸ್ಥಳೀಯ ಜೈನ ಪ್ರಭುಕುಲಗಳ ರಾಜಕೀಯ ಪಾತ್ರ ಮತ್ತು ಅವರ ಸಾಂಸ್ಕೃತಿಕ ಕೊಡುಗೆಗಳ ಬಗ್ಗೆ ಹೊಸ ದೃಷ್ಟಿಕೋನ ದೊರಕಿತು. ಮೈಸೂರು ರಾಜ್ಯದ ಪ್ರಾರಂಭಿಕ ಇತಿಹಾಸವನ್ನು ಅರ್ಥಮಾಡಿಕೊಳ್ಳುವಲ್ಲಿ ಈ ವಿಚಾರವು ಪ್ರಮುಖ ಕೊಂಡಿಯಾಗಿ ಪರಿಣಮಿಸುತ್ತದೆ.

ಶಾಸ್ತ್ರಿಗಳ ಈ ರೀತಿಯ ಸಂಶೋಧನೆ ಕನ್ನಡ ಸಾಹಿತ್ಯ ಮತ್ತು ಇತಿಹಾಸ ಅಧ್ಯಯನ ಕ್ಷೇತ್ರದಲ್ಲಿ ನಿಚ್ಚಳದ ಪ್ರಭಾವ ಬೀರಿದೆ. ಇದರಿಂದ ಪುರಾತನ ಕೃತಿಗಳ ಪುನರ್‌ಮೌಲ್ಯಮಾಪನಕ್ಕೆ ದಾರಿ ತೆರೆಯಿತು. ಜೈನ ಸಾಹಿತ್ಯ ಪರಂಪರೆಯ ಅಧ್ಯಯನಕ್ಕೆ ಹೊಸ ಗಂಭೀರತೆ ತಂದಿತು. ಇತಿಹಾಸ ಮತ್ತು ಸಾಹಿತ್ಯವನ್ನು ಪರಸ್ಪರ ಸಂಬಂಧಿಸಿದ ಅಧ್ಯಯನ ಕ್ಷೇತ್ರಗಳಾಗಿ ನೋಡುವ ಪ್ರವೃತ್ತಿಗೆ ಉತ್ತೇಜನ ನೀಡಿತು. ಶಾಸ್ತ್ರಿಗಳ ಸಂಶೋಧನ ದೃಷ್ಟಿಕೋನವು ವೈಜ್ಞಾನಿಕ ಕಟ್ಟುನಿಟ್ಟಿನೊಂದಿಗೆ ಮಾನವಿಕ ವಿಜ್ಞಾನಗಳ ಸೂಕ್ಷ್ಮತೆಯನ್ನು ಸಂಯೋಜಿಸಿದ ಅಪೂರ್ವ ಮಾದರಿಯಾಗಿದೆ.

ಅವರ ಕಾರ್ಯವು ಕೇವಲ ಒಂದು ಕೃತಿಯ ಸಂಪಾದನೆಗೆ ಸೀಮಿತವಾಗದೆ, ಸಮಗ್ರ ಇತಿಹಾಸದ ಪುನರ್‌ವ್ಯಾಖ್ಯಾನದ ದಿಕ್ಕಿನಲ್ಲಿ ಮಹತ್ತ್ವದ ಹೆಜ್ಜೆಯಾಗಿದೆ.

ಶಾಂತಿರಾಜ ಶಾಸ್ತ್ರಿ ಅವರು ೧೯೫೨ರಲ್ಲಿ ನಿಧನರಾದರು. ಅವರ ಸ್ಮರಣಾರ್ಥ ವಾಗಿ ಸ್ಥಾಪನೆಯಾದ 'ಪಂಡಿತ ಎ. ಶಾಂತಿರಾಜ ಶಾಸ್ತ್ರಿ ಟ್ರಸ್ಟ್'ಅವರ ಅನೇಕ ಅಪ್ರಕಟಿತ ಕೃತಿಗಳನ್ನು ಪುನರ್ ಮುದ್ರಿಸಿ ಸಾಹಿತ್ಯ ಲೋಕಕ್ಕೆ ಅರ್ಪಿಸಿದೆ. ೧೯೮೮ರಲ್ಲಿ ಶಾಸ್ತ್ರಿಗಳ ಶತಮಾನೋತ್ಸವವನ್ನು ವಿಜೃಂಭಣೆಯಿಂದ ಆಚರಿಸ ಲಾಯಿತು.

ಪಂಡಿತ ಎ. ಶಾಂತಿರಾಜ ಶಾಸ್ತ್ರಿಗಳು ಸಂಸ್ಕೃತ, ಪ್ರಾಕೃತ ಮತ್ತು ಕನ್ನಡ ಭಾಷೆಗಳ ನಡುವೆ ಸಾಹಿತ್ಯಕ ಸಂಕೇತವಾಗಿ ನಿಂತ 'ಸಮನ್ವಯ ಚೇತನ'. ಜೈನ ಪರಂಪರೆಯ ಶ್ರೇಷ್ಠತೆಯನ್ನು ಕಾಪಾಡುತ್ತಲೇ ಅದನ್ನು ಆಧುನಿಕ ಸಂಶೋಧನ ಶಿಸ್ತಿಗೆ ಒಳಪಡಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಅವರ ಅಚಲ ಸಾಹಿತ್ಯ ನಿಷ್ಠೆ ಮತ್ತು ವೈಜ್ಞಾನಿಕ ಮನೋಭಾವವು ಇಂದಿನ ವಿದ್ವಾಂಸರಿಗೆ ಸದಾ ಸ್ಫೂರ್ತಿ.

ಪಂಡಿತ ಎ. ಶಾಂತಿರಾಜ ಶಾಸ್ತ್ರಿಗಳು ಕೃತಿಗಳು:

ಅನುವಾದಿತ ಕೃತಿಗಳು

1. ಮಹಾಪುರಾಣ: ಜೈನ ಪೌರಾಣಿಕ ಪರಂಪರೆಯ ಪ್ರಮುಖ ಕೃತಿ; ತೀರ್ಥಂಕರರ ಜೀವನ, ಧರ್ಮತತ್ತ್ವಗಳನ್ನು ಕನ್ನಡಕ್ಕೆ ಸುಗಮವಾಗಿ ಪರಿಚಯಿಸುತ್ತದೆ.
2. ಪರಮಾತ್ಮ ಪ್ರಕಾಶ: ಆತ್ಮತತ್ತ್ವ, ಮೋಕ್ಷಮಾರ್ಗ ಮತ್ತು ಆಧ್ಯಾತ್ಮಿಕ ಜಾಗೃತಿಯ ಕುರಿತ ತತ್ತ್ವಚಿಂತನೆಯ ಗ್ರಂಥ.
3. ಸಜ್ಜನಚಿತ್ತವಲ್ಲಭ: ಸಜ್ಜನರ ಗುಣಗಳು, ನೈತಿಕ ಮೌಲ್ಯಗಳು ಮತ್ತು ಧಾರ್ಮಿಕ ಜೀವನದ ಆದರ್ಶಗಳನ್ನು ವಿವರಿಸುವ ಕೃತಿ.
4. ಪುರುಷಾರ್ಥ ಸಿದ್ಧ್ಯುಪಾಯ: ಮಾನವ ಜೀವನದ ನಾಲ್ಕು ಪುರುಷಾರ್ಥಗಳ ಸಾಧನೆಗೆ ಮಾರ್ಗದರ್ಶಕವಾದ ಧರ್ಮೋಪದೇಶಾತ್ಮಕ ಗ್ರಂಥ.
5. ಧರ್ಮಪರೀಕ್ಷೆ: ಧರ್ಮದ ನಿಜಸ್ವರೂಪವನ್ನು ಪರಿಶೀಲಿಸುವ, ನೀತಿ–ಅನೀತಿ ವಿಚಾರಗಳನ್ನು ತಾರ್ಕಿಕವಾಗಿ ವಿಶ್ಲೇಷಿಸುವ ಕೃತಿ.

ಸಂಪಾದಿತ ಕೃತಿಗಳು

1. ನೇಮಿಜಿನೇಶ ಸಂಗತಿ: ಜೈನ ಇತಿಹಾಸ ಮತ್ತು ವಂಶಪರಂಪರೆಯ ವಿವರಗಳನ್ನು ಒಳಗೊಂಡ ಕೃತಿ; ಶಾಸ್ತ್ರೀಯ ಸಂಪಾದನೆಯ ಮೂಲಕ ಐತಿಹಾಸಿಕ ಮಾಹಿತಿಗೆ ಸ್ಪಷ್ಟತೆ ನೀಡಲಾಗಿದೆ.

2. ನಾಗಕುಮಾರ ಚರಿತೆ: ಜೈನ ಪರಂಪರೆಯ ಪ್ರಸಿದ್ಧ ವ್ಯಕ್ತಿಯ ಜೀವನಚರಿತ್ರೆ; ಧರ್ಮನಿಷ್ಠೆ ಮತ್ತು ಆದರ್ಶ ಜೀವನದ ಚಿತ್ರಣ

3. ಶತಕತ್ರಯ: ನೈತಿಕ, ಧಾರ್ಮಿಕ ಮತ್ತು ತತ್ತ್ವಚಿಂತನೆಯ ವಿಷಯಗಳನ್ನು ಒಳಗೊಂಡ ಶತಕಗಳ ಸಂಕಲನ.

4. ಜಿನಭಕ್ತಿಸಾರ: ಜೈನ ಭಕ್ತಿ ಪರಂಪರೆಯ ಸಾರವನ್ನು ಒಳಗೊಂಡ ಕೃತಿ; ಭಕ್ತಿ, ಆಚರಣೆ ಮತ್ತು ತತ್ತ್ವಗಳ ಸಂಯೋಜನೆಯನ್ನೊಳಗೊಂಡಿದೆ.

ಪೌರಾಣಿಕ ಕೃತಿಗಳು

1. ಶ್ರೀ ಗೊಮ್ಮಟೇಶ್ವರ ಚರಿತೆ: ಗೊಮ್ಮಟೇಶ್ವರ ಸ್ವಾಮಿಯ ಜೀವನ, ತ್ಯಾಗ ಮತ್ತು ವೈರಾಗ್ಯದ ಮಹತ್ತ್ವವನ್ನು ವಿವರಿಸುವ ಪೌರಾಣಿಕ ಕೃತಿ.

2. ಶ್ರೀ ಬಾಹುಬಲಿಸ್ವಾಮಿ ಚರಿತೆ: ಬಾಹುಬಲಿಯ ಆತ್ಮಜಯ, ತಪಸ್ಸು ಮತ್ತು ಮೋಕ್ಷ ಸಾಧನೆಯ ಕಥವಿದೆನ.

3. ಜೈನದರ್ಶನ: ಜೈನ ತತ್ತ್ವಶಾಸ್ತ್ರದ ಮೂಲಭೂತ ಸಿದ್ಧಾಂತಗಳು—ಅಹಿಂಸೆ, ಅನೇಕಾಂತ, ಸ್ಯಾದ್ವಾದ ಇತ್ಯಾದಿಗಳನ್ನು ಪರಿಚಯಿಸುವ ಗ್ರಂಥ.

4. ರತ್ನಕರಂಡಕ ಶ್ರಾವಕಾಚಾರ: ಗೃಹಸ್ಥ ಜೈನರ ಆಚರಣಾ ನಿಯಮಗಳು, ನೈತಿಕ ಮೌಲ್ಯಗಳು ಮತ್ತು ಧರ್ಮಾಚರಣೆಯ ಮಾರ್ಗವನ್ನು ನಿರೂಪಿಸುವ ಶಾಸ್ತ್ರೀಯ ಕೃತಿ.

ಒಟ್ಟಿನಲ್ಲಿ ಈ ಎಲ್ಲ ಕೃತಿಗಳು ಜೈನ ಧರ್ಮ, ತತ್ತ್ವಶಾಸ್ತ್ರ, ನೈತಿಕತೆ ಮತ್ತು ಇತಿಹಾಸವನ್ನು ವಿವಿಧ ಆಯಾಮಗಳಲ್ಲಿ ಪರಿಚಯಿಸುತ್ತವೆ. ಅನುವಾದ, ಸಂಪಾದನೆ ಮತ್ತು ಸ್ವತಂತ್ರ ರಚನೆಗಳ ಮೂಲಕ ಶಾಸ್ತ್ರಿಗಳು ಕನ್ನಡ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ.

❐ ❐ ❐

ಎಚ್. ಶೇಷಯ್ಯಂಗಾರ್

(೧೮೮೮-೧೯೬೮)

ಸಂತೋಷಿ ಸುಬ್ರಹ್ಮಣ್ಯ

ಕನ್ನಡ ಸಾರಸ್ವತಲೋಕದ ಘನ ಗ್ರಂಥಸಂಪಾದಕರಲ್ಲಿ ಎಚ್. ಶೇಷಯ್ಯಂಗಾರ್ಯರು ಅವಿಸ್ಮರಣೀಯರು. ಬಹುಗ್ರಂಥಗಳನ್ನು ರಚಿಸಿಲ್ಲವಾದರೂ ಇವರು ಸಂಪಾದಿಸಿದ ಕೃತಿಗಳಿಗೆ ಬರೆದಿರುವ ಅವತರಣಿಕೆಗಳು ಗ್ರಂಥಸಂಪಾದನ ಕ್ಷೇತ್ರಕ್ಕೆ ದಕ್ಕಿರುವ ವಿದ್ವತ್‌ರತ್ನಗಳು. ಸಂಶೋಧಕರಾಗಿ, ಭಾಷಾವಿಜ್ಞಾನಿಯಾಗಿ, ಶಾಸನ ತಜ್ಞರಾಗಿ, ಗ್ರಂಥಸಂಪಾದಕರಾಗಿ, ಅನುವಾದಕರಾಗಿ, ವಿಮರ್ಶಕರಾಗಿ ಇವರು ಮಾಡಿದ ಶಾಸ್ತ್ರಸೇವೆಯನ್ನು ಪಂಡಿತವಲಯವು ಅತ್ಯಂತ ಗೌರವಾದರಗಳಿಂದ ನೆನೆಯುತ್ತದೆ. ತಮಿಳು ಮಾತೃಭಾಷೆಯಾಗಿದ್ದರೂ ಇಂಗ್ಲಿಷ್, ಸಂಸ್ಕೃತ ಭಾಷೆಗಳಲ್ಲಿ ಪಾಂಡಿತ್ಯ ಪಡೆದು ಅವರು ಕನ್ನಡಕ್ಕೆ ಸಲ್ಲಿಸಿದ ಸೇವೆ ಅಪೂರ್ವ ವಾದುದು. ೧೮೮೮ರಲ್ಲಿ ಜನಿಸಿದ ಶೇಷಯ್ಯಂಗಾರ್ಯರು ಮೂಲತಃ ಮೈಸೂರಿನವರು. ಪ್ರಸಿದ್ಧ ವಿದ್ವನ್ಮಣಿಯಾದ ಪಂಡಿತ ತಿಪ್ಪಯ್ಯ ನವರ ಬಳಿ ಕನ್ನಡ ಮತ್ತು ಸಂಸ್ಕೃತ ಭಾಷೆಗಳನ್ನು ಕಲಿತು ಪರಿಣತಿಯನ್ನು ಹೊಂದಿದರು. ವಿದ್ಯಾಭ್ಯಾಸದ ಅನಂತರ ಶಾಸನಶಾಸ್ತ್ರ ವಿಭಾಗದಲ್ಲಿ ಶಾಸನತಜ್ಞರಾದ ಆರ್. ನರಸಿಂಹಾಚಾರ್ಯರ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸಿ, ಬಳಿಕ ಮೈಸೂರಿನ ಪ್ರಾಚ್ಯ ಸಂಶೋಧನಾ ಸಂಸ್ಥೆಯಲ್ಲಿ ಕೆಲಕಾಲ ದುಡಿದರು. ಸುಮಾರು ೧೯೨೭ ರ ವೇಳೆಗೆ ಮದರಾಸು ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಅಧ್ಯಾಪಕರಾಗಿ ನೇಮಕಗೊಂಡು, ಅಲ್ಲಿಂದಾಚೆಗೆ ಪ್ರಾಚೀನ ಕನ್ನಡ ಶಾಸ್ತ್ರಗ್ರಂಥಗಳ ಸಂಪಾದನೆಯಲ್ಲಿ ಆಳವಾಗಿ ತೊಡಗಿಸಿಕೊಂಡರು.

ಅದಾಗಲೇ ವಿಭಾಗದಲ್ಲಿ ಹಿರಿಯ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದ ಎ. ವೆಂಕಟರಾವ್ ಅವರೊಡಗೂಡಿ ಒಂಬತ್ತು ಅತ್ಯಮೂಲ್ಯವಾದ ಹಳಗನ್ನಡ ಕೃತಿಗಳನ್ನು ವಿದ್ವತ್ಪೂರ್ಣವಾಗಿ ಸಂಪಾದಿಸಿ, ಶಾಸ್ತ್ರೋನ್ನತವಾಗದ ಅವತರಣಿಕೆಯ ಸಹಿತ ಮದರಾಸು ವಿಶ್ವವಿದ್ಯಾಲಯದ ಕನ್ನಡ ಗ್ರಂಥಮಾಲೆಯಲ್ಲಿ ಪ್ರಕಟಿಸಿದರು. ಈ ಮಾಲೆಯಲ್ಲಿ ಮೊದಲು ಪ್ರಕಟಗೊಂಡದ್ದು 'ಶ್ರೀವಿಜಯನ ಕವಿರಾಜಮಾರ್ಗ೦'. ಎ. ವೆಂಕಟರಾವ್(೧೮೮೯–೧೯೩೯) ಆಂಧ್ರಪ್ರದೇಶ ಮೂಲದವರು. ಮಂಗಳೂರಿನಲ್ಲಿ ಬಿ.ಎ. ಮತ್ತು ಎಲ್.ಟಿ. ಪದವಿಗಳನ್ನು ಪಡೆದ ಅವರು, ಕೇರಳ ಹಾಗೂ ಕರ್ನಾಟಕದ ವಿವಿಧ ಭಾಗಗಳಲ್ಲಿ ಶಾಲಾ ನಿರೀಕ್ಷಕ ರಾಗಿಯೂ ಗಣಿತ ಶಿಕ್ಷಕರಾಗಿಯೂ ಸೇವೆ ಸಲ್ಲಿಸಿದರು. ೧೯೨೭ರಲ್ಲಿ ಮದ್ರಾಸ್ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮೊದಲ ಪ್ರಾಧ್ಯಾಪಕರಾಗಿ ನೇಮಕಗೊಂಡಿದ್ದರು. ಅದೇ ವರ್ಷ ವೆಂಕಟರಾವ್ ಅವರು ಇವರಿಗೆ ಸಹೋದ್ಯೋಗಿಯಾಗಿ ಸೇರಿದರು. ವಿಶ್ವವಿದ್ಯಾಲಯದ ಸಂಗ್ರಹದಲ್ಲಿ ತಾಳೆಗರಿಗಳ ರೂಪದಲ್ಲಿದ್ದ ಅನೇಕ ಹಸ್ತಪ್ರತಿಗಳನ್ನು ಅಭ್ಯಸಿಸಿ ಇವರಿಬ್ಬರು ಮುದ್ರಿತ ರೂಪದಲ್ಲಿ ಪ್ರಕಟಿಸಿದ್ದಾರೆ. ವೆಂಕಟರಾವ್ ಅವರು ತೆಲುಗು ಭಾಷೆಯಲ್ಲಿ ಪಾಂಡಿತ್ಯ ಹೊಂದಿದ್ದವರು. ಹಾಗಾಗಿ ತೆಲುಗಿನಿಂದ 'ಚಂದ್ರಗುಪ್ತ ಚಕ್ರವರ್ತಿ' ಎಂಬ ಕಾದಂಬರಿಯನ್ನು ಸರಳ ಕನ್ನಡಕ್ಕೆ ಅನುವಾದಿಸಿದ್ದಾರೆ. ಹಾಗಾಗಿಯೇ ಈ ಇಬ್ಬರು ಪಂಡಿತರ ಹೆಸರುಗಳು ಸಾಮಾನ್ಯವಾಗಿ ಒಟ್ಟೊಟ್ಟಿಗೆ ಉಲ್ಲೇಖವಾಗುತ್ತವೆ. ಆಲೆಮನೆ ವೆಂಕಟರಾವ್ ಅವರ ಅಕಾಲಿಕ ನಿಧನವು (ಅಪಘಾತದಲ್ಲಿ) ಇವರನ್ನು ಬೇರ್ಪಡಿಸುವವರೆಗೆ, ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಇವರು ದೀರ್ಘಕಾಲ ಯುಗಳವಾಗಿಯೇ ಕಾರ್ಯನಿರ್ವಹಿಸಿದ್ದರು. ವೆಂಕಟರಾಯರ ನಿಧನದ ಬಳಿಕ ಶೇಷಯ್ಯಂಗಾರ್ ಎಚ್.ಎಸ್. ರಾಮಸ್ವಾಮಿ ಅಯ್ಯಂಗಾರ್ ಮತ್ತು ಪಿ. ಶ್ರೀನಿವಾಸ ರಾವ್ ಅವರೊಂದಿಗೆ ತಮ್ಮ ಧ್ಯೇಯವನ್ನು ಮುಂದುವರಿಸಿ ಆರು ಗ್ರಂಥಗಳನ್ನು ಸ್ವತಂತ್ರವಾಗಿ ಸಂಪಾದಿಸಿದರು.

ಶೇಷಯ್ಯಂಗಾರ್ ಪ್ರಕಟಿಸಿದ ಕೃತಿಗಳು ಹೀಗಿವೆ:

ಶಾಂತಿಪುರಾಣಂ – ಪೊನ್ನ, 1929, ಮದ್ರಾಸ್, ಪೀಪಲ್ಸ್ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಲಿ.

ಕವಿರಾಜಮಾರ್ಗಂ – ಶ್ರೀವಿಜಯ, 1930, ಕರ್ನಾಟಕ ಗ್ರಂಥಮಾಲೆ, ಮದ್ರಾಸ್ ವಿಶ್ವವಿದ್ಯಾಲಯ

ರಸ ರತ್ನಾಕರ – ಸಾಳ್ವ, 1932

ಅಭಿಧಾನ ವಸ್ತುಕೋಶ – ನಾಗವರ್ಮ–೨, 1933

ಪುಷ್ಪದಂತ ಪುರಾಣ – ಗುಣವರ್ಮ–೨, 1933

ಶಬ್ದಮಣಿದರ್ಪಣ – ಕೇಶಿರಾಜ, 1930, 1938

ಅಭಿಧಾನ ರತ್ನಮಾಲಾ – ಭಟ್ಟ ಹಳಾಯುಧ, 1940 (ಕರ್ನಾಟಕ ಟೀಕೆ)

ಓಷಧಿ ಕೋಶ – ಕರ್ತೃ ಅಜ್ಞಾತ, 1940

ಖಗೇಂದ್ರಮಣಿದರ್ಪಣ – ಮಂಗರಾಜ–೧, 1942

ಇವರು ಸಂಪಾದಿಸಿದ ಒಂಬತ್ತು ಗ್ರಂಥಗಳಲ್ಲಿ ಏಳು ಗ್ರಂಥಗಳು ಶಾಸ್ತ್ರ ಗ್ರಂಥಗಳಾಗಿದ್ದು, 'ಶಾಂತಿಪುರಾಣ' ಮತ್ತು 'ಪುಷ್ಪದಂತಪುರಾಣ'ಗಳು ಕಾವ್ಯಗಳಾಗಿವೆ. ಸಂಪಾದಕರು ಹೆಚ್ಚಿನ ಪ್ರಕಟನೆಗಳಿಗೆ ಬರೆದ ಪ್ರಸ್ತಾವನೆಗಳು ವಿದ್ವತ್ಪೂರ್ಣ ಮಾತ್ರವಲ್ಲದೆ, ಸ್ವತಂತ್ರವಾಗಿಯೇ ನಿಲ್ಲಬಲ್ಲಂತಹ ಗ್ರಂಥಗಳಾಗಿವೆ.

'ಕವಿರಾಜಮಾರ್ಗ'ಕ್ಕೆ ೨೩ ಪುಟದ ದೀರ್ಘ ಅವತರಣಿಕೆಯನ್ನು ಬರೆಯಲಾಗಿದೆ. ಇದರ ಕರ್ತೃವಿನ ಬಗೆಗಿನ ಸಂಪಾದಕರ ನಿರ್ಣಯ, ಅನಂತರದ ಕಾಲದಲ್ಲಿ ತಿರಸ್ಕೃತವಾದರೂ ಮಂಡಿಸಿರುವ ವಾದದ ವೈಖರಿಯಂತೂ ಅರ್ಥಪೂರ್ಣ ವಾಗಿದೆ. ಗ್ರಂಥದ ಸಂಕ್ಷಿಪ್ತ ಪರಿಚಯ ಮಾಡಿಕೊಟ್ಟು ಕೊನೆಯಲ್ಲಿ ಪೊನ್ನನ ಶಾಂತಿನಾಥ ಪುರಾಣಕ್ಕೂ, ಭಾಮಹ, ದಂಡಿ ಮತ್ತಿನ್ನಿತರರ ಗ್ರಂಥಗಳಿಗೂ 'ಕವಿರಾಜಮಾರ್ಗ'ಕ್ಕೂ ಇರುವ ಸಾಮ್ಯವನ್ನು ಪಟ್ಟಿ ಮಾಡಿಕೊಡಲಾಗಿದೆ.

ಇನ್ನು, ಸಾಳ್ವನ 'ರಸರತ್ನಾಕರ'ವು ಕನ್ನಡದ ಕಾವ್ಯಮೀಮಾಂಸೆಗೆ ಒಂದು ಮಹತ್ವದ ಕಾಣಿಕೆ. ಸಾಳ್ವನ ಕಾಲನಿರ್ಣಯಕ್ಕೆ ಸಂಪಾದಕರು ಬಳಸಿಕೊಂಡಿರುವ ಸಾಮಗ್ರಿಯು ಬೆರಗುಗೊಳಿಸುವಂತಿದೆ. ಅವತರಣಿಕೆಯ ಕೊನೆಯಲ್ಲಿ ಸಾಳ್ವನ ಇತರ ಕೃತಿಗಳ ಪರಿಚಯವಿದ್ದು, ಗ್ರಂಥದ ಕೊನೆಯಲ್ಲಿ ಒಂದಲ್ಲ ಎರಡಲ್ಲ, ಒಟ್ಟು ಆರು ಪರಿಶಿಷ್ಟಗಳನ್ನು ಸೇರಿಸಿರುವುದು ನಿಜಕ್ಕೂ ಆಶ್ಚರ್ಯವೆನಿಸುತ್ತದೆ.

'ಅಭಿಧಾನವಸ್ತುಕೋಶ' ಗ್ರಂಥದ ಸಂಪಾದನಕಾರ್ಯದ ಪಾಠನಿರ್ಣಯ ಸಂದರ್ಭದಲ್ಲಿ ಸಂಸ್ಕೃತ ಗ್ರಂಥಗಳಾದ 'ಸಂವಿಧಾನರತ್ನಮಾಲಾ', 'ನಾಮಲಿಂಗಾನುಶಾಸನ' ವರರುಚಿಯ ಮತ್ತು ಧನಂಜಯನ ಕೋಶಗಳನ್ನು ಬಳಸಿಕೊಂಡಿರುವುದು ಸಂಪಾದನ ಕಾರ್ಯದಲ್ಲಿ ಅವರಿಗಿದ್ದ ಹಿಡಿತವನ್ನು ಸಾರುತ್ತದೆ. 'ಪುಷ್ಪದಂತ

ಪುರಾಣ'ದ ಗ್ರಂಥ ಸಂಪಾದನೆಯ ಪರಿಷ್ಕರಣ, ಯೋಗ್ಯ ಪಾಠ ನಿರ್ಣಯ ಮೊದಲಾದ ವಿಧಾನಗಳು ಪ್ರಶಂಸನೀಯವಾಗಿವೆ.

ವಿಸ್ತಾರವಾದ ಅವತರಣಿಕೆ, ಟಿಪ್ಪಣಿ, ಪರಿಶಿಷ್ಟಗಳನ್ನು ನೋಡಿದರೆ, ಶಬ್ದಮಣಿದರ್ಪಣಂ ಗ್ರಂಥವನ್ನು ಕೇವಲ ಒಂದು ಹಸ್ತಪ್ರತಿಯ ಸಹಾಯದಿಂದ ಸಂಪಾದಿಸಲಾಗಿದೆ ಎಂದರೆ ಆಶ್ಚರ್ಯವೇ ಸರಿ. ಈ ಗ್ರಂಥದ ಸಂಪಾದನೆಯಂತೂ ಅತ್ಯಂತ ಮಹತ್ತ್ವಪೂರ್ಣವಾದದ್ದು. ಇದರಲ್ಲಿಯ ಅವತರಣಿಕೆ ಮತ್ತು ಪರಿಶಿಷ್ಟಗಳು ಸಾಹಿತ್ಯಾಸಕ್ತರು, ವಿದ್ಯಾರ್ಥಿಗಳು ಹಾಗೂ ಸಂಶೋಧಕರೆಲ್ಲರಿಗೂ ಏಕಕಾಲದಲ್ಲಿ, ಸಮಾನವಾಗಿ ಸಲ್ಲುವಂಥದ್ದಾಗಿದೆ. ಇದಕ್ಕೆ ದ್ಯೋತಕವೆಂಬಂತೆ, ಡಿ.ಎಲ್. ನರಸಿಂಹಾಚಾರ್ಯರು ತಮ್ಮ ಸಂಪಾದನೆಯ ಕವಿರಾಜಮಾರ್ಗದ ಪ್ರಸ್ತಾವನೆಯಲ್ಲಿ "ಮದರಾಸು ಮುದ್ರಣದಲ್ಲಿರುವ ಅವತರಣಿಕೆಯನ್ನು ಬರೆದ ವಿದ್ವಾಂಸರು ಅಭ್ಯಾಸಗಳ ದೃಷ್ಟಿಯಿಂದ ಏನನ್ನು ಹೇಳಬೇಕು ಅಷ್ಟನ್ನೂ ಹೇಳಿಯೇ ಇದ್ದಾರೆ. ಬರೆದದ್ದನ್ನೇ ಬರೆಯುವದರಲ್ಲಿ ಏನು ಪ್ರಯೋಜನ? ಇದಕ್ಕಿಂತ ಮೇಲೆ ಹೇಳಲಿಕ್ಕೆ ಏನೂ ಇಲ್ಲ" ಎಂದಿರುವುದು ಶೇಷಯ್ಯಂಗಾರ್ಯರ ಸಂಪಾದನ ಕಾರ್ಯಕ್ಕೆ ಸಂದಿರುವ ಬಹುದೊಡ್ಡ ಪ್ರಶಸ್ತಿಯಾಗಿದೆ. ಡಿಎಲ್ಎನ್ ಅವರಂತಹ ಮಹನೀಯರೇ ಇಂತಹ ನಿಲುವನ್ನು ತಾಳಿದ್ದಾರೆಂದರೆ, ಈ ಆವೃತ್ತಿಯ ಸಂಪಾದನೆಯ ಮಹತ್ತ್ವ ತಿಳಿಯದೇ ಇರದು.

ಇನ್ನು ನೇಮಿನಾಥಪುರಾಣಕ್ಕೆ ಒಂದು ವಿಮರ್ಶಾತ್ಮಕ ಮುನ್ನುಡಿಯನ್ನು ಬರೆದುದಲ್ಲದೆ, ಪ್ರತಿಕಾರರಿಂದ ಸಂಭವಿಸಿರ ಬಹುದಾದ ಅಕ್ಷರ ದೋಷಗಳನ್ನು ಸರಿಪಡಿಸಿರುವುದು ಅವರ ಶ್ರಮ ಸಹಿಷ್ಣುತೆಗೆ ಸಾಕ್ಷಿ. ಗ್ರಂಥದ ಪ್ರತಿ ಪುಟದ ಅಡಿಯಲ್ಲಿಯೂ ಭಿನ್ನ ಪಾಠಗಳನ್ನು ನೀಡಿ ಕೆಲವೆಡೆ ಆ ಪಾಠಗಳ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ತಿಳಿಸಿರುವುದು ಉನ್ನತ ಸಂಪಾದನೆಗೆ ಸಾಕ್ಷಿ. ಕವಿ–ಕಾವ್ಯ ವಿಚಾರದಲ್ಲಿ ಕಾವ್ಯ ವಸ್ತು ವಿಶೇಷಗಳು, ಆಶ್ರಯದಾತನ ಸ್ಥಳ, ಅಂದಿನ ಸಾಹಿತ್ಯ ಪರಿಸರಗಳನ್ನು ವಿಸ್ತಾರವಾಗಿ ಪರಾಮರ್ಶಿಸಲಾಗಿದೆ.

ಅಯ್ಯಂಗಾರರು ಸಂಪಾದಿಸಿದ ಕೊನೆಯ ಕೃತಿ ಎಂದರೆ 'ಖಗೇಂದ್ರಮಣಿದರ್ಪಣಂ'. ವೈದ್ಯಕೀಯ ಲೋಕಕ್ಕೆ ಬಹೂಪಯುಕ್ತವಾದ ಈ ಗ್ರಂಥವನ್ನು ದೋಷವಿದೂರವಾಗಿ ಸಂಪಾದಿಸಿರುವುದು ಸಂಪಾದನ ಕ್ಷೇತ್ರಕ್ಕೆ ಇವರು ಮಾಡಿರುವ

ಬಹುದೊಡ್ಡ ಸೇವೆ. ಗ್ರಂಥಾದಿಯಲ್ಲಿ ಕವಿ–ಕಾವ್ಯವಿಚಾರ, ಗ್ರಂಥವಿಚಾರ, ಕೃತಿವಿಚಾರದ ಜೊತೆ ಮೂರು ಪರಿಶಿಷ್ಟಗಳನ್ನು ನೀಡಲಾಗಿದೆ. ಗ್ರಂಥದ ಒಡಲಲ್ಲಿ ಪ್ರತಿ ವಿಷಯಕ್ಕೂ ಉಪಶೀರ್ಷಿಕೆಯನ್ನು ನೀಡಿ ಅದರ ವಿವರವನ್ನು ಟಿಪ್ಪಣಿಯಲ್ಲಿ ಕೊಟ್ಟು ಉಪಕರಿಸಿದ್ದಾರೆ.

ಪಠ್ಯವಿಮರ್ಶೆಯ (literary criticism) ತತ್ತ್ವಗಳು ವಿಕಸನಗೊಳ್ಳುತ್ತಿದ್ದ ಕಾಲದಲ್ಲಿ, ಇದಕ್ಕೊಂದು ಸ್ಪಷ್ಟ ರೂಪ ನೀಡಿದ ಮಹನೀಯರಲ್ಲಿ ಶೇಷಯ್ಯಂಗಾರ್ಯರು ಅಗ್ರಪಂಕ್ತಿಯಲ್ಲಿದ್ದಾರೆ.

ಶೇಷಯ್ಯಂಗಾರ್ ಅವರು ಎಚ್.ಎಸ್. ರಾಮಸ್ವಾಮಿ ಅಯ್ಯಂಗಾರ್ ಅವರೊಂದಿಗೆ ನಾಗವರ್ಮನ 'ಛಂದೋಂಬುಧಿ'ಯನ್ನು (೧೯೬೭) ಸಂಪಾದಿಸಿದ್ದಾರೆ. ಪಿ. ಶ್ರೀನಿವಾಸರಾವ್ ಅವರೊಂದಿಗೆ 'ಅಶ್ವಶಾಸ್ತ್ರ'ವನ್ನು ಸಂಪಾದಿಸಿದ್ದಾರೆ (ಅಭಿನವಚಂದ್ರರ 'ಅಶ್ವಶಾಸ್ತ್ರಂ', ೧೯೫೦, ಮದ್ರಾಸ್ ಸರ್ಕಾರದ ಪ್ರಾಚ್ಯಗ್ರಂಥಮಾಲೆ).

ಶೇಷಯ್ಯಂಗಾರ್ ಅವರು ಸ್ವತಂತ್ರವಾಗಿ ಸಂಪಾದಿಸಿದ ಪ್ರಮುಖ ಕೃತಿಗಳು ಹೀಗಿವೆ:

ಲೋಕೋಪಕಾರ – ಚಾವುಂಡರಾಯ, 1950

ಪಾರ್ಶ್ವನಾಥಪುರಾಣ – ಪಾರ್ಶ್ವಪಂಡಿತ, 1960 (ಶ್ರೀವತ್ಸ ಗ್ರಂಥಮಾಲೆ, ಮದ್ರಾಸ್)

ನೇಮಿನಾಥಪುರಾಣ – ಕರ್ಣಪಾರ್ಯ, 1940, ಮದ್ರಾಸ್ ವಿಶ್ವವಿದ್ಯಾಲಯ

ರಟ್ಟಮತ – ರಟ್ಟಕವಿ, 1950 (ಜಿ.ಓ.ಎಂ.ಎಲ್.)

ಜೀವ ಸಂಬೋಧನೆ – ಬಂಧುವರ್ಮ, 1955

ಜಿನಾಕ್ಷರಮಾಲೆ – ಪೊನ್ನ, 1940 (ಆನಲ್ಸ್ ಆಫ್ ಓರಿಯಂಟಲ್ ರಿಸರ್ಚ್, ಸಂಚಿಕೆ 4, ಸಂಖ್ಯೆ 2)

ಮನ್ಮಥವಿಜಯ – ಮಲ್ಲಕವಿ

ಕವಿಜಿಹ್ವಾಬಂಧನಂ – ಈಶ್ವರಕವಿ, 1939–41 (ಎ.ಓ.ಆರ್. ಸಂಚಿಕೆಗಳು)

ಪಠ್ಯಸಮಾಲೋಚನೆ ಹಾಗೂ ಪ್ರಾಚೀನ ಕನ್ನಡ ಕೃತಿಗಳ ಪ್ರಕಾಶನದಲ್ಲಿ ಮಹತ್ಕಾರ್ಯವನ್ನು ನೆರವೇರಿಸಿದ ಈ ಮಹ ನೀಯರ ಕೊಡುಗೆ ಅತ್ಯಂತ ಪ್ರಶಂಸನೀಯವಾದುದು.

ಪ್ರಾತಃಸ್ಮರಣೀಯರೆನಿಸಿರುವ ಶೇಷಯ್ಯಂಗಾರ್ಯರ ಗ್ರಂಥಸಂಪಾದನ ರೀತಿ, ಅಧ್ಯಯನಶೀಲ ಸಂಶೋಧನೆ, ಪ್ರಜ್ಞ್ವಲ ಪಾಂಡಿತ್ಯದ ಸದುಪಯೋಗವನ್ನು ವಿದ್ವದ್ವಲಯ ಸಂಪೂರ್ಣವಾಗಿ ಪಡೆದುಕೊಳ್ಳುವ ಪ್ರಯತ್ನಗಳು ಇನ್ನೂ ಹೆಚ್ಚಾಗಿ ಆಗಬೇಕಿವೆ.

ಇವರು ೧೯೬೮ನೆಯ ಇಸವಿಯಲ್ಲಿ ನಿಧನರಾದರು.

❐ ❐ ❐

ಎ.ಆರ್. ಕೃಷ್ಣಶಾಸ್ತ್ರಿ
(೧೮೯೦–೧೯೬೮)

ನಾಗರತ್ನಮ್ಮ

ಪ್ರಾಧ್ಯಾಪಕ, ಪತ್ರಕರ್ತ, ಲೇಖಕ, ವಾಗ್ಮಿ, ವಿದ್ವಾಂಸ, ಕನ್ನಡ ಭಾಷಾ ಸಾಹಿತ್ಯಗಳ ಪ್ರಸಾರಕ, ಸಂಘಟಕರಾಗಿದ್ದವರು ಎ.ಆರ್. ಕೃಷ್ಣಶಾಸ್ತ್ರಿ. ಇವರು ಚಿಕ್ಕಮಗಳೂರು ಜಿಲ್ಲೆಯ ಅಂಬಳೆಯ ರಾಮಕೃಷ್ಣಶಾಸ್ತ್ರಿ ಹಾಗೂ ಶಂಕರಮ್ಮ ಅವರಿಗೆ ೧೨.೦೨.೧೮೯೦ ರಂದು ಮೈಸೂರಿನಲ್ಲಿ ಜನಿಸಿದರು. ಮೈಸೂರಿನ ಸಂಸ್ಕೃತ ಪಾಠಶಾಲೆಯ ಪ್ರಾಚಾರ್ಯರೂ ವ್ಯಾಕರಣ ಪಂಡಿತರೂ ಆಗಿದ್ದ ತಂದೆಯೇ ಇವರ ಪ್ರಥಮ ವಿದ್ಯಾಗುರು. ಸಂಸ್ಕೃತ ಪಾಠಶಾಲೆ ಹಾಗೂ ಮೈಸೂರಿನ ವೆಸ್ಲಿಯಿನ್ ಮಿಷನ್ ಹೈಸ್ಕೂಲಿನಲ್ಲಿ ಓದಿ ಎಲ್ಲಾ ಹಂತದಲ್ಲೂ ಪ್ರಥಮರಾಗಿ ಶಿಷ್ಯವೇತನ ಪಡೆದರು. ಲೋವರ್ ಸೆಕೆಂಡರಿ ಓದುತ್ತಿದ್ದಾಗಲೇ ವೆಂಕಟಲಕ್ಷ್ಮಿ(೧೦ ವರ್ಷದ ಬಾಲಕಿ)ಯನ್ನು ವಿವಾಹವಾದರು. ಕನ್ನಡ ಮತ್ತು ಸಂಸ್ಕೃತದಲ್ಲಿ ವಿದ್ಯಾಭ್ಯಾಸ ಮುಂದುವರಿಸಿ ೧೯೧೪ರಲ್ಲಿ ಮಹಾರಾಜ ಕಾಲೇಜಿನಲ್ಲಿ ಬಿ.ಎ. ಪದವಿ ಪಡೆದರು. ಆ ಸಂದರ್ಭದಲ್ಲಿ ಪ್ರೊ. ಬಿ.ಎಂ. ಶ್ರೀಕಂಠಯ್ಯ, ಪ್ರೊ. ಹಿರಿ ಯಣ್ಣ, ಪಂಡಿತ ಕೆ.ವರದಾಚಾರ್ ಮೊದಲಾದವರು ಇವರ ಅಧ್ಯಾಪಕರಾಗಿದ್ದರು.

ಕೃಷ್ಣಶಾಸ್ತ್ರಿ ಕೆಲವು ಕಾಲ ಆಹಾರ ಕಚೇರಿಯಲ್ಲಿ ವೃತ್ತಿ ನಿರ್ವಹಿಸಿದರು. ೧೯೧೯ರಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ಟ್ಯೂಟರ್ ಆಗಿ ನೇಮಕಗೊಂಡರು. ೧೯೩೯ರಲ್ಲಿ ಓರಿಯಂಟಲ್ ಲೈಬ್ರರಿಯಲ್ಲಿ ಸುದೀರ್ಘ ಕಾಲ ಸೇವೆಸಲ್ಲಿಸಿ ನಿವೃತ್ತರಾದರು. ಶಾಸ್ತ್ರಿಗಳು ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟು ಸಂಪಾದಕ ಸಮಿತಿಯ ಸದಸ್ಯರಾಗಿದ್ದರು(೧೯೩೩–೪೬). ಪ್ರಬುದ್ಧ

ಕರ್ನಾಟಕ ಮತ್ತು ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಗಳ ಸಂಪಾದಕರಾಗಿದ್ದರು (೧೯೧೯–೩೨:೧೯೪೩–೪೬). ೧೯೪೦–೪೩ರಲ್ಲಿ ಕುಮಾರವ್ಯಾಸ ಭಾರತ ಯುದ್ಧ ಪಂಚಕದ ಪರಿಷ್ಕರಣ ಸಮಿತಿಯಲ್ಲಿ ಸದಸ್ಯರೂ ೧೯೪೩–೪೬ರಲ್ಲಿ ವಿಶ್ವವಿದ್ಯಾ ನಿಲಯದ ಕನ್ನಡ ಗ್ರಂಥಮಾಲೆಯ ಪ್ರಧಾನ ಸಂಪಾದಕರು ೧೯೪೩–೫೭ರ ನಡುವೆ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟುವಿನ ಪ್ರಧಾನ ಸಂಪಾದಕರಾಗಿದ್ದರು.

ಕೃಷ್ಣಶಾಸ್ತ್ರಿಗಳು ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದಾಗ 'ಪ್ರಬುದ್ಧ ಕರ್ನಾಟಕ'ವನ್ನು ಪ್ರಾರಂಭಿಸಿ ಈ ಮೊದಲೇ ಆರಂಭಗೊಂಡಿದ್ದ ಕರ್ನಾಟಕ ಸಂಘದಿಂದ ಈ ಪತ್ರಿಕೆಯನ್ನು ಪ್ರಕಟಿಸಲು ಪ್ರಾರಂಭಿಸಿದರು. ಸುಮಾರು ಹದಿಮೂರು ವರ್ಷಗಳ ಕಾಲ ಸ್ವಯಂ ಪ್ರಯತ್ನದಿಂದ ಈ ಪತ್ರಿಕೆಯನ್ನು ಪ್ರಕಟಿಸಿದರೂ ಎಲ್ಲಿಯೂ ತಮ್ಮ ಹೆಸರನ್ನು ಸೂಚಿಸಿಲ್ಲ. ಕರ್ನಾಟಕ ಸಂಘದ ಹೆಸರಿನಲ್ಲಿ ಮಾತ್ರ ಪ್ರಕಟವಾಯಿತು. ಇವರು ವಿಮರ್ಶೆ, ಸಂಪಾದನೆ, ಅನುವಾದ, ಶಾಸ್ತ್ರ ಸಾಹಿತ್ಯ, ಲಲಿತ ಸಾಹಿತ್ಯ ಮುಂತಾದ ಕ್ಷೇತ್ರಗಳಲ್ಲಿ ಸುಮಾರು ಹದಿನೈದು ಗ್ರಂಥಗಳನ್ನು ರಚಿಸಿದ್ದಾರೆ.

ಸಂಪಾದಕರಾಗಿ 'ಹರಿಶ್ಚಂದ್ರಕಾವ್ಯಸಂಗ್ರಹ'(ಸಹಸಂಪಾದಕರು: ಟಿ.ಎಸ್. ವೆಂಕಣ್ಣಯ್ಯ, ೧೯೩೧), 'ಕವಿಜಿಹ್ವಾಬಂಧನಂ' (ಛಂದೋಗ್ರಂಥ, ೧೯೫೨), ಕೆಳದಿನೃಪವಿಜಯ, ಧರ್ಮಾಮೃತಗಳನ್ನು, ಅನುವಾದಕರಾಗಿ 'ಸ್ವಾಮಿ–ಶಿಷ್ಯ ಸಂವಾದ', 'ನಾಗ ಮಹಾಶಯ', 'ನಿಬಂಧ ಮಾಲಾ' ಕೃತಿಗಳನ್ನು (೧೯೨೩–೧೯೩೭, ೧೯೬೩) ಹೊರತಂದಿದ್ದಾರೆ.

ಸ್ವತಂತ್ರ ಕೃತಿಗಳು: ೧) 'ಶ್ರೀ ರಾಮಕೃಷ್ಣ ಪರಮಹಂಸರ ಚರಿತ್ರೆ'(೧೯೧೯), ೨) 'ಕನ್ನಡ ಕೈಪಿಡಿ'ಯ ಅಲಂಕಾರ ಭಾಗ(೧೯೨೭), ೩) 'ಭಾಸಕವಿ'(೧೯೩೩), ೪) 'ಸಂಸ್ಕೃತ ನಾಟಕ'(೧೯೩೩), ೫) 'ಸರ್ವಜ್ಞ ಕವಿ'(೧೯೪೮), ೬) 'ಶ್ರೀಪತಿಯ ಕಥೆಗಳು'(೧೯೪೮), ೭) 'ಭಾಷಣಗಳು ಮತ್ತು ಲೇಖನಗಳು'(೧೯೪೮–೪೯, ೮) 'ಬಂಕಿಮಚಂದ್ರ'(೧೯೬೦). ಇವಲ್ಲದೆ ಸುಮಾರು ೨೦೦ ಪುಟಗಳ 'ರಾಮಪ್ಪ' ಎಂಬ ಸಾಮಾಜಿಕ ಕಥೆ(ಅಪ್ರಕಟಿತ) ಮತ್ತು ಮೂರು ಲಲಿತ ಪ್ರಬಂಧಗಳನ್ನು ರಚಿಸಿದ್ದಾರೆ. 'ನಿರ್ಮಲ ಭಾರತಿ' ಅಥವಾ 'ಮಕ್ಕಳ ಮಹಾಭಾರತ' ಸಹ ಇವರ ಜನಪ್ರಿಯ ರಚನೆಯಾಗಿದೆ.

ಕೃಷ್ಣಶಾಸ್ತ್ರಿಗಳು ಕನ್ನಡ ಕೈಪಿಡಿಯ ಅಲಂಕಾರ ಭಾಗ ಮತ್ತು ಹತ್ತಾರು ಪಾಂಡಿತ್ಯಪೂರ್ಣ ಸಂಶೋಧನ ಲೇಖನಗಳನ್ನು ಬರೆದಿದ್ದಾರೆ. ಈ ಎಲ್ಲದರಲ್ಲೂ ಅವರು ತೋರಿರುವ ಶಾಸ್ತ್ರನಿಷ್ಠೆ, ಪಾಂಡಿತ್ಯ, ಅಧ್ಯಯನಶೀಲತೆಗಳು ಅನುಕರಣೀಯವಾದವು. ಎಲ್ಲಕ್ಕಿಂತ ಹೆಚ್ಚಾಗಿ ಗ್ರಂಥಗಳಿಗೆ ಅವರು ಬರೆದಿರುವ ಮುನ್ನುಡಿಗಳು, ಪೀಠಿಕೆಗಳು, ಪ್ರಸ್ತಾವನೆಗಳು ಗ್ರಂಥ ಸಂಪಾದನಾ ಕ್ಷೇತ್ರದಲ್ಲಿ ಇಂದಿಗೂ ಮಹತ್ವವನ್ನು ಪಡೆದಿವೆ. ಕನ್ನಡದಲ್ಲಿ ಗ್ರಂಥಸಂಪಾದನಾ ಶಾಸ್ತ್ರವೇ ಪರಿಚಯವಿರದಿದ್ದ ಕಾಲದಲ್ಲಿ ಶಾಸ್ತ್ರರೀತಿಯಲ್ಲಿ ಆಧುನಿಕ ಜ್ಞಾನದೊಂದಿಗೆ ಗ್ರಂಥವನ್ನು ಸಂಪಾದಿಸಿ ಸೂಕ್ತ ಪೀಠಿಕೆಯೊಂದಿಗೆ ಹೇಗೆ ಪ್ರಕಟಿಸಬೇಕೆಂಬುಕ್ಕೆ ಇವರು ಮಾದರಿ ಹಾಕಿಕೊಟ್ಟಿದ್ದಾರೆ. ಕವಿ, ಕಾಲ, ದೇಶ, ಮತ, ವಿಚಾರಗಳ ನಿಷ್ಕರ್ಷೆ, ಮೂಲಕಥೆಗೂ ಕೃತಿಗೂ ಇರುವ ವ್ಯತ್ಯಾಸ, ಸಾದೃಶ್ಯ, ವೈಶಿಷ್ಟ್ಯ , ಕವಿಯ ಶೈಲಿ, ರಸ, ವರ್ಣನೆ, ಕಥಾಸಾರ, ಕಾವ್ಯ, ವಿಮರ್ಶೆ, ಪಾತ್ರ ವಿಶ್ಲೇಷಣೆ, ಸಂಪಾದನಾ ರೀತಿ ಮುಂತಾದ ಅಗತ್ಯ ಮಾಹಿತಿಗಳನ್ನೊಳಗೊಂಡ ಸುದೀರ್ಘ ಪೀಠಿಕೆಯೊಂದಿಗೆ ಸಂಪಾದಿಸಿರುವ 'ಹರಿಶ್ಚಂದ್ರ ಕಾವ್ಯಸಂಗ್ರಹ' ಗ್ರಂಥ ಸಂಪಾದನಾಕ್ಷೇತ್ರದ ಒಳ್ಳೆಯ ಉದಾಹರಣೆ. ಇದೊಂದು ಸಂಗ್ರಹವಾದರೂ ಪಾಠನಿಷ್ಕರ್ಷೆಯಲ್ಲಿ ಅವರು ತೋರಿರುವ ಪ್ರತಿಭೆ, ಪಾಂಡಿತ್ಯ, ಅಸಾಧಾರಣವಾದದ್ದು. ಇಂದಿಗೂ ಇದು ಉತ್ತಮ ಸಂಪಾದಿತ ಕೃತಿಯಾಗಿದೆ.

೧೯೧೯ ರಿಂದ ೧೯೨೬ರವರೆಗೆ ಮೈಸೂರು ಓರಿಯಂಟಲ್ ಲೈಬ್ರರಿಯಲ್ಲಿ ಸಂಶೋಧನಾಧಿಕಾರಿ ಆಗಿ ಕೆಲಸ ಮಾಡುವ ಸಂದರ್ಭದಲ್ಲಿ 'ಕೆಳದಿನೃಪವಿಜಯಂ', 'ಧರ್ಮಾಮೃತ', 'ಹರಿಶ್ಚಂದ್ರ ಕಾವ್ಯಸಂಗ್ರಹ' ಮತ್ತು 'ಕವಿಜಿಹ್ವಾಬಂಧನಂ' ಗ್ರಂಥಗಳನ್ನು ಸಂಪಾದಿಸಿದರು. 'ಪರಿಷತ್ ಪತ್ರಿಕೆ'ಗಳಲ್ಲಿ ಲೇಖನಗಳನ್ನು ಸಂಪಾದಕೀಯ ಟಿಪ್ಪಣಿಗಳನ್ನು ಬರೆಯುವುದರ ಜೊತೆಗೆ ಪಾಂಡಿತ್ಯಪೂರ್ಣ ಲೇಖನಗಳನ್ನು ಸಂಪಾದಿಸಿದ್ದಾರೆ.

'ಕೆಳದಿನೃಪವಿಜಯ' ಕೆಳದಿಯ ಅರಸರ ಕಥೆಯನ್ನು ಒಳಗೊಂಡಿದೆ. ಇದರ ರಕ್ಷಾಕವಚದ ಮೇಲೆ Edited by R. Shama Shastry ಎಂದಿದ್ದರೂ ವಾಸ್ತವವಾಗಿ ಇದನ್ನು ಸಂಶೋಧಿಸಿದವರು ಕೃಷ್ಣಶಾಸ್ತ್ರಿಯವರು ಎನ್ನಲಾಗಿದೆ. ಕೃತಿಯಲ್ಲಿ ಮೊದಲು ಕೆಳದಿ ಅರಸರ ವಂಶವೃಕ್ಷವನ್ನು ಕೊಡಲಾಗಿದೆ. ಈ ಕವಿಯು 'ಕೆಳದಿ ವರಬಸವೇಂದ್ರಾಶ್ರಿತ' ಎಂದು ಹೇಳಿಕೊಂಡಿದ್ದಾನೆ. ಇನ್ನೊಂದು ಪ್ರತಿಯಲ್ಲಿ

ಶಕ ೧೭೨೬ರಲ್ಲಿ ಮೆಕಂಜಿ ಸಾಹೇಬರು ಮುತ್ಸದ್ದಿ ನಾರಾಯಣರಾಯರ ಕೈಲಿ ಬರೆಸಿಕೊಂಡಿದ್ದರೆಂದಿದೆ. ಇದರಿಂದ ಈ ಕಾವ್ಯವು ಶಕ ೧೬೮೫ರ ಮೇಲೆ ೧೭೨೬ರ ಒಳಗೆ ಕ್ರಿ.ಶ.೧೭೬೩ ರಿಂದ ೧೮೦೪ರ ಒಳಗೆ ಹುಟ್ಟಿರಬಹುದೆಂದು ಕೃತಿಯ ಕಾಲವನ್ನು ನಿರ್ಧರಿಸಿದ್ದಾರೆ. ಮೊದಲಿನಿಂದ ಕಡೆಯವರೆಗೆ ಕೆಳದಿ ಅರಸರ ಕತೆ, ಪ್ರಾಸಂಗಿಕವಾಗಿ ಇತರ ದೊರೆಗಳ ಕತೆ ಬರುತ್ತದೆ. ಆದರೆ ವಿಜಯನಗರದ ವಿಷಯಕ್ಕೆ ಬಂದಾಗ ಮಾತ್ರ ಈ ಕೃತಿ ಸತ್ಯಾಂಶಕ್ಕೆ ಹತ್ತಿರವಾಗಿದೆ. ಇವತ್ತಿನ ಚರಿತ್ರೆಕಾರರೆಲ್ಲ ೧೩೩೬ರಲ್ಲಿ ರಾಜ್ಯ ಸ್ಥಾಪಿತವಾಯಿತೆಂದು ಒಪ್ಪಿಕೊಂಡಿದ್ದಾರೆ. ಅಲ್ಲಿಂದ ೧೫೦ ವರ್ಷಗಳಲ್ಲಿ ೧೩ ರಾಜರು ಆಗಿ ಹೋಗಿದ್ದಾರೆ ಎಂದು ಹೇಳುತ್ತಾ ಈ ಅರಸರ ಕಾಲ ಹೆಸರುಗಳನ್ನು ಎ.ಆರ್.ಕೃ. ಚರ್ಚಿಸಿದ್ದಾರೆ.

ನಯಸೇನನ ಧರ್ಮಾಮೃತ ಎ.ಆರ್.ಕೃ ಸಂಪಾದಿತ ಎರಡನೆಯ ಕೃತಿ. ಇದು ಸಹ Edited by R. Shama Shastry ಎಂದಿದ್ದರೂ ವಾಸ್ತವವಾಗಿ ಸಂಪಾದಕರು ಎ.ಆರ್.ಕೃ ಅವರು. ೧೯೨೪ರಲ್ಲಿ ಇದು ಪ್ರಕಟವಾಗಿದೆ. ಇದರ ಉಪೋದ್ಘಾತದಲ್ಲಿ ಎ.ಆರ್.ಕೃ. ಅವರು ಹೇಳಿರುವ ಪ್ರಕಾರ, ಅವರಿಗೆ ಮೂರು ಹಸ್ತ ಲಿಖಿತ ಪುಸ್ತಕಗಳು ದೊರೆತಿವೆ. ೧. ಮೈಸೂರಿನ ಓರಿಯಂಟಲ್ ಲೈಬ್ರರಿಯಲ್ಲಿರುವ ಆರನೆಯ ನಂಬರಿನ ಓಲೆಯ ಪುಸ್ತಕ(ಓ); ೨) ಅದೇ ಲೈಬ್ರರಿಯಲ್ಲಿರುವ ಎಷ್ಟನೇ ನಂಬರಿನ ಕಾಗದ ಪುಸ್ತಕ(ಕ); ೩) ಮೈಸೂರಿನ ಜೈನ ಬೋರ್ಡಿಂಗ್ ಹೋಮಿನಲ್ಲಿರುವ ಶ್ರೀ ನೇಮಿಸಾಗರವರ್ಣಿ ಸ್ವಾಮಿಗಳು ಕೊಟ್ಟ ಓಲೆಯ ಪುಸ್ತಕ(ಗ); ಶ್ರವಣಬೆಳಗೊಳದ ಜೈನಮಠದಿಂದ ಒಂದು ಓಲೆಯ ಪ್ರತಿಯನ್ನು ತರಿಸಿ ನೋಡಲು, ಅದು ಮೇಲೆ ಹೇಳಿದ ಎರಡನೆಯ ಪುಸ್ತಕದಂತೆಯೇ ಇತ್ತು. ಆದ್ದರಿಂದ ಮೂರನೇ ಪುಸ್ತಕ ಓಲೆಗರಿಯದು ಹೆಚ್ಚು ಶುದ್ಧವಾಗಿದ್ದರಿಂದ ಅದನ್ನು ಮೂಲಪ್ರತಿಯಾಗಿ ಇಟ್ಟುಕೊಂಡಿದ್ದಾರೆ.

ಧರ್ಮಾಮೃತದ ಎರಡನೆಯ ಸಂಪುಟ (೧೦ನೆಯ ಅಧ್ಯಾಯದಿಂದ ೧೪ನೇ ಅಧ್ಯಾಯದವರೆಗೆ) ೧೯೨೬ರಲ್ಲಿ ಪ್ರಕಟವಾಗಿದೆ. ನಯಸೇನನ ಹೆಸರು, ಬಿರುದು ಮುಂತಾದ ಕವಿವಿಚಾರಗಳನ್ನು ಪ್ರಸ್ತಾಪಿಸಲಾಗಿದೆ. ಗ್ರಂಥದ ಕೊನೆಯ ಕಂದಪದ್ಯದಿಂದ ಆತನ ಸ್ಥಳ ಧಾರವಾಡದ ಜಿಲ್ಲೆಯ ಮುಳುಗುಂದ ಎಂದು ಊಹಿಸಿದ್ದಾರೆ. ಆತನ ಕಾಲ ೧೨ನೇ ಶತಕದ ಆದಿಭಾಗವೆಂದು ಧರ್ಮಾಮೃತ ಆಧಾರದಿಂದಲೇ ನಿರ್ಧರಿಸಿದ್ದಾರೆ.

ಎ.ಆರ್.ಕೃ. ಅವರ ಮತ್ತೊಂದು ಸಂಪಾದಿತ ಕೃತಿ 'ಹರಿಶ್ಚಂದ್ರ ಕಾವ್ಯಸಂಗ್ರಹ'. ೧೯೩೧ರಲ್ಲಿ ಮೊದಲ ಮುದ್ರಣವಾಗಿ ಅನಂತರ ೮ ಮುದ್ರಣಗಳನ್ನು ಕಂಡಿದೆ. ಪದವಿ ಹಾಗೂ ಸ್ನಾತಕೋತ್ತರ ಪದವಿ ತರಗತಿಗಳಿಗೆ ಅನೇಕ ಸಲ ಪಠ್ಯಪುಸ್ತಕವಾಗಿ ನೇಮಕಗೊಂಡ ಈ ಕೃತಿಯನ್ನು ಟಿ.ಎಸ್. ವೆಂಕಟಯ್ಯನವರ ಜೊತೆಗೂಡಿ ಸಂಪಾದಿಸಿದ್ದಾರೆ. ಪೀಠಿಕೆಯಲ್ಲಿ ಕವಿ–ಕಾವ್ಯ ವಿಚಾರವಾಗಿ ಚರ್ಚಿಸಿದ್ದಾರೆ. ಮುಂದೆ 'ಹರಿಶ್ಚಂದ್ರೋಪಾಖ್ಯಾನ'ದ ಇತಿಹಾಸವನ್ನು ತಿಳಿಸಿದ್ದಾರೆ. ಇದಕ್ಕೆ ಎ.ಆರ್.ಕೃ. ಮೂರು ವೈದಿಕ ಗ್ರಂಥಗಳನ್ನು ಪರಾಮರ್ಶೆ ಮಾಡಿದ್ದಾರೆ. ೧. ಐತರೇಯ ಬ್ರಾಹ್ಮಣ ೨. ಸಾಂಖ್ಯಾಯನ ಶ್ರೌತಸೂತ್ರ ೩. ವೇದಾರ್ಥ ದೀಪಿಕಾ. ಇವುಗಳ ಜೊತೆಗೆ ಶ್ರೀಮದ್ಭಾವತ, ಸ್ಕಾಂದಪುರಾಣ, ದೇವೀಭಾಗವತವನ್ನು ನೋಡಿದ್ದಾರೆ.

ಪ್ರಾಚೀನ ಕವಿಗಳಿಗೆ ರಸ, ಅಲಂಕಾರ ಮುಖ್ಯವಾಗಿತ್ತು. ಆದ್ದರಿಂದ ಕಾವ್ಯದ ನಡುವೆ ಎಲ್ಲೂ ಧರ್ಮೋಪನ್ಯಾಸ ಇರುವುದಿಲ್ಲ. ಸುಮಾರು ಏಳುನೂರ ನಲವತ್ತು ವಾರ್ಧಕ ಷಟ್ಪದಿಗಳಲ್ಲಿ ಇರುವ ಕಾವ್ಯವನ್ನು ಕೇವಲ ಮುನ್ನೂರು ಪದ್ಯಗಳಿಗೆ ಬಟ್ಟಿ ಇಳಿಸಿದ್ದಾರೆ. ಆದರೆ ಯಾವುದೊಂದು ಮುಖ್ಯ ಪದ್ಯವನ್ನು ಕೈ ಬಿಟ್ಟಿಲ್ಲ. ಮೊದಲ ಅಧ್ಯಾಯದ ೪೯ ಪದ್ಯಗಳನ್ನು ೧೬ ಪದ್ಯಗಳಿಗೂ ಎರಡನೆಯ ಅಧ್ಯಾಯವಾದ ವಸಿಷ್ಠ–ವಿಶ್ವಾಮಿತ್ರರ ಸಂವಾದವನ್ನು ೩೫ ಪದ್ಯಗಳಿಂದ ೨೧ ಪದ್ಯಗಳಿಗೂ ಬೇಟೆ ಪ್ರಸಂಗವನ್ನು ೬೧ ಪದ್ಯಗಳಿಗಿಳಿಸಿದ್ದಾರೆ. ಮೂಲ ಕಾವ್ಯದಲ್ಲಿ ಬರುವ ಪುರವಿಹಾರವನ್ನು ಸಂಪೂರ್ಣವಾಗಿ ಕೈಬಿಟ್ಟಿದ್ದಾರೆ. ಸಂಗ್ರಹಕಾರ್ಯದಲ್ಲಿ ಎ.ಆರ್.ಕೃ. ಅವರ ಕಾವ್ಯವಿವೇಕ, ಕಾವ್ಯಾಭಿರುಚಿಗಳು ಜಾಗೃತವಾಗಿ ಕೆಲಸ ಮಾಡಿವೆ.

ಎ.ಆರ್.ಕೃ. ಅವರ ನಾಲ್ಕನೆಯ ಸಂಪಾದಿತ ಕೃತಿ 'ಕವಿಜಿಹ್ವಾಬಂಧನಂ'. ಇದರ ಮೊದಲ ಮುದ್ರಣ ೧೯೫೨ರಲ್ಲೂ ಎರಡನೆಯ ಮುದ್ರಣ ೧೯೫೭ರಲ್ಲೂ ಆಗಿದೆ. ಎ.ಆರ್.ಕೃ. ಅವರಿಗೆ ಮದರಾಸ್ ಪ್ರತಿ ಮತ್ತು ಧಾರವಾಡ ಪ್ರತಿ, ಬೆಂಗಳೂರು ಪ್ರತಿ ಇವು ದೊರೆತು ಧಾರವಾಡ ಪ್ರತಿಯ ಮಂಗಳ ಪದ್ಯ 'ಶ್ರೀಮದ್ಗಂಗಾತರಂಗಾಂಕಿತ ಕಲ್ಲಿನಾಥಾಖ್ಯಲಿಂಗಂ' ಎಂಬುದನ್ನು ನೋಡಿ ಅದು ಓರಿಯಂಟಲ್ ಲೈಬ್ರರಿಯ ಪ್ರತಿಯಲ್ಲಿಲ್ಲದ್ದರಿಂದ ಅದನ್ನು ಸಂಪಾದಿಸುವ ಯೋಚನೆ ಬಂತು. ಪೀಠಿಕೆಯಲ್ಲಿ ವಿವೇಚಿಸಿರುವ ಮುಖ್ಯಾಂಶಗಳು ಹೀಗಿವೆ:

'ಕವಿಜಿಹ್ವಾಬಂಧನಂ' ನಾನಾ ಶಾಸ್ತ್ರಗಳನ್ನು ತಿಳಿಸುತ್ತದೆ. ಕವಿಜಿಹ್ವಾ ಬಂಧನವೆಂದರೆ ಕವಿಯ ನಾಲಗೆಗೆ ಛಂದಸ್ಸಿನ ಕಟ್ಟು ಒಂದೇ ಅಲ್ಲ, ಲಕ್ಷಣಶಾಸ್ತ್ರ ಸಮುದಾಯಕ್ಕೆ ಸೇರುವ ಮಿಕ್ಕೆಲ್ಲ ಶಾಸ್ತ್ರಗಳ ಕಟ್ಟೂ ಎಂದು ತಿಳಿಯಬೇಕು ಎಂಬುದು ಎ.ಆರ್.ಕೃ. ಅವರ ಅಭಿಮತ. ತಮಗೆ ಸಿಕ್ಕಿದ ಬೆಂಗಳೂರು ಪ್ರತಿಯ ಜೊತೆಗೆ ಮದ್ರಾಸ್ ಪ್ರತಿ, ಧಾರವಾಡದ ಪ್ರತಿಗಳ ಜೊತೆ ಹೋಲಿಕೆ ಮಾಡಿ ತಮಗೆ ಸರಿ ಕಂಡ ಕವಿಜಿಹ್ವಾಬಂಧನದ ಪಾಠವನ್ನು ತಮ್ಮ ಬಹುಶ್ರುತ ಪಾಂಡಿತ್ಯದಿಂದ ಸಂಪಾದಿಸಿದ್ದಾರೆ.

ಎ.ಆರ್.ಕೃ. ಅವರ ಪ್ರತಿಭೆ, ಪಾಂಡಿತ್ಯಕ್ಕೆ ಮೇಲಿನ ನಾಲ್ಕು ಗ್ರಂಥಗಳ ಗ್ರಂಥಸಂಪಾದನೆ ನಿದರ್ಶನವಾಗಿದೆ. ಮೊದಲ ಎರಡು ಗ್ರಂಥಗಳನ್ನು ಸಂಪಾದನೆ ಮಾಡಿದ ಕಾಲಕ್ಕೆ ಇವರ ಶಾಸ್ತ್ರ ನಿಯಮಗಳು ದೇಶದ ವಿದ್ವತ್ ಪ್ರಪಂಚಕ್ಕೆ ಪರಿಚಯವಾಗಿರಲಿಲ್ಲ. ವೆಂಕಣ್ಣಯ್ಯನವರ ಆಪ್ತಮಿತ್ರರಾದ ಎ.ಆರ್.ಕೃ. ವೆಂಕಣ್ಣಯ್ಯ ಅವರಂತೆಯೇ ಗ್ರಂಥಸಂಪಾದನೆಯಲ್ಲಿ ತಮ್ಮದೇ ದಾರಿಯನ್ನು ಗುರುತಿಸಿಕೊಂಡು ಈ ಇಬ್ಬರೂ ಕನ್ನಡದ 'ಅಶ್ವಿನೀ ದೇವತೆಗಳು' ಎಂದು ಖ್ಯಾತನಾಮರಾಗಿದ್ದಾರೆ. ವಚನ ಭಾರತವನ್ನು ಬರೆಯುವ ವೇಳೆಗೆ ಗ್ರಂಥಸಂಪಾದನಾ ಶಾಸ್ತ್ರದಲ್ಲೂ ಪ್ರಭುತ್ವ ಪಡೆದಿದ್ದರು ಎನ್ನುವುದಕ್ಕೆ ಅವರ ದೀರ್ಘವಾದ ಪೀಠಿಕೆಯೇ ನಿದರ್ಶನ. ಅನಂತರವೂ ಅವರು ಗ್ರಂಥ ಸಂಪಾದನಾ ಕಾರ್ಯಕ್ಕೆ ಮನಸ್ಸು ಕೊಟ್ಟಿದ್ದರೆ, ಆ ಕ್ಷೇತ್ರಕ್ಕೆ ಇನ್ನೂ ಹೆಚ್ಚಿನ ಮೌಲಿಕ ಕೃತಿಗಳು ಲಭಿಸುತ್ತಿದ್ದುವು. ಇವರು ೦೧.೦೨.೧೯೬೮ರಂದು ಬೆಂಗಳೂರಿನಲ್ಲಿ ಇಹಲೋಕ ತ್ಯಜಿಸಿದರು.

ಇವರಿಗೆ ಲಭಿಸಿದ ಪ್ರಶಸ್ತಿಗಳು ಈ ರೀತಿ ಇವೆ:

೧೯೬೦ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟೊರೇಟ್ ಪದವಿ.

೧೯೪೧ರಲ್ಲಿ ಹೈದರಾಬಾದಿನಲ್ಲಿ ೨೬ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿ.

೧೯೫೬ರಲ್ಲಿ 'ಅಭಿನಂದನೆ' ಎಂಬ ಅಭಿನಂದನ ಗ್ರಂಥ.

೧೯೬೧ರಲ್ಲಿ 'ಬಂಕಿಮ ಚಂದ್ರ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ.

❐ ❐ ❐

ಪಂಡಿತ ಚಂದ್ರಶೇಖರ ಶಾಸ್ತ್ರಿ

(೧೮೯೨–೧೯೯೭)

ಅನ್ನಪೂರ್ಣ ಎನ್.ಎಸ್.

ವ್ಯಾಕರಣತೀರ್ಥ ಪಂ. ಚಂದ್ರಶೇಖರ ಶಾಸ್ತ್ರಿಗಳು ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯ, ಸಂಶೋಧನೆ ಮತ್ತು ಸಂಸ್ಕೃತ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಅಪರೂಪದ ವ್ಯಕ್ತಿತ್ವವನ್ನು ಹೊಂದಿದ ಮಹಾನ್ ವಿದ್ವಾಂಸರು. ಬಡತನದ ಸಂಕಷ್ಟ, ಅಲೆ ಮಾರಿಜೀವನದ ನಡುವೆಯೇ ವಿದ್ಯೆಯನ್ನು ಆರಾಧಿಸಿ, ಅದನ್ನೇ ಜೀವನದ ಸಾಧನೆಯನ್ನಾಗಿಸಿಕೊಂಡವರು. ಅವರ ಜೀವನ ಪಯಣವು ಶ್ರಮ, ಶಿಸ್ತು, ತಪಸ್ಸು ಮತ್ತು ನಾಡು–ನುಡಿಯ ಮೇಲಿನ ಅಚಲ ಪ್ರೀತಿಯ ದ್ಯೋತಕವಾಗಿದೆ.

ಚಂದ್ರಶೇಖರ ಶಾಸ್ತ್ರಿಗಳು ೧೮೯೨ರ ಜನವರಿ ೩ ರಂದು ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲೂಕಿನ ಹೊಳಲು ಗ್ರಾಮದಲ್ಲಿ ಪಟ್ಟದಯ್ಯ ಮತ್ತು ಬಸಮ್ಮ ದಂಪತಿಗಳಿಗೆ ಪುತ್ರನಾಗಿ ಜನಿಸಿದರು. ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡ ಅವರು ತಾಯಿಯ ತವರೂರಾದ ಮಾಗಳ ಗ್ರಾಮದಲ್ಲಿ ಬೆಳೆದರು. ಬಡ ಜಂಗಮರ ಮನೆತನ; ಕಂತೆಭಿಕ್ಷೆಯಲ್ಲೇ ಬದುಕು ಸಾಗಿಸುವ ಪರಿಸ್ಥಿತಿ ಅವರದು.

ಮಾಗಳ ಗ್ರಾಮದಲ್ಲಿ ಮೂರನೇ ತರಗತಿಯವರೆಗೆ ಪ್ರಾಥಮಿಕ ಶಿಕ್ಷಣ ಪಡೆದ ಅವರು, ಮುಂದಿನ ವಿದ್ಯಾಭ್ಯಾಸಕ್ಕೆ ಅವಕಾಶವಿಲ್ಲದ ಕಾರಣ ಮನೆಯಲ್ಲಿ ಅಜ್ಜ ಸಂಗ್ರಹಿಸಿದ್ದ ಅಮರಕೋಶ, ಮಹಿಮ್ನಾಸ್ತೋತ್ರ, ನಿಜಲಿಂಗ ಶತಕ, ಸೋಮೇಶ್ವರ ಶತಕ ಮುಂತಾದ ಗ್ರಂಥಗಳನ್ನು ಸ್ವಾಧ್ಯಯನದಿಂದ ಓದಲು ಆರಂಭಿಸಿದರು. ನಾಲ್ಕು ಮತ್ತು ಐದನೇ ತರಗತಿಗಾಗಿ ಹೊಳಲು ಗ್ರಾಮಕ್ಕೆ ಹೋಗಿ ಶಿವಭಕ್ತರ ಮನೆಯಲ್ಲಿ ಪ್ರಸಾದ ಪಡೆದು ವಿದ್ಯಾಭ್ಯಾಸ ಪೂರ್ಣಗೊಳಿಸಿದರು.

ಮುಂದಿನ ವಿದ್ಯಾಭ್ಯಾಸಕ್ಕಾಗಿ ಹರಪನಹಳ್ಳಿಗೆ ಹೋಗಬೇಕಾದಾಗ ಬಡತನದಿಂದಾಗಿ ತಮ್ಮ ಓದನ್ನು ನಿಲ್ಲಿಸಿ ಮಾಗಳಕ್ಕೆ ತೆರಳಿ ಕೂಲಿನಾಲಿ

ಮಾಡಬೇಕಾಯಿತು. ಈ ಸಮಯದಲ್ಲಿ ತಂದೆಯ ಮಿತ್ರರಾದ ಬ್ಯಾಡಗಿಯ ಸಿದ್ದಲಿಂಗಯ್ಯನವರು ಇವರ ಪ್ರತಿಭೆಯನ್ನು ಗುರುತಿಸಿ ತಮ್ಮೂರಿಗೆ ಕರೆದುಕೊಂಡು ಹೋಗಿ ಸಂಸ್ಕೃತ ಪಾಠಶಾಲೆಗೆ ಸೇರಿಸಿದರು. ಆದರೆ ೧೯೧೧ರಲ್ಲಿ ಪ್ಲೇಗು ಮಹಾಮಾರಿ ಬಂದು ವಿದ್ಯಾಭ್ಯಾಸಕ್ಕೆ ಮತ್ತೆ ಅಡ್ಡಿಯಾಯಿತು.

ಶಿರಹಟ್ಟಿಯ ಫಕೀರೇಶ್ವರ ಮಠ, ಹಾವೇರಿಯ ಹುಕ್ಕೇರಿಮಠ, ಗದಗಿನ ತೋಂಟದಾರ್ಯಮಠಗಳಲ್ಲಿ ವಿದ್ಯಾಭ್ಯಾಸ ಮುಂದುವರಿಸಿದರು. ಅಧ್ಯಯನದಲ್ಲಿ ತೃಪ್ತಿ ಕಾಣದ ಅವರು ಕೊನೆಗೆ ಕಾಶಿಯ ಪ್ರಸಿದ್ಧ ಜಂಗಮವಾಡಿ ಮಠದ ಸಂಸ್ಕೃತ ಪಾಠಶಾಲೆಗೆ ಸೇರಿದರು. ಅಲ್ಲಿ ಸತತ ಏಳು ವರ್ಷಗಳ ಕಾಲ ಗಂಭೀರ ವ್ಯಾಸಂಗ ಮಾಡಿ 'ಪಂಡಿತ' ಹಾಗೂ 'ಸಾಹಿತ್ಯಾಚಾರ್ಯ' ಪದವಿಗಳನ್ನು ಪಡೆದರು. ಅನಂತರ ಕಲ್ಕತ್ತದಲ್ಲಿ 'ವ್ಯಾಕರಣತೀರ್ಥ' ಪದವಿಯನ್ನು ಪಡೆದು 'ವ್ಯಾಕರಣತೀರ್ಥ ಪಂ. ಚಂದ್ರಶೇಖರ ಶಾಸ್ತ್ರಿ' ಎಂಬ ಹೆಸರಿನಿಂದ ಪ್ರಸಿದ್ಧರಾದರು.

ಚಂದ್ರಶೇಖರ ಶಾಸ್ತ್ರಿಗಳ ವಿದ್ಯಾಭ್ಯಾಸವು ಗುರು–ಶಿಷ್ಯ ಪರಂಪರೆಯ ತಪೋಮಯ ವಾತಾವರಣದಲ್ಲಿಯೇ ರೂಪುಗೊಂಡದ್ದು. ಕಾಶಿಯ ಜಂಗಮವಾಡಿ ಮಠದ ಗುರುಗಳು ಅವರ ಪಾಂಡಿತ್ಯಕ್ಕೆ ದಾರಿತೋರಿ ಪ್ರೋತ್ಸಾಹಿಸಿದರು. ೧೯೨೪ರಲ್ಲಿ ಕಾಶಿಯಿಂದ ತಾಯ್ನಾಡಿಗೆ ಮರಳಿಬಂದ ಶಾಸ್ತ್ರಿಗಳು ಯಾದಗಿರಿಯಲ್ಲಿ ಸಜ್ಜನಶೆಟ್ಟಿ ಶಂಕರಣ್ಣನವರ ಉದಾರ ದೇಣಿಗೆಯಿಂದ ಚಿತ್ರದುರ್ಗದ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳು ಮಾಡಬೇಕಾಗಿದ್ದ ಸಂಸ್ಕೃತ ಪಾಠಶಾಲೆಯನ್ನು ನಡೆಸಲು ಶ್ರೀಗಳ ಅಪ್ಪಣೆಯ ಮೇರೆಗೆ ಜವಾಬ್ದಾರಿ ಹೊತ್ತುಕೊಂಡರು. ಆದರೆ ಯಾದಗಿರಿಯಲ್ಲಿ ಶಂಕರ ಕಾಲೇಜು ಆರಂಭಗೊಂಡಿತು. ಚಂದ್ರಶೇಖರ ಶಾಸ್ತ್ರಿಗಳು ಅದರ ಸ್ಥಾಪಕ ಪ್ರಾಚಾರ್ಯರಾದರು. ಇಡೀ ಕರ್ನಾಟಕದಲ್ಲೇ ಅತ್ಯುತ್ತಮವಾದುದೆಂದು ಶಂಕರ್ ಕಾಲೇಜು ಹೆಸರು ಗಳಿಸಿತು. ಅಖಿಲ ಭಾರತ ಮಟ್ಟದ ಸಂಸ್ಕೃತ ಪರೀಕ್ಷೆಗಳು ನಡೆಯುವಂಥ ಕೇಂದ್ರವಾಯಿತು. ಚಂದ್ರಶೇಖರ ಶಾಸ್ತ್ರಿಗಳು ಮೂರು ಸಾವಿರ ಮಠದ ಗಂಗಾಧರ ಸಂಸ್ಕೃತ ಕಾಲೇಜಿನ ಪ್ರಾಧ್ಯಾಪಕರಾಗಿ ಹುಬ್ಬಳ್ಳಿಗೆ ಬಂದರು. ಹುಬ್ಬಳ್ಳಿಯ ಕಾಲೇಜು ಚಂದ್ರಶೇಖರ ಶಾಸ್ತ್ರಿಗಳಿಂದಾಗಿ ಹೆಚ್ಚು ಪ್ರಸಿದ್ಧಿ ಪಡೆಯಲಾರಂಭಿಸಿತು. ಯಾದಗಿರಿ ಕಾಲೇಜು ಸೊರಗಿತು. ಇದನ್ನರಿತ ಯಾದಗಿರಿಯ ಕೆಲವರು ಹುಬ್ಬಳ್ಳಿಗೆ ಬಂದು ಶಾಸ್ತ್ರಿಗಳನ್ನು ಮನವೊಲಿಸಿ ಮತ್ತೆ ಯಾದಗಿರಿಗೆ (೧೯೩೮) ಕರೆತಂದರು. ಅನಂತರ ಶಾಸ್ತ್ರಿಗಳು

ತಮ್ಮ ನಿವೃತ್ತಿಯವರೆಗೆ(೧೯೪೮) ಸುಮಾರು ಹತ್ತುವರ್ಷ ಅಲ್ಲಿದ್ದು ಕಾಲೇಜನ್ನು ಸಮರ್ಥವಾಗಿ ಮುನ್ನಡೆಸಿದರು.

ಶಾಸ್ತ್ರಿಗಳು ಒಬ್ಬ ಶ್ರೇಷ್ಠ ಗುರುಗಳಾಗಿ ಯಾದಗಿರಿ, ಶಂಕರ ಕಾಲೇಜು, ಹುಬ್ಬಳ್ಳಿಯ ಗಂಗಾಧರ ಸಂಸ್ಕೃತ ಕಾಲೇಜು ಮುಂತಾದ ಸಂಸ್ಥೆಗಳಲ್ಲಿ ನೂರಾರು ಶಿಷ್ಯರ ಭವಿಷ್ಯವನ್ನು ರೂಪಿಸಿದರು. ಅವರ ಶಿಷ್ಯರು ಕರ್ನಾಟಕದ ವಿವಿಧ ಭಾಗಗಳಲ್ಲಿ ಸಂಸ್ಕೃತ ಮತ್ತು ಕನ್ನಡ ಪಂಡಿತರಾಗಿ, ಅಧ್ಯಾಪಕರಾಗಿ, ಸಂಶೋಧಕರಾಗಿ ಸಾಧನೆ ಮಾಡಿದ್ದಾರೆ. ಈ ಮೂಲಕ ಅವರು ಪಂಡಿತ ಪರಂಪರೆಯನ್ನು ಮುಂದುವರಿಸಿದ ಮಹತ್ತ್ವದ ಗುರುಗಳಾಗಿದ್ದರು.

ಸ್ವತಃ ಕನ್ನಡ ಮಾತೃಭಾಷೆಯವರಾಗಿ ಸಂಸ್ಕೃತ ಪಾಂಡಿತ್ಯವನ್ನು ಗಳಿಸಿ ತೆಲುಗು, ಉರ್ದು, ಇಂಗ್ಲಿಷ್, ಹಿಂದಿ, ಮರಾಠಿ ಮುಂತಾದ ಹಲವು ಭಾಷಾ ಪರಿಣತಿಯನ್ನೂ ಪಡೆದುಕೊಂಡವರು. ಇಷ್ಟಾಗಿಯೂ ಅವರು ಕನ್ನಡನಾಡುನುಡಿ ಸಾಹಿತ್ಯಕ್ಕಾಗಿಯೇ ತಮ್ಮ ಸಮಸ್ತ ಧೀಶಕ್ತಿಯನ್ನು ಮೀಸಲಾಗಿಟ್ಟರು. ಅವರ ಬರೆವಣಿಗೆಯಲ್ಲಿ ಪಾಂಡಿತ್ಯ, ತತ್ತ್ವಚಿಂತನೆ ಮತ್ತು ಸಂಶೋಧನಾತ್ಮಕ ದೃಷ್ಟಿ ಸ್ಪಷ್ಟವಾಗಿ ಗೋಚರಿಸುತ್ತದೆ. ವಚನ ಸಾಹಿತ್ಯ, ಬಸವತತ್ತ್ವ, ಹಳಗನ್ನಡ ಕಾವ್ಯ, ಧರ್ಮ–ತತ್ತ್ವಶಾಸ್ತ್ರ ಇವರ ಪ್ರಮುಖ ಆಸಕ್ತಿಯ ಕ್ಷೇತ್ರಗಳಾಗಿದ್ದುವು.

ಸಂಸ್ಕೃತದಲ್ಲಿ ಉನ್ನತ ವಿದ್ಯಾಭ್ಯಾಸ ಪಡೆದಿದ್ದರೂ ಚಂದ್ರಶೇಖರ ಶಾಸ್ತ್ರಿಗಳು ಕನ್ನಡ ಪಂಡಿತ ಸಂಪ್ರದಾಯಕ್ಕೆ ನೀಡಿದ ಕೊಡುಗೆ ಅಮೂಲ್ಯವಾದುದು. ಹಳಗನ್ನಡ ಕಾವ್ಯ ಮತ್ತು ವಚನ ಸಾಹಿತ್ಯವನ್ನು ವೇದ–ಉಪನಿಷತ್ತು–ಆಗಮಗಳ ಹಿನ್ನೆಲೆಯಲ್ಲಿ ತುಲನಾತ್ಮಕವಾಗಿ ಅಧ್ಯಯನ ಮಾಡಿ ಕನ್ನಡದಲ್ಲಿ ಸಂಶೋಧನಾತ್ಮಕ ಬರೆವಣಿಗೆ ನಡೆಸಿದವರು ಅವರು. ಬಸವಣ್ಣನವರ ತತ್ತ್ವಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ ಕನ್ನಡ ಸಂಶೋಧನೆಗೆ ಹೊಸ ದಿಕ್ಕು ನೀಡಿದರು. ಅವರ ಬರವಣಿಗೆ ಪುರಾತನ ಪಂಡಿತ ಪರಂಪರೆಯ ಗಂಭೀರತೆಯನ್ನೂ ಆಧುನಿಕ ಸಂಶೋಧನಾ ದೃಷ್ಟಿಯನ್ನೂ ಒಟ್ಟಿಗೆ ಹೊತ್ತುಕೊಂಡಿದೆ. ಈ ಕಾರಣದಿಂದಲೇ ಅವರನ್ನು ಕನ್ನಡ ಪಂಡಿತ ಸಂಪ್ರದಾಯದ ಪ್ರಮುಖ ಸ್ತಂಭವೆಂದು ಪರಿಗಣಿಸಲಾಗುತ್ತದೆ.

ಚಂದ್ರಶೇಖರ ಶಾಸ್ತ್ರಿಗಳು ಸಂಸ್ಕೃತದಲ್ಲಿ ಅಪಾರ ಪಾಂಡಿತ್ಯವನ್ನು ಗಳಿಸಿ ಆಗಿನ ಕಾಲದಲ್ಲಿ ಶ್ರೇಷ್ಠವೆನಿಸಿದ ವ್ಯಾಕರಣತೀರ್ಥ ಪದವಿಯನ್ನು ಪಡೆದು ಸಂಸ್ಕೃತ

ಕಾಲೇಜುಗಳನ್ನು ಸ್ಥಾಪಿಸಿ ಅವುಗಳ ಅಭಿವೃದ್ಧಿಯಲ್ಲಿ ಸತತ ಎರಡೂವರೆ ದಶಕಗಳವರೆಗೆ ಶ್ರಮಿಸಿ ತಮ್ಮ ವಿದ್ಯಾಭ್ಯಾಸ ಎಲ್ಲವೂ ಸಂಸ್ಕೃತವಾಗಿದ್ದರೂ ಅವರು ಕನ್ನಡನಾಡು ನುಡಿಗಳಿಗಾಗಿ ಸಲ್ಲಿಸಿರುವ ಸೇವೆ ಅನುಪಮವಾದುದು. ಹಳಗನ್ನಡ ಕಾವ್ಯಗಳನ್ನು, ವ್ಯಾಕರಣವನ್ನು ಆಳವಾಗಿ ಅಧ್ಯಯನ ಮಾಡಿದರು. ವೇದಾಗಮ ಗಳನ್ನು ಮೂಲ ಸಂಸ್ಕೃತದಲ್ಲಿಯೇ ವ್ಯಾಸಂಗಗೈದು ಕನ್ನಡದ ವಚನಸಾಹಿತ್ಯಕ್ಕೆ ಅವು ಹೇಗೆ ಪ್ರೇರಕ–ಪೋಷಕವಾಗಿವೆ ಎಂಬುದನ್ನು ತುಲನಾತ್ಮಕವಾಗಿ ವಿವೇಚಿಸಿ ಅಮೂಲ್ಯವಾದ ಸಂಶೋಧನೆಯನ್ನು ಕನ್ನಡದಲ್ಲಿ ನಡೆಸಿದರು. ಪಂಡಿತ ಚಂದ್ರಶೇಖರ ಶಾಸ್ತ್ರಿಗಳು ಕನ್ನಡದಲ್ಲಿ ಸುಮಾರು ೧೫ ಕೃತಿಗಳನ್ನು ರಚಿಸಿರುವುದಾಗಿ ತಿಳಿದು ಬಂದಿದೆ. ಅವಲ್ಲದೆ ನೂರಾರು ಲೇಖನಗಳನ್ನು ನಾಡಿನ ಶ್ರೇಷ್ಠಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ.

ಇವರ ಉಪಲಬ್ಧ ಕೃತಿಗಳು:

ಬಸವತತ್ವರತ್ನಾಕರ

ಕಾಡಸಿದ್ಧೇಶ್ವರ ವಚನ

ಬಸವತತ್ವ ಸಂಬಂಧಿತ ಸಂಶೋಧನ ಲೇಖನಗಳು

ಇವರ ಅನುಪಲಬ್ಧ / ಅಪೂರ್ಣ ಕೃತಿಗಳು

1. ಧರ್ಮವೀರ ಶಂಕ್ರಣ್ಣನವರ ಚರಿತ್ರೆ
2. ಮದನಮೋಹನ ಮಾಲವೀಯರ ಚರಿತ್ರೆ
3. ಸ್ವತಂತ್ರ ಸಿದ್ದಲಿಂಗೇಶ್ವರ ವಚನ
4. ಸಿದ್ಧೇಶ್ವರ ವಚನ
5. ರಾಗಗಿರಿ
6. ಶಬರಶಂಕರ ಪಾರ್ಥಪುರುಷ
7. ಲಿಂಗಧಾರಣವೂ ವೇದಮಂತ್ರಗಳೂ
8. ಚಾಣಕ್ಯನೀತಿ ದರ್ಪಣ
9. ಭಗವಾನ ಬಸವೇಶ್ವರ ಜಯಂತಿ
10. ರೇಣುಕ ವಿಜಯ
11. ಕೊಲ್ಲಿಪಾಕಿ

12. ಆತ್ಮಚರಿತ್ರೆ

'ಬಸವತತ್ತ್ವ ರತ್ನಾಕರ' ಏಳುನೂರು ಪುಟಗಳ ಬೃಹತ್ ಸಂಶೋಧನ ಕೃತಿ. ಬಸವಣ್ಣನವರನ್ನು ಕುರಿತು ಹೆಚ್ಚು ಚಿಂತನಗಳು ಪ್ರಚಾರದಲ್ಲಿ ಇಲ್ಲದ ಸಮಯದಲ್ಲಿ, ೧೯೧೩ರಲ್ಲಿ ಮೊತ್ತಮೊದಲ ಸಲ ಧಾರವಾಡ ಮುರುಘಾಮಠದ ಮೃತ್ಯುಂಜಯಪ್ಪಗಳು ಆಚರಿಸಿದ ಬಸವ ಜಯಂತಿ ಆಚರಣೆ ಹಾಗೂ ತಾವೇ ಬರೆದ 'ಭಗವಾನ್ ಬಸವೇಶ್ವರ ಜಯಂತಿ' ಲೇಖನಕ್ಕೆ ಸಿಕ್ಕ ಅಭೂತಪೂರ್ವ ಪ್ರೋತ್ಸಾಹ ದಿಂದ ಶಾಸ್ತ್ರಿಗಳು ಬಸವಣ್ಣನವರನ್ನು ಕುರಿತು ಸುದೀರ್ಘ ಅಧ್ಯಯನ ಮಾಡಲು ಪ್ರೇರಣೆ ಪಡೆದರು. ೨೮ ಪ್ರಕರಣಗಳಲ್ಲಿ ಬಸವಣ್ಣನವರನ್ನು ಕುರಿತು ಉದ್ಗ್ರಂಥ ಬರೆದರೂ ಅದು ಇನ್ನೂ ಅಪರಿಪೂರ್ಣ ಕೃತಿ ಎಂದೇ ಅವರು ಹೇಳಿಕೊಂಡಿದ್ದಾರೆ. ಇಲ್ಲಿ ಸಂಶೋಧಕನೊಬ್ಬನ ಪ್ರಾಮಾಣಿಕತೆ ವೇದ್ಯವಾಗುತ್ತದೆ. ಬಸವಣ್ಣನವರ ಕ್ರಾಂತಿಕಾರಿ ಆಲೋಚನೆಗಳನ್ನು ಪಾರಂಪರಿಕ ತತ್ತ್ವಗಳ ಹಿನ್ನೆಲೆಯಲ್ಲಿ "ಬಸವತತ್ತ್ವ" ಯಾವುದು ಎಂಬುದನ್ನು ಪ್ರಪ್ರಥಮವಾಗಿ ಪ್ರತಿಪಾದಿಸುತ್ತಾರೆ. ವೇದಕಾಲೀನ, ಸಮಕಾಲೀನ ಹಾಗೂ ಆಧುನಿಕ ವಿಚಾರಧಾರೆಯನ್ನು, ತತ್ತ್ವ ಪ್ರಣಾಲಿಯನ್ನು ಸಾದ್ಯಂತ ಬಸವಣ್ಣನವರ ಚಿಂತನೆಗಳಿಗೆ ಸೋದಾಹರಣ ಹೋಲಿಸುತ್ತಾರೆ. ಅವರ ಸೈದ್ಧಾಂತಿಕ ವಿವೇಚನೆ ವಿದ್ವತ್ ಪೂರ್ಣ ಚಿಂತನೆ ಇಲ್ಲಿ ಸಾಕಾರಗೊಂಡು ನಿಂತಿದೆ. ವಿವಿಧ ಭಾಷೆಗಳ ನೂರಾರು ಗ್ರಂಥಗಳನ್ನು ಇದಕ್ಕಾಗಿಯೇ ಅವರು ಅಭ್ಯಸಿಸಿದ್ದರಿಂದ 'ಭಾರತೀಯ ತತ್ತ್ವಶಾಸ್ತ್ರ ಸಾಹಿತ್ಯಕ್ಕೆ ಇದೊಂದು ಅತ್ಯಮೂಲ್ಯ ಕೊಡುಗೆ' ಎಂದು ವಿದ್ವಾಂಸರು ಕೈವಾರಿಸಿದ್ದಾರೆ.

'ಬಸವತತ್ತ್ವ ರತ್ನಾಕರ' ಒಂದು ಸಂಪ್ರಬಂಧದಂತಿದೆ. ಶಾಸ್ತ್ರಿಗಳು ಇದನ್ನು ಬರೆಯುವ ಸಂದರ್ಭದಲ್ಲಿ ಪ್ರಕಟಿಸಿದ ಇದೇ ವಿಷಯಕ್ಕೆ ಸಂಬಂಧಿಸಿದ ಕೆಲವು ಸಂಶೋಧನ ಲೇಖನಗಳು ಗಮನಿಸಬೇಕಾದವು: (೧) ವೇದಗಳೂ ಬಸವಣ್ಣನವರೂ (೨) ಶ್ರೀಬಸವಣ್ಣನವರೂ ಶಿವಾಗಮಗಳೂ. ವೇದಗಳ ಬಗ್ಗೆ ಹೇಳುವಾಗ ತಾವೇ ಸ್ವತಃ ಮೂಲ ಸಂಸ್ಕೃತದಲ್ಲಿಯೇ ವೇದಾಧ್ಯಯನ ಮಾಡಿದ್ದರೂ ಮ್ಯಾಕ್ಸ್‌ಮುಲ್ಲರ್, ಯಾಕೋಬಿ, ಮೆಕಾನೆಲ್ಲ, ಕೀಥ್, ಬೂಲರ್ ಮೊದಲಾದ ಪಾಶ್ಚಾತ್ಯ ವಿದ್ವಾಂಸರ ಹೇಳಿಕೆಗಳನ್ನು ಉಲ್ಲೇಖಿಸುತ್ತಾರೆ. ಇದು ಅವರ ಬಹುಶ್ರುತತ್ವವನ್ನು ತೋರುತ್ತದೆ. ಚಂದ್ರಶೇಖರ ಶಾಸ್ತ್ರಿಗಳ ಈ ಅಪಾರ ಸೇವೆಯನ್ನು ಗುರುತಿಸಿ ಹಲವಾರು ಗೌರವ ಪ್ರಶಸ್ತಿ ಪುರಸ್ಕಾರಗಳು ಅವರನ್ನು ಅರಸಿ ಬಂದಿವೆ.

1968ರಲ್ಲಿ 'ಬಸವತತ್ವ ರತ್ನಾಕರ' ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

1983ರಲ್ಲಿ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ

1996ರಲ್ಲಿ ಸಂಶೋಧಕರಿಗಾಗಿ ನೀಡುವ ಚಿದಾನಂದ ಪ್ರಶಸ್ತಿ

ಕನ್ನಡ ಸಾಹಿತ್ಯ ಪರಿಷತ್ತಿನ ಅತ್ಯುನ್ನತ ಗೌರವ ಸದಸ್ಯತ್ವ

1940ರ ಧಾರವಾಡದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನ

ಇವುಗಳ ಜೊತೆಗೆ ಅನೇಕ ಸಾರ್ವಜನಿಕ ಸನ್ಮಾನಗಳು, ಗೌರವಗಳು ಅವರಿಗೆ ಸಂದಿವೆ.

ಚಂದ್ರಶೇಖರ ಶಾಸ್ತ್ರಿಗಳು ಶ್ರೇಷ್ಠ ಆಡಳಿತಗಾರರಾಗಿ ಉತ್ತಮ ಸಂಶೋಧಕರಾಗಿ, ಪತ್ರಿಕೋದ್ಯಮಿಯಾಗಿ, ಸಂಘಟಕರಾಗಿ ರಾಜಕೀಯ ವಿಮರ್ಶಕ ರಾಗಿ, ಕೃಷಿಕರಾಗಿ, ಚಲನಚಿತ್ರ ನಿರ್ಮಾಪಕರಾಗಿ– ಹೀಗೆಯೇ ಹತ್ತು ಹಲವು ಕ್ಷೇತ್ರಗಳಲ್ಲಿ ತಮ್ಮ ವ್ಯಕ್ತಿತ್ವವನ್ನು ಪ್ರಕಾಶಿಸಿದವರು. ೧೯೧೯ ರಿಂದ ನಿರಂತರವಾಗಿ ಸುಮಾರು ಅರ್ಧ ಶತಮಾನದ ಕಾಲ ನಾಡಿನ ವಿವಿಧ ಪತ್ರಿಕೆಗಳಿಗೆ ವಿವಿಧ ವಿಷಯಗಳನ್ನು ಕುರಿತು ಸಹಸ್ರಾರು ವಿಚಾರಪೂರ್ಣ ಲೇಖನಗಳನ್ನು ಬರೆದಿದ್ದಾರೆ.

ಒಟ್ಟಾರೆ ವ್ಯಾಕರಣತೀರ್ಥ ಪಂಡಿತ ಚಂದ್ರಶೇಖರ ಶಾಸ್ತ್ರಿಗಳ ಜೀವನವು ವಿದ್ಯೆಗೆ ಮಾಡಿದ ತಪಸ್ಸಿನ ಕಥೆಯಾಗಿದೆ. ಬಡತನದಿಂದ ಆರಂಭವಾದ ಅವರ ಬದುಕು ಪಾಂಡಿತ್ಯ, ಸಂಶೋಧನೆ ಮತ್ತು ನಾಡು–ನುಡಿಯ ಸೇವೆಯಲ್ಲಿ ಮಹತ್ತರ ಸಾಧನೆಗಳ ಮೂಲಕ ಉನ್ನತ ಶಿಖರವನ್ನು ತಲುಪಿತು. ೧೯೬೭ರ ಅಕ್ಟೋಬರ್ ೨ಳರಂದು ಮಾಗಳ ಗ್ರಾಮದಲ್ಲಿ ಮರಣ ಹೊಂದಿದರೂ ಅವರ ಚಿಂತನೆ, ಕೃತಿಗಳು ಮತ್ತು ಶಿಷ್ಯ ಪರಂಪರೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಶಾಶ್ವತವಾಗಿ ನೆಲೆನಿಲ್ಲುವಂಥವಾಗಿವೆ.

❐ ❐ ❐

ಶಿ.ಶಿ. ಬಸವನಾಳ

(೧೮೯೩–೧೯೫೧)

ಮಾಲಿನಿ ಎನ್. ಅಭ್ಯಂಕರ್

ಶಿ.ಶಿ. ಬಸವನಾಳ ಅವರ ಪೂರ್ಣ ಹೆಸರು ಶಿವಲಿಂಗಪ್ಪ ಶಿವಯೋಗಪ್ಪ ಬಸವನಾಳ. ಇವರು ಶಿವಯೋಗಪ್ಪ ಮತ್ತು ಸಿದ್ದಮ್ಮ ದಂಪತಿಗಳ ಪುತ್ರರಾಗಿ ೧೮೯೩ ನವೆಂಬರ್ ೭ ರಂದು ಹಾವೇರಿಯಲ್ಲಿ ಜನಿಸಿದರು. ಇವರ ತಂದೆ ರೇಲ್ವೆ ಸ್ಟೇಶನ್ ಮಾಸ್ತರ ಆಗಿದ್ದು ಬಳ್ಳಾರಿ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿದ್ದರು. ಹೀಗಾಗಿ ಬಸವನಾಳ ಅವರ ಪ್ರಾಥಮಿಕ ವಿದ್ಯಾಭ್ಯಾಸ ತೆಲುಗಿನಲ್ಲಿ ಆಯಿತು. ಕನ್ನಡ, ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳನ್ನು ಕಲಿತಿದ್ದ ತಂದೆಯು ಮಗನಿಗೆ ತಮ್ಮ ಜ್ಞಾನವನ್ನು ಧಾರೆಯೆರೆದರು. ಬಸವನಾಳರು ಗದಗ ಮತ್ತು ಧಾರವಾಡಗಳಲ್ಲಿ ಮಾಧ್ಯಮಿಕ ಶಿಕ್ಷಣ ಪಡೆದರು. ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಇತಿಹಾಸ ಮತ್ತು ಅರ್ಥಶಾಸ್ತ್ರ ವಿಷಯಗಳನ್ನು ಅಭ್ಯಸಿಸಿ, ೧೯೧೪ರಲ್ಲಿ ಉನ್ನತ ವರ್ಗದಲ್ಲಿ ಬಿ.ಎ ಪದವಿಯಲ್ಲಿ ಉತ್ತೀರ್ಣರಾದರು. ಇದೇ ವರ್ಷದಲ್ಲಿಯೇ ಇವರ ತಂದೆ ಹಾಗು ತಾಯಿ ಇಬ್ಬರೂ ನಿಧನರಾದರು. ಧೃತಿಗೆಡದ ಬಸವನಾಳರು ಮುಂಬಯಿಯಲ್ಲಿ 'ವೀರಶೈವ ಆಶ್ರಮ'ದಲ್ಲಿ ಇದ್ದುಕೊಂಡು ಇತಿಹಾಸ ಮತ್ತು ಅರ್ಥಶಾಸ್ತ್ರ ವಿಷಯಗಳಲ್ಲಿ ೧೯೧೬ರಲ್ಲಿ ಎಂ.ಎ. ಪದವಿ ಪಡೆದು ಸ್ನಾತಕೋತ್ತರ ಪದವಿ ಪಡೆದ ಮೊದಲ ವೀರಶೈವ ತರುಣನೆನಿಸಿಕೊಂಡರು. 'ವಿಕ್ಟೋರಿಯಾ ಜ್ಯುಬಿಲಿ' ಎಂಬ ಪಾರಿತೋಷಿಕವನ್ನು ಪಡೆದರು. ಬಸವನಾಳರು ೧೯೨೦ ಮೇ ೧೦ರಂದು ದಾವಣಗೆರೆಯ ವರ್ತಕರಾದ ಸಾವಳಗಿ ನಾಗಪ್ಪನವರ ಮಗಳಾದ ಶಾಂತಾ ಅವರನ್ನು ರಾಣಿಬೆನ್ನೂರಿನಲ್ಲಿ ವಿವಾಹ ವಾದರು.

ಶಿ.ಶಿ. ಬಸವನಾಳ ಅವರು ಓರ್ವ ಮಹಾನ್ ಶಿಕ್ಷಣತಜ್ಞ, ಲೇಖಕ, ಸಂಪಾದಕ ಮತ್ತು ವೀರಶೈವ ಸಾಹಿತ್ಯದ ವಿದ್ವಾಂಸರಾಗಿದ್ದರು. ಏಕೀಕರಣವನ್ನು ತನ್ನ ಪ್ರಮುಖ ಧ್ಯೇಯವನ್ನಾಗಿಸಿಕೊಂಡಿದ್ದ ಧಾರವಾಡದ ವಿದ್ಯಾವರ್ಧಕ ಸಂಘದ ಕಾರ್ಯಕಾರಿ ಮಂಡಲದ ಅಧ್ಯಕ್ಷರಾಗಿ, ಕರ್ನಾಟಕ ಪ್ರಾಚ್ಯ ಸಂಶೋಧನಾಲಯದ ಆಡಳಿತ ಮಂಡಳಿಯ ಸದಸ್ಯರಾಗಿ ಶ್ರದ್ಧೆ, ನಿಷ್ಠೆಗಳಿಂದ ಕರ್ತವ್ಯವನ್ನು ಪಾಲಿಸಿದರು. ಕರ್ನಾಟಕದ ಏಕೀಕರಣಕ್ಕಾಗಿ ಬಸವನಾಳರು ತಮ್ಮನ್ನು ಸಮರ್ಪಿಸಿಕೊಂಡ ರೀತಿ ಅನನ್ಯವಾದದ್ದು. ಗಡಿ ಪ್ರದೇಶಗಳಲ್ಲಿ ಕನ್ನಡನುಡಿ ಸಂಸ್ಕೃತಿಗಳನ್ನು ಜೀವಂತವಾಗಿಡುವ ಸಲುವಾಗಿ ಅವರು ಆ ಪ್ರಾಂತ್ಯಗಳಲ್ಲಿ ಶಾಲಾಕಾಲೇಜುಗಳನ್ನು ಸ್ಥಾಪಿಸಿದರು. ಏಕೆಂದರೆ ಉತ್ತರ ಕರ್ನಾಟಕದಲ್ಲಿ ಮರಾಠಿಯ ಪ್ರಭಾವವೇ ಹೆಚ್ಚಾಗಿತ್ತು. ಉನ್ನತ ಶಿಕ್ಷಣದಲ್ಲಿ ಕನ್ನಡದ ಬಳಕೆ ಬಹಳ ಕಡಿಮೆ ಇತ್ತು. ಸ್ನಾತಕೋತ್ತರ ಶಿಕ್ಷಣಕ್ಕಾಗಿ ಮುಂಬೈ ಅಥವಾ ಪುಣೆಗೆ ಹೋಗಬೇಕಾಗಿತ್ತು. ಹೀಗಾಗಿ ಕನ್ನಡಿಗರ ಆಶೋತ್ತರಗಳಿಗೆ ಸ್ಪಂದಿಸುವ ಒಂದು ಪ್ರತ್ಯೇಕ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಅಗತ್ಯವಿತ್ತು. ಈ ಕುರಿತು ೧೯೨೭ರಲ್ಲಿಯೇ ಬಸವನಾಳರು ದನಿಯೆತ್ತಿದರು. ೧೯೪೫-೪೬ ರ ಸಂದರ್ಭದಲ್ಲಿ ಧಾರವಾಡದಲ್ಲಿ 'ಕರ್ನಾಟಕ ವಿಶ್ವವಿದ್ಯಾಲಯ ಸಮಿತಿ' ರಚನೆಯಾಯಿತು. ಬಸವನಾಳರು ಮಾಳವಾಡರೊಡನೆ ಸೇರಿ 'A case of Karnatak University' ಎಂಬ ಪುಸ್ತಿಕೆಯನ್ನು ಪ್ರಕಟಿಸಿದರು. ಬಸವನಾಳ ನೇತೃತ್ವದ ಸಮಿತಿಯೊಂದು ಅಂದಿನ ಮುಂಬೈ ಪ್ರೆಸಿಡೆನ್ಸಿಯ ಮುಖ್ಯಮಂತ್ರಿಗಳಾಗಿದ್ದ ಬಿ. ಜಿ. ಖೇರ್ ಅವರನ್ನು ಭೇಟಿಮಾಡಿ ವಿಶ್ವ ವಿದ್ಯಾಲಯವನ್ನು ಸ್ಥಾಪಿಸಲು ಮನವೊಲಿಸುವಲ್ಲಿ ಯಶಸ್ವಿಯಾಯಿತು. ಇದರ ಫಲವಾಗಿ ೧೯೪೯ ರಲ್ಲಿ ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾಲಯವು ಸ್ಥಾಪನೆಯಾಯಿತು.

ಕರ್ನಾಟಕ ವಿಶ್ವವಿದ್ಯಾಲಯದ ಅಭಿವೃದ್ಧಿಗೆ ಕೊಡುಗೆ ನೀಡಿದ ಇವರು ಸಮಾನ ಮನಸ್ಕ ಮತ್ತು ಉತ್ಸಾಹಿ ಮಿತ್ರರಾದ ಎಂ.ಆರ್. ಸಾಖರೆ, ಹುಚ್ಚಯ್ಯ ಕಟ್ಟೀಮನಿ, ಬಸವಂತಪ್ಪ ಮಮದಾಪುರ, ಬಸಪ್ಪ ಹಂಚಿನಾಳ, ಪಂಡಿತಪ್ಪ ಚಿಕ್ಕೋಡಿ ಹಾಗೂ ಬಿ.ಎಲ್. ಪಾಟೀಲರ ಸಹಕಾರದಿಂದ ೧೯೧೬ ಅಕ್ಟೋಬರ್ ೧೧ ರಂದು ಬೆಳಗಾವಿಯಲ್ಲಿ ಕರ್ನಾಟಕ ಲಿಂಗಾಯತ ಎಜುಕೇಶನ್ ಸೊಸೈಟಿ (ಕೆ.ಎಲ್.ಇ)ಯನ್ನು ಸ್ಥಾಪಿಸಿದರು. ಪುಣೆಯ ಡೆಕ್ಕನ್ ಕಾಲೇಜಿನಂತಹ ಒಂದು

ಆದರ್ಶ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಬೇಕೆಂಬುದು ಅವರ ಆಶಯವಾಗಿತ್ತು. ಬೆಳಗಾವಿ, ಸೊಲ್ಲಾಪುರ, ಗುಲ್ಬರ್ಗ ಮುಂತಾದ ಅಚ್ಚಗನ್ನಡ ಪ್ರದೇಶಗಳಲ್ಲಿ ಪರಭಾಷೀಯರು ನಡೆಸುತ್ತಿದ್ದ ದಬ್ಬಾಳಿಕೆಯ ವಿರುದ್ಧ ಕನ್ನಡಿಗರನ್ನು ಜಾಗೃತಗೊಳಿಸುವ ಉದ್ದೇಶ 'ಕರ್ನಾಟಕ ಲಿಂಗಾಯತ ಎಜುಕೇಶನ್ ಸೊಸೈಟಿ'ಯದಾಗಿತ್ತು. ಕೆ.ಎಲ್.ಇ ಶಿಕ್ಷಣ ಸಂಸ್ಥೆಯ ಮೊದಲ ಹೆಜ್ಜೆಯಾಗಿ ೧೯೧೬ ನವೆಂಬರ್ ೧೧ರಂದು ಬೆಳಗಾವಿಯಲ್ಲಿ ಗಿಲಗಂಚಿ–ಅರಟಾಳ ಹೈಸ್ಕೂಲನ್ನು ಸ್ಥಾಪಿಸಿದರು. ಸಂಸ್ಥೆಯ ಸ್ಥಾಪನೆಗೆ ನೆರವು ನೀಡಿದ ರಾವಬಹಾದ್ದೂರ ಆರ್. ಸಿ. ಅರಟಾಳ ಮತ್ತು ರಾವಬಹಾದ್ದೂರ ಗಿಲಗಂಚಿಯವರ ಸಂಯುಕ್ತ ಹೆಸರನ್ನೇ ಈ ಹೈಸ್ಕೂಲಿಗೆ ಇಡಲಾಗಿದೆ. ಬಸವನಾಳರು ಇದೇ ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿ ಅನೇಕ ವರ್ಷ ಸೇವೆ ಸಲ್ಲಿಸಿದರು. ಬಸವನಾಳರು ಸೊಲ್ಲಾಪುರ, ಅಕ್ಕಲಕೋಟೆ, ಮಂಗೋಳಿ ಹಾಗೂ ಬಾರ್ಸಿಗಳಲ್ಲಿ ಕೂಡಾ ಕನ್ನಡ ಮಾಧ್ಯಮಿಕ ಶಾಲೆಗಳನ್ನು ಪ್ರಾರಂಭಿಸಿದರು. (ಬೆಳಗಾವಿ, ಸೊಲ್ಲಾಪುರ ಮೊದಲಾದ ಈ ಎಲ್ಲಾ ಊರುಗಳು ಆಗ ಮುಂಬಯಿ ಪ್ರಾಂತ್ಯದಲ್ಲಿದ್ದವು).

೧೯೨೨ರಲ್ಲಿ ಧಾರವಾಡದಲ್ಲಿ ಆರಂಭವಾದ ರಾಜಾ ಲಖಮಗೌಡ ಸರದೇಸಾಯಿ ಪ್ರೌಢಶಾಲೆ ಕೂಡಾ ಬಸವನಾಳರ ಶ್ರಮದ ಫಲ. ಹೈಸ್ಕೂಲಿನಲ್ಲಿ ಮಾತ್ರವಲ್ಲದೇ ಕಾಲೇಜು ಮಟ್ಟದಲ್ಲಿಯೂ ವಿದ್ಯೆಯ ಪ್ರಸರಣ ಆವಶ್ಯಕ ಎಂಬುದನ್ನು ಮನಗಂಡ ಅವರು ಬೆಳಗಾವಿಯಲ್ಲಿ ಲಿಂಗರಾಜ ಕಾಲೇಜನ್ನು ಆರಂಭಿಸಿದರು. ಆಗಷ್ಟೇ ಇಂಗ್ಲೆಂಡಿನಲ್ಲಿ ಉಚ್ಚಶಿಕ್ಷಣವನ್ನು ಪಡೆದು ಹಿಂದಿರುಗಿದ ಅವರ ಶಿಷ್ಯರಾದ ಡಾ. ಎಸ್.ಸಿ ನಂದೀಮಠರನ್ನು ಪ್ರಾಚಾರ್ಯರನ್ನಾಗಿ ಮಾಡಿ ತಾವು ಕೇವಲ ಅಧ್ಯಾಪಕರಾಗಿ ಉಳಿದರು. ಶಿ.ಶಿ ಬಸವನಾಳರು ಸರ್ಕಾರಿ ಉದ್ಯೋಗಕ್ಕೆ ಆಸೆ ಪಡಲಿಲ್ಲ. ಬದಲಾಗಿ ಗಡಿಪ್ರದೇಶದಲ್ಲಿ ಕನ್ನಡಭಾಷೆ ಮತ್ತು ಶಿಕ್ಷಣದ ಉಳಿವಿಗಾಗಿ ಶ್ರಮಿಸಿದರು. ಈ ಹಿನ್ನೆಲೆಯಲ್ಲಿ ಅವರು ಬೆಳಗಾವಿಯಲ್ಲಿ ತಾವೇ ಸ್ಥಾಪಿಸಿದ ಗಿಲಗಂಚಿ–ಅರಟಾಳ ಹೈಸ್ಕೂಲು, ಲಿಂಗರಾಜ ಕಾಲೇಜುಗಳಲ್ಲಿ ಶಿಕ್ಷಕರಾಗಿ, ಉಪನ್ಯಾಸಕರಾಗಿ ಸೇವೆಸಲ್ಲಿಸಿದರು. ಕೆಲವು ಕಾಲ ರಾಜಾ ಲಖಮಗೌಡ ಸರದೇಸಾಯಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿ ಮತ್ತು ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ ವೈಸ್ ಪ್ರಿನ್ಸಿಪಾಲರಾಗಿ ಸೇವೆಸಲ್ಲಿಸಿದರು.

ಬಸವನಾಳರು ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಕಾರ್ಯಕಾರಿ ಮಂಡಳದ ಸದಸ್ಯರಾಗಿ, ಉಪಾಧ್ಯಕ್ಷರಾಗಿ ಹಾಗೂ ಕಾರ್ಯಾಧ್ಯಕ್ಷರಾಗಿ ಅಮೂಲ್ಯ ಸೇವೆ ಸಲ್ಲಿಸಿದ್ದಾರೆ. ೧೯೩೦ರಲ್ಲಿ ಈ ಸಂಸ್ಥೆಯ ಅಂಗವಾಗಿ 'ಸಾಹಿತ್ಯ ಸಮಿತಿ'ಯನ್ನು ಪ್ರಾರಂಭಿಸಿ, ಅದರ ಕಾರ್ಯಾಧ್ಯಕ್ಷರಾಗಿ ಅನೇಕ ಉಪಯುಕ್ತ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿಗಳಾಗಿ ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಕರಾಗಿಯೂ ಅವರು ಹಲವು ವರ್ಷ ಕಾರ್ಯನಿರ್ವಹಿಸಿದ್ದರು. ಸಹಕಾರಿ ಕ್ಷೇತ್ರದಲ್ಲಿಯೂ ಸಹ ಬಸವನಾಳರು ತಮ್ಮ ಕಾಣಿಕೆ ನೀಡಿದ್ದಾರೆ. ಧಾರವಾಡದ ಕರ್ನಾಟಕ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ್ ಇದರ ಪ್ರಥಮ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದರು.

ಶಿ.ಶಿ. ಬಸವನಾಳರು ಸುಮಾರು ೨೦ ವರ್ಷಗಳ ಕಾಲ ಕನ್ನಡ ಪಠ್ಯಪುಸ್ತಕ ಸಮಿತಿಯ ಸದಸ್ಯರಾಗಿ ದುಡಿದಿದ್ದಾರೆ. ೧೯೧೮ ರಿಂದ ೧೯೨೭ರ ತನಕ ಬೆಳಗಾವಿಯಲ್ಲಿ 'ಪ್ರಬೋಧ' ಎಂಬ ಮಾಸಿಕವನ್ನು ನಡೆಸಿದರು. ಕೆಲಕಾಲದ ಬಳಿಕ ಈ ಪತ್ರಿಕೆ ನಿಂತಿತಾದರೂ ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ವತಿಯಿಂದ ಪ್ರಕಟವಾಗುತ್ತಿದ್ದ 'ಸಾಹಿತ್ಯ ಸಮಿತಿ ಪತ್ರಿಕೆ'ಯೆಂಬ ತ್ರೈಮಾಸಿಕದ ಸಂಪಾದನೆಯ ಜವಾಬ್ದಾರಿ ವಹಿಸಿಕೊಂಡರು. ಕೆ.ಎಲ್.ಇ. ಶಿಕ್ಷಣ ಸಂಸ್ಥೆಯಿಂದ ನಿವೃತ್ತರಾದ ಮೇಲೆ ಅವರು ಧಾರವಾಡದಲ್ಲಿ ಬೆಳಗಾವಿ ರಾಮಚಂದ್ರರಾಯರ 'ಕಲಾಸಿಂಧು' ಮುದ್ರಣಾಲಯವನ್ನು ಕೊಂಡು 'ರವೀಂದ್ರ ಮುದ್ರಣಾಲಯ'ವೆಂಬ ಹೆಸರಿನಿಂದ ಮುಂದುವರಿಸಿದರು. ಆಲೂರು ವೆಂಕಟರಾಯರಿಂದ ಆರಂಭವಾಗಿ ಆಗ ರಾಮಚಂದ್ರರಾಯರ ವಶದಲ್ಲಿಯೇ ಇದ್ದ 'ಜಯಕರ್ನಾಟಕ'ವೆಂಬ ಮಾಸಪತ್ರಿಕೆಯನ್ನು ಖರೀದಿಸಿ, ಅದೇ ಹೆಸರಿನ ಸಾಪ್ತಾಹಿಕವನ್ನೂ ಆರಂಭಿಸಿ ಮುನ್ನಡೆಸಿದರು. ಇವಲ್ಲದೆ ವಿದ್ಯಾವರ್ಧಕ ಸಂಘದ ಪ್ರಕಟನೆಯಾದ 'ವಾಗ್ಭೂಷಣ' ಪತ್ರಿಕೆಯಲ್ಲಿಯೂ ಅವರು ಅನೇಕ ಅಮೂಲ್ಯ ಲೇಖನಗಳನ್ನು ಬರೆದಿದ್ದಾರೆ.

ಮುಂದೆ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಸಾಹಿತ್ಯ ಸಮಿತಿಯು ಕನ್ನಡದ ಪ್ರಾಚೀನ ಗ್ರಂಥಗಳನ್ನು ಪ್ರಕಟಿಸಲು ಆರಂಭಿಸಿದಾಗ ಬಸವನಾಳರು 'ಚೆನ್ನಬಸವಪುರಾಣ'ವನ್ನು ಸಮಗ್ರವಾಗಿ ಸಂಪಾದಿಸಿ ಪ್ರಕಟಿಸಿದರು (೧೯೩೪). ಅನಂತರದಲ್ಲಿ ಚಾಮರಸನ ಪ್ರಭುಲಿಂಗಲೀಲೆ (೧೯೩೮), ನಾಗವರ್ಮನ ಕಾವ್ಯಾವಲೋಕನಂ (೧೯೩೯), ಷಡಕ್ಷರದೇವನ ಶಬರಶಂಕರವಿಳಾಸಂ (೧೯೩೯),

ಕುಂಡಲಗಿಯಾಚಾರ್ಯರ ಕರ್ಣಾಟಕ ಶಬ್ದಾನುಶಾಸನ ಪ್ರಕಾಶಿಕೆ (೧೯೪೧), ಹರಿಹರನ ರೇವಣಸಿದ್ದೇಶ್ವರದೇವರ ರಗಳೆ (೧೯೪೨), ರಕ್ಷಾಶತಕ ಮತ್ತು ಪಂಪಾಶತಕ (೧೯೪೩), ಬಾಲಲೀಲಾ ಮಹಾಂತ ಶಿವಯೋಗಿಗಳ ಕೈವಲ್ಯ ದರ್ಪಣ (೧೯೪೩), ಮೈಲಾರದ ಬಸವಲಿಂಗ ಶರಣರ ಕೃತಿಗಳು (೧೯೪೫), ಸರ್ಪಭೂಷಣ ಶಿವಯೋಗಿಗಳ ಕೈವಲ್ಯ ಕಲ್ಪವಲ್ಲರಿ (೧೯೪೮) ಹಾಗೂ ಬಸವಣ್ಣನವರ ಷಟ್‌ಸ್ಥಲದ ವಚನಗಳನ್ನು (೧೯೫೧) ಅವರು ಸಂವಾದಿಸಿ ಪರಿಷ್ಕರಿಸಿ ಮುದ್ರಿಸಿದ್ದಾರೆ. ಬಸವಣ್ಣನವರ ಹೆಚ್ಚಿಗೆ ದೊರೆತ ವಚನಗಳು ಎಂಬ ಕೃತಿಯು ಅವರ ನಿಧನಾನಂತರದಲ್ಲಿ (೧೯೫೪) ಪ್ರಕಟವಾಗಿದೆ.

'ಕನ್ನಡದಲ್ಲಿ ಗ್ರಂಥಸಂಪಾದನಶಾಸ್ತ್ರವನ್ನು ಬೆಳೆಸಿದವರಲ್ಲಿ ಬಸವನಾಳರೂ ಒಬ್ಬರು. ಅವರ ಪಾಲಿಗೆ ಗ್ರಂಥಸಂಪಾದನೆಯ ಕೆಲಸ ಕೇವಲ ಹತ್ತಾರು ಪಾಠಗಳಲ್ಲಿ ಸರಿಯೆನಿಸಿದೊಂದನ್ನು ಆಯ್ದು ಯಥಾವತ್ತಾಗಿ ಇಡುವುದಾಗಿರಲಿಲ್ಲ. ಕವಿಯ ಮನದ ಇಂಗಿತವನ್ನು ಗ್ರಹಿಸಬಲ್ಲ ಸಮರ್ಥ ಗ್ರಂಥಸಂಪಾದಕನೊಬ್ಬನ ಊಹಾಪಾಠವೂ ನಿರ್ದುಷ್ಟವಾಗಿರುತ್ತದೆ ಎಂಬುದನ್ನು ಅವರು ಸಾಬೀತುಪಡಿಸಿದರು. ಬಸವಣ್ಣನವರ ವಚನವೊಂದರಲ್ಲಿದ್ದ 'ರಬ್ಬು' ಎಂಬ ಶಬ್ದಪಾಠವನ್ನು ಅನೇಕ ವಿದ್ವಾಂಸರು ಸಂದೇಹವಿಲ್ಲದೆ ಒಪ್ಪಿಕೊಂಡಿದ್ದರಾದರೂ ಬಸವನಾಳರು 'ಕಬ್ಬು' ಎಂಬ ಪಾಠವು ವಚನದ ಒಟ್ಟು ಅರ್ಥವ್ಯಾಪ್ತಿಯ ದೃಷ್ಟಿಯಿಂದ ಸರಿಯಾದ ಪಾಠವೆಂದು ಊಹಿಸಿ ಸಾಬೀತುಪಡಿಸಿದರು.'[1]

ಬಸವನಾಳರಿಂದ ಸಂಪಾದಿತವಾದ ಕೃತಿಗಳ ಮಹತ್ತ್ವದ ಭಾಗವೆಂದರೆ ಪ್ರತಿ ಗ್ರಂಥದ ಪ್ರಾರಂಭದಲ್ಲಿಯ ಪ್ರಸ್ತಾವನೆ. ಕವಿಯ ಹೆಸರು, ಕಾಲ, ಸ್ಥಾನ, ಮತ, ಗ್ರಂಥದ ಮಹತ್ತ್ವ, ವಿಷಯ, ಛಂದಸ್ಸು, ಅಲಂಕಾರ, ಪೂರ್ವ ಕವಿಗಳ ಛಾಯೆ ಮುಂತಾದ ಅನೇಕ ವಿಷಯಗಳ ಮೇಲೆ ಇಲ್ಲಿ ಸಂಶೋಧನಾತ್ಮಕವಾದ ವಿವರಗಳಿರುತ್ತವೆ. ಆದರೂ "ಈ ಗ್ರಂಥಕ್ಕೆ ನಾವು ಟಿಪ್ಪಣಿಗಳನ್ನು ಜೋಡಿಸಿದುದು ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂಬ ದೃಷ್ಟಿಯಿಂದ; ಪಂಡಿತರಿಗೆ ಮಾನ್ಯವಾಗಬೇಕೆಂಬ ಧಾರ್ಷ್ಟ್ಯದಿಂದಲ್ಲ" (ಕಾವ್ಯಾವಲೋಕನಂನ ಮುನ್ನುಡಿ) ಎಂಬ ಅವರ ಮಾತುಗಳು ಅವರ ವಿನಯಶೀಲತೆಗೆ ಸಾಕ್ಷಿಯಾಗಿವೆ.

---

1 ಸಾಲುದೀಪಗಳು, ಪು. ೧೪೬.

ವಚನ ಸಾಹಿತ್ಯ ಮತ್ತು ವೀರಶೈವ ಸಾಹಿತ್ಯದ ಸಂಪಾದನೆ ಮತ್ತು ಪ್ರಕಟನೆಯಲ್ಲಿ ಬಸವನಾಳರು ಗಣನೀಯ ಕೆಲಸ ಮಾಡಿದರು. ೧೯೨೩ರಲ್ಲಿ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಆಜೀವ ಸದಸ್ಯರಾದರು. ಈ ಸಂಸ್ಥೆಯ ಪರವಾಗಿ ನಾಗವರ್ಮನ ಕಾವ್ಯಾವಲೋಕನ ಹಾಗೂ ಭಟ್ಟಾಕಲಂಕದೇವನ ಶಬ್ದಾನುಶಾಸನ ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸಿದರು. 'ಮ್ಯೂಸಿಂಗ್ಸ್ ಆಫ್ ಬಸವ' (Musings of Basava) ಬಸವಣ್ಣನವರ ವಚನಗಳ ಆಂಗ್ಲಾನು ವಾದಗಳನ್ನು ಒಳಗೊಂಡಿದೆ. ಇದು ಬಸವಣ್ಣನವರ ವಚನಗಳ ಆಳವಾದ ತಿಳಿವಳಿಕೆ ಮತ್ತು ಆಂಗ್ಲಭಾಷೆಗೆ ಅನುವಾದಿಸುವಲ್ಲಿ ಅವರ ಕೌಶಲವನ್ನು ತೋರಿಸುತ್ತದೆ.

ಬಸವನಾಳರು ಸಂಪಾದನೆ ಮಾಡಿದ ಕೃತಿಗಳು ಹೀಗಿವೆ:

ಚಾಮರಸನ ಪ್ರಭುಲಿಂಗಲೀಲೆ (೧೯೩೮)

ನಾಗವರ್ಮನ ಕಾವ್ಯಾವಲೋಕನಂ (೧೯೩೯)

ಷಡಕ್ಷರದೇವನ ಶಬರಶಂಕರವಿಳಾಸಂ (೧೯೩೯)

ಕುಂಡಲಗಿಯಾಚಾರ್ಯರ ಕರ್ಣಾಟಕ ಶಬ್ದಾನುಶಾಸನ ಪ್ರಕಾಶಿಕೆ (೧೯೪೧)

ಹರಿಹರನ ರೇವಣಸಿದ್ದೇಶ್ವರದೇವರ ರಗಳೆ (೧೯೪೨)

ರಕ್ಷಾಶತಕ ಮತ್ತು ಪಂಪಾಶತಕ (೧೯೪೩),

ಬಾಲಲೀಲಾ ಮಹಾಂತ ಶಿವಯೋಗಿಗಳ ಕೈವಲ್ಯ ದರ್ಪಣ (೧೯೪೩)

ಮೈಲಾರದ ಬಸವಲಿಂಗ ಶರಣರ ಕೃತಿಗಳು (೧೯೪೫)

ಸರ್ಪಭೂಷಣ ಶಿವಯೋಗಿಗಳ ಕೈವಲ್ಯ ಕಲ್ಪವಲ್ಲರಿ (೧೯೪೮)

ಬಸವಣ್ಣನವರ ಷಟ್‌ಸ್ಥಲದ ವಚನಗಳು (೧೯೫೧)

ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣ

ಹರಿಹರನ ಗಿರಿಜಾಕಲ್ಯಾಣಂ

ಮೈಲಾರದ ಬಸವಲಿಂಗಶರಣರ ಕೃತಿಗಳು

ಹರಿಹರನ ಮೂರು ರಗಳೆಗಳು

ವೀರಶೈವ ತತ್ವಪ್ರಕಾಶ (ಪಂಡಿತ ಬರಹಗಳ ಸಂಕಲನ)

ಮ್ಯೂಸಿಂಗ್ಸ್ ಆಫ್ ಬಸವ (ಬಸವಣ್ಣನವರ ವಚನಗಳ ಆಂಗ್ಲಾನುವಾದ)

ಶಿ.ಶಿ. ಬಸವನಾಳರು ೧೯೪೪ ರಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದರು. ಅಖಿಲ ಭಾರತ ವೀರಶೈವ ಮಹಾಸಭೆಯ ೧೩ನೇ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದರು.

ಶಿವಲಿಂಗಪ್ಪ ಶಿವಯೋಗಪ್ಪ ಬಸವನಾಳರು ೧೯೫೧ ಡಿಸೆಂಬರ್ ೨೨ ರಂದು ನಿಧನರಾದರು.

❐ ❐ ❐

ರಾಳ್ಳಪಲ್ಲಿ ಅನಂತಕೃಷ್ಣಶರ್ಮ

(೧೮೯೩–೧೯೭೯)

ಗೀತಾ ನಾವಲ್

ತೆಲುಗು, ಕನ್ನಡ, ಪ್ರಾಕೃತ, ಸಂಸ್ಕೃತ, ತಮಿಳು, ಇಂಗ್ಲಿಷ್ ಭಾಷೆಗಳಲ್ಲಿ ಪರಿಣತರೂ ಒಳ್ಳೆಯ ವಾಕ್ಪಟುವೂ ಪ್ರಸಿದ್ಧ ಕವಿ, ಅನುವಾದಕ, ವಿಮರ್ಶಕರೂ ಖ್ಯಾತ ಸಂಗೀತಗಾರರೂ ಪಿಟೀಲು ವಿದ್ವಾಂಸರೂ ನುರಿತ ಅಧ್ಯಾಪಕರೂ ಆಗಿ ಹೆಸರಾದ ರಾಳ್ಳಪಲ್ಲಿ ಅನಂತಕೃಷ್ಣಶರ್ಮ ಅವರನ್ನು ವಿದ್ವದ್ವಲಯವು '೨೦ನೇ ಶತಮಾನದ ದಂತಕಥೆ' ಎಂದೇ ಗುರುತಿಸುತ್ತದೆ. ೧೮೯೩ ರ ಜನವರಿ ೨೩ ರಂದು ಆಂಧ್ರದ ಅನಂತಪುರ ಜಿಲ್ಲೆಯ ಕಂಬದೂರು ತಾಲ್ಲೂಕಿನ ರಾಳ್ಳಪಲ್ಲಿ ಎಂಬ ಗ್ರಾಮದಲ್ಲಿ ಕರ್ಣಮಡಕಲ ಕೃಷ್ಣಮಾಚಾರ್ಯ – ಅಲಮೇಲು ಮಂಗಮ್ಮ ಅವರ ಮಗನಾಗಿ ಜನಿಸಿದರು. ಬಹಳ ಚಿಕ್ಕ ವಯಸ್ಸಿನಲ್ಲಿಯೇ ಅವರಿಗೆ ತಂದೆಯವರಿಂದ ತೆಲುಗು ಮತ್ತು ಸಂಸ್ಕೃತ ಭಾಷೆ, ಸಾಹಿತ್ಯಗಳ ಪಾಠವಾಯಿತು. ತಮ್ಮ ೧೨ನೇ ವಯಸ್ಸಿನ ಹೊತ್ತಿಗೆಲ್ಲ ಕಾಳಿದಾಸನ ಮಹಾಕಾವ್ಯ, ನಾಟಕಾದಿಗಳನ್ನು, ತೆಲುಗು ಮಹಾಕವಿತ್ರಯ ನನ್ನಯ, ತಿಕ್ಕನ, ಎರ್ರನ ಅವರುಗಳನ್ನು ಓದಿಕೊಂಡು ಅರ್ಥೈಸುವ ಮಟ್ಟಿಗೆ ಸಾಹಿತ್ಯಲೋಕದಲ್ಲಿ ಪದಾರ್ಪಣವಾಗಿತ್ತು. ತಂದೆಯವರಿಗೆ ತಮ್ಮ ಮಗ ಸಾಹಿತ್ಯದಲ್ಲಿ ಪರಿಣತನಾಗುತ್ತಾನೆ ಎಂಬುದರ ಬಗ್ಗೆ ಅಪಾರ ನಂಬಿಕೆ ಇತ್ತು. ರಾಳ್ಳಪಲ್ಲಿಯವರು ತಂದೆಯ ನಂಬಿಕೆಯನ್ನು ಕಡೆಗಣಿಸಲಿಲ್ಲವಾದರೂ ತಾಯಿಯವರಿಂದ ಪ್ರಸಾದಿತವಾದ ಸಂಗೀತದತ್ತ ಒಲವು ಅಪಾರವಾಗಿತ್ತು. ತಮ್ಮ ಸಹೋದರಿ ಯದುಗಿರಿಯಮ್ಮ ಅವರೊಂದಿಗೆ ಆಗಿಂದಾಗ್ಗೆ ರಾಳ್ಳಪಲ್ಲಿಯ

ಹನುಮಂತನ ಗುಡಿಯ ಆವರಣದಲ್ಲಿ ದೇವರನಾಮಗಳನ್ನೂ ಶ್ಲೋಕಗಳನ್ನೂ ಶ್ರುತಿಬದ್ಧವಾಗಿ ಹಾಡುವುದೂ ರೂಢಿಯಾಗಿತ್ತು.

ತಮ್ಮ ೧೨ನೇ ವಯಸ್ಸಿಗೆ ಇಷ್ಟೆಲ್ಲ ಪರಿಣತರಾಗಿದ್ದ ರಾಳ್ಳಪಲ್ಲಿಯವರು ೧೯೦೬ರಲ್ಲಿ ವ್ಯಾಸಂಗಕ್ಕೆಂದು ಮೈಸೂರಿಗೆ ಬಂದರು. ಆ ಹೊತ್ತಿಗೆಲ್ಲ ಮೈಸೂರು ಸಂಸ್ಥಾನವು ಸಾಹಿತ್ಯದ ಸಂಗೀತದ ಅತ್ಯುತ್ಕೃಷ್ಟ ಸಾಂಸ್ಕೃತಿಕ ನೆಲೆಯೆಂದು ಖ್ಯಾತವಾಗಿತ್ತು. ಮೈಸೂರಿನಲ್ಲಿ ಶರ್ಮರು ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಠದಲ್ಲಿ ವಾಸ್ತವ್ಯ ಕಂಡುಕೊಂಡ ಕೆಲವೇ ದಿನಗಳಲ್ಲಿ ಆ ಮಠದ ಗುರುಗಳಾಗಿದ್ದ ಕೃಷ್ಣ ಬ್ರಹ್ಮತಂತ್ರ ಸ್ವಾಮಿಯವರಿಗೆ ಆಪ್ತರೂ ಪ್ರಿಯರೂ ಆದರು. ಭಾಗಶಃ ಕುರುಡರೂ ಕಿವುಡರೂ ಆಗಿದ್ದ ಸ್ವಾಮಿಯವರಿಗೆ ರಾಳ್ಳಪಲ್ಲಿಯವರು ಗುರುಗಳು ರಚಿಸಿದ್ದ 'ಅಲಂಕಾರ ಮಣಿಹಾರ' ವೆಂಬ ಆಲಂಕಾರಿಕ ಗ್ರಂಥವನ್ನು ಓದಿ ಹೇಳುತ್ತ, ಅಲ್ಲಲ್ಲಿ ತಮ್ಮ ಪಾಂಡಿತ್ಯವನ್ನೂ ಬಳಸಿಕೊಂಡು ಅರ್ಥೈಸುತ್ತ ಸ್ವಾಮಿಯವರಿಗೆ ಕಿವಿಯೂ ಕಣ್ಣೂ ಆಗಿದ್ದರು. ಕೆಲಕಾಲದ ಅನಂತರ ಚಾಮರಾಜನಗರದ ಖ್ಯಾತ ಸಂಸ್ಕೃತ ಪಂಡಿತರಾಗಿದ್ದ ರಾಮಾಶಾಸ್ತ್ರಿಯವರ ಪ್ರಭಾವಕ್ಕೆ ಒಳಗಾಗಿ ಸಂಸ್ಕೃತ ವ್ಯಾಕರಣ ಹಾಗೂ ಆ ಭಾಷೆಯಲ್ಲಿ ತಮಗಿದ್ದ ಆಸಕ್ತಿಯನ್ನೂ ಪಾಂಡಿತ್ಯವನ್ನೂ ದೀಪ್ತಗೊಳಿಸಿಕೊಂಡರು. ಎಷ್ಟೋ ಕಾಲಗಳಿಂದ ಮರೆಯಾಗಿ ಹೋಗಿದ್ದ ಛಂದೋಬಂಧಗಳನ್ನೂ ಸಂಗೀತ ಕೃತಿಗಳನ್ನೂ ಬಳಕೆಗೆ ತರುತ್ತ, ಶಾಸ್ತ್ರ–ಸಂಗೀತಗಳ ನಡುವಿನ ಕೊಂಡಿಯಾಗುತ್ತ, ಕನ್ನಡ–ತೆಲುಗು ಭಾಷಾಸಾಹಿತ್ಯಗಳಲ್ಲೂ ತನ್ನ ಪಾಂಡಿತ್ಯವನ್ನು ಮೆರುಗುಗೊಳಿಸಿಕೊಳ್ಳುತ್ತ ಶರ್ಮರು ಬೆಳೆದ ರೀತಿ ವಿಸ್ಮಯಾವಹವಾದದ್ದು.

ರಾಳ್ಳಪಲ್ಲಿಯವರ ಕೌಟುಂಬಿಕ ವಾತಾವರಣವೂ ಅವರ ಪ್ರತಿಭೆಗೆ ಪೂರಕವಾಗಿಯೇ ಇತ್ತು. ಅವರ ತಂದೆ ಕರ್ಣಮಡಕಲ ಕೃಷ್ಣಮಾಚಾರ್ಯರು ಕೇವಲ ವಿದ್ವಾಂಸರೆಂದಷ್ಟೇ ಖ್ಯಾತರಾಗಿರಲಿಲ್ಲ. ಅವರಿಗೆ ಕಾವ್ಯ, ಅಧ್ಯಾತ್ಮ ಹಾಗೂ ಅವೆರಡನ್ನೂ ಧ್ಯಾನಸ್ಥವಾಗಿ ಪರಿಭಾವಿಸುವ ಒಳನೋಟವಿತ್ತು. ಈ ಗುಣ ಶರ್ಮರಲ್ಲೂ ರಕ್ತಗತವಾಗಿತ್ತು. ಕನಿಷ್ಠ ಹತ್ತು ವರ್ಷಗಳನ್ನು ಅವರು ರಘುವಂಶ, ಚಂಪೂರಾಮಾಯಣ, ಚಂಪೂಭಾರತ, ಆಂಧ್ರರಾಮಾಯಣ, ವಿಶ್ವಗುಣಾದರ್ಶ ಚಂಪೂ ಮೊದಲಾದವನ್ನು ತಮ್ಮ ತಂದೆಯವರಲ್ಲಿಯೇ ಸಾಂಪ್ರದಾಯಿಕವಾಗಿ ಕಲಿತಿದ್ದರು. ಮೈಸೂರಿಗೆ ಬಂದ ಬಳಿಕ ಚಾಮರಾಜ ನಗರದ ರಾಮಾಶಾಸ್ತ್ರಿಯವರಲ್ಲಿ

ಉತ್ತರರಾಮಚರಿತ, ಶಾಕುನ್ತಲಮ್, ಮುದ್ರಾರಾಕ್ಷಸ ಮೊದಲಾದ ವಿಭಿನ್ನ ಪ್ರಕಾರಗಳ, ವಿಭಿನ್ನ ಶೈಲಿಯ ಕೃತಿಗಳನ್ನು ಅಭ್ಯಸಿಸಿದರು. ಸಂಗೀತದಲ್ಲೂ ಅವರಿಗೆ ಆಳವಾದ ಪರಿಶ್ರಮವಿತ್ತು. ಆರಂಭಿಕವಾಗಿ, ಮೈಸೂರು ಅರಮನೆಯ ಆಸ್ಥಾನ ವಿದ್ವಾಂಸರಾಗಿದ್ದ ವಾಗ್ಗೇಯಕಾರ ಕರಿಗಿರಿರಾಯರಲ್ಲೂ ತದನಂತರ ಬಿಡಾರಂ ಕೃಷ್ಣಪ್ಪನವರಲ್ಲೂ ಅವರಿಗೆ ಸಂಗೀತಾಭ್ಯಾಸವಾಯಿತು. ಸಂಗೀತದ ವಿವಿಧ ಸಂಗತಿಗಳನ್ನು ಪ್ರಸ್ತುತಪಡಿಸುವ ರೀತಿ, ರಾಗವಿಸ್ತಾರ, ಸ್ವರಪ್ರಸ್ತುತಿಗಳ ಕುರಿತ ಅವರ ಚಿಂತನೆಗಳು ಅತ್ಯಂತ ಕರಾರುವಾಕ್ಕಾಗಿರುತ್ತಿದ್ದುವು. ಈ ಕುರಿತಂತೆ ಅವರ ಬಗ್ಗೆ ವೀಣೆ ಶೇಷಣ್ಣನವರಿಗೆ ಅಪಾರ ಮೆಚ್ಚುಗೆ ಗೌರವಗಳಿದ್ದುವು. ಶ್ರೀಯುತರು ಮೈಸೂರು ವಿಶ್ವವಿದ್ಯಾನಿಲಯದ ತೆಲುಗು ವಿಭಾಗದಲ್ಲಿ ಅಧ್ಯಾಪಕರಾಗಿಯೂ ೧೯೧೨ ರಿಂದ ೧೯೪೯ರ ತನಕ ಸೇವೆ ಸಲ್ಲಿಸಿದರು. ೧೯೨೭ರಲ್ಲಿ ಕನ್ನಡ ಎಂ.ಎ. ಮೊದಲನೆಯ ತಂಡದ ವಿದ್ಯಾರ್ಥಿಗಳಾಗಿದ್ದ ಕುವೆಂಪು, ಕೆ. ವೆಂಕಟರಾಮಪ್ಪ ಮೊದಲಾದವರಿಗೆ ತೆಲುಗು ಭಾಷಾಸಾಹಿತ್ಯಗಳನ್ನು ಪಾಠ ಮಾಡಿದರು. ಅನಂತರದಲ್ಲಿ ದೇ. ಜವರೇಗೌಡ, ಟಿ.ವಿ. ವೆಂಕಟಾಚಲ ಶಾಸ್ತ್ರೀ ಮೊದಲಾದ ಅನೇಕರಿಗೆ ತೆಲುಗು ಬೋಧಿಸಿದರು. ಕಾಲೇಜಿನಲ್ಲಿ ಅಧ್ಯಾಪಕರಾಗಲು ಯಾವ ಪದವಿಯೂ ಇಲ್ಲದಿದ್ದರೂ ಶರ್ಮರ ಪಾಂಡಿತ್ಯವನ್ನು ಗುರುತಿಸಿ ಅವರಿಗೆ ಪಂಡಿತ ಪದವಿಯನ್ನು ನೀಡಿದವರು ಖ್ಯಾತ ಶಿಕ್ಷಣ ತಜ್ಞರು, ಕವಿ, ವಿಮರ್ಶಕರಾದ ಸಿ.ಆರ್. ರೆಡ್ಡಿ. ಮಹಾರಾಜ ಕಾಲೇಜಿನ ಪ್ರಾಂಶುಪಾಲರು, ಆಂಧ್ರ ವಿಶ್ವವಿದ್ಯಾಲಯದ ಮೊದಲ ಕುಲಪತಿಯಾಗಿದ್ದ ಸಿ.ಆರ್. ರೆಡ್ಡಿ ರಾಳ್ಳಪಲ್ಲಿ ಅವರ ಬೋಧನೆಯನ್ನು ಕುರಿತಂತೆ ಹೇಳಿದ ಮಾತುಗಳಿವು: " He is now a Telugu Pandit in the Maharajah's college and has proved himself a great teacher. In fact he has the reputation of being one of the few pandits that could control a class by winning the respect of boys and evoking in them a genuine interest in their studies" (Testimonial given by C.R. Reddy on 15th December, 1914– Anantharagam, Rallapalli Felicita– tion Volume, p.322)

ಮೈಸೂರಿನ ಮಹಾರಾಜ ಕಾಲೇಜಿನಿಂದ ನಿವೃತ್ತರಾದ ಮೇಲೆ ತಿರುಪತಿ ಪ್ರಾಚ್ಯ ಸಂಶೋಧನಾಲಯದಲ್ಲಿಯೂ ಸೇವೆ ಸಲ್ಲಿಸಿ ತಾಳ್ಳಪಾಕ ಕವಿಗಳ ಕೀರ್ತನೆಗಳನ್ನು ಸಂಶೋಧಿಸಿ, ಆ ವಿಶಿಷ್ಟ ಸಾಹಿತ್ಯದ ಸಂಪಾದನೆಯ ಕಾರ್ಯವನ್ನು ನಿರ್ವಹಿಸಿದರು.

ಅಂದಿನ ತಿರುಮಲ ತಿರುಪತಿ ದೇವಸ್ಥಾನಗಳ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದ ಚೆಲಿಕಾನಿ ಅನ್ನಾರಾವ್ ಅವರ ನಿರ್ದೇಶನದಂತೆ ಈ ಕಾರ್ಯವನ್ನು ಅತ್ಯಂತ ಭಕ್ತಿ ಶ್ರದ್ಧೆಗಳಿಂದ ಕೈಗೊಂಡರು. ತಾಳ್ಳಪಾಕ ಅನ್ನಮಾಚಾರ್ಯರ ಕೀರ್ತನೆಗಳು ಬಹು ದೀರ್ಘಕಾಲಗಳಿಂದಲೂ ತಿರುಮಲ ದೇವಾಲಯದ ಸುರಕ್ಷಿತ ಭಂಡಾಗಾರದಲ್ಲಿ ತಾಮ್ರದ ಫಲಕಗಳಲ್ಲಿ ಅಡಕವಾಗಿದ್ದುವು. ೧೯೫೧ ರಿಂದ ೧೯೫೬ ರ ತನಕ ಶರ್ಮರು ಸುಮಾರು ೩೦೦ ಸಂಕೀರ್ತನೆಗಳನ್ನು ಪರಿಶೀಲಿಸಿ ೫ ಸಂಪುಟಗಳನ್ನು ಹೊರತಂದದ್ದಲ್ಲದೆ ಸುಮಾರು ೧೦೮ ಸಂಕೀರ್ತನೆಗಳಿಗೆ ಸ್ವರಾಂಕನಗಳನ್ನು (notations) ರಚಿಸಿದ ಕೀರ್ತಿ ಶರ್ಮರಿಗೆ ಸಲ್ಲುತ್ತದೆ. ಸಂಗೀತ ಮತ್ತು ಸಾಹಿತ್ಯದಲ್ಲಿ ಇವರ ಸಾಧನೆಗಾಗಿ ತಿರುಪತಿಯ ವೇಂಕಟೇಶ್ವರ ವಿಶ್ವವಿದ್ಯಾಲಯವು ಶರ್ಮ ಅವರಿಗೆ ಡಿ.ಲಿಟ್. ಪದವಿಯನ್ನು ಪ್ರದಾನ ಮಾಡಿತು. ಸಂಗೀತಕಲಾನಿಧಿ, ಸಂಗೀತ ಕಲಾಪ್ರಪೂರ್ಣ ಮೊದಲಾದ ಪ್ರಶಸ್ತಿಗಳು ಅವರನ್ನರಸಿ ಬಂದುದಕ್ಕೆ ಸಂಗೀತದಲ್ಲಿ ಅವರಿಗಿದ್ದ ಅಪರಿಮಿತ ಪರಿಶ್ರಮವೇ ಕಾರಣ. ಅವರ ವಿಚಕ್ಷಣಮತಿಗೆ ಬಿಡು ವೆಂಬುದೇ ಇಲ್ಲ ಎಂದು ಅನೇಕ ವಿದ್ವಾಂಸರು ಅನೇಕ ಸಂದರ್ಭಗಳಲ್ಲಿ ಶರ್ಮರನ್ನು ಅಭಿನಂದಿಸಿದ್ದಾರೆ.

ಸಂಗೀತವನ್ನು ಸಾಂಪ್ರದಾಯಿಕ ನೆಲೆಯಲ್ಲಿಯೇ ಅಭ್ಯಸಿಸಬೇಕು ಎಂಬ ವಿಷಯದಲ್ಲಿ ರಾಳ್ಳಪಲ್ಲಿಯವರದು ಅತ್ಯಂತ ಶಿಸ್ತುಬದ್ಧ ಆಗ್ರಹವಾಗಿತ್ತು. ಸಂಗೀತ ಪ್ರಸ್ತುತಿಯಲ್ಲಿ ವಿದ್ವತ್ತಿನ ಅಳತೆಗೋಲಾಗಿದ್ದ ರಾಗವಿಸ್ತಾರದಲ್ಲಿ ನಾದಮಯತೆಯನ್ನೂ, ಸ್ವರ ಕಲ್ಪನೆಯಲ್ಲಿ ನಿರ್ದುಷ್ಟತೆಯನ್ನು ಕಾಪಾಡಿ ಕೊಳ್ಳ ಬೇಕೆಂಬ ವಿಷಯದಲ್ಲಿ ಅವರೆಂದೂ ರಾಜಿಗೆ ಸಿದ್ಧರಿರುತ್ತಿರಲಿಲ್ಲ. ಸ್ವತಃ ಅವರ ಗಾಯನ ಗಾಂಭೀರ್ಯವೂ ಅದೇ ನೆಲೆಯಲ್ಲಿರುತ್ತಿತ್ತು. ಕನ್ನಡದ ಹಿರಿಯ ವಿದ್ವಾಂಸರಾದ ವಿ. ಸೀತಾರಾಮಯ್ಯನವರು ಶರ್ಮರನ್ನು ಅಪರಿಮಿತವಾಗಿ ಗೌರವಿಸುತ್ತಿದ್ದರು. ಅವರ ಪ್ರಕಾರ ಶರ್ಮರು ಹಾಡುವಾಗ ಆಗುವ ಅನುಭವ ಇತರ ಸಂಗೀತ ವಿದ್ವಾಂಸರಿಗಿಂತ ಭಿನ್ನವಾದದ್ದು. "ಅವರು ಒಂದು ಕೃತಿಯ ನಾಡಿಮಿಡಿತವನ್ನು ಗ್ರಹಿಸಿ ಕೃತಿಯ ಜೀವಸಾರ ಹರಿಸುವಂತೆ ಅದನ್ನು ರಾಗತಾಳಗಳಲ್ಲಿ ನುಡಿಯುವ ರೀತಿಯನ್ನು ನಾನು ಬೇರೆಲ್ಲೂ ಕಂಡಿಲ್ಲ. ಅರ್ಥಸ್ಪಷ್ಟವಾಗಿ ಒಂದು ಭಾವ ಬಂಧುರತೆಯನ್ನು ಅರಿತ ಸರಸ ಸಾಹಿತಿಯ

ಹಾಡುಗಾರಿಕೆ ಅದು. ಇವರದು ಒಂದು ಗಂಡು ಬಾಣಿ. ಒಂದು ಜೀವದ ಸಂಸ್ಕಾರವೆಲ್ಲ ನುಡಿಯುವುದು ಇಲ್ಲಿಯ ಲಕ್ಷಣ" (ಅನಂತರಾಗಂ, ರಾಳ್ಳಪಲ್ಲಿ ಅಭಿನಂದನ ಗ್ರಂಥ, ಪು.೨೪೮–೪೯) ಎಂಬ ವಿ.ಸೀ ಅವರ ಮಾತುಗಳಲ್ಲಿ ಶರ್ಮರ ಗಾಯನದ ಮಟ್ಟ ಎಂಥದಿತ್ತು ಎಂಬುದನ್ನು ಗ್ರಹಿಸಬಹುದು. ವಿವಿಧ ರಾಗಗಳಲ್ಲಿ ಸಂಗೀತದ ಸ್ವರಗಳು ವಿವಿಧ ಗುಣ ಸ್ವಭಾವಗಳನ್ನು ಹರಿಯಿಸುವ ಬಗೆ ಹೇಗೆ ಎಂಬುದನ್ನು ಪ್ರಯೋಗಶಾಲೆಯಲ್ಲಿ ಮೇಜಿನ ಮೇಲಿರುವ ವಸ್ತುವೊಂದನ್ನು ಬಿಡಿಸಿ ತೋರಿಸುವಂತೆ ಶರ್ಮರು ವಿವರಿಸುತ್ತಿದ್ದ ಬಗೆಯನ್ನು ಅನೇಕ ವಿದ್ವಾಂಸರು ಗಮನಿಸಿದ್ದಾರೆ, ವರ್ಣಿಸಿದ್ದಾರೆ. ಗಾಯನ ಪ್ರಸ್ತುತಿಯಲ್ಲಿ ಪದವೋ ಅಥವಾ ನಾದವೋ ಯಾವುದು ನರಳಿದರೂ ಸಂಗೀತದ ಹೃದಯವು ಅರಳುವುದಿಲ್ಲ ಎಂಬುದು ಅವರ ಖಚಿತ ಅಭಿಪ್ರಾಯ.

ಅನಂತಕೃಷ್ಣಶರ್ಮರ ಬಗೆಗೆ ಸಾಳ್ವ ಕೃಷ್ಣಮೂರ್ತಿಯವರು ರಚಿಸಿರುವ–

ಜಯತಿ ನಯ–ಸುರೂಪಃ ಪುಷ್ಪಹಾಸಾನುರೂಪೋ l
ವಿಹಿತ ಮಧುರಭಾವಃ ಸುಂದರೋಮಂಗಳಾಂಗಃ ॥
ಕೃತಿರಪಿ ವ್ಯವಹರ್ತಾ ಸತ್ಯವಾದೀ ಚ ವಾಗ್ಮೀ l
ರುಚಿರಮತಿರುದಾರಃ ಪೇಶಲೋಽನಂತಕೃಷ್ಣಃ ॥

(ಅನಂತರಾಗಂ, ರಾಳ್ಳಪಲ್ಲಿ ಅಭಿನಂದನ ಗ್ರಂಥ, ಪು.೯೯)

ಎಂಬ ಶ್ಲೋಕವೂ ಅದ್ಭುತವಾಗಿದೆ. ಎರಡು ವಿದ್ವತ್ಪ್ರತಿಭೆಗಳ ಅನಾವರಣ ಇದು!

೧೯೫೦ ರ ದಶಕದಲ್ಲಿ ವಿ. ಸೀತಾರಾಮಯ್ಯನವರು ತಮ್ಮ ಪರಿಚಿತ ಕಲಾರಸಾಭಿಜ್ಞರನ್ನು ವರ್ಷಕ್ಕೊಮ್ಮೆಯೋ, ಎರಡು ಬಾರಿಯೋ ಆಹ್ವಾನಿಸಿ ಅವರೊಂದಿಗೆ ಸಾಹಿತ್ಯ, ಕಲೆ ಮೊದಲಾದ ವಿಷಯಗಳ ಬಗ್ಗೆ ಲೋಕಾಭಿರಾಮವಾಗಿ ತೊಡಗಿಕೊಳ್ಳುತ್ತಿದ್ದರಂತೆ. ಅಂತಹ ಗೋಷ್ಠಿಗಳಲ್ಲಿ ಪ್ರಧಾನ ಆಕರ್ಷಕ ಕೇಂದ್ರ ವಾಗಿರುತ್ತಿದ್ದವರು ಶರ್ಮರೇ. ಮೋಟಗಾನಹಳ್ಳಿ ಸುಬ್ರಮಣ್ಯಶಾಸ್ತ್ರೀ, ಎಚ್.ಯೋಗಾ ನರಸಿಂಹಂ, ಕೆ.ವಿ.ರಾಘವಾಚಾರ್ ಮುಂತಾದವರ ಉಪಸ್ಥಿತಿ ಇರುತ್ತಿದ್ದ ಅಂತಹ ದೊಂದು ಸಂದರ್ಭ. ಮಾತಿನ ಮಧ್ಯೆ ಶರ್ಮರು ಯಾವುದೋ ಒಂದು ರಚನೆಯ ಕುರಿತು ಮಾತನಾಡುತ್ತ ಅದರ ಛಂದಸ್ಸು, ಲಯ, ಮತ್ತು ಅಂಶಗಣಗಳ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರಂತೆ. ಆಗ ಅಲ್ಲಿ ಉಪಸ್ಥಿತರಿದ್ದ ಟಿ.ವಿ. ವೆಂಕಟಾ

ಚಲಶಾಸ್ತ್ರಿಯವರು ''ಇಂತಹದೊಂದು ಅನೌಪಚಾರಿಕ ಮಾತುಗಳ ಮಧ್ಯೆಯೂ ಶರ್ಮರ ಮಾತು ಒಂದು ತರಗತಿಯ ಪೂರ್ವಸಿದ್ಧ ಪಠ್ಯದಂತೆ ಕರಾರುವಾಕ್ಕಾಗಿ, ಪರಿಶೋಧಕ ದೃಷ್ಟಿಕೋನದಿಂದ ಕೂಡಿರುತ್ತದಲ್ಲವೇ'' ಎಂದು ಮೆಚ್ಚುಗೆ ವ್ಯಕ್ತಪಡಿಸಿದುದರ ಕುರಿತು ವಿ.ಸೀತಾರಾಮಯ್ಯನವರು ನೆನಪಿಸಿಕೊಳ್ಳುತ್ತಾರೆ.

''ಕಲೆಯ ಬಗ್ಗೆ ಆಳವಾದ ಜ್ಞಾನ, ರಸಾಭಿಜ್ಞತೆ ಮತ್ತು ಪರಿಣತಿಯನ್ನು ಹೊಂದುವ ಮೂಲಕ ಕಲಾಭಿರುಚಿಯನ್ನೂ ಹಾಗೂ ಆ ಕುರಿತ ವಿಚಾರಗಳನ್ನೂ ಕಾಲಕಾಲಕ್ಕೆ ಪುನಶ್ಚೇತನಗೊಳಿಸುವ ಅಥವಾ ಅಳಿಯುತ್ತಿರುವ ಕಲೆಗಳಿಗೆ ಕಾಯಕಲ್ಪ ನೀಡುವ ಆವಶ್ಯಕತೆ ಅಪಾರವಾಗಿದೆ. ಹಾಗಾಗಿ ಕಲಾರಸಿಕರ ಸಂಖ್ಯೆ ಸಮಾಜದಲ್ಲಿ ಹೆಚ್ಚೆಚ್ಚು ವೃದ್ಧಿಯಾಗಬೇಕು'' ಮುಂತಾಗಿ ೧೯೩೮ ರಲ್ಲಿ ನೆಲ್ಲೂರಿನ ಆಂಧ್ರನಾಟಕ ಕಲಾಪರಿಷತ್ತಿನ ಅಧ್ಯಕ್ಷ ಭಾಷಣದಲ್ಲಿ ನುಡಿದ ಶರ್ಮರ ನುಡಿ ಒಂದು ಶತಮಾನ ಕಳೆದರೂ ಶಬ್ದಿಸುತ್ತಲೇ ಇದೆ. ಹಾಗೆಯೇ ಅವರು ಆಕಾಶವಾಣಿಯ ಭಾಷಣವೊಂದರಲ್ಲಿ ''ನಮ್ಮ ಗುಣ, ಮನೋಧರ್ಮಗಳು, ನಮ್ಮ ಕ್ರಿಯಾವಿಧಾನಗಳು, ಮಾತಿನ ಶೈಲಿ ಹಾಗೂ ನಾವು ವ್ಯಕ್ತಪಡಿಸುವ ಭಾವಭಾವನೆಗಳು ಕಲೆಯ ದೃಷ್ಟಿಯಿಂದ ಪುನಶ್ಚೇತನಗೊಳ್ಳುತ್ತಿರಬೇಕು. ಹೀಗೆ ನಮ್ಮ ಚಿಂತನೆಗಳನ್ನು ನಿಯಂತ್ರಿಸಿಕೊಳ್ಳುತ್ತ ಲಯಬದ್ಧವಾಗಿ ಒಪ್ಪಗೊಳಿಸಿಕೊಂಡಾಗ ಮಾತ್ರ ನಮ್ಮ ಬದುಕು ಪ್ರಕಾಶಮಾನವಾಗಿ ಇರಲು ಸಾಧ್ಯ. ಇದೇ ಒಂದು ಸುಸಂಸ್ಕೃತ ಸಮಾಜವನ್ನು ರೂಪಿಸುವ ನಿಜವಾದ ಮಾರ್ಗ ಮತ್ತು ವಿದ್ಯಾಧಿದೇವತೆ ಸರಸ್ವತಿಯ ಪೂಜಾಕ್ರಮ'' ಎಂದಿದ್ದರು. ಅವರ ಮಾತುಗಳಿಗೆ ಅವರ ಬದುಕೇ ನಿದರ್ಶನವಾಗಿತ್ತು.

ಕಲೆಯ ಕುರಿತಂತೆ ಅವರಿಗಿದ್ದ ಪ್ರಭುತ್ವ, ಸೈದ್ಧಾಂತಿಕ ದೃಷ್ಟಿಕೋನದಲ್ಲಿ ನಿಖರತೆ ಮುಂತಾದವು ಶರ್ಮರಿಗೆ ಕಲಿತು ಬಂದದ್ದಲ್ಲ, ಮೈಗೂಡಿ ಪ್ರಕಟಗೊಂಡಂಥವು. ಸರಳತೆ, ಪ್ರಶಾಂತ ಮನೋಭಾವ, ಆಧ್ಯಾತ್ಮಿಕ ಚಿಂತನೆಗಳು ಮುಂತಾದವು ಅವರ ವ್ಯಕ್ತಿತ್ವದ ಪ್ರಧಾನ ಗುಣಗಳು. ಒಮ್ಮೆ ೬೦ ರ ದಶಕದಲ್ಲಿ ಡಿ.ವಿ.ಜಿ. ಅವರ ಕೋರಿಕೆಯ ಮೇರೆಗೆ ಶರ್ಮರು ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ರಾಮಾಯಣದ ಕೆಲವು ಶ್ಲೋಕಗಳನ್ನು ವಿವಿಧ ರಾಗಗಳಲ್ಲಿ ವಾಚಿಸಿದ್ದರು. ಸುಸ್ಫುಟವಾದ ಸ್ವರಗಳ ಹರಿವು, ಶ್ಲೋಕಗಳನ್ನು ಒಟ್ಟಾಗಿ ವ್ಯಾಖ್ಯಾನಿಸುವಲ್ಲಿದ್ದ ತಾದಾತ್ಮ್ಯಭಾವ, ಹೃದಯದಿಂದ ಜೀವಸ್ವರವೇ ಹೊರ ಹೊಮ್ಮುತ್ತಿ ದೆಯೇನೋ ಎಂಬಂತಹ ಭಾವಪೂರ, ಅಭಿವ್ಯಕ್ತಿಯಲ್ಲಿದ್ದ

ಗಾಂಭೀರ್ಯ, ಪಾಂಡಿತ್ಯ ಮುಂತಾದುವುಗಳು ಶ್ರೋತೃಗಳ ಮೇಲೆ ಬೀರಿದ ಪ್ರಭಾವವು ಅನನ್ಯವಾದದ್ದು.

ಶರ್ಮರ ಕೆಲವು ಸಾಹಿತ್ಯ ಕೃತಿಗಳೂ ಅವರ ಸಂಗೀತ ಸಾಮ್ರಾಜ್ಯದಷ್ಟೇ ಮಹತ್ತರವಾದ ಹೆಸರನ್ನು ಗಳಿಸಿಕೊಂಡಿವೆ. ತೆಲುಗಿನಲ್ಲಿ 'ಮೀರಾಬಾಯಿ' ಖಂಡಕಾವ್ಯ, 'ತಾರಾದೇವಿ' ಖಂಡಕಾವ್ಯ, 'ಪೆನುಕೊಂಡ ಪಾಟ' (ಕಾವ್ಯ), 'ಶಮೀಪೂಜಾ' (ಕಾವ್ಯ), 'ವಿಶ್ವಗುಣಾದರ್ಶ' (ಅನುವಾದ), 'ಮಹಿಶೂರರಾಜಾಭ್ಯುದಯಾದರ್ಶಃ' ಎಂಬ ಸಂಸ್ಕೃತ ಚಂಪೂಕಾವ್ಯ, 'ಅನಂತ ಭಾರತೀ' ಎಂಬ ಸಂಸ್ಕೃತ ರಚನೆಗಳ ಸಂಕಲನ, ವೇಮನನ ಬಗೆಗಿನ ವಿಮರ್ಶೆ, 'ನಾಟಕೋಪನ್ಯಾಸ', ಪ್ರಾಕೃತದಿಂದ ಅನುವಾದಿಸಿದ 'ಶಾಲಿವಾಹನ ಗಾಥಾಸಪ್ತ ಸತೀಸಾರ', 'ಸಾರಸ್ವತಲೋಕ', ಜಾಯಸೇನಾನಿಯ 'ನೃತ್ತರತ್ನಾವಲೀ' (ಅನುವಾದ) ಸುಂದರಪಾಂಡ್ಯರ ಸಂಸ್ಕೃತದ ಆರ್ಯಾ (ಅನುವಾದ), 'ಭಾರ್ಗವೀ ಪಂಚವಿಂಶತಿ' ಎಂಬ ಕವಿತಾಸಂಕಲನ ಮೊದಲಾದವು ಅವರ ಕೃತಿಗಳು. ಕನ್ನಡದಲ್ಲಿ 'ಗಾನಕಲೆ' ಹಾಗೂ 'ಸಾಹಿತ್ಯ ಮತ್ತು ಜೀವನಕಲೆ' ಎರಡೂ ಲೇಖನ ಸಂಕಲನಗಳು ಅವರ ಭಾಷಾಶೈಲಿ ಹಾಗೂ ವಿದ್ವತ್ಪೂರ್ಣ ಚಿಂತನೆಗಳಿಗೆ ಸಾಕ್ಷಿಯಾಗಿವೆ. ಇವುಗಳಲ್ಲಿರುವ ಲೇಖನಗಳು ಅವರ ಖಚಿತ ಅಭಿಪ್ರಾಯ ಮಂಡನೆಗಳಲ್ಲಿರುವ ನಿಷ್ಠುರ ವ್ಯಾಖ್ಯಾನಗಳನ್ನೂ ಒಳ್ಳೆಯ ಅಂಶಗಳನ್ನೂ ಎತ್ತಿ ಹಿಡಿಯುವ ಸಹೃದಯ ಗುಣಗಳನ್ನೂ ಸಮಪ್ರಮಾಣದಲ್ಲಿ ಹೊಂದಿವೆ.

ಸಂಗೀತ, ಸಾಹಿತ್ಯ ಈ ಎರಡೂ ವಿಷಯಗಳನ್ನುಳಿದಂತೆ ಸಾರ್ವಜನಿಕವಾದ, ಸಾಮಾಜಿಕವಾದ ಅಂಶಗಳತ್ತಲೂ ಶರ್ಮರು ಗಮನ ಹರಿಸುತ್ತಿದ್ದುದು ಉಂಟು. ಉದಾಹರಣೆಗೆ, ''ಮೈಸೂರಿನಲ್ಲಿ ಸ್ವಂತವಾಗಿ ಒಂದು ರೇಡಿಯೋ ಕೇಂದ್ರವನ್ನು ಸ್ಥಾಪಿಸಿದ ಎಂ.ವಿ. ಗೋಪಾಲಸ್ವಾಮಿ ಅವರಿಗೆ 'ಆಕಾಶವಾಣಿ' ಎಂಬ ಹೆಸರನ್ನು ಸೂಚಿಸಿದವರು ರಾಳ್ಳಪಲ್ಲಿ ಅವರೇ. ಆ ಹೆಸರು ಆಮೇಲೆ ರಾಷ್ಟ್ರೀಯ ವ್ಯಾಪ್ತಿಯನ್ನು ಗಳಿಸಿತು. ಎಂ. ವಿ. ಗೋಪಾಲಸ್ವಾಮಿ ಅವರು ನಡೆಸುತ್ತಿದ್ದ ಮಕ್ಕಳ ಶಾಲೆಗಳಿಗೆ 'ಶಿಶುವಿಹಾರ' ಎಂಬ ಹೆಸರನ್ನೂ ರಾಳ್ಳಪಲ್ಲಿ ಅವರು ಸೂಚಿಸಿದ್ದರು'' ಎಂಬ ಮಾತುಗಳು (ಸಂಪಾದಕರು–'ಅನಂತರಾಗಂ'–ರಾಳ್ಳಪಲ್ಲಿ ಅಭಿನಂದನ ಗ್ರಂಥಂ–ಪು. ೨೬೦) ಶರ್ಮರ ಸಾಮಾಜಿಕಪ್ರಜ್ಞೆಗೆ ಸಾಕ್ಷಿಯಾಗಿವೆ.

ಇಂಥ ಬಹುಮುಖೀ ವ್ಯಕ್ತಿತ್ವದ ಕಲಾರಾಧಕರೂ ಕಲಾರಸಾಭಿಜ್ಞರೂ ಬಹುಭಾಷಾವಿದರೂ ಕವಿಯೂ ವಿಮರ್ಶಕರೂ ಅನುವಾದಕರೂ ಗಾಯಕರೂ ಪಿಟೀಲು ವಾದಕರೂ ಆಗಿದ್ದ ರಾಳ್ಳಪಲ್ಲಿಯವರಿಗೆ ಗಾನಕಲಾಸಿಂಧು, ಗಾನಕಲಾಪ್ರಪೂರ್ಣ, ಸಂಗೀತ ಕಲಾರತ್ನ ಮುಂತಾದ ಬಿರುದುಗಳು ಸಂದವು. ರಾಜ್ಯ ಸಂಗೀತ ನಾಟಕ ಅಕಾಡಮಿಯ ಪುರಸ್ಕಾರ, ಗೌರವ ಡಾಕ್ಟೊರೇಟ್ ಮುಂತಾದ ಮರ್ಯಾದೆಗಳು ಮುಡಿಗೇರಿವೆ. ೧೧.೦೩.೧೯೭೯ ರಂದು ರಾಳ್ಳಪಲ್ಲಿಯವರು ತಿರುಮಲ ತಿರುಪತಿ ದೇವಸ್ಥಾನದ 'ಸಂಗೀತ ಸಾಹಿತ್ಯ ಆಸ್ಥಾನ ವಿದ್ವಾನ್' ಗೌರವ ಪಡೆದರು. ಅಂತಹ ಶುಭದಿನವೇ ಪ್ರಶಸ್ತಿ ಪಡೆದ ಒಂದೆರಡು ಗಂಟೆಗಳಲ್ಲೇ ಈ ಹಿರಿಯ ವಿದ್ವಚ್ಚೇತನವು ದೈವಾಧೀನವಾದದ್ದೂ ಅವರ ಬಹು ಮುಖೀ ಬದುಕಿನ ಒಂದು ವಿಶೇಷ ಸುದ್ದಿಯಾಗಿ ಉಳಿಯಿತು.

ಆಧಾರ

೧. ಅನಂತರಾಗಂ – ರಾಳ್ಳಪಲ್ಲಿ ಅಭಿನಂದನ ಗ್ರಂಥಂ – ಸಂ. ಆರ್ವಿಯಸ್, ಸುಂದರಂ, ಘಟ್ಟಮರಾಜು ಅಶ್ವತ್ಥನಾರಾಯಣ, ಶಿವಲಂಕ ಶ್ರೀರಾಮಚಂದ್ರಮೂರ್ತಿ, ಪ್ರ. ರಾಳ್ಳಪಲ್ಲಿ ಅಭಿನಂದನ ಸಮಿತಿ, ೧೯೭೭.

೨. ದೀವಟಿಗೆಗಳು – ಡಾ. ಎಸ್. ಆರ್. ರಾಮಸ್ವಾಮಿ – ಸಾಹಿತ್ಯ ಸಿಂಧು ಪ್ರಕಾಶನ, ಬೆಂಗಳೂರು, ೨೦೧೨.

❐ ❐ ❐

ಕೆ.ಜಿ. ಕುಂದಣಗಾರ

(೧೮೯೫–೧೯೬೫)

ಗೀತಾ ನಾವಲ್

ಉತ್ತರ ಕರ್ನಾಟಕದ ಕೆ.ಜಿ. ಕುಂದಣಗಾರರು ಕನ್ನಡ ಸಾಹಿತ್ಯದ ಆರಂಭಕಾಲೀನ ಪಂಡಿತ ಪರಂಪರೆಯಲ್ಲಿ ಸಂಶೋಧಕರಾಗಿ, ವಿಮರ್ಶಕರಾಗಿ, ಸೃಜನಶೀಲ ಬರೆಹಗಾರರಾಗಿ ಗುರುತಿಸಿಕೊಂಡವರು. ಉತ್ತರ ಕರ್ನಾಟಕದ ಪ್ರಥಮ ಕನ್ನಡ ಸ್ನಾತಕೋತ್ತರ ಪದವೀಧರರೆಂದೂ ಮೊದಲ ಕನ್ನಡ ಪ್ರಾಧ್ಯಾಪಕರೆಂದೂ ಕನ್ನಡ ಪಿಎಚ್.ಡಿ. ಪದವಿಗಳ ಮೊದಲ ಮಾರ್ಗದರ್ಶಕರೆಂದೂ ಅವರನ್ನು ಪ್ರಥಮ ಪ್ರಸಿದ್ಧರಾಗಿ ಉತ್ತರ ಕರ್ನಾಟಕದ ಸಾಹಿತ್ಯವಲಯ ಸಂಭ್ರಮಿಸಿದೆ.

ಕರ್ನಾಟಕದ ಗೋಕಾಕ ತಾಲ್ಲೂಕಿನ ಕೌಜಲಗಿಯಲ್ಲಿ ಗಿರಿಯಪ್ಪ – ಶಾಕಾಂಬರಿ ದಂಪತಿಯ ಮಗನಾಗಿ ಶ್ರೀಯುತರು ಆಗಸ್ಟ್ ೧೪, ೧೮೯೫ ರಂದು ಜನಿಸಿದರು. ಇವರಿಗೆ ಕಲ್ಲಪ್ಪನೆಂದು ನಾಮಕರಣವಾದ ಎರಡು ಮೂರು ವರ್ಷಗಳಲ್ಲಿ ಕ್ರಮವಾಗಿ ತಂದೆ ತಾಯಿಯವರನ್ನು ಕಳೆದುಕೊಂಡರು. ಕೆಲವೇ ದಿನಗಳಲ್ಲಿ ಕಾರಣಾಂತರದಿಂದ ಇವರ ಸಹೋದರ ಸಹೋದರಿಯರೂ ತೀರಿಕೊಂಡ ಬಳಿಕ ಕಲ್ಲಪ್ಪನವರ ಜೀವನ ಕಷ್ಟಗಳನ್ನೇ ಕಾಣುವಂತಾಯಿತು. ಆದರೂ ಶಿಕ್ಷಣದತ್ತ ತೀವ್ರಾಸಕ್ತರಾಗಿದ್ದುದನ್ನು ಅವರ ಬಂಧುಬಾಂಧವರು ಗಮನಿಸಿದ್ದುದರ ಪರಿಣಾಮ ವಾಗಿ ಅವರ ಚಿಕ್ಕಪ್ಪ, ಪ್ರಸಿದ್ಧ ಪ್ರವಚನಕಾರ ನಿಂಗಪ್ಪನವರ ಆಶ್ರಯದಲ್ಲಿ ಕೌಜಲಗಿ ಯಲ್ಲಿಯೇ ಪ್ರಾಥಮಿಕ ಶಿಕ್ಷಣವನ್ನು ಪೂರೈಸಿದರು. ಬಳಿಕ ಬೆಳಗಾವಿಯಲ್ಲಿ ಮಾಧ್ಯಮಿಕ ಶಿಕ್ಷಣಕ್ಕಾಗಿ ತೆರಳಿದರು. ಅದರ ವೆಚ್ಚವನ್ನು ಸರಾಫಿನಂಗಡಿಯೊಂದರಲ್ಲಿ ಲೆಕ್ಕಣಿಕರಾಗಿ ದುಡಿದು ನಾಲ್ಕು ರೂಪಾಯಿಯ ಸಂಪಾದನೆಯಲ್ಲಿ ವಿದ್ಯಾರ್ಥಿ ಜೀವನ ಸಾಗಿಸಿದರು. ಆಗಿನ ಕಾಲಕ್ಕೆ ಸ್ವಂತ ಖರ್ಚು, ಓದು, ಓಡಾಟಗಳೆಲ್ಲವನ್ನೂ ಅಷ್ಟರಲ್ಲಿಯೇ ನಿಭಾಯಿಸುವುದು ದುಸ್ಸಾಧ್ಯವೆನಿಸಿದಾಗ ಮತ್ತೆ ಅವರ ದೂರದ ಬಂಧು ಭೀಮಪ್ಪ ಕೌಜಲಗಿಯವರ ಕೃಪಾಕಟಾಕ್ಷದಿಂದ

ಧಾರವಾಡದ ವಿಕ್ಟೋರಿಯಾ ಹಿರಿಯ ಪ್ರೌಢಶಾಲೆಯಲ್ಲಿ ವಿದ್ಯಾಭ್ಯಾಸ ಮುಂದುವರಿಯಿತು. ಬಳಿಕ ಇಂಟರ್ ಮೀಡಿಯಟ್ ವಿದ್ಯಾಭ್ಯಾಸವನ್ನು ಕಡುಕಷ್ಟದಿಂದ ಪೂರೈಸಿದರು. ಅದೇನೂ ಸುಲಭವಾಗಿ ದಕ್ಕಿದುದಲ್ಲ. ಅಲ್ಲಿ ಮೆಟ್ರಿಕ್ಯುಲೇಷನ್ ಮುಗಿಸಿದ ಅವರನ್ನು ಅವರ ಶಿಕ್ಷಕರೇ ಮುಂದಾಗಿ ನಿಂತು ಪುಣೆಯ ಫರ್ಗ್ಯುಸನ್ ಕಾಲೇಜಿಗೆ ಸೇರಿಸಿದ್ದರು. ಆದರೂ ಜೀವನ ನಿರ್ವಹಣೆಯ ಸಂಕಟಕರ ಪರಿಸ್ಥಿತಿಯಿಂದ ಎರಡು ವರ್ಷದಲ್ಲಿ ಮುಗಿಸಬಹುದಾಗಿದ್ದ ಇಂಟರ್ ಮೀಡಿಯಟ್ ಶಿಕ್ಷಣವು ನಾಲ್ಕು ವರ್ಷ ತೆಗೆದುಕೊಂಡಿತು.

ಈ ಮಧ್ಯೆ ಅವರಿಗೆ ವಿವಾಹವೂ ಆಗಿ, ಕಮಲಾಬಾಯಿಯವರೊಂದಿಗೆ ಬಾಳ್ವೆಯನ್ನು ಆರಂಭಿಸುವ ಕಾಲಕ್ಕೆ ಕೂಡಿಬಂದ ಅದೃಷ್ಟವೋ ಎಂಬಂತೆ ೧೯೧೬ ರಲ್ಲಿ ಕೊಲ್ಹಾಪುರದ ರಾಜಾರಾಂ ಪ್ರೌಢಶಾಲೆಯಲ್ಲಿ ಕೊಲ್ಹಾಪುರ ಸಂಸ್ಥಾನದ ದಿವಾನರಾಗಿದ್ದ ರಾವಬಹದ್ದೂರ ಅಣ್ಣಾಸಾಹೇಬ ಬಾಬಾಜಿ ಲಠ್ಠೆ ಅವರ ಪ್ರಯತ್ನದಿಂದ ಅಲ್ಲಿ ಕನ್ನಡ ಪ್ರಾಧ್ಯಾಪಕ ಹುದ್ದೆ ಸೃಷ್ಟಿಸಿದುದರಿಂದ ಮುಖ್ಯೋಪಾಧ್ಯಾಯರಾಗಿ ಕಾಲಿಟ್ಟರು. ತದನಂತರ ೧೯೧೮ ರಲ್ಲಿ ಗೋಕಾಕದ ಆಂಗ್ಲೋವರ್ನಾಕ್ಯುಲರ್ ಪ್ರೌಢಶಾಲೆಯಲ್ಲಿ ವಿಜ್ಞಾನಶಿಕ್ಷಕರಾಗಿ ಸೇವೆ ಸಲ್ಲಿಸುತ್ತ ಸೇವಾವಧಿಯಲ್ಲಿಯೇ ಬಿ. ಎ. ಪದವಿಯನ್ನು ಪಡೆದರು. ಕನ್ನಡ ಎಂ.ಎ. ಪದವಿ ಪಡೆದವರಲ್ಲಿ ಪ್ರಥಮರೆಂಬ ಹೆಗ್ಗಳಿಕೆಯೂ ಅವರದಾಯಿತು.

ಅದೇ ವರ್ಷ ಧಾರವಾಡದ ಕರ್ನಾಟಕ ಕಾಲೇಜಿನ ಪ್ರಥಮ ಕನ್ನಡ ಪ್ರಾಧ್ಯಾಪಕರಾದದ್ದೂ ಅವರ ಪ್ರಥಮಗಳ ಗರಿಯಲ್ಲೊಂದು. ತದನಂತರ ಸುಮಾರು ೨೧ ವರ್ಷಗಳಷ್ಟು ದೀರ್ಘಕಾಲ ಅವರು ಕೊಲ್ಹಾಪುರದ ರಾಜಾರಾಮ ಕಾಲೇಜಿನಲ್ಲಿ ಸೇವೆಸಲ್ಲಿಸಿದರು. ಈ ಅವಧಿಯಲ್ಲಿ ಕನ್ನಡ ಮತ್ತು ಮರಾಠಿ ಜನಸಮುದಾಯ ದಲ್ಲಿಯ ಸಾಂಸ್ಕೃತಿಕ ರಾಯಭಾರಿಯಂತೆ ಅವರು ಕರ್ತವ್ಯಪರರಾದದ್ದೂ ಅವರ ಸೇವಾವಧಿಯ ಯಶಸ್ಸಿನ ಪುಟಗಳಲ್ಲಿ ಸೇರಿತು. ಕೊಲ್ಹಾಪುರದಲ್ಲಿ ನಿವೃತ್ತರಾದ ಅನಂತರವೂ ಕುಂದಣಗಾರರ ಸಾಧನೆಯ ಹಾದಿಗೆ ತಡೆಯೇ ಇರಲಿಲ್ಲ. ಅಲ್ಲಿಂದ ಬೆಳಗಾವಿಯ ರಾಣಿ ಪಾರ್ವತೀದೇವಿ ಕಾಲೇಜಿನಲ್ಲಿ ಗೌರವ ಪ್ರಾಧ್ಯಾಪಕರಾಗಿ ೧೭ ವರ್ಷಗಳಷ್ಟು ದೀರ್ಘಕಾಲ ಸೇವೆ ಸಲ್ಲಿಸಿದರು.

ಹೀಗೆ ತಮ್ಮ ೭೦ ನೇ ವಯಸ್ಸಿನ ತನಕ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಪ್ರಾಧ್ಯಾಪಕರಾಗಿ ತೊಡಗಿಸಿಕೊಂಡಿದ್ದರೂ ಕುಂದಣಗಾರರ ಆಸಕ್ತಿ ಸಂಶೋಧನೆಯತ್ತಲೇ ಕೇಂದ್ರೀಕೃತವಾಗಿತ್ತು. ಅವರು ಪದವಿ ಶಿಕ್ಷಣದಲ್ಲಿ ತೊಡಗಿಸಿಕೊಂಡಿದ್ದ ಕಾಲದಿಂದಲೂ ಹಲವಾರು ಸಂಶೋಧನೆ ಮತ್ತು ಕ್ಷೇತ್ರಕಾರ್ಯಗಳಲ್ಲಿ ಗಮನ ವಿತ್ತುದರ ಫಲವಾಗಿ ಶಿಲಾಶಾಸನಗಳು, ತಾಮ್ರಪತ್ರಗಳು, ನಾಣ್ಯಗಳು, ತಾಡಪತ್ರಿಗಳು ಮೊದಲಾದವನ್ನು ಅಧ್ಯಯನ ಮಾಡಿ ಕಾಲಕ್ರಮೇಣ ಅವುಗಳ ಕುರಿತು ಅಧಿಕೃತವಾಗಿ ಅಭಿಪ್ರಾಯಗಳನ್ನು ಮಂಡಿಸುವಷ್ಟು ಪಾಂಡಿತ್ಯವನ್ನು ಗಳಿಸಿದರು. ಅದು ಬ್ರಿಟೀಷರು ಭಾರತವನ್ನು ಆಳುತ್ತಿದ್ದ ಕಾಲ. ಶೈಕ್ಷಣಿಕ ಕ್ಷೇತ್ರದಲ್ಲಿ ಅವರ ಪ್ರಯತ್ನದಿಂದ ಭಾರತದಲ್ಲಿ ಅಗಾಧವಾಗಿ ನಾನಾ ಜ್ಞಾನಶಾಖೆಗಳ ಬಾಗಿಲುಗಳು ತೆರೆದುಕೊಂಡವು. ಕನ್ನಡದಲ್ಲೂ ಗ್ರಂಥಸಂಪಾದನಾ ನಿಯಮಗಳಡಿಯಲ್ಲಿ ಅನೇಕ ಶಾಸ್ತ್ರೀಯ ಅಧ್ಯಯನಗಳು ಪ್ರಾರಂಭವಾದುವು. ಕನ್ನಡ ವಿದ್ವತ್‌ಕ್ಷೇತ್ರ ಅವರನ್ನು ಪ್ರಧಾನವಾಗಿ ಖ್ಯಾತ ಸಂಶೋಧಕರೆಂದೇ ಗುರುತಿಸಿದೆ. ಅವರ ಸಂಶೋಧನಾ ಕಾರ್ಯಗಳನ್ನು ಶಾಸನಾ ಧ್ಯಯನ, ಭೂಗರ್ಭಾ ಧ್ಯಯನ, ಸಂಸ್ಕೃತಿಶೋಧನ ಮತ್ತು ಸಾಹಿತ್ಯ ಸಾಧನೆಗಳೆಂಬ ಪ್ರಕಾರಗಳಲ್ಲಿ ವಿದ್ವಾಂಸರು ಗುರುತಿಸಿದ್ದಾರೆ.

ಅಷ್ಟೇ ಅಲ್ಲದೆ ಛಂದಸ್ಸು, ವಾಸ್ತುಶಿಲ್ಪ, ನಿಘಂಟು, ಹಸ್ತಪ್ರತಿಶಾಸ್ತ್ರ, ಇತಿಹಾಸ, ಚರಿತ್ರೆ, ಶಬ್ದಾರ್ಥ ಚರ್ಚೆ, ಜನಪದ ಅಧ್ಯಯನ ಮುಂತಾದ ಕ್ಷೇತ್ರಗಳಲ್ಲಿ ಅವರ ಜ್ಞಾನದೃಷ್ಟಿ ಬೆರಗುಗೊಳಿಸುವಷ್ಟು ಅಧಿಕೃತವಾಗಿಯೂ ನಿರ್ದುಷ್ಟವಾಗಿಯೂ ಇತ್ತು. ಆದರೂ ಸಂಶೋಧನಕ್ಷೇತ್ರದಲ್ಲಿ ಅಪಾರ ಶಿಸ್ತು, ಪರಿಣತಿ ಹೊಂದಿದ್ದ ಕುಂದಣಗಾರರಿಗೆ ಇದು ರಾಜಮಾರ್ಗವಾಗಿ ಪರಿಣಮಿಸಿತು. ಶಾಸನ ಕ್ಷೇತ್ರದಲ್ಲಿ ಶ್ರೀಯುತರ ಸಾಧನೆ ಗಣನೀಯವಾದದ್ದು. ಇದು ಇವರ ಆಸಕ್ತಿಯ ಕ್ಷೇತ್ರವೂ ಹೌದು. ಅತ್ಯಂತ ಪರಿಶ್ರಮದಿಂದ ಶಾಸನಗಳನ್ನು ಅಧ್ಯಯನ ಮಾಡಿ, ಅವುಗಳಲ್ಲಿಯ ಅಕ್ಷರವಿನ್ಯಾಸ, ಬೆಳೆವಣಿಗೆ ಇತ್ಯಾದಿಗಳನ್ನು ಗುರುತಿಸಿ, ವ್ಯಾಪಕವಾದ ಕ್ಷೇತ್ರಕಾರ್ಯಗಳನ್ನು ಮಾಡಿ, ವಿವಿಧ ಕ್ಷೇತ್ರಗಳಲ್ಲಿ ಲಭ್ಯವಿದ್ದ ಶಾಸನಗಳ ಪಡಿಯಚ್ಚುಗಳನ್ನೂ ಪ್ರತಿಗಳನ್ನೂ ತಯಾರಿಸಿ, ಅವುಗಳನ್ನು ಕುರಿತಂತೆ ಆಂಗ್ಲ ಹಾಗೂ ಕನ್ನಡ ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದಿದ್ದಾರೆ. ಅಪಾರ ಪರಿಶ್ರಮ, ತಾಳ್ಮೆ, ವಿಚಕ್ಷಣಮತಿಯ ಈ ಲೇಖನಗಳು ಈ ಕ್ಷೇತ್ರದವರಿಗೆ ಆಸಕ್ತಿಯನ್ನೂ, ಅಧ್ಯಯನದ ಬಗೆಯನ್ನು ಹುಟ್ಟು ಹಾಕಿದುವೆಂದರೆ ಅತಿಶಯೋಕ್ತಿಯಲ್ಲ. ಮುಖ್ಯವಾಗಿ, ಸ್ವಾದಿ,

ರಾಯಭಾಗ, ಕೊಕಟನೂರು, ಶಿರಸಂಗಿ, ಗೋಕಾಕಗಳಲ್ಲಿಯ ಕ್ಷೇತ್ರ ಕಾರ್ಯಗಳಿಂದ ಶಾಸನಗಳನ್ನು ಮೊತ್ತಮೊದಲ ಬಾರಿಗೆ ವಿದ್ವತ್ ಕ್ಷೇತ್ರಕ್ಕೆ ಪರಿಚಯಿಸಿದವರೇ ಕುಂದಣಗಾರರು. ಆಯಾ ಕಾಲದ ಜನಜೀವನ, ಭಾಷಾವೈಖರಿ, ಸಾಹಿತ್ಯಾಸಕ್ತಿ, ಸಂಸ್ಕೃತಿ, ಲಿಪಿಗಳ ಬೆಳವಣಿಗೆಯ ಕ್ರಮಗಳನ್ನು ಗುರುತಿಸಿದ್ದಲ್ಲದೆ ಅವುಗಳ ಸಾಹಿತ್ಯಕ ಹಾಗೂ ಚಾರಿತ್ರಿಕ ಮೌಲ್ಯಗಳೇನು ಎಂಬುದನ್ನು ಚರ್ಚಿಸಿದುದು ಅಪಾರ ಜನಮನ್ನಣೆಯನ್ನು ಪಡೆಯಿತು. ಹಾಗಾಗಿ ಉತ್ತರ ಕರ್ನಾಟಕದಲ್ಲಿ ಫ್ಲೀಟರ್ ಅವರ ತರುವಾಯದಲ್ಲಿ ಶಾಸನಾಧ್ಯಯನ ಕ್ಷೇತ್ರದಲ್ಲಿ ಕೃಷಿ ಮಾಡಿದವರು ಇವರೇ. ಶಾಸನಗಳನ್ನು ಕುರಿತ ಆಳವಾದ ಪಾಂಡಿತ್ಯವನ್ನು ಎತ್ತಿ ತೋರುವ ಅತ್ಯಂತ ಮೌಲಿಕವಾದ ಇವರ ೧೩ ಲೇಖನಗಳು ನಾಡಿನ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಅವುಗಳಲ್ಲಿ ೫ ಇಂಗ್ಲಿಷ್ ಹಾಗೂ ೮ ಕನ್ನಡದಲ್ಲಿದ್ದು, ಆಯಾ ಕಾಲದ ಶಾಸನದ ಮೌಲಿಕತೆಯನ್ನು ತಿಳಿಸುತ್ತವೆ. 'ಸ್ವಾದಿ ತಾಮ್ರಶಾಸನ' ಎಂಬೊಂದು ಅಪೂರ್ವವಾದ ಸುದೀರ್ಘ ಲೇಖನ ಸರಣಿಯು ಜಯಕರ್ನಾಟಕ ಪತ್ರಿಕೆಯ ನಾಲ್ಕು ಸಂಚಿಕೆಗಳಲ್ಲಿ ಪ್ರಕಟವಾಗಿದೆ.

ಅವರ ಅತ್ಯಂತ ಮೌಲಿಕ ಕೃತಿ 'ರಟ್ಟಶಾಸನ ಪದಗುಚ್ಛವು' ೧೯೨೮ ರಲ್ಲಿಯೇ ಪ್ರಕಟವಾಯಿತು. ಸವದತ್ತಿಯ ರಟ್ಟರ ಕಾಲಕ್ಕೆ ಸೇರಿದವೆನ್ನಲಾದ ಆರು ಶಾಸನ ಪದ್ಯಗಳನ್ನು ಇದು ಸಾಹಿತ್ಯಕಾಂಶಗಳ ವಿವರಣೆ ಸಮೇತ ಒಳಗೊಂಡಿತ್ತು. ೧೯೩೯ ರಲ್ಲಿ ಪ್ರಕಟವಾದ 'Inscriptions in Northern Karnataka and the Kolhapur State' ಎಂಬ ಕೃತಿ ಶಾಸನಾಧ್ಯಯನ ಕ್ಷೇತ್ರದಲ್ಲಿ ಅವರ ಹೆಸರನ್ನು ಶಿಲಾಫಲಕದಲ್ಲಿಯಂತೆ ಚಿರಸ್ಥಾಯಿಗೊಳಿಸಿತು. ಇದು ಒಳಗೊಂಡ ೪೨ ಶಾಸನಗಳಲ್ಲಿ ಕೆಲವು ಅವರೇ ಶೋಧಿಸಿದಂಥವು. ಇಲ್ಲಿಯ ೫೮ ಪುಟಗಳ ಉಪೋದ್ಘಾತದಲ್ಲಿ ಪಾಂಡಿತ್ಯಪೂರ್ಣವಾಗಿ ಚರ್ಚಿಸಲಾದ ಕಲಚುರಿಗಳ ಕಾಲದ ಹಾಗೂ ಕಲ್ಯಾಣ ಚಾಲುಕ್ಯರ ಕಾಲದ ಸಾಮಾಜಿಕ, ಧಾರ್ಮಿಕ, ಹಾಗೂ ಸಾಂಸ್ಕೃತಿಕ ಜೀವನ ವಿವರಗಳು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹೊಸ ರೀತಿಯ ಕ್ಷೇತ್ರಕಾರ್ಯ ಸಾಧ್ಯತೆಯನ್ನು ತೋರಿಸಿಕೊಟ್ಟಿವೆ. ಕುಂದಣಗಾರರ ಸೂಕ್ಷ್ಮ ವಿಶ್ಲೇಷಣ ಸಾಮರ್ಥ್ಯಕ್ಕೂ ವಿದ್ವತ್ತಿಗೂ ಸಂಶೋಧನ ಪ್ರವೃತ್ತಿಗೂ ಪ್ರತಿಯೊಂದು ವಿಷಯವನ್ನೂ ಆಳವಾಗಿ ಒಳಹೊಕ್ಕು ತೌಲನಿಕವಾಗಿ ಗಮನಿಸಿ ನಿರ್ಣಯಿಸುವ ಬುದ್ಧಿಮತ್ತೆಗೂ ಈ ಕೃತಿ ಸಾಕ್ಷಿಯಾಗಿದೆ. ಎಚ್. ಹೆರಾಸ್ ಎಂಬ ಖ್ಯಾತ ವಿದ್ವಾಂಸರು ಅವರನ್ನು ಕುರಿತು

''ಶಾಸನಶಾಸ್ತ್ರ ಮತ್ತು ಪ್ರಾಕ್ತನಶಾಸ್ತ್ರ ಕ್ಷೇತ್ರಗಳಲ್ಲಿ ಇಂಥ ಪ್ರಾವೀಣ್ಯ ಪಡೆದಿರುವ ಕುಂದಣಗಾರರು ಭಾರತ ಹಾಗೂ ವಿದೇಶದ ಶಾಸನತಜ್ಞರ ಸಾಲಲ್ಲಿ ನಿಲ್ಲುತ್ತಾರೆ'' ಎಂದು ಶ್ಲಾಘಿಸಿದ್ದಾರೆ.

ಎರಡನೆಯದಾಗಿ ಕುಂದಣಗಾರರಿಗೆ ಕನ್ನಡ ಸಾಹಿತ್ಯಕ್ಷೇತ್ರದ ಅಮೂಲ್ಯ ಸಾಧಕ ಗರಿಮೆಯು ಸಂದಿದ್ದು ಅವರ ಪ್ರಾಕ್ತನಶಾಸ್ತ್ರದ ಅಧ್ಯಯನಾಸಕ್ತಿಯಿಂದ. ಇವರು ಕೊಲ್ಹಾಪುರದ ರಾಜರಾಮ ಕಾಲೇಜಿಗೆ ಹೋದ ಬಳಿಕ ಆರಂಭಿಸಿ ಅಲ್ಲಿಯ ಪ್ರಾಚ್ಯವಸ್ತು ಸಂಗ್ರಹಾಲಯದ ನಿರ್ದೇಶಕರಾಗಿ ಕೆಲಕಾಲ ಸೇವೆಸಲ್ಲಿಸಿದರು. ವಾಸ್ತವವಾಗಿ ಅಲ್ಲಿಯ ಪ್ರಾಚ್ಯವಸ್ತು ವಿಭಾಗವನ್ನು ಆರಂಭಿಸಿ ಕಟ್ಟಿ ಬೆಳೆಸಿದವರೇ ಕುಂದಣಗಾರರು. ಸುಮಾರು ೧೫ ವರ್ಷಗಳ ಕಾಲ ಸ್ವಂತ ಖರ್ಚಿನಿಂದ ಈ ವಿಭಾಗವನ್ನು ಪೋಷಿಸಿದುದು ಅತಿ ದೊಡ್ಡ ಸಾಧನೆ. ಅವರು ಎರಡೇ ವರ್ಷಗಳಲ್ಲಿ ಸಂಗ್ರಹಿಸಿದ ವಸ್ತುಗಳು ಪ್ರಾಚ್ಯವಸ್ತು ವಿಭಾಗದಲ್ಲಿ ಹಿಡಿಸದಷ್ಟಿತ್ತು. ಅವರು ಪ್ರಾಚ್ಯಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ ಅತಿ ಮಹತ್ತ್ವಪೂರ್ಣ ಕೊಡುಗೆ ಎಂದರೆ ಕೊಲ್ಹಾಪುರದ ಬ್ರಹ್ಮಪುರಿಯಲ್ಲಿ ಸ್ವಂತ ಖರ್ಚಿನಿಂದ ನಡೆಸಿದ ಭೂಶೋಧನೆ. ಅಲ್ಲಿ ಅವರು ಸಂಗ್ರಹಿಸಿದ ನಾಣ್ಯಗಳು, ಕಂಚಿನ ಪಾತ್ರೆ, 'ಅಮಲಪುತನ ಚಂದನ' ಎಂಬ ಬ್ರಾಹ್ಮಿ ಲಿಪಿಯ ಮಣ್ಣಿನ ಮುದ್ರೆ ಪ್ರಾಕ್ತನ ಶಾಸ್ತ್ರಾಧ್ಯಯನದ ಹೊಸ ಶೋಧ ಮಾರ್ಗವೊಂದನ್ನು ತೆರೆದಿಟ್ಟಿತೆಂದೇ ಹೇಳಿದರೆ ಅತಿಶಯೋಕ್ತಿಯೇನಲ್ಲ. ಈ ಶೋಧಕಾರ್ಯಕ್ಕಿರುವ ಐತಿಹಾಸಿಕ ಮೌಲ್ಯವೇನೆಂದರೆ, ''ಇದು ಕನ್ನಡಿಗರ ಮೂಲ ಶಾತವಾಹನರ ಕಾಲದ ಕನ್ನಡಿಗರ ಜನಜೀವನ. ಕೊಲ್ಹಾಪುರಕ್ಕೂ ಗ್ರೀಕರಿಗೂ ಇದ್ದ ಸಂಬಂಧ ಮೊದಲಾದವುಗಳ ಮೇಲೆ ಹೊಸ ಬೆಳಕು ಬಿದ್ದಿತು. ಇದಲ್ಲದೆ ಕುಂದಣಗಾರ ಅವರು ಗಗನಬಾವಡಾ, ಪಾವಟೆ, ಅಳತಿಗೆ, ಪನ್ಹಾಳ ಮತ್ತು ಕರ್ಹಾಡಗಳಲ್ಲೂ ಭೂಶೋಧ ಮಾಡಿ ಕೆಲವು ಅರಸು ಮನೆತನಗಳ ಮೇಲೆ ಬೆಳಕು ಚೆಲ್ಲಿದರು'' ಎಂದು ಬಿ.ಹಿ. ಶಿರೂರ ಅವರು ಮಾಹಿತಿ ನೀಡಿದ್ದಾರೆ. ಕುಂದಣಗಾರರ ಆಳವಾದ ಪರಿಶ್ರಮ, ವಿವೇಚನಾಶಕ್ತಿ ಮುಂತಾದವುಗಳನ್ನು ಗಮನಿಸಿದ ಮಾರ್ಟಿಮರ್ ಎಲ್ಲರ್ 'ಇದು ಅದ್ಭುತ ಆಶ್ಚರ್ಯ' ಎಂದು ಉದ್ಗರಿಸಿದರು ಎಂದು ಶಿರೂರ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ನಾಣ್ಯಶಾಸ್ತ್ರಕ್ಕೆ ಸಂಬಂಧಿಸಿದಂತೆಯೂ ಕುಂದಣಗಾರರ ಸಂಶೋಧನಾಸಕ್ತಿ ಅಪೂರ್ವವಾದದ್ದು. ವಾಸ್ತವವಾಗಿ ಉತ್ತರ ಕರ್ನಾಟಕ ಭಾಗದಲ್ಲಿ ನಾಣ್ಯಶಾಸ್ತ್ರದ

ಅಧ್ಯಯನಕ್ಕೆ ಬುನಾದಿ ಹಾಕಿದವರಲ್ಲಿ ಇವರೇ ಪ್ರಥಮರು. ಕೊಲ್ಹಾಪುರದಲ್ಲಿ ದೊರೆತ ಅತ್ಯಂತ ಪ್ರಾಚೀನ ಕಾಲದ ಸೀಸದ ನಾಣ್ಯಗಳು, ಪ್ರಾಚೀನ ಕನ್ನಡ ಭೂಪ್ರದೇಶದ ನಾಣ್ಯಪದ್ಧತಿ, ಅವುಗಳ ರಾಜಕೀಯ ಹಾಗೂ ಸಾಂಸ್ಕೃತಿಕ ಮಹತ್ತ್ವಗಳನ್ನು ಕುರಿತು ಇವರು ಬರೆದಿರುವ ಅಪರೂಪದ ಮೌಲಿಕ ಬರಹಗಳನ್ನು ಇಂದಿಗೂ ಅದ್ಭುತ ಸಂಪತ್ತೆಂದು ನಾಣ್ಯಶಾಸ್ತ್ರಾಧ್ಯಯನ ಕ್ಷೇತ್ರವು ಭಾವಿಸಿದೆ. ಏಕೆಂದರೆ, ಈ ನಾಣ್ಯಗಳ ಆಧಾರದಿಂದ ಕರ್ನಾಟಕವು ಕ್ರಿ. ಶ. ಎರಡನೆಯ ಶತಮಾನದ ಹೊತ್ತಿಗೆ ಬೌದ್ಧಧರ್ಮದ ನೆಲೆಮನೆಯಾಗಿತ್ತೆಂದು ಕುಂದಣಗಾರರು ನೀಡಿದ ತೀರ್ಮಾನ ಈ ದಿಸೆಯಲ್ಲಿ ಪ್ರಕಟಗೊಂಡ ಮೊತ್ತಮೊದಲನೆಯ ಮಹತ್ತ್ವದ ಹೆಜ್ಜೆ ಎಂದು ಭಾವಿಸಲಾಗಿದೆ.

ಅವರ ಅಪಾರ ಪಾಂಡಿತ್ಯವನ್ನೂ ಸದಾ ಜ್ಞಾನದಾಹಿಗಳ ಹಿಂದೆ ನಿಂತು ಸಹಾಯಹಸ್ತ ನೀಡುವ, ಅವರೊಂದಿಗೆ ಹಿರಿಕಿರಿಯರೆಂಬ ತಾರತಮ್ಯವಿಲ್ಲದೆ ಪರಾಮರ್ಶಿಸುವ ಸಹೃದಯ ಗುಣವನ್ನೂ ಲಕ್ಷಿಸಿ ಹಂಪ ನಾಗರಾಜಯ್ಯ ಅವರು ಕುಂದಣಗಾರರನ್ನು 'ಬತ್ತದ ಅರಿವಿನ ತೊರೆ' ಎಂದೂ 'ಅಪರೂಪದ ಅಪರಂಜಿ' ಎಂದೂ ಶ್ಲಾಘಿಸಿದ್ದಾರೆ. ಕೊಲ್ಹಾಪುರದಲ್ಲಿ ಕುಂದಣಗಾರರು ಹುಟ್ಟುಹಾಕಿ ಬೆಳೆಸಿದ "ಈ ಪ್ರಾಚ್ಯವಸ್ತು ಸಂಗ್ರಹಾಲಯದ ಪ್ರತಿವಸ್ತುವಿನ ಮೇಲೂ ಪ್ರೊ. ಕುಂದಣಗಾರರ ಬೆರಳಿನ ಗುರುತುಗಳಿವೆ. ಆಗಿನ ಕಾಲದಲ್ಲಿ ಲಕ್ಷಗಟ್ಟಲೆ ಹಣ ಖರ್ಚು ಮಾಡಿದರೂ ಆಗದ ಆ ವಸ್ತು ಸಂಗ್ರಹಾಲಯ ಈ ಬಡ ಪ್ರಾಧ್ಯಾಪಕನೊಬ್ಬನ ಬೆವರು ಸಹಿತ ಪರಿಶ್ರಮದ ಫಲ ಎಂಬುದನ್ನು ಎಷ್ಟು ಜನ ನೆನಪಿಟ್ಟಿದ್ದಾರೋ!" ಎಂದು ಪ್ರೊ. ಮ. ಗು. ಬಿರಾದಾರ ಮೆಚ್ಚಿ ನುಡಿದಿದ್ದಾರೆ. "ಕನ್ನಡ ಸಾಹಿತ್ಯ ಸಂಸ್ಕೃತಿಗಳ ವ್ಯಾಸಂಗಕ್ಕೆ ಉಪಯುಕ್ತವಾಗುವ ದೊಡ್ಡಗಾತ್ರದ ಪುಸ್ತಕ ಭಂಡಾರವು ಆಗಲೇ ರಾಜಾರಾಮ ಕಾಲೇಜಿನಲ್ಲಿತ್ತು. ಪುರಾತನ ಸಂಶೋಧನೆಗಳಿಗೆ ಕನ್ನಡ ಶಿಲಾಶಾಸನಗಳ ಅಭ್ಯಾಸಕ್ಕೆ ಬೇಕಾದ ಸಾಮಗ್ರಿಯೂ ಅಲ್ಲಿತ್ತು. ಇದನ್ನೆಲ್ಲ ಕಟ್ಟಿ ಬೆಳೆಸಿದವರು ಪ್ರೊ. ಕುಂದಣಗಾರರು. ಮಹಾರಾಷ್ಟ್ರದ ಒಂದು ದೇಶೀ ಸಂಸ್ಥಾನದಲ್ಲಿ ನಲ್ವತ್ತು ವರ್ಷಗಳ ಹಿಂದಿನ ಪರಿಸ್ಥಿತಿಯಲ್ಲಿ ಇಂತಹ ಕಾರ್ಯವನ್ನು ಸಾಧಿಸಿದ ಪ್ರೊ. ಕುಂದಣಗಾರರ ನಿಷ್ಠೆ, ಕುಶಲತೆಗಳು ಪ್ರಶಂಸನೀಯ" ಎಂದು ಪ್ರೊ. ಸ. ಸ. ಮಾಳವಾಡರು ಕುಂದಣಗಾರರ ಸಂಶೋಧನ ಪರಿಶ್ರಮವನ್ನು ನೆನಪಿಸಿಕೊಳ್ಳುತ್ತಾರೆ.

ಕುಂದಣಗಾರರ ಸಾಹಿತ್ಯಕೃಷಿಯೂ ವಿಪುಲವಾದದ್ದು. ಅವರು ಸಂಪಾದಿಸಿದ ಹಲವಾರು ಹಳಗನ್ನಡ ಗ್ರಂಥಗಳಲ್ಲಿ ಪಂಪನ 'ಆದಿಪುರಾಣ' ಹಾಗೂ ಹರಿಹರದೇವನ ಕೃತಿಗಳು ಪ್ರಮುಖ ಸ್ಥಾನಗಳಿಸಿವೆ. ಪಂಪನ 'ಆದಿಪುರಾಣ' ಅವರ ಅಪಾರ ಪಾಂಡಿತ್ಯ, ತೌಲನಿಕ ದೃಷ್ಟಿಕೋನ ಹಾಗೂ 'ಇದು ಹೀಗೇ' ಎಂದು ನಿರ್ಣಯಿಸುವಲ್ಲಿಯ ಸೂಕ್ಷ್ಮ ವಿಶ್ಲೇಷಣಾಮತಿಗೆ ಸಾಕ್ಷಿಯಾಗಿವೆ. ಇದು ಒಳಗೊಂಡಿರುವ ವಿಸ್ತಾರವಾದ ಉಪೋದ್ಘಾತ, ಪಾರಿಭಾಷಿಕ ಪದಕೋಶ, ಶಬ್ದಾರ್ಥಕೋಶ, ಮೊದಲಾದವುಗಳಿಂದ ಈ ಗ್ರಂಥವು ಇಂದಿಗೂ ಅತ್ಯಂತ ಮೌಲಿಕ ಆಕರ ಗ್ರಂಥವೆನಿಸಿದೆ. 'ಹರಿಹರದೇವ' ಕೃತಿಯು ಮಹಾಕವಿ ಹರಿಹರನನ್ನು ಕುರಿತ ಮೊದಲ ಪ್ರಶಸ್ತಿ ಗ್ರಂಥ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಕುಂದಣಗಾರರು ರಾಜಾರಾಮ ಕಾಲೇಜಿನ ಸಂಘದ ಅಧ್ಯಕ್ಷರಾಗಿದ್ದಾಗ ೧೯೩೭ ರಲ್ಲಿ ಇದನ್ನು ಸಂಪಾದಿಸಿ ಪ್ರಕಟಿಸಿದರು. ೧೯೭೯ ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಇದನ್ನು ಮರುಮುದ್ರಣಗೊಳಿಸಿದೆ. ಇದು ಡಾ. ನಂದೀಮಠರ ಮುನ್ನುಡಿಯನ್ನೂ ಒಳಗೊಂಡಂತೆ ಒಟ್ಟು ೧೧ ವಿದ್ವತ್ಪೂರ್ಣ ಲೇಖನ ಗಳನ್ನೊಳಗೊಂಡಿದೆ.

ಕುಂದಣಗಾರರ ೪೮ ಪುಟಗಳ 'ಮಹಾಕವಿ ಹರಿಹರನ ಚರಿತ್ರೆ' ಎಂಬ ಲೇಖನ ಹರಿಹರನ ವೈಯಕ್ತಿಕ ಜೀವನ ವಿವರಗಳ ಕುರಿತು ಹೊಸ ರೀತಿಯ ಚಿಂತನಾತ್ಮಕ ವಿಷಯಗಳನ್ನು ಒಳಗೊಂಡಿದೆ. ಇದಲ್ಲದೆ ಸ. ಸ. ಮಾಳವಾಡರೊಂದಿಗೆ ಸೇರಿ ಬರೆದ 'ಹರಿಹರನ ಕಾಲ'ವನ್ನು ಕುರಿತ ಚರ್ಚೆಯು ಕನ್ನಡ ಸಾಹಿತ್ಯ ಚರಿತ್ರೆಯ ಪುಟಗಳಲ್ಲಿ ಚಿರಸ್ಥಾಯಿಯಾಗಿ ನಿಲ್ಲುವಂಥದು. ಹರಿಹರನ ಕಾಲವನ್ನು ೧೨೧೬ ಎಂದು ನಿರ್ಣಯಿಸಲಾದ ಅಂಶವು ತರುವಾಯ ಬಂದ ಅನೇಕ ಚರ್ಚೆಗಳಲ್ಲಿ ಪುನರ್ನಿ ರ್ಣಯಕ್ಕೆ ಕಾರಣವಾಗಿದೆ.

ಕುಂದಣಗಾರರ ಇತರ ಪ್ರಮುಖ ಲೇಖನಗಳಲ್ಲಿ 'ಮಾಘಣಂದಿ ಮತ್ತು ಆಚಣ್ಣ', 'ಆದಿಪಂಪನೂ ಸಮುದಾಯದ ಮಾಘಣಂದಿಯೂ' ಮುಂತಾದವು ಬಹು ಅಪರೂಪದ ಸಂಶೋಧನ ಲೇಖನಗಳಾಗಿವೆ. ಮಾಘಣಂದಿಯು 'ಶಾಸ್ತ್ರಸಾರ ಸಮುಚ್ಚಯ'ದಲ್ಲಿ ಉದಾಹರಿಸಿರುವ ಪದ್ಯಗಳಲ್ಲಿ ಪಂಪನ ಆದಿಪುರಾಣ ಹಾಗೂ ಆಚಣ್ಣನ ವರ್ಧಮಾನ ಪುರಾಣದ ಪದ್ಯಗಳಿರುವುದನ್ನು ಸಂಶೋಧಿಸಿದವರು ಕುಂದಣಗಾರರೇ. ಪಂಪನನ್ನು ಕುರಿತ ಅವರ ಜೀವನ – ಕೃತಿ ಕುರಿತು ಆರು ಲೇಖನಗಳು, ರತ್ನಾಕರ, ನೇಮಿಚಂದ್ರ, ನಾಗಚಂದ್ರ, ಜನ್ನ, ರತ್ನಾಕರವರ್ಣಿ,

ಮಂಗರಸ ಮೊದಲಾದ ಕವಿಗಳ ಕಾವ್ಯಸೂಕ್ಷ್ಮಗಳನ್ನು ಕುರಿತು ಅವರ ಲೇಖನಗಳು ನಿತ್ಯನೂತನವಾದವು. ಸುಮಾರು ೬೦ ಕ್ಕೂ ಹೆಚ್ಚು ಕೃತಿಗಳು, ೨೪೦ ಕ್ಕೂ ಮಿಕ್ಕು ಬಿಡಿಲೇಖನಗಳು, ಹರಿಹರ ಕವಿಯನ್ನು ಕುರಿತ ಮತ್ತೆರಡು ಪ್ರಶಸ್ತಿ ಗ್ರಂಥಗಳು ಅವರ ಬರವಣಿಗೆಯ ಹರಹಿಗೆ ಸಾಕ್ಷಿಯಾಗಿವೆ. ವೀರಶೈವ ಧರ್ಮಕ್ಕೆ ಸಂಬಂಧಿಸಿದ ೧೯ ಲೇಖನಗಳಲ್ಲಿ ವಚನಸಾಹಿತ್ಯಕ್ಕೂ ನಾಥಸಂಪ್ರದಾಯಕ್ಕೂ ಸಂಬಂಧಿಸಿದ ನಾಲ್ಕು ಲೇಖನಗಳು ಕಾವ್ಯಶಾಸ್ತ್ರ ಜಿಜ್ಞಾಸುಗಳಿಗೆ ಇಂದಿಗೂ ಪ್ರಥಮ ಉಲ್ಲೇಖಾರ್ಹ ಪಠ್ಯಗಳಾಗಿವೆ. ಕುಂದಣಗಾರರ ಲೇಖನಿಗೆ ಇರುವ ಹಲವು ಕೋನಗಳಲ್ಲಿ ಛಂದಶ್ಶಾಸ್ತ್ರವೂ ಹೊರತಾಗಿಲ್ಲ. ವ್ಯಾಕರಣ, ಛಂದಸ್ಸುಗಳಿಗೆ ಸಂಬಂಧಿಸಿದಂತೆ ಅವರ ೧೩ ಲೇಖನಗಳಲ್ಲಿ ಕೇಶಿರಾಜ, ನಾಗವರ್ಮ, ಜಯಕೀರ್ತಿ, ಭೀಮರ ಕುರಿತ ಚರ್ಚೆಗಳಿವೆ. ಅವುಗಳಲ್ಲಿ ಕನ್ನಡ ವಿಷಯಜಾತಿಗಳ ಕುರಿತ ಸೂಕ್ಷ್ಮವಿವೇಚನೆಗೆ ಪ್ರಥಮ ಪ್ರಾಶಸ್ತ್ಯ.

ಕುಂದಣಗಾರರು ಜೈನ ಹಾಗೂ ವೀರಶೈವ ಸಾಹಿತ್ಯಗಳ ಒಳಗು ಹೊರಗುಗಳನ್ನು ಎಷ್ಟು ಆತ್ಮಗತ ವಾಗಿಸಿಕೊಂಡಿದ್ದರೆಂಬುದಕ್ಕೆ ಅವರು ಸಂಪಾದಿಸಿದ 'ಜಿನವಿಜಯ' ಮತ್ತು 'ವಾಗ್ಭೂಷಣ' ಪತ್ರಿಕೆಗಳೇ ಸಾಕ್ಷಿ. ಸೃಜನಶೀಲ ಸಾಹಿತಿಯೂ ಆಗಿದ್ದ ಕುಂದಣಗಾರರು 'ಸರಸ್ವತಿ' ಎಂಬ ಕಾದಂಬರಿಯನ್ನೂ ಅಕ್ಕಮಹಾದೇವಿಯ ಜೀವನ ಚರಿತ್ರೆಯನ್ನೂ ಬರೆದಿರುವುದಲ್ಲದೆ ಸಂಸ್ಕೃತದಿಂದ 'ರತ್ನಾವಳೀ' ಮತ್ತು 'ನಾಗಾನಂದ' ನಾಟಕಗಳನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಆ.ನೇ. ಉಪಾಧ್ಯೆಯವರೊಂದಿಗೆ ಕುಂದಣಗಾರರು ಸಂಪಾದಿಸಿರುವ 'ಚಿನ್ಮಯ ಚಿಂತಾಮಣಿ' ಹಾಗೂ 'ಜ್ಞಾನಭಾಸ್ಕರ ಚರಿತೆ' ಎಂಬ ಕಿರುಕಾವ್ಯಗಳನ್ನೂ ಅವರ ಯಶಸ್ಸಿನ ಪುಟಗಳಲ್ಲಿ ಸೇರಿಸಬಹುದು.

ಕುಂದಣಗಾರರನ್ನು ಕುರಿತು ಪ್ರಕಟವಾಗಿರುವ ಕೃತಿಗಳಲ್ಲಿ ಪ್ರಮುಖವಾಗಿ ಹೆಸರಿಸಬಹುದಾದಂಥವು – 'ಕುಂದಣ' ಸಂಭಾವನ ಗ್ರಂಥ, ೧೯೬೧ (ಸಂ) ಪ್ರೊ. ಆರ್. ಸಿ. ಹಿರೇಮಠ; 'ಪ್ರೊ. ಕೆ. ಜಿ. ಕುಂದಣಗಾರರ ಬದುಕು ಮತ್ತು ಬರಹ', ೧೯೯೫, ಲೇ. ಮ. ಗು. ಬಿರಾದಾರ; 'ಕುಂದಣದ ಬೆಳೆ' – ಸಂ. ಶಿ. ಭೂಸನೂರಮಠ, ೧೯೯೫, (ಸಂ) ಪ್ರಕಾಶ ಕೋಟಿನ ತೋಟ– ಮುಂತಾದವು.

ಶ್ರೀಯುತರು ೧೯೬೧ ರಲ್ಲಿ ಡಿಸೆಂಬರ್ ೨೭–೨೯ ಗದಗದಲ್ಲಿ ನಡೆದ ೪೩ ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಅವರ ಶಿಷ್ಯವರ್ಗವನ್ನು ನೋಡಿಯೇ ಕುಂದಣಗಾರರ ಸಾಹಿತ್ಯ ಶಿಸ್ತು, ಶಿಷ್ಯಪ್ರೀತಿ, ಅವಿರತ ಸಾಹಿತ್ಯ ಪರಿಚಾರಿಕೆಗಳ ಮೌಲ್ಯವೇನೆಂಬುದನ್ನು ತಿಳಿಯಬಹುದು. ಅವರ ಶಿಷ್ಯವರ್ಗವು ಭಾರತದ ರಾಷ್ಟ್ರಪತಿಗಳಿಂದ ಹಿಡಿದು ವಿಶ್ವವಿದ್ಯಾಲಯದ ಕುಲಪತಿಗಳು, ಪ್ರಾಂಶುಪಾಲರು, ಪ್ರಾಧ್ಯಾಪಕರು – ಹೀಗೆ ಎಲ್ಲ ವರ್ಗಗಳಲ್ಲೂ ಚಾಚಿಕೊಂಡಿದೆ. ಮುಖ್ಯವಾಗಿ ಹೆಸರಿಸಬಹುದಾದವರೆಂದರೆ, ಬಿ.ಡಿ. ಜತ್ತಿ, ಜಾಧವ ಆರ್.ಬಿ., ಫ್ಹಿ.ಜಿ. ಗದ್ದಗಿಮಠ, ಎಸ್.ಎಸ್. ಭೂಸನೂರಮಠ, ಎಸ್.ಡಿ. ಇಂಚಲ, ಎಂ.ಎಸ್. ಸುಂಕಾಪುರ, ರಂ.ಶ್ರೀ. ಮುಗಳಿ, ಕೆ.ಎಸ್. ಪಾಟೀಲ, Rangalor, ಡಿ.ಸಿ. ಪಾವಟೆ, ಎಂ.ಜಿ. ಬಿರಾದಾರ. ಡಿ.ಎಸ್. ಕುಲಕರ್ಣಿ, ಸ.ಸ. ಮಾಳವಾಡ, ಎಚ್.ಕೆ. ಲಗಳಿ, ವಿ.ಟಿ. ಸಾಸನೂರ, ಆರ್.ಸಿ. ಹಿರೇಮಠ ಮೊದಲಾದವರು.

ಕನ್ನಡ ಸಾಹಿತ್ಯದ ಮೇರು ಪಂಡಿತರಾದ ಕೆ.ಜಿ. ಕುಂದಣಗಾರರು ತಮ್ಮ ಬದುಕಿನುದ್ದಕ್ಕೂ ಸಾಹಿತ್ಯಪಥದಲ್ಲೇ ಉಸಿರಾಡಿ, ಅಲ್ಲೇ ಮಹೋನ್ನತ ಸಾಧನೆಯ ಮೆಟ್ಟಿಲುಗಳನ್ನೇರಿ ತರುವಾಯದ ವಿದ್ವತ್‌ಪ್ರಿಯರಿಗೆ ಸಾಧನೆಯ ದಾರಿ ತೋರಿ ೧೯೬೫, ಆಗಸ್ಟ್ ೨೨ ರಂದು ಬೆಳಗಾವಿಯಲ್ಲಿ ನಿಧನರಾದರು.

ಆಧಾರ

ಕೆ.ಜಿ. ಕುಂದಣಗಾರ – ಸಂಶೋಧನಾ ಚತುರ್ಮುಖ – ಡಾ. ಬಿ.ವಿ. ಶಿರೂರ.

❐ ❐ ❐

ಶಂ.ಬಾ. ಜೋಶಿ

(೧೮೯೬-೧೯೯೧)

ಗೀತಾ ನಾವಲ್

ಶಂಬಾ ಜೋಶಿ ಎಂದೇ ಖ್ಯಾತರಾದ ಶಂಕರ ಬಾಳದೀಕ್ಷಿತ ಜೋಶಿ ಯವರು ಕನ್ನಡದ ಖ್ಯಾತ ಸಾಹಿತಿ, ವಿಚಾರವಾದಿ, ಸ್ವತಂತ್ರ ಮನೋಭಾವದ, ಬಂಡಾಯ ಪ್ರವೃತ್ತಿಯ ವಿದ್ವಾಂಸರು. ಇಂಗ್ಲಿಷರ ಪ್ರಭಾವದಿಂದ ಕನ್ನಡ ನೆಲವು ದೇಶೀಯ ಸ್ವರೂಪ ದಿಂದ ಅತ್ತತ್ತ ಸರಿದು ಭಾಷಾವೈಶಿಷ್ಟ್ಯಗಳನ್ನೂ ನೆಲದ ಪಾರಂಪರಿಕ ಸ್ವರೂಪಗಳನ್ನೂ ಮಸುಕಾಗಿಸಿಕೊಳ್ಳುತ್ತಿದ್ದ ಕಾಲ ಅದು. ಪಾಶ್ಚಾತ್ಯರ ಚಿಂತನ ಸ್ವರೂಪಗಳು ತಮ್ಮ ವಿಚಾರಲಹರಿಗಳನ್ನು ಚೂಪುಗೊಳಿಸಿಕೊಳ್ಳಲು ತಕ್ಕ ಮಾದರಿಯಾಗಬಲ್ಲವು ಎಂಬ ದೇಶೀಯ ವಿದ್ವದ್ವಲಯದ ಭ್ರಾಂತ ಮನಃಸ್ಥಿತಿಗೆ ವಿರುದ್ಧವಾಗಿ ತಮ್ಮ ತೀಕ್ಷ್ಣ ವಿಚಾರಧಾರೆಯಿಂದ ಕನ್ನಡ ನೆಲಕ್ಕೆ ತನ್ನ ಸಂಸ್ಕೃತಿ ಸ್ವರೂಪದತ್ತ ತಿರುಗಿನೋಡುವ ದಾರಿಯನ್ನು ತೋರಿದವರು ಶಂಬಾ. ನಾಡು ನುಡಿಗಳ ಕುರಿತಂತೆ ಚಾರಿತ್ರಿಕವಾಗಿಯೂ ಸಾಮಾಜಿಕವಾಗಿಯೂ ಹೇಗೆ ಅಧ್ಯಯನ ಮಾಡಬೇಕು ಎಂಬುದರ ಬಗ್ಗೆ ವಿದ್ವಾಂಸರಲ್ಲೂ ಜನಸಾಮಾನ್ಯರಲ್ಲೂ ಒಂದುಬಗೆಯ ಒಳತುಯ್ತವನ್ನು ಹುಟ್ಟು ಹಾಕುತ್ತ ಸಂಶೋಧನೆಯೇ ತಮ್ಮ ಜೀವಿತಾರ್ಥ ಎಂಬಂತೆ ಬದುಕಿದ ಧೀಮಂತ ವ್ಯಕ್ತಿತ್ವ ಅವರದು. ಶಂಬಾ ಅವರು ಹುಟ್ಟಿದುದು ೧೮೯೬ರ ಜನವರಿ ೪ ರಂದು, ಬೆಳಗಾವಿಯ ಸವದತ್ತಿ ತಾಲ್ಲೂಕಿನ ಗುರ್ಲಹೊಸೂರು ಗ್ರಾಮದ ಒಂದು ಕರ್ಮಠ ಚಿತ್ಪಾವನ ಬ್ರಾಹ್ಮಣ ವೈದಿಕರ ಮನೆಯಲ್ಲಿ. ಮಹಾಮಡಿವಂತಿಕೆಯಿಂದ ಗಾರ್ಹಪತ್ಯಾಗ್ನಿಯನ್ನು ಪ್ರದೀಪ್ತಿಸಿ ವೇದ ಶಾಸ್ತ್ರಾಗಮ ಗಳಿಂದ ದಿನದ ಬೆಳಗನ್ನು ಆರಂಭಿಸುತ್ತಿದ್ದ ಶ್ರೋತ್ರಿಯರ ಮನೆತನ ಅವರದು. ತಂದೆ ಬಾಳದೀಕ್ಷಿತರು ಪ್ರತಿನಿತ್ಯ ಅತ್ಯಂತ ಭಕ್ತಿ ಶ್ರದ್ಧೆಗಳಿಂದ ಅಪರಿಮಿತವಾದ ನಂಬಿಕೆಯಿಂದ 'ಪವಮಾನಸೂಕ್ತ'ವನ್ನು ಪಠಿಸುತ್ತಿದ್ದ ನಿಷ್ಠ ದೈವಭಕ್ತರು. 'ಪವ ಮಾನಸೂಕ್ತ'ವೆಂಬುದಕ್ಕೆ 'ಶುದ್ಧೀಕರಿಸುವಮಂತ್ರ'ವೆಂಬ

ಅರ್ಥವಿದೆ. ಬಾಳದೀಕ್ಷಿತರ ಇಂತಹ ಪ್ರಯತ್ನಗಳು ಶಂಬಾ ಅವರ ಮೇಲೆ ಪ್ರಭಾವ ಬೀರಿದುವು. ಅಲ್ಲದೆ ಈ ನೆಲದ ಇಂತಹ ನಂಬಿಕೆಗಳ ಹಿಂದಿರುವ ಮುಖ್ಯ ಉದ್ದೇಶಗಳೇನು, ಇವುಗಳಲ್ಲಿರುವ ಚಿಂತನಾತ್ಮಕ ಅಂಶಗಳೇನು ಎಂದು ಶೋಧಿಸುವಂತಾಯಿತು. ಎರಡನೆಯದಾಗಿ, ಶಂಬಾ ಅವರ ತಾಯಿಗೆ ಅಂದು ಪ್ರಚಲಿತವಿದ್ದ ಹತ್ತು ಹಲವು ನಾಟಕಗಳ ಸಂಭಾಷಣೆಗಳು, ಹಾಡುಗಳು ಬಾಯಿಪಾಠವಾಗಿರುತ್ತಿತ್ತು. ಇದು ಸದಾ ಕವಿಯ ಮೇಲೆ ಬೀಳುತ್ತಿದ್ದುದರ ಪರಿಣಾಮವಾಗಿ ಶಂಬಾ ಅವರಿಗೆ ವೇದಜ್ಞಾನವೂ ಸಾಹಿತ್ಯಜ್ಞಾನವೂ ಸಹಜವಾಗಿಯೇ ಮೈಗೂಡಿ ಬಂದಿತ್ತು. ಆದರೆ ಆ ಕಾಲವೂ ಅವರ ಮನೆತನದ ಹಿನ್ನೆಲೆಯೂ ವೈದಿಕಪರಂಪರೆಗೆ ಪ್ರಾಮುಖ್ಯ ನೀಡುತ್ತ, ಇಂಗ್ಲಿಷ್ ಕಲಿಕೆಯನ್ನು ಅನಾದರ ಭಾವದಿಂದ ಕಾಣುವ ಪ್ರವೃತ್ತಿ ಇದ್ದುದರಿಂದಲೂ ಬಡತನದ ಮಿತಿಯಿಂದಲೂ ಪ್ರಾಥಮಿಕ ಶಿಕ್ಷಣಕ್ಕೇ ಅವರ ವಿದ್ಯಾಭ್ಯಾಸ ನಿಂತುಹೋಯಿತು. ಆದರೆ ಹೊರಪ್ರಪಂಚಕ್ಕೆ ಭಿನ್ನವಾಗಿ ತನ್ನನ್ನು ಸಲ್ಲಿಸಿಕೊಳ್ಳಬೇಕೆಂಬ ಒಳತುಯ್ತ ಅದಮ್ಯವಾಗಿತ್ತು. ಇದರ ಪರಿಣಾಮವಾಗಿ ತಮ್ಮ ೨ಳನೇ ವಯಸ್ಸಿನಲ್ಲಿ ಇಂಗ್ಲಿಷ್ ಅಕ್ಷರಾಭ್ಯಾಸದಿಂದ ಮೊದಲುಗೊಂಡು ರಸೆಲ್, ಕಾಲ್ಡ್‌ವೆಲ್ ಮೊದಲಾದವರ ಭಾಷೆ, ವೈಚಾರಿಕತೆಗಳನ್ನು ಓದಿ ಅರ್ಥೈಸಿಕೊಳ್ಳುವಷ್ಟು ವಿದ್ವತ್ತನ್ನು ಸಂಪಾದಿಸಿಕೊಂಡರು ಎಂದರೆ ಅವರ ಪರಿಶ್ರಮದ ಮಟ್ಟ ಎಂಥದಿರಬಹುದು ಎಂಬುದನ್ನು ಊಹಿಸಿಕೊಳ್ಳಬಹುದು.

ಈ ಮಧ್ಯೆ ೧೯೧೪ರಲ್ಲಿ ಮಲಪ್ರಭಾ ನದಿಗೆ ಮಹಾನೆರೆ ಬಂದು ಗುರ್ಲಹೊಸೂರು ಮುಳುಗಿಹೋಯಿತು. ತಂದೆಯವರೂ ನಿಧನರಾಗಿದ್ದರು. ಹೀಗಾಗಿ ಶಂಬಾ ಅವರು ಆಧಾರವೂ ವಾಸ್ತವ್ಯವೂ ಇಲ್ಲದೆ ಪುಣೆಯಲ್ಲಿದ್ದ ಅಜ್ಜಿಯ ಮನೆ ಸೇರಿದರು. ಅಲ್ಲಿ ತಿಲಕರ ಪ್ರಭಾವಕ್ಕೊಳಗಾಗಿ, ಅವರ ಅತ್ಯಾಪ್ತರಾಗಿ ಗುರುತಿಸಿಕೊಂಡರು. ಆಗ ಅವರು ಬರೆದ ಪ್ರಪ್ರಥಮ ಪುಸ್ತಕ 'ಅರವಿಂದ ಘೋಷರ ಚರಿತ್ರವು' (೧೯೨೧). ಜೀವನ ನಿರ್ವಹಣೆಗೆ ಕಡುಕಷ್ಟವುಂಟಾದಾಗ, ಧಾರವಾಡಕ್ಕೆ ಬಂದು ಸರ್ಕಾರಿ ಟ್ರೈನಿಂಗ್ ಕಾಲೇಜಿನಲ್ಲಿ ಶಿಕ್ಷಕ ತರಬೇತಿಯನ್ನು ಮುಗಿಸಿದರು. ೧೯೨೦ ರಲ್ಲಿ ಬೆಳಗಾವಿಯ ಚಿಕ್ಕೋಡಿಯಲ್ಲಿ ಅವರ ಶಿಕ್ಷಕವೃತ್ತಿ ಆರಂಭವಾಯಿತು. ಗಾಂಧೀಜಿಯವರು ಅಲ್ಲಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಅವರೊಂದಿಗಿನ ಸಹಮತದ ಕಾರಣ ಸರಕಾರದ ಕಣ್ಣು ಕೆಂಪಾಯಿತು. ತತ್ಪರಿಣಾಮವಾಗಿ

ಉಗರಗೋಳಕ್ಕೆ ಇವರನ್ನು ಎತ್ತಂಗಡಿ ಮಾಡಲಾಯಿತು. ಹೀಗೆಯೇ ಒಂದಿಲ್ಲೊಂದು ಕಾರಣಗಳಿಂದ ಸರಕಾರದ ನೀತಿನಿಯಮಗಳು ತಮ್ಮ ವೈಚಾರಿಕತೆಗೂ ಕ್ರಿಯಾಶೀಲತೆಗೂ ವಿರುದ್ಧಮುಖಿಯಾಗಿ ನಿಲ್ಲುತ್ತಿರುವುದನ್ನು ಗಮನಿಸಿ ಶಿಕ್ಷಕ ವೃತ್ತಿಗೆ ರಾಜೀನಾಮೆ ನೀಡಿ ಮರಳಿ ಧಾರವಾಡವನ್ನು ಸೇರಿದರು. ಅಲ್ಲಿ, ಮುದವೀಡು ಕೃಷ್ಣರಾಯರ ಸಂಪರ್ಕಕ್ಕೆ ಬಂದರು. ಮುದವೀಡು ಅವರು ಕನ್ನಡಕ್ಕಾಗಿ ದುಡಿದ ಬಹುಮುಖೀ ಪ್ರತಿಭೆಯ ವಿದ್ವಾಂಸರು. ಪತ್ರಿಕೋದ್ಯಮದಲ್ಲೂ ವಿಶೇಷ ಆಸಕ್ತಿಯಿಂದಿದ್ದು 'ಕರ್ನಾಟಕದ ಗಂಡುಗಲಿ' ಎಂದು ಪ್ರಸಿದ್ಧರಾಗಿದ್ದ ಅವರ ಸಲಹೆಯಂತೆ ಶಂಬಾ ಅವರು ಮುದವೀಡು ಅವರು ನಡೆಸುತ್ತಿದ್ದ 'ಕರ್ನಾಟಕ ವೃತ್ತ' ಹಾಗೂ 'ಧನಂಜಯ' ಪತ್ರಿಕೆಗಳಿಗೆ ಲೇಖನಗಳನ್ನು ಬರೆಯಲಾರಂಭಿಸಿದರು. ಕೆಲಕಾಲ 'ಕರ್ಮವೀರ' ಪತ್ರಿಕೆಯ ಸಂಪಾದಕತ್ವವೂ ಕೈಹಿಡಿಯಿತು. ಇದೇ ವೇಳೆಗೆ ಅವರಿಗೆ ೧೯೨೧ ರಲ್ಲಿ ಜಮಖಂಡಿಯ ಕರಂದೀಕರ ಮನೆತನದ ಪಾರ್ವತಿ ಅವರೊಂದಿಗೆ ವಿವಾಹವೂ ಆಗಿತ್ತು. ಪತ್ರಿಕೆಗಳ ಸಂಸರ್ಗದಿಂದಷ್ಟೇ ಜೀವನ ನಿರ್ವಹಣೆ ಕಷ್ಟವಾದುದರಿಂದ ೧೯೨೬–೨೭ ರಲ್ಲಿ ಧಾರವಾಡದ ಕರ್ನಾಟಕ ಹೈಸ್ಕೂಲಿನಲ್ಲಿಯೂ ೧೯೨೮ ರಿಂದ ೧೯೪೬ ರವರೆಗೆ ಅದೇ ಸಂಸ್ಥೆಗೆ ಸೇರಿದ ವಿಕ್ಟೋರಿಯಾ ಹೈಸ್ಕೂಲಿನಲ್ಲಿಯೂ ಕನ್ನಡ ಶಿಕ್ಷಕರಾಗಿದ್ದರು.

ಬಾಲ್ಯದಿಂದಲೂ ಅವರಿಗೆ ಲಭ್ಯವಿದ್ದ ಕಾವ್ಯ, ವ್ಯಾಕರಣ, ಇತಿಹಾಸ ಹಾಗೂ ಭಾಷೆಗಳ ಬಗ್ಗೆ ತಿಳಿವಳಿಕೆ ಮೂಡಿಸುವ ವಾತಾವರಣವೂ ಅವರ ಸಮಾಜ ಮುಖಿಯಾದ ಆಸಕ್ತಿಗಳೂ ತೀವ್ರ ಸಂಶೋಧನ ಪ್ರವೃತ್ತಿಯೂ ಅವರ ಲೇಖನಿಯನ್ನು ತೀಕ್ಷ್ಣವಾಗಿಸಿದ್ದುವು. ಕನ್ನಡದ ನೆಲದಲ್ಲೇ ಕನ್ನಡದ ಕುರಿತಂತೆ ಕ್ರಮೇಣ ಬೇರೂರುತ್ತಿದ್ದ ಅವಜ್ಞೆ ಅವರನ್ನು ಬಲವಾಗಿ ಕಾಡುತ್ತಿತ್ತು. ಕನ್ನಡ ಸಾಹಿತ್ಯ ಪರಂಪರೆಯ ಕುರಿತ ಎಚ್ಚರವನ್ನು ಸಾಮಾಜಿಕ ವಲಯದಲ್ಲಿ ಅನನ್ಯವಾಗಿ ಪ್ರಚುರಪಡಿಸಬೇಕೆಂಬ ಮಹದಾಸೆಯೂ ಇತ್ತು. ಇದು ಅವರ ಅಚ್ಚುಮೆಚ್ಚಿನ ಜೊತೆಗಾರರಾದ ದ.ರಾ.ಬೇಂದ್ರೆ, ಬೆಟಗೇರಿ ಕೃಷ್ಣಶರ್ಮ, ಚುಳುಕಿ ಗೋವಿಂದ ರಾಯರು, ದೇವುಡು ನರಸಿಂಹಶಾಸ್ತ್ರಿ, ಬಿಂದುಮಾಧವ ಕುಲಕರ್ಣಿ, ವೇದಜ್ಞ ಗಣೇಶ ರಾಮಕೃಷ್ಣ ಉಗ್ರು ಮೊದಲಾದ ಸಮಸಮಾಲೋಚಿತರ ಸಹಚಿಂತನೆಯೊಂದಿಗೆ ಕೈಗೂಡುವಂತಾಯಿತು. ಇದರ ಫಲವಾಗಿ ಉತ್ತರ ಕರ್ನಾಟಕದ ಸಾಹಿತಿಗಳ ಪ್ರಸಿದ್ಧ 'ಗೆಳೆಯರಗುಂಪು' ತಲೆಯೆತ್ತಿತು. ೧೯೨೪ ರಲ್ಲಿ ಶಂಬಾ ಅವರು ಇವರೆಲ್ಲರೊಂದಿಗೆ

ಹಗಲಿರುಳೆನ್ನದೆ ಶ್ರಮಿಸಿದ ಫಲವಾಗಿ ಬೆಳಗಾವಿಯಲ್ಲಿ ಕರ್ನಾಟಕದ ಏಕೀಕರಣ ಸಮ್ಮೇಳನ ನಡೆಯಿತು. ಶಂಬಾ ಇದರ ಕಾರ್ಯ ದರ್ಶಿಯಾಗಿದ್ದರು.

ಇವೆಲ್ಲ ಪ್ರಯತ್ನಗಳು, ಸಂಸ್ಕೃತ, ಇಂಗ್ಲಿಷ್ ಹಾಗೂ ಮರಾಠಿ ಭಾಷೆಗಳಲ್ಲಿದ್ದ ಪಾಂಡಿತ್ಯ, ಪ್ರತಿಯೊಂದು ವಿಷಯವನ್ನೂ ಅದರ ತಳಮಟ್ಟದಿಂದಲೂ ಗ್ರಹಿಸಬೇಕೆನ್ನುವ ಇವರ ಪರಿಶೋಧಕ ಪ್ರವೃತ್ತಿಗಳು ಅವರ ಬರೆಹಗಳಾಗಿ ಮೂಡಲು ಹಿನ್ನೆಲೆಯಾದುವು. ಭಾಷೆ, ಸಂಸ್ಕೃತಿ, ಸಾಮಾಜಿಕ ಚಿಂತನವಿಧಾನ, ವಿಜ್ಞಾನ ಹಾಗೂ ಇತಿಹಾಸಗಳ ಹೊಸ ಬಗೆಯ ಅಧ್ಯಯನಕ್ಕೂ ಅನ್ವೇಷಣೆಗೂ ಶಂಬಾ ಬರೆಹಗಳು ಅಗತ್ಯ ಮಾರ್ಗಸೂಚಿ ಎನಿಸಿದುವು.

ಕನ್ನಡದ ಖ್ಯಾತ ಜಾನಪದ ಸಂಶೋಧಕರಾದ ಎಚ್.ಎಲ್. ನಾಗೇಗೌಡರು ಅವರನ್ನು 'ಕನ್ನಡದ ಕೊಲಂಬಸ್' ಎಂದು ಶ್ಲಾಘಿಸಿದ್ದಾರೆ. ೧೯೮೨ ರಲ್ಲಿ ರಾಜ್ಯಾದ್ಯಂತ ಮಹಾಪ್ರವಾಹವಾಗಿ ಅಬ್ಬರಿಸಿದ ಗೋಕಾಕ್ ಚಳವಳಿ ನಡೆದಾಗ ಅವರಿಗೆ ೮೭ ವರ್ಷ ವಯಸ್ಸಾಗಿತ್ತು. ಆ ವಯಸ್ಸಿನಲ್ಲಿ ಅವರು ಗೋಕಾಕ್ ಭಾಷಾಸೂತ್ರವನ್ನು ಅನುಷ್ಠಾನಗೊಳಿಸ ಬೇಕೆಂದು ಒತ್ತಾಯ ಮಾಡಿ ಉಪವಾಸ ಮಾಡಿದುದು ಸಾಮಾನ್ಯ ವಿಷಯವಲ್ಲ. ಇಡೀ ರಾಜ್ಯದ ಎಲ್ಲ ವರ್ಗದ, ಎಲ್ಲ ರೀತಿಯ ಮನೋಭಾವದ ಜನರ ಮನಸ್ಸಿನೊಳಗೆ 'ಭಾಷಾ ಆಂದೋಲನದ ಕಿಡಿ ಹಚ್ಚುವುದು' ಎಂಬುದು ಶಂಬಾ ಅವರಂತಹ ಕೆಚ್ಚೆದೆಯ ಕಿಚ್ಚಿಗೆ ಮಾತ್ರ ಸಾಧ್ಯವಾಗುವಂಥದು. ಆಗ ಧಾರವಾಡದಲ್ಲಿ ಮೈದಳೆದ ಕನ್ನಡಾಭಿಮಾನಿಗಳ ಒಕ್ಕೂಟವಾದ 'ಅಖಿಲ ಕರ್ನಾಟಕ ಕನ್ನಡ ಕ್ರಿಯಾಸಮಿತಿ'ಯ ಮೊದಲ ಅಧ್ಯಕ್ಷರಾದದ್ದೇ ಈ ಇಳಿವಯೋಮಾನದ ತರುಣಗುಣದ ಶಂಬಾ ಎಂಬುದು ಅವರಿಗೆ ಕನ್ನಡ ನೆಲವು ಸದಾ ಋಣಿಯಾಗಿರತಕ್ಕ ವಿಷಯ. ೧೯೨೪ ರಿಂದ ೧೯೯೧ರ ವರೆಗೆ, ಅಂದರೆ ಅವರ ಜ್ಞಾನದಾಹದುಸಿರು ನಿಲ್ಲುವಲ್ಲಿಯ ತನಕವೂ ಕನ್ನಡ ಜಾಗೃತಿಯ ಮುಂಚೂಣಿಯಲ್ಲಿದ್ದವರು ಶಂಬಾ ಎಂದರೆ ಅವರ ಸಾಮರ್ಥ್ಯವೆಂಥದು, ಉತ್ಸಾಹವೆಂಥದು, ಅವರ ನೆಲದ ಋಣ ಸಲ್ಲಿಕೆಯ ಮೌಲ್ಯವೆಂಥದು ಎಂಬುದು ಸ್ಪಷ್ಟವಾಗುತ್ತದೆ.

ಸಂಶೋಧನ ಕ್ಷೇತ್ರದತ್ತ ತುಸು ನೋಟ ಬೀರಿದರೆ ಶಂಬಾ ಅವರ ದೈತ್ಯಪ್ರತಿಭೆಯ ದರ್ಶನವಾಗುತ್ತದೆ. ಯಾವುದೇ ಕೆಲಸದಲ್ಲಿ ತೊಡಗಿಕೊಂಡರೂ

ತೀವ್ರ ಸಂಶೋಧಕ ದೃಷ್ಟಿಯಿಂದ ವಿಷಯದ ಆಳಕ್ಕಿಳಿದು ಅಧ್ಯಯನ ಮಾಡುವ ಪರಿಪಾಠ ಅವರದು. ೧೯೨೨ ರಲ್ಲಿ ಪ್ರಕಟವಾದ ಅವರ 'ಕಂನುಡಿಯ ಹುಟ್ಟು' ಕೃತಿಯು ಕನ್ನಡ ಭಾಷೆಯ ಹುಟ್ಟು, ಅದರ ಮೂಲ ಜಾಯಮಾನ, ಈ ಭಾಷೆಯ ಚಾರಿತ್ರಿಕ ಬೆಳೆವಣಿಗೆ ಮತ್ತು ಅದು ಒಳಗೊಂಡಿರುವ ಇನ್ನಿತರ ಭಾಷಾ ಸಂಬಂಧಗಳನ್ನೂ ಕುರಿತಂತೆ ಭಾಷಾಶಾಸ್ತ್ರದ ಹಿನ್ನೆಲೆಯಲ್ಲಿ ವಿಶ್ಲೇಷಿಸುತ್ತದೆ.

ಕನ್ನಡದ ವೈಶಿಷ್ಟ್ಯವೇನು, ಕನ್ನಡ ಜನಪದರ ಗುಣಲಕ್ಷಣಗಳೇನು ಎಂಬುದರತ್ತ ಈ ನೆಲದ ಮನಸುಗಳನ್ನು ಸೆಳೆದ ಕವಿರಾಜಮಾರ್ಗಕಾರ ಕರ್ನಾಟಕದ ಸೀಮೆಯನ್ನು ಗುರುತಿಸುತ್ತ 'ಕಾವೇರಿಯಿಂದಮಾ ಗೋದಾವರಿ ವರಮಿರ್ಪ' ಇತ್ಯಾದಿ ಯಾಗಿ ಎಲ್ಲೆಯೊಂದನ್ನು ಗುರುತಿಸಿದ್ದುದನ್ನು ವಿಶ್ಲೇಷಣೆಯ ಅಗತ್ಯವೇ ಇಲ್ಲವೆಂಬಂತೆ ಕನ್ನಡ ಜನಪದವು ಒಪ್ಪಿಕೊಂಡಂತಿದ್ದ ಕಾಲ ಅದು. ಶಂಬಾ ಅವರ ಸಂಶೋಧನ ಪ್ರವೃತ್ತಿಗೆ ಯಾವುದನ್ನೂ ಹೀಗೆ ಏಕಾಏಕಿ ಕೇಳಿ ಮುಗುಮ್ಮಾಗಿರುವುದು ಅಭ್ಯಾಸವಲ್ಲ. ಪೂರ್ವದಲ್ಲಿ ಕನ್ನಡನಾಡು ಎಲ್ಲಿತ್ತು? ಕನ್ನಡ ಜನರ ಮೂಲಸ್ಥಾನ ಯಾವುದು? ಬೇರೆ ಬೇರೆ ಭಾಷಾರೀತಿಯ ಬೇರೆ ಬೇರೆ ಪ್ರದೇಶದ ಸಂಪರ್ಕ ಹೇಗಾಯಿತು? ಇದರ ನಿಜ ಸ್ವರೂಪವೇನು? ನೆರೆಯ ಮಹಾರಾಷ್ಟ್ರದ ಧಾರ್ಮಿಕ ಗ್ರಂಥಗಳಲ್ಲಿ ಕನ್ನಡದ ಹೆಜ್ಜೆ ಗುರುತುಗಳು ಏಕಿವೆ, ಹೇಗಿವೆ, ಅವುಗಳ ಮೂಲಸ್ವರೂಪವೇನು ಎಂಬುದರ ಕುರಿತು ಅವರ ಚಿಂತನೆ ಹರಿಯಿತು. ಅಲ್ಲಿರುವ ಸ್ಥಳನಾಮಗಳು ಕನ್ನಡ ನೆಲದ ಸ್ಪರ್ಶವನ್ನೊಳಗೊಂಡಿವೆಯಾದರೆ ಅವುಗಳು ಬಂದದ್ದು ಹೇಗೆ? ಇದರರ್ಥವೇನು? ಎಂಬುದರತ್ತಲೂ ಅವರ ತೀಕ್ಷ್ಣ ಪರಿಶೋಧಕ ಪ್ರವೃತ್ತಿ ಹರಿಯಿತು. ಇದರ ಫಲವಾಗಿ ಹುಟ್ಟಿಕೊಂಡದ್ದು ಅವರ ಅತ್ಯುತ್ಕೃಷ್ಟ ಸಂಶೋಧನ ಕೃತಿ 'ಕಣ್ಮರೆಯಾದ ಕನ್ನಡ'(೧೯೩೩). ಇದು ಇತಿಹಾಸ, ಸ್ಥಳನಾಮ ಮತ್ತು ಜನಪದೀಯ ಅಂಶಗಳ ಕುರಿತ ಗಂಭೀರ ಸಂಸ್ಕೃತಿ ಅನ್ವೇಷಣೆಯನ್ನೊಳಗೊಂಡ ಕೃತಿ. ಜೊತೆಗೆ, ಭೌಗೋಳಿಕವಾಗಿ ಕರ್ನಾಟಕದ ಉದ್ದಗಲಗಳು, ಭಾಷಾಪ್ರಾಂತ್ಯಗಳು ಬಹಳ ಹಿಂದೆಯೇ ಪರಭಾರೆಯಾಗಲು ಕಾರಣಗಳೇನು ಎಂಬುದರತ್ತಲೂ ಗಮನಸೆಳೆಯುವ ಮಹತ್ವದ ಕೃತಿ ಇದು. ಆ ಕಾಲಕ್ಕೆ ಉತ್ತರ ಕರ್ನಾಟಕದ ಮುಖ್ಯ ಸಾಹಿತ್ಯ ಕೇಂದ್ರಗಳೆಂದು ಖ್ಯಾತವಾಗಿದ್ದ ಬೆಳಗಾವಿ–ಧಾರವಾಡಗಳು ಮರಾಠಿಯನ್ನು ತಲೆಯ ಮೇಲೆ ಹೊತ್ತುಕೊಂಡಿದ್ದಂತಹ ಸಮಯದಲ್ಲಿ ಶಂಬಾ ಅವರ ಈ ಕೃತಿ

ವಿಶೇಷವಾಗಿ ಭಾಷಾವಿದರನ್ನೂ ಸಾಹಿತಿಗಳನ್ನೂ ಸೆಳೆಯಿತು. ಅವರ ಈ ಪ್ರಯತ್ನಕ್ಕೆ ಅಂದು ಕನ್ನಡದ ಅದ್ವರ್ಯುಗಳೆಂದು ಹೆಸರಾಗಿದ್ದ ರಾ. ನರಸಿಂಹಾಚಾರ್ಯ, ಡಿ.ವಿ.ಜಿ, ಗೋವಿಂದ ಪೈ, ಎ. ವೆಂಕಟಸುಬ್ಬಯ್ಯ ಮೊದಲಾದವರ ಶಹಬ್ಬಾಸಗಿರಿಯೂ ದೊರಕಿತು.

೧೯೩೪ ರಲ್ಲಿ ಬೆಳಕು ಕಂಡ ಶಂಬಾ ಅವರ ಮತ್ತೊಂದು ಮುಖ್ಯ ಕೃತಿ, 'ಮಹಾರಾಷ್ಟ್ರದ ಮೂಲ'. ಕುರುಬ ಜನಾಂಗದ ಮೂಲ ನೆಲೆಯಾದ ಕರ್ನಾಟಕ–ಮಹಾರಾರಾಷ್ಟ್ರ ಗಡಿ ಪ್ರದೇಶದ ಕುರಿತು ವಿಶೇಷವಾಗಿ, ಭಾಷೆ ಮತ್ತು ಜನಾಂಗದ ಕುರಿತ ಚಿಂತನೆಗಳನ್ನು ಇಲ್ಲಿ ಕಾಣಬಹುದು. ಮಹಾರಾಷ್ಟ್ರದ ಮೂಲದಲ್ಲಿರುವುದು ಕನ್ನಡ ಸಂಸ್ಕೃತಿಯೇ ಎಂಬುದನ್ನು ಮರಾಠಿಯಲ್ಲೇ ಬರೆದು ವಿದ್ವದ್ವಲಯದಲ್ಲಿ ಮಹಾವಿವಾದವನ್ನು ಹುಟ್ಟು ಹಾಕಿದ ಕೃತಿ ಇದು. ಇದು ಮಹಾರಾಷ್ಟ್ರದ ಅತ್ಯುತ್ತಮ ವಾರ್ಷಿಕ ಕೃತಿ ಎಂದು ಮಹಾರಾಷ್ಟ್ರ ಸರ್ಕಾರವೇ ಮಾನ್ಯಮಾಡಿತು. ಮರಾಠಿಯಲ್ಲಿ ಪಂಡಿತೋತ್ತಮರೆಂದು ಖ್ಯಾತರಾಗಿದ್ದ ತರ್ಕತೀರ್ಥ ಲಕ್ಷ್ಮಣಶಾಸ್ತ್ರೀ, ಆಚಾರ್ಯ ವಿನೋಬಾಭಾವೆ ಅವರಂಥವರಿಂದ ಈ ಕೃತಿ ಪ್ರಶಂಸೆಗಳಿಸಿತು. ಕನ್ನಡನಾಡು, ನುಡಿಗಳ ಸ್ವರೂಪ ಲಕ್ಷಣಗಳನ್ನು ಕುರಿತು ಚಿಂತಿಸುತ್ತ ಅದಕ್ಕೆ ಪುರಾಣಗಳಿಂದಲೂ, ವೇದ, ಉಪನಿಷತ್ತು, ಸ್ಮೃತಿಗಳು, ಭೂಗರ್ಭಶಾಸ್ತ್ರ ಮುಂತಾದವುಗಳಲ್ಲಿರುವ ಅನೇಕ ವಿಚಾರಗಳನ್ನು ಅನ್ವಯಿಸಿರುವ ವೈಚಾರಿಕ ಕೃತಿ. 'ಕರ್ನಾಟಕ ಸಂಸ್ಕೃತಿಯ ಪೂರ್ವಪೀಠಿಕೆ' ಇದರ ಮೊದಲ ಭಾಗ ೧೯೩೭ರಲ್ಲಿ ಪ್ರಕಟವಾಯಿತು.

ಅವರ ಮತ್ತೊಂದು ಮಹತ್ತ್ವದ ಕೃತಿ 'ಹಾಲುಮತ ದರ್ಶನ'(೧೯೬೦). ಶಂಬಾ ಅವರ ಪ್ರಕಾರ ಹಾಲುಮತ ಎಂಬುದು ಭಾರತೀಯ ಸಂಸ್ಕೃತಿ ಸಂಪ್ರದಾಯಗಳ ವೇದಪೂರ್ವಕಾಲದ ಅವಶೇಷ. ವೇದಗಳಲ್ಲಿ ವಿಶೇಷವಾಗಿ ಬಳಕೆಯಾಗುವ ಆಪಃ, ಅಪಃ ಎಂಬ ಶಬ್ದಗಳ ಹಿನ್ನೆಲೆಯನ್ನು ಶಂಬಾ ಅವರು ಅತ್ಯಂತ ಆಧಾರಪೂರ್ವಕವಾಗಿ ಚರ್ಚಿಸುತ್ತಾರೆ. ಹಾಲುಮತವು ವೇದಗಳಲ್ಲಿ 'ಆಪ' ಎಂಬ ಸಂಕೇತದಿಂದ ರಸವನ್ನು ಸೂಚಿಸುವುದಾಗಿದೆ. ಅಗ್ನಿ ಪೂಜಕರು ನಡೆಸುವ ವೈದಿಕಯಜ್ಞಗಳ ಆಚರಣೆ ಮತ್ತು ಅದಕ್ಕನುಗುಣವಾಗಿ ನಡೆಯುವ ಧಾರ್ಮಿಕ ವಿಧಿಗಳು, ಸ್ತುತಿಗಳು, ಪ್ರಶ್ನೋತ್ತರ ರೂಪದ ಸಂಭಾಷಣಾ ರೂಪಗಳು ಮುಂತಾದ ಯಜ್ಞಭಾಗಗಳನ್ನು ಒಳಗೊಂಡ ಯಜುರ್ವೇದದ ಭಾಗ ಇದು. ಹಾಗೆಯೇ ಈ 'ಆಪ'ವೆಂಬ ರಸತತ್ತ್ವದಿಂದ ಅಭಿವ್ಯಕ್ತವಾಗುವ ಆಧ್ಯಾತ್ಮಿಕ ಪ್ರಗತಿ, ಮೋಕ್ಷ, ವೈರಾಗ್ಯ,

ಧ್ಯಾನ ಮುಂತಾದ ನಿವೃತ್ತಿಪರ ಚಿಂತನೆಗಳನ್ನೂ ಒಂದೆಡೆ ಚರ್ಚಿಸುತ್ತ 'ಅಪ' ಸಂಪ್ರದಾಯದ ಮೂಲ ವೈದಿಕ ಸಂಪ್ರದಾಯದಿಂದ ವಿಚಲನಗೊಂಡ 'ಮಧು-ರಸ' ಇತ್ಯಾದಿಗಳ ಸಂಪ್ರದಾಯಗಳು, ವೇದದ ಪ್ರಾರ್ಥನೆಗಳಲ್ಲಿಲ್ಲ. ಇಲ್ಲಿ ಬರುವ ವಿಷ್ಣು, ರುದ್ರಗಳ ಉಲ್ಲೇಖವೂ ಇಲ್ಲ ಎಂಬ ವಿಚಾರಗಳನ್ನು ಮತ್ತೊಂದೆಡೆ ಇಟ್ಟು ಚರ್ಚಿಸುತ್ತಾರೆ. ತತ್ಪರಿಣಾಮವಾಗಿ, ಭಾರತೀಯ ಆರ್ಯ ಸಂಪ್ರದಾಯದವರು ಹಾಲುಮತದವರನ್ನು ಈ ದೇಶೀಯರಾದ ಇತರ ಜನಾಂಗಗಳಿಂದ ಸ್ವೀಕರಿಸಿರಬಹುದು. ಮುಂದಿನ ಶಾಕ್ತ-ಶೈವ-ವೈಷ್ಣವ ಸಂಪ್ರದಾಯಗಳಿಗೆ ವೇದ ಪೂರ್ವದ ಹಾಲುಮತವೇ ಮೂಲ. ಇದರ ಸುಳುಹುಗಳು ಋಗ್ವೇದದಲ್ಲೇ ದೊರೆಯುತ್ತವೆ. 'ಪ್ರಜ್ಞೆ' ಮತ್ತು 'ಮೇಧಾ' ಗಳ ಸಮನ್ವಯ ರೂಪವೇ ಹಾಲುಮತ ಎಂದು ಶಂಬಾ ಇಲ್ಲಿ ಚರ್ಚಿಸುತ್ತಾರೆ. ಅತ್ಯಂತ ಜಾಗರೂಕವಾಗಿ ಓದಿ ಅರ್ಥೈಸಿಕೊಳ್ಳಬೇಕಾದ ಈ ಅಂಶಗಳು ಶೈವ ಮತ್ತು ವೈಷ್ಣವ ಸಂಸ್ಕೃತಿ ಸ್ವರೂಪಗಳ ಕುರಿತು ಇರುವ ಸಮಸ್ಯೆಗಳನ್ನು ತಳಮೂಲವಾಗಿ ಶೋಧಿಸುತ್ತವೆ.

೧೯೪೭ ರಲ್ಲಿ ಪ್ರಕಟವಾದ 'ಎಡೆಗಳು ಹೇಳುವ ಕಂನಾಡ ಕಥೆ' ಕೃತಿಯು ಕನ್ನಡದ ಮೊತ್ತಮೊದಲ ಸ್ಥಳನಾಮ ಅಧ್ಯಯನ ಗ್ರಂಥ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. 'ಋಗ್ವೇದ ಸಾರ-ನಾಗ ಪ್ರತಿಮಾವಿಚಾರ'(೧೯೭೧) ಎಂಬ ಇವರ ಒಂದು ಸಾವಿರ ಪುಟಗಳಿಗೂ ಮಿಕ್ಕಿದಂತೆ ಹರಡಿಕೊಂಡ ಕೃತಿಯು ಅವರ ಪ್ರಮುಖ ಸಂಶೋಧನ ಕೃತಿ ಎನಿಸಿದೆ. ಇದರಲ್ಲಿ ನಾಗಪ್ರತಿಮೆಗಳ ಕುರಿತ ಆಳವಾದ ಸಂಶೋಧನೆ ಇದೆ.

ಶಂಬಾ ಅವರ ಸಂಶೋಧನ ವಿಷಯಗಳನ್ನು ಇಂತಿಂಥವೇ ಎಂದು ಒಂದೇ ಕೃತಿಯಿಂದ ಹೆಕ್ಕಿ ತೆಗೆಯುವುದೂ ಕಷ್ಟ. ಏಕೆಂದರೆ ಅವರ ಸಂಸ್ಕೃತಿ ಅನ್ವೇಷಣೆ ಹಲವು ಬಗೆಯದು. ಕೆಲವು ಲೇಖನಗಳು ಕನ್ನಡ ಜನ-ಮನ ಹಾಗೂ ಕನ್ನಡದ ಅನನ್ಯತೆಗಳನ್ನು ಕನ್ನಡ ಗಡಿಗಳಿಂದಾಚೆಯೂ ಮತ್ತೆ ಕೆಲವೊಮ್ಮೆ ವೇದಪೂರ್ವ ಪ್ರಾಗೈತಿಹಾಸಿಕ ಕಾಲದವರೆಗೂ ಗುರುತಿಸಿರುವುದನ್ನು ಕಾಣಬಹುದು. ಕನ್ನ, ಕಣ್ವ, ಪಟ್ಟಿ-ಹಟ್ಟಿ-ಹಟ್ಟ ಮುಂತಾಗಿ ಹಲವಾರು ನಾಮವಿಶೇಷಗಳು ದ್ವಾರಕಾ ಹಾಗೂ ನರ್ಮದಾ ತೀರದವರೆಗಿನ ಪ್ರದೇಶಗಳಲ್ಲೂ ಸ್ಥಳನಾಮಗಳಲ್ಲೂ ಕಾಣಿಸಿಗುವುದನ್ನು ಶಂಬಾ ಪ್ರಸ್ತಾಪಿಸುತ್ತ ಕನ್ನಡಿಗರ ವ್ಯಾಪ್ತಿಯು ಸಿಂಧೂ-ಗಂಗಾ ತೀರಗಳಿಂದ ಮುಂದುವರಿದು ನರ್ಮದಾ ತೀರದವರೆಗೂ ಸಾಗಿ ಐತಿಹಾಸಿಕ ಕಾಲಕ್ಕೆ

ಗೋದಾವರಿ ಮತ್ತು ಕೃಷ್ಣಾತೀರಗಳವರೆಗೆ ತನ್ನ ಹರಹನ್ನು ಸಂಕುಚಿತಗೊಳಿಸಿ ಕೊಂಡಿರಬಹುದು ಎನ್ನುತ್ತಾರೆ.

ಆರ್ಯೇತರ ಸಂಸ್ಕೃತಿಗಳಲ್ಲಿ ದ್ರಾವಿಡ ಶಬ್ದಕ್ಕಿಂತ ಕನ್ನಡ ಶಬ್ದವೇ ಯುಕ್ತವಾದದ್ದು. ಪಾಶ್ಚಾತ್ಯ ಚಿಂತನೆಗಳು ವ್ಯಾಪಕವಾಗಿ ನಮ್ಮಲ್ಲಿ ರೂಢಿಗತ ವಾಗಿಸಿರುವಂತೆ ಆರ್ಯೇತರ ಸಂಸ್ಕೃತಿಯು ದ್ರಾವಿಡ ಹಾಗೂ ಆಸ್ಟ್ರೋ–ಏಷ್ಯಾಟಿಕ್ ಎಂಬ ಎರಡು ಬಗೆಯಲ್ಲಿಲ್ಲ. ಕೃಷ್ಣ–ವಿಠ್ಠಲರು ಕನ್ನಡಿಗರ ಇಷ್ಟದೇವತೆಗಳೆಂಬುದನ್ನು ದೇವತಾರಹಸ್ಯಶಾಸ್ತ್ರದ ಅಧ್ಯಯನ ಶ್ರುತಪಡಿಸುತ್ತದೆ. ಋಗ್ವೇದದಲ್ಲಿ ಕಾಣಿಸಿರುವ ಪ್ರಸಿದ್ಧ ಇಂದ್ರ–ವೃತ್ರರ ಹೋರಾಟವೇ ಅಲ್ಲಿಯ ಮುಖ್ಯ ಪ್ರತಿಪಾದಕ ವಸ್ತು. ಇಲ್ಲಿ ವಾಸ್ತವವಾಗಿ ಆವಿಷ್ಕಾರಗೊಂಡಿರುವುದು ನಾಗಸಂಕೇತ. 'ಆದಿತಿಃ ಸಾಪರಾಜ್ಞೀ ಸೂರ್ಯೋವಾ' ಎಂಬ ವೈದಿಕ ವಿವರಣೆಯಲ್ಲಿ ಇಡೀ ಪ್ರಾಗೈತಿಹಾಸಿಕ ಯುಗದ ಒಂದು ಭಾವಕೋಶವೇ ಅಡಗಿದೆ ಎಂಬುದು ಶಂಬಾ ಅವರ ನಿಖರವಾದ ಅಭಿಪ್ರಾಯ. ಋಗ್ವೇದದ ಕಾಲದ ಜನವರ್ಗದಲ್ಲಿ ಬಳಕೆಯಲ್ಲಿದ್ದ ಪದಗಳೇ ಮುಂದೆ ರೂಪಾಂತರಗೊಂಡು ಸಂಸ್ಕೃತದಲ್ಲಿ ಸೇರಿಹೋಗಿವೆ ಎನ್ನುತ್ತಾ ಜೋಶಿಯವರು ನಾಗ ಅಥವಾ ನಾಗಸಂಕೇತಗಳೂ ಹಾಗೆಯೇ ಸೇರಿಹೋಗಿರು ವುದನ್ನು ಕುರಿತು ವಿಸ್ತೃತವಾಗಿ ಹೇಳುತ್ತಾರೆ.

ಶಂಬಾ ಅವರ ಆತ್ಮಕಥನ 'ಎರಡಿಲ್ಲದ ಬಾಳೆ ಪೂರ್ಣ ಕೃತಿ'. ಇದರಲ್ಲಿ ಸಂಸ್ಕೃತಿಯು ವಿವಿಧ ಅಂಗೋಪಾಂಗ ಗಳಲ್ಲಿ ಭಾಷೆಯೂ ಅತಿ ಮಹತ್ವದ್ದು. ಯಾವುದೇ ಒಂದು ಪ್ರದೇಶದ ಸಂಸ್ಕೃತಿಯನ್ನು ಅದರ ಭಾಷೆಯು ಅನಾವರಣ ಗೊಳಿಸುತ್ತದೆ. ಸಂಸ್ಕೃತಿ ಎಂಬುದು ನಡವಳಿಕೆಯ ಒಳಸೂತ್ರದ ಫಲರೂಪ. ಸಂಸ್ಕೃತಿಯನ್ನು ಭಾಷಾರೂಪದಲ್ಲಿ ಹಿಡಿದಿಡುವುದೇ ಸಾಹಿತ್ಯ. ಈ ಅರ್ಥದಲ್ಲಿ ಸಾಹಿತ್ಯವೂ ಇತಿಹಾಸದ ಒಂದು ರೂಪವೇ ಆಗಿದೆ ಎನ್ನುವುದು ಶಂಬಾ ಅವರ ವಿಚಾರಧಾರೆ. ಹೀಗೆ ಅತ್ಯಂತ ತಾರ್ಕಿಕವಾಗಿ, ಆಳವಾಗಿ ವಿವಿಧ ವಿಷಯಗಳನ್ನು ಈ ಕೃತಿ ನಿರೂಪಿಸುತ್ತದೆ.

ಶಂಬಾ ಅವರ ಚಿಂತನೆಗಳ ಫಲರೂಪವನ್ನು ಪ್ರಶಸ್ತಿಗಳ ಮೂಲಕ ಅಳೆಯುವುದೆಂಬುದು ಒಂದು ರೀತಿ ಸರಿಯಲ್ಲ ವಾದರೂ ಅದೇ ವೇಳೆಗೆ, ಒಬ್ಬರ ಸಾಮರ್ಥ್ಯದ ದಾಖಲಾತಿಯಾಗಿ ಸನ್ಮಾನ, ಪ್ರಶಸ್ತಿಗಳನ್ನು ಪ್ರಸ್ತಾಪಿಸುವುದು

ಅನಿವಾರ್ಯ ಎಂದೆನಿಸುತ್ತದೆ. ಅವರ ಸಂಶೋಧನ ಮೌಲ್ಯವನ್ನು ಪರಿಗಣಿಸಿ ಅವರ 'ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ' ಎಂಬ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (೧೯೭೦) ಸಂದಿದೆ. ಅದರ ಮುಂದಿನ ವರ್ಷ ೧೯೭೧ ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಅವರಿಗೆ ಗೌರವ ಡಾಕ್ಟೊರೇಟ್ ಪ್ರದಾನ ಮಾಡಿತು. ೧೯೮೧ರಲ್ಲಿ ಶಂಬಾ ಅವರನ್ನು ಮಡಿಕೇರಿಯ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಯನ್ನಿತ್ತು ಗೌರವಿಸಲಾಯಿತು.

ಸಂಶೋಧನೆಗಷ್ಟೇ ಶಂಬಾ ಸಾಹಿತ್ಯ ಸಾಮರ್ಥ್ಯ ಮೀಸಲಾಗಿರಲಿಲ್ಲ. ಅವರು ಜಡಭರತ, ಅನಾಮಧೇಯ ಮುಂತಾದ ಕಾವ್ಯನಾಮಗಳಿಂದ ನಾಟಕ, ಪ್ರಬಂಧ, ಕಾದಂಬರಿಗಳನ್ನು ಬರೆದಿದ್ದಾರೆ. ಗಿರೀಶ್ ಕಾರ್ನಾಡರ 'ಒಂದಾನೊಂದು ಕಾಲದಲ್ಲಿ' ಚಿತ್ರಕ್ಕೆ ಸಂಭಾಷಣೆ ಬರೆದವರು ಶಂಬಾ ಅವರೇ. ಇವರ 'ಧರ್ಮಸೆರೆ' ಕಾದಂಬರಿಯೂ ಚಲನಚಿತ್ರವಾಗಿ ಅವತರಣಗೊಂಡಿದೆ.

ಸದಾಸರ್ವದಾ ಕನ್ನಡ ನೆಲದ ಗುಣ, ಜಾಯಮಾನಗಳ ಹೆಜ್ಜೆಗುರುತುಗಳನ್ನರಸುತ್ತ, ಅದು ಮೂಡಿಸುವ ಸಂಸ್ಕೃತಿಯ ಹವಾಗುಣವನ್ನು ಅನ್ವೇಷಿಸುತ್ತ ಜೀವನ ಪರ್ಯಂತ ಸಂಶೋಧನೆಯೇ ಉಸಿರೆಂಬಂತೆ ಬಾಳಿ ಬದುಕಿದ ಶಂಕರ ಬಾಳ ದೀಕ್ಷಿತ ಜೋಶಿಯವರು ೧೯೯೧ರ ಸೆಪ್ಟಂಬರ್ ೨೮ ರಂದು, ತಮ್ಮ ೯೫ನೆಯ ವಯಸ್ಸಿನಲ್ಲಿ ನಿಧನರಾದರು. ಅದಕ್ಕೂ ಮುಂಚಿನ ಹದಿನೈದು ದಿನಗಳಿಂದ ಕೋಮಾವಸ್ಥೆಯಲ್ಲಿದ್ದ ಅವರ ಪತ್ನಿ ಪಾರ್ವತಿಯವರೂ ಮಾರನೇ ದಿನವೇ ಸೆಪ್ಟಂಬರ್ ೨೯ ರಂದು ನಿಧನರಾದರು.

ಆಧಾರ

1. ಶಂಬಾ ಕೃತಿ ಸಮೀಕ್ಷೆ – ಮಲ್ಲೇಪುರಂ. ಜಿ. ವೆಂಕಟೇಶ್
2. ಸಂಸ್ಕೃತಿ ಮತ್ತು ಶಂಬಾ – ಮಲ್ಲೇಪುರಂ. ಜಿ. ವೆಂಕಟೇಶ್

❐ ❐ ❐

ಆರ್.ಎಸ್. ಪಂಚಮುಖಿ

(೧೮೯೮–೧೯೮೨)

ಅನ್ನಪೂರ್ಣ ಎನ್.ಎಸ್.

ಆರ್.ಎಸ್. ಪಂಚಮುಖಿಯವರು ಕನ್ನಡ ನಾಡಿನ ಆಧುನಿಕ ಸಂಶೋಧನ ಪರಂಪರೆಯ ಪ್ರಮುಖ ಶಿಲ್ಪಿಗಳಲ್ಲಿ ಒಬ್ಬರು. ಅವರ ಜೀವನ ಕೇವಲ ವೈಯಕ್ತಿಕ ಸಾಧನೆಯ ಕಥೆಯಲ್ಲ; ಅದು ಕರ್ನಾಟಕದ ಇತಿಹಾಸ, ಸಂಸ್ಕೃತಿ, ಕಲೆ, ಸಾಹಿತ್ಯ ಮತ್ತು ತತ್ತ್ವಶಾಸ್ತ್ರಗಳ ಸಮಗ್ರ ಪುನರ್ ಆವಿಷ್ಕಾರಕ್ಕೆ ಸಮರ್ಪಿತವಾದ ಮಹಾಯಾತ್ರೆ. ಶಿಸ್ತು, ಸಂಯಮ ಮತ್ತು ಕರ್ಮನಿಷ್ಠೆ ಎಂಬ ಮೌಲ್ಯಗಳೇ ಅವರ ಬದುಕಿನ ಧ್ರುವತಾರೆಗಳಾಗಿದ್ದುವು.

ಐವತ್ತಕ್ಕೂ ಹೆಚ್ಚು ಸದಸ್ಯರ ದೊಡ್ಡ ಸಂಸಾರದಲ್ಲಿ ವಾಸಿಸುತ್ತಿದ್ದರೂ ಪಂಚಮುಖಿ ಅವರು ತಮ್ಮ ಅಧ್ಯಯನ ಮತ್ತು ಸಂಶೋಧನೆಗೆ ಎಂದೂ ಅಡ್ಡಿಯಾಗದಂತಹ ಜೀವನಕ್ರಮವನ್ನು ರೂಪಿಸಿಕೊಂಡಿದ್ದರು. ಆದರೆ ಅವರ ಕೌಟುಂಬಿಕ ಪ್ರೀತಿ ಎಂದೂ ಶಿಸ್ತು ಮತ್ತು ಮೌಲ್ಯಗಳಿಂದ ದೂರವಾಗಿರಲಿಲ್ಲ.

ಆರ್. ಎಸ್. ಪಂಚಮುಖಿಯವರು ೧೮೯೮ ಮೇ ೪ರಂದು ಧಾರ್ಮಿಕ, ಶಾಸ್ತ್ರಪಾಂಡಿತ್ಯಕ್ಕೆ ಹೆಸರಾದ ಆಚಾರ ಕುಟುಂಬದಲ್ಲಿ ಜನಿಸಿದರು. ವಂಶಪಾರಂಪರ್ಯವಾಗಿ ಶಾಸ್ತ್ರಾಭ್ಯಾಸ ಮಾಡಿದ ಅವರು ಬಾಲ್ಯದಲ್ಲೇ ರಾಘವೇಂದ್ರಾಚಾರರ ಮಾರ್ಗದರ್ಶನದಲ್ಲಿ ವಿದ್ಯಾಭ್ಯಾಸ ಆರಂಭಿಸಿದರು. ಬಿಜಾಪುರ ಜಿಲ್ಲೆಯ ಬಾದಾಮಿ ತಾಲೂಕಿನ ಚಾಲೀಹಾಳದಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ, ಬಾಗಲಕೋಟೆಯ ಎಫ್.ಜಿ.ಎ.ವಿ. ಶಾಲೆಯಲ್ಲಿ ಇಂಗ್ಲಿಷ್ ಶಿಕ್ಷಣ ಪಡೆದರು. ಅನಂತರ ತಂದೆಯೊಂದಿಗೆ ಧಾರವಾಡಕ್ಕೆ ಬಂದು ವಿಕ್ಟೋರಿಯಾ ಹೈಸ್ಕೂಲಿನಲ್ಲಿ ಓದಿ ೧೯೧೭ರಲ್ಲಿ ಮೆಟ್ರಿಕ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು.

ಬಾಂಬೆ ಸರ್ಕಾರ ಹೊಸದಾಗಿ ಆರಂಭಿಸಿದ ಕರ್ನಾಟಕ ಕಾಲೇಜಿನ ಮೊದಲ ಬ್ಯಾಚಿನ ವಿದ್ಯಾರ್ಥಿಯಾಗಿ ಸೇರಿದರು. ೧೯೧೯ರಲ್ಲಿ ಪೂನಾದ ಡೆಕ್ಕನ್ ಕಾಲೇಜಿನಲ್ಲಿ ಬಿ.ಎ. ಪದವಿ ಅಧ್ಯಯನ ಆರಂಭಿಸಿದರೂ ೧೯೨೧ರಲ್ಲಿ ಮಹಾತ್ಮಾ ಗಾಂಧೀಜಿಯವರ ಅಸಹಕಾರ ಚಳವಳಿಯಿಂದ ಪ್ರೇರಿತರಾಗಿ ವಿದ್ಯಾಭ್ಯಾಸವನ್ನು ತಾತ್ಕಾಲಿಕವಾಗಿ ನಿಲ್ಲಿಸಿದರು. ಈ ಅವಧಿಯಲ್ಲಿ ಟಿ.ಜಿ. ಪುರೋಹಿತ, ಜಿ.ವಿ. ಜೋರಾಪುರ, ಎನ್.ವಿ. ಜೋರಾಪುರ, ಆರ್.ಎಸ್. ಬನ್ನೂರ, ಎಸ್.ಬಿ. ಸವಣೂರ ಮೊದಲಾದವರೊಂದಿಗೆ ಸೇರಿ ಬಾಗಲಕೋಟೆಯಲ್ಲಿ ನ್ಯಾಷನಲ್ ಶಾಲೆಯನ್ನು ಸ್ಥಾಪಿಸಿದರು. ಶಾಲೆ ಕಡಿಮೆ ಅವಧಿಯಲ್ಲೇ ಉತ್ತಮ ಖ್ಯಾತಿ ಗಳಿಸಿದರೂ ಚಳವಳಿಯ ಕಾರಣ ಮುಚ್ಚಬೇಕಾಯಿತು.

೧೯೨೨ರಲ್ಲಿ ಮತ್ತೆ ಕರ್ನಾಟಕ ಕಾಲೇಜಿಗೆ ಸೇರಿ ಬಿ.ಎ. ಪದವಿ ಪೂರ್ಣಗೊಳಿಸಿದರು. ೧೯೨೩ರಲ್ಲಿ ಕನ್ನಡ ವಿಷಯದಲ್ಲಿ ವಿಶ್ವವಿದ್ಯಾಲಯಕ್ಕೆ ಪ್ರಥಮ ಸ್ಥಾನ ಹಾಗೂ ಸಂಸ್ಕೃತ (ಆನರ್ಸ್) ವಿಷಯದಲ್ಲಿ ಕಾಲೇಜಿಗೆ ಪ್ರಥಮ ಸ್ಥಾನ ಪಡೆದರು. ಆರ್.ಬಿ. ದೀಪದ ಬಂಗಾರ ಪದಕ ಮತ್ತು ಎರಡು ವರ್ಷದ ಶಿಷ್ಯವೇತನವನ್ನು ಗಳಿಸಿದರು. ೧೯೨೫ರಲ್ಲಿ ಸಂಸ್ಕೃತ ವೇದಾಂತ ಹಾಗೂ ಕನ್ನಡವನ್ನು ವಿಶೇಷ ವಿಷಯಗಳಾಗಿ ಆಯ್ದುಕೊಂಡು ಎಂ.ಎ. ಪದವಿಯನ್ನು ಯಶಸ್ವಿಯಾಗಿ ಪಡೆದರು.

ಕಾಲೇಜು ವಿದ್ಯಾಭ್ಯಾಸದ ಸಮಯದಲ್ಲಿ ಇವರಿಗೆ ಬರುತ್ತಿದ್ದ ತಂದೆಯ ದೀರ್ಘ ಪತ್ರಗಳು ಕೇವಲ ಕುಟುಂಬ ಸಂದೇಶಗಳಾಗಿರದೆ ಅವು ಜೀವನಪಾಠಗಳನ್ನು ಕಲಿಸುವ ಗ್ರಂಥಗಳಂತೆ ಇದ್ದುವು. ಇತಿಹಾಸದಲ್ಲಿಯ ರಾಜಮನೆತನಗಳ ಪತನವನ್ನು ಉದಾಹರಿಸಿ, ಭೌತಿಕ ಆಮಿಷಗಳ ಕ್ಷಣಿಕತೆಯನ್ನು ವಿವರಿಸಿ, ಸತ್ಯನಿಷ್ಠೆ ಮತ್ತು ಸಾಧನೆಯ ಮಾರ್ಗವನ್ನು ತೋರಿಸುತ್ತಿದ್ದುವು.

ಪಂಚಮುಖಿಯವರ ಜೀವನದ ಗಮನಾರ್ಹ ಅಂಶವೆಂದರೆ ಅವರ ಅಚಲ ಶಿಸ್ತು. ಅವರು ತಮ್ಮ ದಿನಚರಿಯಲ್ಲಿ ಯಾವತ್ತೂ ಸಡಿಲತೆಯನ್ನು ಒಪ್ಪಿಕೊಂಡವರಲ್ಲ. ಬೆಳಗಿನ ಜಾವ ನಾಲ್ಕು ಗಂಟೆಗೆ ಎದ್ದು ವಾಯುಸೇವನೆ, ನಿತ್ಯಕರ್ಮ, ಅಧ್ಯಯನ ಮತ್ತು ಸಂಶೋಧನೆ—ಇವುಗಳೆಲ್ಲವೂ ಸಮಯಪಾಲನೆಯ ಕಟ್ಟುನಿಟ್ಟಾದ ಚೌಕಟ್ಟಿನಲ್ಲೇ ನಡೆಯುತ್ತಿದ್ದುವು. ರಾತ್ರಿ ೯.೩೦ಕ್ಕೆ ಮಲಗುತ್ತಿದ್ದ ಅವರು,

ಆ ಸಮಯದ ಬಳಿಕ ಹೊರಗಿನ ಯಾವ ಶಬ್ದಕ್ಕೂ ಸ್ಪಂದಿಸದಷ್ಟು ಮನಸ್ಸನ್ನು ನಿಯಂತ್ರಿಸಿಕೊಂಡಿದ್ದರು. ಈ ಅತಿಯಾದ ಶಿಸ್ತಿನ ಬದುಕು ಕೆಲವರಿಗೆ ಅಸಾಮಾನ್ಯವಾಗಿ ಕಂಡು, ಅವರನ್ನು ವಿಚಿತ್ರ ವ್ಯಕ್ತಿಯೆಂದು ಭಾವಿಸುವಂತಾಗಿತ್ತು. ಆದರೆ ವಾಸ್ತವದಲ್ಲಿ ಈ ಶಿಸ್ತು ಅವರ ದೈನಂದಿನ ಕರ್ಮಜೀವನದ ಅವಿಭಾಜ್ಯ ಅಂಗವಾಗಿತ್ತು. ಜೀವನವನ್ನು ಅವರು ವೈಯಕ್ತಿಕ ಸುಖಸಾಧನೆಯ ಸಾಧನವಾಗಿ ನೋಡದೆ, ಜ್ಞಾನಸಾಧನೆಯ ಮಾರ್ಗವೆಂದು ಬದುಕಿದ್ದರು.

ವಯಸ್ಸಾಗುತ್ತಿದ್ದಂತೆ ಪಂಚಮುಖಿಯವರ ದೃಷ್ಟಿ ಮಂಜಾಗತೊಡಗಿತು. ಓದು–ಬರೆಹವೇ ಜೀವನವಾಗಿದ್ದ ವಿದ್ವಾಂಸನಿಗೆ ಈ ದೃಷ್ಟಿಕ್ಷೀಣತೆ ಆಂತರಿಕ ವೇದನೆಯನ್ನುಂಟುಮಾಡಿತು. 'ನಾನಿನ್ನಿರಬಾರದು' ಎಂಬ ಅವರ ಮಾತು ಜೀವನಾಸಕ್ತಿಯ ಕೊರತೆಯಲ್ಲ, ಜ್ಞಾನಸಾಧನೆಗೆ ಅಡ್ಡಿಯಾಗುತ್ತಿರುವ ಸ್ಥಿತಿಯ ಬಗ್ಗೆ ಅವರ ಆತ್ಮಸಾಕ್ಷಿಯ ನೋವಿನ ಪ್ರತಿಬಿಂಬವಾಗಿತ್ತು. ಯಮುನಾ ನದಿಯ ಮೇಲಿದ್ದ ಅಪಾರ ಪ್ರೀತಿ ಅವರನ್ನು ದಿಲ್ಲಿಯತ್ತ ಆಕರ್ಷಿಸಿತು. ದಿಲ್ಲಿಗೆ ತೆರಳುವ ಮುನ್ನ ಸ್ನೇಹಿತರು ಮತ್ತು ಬಂಧುಗಳಿಗೆ ಸಿಹಿ ಹಂಚಿದುದು, ಅದು ಕೊನೆಯ ಭೇಟಿಯೆಂಬ ಅಂತರಂಗದ ಅರಿವಿನ ಸಂಕೇತವಾಗಿತ್ತು. ೧೯೮೨ರ ಅಕ್ಟೋಬರ್ ೪ರಂದು ಯೋಗಾಸನದಲ್ಲಿ ಜ್ಞಾನಯೋಗಿಯ ಜೀವನಕ್ಕೆ ತಕ್ಕ ಅಂತ್ಯವೆಂಬಂತೆ ಕುಳಿತ ಸ್ಥಿತಿಯಲ್ಲಿಯೇ ಅವರು ದೇಹ ತ್ಯಜಿಸಿದರು.

ಪಂಚಮುಖಿಯವರ ವೃತ್ತಿ ಮತ್ತು ಸಂಶೋಧನೆಯ ಬದುಕು ೧೯೨೫ರಲ್ಲಿ ಉದಕಮಂಡಲದಲ್ಲಿ ಪುರಾತತ್ವಶಾಸ್ತ್ರ ವಿಭಾಗದ ಶಾಸನ ಶಾಖೆಯಲ್ಲಿ ಸಹಾಯಕ ಹುದ್ದೆಯಿಂದ ಆರಂಭವಾಯಿತು. ಉತ್ತರ ಕರ್ನಾಟಕದಿಂದ ಸಂಶೋಧನೆಯನ್ನು ಜೀವನೋಪಾಯವನ್ನಾಗಿ ಆಯ್ದುಕೊಂಡ ಮೊದಲ ವಿದ್ವಾಂಸರೆಂಬ ಹೆಗ್ಗಳಿಕೆ ಅವರಿಗೆ ಸಲ್ಲುತ್ತದೆ. ಎಚ್. ಕೃಷ್ಣಶಾಸ್ತ್ರಿ, ಕೆ.ವಿ. ಸುಬ್ರಹ್ಮಣ್ಯ ಅಯ್ಯರ್ ಹಾಗೂ ಜರ್ಮನ್ ಶಾಸನತಜ್ಞರಿಂದ ಅವರು ಶಾಸನಶಾಸ್ತ್ರ ಮತ್ತು ಪುರಾತತ್ವ ಸಂಶೋಧನ ವಿಧಾನಗಳಲ್ಲಿ ಗಂಭೀರ ತರಬೇತಿ ಪಡೆದರು.

ಕನ್ನಡ ಸಂಶೋಧನ ಸಂಸ್ಥೆ ಮತ್ತು ಸಂಸ್ಥಾನಿರ್ಮಾಣಕ್ಕೆ ಸಂಬಂಧಿಸಿದಂತೆ ೧೯೩೯ರಲ್ಲಿ ಧಾರವಾಡದಲ್ಲಿ ಸ್ಥಾಪಿತವಾದ 'ಕನ್ನಡ ಸಂಶೋಧನ ಸಂಸ್ಥೆ'ಯ ಮೊದಲ ನಿರ್ದೇಶಕರಾಗಿ ಪಂಚಮುಖಿಯವರು ನೇಮಕಗೊಂಡರು. ಒಂದು ಸಣ್ಣ

ಕೋಣೆ, ಒಬ್ಬ ಗುಮಾಸ್ತ ಮತ್ತು ಸ್ವಲ್ಪ ಪುಸ್ತಕಗಳೊಂದಿಗೆ ಆರಂಭವಾದ ಈ ಸಂಸ್ಥೆಯನ್ನು ಅವರು ಶೀಘ್ರದಲ್ಲೇ ಮಾದರಿ ಸಂಶೋಧನ ಕೇಂದ್ರವನ್ನಾಗಿ ರೂಪಿಸಿದರು. ಕರ್ನಾಟಕದ ಇತಿಹಾಸ, ಕಲೆ, ಸಂಸ್ಕೃತಿ ಮತ್ತು ಸಾಹಿತ್ಯದ ಅಧ್ಯಯನಕ್ಕೆ ಸಂಸ್ಥಾತ್ಮಕ ಸ್ವರೂಪವನ್ನು ಕೊಡುವಲ್ಲಿ ಅವರ ಪಾತ್ರ ನಿರ್ಣಾಯಕವಾಗಿತ್ತು. ವಿದೇಶೀ ವಿದ್ವಾಂಸರು ಸಹ ಈ ಸಂಸ್ಥೆಯ ಕಾರ್ಯ ಕ್ಷಮತೆಯನ್ನು ಮೆಚ್ಚಿ, ಪಂಚಮುಖಿಯವರ ದೃಷ್ಟಿ ಮತ್ತು ಸಂಘಟನಾ ಸಾಮರ್ಥ್ಯವನ್ನು ಪ್ರಶಂಸಿಸಿದರು.

ದಕ್ಷಿಣ ಭಾಗದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವಶಾಸ್ತ್ರ ಅಧ್ಯಯನದತ್ತ ವಿದ್ವಾಂಸರು ಲಕ್ಷ್ಯವಹಿಸಿರಲಿಲ್ಲ. ಅಂಥ ಸಂದರ್ಭದಲ್ಲಿ ಪಂಚಮುಖಿಯವರು ಈ ಕೆಲಸವನ್ನು ಕೈಗೆತ್ತಿಕೊಂಡರು. ಕರ್ನಾಟಕದಿಂದ ಕಡಿದುಹೋದ ಭಾಗದ ಜನತೆಯನ್ನು ಗುರುತಿಸಲು ಇಂಥ ಶೋಧನೆಗಳು ಅಗತ್ಯವೆನಿಸಿದ್ದವು. ಮೊದಲು ಪಂಚಮುಖಿಯವರು ಹಲವಾರು ಅಪರೂಪದ ಕನ್ನಡ, ಸಂಸ್ಕೃತ ಹಸ್ತಪ್ರತಿಗಳನ್ನು ಸಂಗ್ರಹಿಸಿ ಅವುಗಳ ನಕಲು ಪ್ರತಿಗಳನ್ನು ತಯಾರಿಸಿದರು. ಪ್ರಾಚೀನ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಸಂಬಂಧಿಸಿದಂತೆ ಭಾರತೀಯ ಪ್ರಾಚೀನ ಪ್ರತಿಮಾ ಲಕ್ಷಣಶಾಸ್ತ್ರವನ್ನು ಪ್ರತಿಬಿಂಬಿಸುವ ಗಂಧರ್ವ ಮತ್ತು ಕಿನ್ನರರ ವೃತ್ತಾಂತ ಕುರಿತು ಕುತೂಹಲ ತಳೆದರು. ಆಧ್ಯಾತ್ಮಿಕ ಮತ್ತು ಪೌರಾಣಿಕ ಗುಣವುಳ್ಳ ದೇವಾಂಶಸಂಭೂತ ಯಕ್ಷ(ಸುರ) ಹಾಗೂ ಭಾರತದ ದೇವಾಲಯಗಳ ವಾಸ್ತು ಶಿಲ್ಪಗಳಲ್ಲಿ ಈ ಯಕ್ಷ ಪ್ರಾಮುಖ್ಯತೆ ಅಥವಾ ಅರ್ಥ ಕುರಿತ ಮಹತ್ತ್ವದ ಅಭ್ಯಾಸ ಕೈಕೊಂಡರು. ಕರ್ನಾಟಕದ ಪ್ರಮುಖ ಪ್ರಾಚೀನ ಶಿಲ್ಪಕಲಾಕೃತಿಗಳ ಕೇಂದ್ರಗಳನ್ನು ಆಯ್ಕೆ ಮಾಡಿಕೊಂಡು ಅವುಗಳ ಅಳಿದುಳಿದ ಭಾಗಗಳ ಬಗೆಗೆ ಮೊತ್ತಮೊದಲು ಪ್ರಕಟಿಸಿದರು. ಅವುಗಳಲ್ಲಿ ಐತಿಹಾಸಿಕ ಸ್ಥಳಗಳಾದ ಪಟ್ಟದಕಲ್ಲು, ಬಾದಾಮಿ, ಐಹೊಳೆಗಳನ್ನು ಇಲ್ಲಿ ಉದಾಹರಿಸಬಹುದು. ಜೈನಕಲೆ ಮತ್ತು ಪ್ರತಿಮಾಲಕ್ಷಣ ವಿಧಾನವನ್ನು ಅಭ್ಯಾಸ ಮಾಡಿದರಲ್ಲದೆ ಭಟ್ಕಳ, ಹದುವಳ್ಳಿ ಮತ್ತು ಕೈಕಿನಿ ಮೊದಲಾದ ಸ್ಥಳಗಳಲ್ಲಿಯ ಭಗ್ನಾವಶೇಷಗಳ ಹಾಗೂ ಉತ್ತರ ಕನ್ನಡ ಪ್ರದೇಶದಲ್ಲಿ ಅಮೂಲ್ಯ ಜೈನ ಶಿಲ್ಪಕಲಾಕೃತಿಗಳ ಪರಿಶೀಲನೆ ನಡೆಸಿದರು. ಪುರಾತನ ಕಾಲದ ಅವಶೇಷಗಳು ಮತ್ತು ಶಾಸನಗಳು, ಕಂಚಿನ ವಸ್ತುಗಳು, ಕೆತ್ತನೆಗಳು ಅಲ್ಲದ

ಹಸ್ತಪ್ರತಿಗಳ ಸಂಗ್ರಹ ಹೀಗೆ ಪಂಚಮುಖಿಯವರು ಸಂಗ್ರಹಿಸಿದ ಐತಿಹಾಸಿಕ ಆಕರ ಸಾಮಗ್ರಿಗಳು, ಅವರ ಬರಹಗಳು ಇವೆಲ್ಲ ವಿಶೇಷ ಮಹತ್ತ್ವವನ್ನು ಪಡೆದಿವೆ.

ಪಂಚಮುಖಿಯವರು ೧೯೫೩ರಲ್ಲಿ ಸೇವೆಯಿಂದ ನಿವೃತ್ತರಾದರೂ ಸಂಶೋಧನ ಕಾರ್ಯವನ್ನು ಮಾತ್ರ ಕೈಬಿಡಲಿಲ್ಲ. ಕರ್ನಾಟಕ ಇತಿಹಾಸ ಸಂಶೋಧನ ಸಂಸ್ಥೆಯು ಅವರ ವಿನಂತಿಯ ಮೇರೆಗೆ ಸಂಶೋಧನ ಹಾಗೂ ಪ್ರಕಟನೆಯ ವಿಭಾಗವನ್ನು ತೆಗೆದುಕೊಂಡಿತು. ಪಂಚಮುಖಿಯವರನ್ನು ಆ ವಿಭಾಗಕ್ಕೆ ಪ್ರಧಾನ ಸಂಪಾದಕರನ್ನಾಗಿ ನಿಯಮಿಸಿಕೊಂಡಿತು. ಸಂಸ್ಥೆಯ ಒಂದು ಹೊಸ ಶಾಖೆಯಲ್ಲಿ ಭಾರತೀಯ ಲಿಪಿಯ ಹುಟ್ಟು ಬೆಳೆವಣಿಗೆಯನ್ನು ಅವರೇ ಕಲಿಸುತ್ತಿದ್ದರು. ಸಂಸ್ಥೆಯ ಆರ್ಥಿಕ ಸ್ಥಿತಿಯು ಸಮಾಧಾನಕರವಾಗಿರದಿದ್ದರೂ ಕರ್ನಾಟಕದ ಇತಿಹಾಸ, ಕಲೆ, ಸಂಸ್ಕೃತಿ ಮತ್ತು ಕನ್ನಡ, ಸಂಸ್ಕೃತ ಸಾಹಿತ್ಯದ ಬಗ್ಗೆ ಸಂಶೋಧನೆ ನಡೆಯುತ್ತಲೇ ಇತ್ತು. ಪಂಚಮುಖಿಯವರು ಕರ್ನಾಟಕದ ರಾಜಕೀಯ ಸಂಸ್ಕೃತಿಯನ್ನು ಕನ್ನಡದಲ್ಲಿ ಮೂರು ಸಂಪುಟಗಳಲ್ಲಿ ತರುವವರಿದ್ದರು. ಅದರಲ್ಲಿ ಸು. ೭೦ ಪುಟಗಳ ಮೊದಲ ಸಂಪುಟ ಇತ್ತೀಚೆಗೆ ಧಾರವಾಡದ ಕರ್ನಾಟಕ ಇತಿಹಾಸ ಸಂಶೋಧನ ಸಂಸ್ಥೆಯಿಂದ ಪ್ರಕಟವಾಯಿತು. ಅದರಲ್ಲಿ ಹತ್ತನೆಯ ಶತಮಾನದ ಇತಿಹಾಸದ ಸಾರಸಂಗ್ರಹವಿದೆ. ಉಳಿದ ಎರಡು ಸಂಪುಟಗಳನ್ನು ಹೊರತರಲಾಗಲಿಲ್ಲ. ಅವರು ಶಾಸನಗಳ ಆಧಾರದಿಂದ ಕರ್ನಾಟಕದ ಬೇರೆ ಬೇರೆ ಅರಸರ ಆಳ್ವಿಕೆಯ ನಕಾಶೆಯನ್ನು ತಯಾರಿಸುತ್ತಿದ್ದರು ಎಂಬ ಮಾಹಿತಿ ದೊರೆಯುತ್ತದೆ.

೧೯೨೬ರಿಂದ ೧೯೫೯ರ ತನಕ ಉತ್ತರ ಕರ್ನಾಟಕದ ಹಳ್ಳಿ ಹಳ್ಳಿಗಳಲ್ಲಿ ಸಂಚರಿಸಿ ಶಾಸನಗಳ ನಕಲು, ಅಧ್ಯಯನ ಮತ್ತು ವಿವರಣೆಗಳನ್ನು ಕೈಗೊಂಡ ಅವರ ಪರಿಶ್ರಮ ಕರ್ನಾಟಕದ ಇತಿಹಾಸ ಪುನರ್‌ನಿರ್ಮಾಣಕ್ಕೆ ಬಲವಾದ ಅಡಿಪಾಯವಾಯಿತು. ಅನೇಕ ದೇವಾಲಯಗಳನ್ನು ಇತಿಹಾಸಪೂರ್ವ ಸ್ಥಳಗಳನ್ನು ಸಂದರ್ಶಿಸಿದರು. ಇವೆಲ್ಲವುಗಳ ಕೂಲಂಕಷ ಅಧ್ಯಯನದ ಫಲವಾಗಿ ಕರ್ನಾಟಕ ಇತಿಹಾಸ ಪುನಾರಚನೆಗೆ ಗಣನೀಯ ಹೊಸ ನೋಟಗಳನ್ನು ಕೊಟ್ಟರು. ಅವರು ನಿಜವಾದ ಅರ್ಥದಲ್ಲಿ ಒಬ್ಬ ಪುರಾತತ್ವ ತಜ್ಞರಾಗಿದ್ದರಿಂದ ಭಾರತ ಮತ್ತು ಕರ್ನಾಟಕಕ್ಕೆ ಅನ್ವಯಿಸಿ ಅಭ್ಯಾಸ ಕೈಗೊಳ್ಳುವ ವಿದ್ಯಾರ್ಥಿಗಳಿಗೆ ಸಮರ್ಥ ಮಾರ್ಗ ದರ್ಶಕರೆನಿಸಿದ್ದರು. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯ

ಸಂಸ್ಥಾಪಕ ನಿರ್ದೇಶಕರಾಗಿ ಕರ್ನಾಟಕದ ಪ್ರಾಚೀನ ಸಂಸ್ಕೃತಿಗೆ ಸಂಬಂಧಿಸಿದಂತೆ ಖಚಿತ ವಿವರ ಕೊಡುವ ಸ್ಥಳಗಳನ್ನು ಗುರುತಿಸಿದರಲ್ಲದೆ ಹಂಪಿ ಮತ್ತು ವಿಜಯನಗರ ಸಾಮ್ರಾಜ್ಯ ಕುರಿತು ಮೊದಲಬಾರಿಗೆ ಕನ್ನಡದಲ್ಲಿ ಐತಿಹಾಸಿಕ ಮತ್ತು ಸಂಶೋಧನಾತ್ಮಕ ಹಿನ್ನೆಲೆಯಲ್ಲಿ ವಿಷಯ ಒದಗಿಸಿದರು. ಅಲ್ಲಿಯ ಬಂಗಾರ ನಾಣ್ಯಗಳ ಕುರಿತು ವ್ಯಾಪಕವಾದ ಅಧ್ಯಯನ ನಡೆಸಿದರು. ಕರ್ನಾಟಕದ ಪ್ರಾಚೀನ ಇತಿಹಾಸಕ್ಕೆ ಸಂಬಂಧಿಸಿದ ಮೂಲಸಾಮಗ್ರಿಯ ಶೋಧವನ್ನು ದಾಖಲಿಸಿದರು. ಕರ್ನಾಟಕದ ಕಲೆಯ ವಿಸ್ತಾರವಾದ ಅಭ್ಯಾಸಕ್ಕಾಗಿ ಮಾಡಿದ ಪ್ರಥಮ ಪ್ರಯತ್ನದಲ್ಲಿ ಕಲೆಯ ವೈವಿಧ್ಯತೆಯು ಬೆಳೆದುಬಂದುದರ ಬಗೆಗೆ, ವಿಶೇಷವಾಗಿ ಚಾಲುಕ್ಯ ಕಲೆಯ ಮೂಲ, ಪ್ರಾಚೀನ ಕರ್ನಾಟಕದಲ್ಲಿ ಶಿಕ್ಷಣ ಪದ್ಧತಿ, ಕರ್ನಾಟಕದಲ್ಲಿ ಜೈನಧರ್ಮದ ಬೆಳೆವಣಿಗೆ–ಪ್ರಸಾರ ಕುರಿತು ಸಂಶೋಧನ ನಿರತರಾದರು. ಮೌರ್ಯರ ಕಾಲದ ಹೂಣರು, ಮ್ಲೇಚ್ಛರಿಂದ ಹಿಡಿದು ಬ್ರಿಟಿಷರವರೆಗಿನ ಭಾರತದ ಮೇಲಾದ ಪರಕೀಯರ ದಾಳಿಗಳನ್ನು ಕುರಿತು ಅವರು ವಿವರಿಸುತ್ತ ನಮ್ಮ ದೇಶದ ಔನ್ನತ್ಯವನ್ನು ಸಾರುತ್ತಾರೆ. ೧೮೫೭ರ ಸ್ವಾತಂತ್ರ್ಯ ಯುದ್ಧವನ್ನು ಪೂರ್ವ–ಪಶ್ಚಿಮ ಸಂಸ್ಕೃತಿಗಳ ಘರ್ಷಣೆ ಎಂದು ಬಣ್ಣಿಸುತ್ತಾರೆ. ಏಕಕಾಲಕ್ಕೆ ಶೋಧನೆ, ಸಂಗ್ರಹ ಮತ್ತು ಆಕರ ಸಾಮಗ್ರಿಗಳ ಆಳವಾದ ಪರಿಶೀಲನೆಯಲ್ಲಿ ತೊಡಗಿದ ಪಂಚಮುಖಿಯವರು ಉತ್ತರ ಕರ್ನಾಟಕದ ಅಲಕ್ಷಿತ ವಿಷಯಗಳ ಅಧ್ಯಯನದತ್ತ ವಿಶೇಷ ಗಮನಹರಿಸಿದರು.

ಪಂಚಮುಖಿಯವರ ಸಂಶೋಧನೆ ಕ್ಷೇತ್ರಗಳು ಬಹುಶಾಖೀಯವಾಗಿದ್ದು, ಕಲೆ ಮತ್ತು ವಾಸ್ತುಶಿಲ್ಪ, ಪ್ರತಿಮಾಲಕ್ಷಣಶಾಸ್ತ್ರ, ನಾಣ್ಯವಿಜ್ಞಾನ, ಜಾನಪದ ಅಧ್ಯಯನ, ಕನ್ನಡ ಮತ್ತು ಸಂಸ್ಕೃತ ಸಾಹಿತ್ಯ, ತತ್ತ್ವಶಾಸ್ತ್ರ, ಧರ್ಮ ಮತ್ತು ಭಕ್ತಿ ಸಾಹಿತ್ಯ ಹೀಗೆ ಎಲ್ಲ ಕ್ಷೇತ್ರಗಳಲ್ಲೂ ವ್ಯಾಪಿಸಿದೆ. ಹರಿದಾಸ ಸಾಹಿತ್ಯದ ವಿಮರ್ಶಾತ್ಮಕ ಅಧ್ಯಯನ, ಪುರಂದರದಾಸರ ಜೀವನಚರಿತ್ರೆ, ಜಾನಪದ ಗೀತೆಗಳ ಸಂಗ್ರಹ, ಶಾಸನಾಧಾರಿತ ರಾಜಕೀಯ ಇತಿಹಾಸ—ಇವೆಲ್ಲವೂ ಕರ್ನಾಟಕದ ಸಾಮಾಜಿಕ–ಸಾಂಸ್ಕೃತಿಕ ಇತಿಹಾಸಕ್ಕೆ ಹೊಸ ಆಯಾಮಗಳನ್ನು ನೀಡಿವೆ. ಹರಿದಾಸ ಸಾಹಿತ್ಯದ ವಿಮರ್ಶಾತ್ಮಕ ಅಧ್ಯಯನದ ಮೂಲಕ ಪಂಚಮುಖಿಯವರು ಭಕ್ತಿ ಚಳವಳಿಯ ಐತಿಹಾಸಿಕ ಮಹತ್ವವನ್ನು ವಿಶ್ಲೇಷಿಸಿ, ಹರಿದಾಸರ ಜೀವನ ಮತ್ತು ಸಾಧನೆಗಳನ್ನು ಅವರ ಕೀರ್ತನೆಗಳ ಆಧಾರದ ಮೇಲೆ ನಿಖರವಾಗಿ ನಿರೂಪಿಸಿದ್ದಾರೆ. ಪುರಂದರದಾಸರ

ಕೀರ್ತನೆಗಳು ಮತ್ತು ಐತಿಹಾಸಿಕ ಆಧಾರಗಳ ಮೂಲಕ ಅವರ ಜೀವನ ಚರಿತ್ರೆಯನ್ನು ಬರೆದಿದ್ದು, ಭಾಗವತ ಮತ್ತು ಪುರಾಣಗಳನ್ನು ಆಧರಿಸಿ ಭಕ್ತ ಪ್ರಹ್ಲಾದನ ಜೀವನ–ಸಂದೇಶವನ್ನು ವಿವರಿಸಿದ್ದಾರೆ.

ಕೇಶಿರಾಜನ ಶಬ್ದಮಣಿದರ್ಪಣದ ಸೂತ್ರಗಳ ವಿಮರ್ಶಾತ್ಮಕ ಭಾಷಿಕ ಅಧ್ಯಯನ, ೧೭–೧೮ನೇ ಶತಮಾನಗಳ ಕನ್ನಡ ಕವಿತೆಯ ಐತಿಹಾಸಿಕ ವಿಶ್ಲೇಷಣೆ, ಕನ್ನಡ ಛಂದಸ್ಸಿನ ಬೆಳೆವಣಿಗೆ ಮತ್ತು ತೆಲುಗು ಛಂದೋಪ್ರಭಾವದ ವಿವರಣೆ ಇವರ ಭಾಷಾ–ಸಾಹಿತ್ಯ ಕ್ಷೇತ್ರದ ಪ್ರಮುಖ ಕೊಡುಗೆಗಳಾಗಿವೆ. ಕುಮಾರವ್ಯಾಸನ ಐರಾವತ ಕಾವ್ಯ, ಚಂದ್ರರಾಜನ ಮದನತಿಲಕ, ಅಹೋಬಲ ಕವಿಯ ವಿರೂಪಾಕ್ಷ ವಸಂತೋತ್ಸವ ಸೇರಿದಂತೆ ಹಲವು ಕೃತಿಗಳನ್ನು ಐತಿಹಾಸಿಕ ಮತ್ತು ವಿಮರ್ಶಾತ್ಮಕ ಪೀಠಿಕೆಗಳೊಂದಿಗೆ ಸಂಪಾದಿಸಿದ್ದಾರೆ.

ಬ್ರಹ್ಮಸೂತ್ರ ಟೀಕೆಯ ಸಂಪಾದನೆ ಮೂಲಕ ಬಾದರಾಯಣನ ತತ್ತ್ವಜ್ಞಾನ ಮತ್ತು ಮಧ್ವಾಚಾರ್ಯರ ಕೊಡುಗೆಯನ್ನು ಸ್ಪಷ್ಟಪಡಿಸಿದ್ದಾರೆ. ಪ್ರಾಚೀನ ಕರ್ನಾಟಕದ ಅಪರೂಪದ ನಾಣ್ಯಗಳು ಎಂಬ ಅಧ್ಯಯನವು ಮೌಲಿಕವಾದುದು. ಶಾಸನಗಳು, ಹಸ್ತಪ್ರತಿಗಳು, ಜನಪದ ಗೀತೆಗಳು ಮತ್ತು ದಾಖಲೆಗಳ ಸಂಗ್ರಹವು ಕರ್ನಾಟಕದ ಸಾಂಸ್ಕೃತಿಕ ಇತಿಹಾಸ ಪುನರ್‌ನಿರ್ಮಾಣಕ್ಕೆ ಆಕರವಾಗಿದೆ.

ಭಾರತೀಯ ಹಾಗೂ ವಿದೇಶೀ ಸಂಸ್ಕೃತಿಗಳ ಬಾಂಧವ್ಯದ ವಿಚಾರದಲ್ಲಿ ಪಂಚಮುಖಿಯವರು ಭೌಗೋಳಿಕ ಮತ್ತು ಭಾಷಿಕ ವ್ಯತ್ಯಾಸಗಳಿಗೆ ಮೀರಿದ ಸಮಗ್ರದೃಷ್ಟಿಕೋನವನ್ನು ಪ್ರತಿಪಾದಿಸಿದರು. ಜಾಗತಿಕ ಸಾಹಿತ್ಯಕ್ಕೆ ಹರಿದಾಸರ ಕೊಡುಗೆ, ಪುರಾತನಶಾಸ್ತ್ರ ಮತ್ತು ವೇದದ ದೇವರು ಮೊದಲಾದ ಭಾಷಣ–ಬರೆಹಗಳಲ್ಲಿ ಅವರು ಆಧ್ಯಾತ್ಮಿಕ ಪರಂಪರೆ, ಪುರಾತತ್ವ, ವೇದ ಸಂಸ್ಕೃತಿ ಮತ್ತು ಇತಿಹಾಸಕ್ಕೆ ನೂತನ ವ್ಯಾಖ್ಯಾನಗಳನ್ನು ನೀಡಿದರು. ಆರ್ಯ–ದ್ರಾವಿಡ ಎಂಬುದು ಜನಾಂಗೀಯವಲ್ಲ, ಭೌಗೋಳಿಕ ಪದಗಳೆಂಬ ಅವರ ಅಭಿಪ್ರಾಯವು ಭಾರತೀಯ ಸಾಂಸ್ಕೃತಿಕ ಏಕತೆಯ ಪುನರ್‌ಚಿಂತನೆಗೆ ದಾರಿ ತೋರಿಸುತ್ತದೆ.

ಪಂಚಮುಖಿ ಅವರ ಕನ್ನಡ ರಚನೆಗಳು:

೧. ಕರ್ನಾಟಕದ ಅರಸುಮನೆತನಗಳು, ಕರ್ನಾಟಕ ಇತಿಹಾಸ ಸಂಶೋಧನ ಸಂಸ್ಥೆ, ಧಾರವಾಡ, ೧೯೪೬

೨. ಐರಾವತ(ಸಂ), ಕನ್ನಡ ಸಂಶೋಧನ ಸಂಸ್ಥೆ, ಕ. ವಿ. ವಿ. ಧಾರವಾಡ, ೧೯೪೯

೩. ಕವಿಜಿಹ್ವಾಬಂಧನ, ಕರ್ನಾಟಕ ಇತಿಹಾಸ ಸಂಶೋಧನ ಸಂಸ್ಥೆ, ಧಾರವಾಡ, ೧೯೫೦

೪. ಕರ್ನಾಟಕ ಹರಿದಾಸ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೫೨

೫. ಕರ್ನಾಟಕ ಜಾನಪದ ಗೀತಗಳು, ಕನ್ನಡ ಸಂಶೋಧನ ಸಂಸ್ಥೆ, ಕ.ವಿ.ವಿ. ಧಾರವಾಡ, ೧೯೫೩.

೬. ಕರ್ನಾಟಕದ ಶಾಸನಗಳು: ಪರಿಚಯ, ಕನ್ನಡ ಸಂಶೋಧನ ಸಂಸ್ಥೆ, ಕ.ವಿ.ವಿ. ಧಾರವಾಡ, ೧೯೫೩

೭. ಮದನತಿಲಕಂ, ಕನ್ನಡ ಸಂಶೋಧನ ಸಂಸ್ಥೆ, ಕ.ವಿ.ವಿ. ಧಾರವಾಡ, ೧೯೧೩

೧೦. ಮುಂಬಯಿ ರಾಜ್ಯದಲ್ಲಿ ಕನ್ನಡ ಸಂಶೋಧನ, ಕನ್ನಡ ಸಂಶೋಧನ ಸಂಸ್ಥೆ, ಕ.ವಿ.ವಿ. ಧಾರವಾಡ, ೧೯೫೩

೯. ಪುರಂದರದಾಸ ಜೀವನ ಚರಿತ್ರೆ, ಪುರಂದರದಾಸರ ಸೇವಾ ಸಮಿತಿ, ಹೊಸಪೇಟೆ, ೧೯೫೬

೧೦. ಸಂಸ್ಕೃತಿ ಸಂಗ್ರಾಮ ಕೆ. ಎಚ್. ಆರ್. ಸೊಸಾಯಿಟಿ, ೧೯೬೦.

೧೧. ಕರ್ನಾಟಕ ಇತಿಹಾಸ(ಭಾಗ–೧)(ಇತಿಹಾಸ ಪೂರ್ವಕಾಲದಿಂದ ೧೦ನೇ ಶತಮಾನದವರೆಗೆ), ಕರ್ನಾಟಕ ಇತಿಹಾಸ ಸಂಶೋಧನ ಸಂಸ್ಥೆ, ಧಾರವಾಡ.

೧೨. ಶ್ರೀ ವರದೇಂದ್ರತೀರ್ಥರು, ಬೃಂದಾವನಮ್ ಆಫೀಸ್.

೧೩. ಸಂಸ್ಕೃತಿ ವಿಹಾರ, ಕರ್ನಾಟಕ ಇತಿಹಾಸ ಸಂಶೋಧನ ಸಂಸ್ಥೆ, ಧಾರವಾಡ, ೧೯೬೯

೧೪. ಭಾರತ ದೇಶದ ಸಂಸ್ಕೃತಿ ಪರಿಚಯ, ಪರಿಮಳ ಸಂಶೋಧನ ಸಂಸ್ಥೆ, ಧಾರವಾಡ, ೧೯೭೩

೧೫. ಪ್ರಮಾಣ ಪದ್ಧತಿ,ಕರ್ನಾಟಕ ಇತಿಹಾಸ ಸಂಶೋಧನ ಸಂಸ್ಥೆ, ಧಾರವಾಡ, ೧೯೮೨

೧೬. ಮಾಧವಾಲಂಕಾರ

ಪಂಚಮುಖಿಯವರ ಜೀವನವೇ ಒಂದು ಜೀವಂತ ಸಂಶೋಧನ ಪ್ರಯೋಗವಾಗಿತ್ತು. ಇತಿಹಾಸವನ್ನು ಅವರು ರಾಜ ಮಹಾರಾಜರ ಕಥೆಯಂತೆ ನೋಡದೆ, ಜನಸಾಮಾನ್ಯರ ಬದುಕಿನ ಸಂಸ್ಕೃತಿಯ ಪ್ರತಿಬಿಂಬವೆಂದು ವಿವರಿಸಿದರು. ಉತ್ತರ ಕರ್ನಾಟಕದ ನಿರ್ಲಕ್ಷಿತ ಇತಿಹಾಸವನ್ನು ಬೆಳಕಿಗೆ ತಂದು, ಕನ್ನಡ ಸಂಶೋಧನೆಗೆ ಪೂರಕ ಆಕರಗಳನ್ನು ಒದಗಿಸಿದರು. ಕನ್ನಡ, ಇಂಗ್ಲಿಷ್ ಮತ್ತು ಸಂಸ್ಕೃತಗಳಲ್ಲಿ ಅಪಾರವಾದ ಸಂಶೋಧನಾತ್ಮಕ ಸಾಹಿತ್ಯ ರಚನೆಮಾಡಿರುವ ಇವರ ಬರೆಹಗಳು ಅವರ ವಿದ್ವತ್ತಿಗೆ ಹಿಡಿದ ಕೈಗನ್ನಡಿಯಂತಿವೆ.

೧೯೪೮ರಲ್ಲಿ ಅಖಿಲ ಭಾರತ ಧರ್ಮ ಮಹಾಮಂಡಲವು(ಸಂಸ್ಕೃತ ಸಾಹಿತ್ಯ ಮತ್ತು ಶಾಸ್ತ್ರಪಾಂಡಿತ್ಯವನ್ನು ಗುರುತಿಸಿ) 'ವಿದ್ಯಾರತ್ನ'ಬಿರುದನ್ನು ನೀಡಿದರೆ, ೧೯೫೬ರಲ್ಲಿ ಶ್ರೀ ರಾಘವೇಂದ್ರಸ್ವಾಮಿ ಮಠದ ಶ್ರೀ ಸುಶಮೀಂದ್ರತೀರ್ಥ ಶ್ರೀಪಾದಂಗಳು 'ವಿದ್ಯಾಭೂಷಣ' ಬಿರುದನ್ನು ನೀಡಿದರು. ಇವು ಅವರ ವಿದ್ವತ್ತಿಗೆ ಸಲ್ಲಿಸಿದ ಮಾನ್ಯತೆಗಳಾಗಿವೆ. ಡಾ. ಆರ್.ಇ.ಎಮ್. ವೀಲರ್, ಶ್ರೀ ಗೋವಿಂದ ಪೈ ಮೊದಲಾದ ವಿದ್ವಾಂಸರ ಪ್ರಶಂಸೆಗಳು ಅವರ ಕಾರ್ಯದ ಮಹತ್ತ್ವವನ್ನು ದೃಢಪಡಿಸುತ್ತವೆ. ಶ್ರೀ ಆರ್. ಎಸ್. ಪಂಚಮುಖಿಯವರು ವಿದ್ವಾಂಸರು, ಸಂಶೋಧಕರು ಮತ್ತು ಆದರ್ಶ ಜೀವನದ ಮಾದರಿಯೂ ಹೌದು. ಅವರ ಬದುಕಿನ ಪ್ರತಿಯೊಂದು ಹಂತವೂ ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿಯ ಅಧ್ಯಯನಕ್ಕೆ ಅಮೂಲ್ಯ ಆಕರವಾಗಿದೆ. ಕನ್ನಡ ಸಂಶೋಧನ ಪರಂಪರೆಯಲ್ಲಿ ಅವರ ಹೆಸರು ಶಾಶ್ವತವಾಗಿ ನಿಲ್ಲುತ್ತದೆ. ಇವರು ೧೯೮೨ರಲ್ಲಿ ನಿಧನರಾದರು.

❐ ❐ ❐

ಎಸ್.ಸಿ. ನಂದೀಮಠ

(೧೯೦೦-೧೯೭೫)

ರಾಧಾಮಣಿ ಎಂ.ಎ.

ಎಸ್.ಸಿ. ನಂದೀಮಠ ಕರ್ನಾಟಕದ ಪ್ರಮುಖ ವಿದ್ವಾಂಸರಲೊಬ್ಬರು. ಇವರು ಕನ್ನಡ, ಸಂಸ್ಕೃತ, ಇಂಗ್ಲಿಷ್ ಸೇರಿದಂತೆ ಹಲವು ಭಾಷೆಗಳಲ್ಲಿ ಪಾಂಡಿತ್ಯ ಹೊಂದಿದ್ದರು; ಉನ್ನತ ಶಿಕ್ಷಣಕ್ಕಾಗಿ ಶ್ರಮಿಸಿದ ಶಿಕ್ಷಣವೇತ್ತರು. ಇವರ ಪೂರ್ಣ ಹೆಸರು ಶಿವಲಿಂಗಯ್ಯ ಚೆನ್ನಬಸವಯ್ಯ ನಂದೀಮಠ. ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ನಂದಿ ಗ್ರಾಮದಲ್ಲಿ, ಸುಸಂಸ್ಕೃತ ಮಧ್ಯಮವರ್ಗದ ಮನೆತನದಲ್ಲಿ ಹುಟ್ಟಿದರು. ನಂದಿ ಗ್ರಾಮದಲ್ಲಿ ಆಗ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯು ಇರಲಿಲ್ಲ, ಜೊತೆಗೆ ಓದಿಸುವ ಮನಸ್ಸುಗಳು ಇರಲಿಲ್ಲ, ಇಂಥ ಸ್ಥಿತಿಯಲ್ಲಿ ಇವರು ಸಮೀಪದ ಮಮದಾಪುರದಲ್ಲಿ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ, ಮಾಧ್ಯಮಿಕ ಶಿಕ್ಷಣದ ಮೊದಲ ಭಾಗವನ್ನು ಗೋಕಾಕ ಶಾಲೆಯಲ್ಲಿ ಪೂರೈಸಿ ಮುಂದೆ ಬೆಳಗಾವಿ ಅರಟಾಳ ಹೈಸ್ಕೂಲಿನಿಂದ ೧೯೨೦ರಲ್ಲಿ ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆಯಾದರು. ತಮ್ಮ ಕಾಲೇಜು ಶಿಕ್ಷಣವನ್ನು ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಮುಂದುವರಿಸಿ, ೧೯೨೪ರಲ್ಲಿ ಬಿ. ಎ. ಪರೀಕ್ಷೆಯನ್ನು ಉನ್ನತಶ್ರೇಣಿಯಲ್ಲಿ ಪಾಸಾದರು. ಕರ್ನಾಟಕ ಕಾಲೇಜಿನ ಫೆಲೋ ಎಂದು ಆಯ್ಕೆ ಆಗಿ ಸಂಸ್ಕೃತ ವಿಷಯದಲ್ಲಿ ಸ್ನಾತಕೋತ್ತರ ಅಧ್ಯಯನ ನಡೆಸಿ ೧೯೨೬ರಲ್ಲಿ ಎಂ.ಎ. ಪದವಿಯನ್ನು ಪಡೆದರು.

ಸಂಸ್ಕೃತ ಹಾಗೂ ಕನ್ನಡದಲ್ಲಿ ಪರಿಣತಿ ಪಡೆದಿದ್ದ ಕಾರಣದಿಂದ ಲಂಡನ್ ವಿಶ್ವವಿದ್ಯಾಲಯದಲ್ಲಿ ಪ್ರೊ. ಬಾರ್ನೆಟ್ ಎಂಬ ಪ್ರಾಚ್ಯ ಪಂಡಿತರ ಮಾರ್ಗದರ್ಶನ ದಲ್ಲಿ 'Theology of the Saivāgama, Being A Survey of the Doctrines of the Saiva Siddhanta and Veersaivium' ಎಂಬ ವಿಷಯದಲ್ಲಿ ಸಂಶೋಧನೆ ನಡೆಸಿ ಮಹಾ ಪ್ರಬಂಧವನ್ನು ಸಲ್ಲಿಸಿ, ಲಂಡನ್ ವಿಶ್ವವಿದ್ಯಾಲಯ ದಿಂದ ಡಾಕ್ಟೊರೇಟ್ ಪದವಿಯನ್ನು ಪಡೆದುಕೊಂಡರು(೧೯೩೦). ಇವರ ಪಿಎಚ್.ಡಿ. ಮಹಾಪ್ರಬಂಧ ವೀರಶೈವ ಧರ್ಮ-ಸಿದ್ಧಾಂತಗಳ ಮೇಲೆ ಬೆಳಕು

ಚೆಲ್ಲುವಂಥದು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇವರ ಪಿಎಚ್.ಡಿ. ಪ್ರಬಂಧದ ಒಂದು ಭಾಗ Hand Book of Veerashaivism ಎಂಬ ಹೆಸರಿನಿಂದ ಪ್ರಕಟಗೊಂಡಿದೆ.

ಲಂಡನ್ನಿನಿಂದ ಮರಳಿದ ಅನಂತರ ಶಿಕ್ಷಣ ಹಾಗೂ ಜ್ಞಾನಾರ್ಜನೆಯಲ್ಲಿ ಹೆಚ್ಚಿನ ಆಸಕ್ತಿಯಿಟ್ಟುಕೊಂಡು, ಶಿಕ್ಷಣ ಕ್ಷೇತ್ರದಲ್ಲಿ ಸೇವೆಸಲ್ಲಿಸಲು ನಿರ್ಧರಿಸಿದರು. ಮಿತ್ರರಾದ ಫ.ಗು ಹಳಕಟ್ಟಿ ಅವರ ಸಲಹೆಯಂತೆ ಬೆಳಗಾವಿಯ ಜಿ.ಎ ಹೈಸ್ಕೂಲಿನಲ್ಲಿ ೧೯೩೦ ರಿಂದ ೧೯೩೩ ರವರೆಗೆ ಶಿಕ್ಷಕರಾಗಿ ಸೇವೆ ಸಲ್ಲಿಸಿದರು. ಇದೇ ಅವಧಿ ಅಂದರೆ ೧೯೩೨ರಲ್ಲಿ ವಂಟಮುರಿ ಜಗನ್ನಾಥ ಎಂಬುವರ ಮಗಳು ಕಲ್ಯಾಣಮ್ಮ ಅವರನ್ನು ವಿವಾಹವಾದರು. ಇವರದು ಆದರ್ಶ ದಾಂಪತ್ಯವಾಗಿತ್ತು.

ಪ್ರಾಥಮಿಕ ಶಿಕ್ಷಣವನ್ನು ಪೂರ್ತಿಯಾಗಿ ಓದುವ ಸೌಕರ್ಯಗಳೂ ಇಲ್ಲದ ಕಾಲದಲ್ಲಿ ಮಾಧ್ಯಮಿಕ ಶಿಕ್ಷಣವಂತು ಕೇಳುವ ಸ್ಥಿತಿಯಲ್ಲಿರಲಿಲ್ಲ. ಆಗ ಜಿಲ್ಲೆಗೊಂದು ಸರ್ಕಾರಿ ಮಾಧ್ಯಮಿಕ ಶಾಲೆಗಳಿತ್ತಾದರೂ ಅಲ್ಲಿ ಶ್ರೀಮಂತ ಮಕ್ಕಳಿಗೆ ಮಾತ್ರ ಕಲಿಯಲು ಹೆಚ್ಚಿನ ಅವಕಾಶವಿತ್ತು. ಉಳಿದವರಿಗೆ ಮಾಧ್ಯಮಿಕ ಶಿಕ್ಷಣವೆಂಬುದು ಕನಸಿನ ಮಾತಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಅರೇಳು ಜನ ಪದವೀಧರ ತರುಣರು ಉನ್ನತ ಶಿಕ್ಷಣದ ಅವಕಾಶ ಉಳಿದವರಿಗೂ ಲಭಿಸಬೇಕೆಂಬ ಸಂಕಲ್ಪದಿಂದ ಬೆಳಗಾವಿಯನ್ನೇ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ಉನ್ನತ ಶಿಕ್ಷಣ ಸಂಸ್ಥೆಯೊಂದನ್ನು ಕಟ್ಟಲು ನಂದೀಮಠರು ಕಂಕಣ ತೊಟ್ಟರು. ಶಿಕ್ಷಣಕ್ಷೇತ್ರದಲ್ಲಿ ಆಸಕ್ತಿ ಇರುವ ವಿದ್ವಾಂಸರ ಜತೆಗೂಡಿ ಬೆಳಗಾವಿಯಲ್ಲಿ ಕೆ. ಎಲ್. ಇ. ಕರ್ನಾಟಕ ಲಿಂಗಾಯತ ಎಜ್ಯುಕೇಷನ್ ಸಂಸ್ಥೆಯನ್ನು ಪ್ರಾರಂಭ ಮಾಡಲಾಯಿತು.

ಅನಂತರ ನಂದೀಮಠರು ಅದೇ ಕಾಲೇಜಿನ ಪ್ರಥಮ ಪ್ರಿನ್ಸಿಪಾಲರಾಗಿ ಹಲವು ವರ್ಷ ಕಾರ್ಯನಿರ್ವಹಿಸಿ ಅದನ್ನು ಒಂದು ಬೃಹತ್ ಸಂಸ್ಥೆಯನ್ನಾಗಿ ಬೆಳೆಸುವಲ್ಲಿ ಅವಿರತವಾಗಿ ಶ್ರಮಿಸಿದರು. ಮುಂಬಯಿ ವಿಶ್ವವಿದ್ಯಾಲಯದ ಸೆನೆಟ್ ಹಾಗೂ ಸಿಂಡಿಕೇಟ್ ಸದಸ್ಯರಾಗಿದ್ದಾಗ ಉತ್ತರ ಕರ್ನಾಟಕಕ್ಕೆ ಪ್ರತ್ಯೇಕವಾದೊಂದು ವಿಶ್ವವಿದ್ಯಾಲಯವನ್ನು ಪಡೆಯಲು ಶ್ರಮಿಸಿದರು. ಕರ್ನಾಟಕ ವಿಶ್ವವಿದ್ಯಾಲಯ ಆರಂಭವಾಗುವಾಗ ಅದರ ರೂಪರೇಷೆಗಳನ್ನು, ಕಾಯ್ದೆ ಕಾನೂನುಗಳನ್ನು

ರೂಪಿಸುವಲ್ಲಿ ಅತಿ ಮಹತ್ತ್ವದ ಕೆಲಸಮಾಡಿದ ನಾಲ್ಕಾರು ಶಿಕ್ಷಣತಜ್ಞರಲ್ಲಿ ಇವರೊಬ್ಬರಾಗಿದ್ದರು. ವಿಶ್ವವಿದ್ಯಾಲಯದ ಸೆನೆಟ್, ಸಿಂಡಿಕೇಟ್, ಅಕಡಮಿಕ್ ಕೌನ್ಸಿಲ್ ಹಾಗೂ ಉಳಿದ ಅನೇಕ ಸಮಿತಿಗಳ ಸದಸ್ಯರಾಗಿ ಸ್ಮರಣೀಯವಾದ ಸೇವೆಸಲ್ಲಿಸಿದರು. ಮುಂದೆ ೧೯ಳಳರ ಸುಮಾರಿಗೆ ಕೆ. ಎಲ್. ಇ. ಸಂಸ್ಥೆಯ ಸಂಚಾಲಕರ ಹಾಗೂ ಡಾ. ನಂದೀಮಠರಿಗೆ ಬಂದ ಕೆಲವು ಭಿನ್ನಾಭಿಪ್ರಾಯಗಳಿಂದ ಆ ಸಂಸ್ಥೆಯನ್ನು ಬಿಡಬೇಕಾದ ಪ್ರಸಂಗ ಬಂದಿತು. ಬಾಗಲಕೋಟೆಯ ಬಸವೇಶ್ವರ ವಿದ್ಯಾವರ್ಧಕ ಸಂಘದವರು ಇವರ ಸಾಧನೆಯನ್ನು ಗುರುತಿಸಿ ಅಲ್ಲಿಯೂ ಒಂದು ಉನ್ನತ ಶಿಕ್ಷಣ ಸಂಸ್ಥೆಯನ್ನು ಕಟ್ಟಲು ಇವರ ನೆರವನ್ನು ಕೋರಿದರು. ಅವರ ಕೋರಿಕೆಯನ್ನು ಮನ್ನಿಸಿ ಡಾ. ನಂದೀಮಠ ಅವರು ಬಸವೇಶ್ವರ ಕಾಲೇಜನ್ನು ಕಟ್ಟಿ ಬೆಳೆಸುವಲ್ಲಿ ಯಶಸ್ವಿಯಾದರು. ಸಂಸ್ಥೆಗಳನ್ನು ಕಟ್ಟು ಬೆಳೆಸುವಲ್ಲಿ ಅನುಭವವನ್ನು ಹೊಂದಿದ್ದ ನಂದೀಮಠರು ಬಾಗಲಕೋಟೆಯ ಕಾಲೇಜಿನ ಪ್ರಾಚಾರ್ಯ ಕೆಲಸವನ್ನು ವಹಿಸಿಕೊಂಡು ಆ ಸಂಸ್ಥೆಯ ಅಭಿವೃದ್ಧಿಗೆ ಕಾರಣಕರ್ತರಾದರು. ಬೆಳಗಾವಿಯಂತೆ ಬಾಗಲಕೋಟೆಯಲ್ಲಿಯೂ ಶಿಕ್ಷಣ ಸಂಸ್ಥೆಗಳು ಒಳ್ಳೆಯ ಪ್ರಗತಿಗಾಮಿಗಳಾಗಿ ಬೆಳೆದು ಆ ಭಾಗದ ವಿದ್ಯಾರ್ಥಿಗಳಿಗೆ ಉನ್ನತಶಿಕ್ಷಣ ಸೌಲಭ್ಯ ಒದಗಿಸಿದುವು. ಇದರ ಯಶಸ್ಸಿನ ಬಹುಪಾಲು ನಂದೀಮಠರಿಗೆ ಸಲ್ಲಬೇಕೆಂದು ಹೇಳಿದರೆ ಅತಿಶ ಯೋಕ್ತಿಯಲ್ಲ, ಹೀಗೆ ಎರಡು ಭವ್ಯ ಶಿಕ್ಷಣ ಸಂಸ್ಥೆಗಳ ಹಾಗೂ ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆಯಲ್ಲಿ ಇವರ ಪಾತ್ರ ಗಣನೀಯವಾದುದು.

ಅನಂತರ ಸ್ವಲ್ಪಕಾಲ ಕರ್ನಾಟಕ ವಿಶ್ವವಿದ್ಯಾಲಯದ ಕುಲಸಚಿವರಾಗಿ ಕುಲಪತಿಗಳಾಗಿಯೂ ಕಾರ್ಯನಿರ್ವಹಿಸಿದರು. ವಿಶ್ವವಿದ್ಯಾಲಯದ ಸಂಸ್ಕೃತ ಪ್ರಾಧ್ಯಾಪಕರಾಗಿ ಸಂಶೋಧನ ಮಾರ್ಗದರ್ಶಕರಾಗಿ ಸೇವೆ ಸಲ್ಲಿಸಿದರು. ಸಂಸ್ಕೃತ ಹಾಗೂ ಹಳೆಗನ್ನಡದ ಹಲವಾರು ಗ್ರಂಥಗಳನ್ನು ಸಂಪಾದಿಸಿ, ಪರಿಷ್ಕರಿಸಿ, ಅವುಗಳಿಗೆ ವಿದ್ವತ್ಪೂರ್ಣವಾದ ಮುನ್ನುಡಿಗಳನ್ನು ಬರೆದು ಪ್ರಕಟಿಸಿದರು.

ಸಂಸ್ಕೃತವನ್ನೇ ಮುಖ್ಯ ವಿಷಯವಾಗಿ ತೆಗೆದುಕೊಂಡ ನಂದೀಮಠರು ಸಂಸ್ಕೃತ ಸಾಹಿತ್ಯದಲ್ಲಿ ಅಪಾರ ಪಾಂಡಿತ್ಯವನ್ನು ಪಡೆದುಕೊಂಡಿದ್ದರು. ವೀರಶೈವ ಸಿದ್ಧಾಂತ ತತ್ತ್ವಗಳ ಸಂಶೋಧನೆ, ವಚನಗಳ ಬಗೆಗೆ ಆಳವಾದ ಚಿಂತನೆ ಮಾಡಬೇಕಾದ ಸಂದರ್ಭಗಳಲ್ಲಿ ಸಂಸ್ಕೃತಜ್ಞಾನ ಇವರಿಗೆ ಪೂರಕವಾಗಿ ಒದಗಿ ಬಂತು. ವೀರಶೈವ ತತ್ತ್ವಗಳು ಹೆಚ್ಚಾಗಿ ಆಗಮಾಂ ತರ್ಗತಗಳಾಗಿವೆ ಎಂದು

ಹೇಳಲಾಗುತ್ತದೆ. ಹಲವಾರು ಶ್ಲೋಕಗಳನ್ನೊಳಗೊಂಡಿರುವ ಆಗಮಸಾಹಿತ್ಯ ವಸ್ತು ವೈವಿಧ್ಯ ಮಯವಾದುದಾಗಿದೆ. ಪಾರಮೇಶ್ವರಾಗಮ, ಚಂದ್ರಜ್ಞಾನಾಗಮಗಳ ಸಾರವನ್ನು ಕನ್ನಡದಲ್ಲಿ ಪಂಡಿತರು ಪ್ರಕಟಗೊಳಿಸಿದರು. ಇದೇ ತೆರನಾಗಿ ನಂದೀಮಠ ಅವರ ಪಾರಮೇಶ್ವರಾಗಮ ಬಗೆಗಿನ ಮಹತ್ವದ ಲೇಖನಗಳು ವೀರಶೈವ ತತ್ತ್ವಚಿಂತನೆಗೆ ಉಪಯುಕ್ತ ವಾಗಿವೆ. ಇಷ್ಟೆ ಅಲ್ಲದೇ ನಂದೀಮಠ ಅವರು ಶಾಸನ, ಕಾವ್ಯಮೀಮಾಂಸೆ, ಇತಿಹಾಸ, ವೀರಶೈವ ಸಾಹಿತ್ಯ, ವ್ಯಕ್ತಿ ಚಿತ್ರಣ ಇತ್ಯಾದಿ ವಿಚಾರಗಳ ಕುರಿತು ವಿದ್ವತ್‌ಪೂರ್ಣ ಲೇಖನಗಳನ್ನು ನಾಡಿನ ಹೆಸರಾಂತ ಪತ್ರಿಕೆ ಗಳಲ್ಲಿ ಪ್ರಕಟಿಸಿದ್ದಾರೆ.

ನಾಡಿನ ಸಂಸ್ಕೃತಿ ಮತ್ತು ಇತಿಹಾಸಗಳ ಮೇಲೆ ಬೆಳಕು ಚೆಲ್ಲುವ ಶಾಸನಗಳ ಕುರಿತು ನಂದೀಮಠರು ಚರ್ಚಿಸಿರುವುದು ಗಮನಿಸತಕ್ಕ ವಿಷಯ. ತಾವು ಅಧ್ಯಾಪಕರಾಗಿದ್ದಾಗಲೇ ಗೋಕಾಕ ಜಿಲ್ಲೆಯ ಸುತ್ತಮುತ್ತಲಿನ ಪ್ರದೇಶಗಳಾದ ಕುರುಬೆಟ್ಟ, ತೊರಗಲ್ಲು, ಚೌಡದಾನಪುರ, ಮನಗೂಳಿ ಮುಂತಾದ ಪ್ರದೇಶಗಳಲ್ಲಿ ಸುತ್ತಾಡಿ, ಅಲ್ಲಿ ಸಿಕ್ಕ ಶಾಸನಗಳ ಪಡಿಯಚ್ಚು ತಂದು, ಅವುಗಳನ್ನು ಓದಿ, ವಿವರವಾದ ಟಿಪ್ಪಣಿಯನ್ನು ಕೊಟ್ಟು ಪ್ರಕಟಿಸಿದ್ದಾರೆ. 'ಅರ್ಜುನವಾಡ ಶಾಸನ'ವು ಬಸವಣ್ಣನವರಿಗೆ ಸಂಬಂಧಿಸಿದ್ದಾಗಿದ್ದು, ಅದನ್ನು ಪ್ರಕಟಿಸುವಲ್ಲಿ ಇವರ ಪರಿಶ್ರಮ ಪ್ರಮುಖವಾಗಿದೆ. ಧಾರವಾಡ ಸಮೀಪದ ಆಗಿನ ಕುಂದೂರು ನಾಡೆಂದು ಪ್ರಸಿದ್ಧಿ ಪಡೆದಿದ್ದ ಪರಿಸರದ ಕುರಿತು ಶಾಸನಗಳ ಆಧಾರಗಳಿಂದ ಸಂಶೋಧನೆ ನಡೆಸಿ ಅದರ ಇತಿಹಾಸವನ್ನು ಹೊರತೆಗೆಯುವಲ್ಲಿ ಇವರ ಶ್ರಮವಿದೆ. ಕೆಳದಿ ವೀರಶೈವ ರಾಜಮನೆತನಕ್ಕೆ ಸಂಬಂಧಿಸಿದಂತೆ ಒಂದು ಶಾಸನವನ್ನು ಶೋಧಿಸಿದ್ದಾರೆ. ಅದು ಸಂಸ್ಕೃತ ಭಾಷೆಯಲ್ಲಿದ್ದುದರಿಂದ ಶಾಸನವನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿ ಸಿದ್ದಾರೆ. ಈ ಶಾಸನವು ಕೆಳದಿ ರಾಜಮನೆತನದ ಗೋತ್ರ, ಶಾಖೆ, ಗುರುಪರಂಪರೆ, ಅವರು ನೀಡಿರುವ ದತ್ತಿ ದಾನಗಳ ಕುರಿತ ವಿವರಗಳನ್ನು ತಿಳಿಸುವುದಲ್ಲದೆ ಅವರ ರಾಜವಂಶಾವಳಿ ಬಗೆಗಿನ ಮಾಹಿತಿಯನ್ನು ಒದಗಿಸುತ್ತದೆ.

ನಂದೀಮಠ ಅವರ ಹುಟ್ಟೂರು ಪರಿಸರದಲ್ಲಿ, ಮಮದಾಪುರ ಭಾಗದಲ್ಲಿ ದೊರೆತ ಕುರುಬೆಟ್ಟ ಶಾಸನವನ್ನು ಅಧ್ಯಯನ ಮಾಡಿ, ಮಮದಾಪುರಕ್ಕೆ ಕುರುಬೆಟ್ಟ ಎಂಬ ಹೆಸರೂ ಇತ್ತೆಂಬ ವಿವರಗಳನ್ನು ಕೊಟ್ಟಿದ್ದಾರೆ. ಈ ಶಾಸನವು ವೀರಶೈವ, ಶೈವಧರ್ಮ ಮತ್ತು ಧರ್ಮಗುರುಗಳ ಬಗೆಗಿನ ವಿವರಣೆ ನೀಡುತ್ತದೆ.

ಡಾ. ನಂದೀಮಠ ಅವರು 'ಗುಮ್ಮಳಾಪುರ ಶಾಸನ'ವನ್ನು ಅಧ್ಯಯನ ಮಾಡಿ ಪ್ರಕಟಿಸಿದ್ದಾರೆ. ಇದರಲ್ಲಿ ದಾನಪತ್ರಗಳ ವಿವರಣೆ ಇರುವ ತಾಮ್ರಪಟಗಳು ದೊರೆತ ಸಂಗತಿ ತಿಳಿಯುತ್ತದೆ. ಗುಮ್ಮಳಾಪುರ ಶಾಸನದಲ್ಲಿ ವೀರಶೈವ ಅಷ್ಟಾವರಣಗಳ ವಿವರಣೆಯಿದೆ. ಹಾಗೆಯೇ ಚೌಡದಾನಪುರ ಶಾಸನದ ಬಗೆಗೂ ಇವರು ವಿಶೇಷ ಅಧ್ಯಯನ ಮಾಡಿದ್ದಾರೆ. ಇದರಲ್ಲಿ ಕಲ್ಯಾಣದ ಬಸವಣ್ಣನವರ ಕುರಿತು ಪ್ರಸ್ತಾಪವಿರುವದನ್ನು ದಾಖಲಿಸಿದ್ದಾರೆ. ಬಸವಣ್ಣನವರಂತೆ ಈ ಶಾಸನದಲ್ಲಿ 'ಮುಕ್ತೇಶ್ವರ' ಹಾಗೂ 'ರೇವಣಸಿದ್ದರ' ಕುರಿತ ಪ್ರಸ್ತಾಪವಿದ್ದು ಇವರು ರಾಜಪೂಜಿತ ಪೂಜ್ಯಗುರುಗಳಾಗಿದ್ದರೆಂದು ನಂದೀಮಠ ಅವರು ಅಭಿಪ್ರಾಯ ಪಟ್ಟಿದ್ದಾರೆ.

ನಂದೀಮಠ ಅವರು ಸಂಶೋಧಿಸಿ ಪ್ರಕಟಿಸಿರುವ ಶಾಸನ 'ಮನಗೂಳಿ ಶಾಸನ'. ಇದು ಕಲ್ಯಾಣದ ಬಸವಣ್ಣನವರ ಕುರಿತ ವಿವರಗಳ ಮೇಲೆ ಬೆಳಕು ಚೆಲ್ಲುವ ಶಾಸನವಾಗಿದೆ. ಇದು ಬಾಗೇವಾಡಿಯಿಂದ ೧೧ ಮೈಲು ದೂರದಲ್ಲಿರುವ ದೇವಸ್ಥಾನ ಒಂದರಲ್ಲಿ ಇದೆ. ಇದು ಜಗದೇಕಮಲ್ಲ ದೇವರಸರು, ದಕ್ಷಿಣ ಸಿದ್ಧಲಿಂಗ ಕಲಿದೇವೇಶ್ವರರು, ಬ್ರಹ್ಮಚಾರಿಯಾದ ಶ್ರೀ ಸದ್ಯೋಜಾತ ಪಂಡಿತ ದೇವರ ಕಾಲಂಕರ್ಚಿ ಕೊಟ್ಟ ದಾನವಿವರಗಳನ್ನು ನೀಡುತ್ತದೆ. ನಂದೀಮಠರು Epigraphia Indica Vol. V. p.10 ರಲ್ಲಿ ಉಲ್ಲೇಖವಾಗಿರುವ ಮನಗೂಳಿಯ ವಿಚಾರವನ್ನು ಪರಿಶೀಲಿಸಿ, ಅಲ್ಲಿ ಬರುವ ಬಸವರಸನೇ ಕಲ್ಯಾಣದ ಬಸವಣ್ಣನೆಂಬ ಅಭಿಪ್ರಾಯ ಸರಿಯಲ್ಲವೆಂದು ಪ್ರತಿಪಾದಿಸಿದರು. ಈ ಶಿಲಾಶಾಸನದಲ್ಲಿ ಬರುವ ಬಸವರಸನು ರೇವದಾಸನ ಮೊಮ್ಮಗನೂ ಚಂದಿರಾಜ ಮತ್ತು ಚಂದ್ರಾಂಬಿಕೆಯರ ಮಗನೆಂದೂ ಎರಡನೆಯ ಜಗದೇಕಮಲ್ಲನ ಕಾಲದಲ್ಲಿ ಇವನು ಕಲಿದೇವರ ದೇವಾಲಯವನ್ನು ಕಟ್ಟಿಸಿದ್ದಾನೆಂದೂ ಈತನು ತದ್ದೇವಾಡಿಯ ಸುಂಕಾಧಿಕಾರಿಯಾಗಿದ್ದ ಎಂಬ ವಿಚಾರ ವನ್ನೂ ಕಲಚೂರಿ ಬಿಜ್ಜಳನ ಕಾಲದಲ್ಲಿಯೂ ಇವನು ಅಧಿಕಾರಿಯಾಗಿದ್ದನು ಮತ್ತು ಬಸವಣ್ಣನವರ ಸಮಕಾಲೀನನು ಆಗಿದ್ದನೆಂದೂ ವಿವರಿಸುತ್ತಾರೆ.

ಹೀಗೆ ನಂದೀಮಠರು ಶಾಸನಗಳ ಬಗೆಗೆ ವಿಶೇಷ ಆಸಕ್ತಿ ವಹಿಸಿ, ಶಾಸನಗಳಲ್ಲಿ ಉಲ್ಲೇಖಗೊಂಡಿರುವ ಪ್ರಮುಖ ಅಂಶಗಳನ್ನು 'ಶಿವಾನುಭವ ಪತ್ರಿಕೆ'ಯ ಮೂಲಕ ತಿಳಿಸಿದ್ದಾರೆ. ವಿಸ್ತೃತ ಅಧ್ಯಯನದ ಮೂಲಕ ನಂದೀಮಠರು ಕೆಲವು ಸ್ಪಷ್ಟ ನಿರ್ಧಾರಗಳಿಗೆ ಬಂದಿರುವುದು ಅವರ ಆಳವಾದ ವಿದ್ವತ್ತಿಗೆ ಸಾಕ್ಷಿ ಎಂದು ಹೇಳಬಹುದು.

ಹಿಂದೂ ಧರ್ಮದ ಸ್ವರೂಪ, ವೀರಶೈವ ಇತಿಹಾಸ ಮತ್ತು ಧರ್ಮ–ದೇವರ ಕಲ್ಪನೆ, ಸಂಸ್ಕೃತ ಬಸವಪುರಾಣಗಳು, ಶೈವಧರ್ಮಗಳು, ಲಿಂಗಧಾರಣೆಯು ಎಂದಿನಿಂದ ರೂಢಿಯಲ್ಲಿ ಬಂದಿದೆ, ಸೌರಾಷ್ಟ್ರ ಸೋಮನಾಥ, ದುರದುಂಡೇಶ್ವರ ಮಠ ಮುಂತಾದ ಪ್ರೌಢ ಲೇಖನಗಳು ಅಭ್ಯಾಸಿಗಳಿಗೆ ಮಾರ್ಗದರ್ಶಿಗಳಾಗಿವೆ. ನವರಸಗಳಲ್ಲಿ ಪ್ರಮುಖವಾಗಿರುವ ಕರುಣರಸದ ಬಗೆಗೆ ಬರೆದಿರುವ ಲೇಖನವು ವಿದ್ಯಾರ್ಥಿಗಳಿಗೆ ಉಪಯುಕ್ತವಾಗಿದೆ. ಒಟ್ಟಿನಲ್ಲಿ ನಂದೀಮಠರು ಶಾಸನ, ವಚನ ಸಾಹಿತ್ಯ, ಇತಿಹಾಸ, ವೀರಶೈವಧರ್ಮ, ವ್ಯಕ್ತಿಚಿತ್ರಣ ಇತ್ಯಾದಿ ವಿಷಯಗಳಿಗೆ ಸಂಬಂಧಪಟ್ಟಂತೆ ಬರೆದಿರುವ ಹಲವಾರು ಲೇಖನಗಳು ಹೊಸ ಹೊಸ ವಿಚಾರಗಳನ್ನು ಪ್ರತಿಪಾದಿಸುತ್ತವೆಯಲ್ಲದೆ ಇವು ಸಾಹಿತ್ಯ ದೃಷ್ಟಿಯಿಂದ, ವಿಷಯದೃಷ್ಟಿಯಿಂದ ಶ್ರೇಷ್ಠಮಟ್ಟದ್ದಾಗಿವೆ.

ಹರಿಹರನ 'ಗಿರಿಜಾಕಲ್ಯಾಣ' ಕೃತಿಯನ್ನು ಸಂಗ್ರಹರೂಪದಲ್ಲಿ ಸಂಪಾದಿಸಿ ಪ್ರಕಟಿಸಿದ್ದು ನಂದೀಮಠ ಅವರು. ಇದು ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ಬಿ.ಎ. ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕವಾಗಿತ್ತು ಮತ್ತು ಇದರ ಎರಡನೆಯ ಆವೃತ್ತಿ ವಿವರವಾದ ಪ್ರಸ್ತಾವನೆಯನ್ನು ಒಳಗೊಂಡು ಪ್ರಕಟವಾಗಿದೆ. ಸಂಸ್ಕೃತದ ಕಾಳಿದಾಸನ ಕುಮಾರಸಂಭವಕ್ಕೂ ಗಿರಿಜಾಕಲ್ಯಾಣಕ್ಕೂ ಇರುವ ಭಿನ್ನತೆಗಳನ್ನು ಹಾಗೂ ಹರಿಹರನ ಕೃತಿಯಲ್ಲಿ ಕಂಡುಬರುವ ವಿಶೇಷತೆಗಳನ್ನು ಇವರು ಗುರುತಿಸಿದ್ದಾರೆ.

ಅದಲ್ಲದೆ ಜಾಯಗೌಂಡನ ಕನ್ನಡ ಕುವಲಯಾನಂದ ಕೃತಿಯನ್ನು ಸಂಪಾದಿಸಿ, ಸಂಸ್ಕೃತ ಕುವಲಯಾನಂದವನ್ನು ಪರಿಶೀಲಿಸಿ ಪಾಠಾಂತರಗಳನ್ನು ಹಾಕಿ ಸಂಪಾದಿಸಿಕೊಟ್ಟಿದ್ದಾರೆ. ಸಂಪಾದನ ಕ್ಷೇತ್ರಕ್ಕೆ ಇದೊಂದು ಮೈಲುಗಲ್ಲು ಹಾಗೂ ಉತ್ತಮ ಉದಾಹರಣೆಯಾಗಿದೆ. ಕನ್ನಡ ಕುವಲಾಯಾನಂದವು ಪಟ್ಟದಿಯಲ್ಲಿ ರಚನೆಯಾಗಿದ್ದು ಇದರಲ್ಲಿ ಎಲ್ಲ ಅಲಂಕಾರಗಳನ್ನು ಉದಾಹರಣೆಯೊಂದಿಗೆ ವಿವರಿಸಲಾಗಿದೆ.

ನಂದೀಮಠ ಅವರು ದಮ್ಮಪದವನ್ನು ಕನ್ನಡಕ್ಕೆ ಅನುವಾದಿಸಿ ಬೌದ್ಧ ತತ್ವಗಳನ್ನು ಧರ್ಮಾಸಕ್ತರಿಗೆ ತಿಳಿಸಿದ್ದಾರೆ. ಬೌದ್ಧಧರ್ಮದ ಶೀಲ–ನೀತಿ–ನಿಯಮಾವಳಿಗಳನ್ನು ಮೂಲಕೃತಿಗೆ ಚ್ಯುತಿ ಬರದಂತೆ ಸಂಪಾದಿಸಿ ಕೊಟ್ಟಿದ್ದಾರೆ. ಇದರ

ಸಂಪಾದನ ಸಮಯದಲ್ಲಿ ಹಿಂದೂಧರ್ಮದ ತೌಲನಿಕ ಉದಾಹರಣೆಗಳನ್ನು ಕೊಟ್ಟು ಸಮನ್ವಯ ತತ್ವಚಿಂತನೆ ಮಾಡಿರುವುದುಇದರ ವಿಶೇಷತೆಯಾಗಿದೆ.

ವೈರಾಗ್ಯನಿಧಿ ಮುಳಗುಂದ ಬಾಲಲೀಲಾ ಮಹಾಂತಶಿವಯೋಗಿಗಳ ನೂರನೆಯ ಪುಣ್ಯಸ್ಮರಣೆಯ ಅಂಗವಾಗಿ 'ವೈರಾಗ್ಯ ದಲರು' ಗ್ರಂಥವನ್ನು ಸ್ಮಾರಕ ಗ್ರಂಥ ಸಮಿತಿಯ ಅಧ್ಯಕ್ಷರಾಗಿ ಸಂಪಾದಿಸಿ ಕೊಟ್ಟಿದ್ದಾರೆ. ಮಹಾಂತಶಿವಯೋಗಿಗಳ ವಿವಿಧ ವೈರಾಗ್ಯ ಮುಖಗಳನ್ನು ಜನತೆಗೆ ಪರಿಚಯ ಮಾಡಿಕೊಡುವ ಈ ಸಂಪಾದನ ಕೃತಿ ನಂದೀಮಠ ಅವರ ಸಂಪಾದನೆಯ ಕುಶಲತೆಯನ್ನು ತೋರಿಸುತ್ತದೆ.

ಎಸ್.ಸಿ. ನಂದೀಮಠ ಅವರು ಕನ್ನಡ ಸಾಹಿತ್ಯಕ್ಷೇತ್ರಕ್ಕೆ ನೀಡಿದ ಅಪಾರ ವಾದ ಕೊಡುಗೆಯನ್ನು ಗಮನಿಸಿ ಸಾಕಷ್ಟು ಪ್ರಶಸ್ತಿ ಪುರಸ್ಕಾರಗಳು ಅರಸಿ ಬಂದಿವೆ. ೧೯೫೨ರಲ್ಲಿ ಬೇಲೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದರು. ಅಲ್ಲಿ ಅವರು ಮಾಡಿದ ಭಾಷಣ ಸಮಗ್ರ ಕನ್ನಡ ನಾಡಿನ ಭಾಷೆ ಸಾಹಿತ್ಯ, ಸಂಸ್ಕೃತಿ, ಧರ್ಮಗಳು, ಇಂಗ್ಲಿಷ್ ಭಾಷಾ ಪ್ರಭುತ್ವ, ಕರ್ನಾಟಕ ಏಕೀಕರಣ ಮುಂತಾದ ಪ್ರಮುಖ ವಿಷಯಗಳನ್ನು ಒಳಗೊಂಡಂತಿದೆ. ಇವರು ಪ್ರಸ್ತಾಪಿಸಿದ ವಿಚಾರಗಳು ಕನ್ನಡ ನಾಡು, ನುಡಿ, ಸಂಸ್ಕೃತಿಗಳ ಕುರಿತಂತೆ ಅವರಿಗಿದ್ದ ಕಾಳಜಿ ಯನ್ನು ಹೇಳುತ್ತವೆ.

೧೯೪೦ ಮೇ ತಿಂಗಳಿನಲ್ಲಿ ಕುಂಭಕೋಣಂದಲ್ಲಿ ನಡೆದ ಅಖಿಲ ಭಾರತ ವೀರಶೈವ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ಹೀಗೆ ಇಂತಹ ಅನೇಕ ಸೇವೆಗಳನ್ನು ಅವರ ಜೀವಿತ ಕಾಲದಲ್ಲಿ ಬಿಡುವಿಲ್ಲದೆ ಮಾಡಿದ್ದಾರೆ. ಇವರ ಬಹುಮುಖ ಸೇವೆಯ ಫಲವಾಗಿ ಇವರಿಗೆ ಶಿಕ್ಷಣಕ್ಷೇತ್ರದ 'ಸಾರ್ವಜನಿಕ ಸೇವಾ ಪ್ರಶಸ್ತಿ', ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟೊರೇಟ್, ಸಾಹಿತ್ಯ ಅಕಾಡೆಮಿ ಹಾಗೂ ಕನ್ನಡ ಪಠ್ಯಪುಸ್ತಕ ರಚನಾ ಪ್ರಶಸ್ತಿಗಳು ದೊರೆತಿವೆ.

ತ್ಯಾಗ, ನಿಷ್ಕಾಮ ಸೇವೆ, ಪ್ರೇಮ, ಸಹೃದಯತೆ, ಸರಳತೆ, ನಿರ್ಮಲಾಂ ತಃಕರಣ, ಸಕಲ ಜೀವಗಳ ಲೇಸನ್ನೇ ಬಯಸುವ ಉದಾತ್ತ ಗುಣಗಳನ್ನು ಹೊಂದಿದ್ದ ಇವರು ಎಪ್ಪತ್ತೈದು ವರ್ಷಗಳವರೆಗಿನ ತಮ್ಮ ಜೀವನದಲ್ಲಿ ಸಾರ್ಥಕ ಬದುಕನ್ನು ಬಾಳಿ ೧೯೭೫ರ ನವೆಂಬರ್ ೨೧ರಂದು ಇಹಲೋಕವನ್ನಗಲಿದರು.

❐ ❐ ❐

ಸೇಡಿಯಾಪು ಕೃಷ್ಣಭಟ್ಟ

(೧೯೦೨-೧೯೯೬)

ಸಂತೋಷಿ ಸುಬ್ರಹ್ಮಣ್ಯ

"ಪಂಡಿತರೆಂದರೆ ಹೀಗಿರುತ್ತಾರೆ ಎಂದು ನಾನು ಸಂತೋಷದಿಂದ ಬೆರಳೆತ್ತಿ ತೋರಬಹುದಾದವರು ಕೃಷ್ಣಭಟ್ಟರು"- ಹೀಗೆ ಮೇರು ಪಾಂಡಿತ್ಯದ ತಮ್ಮ ಆಪ್ತ ವಿದ್ವನ್ಮಿತ್ರನ ಬಗೆಗೆ ಶಿವರಾಮ ಕಾರಂತರು ಆಡಿದ ಅಕ್ಕರೆಯ ಮಾತುಗಳಿವು. ಜ್ಞಾನಸಂಪಾದನೆ ಮತ್ತು ಅದರ ಪ್ರಸಾರವನ್ನು ತಪಸ್ಸಿನಂತೆ ನಡೆಸಿದವರು ಸೇಡಿಯಾಪು ಕೃಷ್ಣಭಟ್ಟರು. 'ಪ್ರಾತಃಸ್ಮರಣೀಯರು', 'ಸಾಹಿತ್ಯದ ಮೇರು', ಪಾಂಡಿತ್ಯ ತವನಿಧಿ', ಹೀಗೆ ಪಂಡಿತ ವಲಯದಲ್ಲಿ ಖ್ಯಾತರಾದವರು.

೧೯೦೨ ಜೂನ್ ೮ರಂದು ಶ್ರೀ ರಾಮಭಟ್ಟ, ಶ್ರೀಮತಿ ಮೂಕಾಂಬಿ ಕಮ್ಮನವರ ಪುತ್ರನಾಗಿ ಇವರು ಜನಿಸಿದ್ದು ದಕ್ಷಿಣ ಕನ್ನಡ ತಾಲೂಕಿನ ಕುಕ್ಕಿಲ ಎಂಬ ಕುಗ್ರಾಮದಲ್ಲಿ. ಆದರೆ ಅವರ ತಂದೆಯ ಊರು ಬಂಟ್ವಾಳ ತಾಲೂಕಿನ ವಿಟ್ಲ ಪೇಟೆಯ ಹತ್ತಿರದ ಸೇಡಿಯಾಪು. ಹಳ್ಳಿಯ ಶಾಲೆಯಲ್ಲಿ ಕಾಗುಣಿತವನ್ನು ಕಲಿತು, ಪುತ್ತೂರಿನ ಬೋರ್ಡ್ ಹೈಸ್ಕೂಲಿನಲ್ಲಿ ಒಂಬತ್ತನೆಯ ತರಗತಿಯ ತನಕ ವ್ಯಾಸಂಗ ಮಾಡಿ ಬಳಿಕ ಗಾಂಧೀಜಿಯ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ, ಅವರ ವ್ಯಕ್ತಿತ್ವದ ಸೆಳೆತಕ್ಕೆ ಒಳಗಾಗಿ ಶಾಲೆಯಿಂದ ಹೊರಬಂದರು. ಬಡತನ ಮತ್ತು ಅನಾರೋಗ್ಯಗಳನ್ನು ಲೆಕ್ಕಿಸದೆ ಪ್ರಖರವಾದ ಧೀಶಕ್ತಿಯ ನೆರವಿನಿಂದ ಕೃಷ್ಣಭಟ್ಟರು ತಮ್ಮ ಚಿದ್ರಂಗವನ್ನು ರೂಪಿಸಿಕೊಂಡರು. ತಮ್ಮ ಊರಿನಲ್ಲೇ ಸ್ವದೇಶಿ ಆಂದೋಲನ ದಲ್ಲಿ ನಿರತರಾಗಿ, ಮನೆ ಯಲ್ಲಿದ್ದುಕೊಂಡೇ ತಮ್ಮ ಓದನ್ನು ಮುಂದುವರಿಸಿದರು. ಕನ್ನಡ, ಸಂಸ್ಕೃತ, ತುಳು, ತಮಿಳು, ಹಿಂದಿ, ಮಲಯಾಳಂ, ತೆಲುಗು ಮೊದಲಾದ ಭಾಷೆಗಳನ್ನು ಅಭ್ಯಾಸ ಮಾಡಿ, ನಾಟಿವೈದ್ಯ ಪದ್ಧತಿಯ ಶಾಸ್ತ್ರವನ್ನು ಸ್ವಂತ ಶ್ರಮದಿಂದ

ಅರಿತುಕೊಂಡರು. ಹಳ್ಳಿಯ ಶಾಲೆಯಲ್ಲಿ ಕೆಲಕಾಲ ಕನ್ನಡ ಶಿಕ್ಷಕರಾಗಿಯೂ ದುಡಿದು, ೧೯೨೦ನೆಯ ದಶಕದ ಹೊತ್ತಿಗೆ ಮಂಗಳೂರಿನಲ್ಲಿ ಮದ್ದಿ ನಂಗಡಿಯೊಂದನ್ನು ತೆರೆದರು. ಅಲ್ಲಿ ಅವರಿಗೆ ವಿದ್ವನ್ಮಣಿಗಳಾದ ಪಂಡಿತ ಮುಳಿಯ ತಿಮ್ಮಪ್ಪಯ್ಯ, ಕವಿ ಕಡೆಂಗೋಡ್ಲು ಶಂಕರಭಟ್ಟರ ಪರಿಚಯವಾಗಿ, ಅವರು ನಡೆಸುತ್ತಿದ್ದ 'ರಾಷ್ಟ್ರಬಂಧು' ಪತ್ರಿಕೆಯ ಸಾಪ್ತಾಹಿಕ ಸಂಪಾದಕೀಯ ವಿಭಾಗದಲ್ಲಿ ಕೆಲಕಾಲ ದುಡಿದರು.

ಅನಂತರ, ಅಂದಿನ ಮದರಾಸು ಸರ್ಕಾರ ನಡೆಸುತ್ತಿದ್ದ 'ವಿದ್ವಾನ್' ಪರೀಕ್ಷೆಗೆ ಕುಳಿತು ಉತ್ತೀರ್ಣರಾದರು. ಇದರಿಂದ ಮಂಗಳೂರಿನ ಸಂತ ಅಲೋಶಿಯಸ್ ಹೈಸ್ಕೂಲಿನಲ್ಲಿ ಅಧ್ಯಾಪಕ ವೃತ್ತಿ ಲಭಿಸಿತು. ಸುಮಾರು ಇಪ್ಪತ್ತು ವರ್ಷಗಳ ಕಾಲ ಅಲ್ಲಿ ಕನ್ನಡ ಪಂಡಿತರಾಗಿ ಸೇವೆಸಲ್ಲಿಸಿದ ಮೇಲೆ ೧೯೫೦ರ ಹೊತ್ತಿಗೆ ಅದೇ ಕಾಲೇಜಿನ ಕನ್ನಡ ಉಪನ್ಯಾಸಕರಾಗಿ ಬಡ್ತಿ ದೊರೆತಿದ್ದರೂ ಅನಾರೋಗ್ಯದ ಕಾರಣ ೧೯೫೭ರಲ್ಲಿ, ಅವಧಿ ಪೂರ್ವದಲ್ಲೇ ನಿವೃತ್ತರಾದರು. ಇಂತಿದ್ದರೂ ಕೃಷ್ಣಭಟ್ಟರ ಶಾಸ್ತ್ರಾಧ್ಯಯನವು ಬಿರುಕಿಲ್ಲದೆ ಸಾಗಿತು. ಅವರ ಲೀಲಾಕ್ಷೇತ್ರವಾದ ಛಂದಸ್ಸಿನಲ್ಲಂತೂ ಅವರು ನಿಸ್ಸೀಮರಾದರು.

ಪ್ರೌಢಶಾಲಾ ವಿದ್ಯಾರ್ಥಿಯಾಗಿದ್ದಾಗಲೇ ಇವರ ಬರವಣಿಗೆಯ ಆಸಕ್ತಿ ಪ್ರಾರಂಭವಾಗಿತ್ತಾದರೂ ಲೇಖಕನಾಗಿ ಪರಿಚಿತ ರಾಗಿದ್ದು ಕನ್ನಡಕುಲ ಪುರೋಹಿತ ಆಲೂರ ವೆಂಕಟರಾಯರ 'ಜಯಕರ್ನಾಟಕ'ದ ಮೂಲಕ. ಅವರು ತಮ್ಮ ಇಪ್ಪತ್ತನೆಯ ವಯಸ್ಸಿನಲ್ಲಿ ಬರೆದ 'ಕರ್ನಾಟಕ ಕವಿತಾಪ್ರಪಂಚ'ವೆಂಬ ಲೇಖನ ಅಚ್ಚಾಯಿತು. ಬೆಳೆಯ ಗುಣವನ್ನು ಮೊಳಕೆಯಲ್ಲೇ ಗುರುತಿಸಿದ ವೆಂಕಟರಾಯರು, ಮುಂದೊಂದು ದಿನ ಕೃಷ್ಣಭಟ್ಟರನ್ನು ಕಂಡಾಗ, "ನಿಮ್ಮ ಲೇಖನ ಓದಿ ನಿಮ್ಮ ಅಭಿಪ್ರಾಯಗಳನ್ನು ಗಮನಿಸಿದಾಗ ಪ್ರಾಯದಲ್ಲಿ ನೀವು ಇಷ್ಟು ಸಣ್ಣವರೆಂದು ತಿಳಿಯಲಿಲ್ಲ" ಎಂದು ಉದ್ಗರಿಸಿ ಅವರನ್ನು ಆಲಿಂಗನ ಮಾಡಿಕೊಂಡು ಆಶೀರ್ವದಿಸಿದರಂತೆ.

ಸೇಡಿಯಾಪು ಕೃಷ್ಣಭಟ್ಟರದು ವ್ಯಾಕರಣ, ಛಂದಶ್ಶಾಸ್ತ್ರದಂತಹ ಶುಷ್ಕ ಪಾಂಡಿತ್ಯವೆಂದು ಕೆಲವರಿಗೆ ತೋರಿದರೂ ಅವರೊಬ್ಬ ರಸಕವಿ ಎಂಬುದನ್ನು ನಿದರ್ಶಿಸುವಂತೆ ಶೃಂಗಾರ ಕಾವ್ಯವಾದ 'ತರುಣಧಮನಿ', ಸ್ವಾಮಿಭಕ್ತಿಯ

'ಅಶ್ವಮೇಧ ಅಥವಾ ನಾಯಿಯ ಕತೆ', ಪ್ರಾಸರಹಿತ ಭಾಮಿನೀಷಟ್ಪದಿಯಲ್ಲಿ 'ಕೃಷ್ಣಕುಮಾರಿ' ಎಂಬ ವೀರಗಾಥೆ, 'ಪುಣ್ಯಲಹರಿ ಅಥವಾ ಶಬರಿ' 'ಕೆಲವು ಸಣ್ಣ ಕಾವ್ಯಗಳು' ಮೊದಲಾದ ಕೆಲವು ರಸಮಯವಾದ ಕಾವ್ಯ-ಕತೆಗಳೂ ೧೯೩೦ ಮತ್ತು ೪೦ರ ದಶಕದಲ್ಲಿ ಪ್ರಕಟವಾದುವು.

ಹದಿನೆಂಟು ಬಿಡಿಕವಿತೆಗಳನ್ನು ಸೇರಿಸಿ 'ಚಂದ್ರಖಂಡ'ವೆಂಬ ಹೆಸರಿನಲ್ಲಿ ಪ್ರಕಟಿಸಲಾಯಿತು. ಬೆಳಗಿನ ತಂಗಾಳಿ, ನೌಕೆಯಲೆನ್ನ ಕುಳ್ಳಿರಿಸು, ಎಣ್ಣೆ ಹೊಯ್ಯಮ್ಮ ದೀಪಕ್ಕೆ, ತುಳುನಾಡ ಹಾಡು, ಜಯ ಭಾರತಪುತ್ರನೇ ಮೊದಲಾದ ಕವಿತೆಗಳು ಈ ಸಂಕಲನದಲ್ಲಿವೆ. 'ಪಳಮೆಗಳು' ಕಥಾಸಂಕಲನದಲ್ಲಿ 'ಚಿನ್ನದ ಚೇಳು', 'ಚೆನ್ನಮಣೆ', 'ಧರ್ಮಮ್ಮ' ಮತ್ತು 'ನಾಗರಬೆತ್ತ'ವೆಂಬ ನಾಲ್ಕು ರೋಚಕ ಕತೆಗಳನ್ನು ಒಳಗೊಂಡಿದೆ.

ಡಿ.ವಿ. ಗುಂಡಪ್ಪನವರ ಅಧ್ಯಕ್ಷತೆಯಲ್ಲಿ ನಡೆದಿದ್ದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ (ಮಡಿಕೇರಿ, ೧೯೩೨) 'ಕನ್ನಡ ಛಂದಸ್ಸು' ಎಂಬ ದೀರ್ಘ ಪ್ರಬಂಧವನ್ನು ಕೃಷ್ಣಭಟ್ಟರು ಓದಿದ್ದರು. ಆಗ ಮೊದಲ ಬಾರಿ ತರುಣನೊಬ್ಬನ ಸ್ವೋಪಜ್ಞತೆ, ಶಾಸ್ತ್ರಜ್ಞಾನವನ್ನು ಕಂಡು ಶ್ರೋತೃಜನ ಬೆರಗಾಗಿದ್ದರು.

೧೯೪೪ರಲ್ಲಿ 'ಪ್ರಬುದ್ಧ ಕರ್ಣಾಟಕ'ದ ದೀಪಾವಳಿ ಸಂಚಿಕೆಯಲ್ಲಿ ಕೃಷ್ಣಭಟ್ಟರ 'ಪಂಚಮೀ ವಿಭಕ್ತಿ' ಎಂಬ ಲೇಖನ ಪ್ರಕಟವಾಯಿತು. ಪರಿಣಾಮವಾಗಿ ಧಾರವಾಡದ ಕನ್ನಡ ಸಂಶೋಧನ ಸಂಸ್ಥೆ ಒಂದು ವಿಶೇಷ ಉಪನ್ಯಾಸ ಮಾಲಿಕೆಗೆ ಅವರನ್ನು ಆಮಂತ್ರಿಸಿ, ಅವರು ಮಾಡಿದ ಮೂರು ಉಪನ್ಯಾಸಗಳನ್ನು 'ಕನ್ನಡ ವರ್ಣಗಳು' ಎಂಬ ಶೀರ್ಷಿಕೆಯಲ್ಲಿ ಮುದ್ರಿಸಿತು.

ದೇಶವಾಚಕಗಳ ನಿಷ್ಪತ್ತಿ ಮತ್ತದರ ನಿರೂಪಣೆಯನ್ನು ಕುರಿತಂತೆ 'ಕೆಲವು ದೇಶನಾಮಗಳು' ಎಂಬ ಗ್ರಂಥ ೧೯೭೫ರಲ್ಲಿ ಪ್ರಕಟವಾಯಿತು. ಅದರಲ್ಲಿ ಕೃಷ್ಣಭಟ್ಟರು ತುಳು, ಚೇರ, ಕೊಂಕಣ, ಪಾಂಡ್ಯ ಮುಂತಾದ ಶಬ್ದಗಳನ್ನು ನಿಸ್ಸಂದಿಗ್ಧವಾಗಿ ವಿವೇಚಿಸಿದ್ದಾರೆ.

ಬಡತನ ಮತ್ತು ಅನಾರೋಗ್ಯಕ್ಕಿಂತಲೂ ಅವರನ್ನು ಹೆಚ್ಚಾಗಿ ಕಾಡಿದ್ದು ಕಣ್ಣಿನ ಬಾಧೆ. ಇದು ಎಷ್ಟು ತೀವ್ರವಾಗಿತ್ತೆಂದರೆ ಅವರು ಸ್ವೇಚ್ಛೆಯಿಂದಲೇ ತಮ್ಮ ಕಣ್ಣುಗಳನ್ನು ತೆಗೆಸಿಕೊಂಡು ದೃಷ್ಟಿಹೀನರಾದರು. ಆದರೆ ಛಂದೋಮಾರ್ಗದಲ್ಲಿ

ಸಾಗುವ ಸಮಸ್ತರಿಗೂ ದಾರಿದೀವಿಗೆ ಆದರೆಂಬುದಂತೂ ದಿಟ. 'ವ್ಯಾಸ'ರ ರೀತಿಯಲ್ಲಿ ಕೆಲವು 'ಗಣಪತಿ'ಯರ ಕೈಲಿ ಬರೆಸಿ, ಹಲವಾರು ಕೃತಿಗಳನ್ನು ಪ್ರಕಟಿಸಿದರು.

ಕೃಷ್ಣಭಟ್ಟರು ಮಾಡಿರುವ ಉಪನ್ಯಾಸಗಳು, ಮುನ್ನುಡಿಗಳು ಮೊದಲಾದ ವನ್ನೆಲ್ಲಾ ಸೇರಿಸಿ 'ವಿಚಾರ ಪ್ರಪಂಚ' ಎಂಬ ಹೆಸರಿನಲ್ಲಿ ೧೯೯೨ರಲ್ಲಿ ಪ್ರಕಟಮಾಡಲಾಯಿತು. ಇದಕ್ಕೆ ಪಂಪ ಪ್ರಶಸ್ತಿಯೂ ಲಭಿಸಿತು. ಭಾಷಾಶಾಸ್ತ್ರಕ್ಕೂ ಕೃಷ್ಣಭಟ್ಟರಿಂದ ಸಂದ ಕೊಡುಗೆ ಅಪಾರ. ಅನೇಕ ಶಬ್ದಗಳಿಗೆ ನೈರುಕ್ತಿಕಾರ್ಥವನ್ನು (etymological meaning) ತೋರ್ಪಡಿಸಿ, ಇತರರ ಪಾಲಿಗೆ ಶಾಸ್ತ್ರ ವ್ಯಾಸಂಗವನ್ನು ಸರಳಮಾಡಿಕೊಟ್ಟಿದ್ದಾರೆ. ಕನ್ನಡ ನಿಘಂಟೊಂದನ್ನೂ ಕೃಷ್ಣಭಟ್ಟರು ಸಂಪಾದಿಸಿದ್ದಾರೆ. ತಮ್ಮ ಜೀವನದ ಕೆಲವು ವಿಶಿಷ್ಟಘಟನೆಗಳನ್ನು ನಿರೂಪಿಸುವ 'ಈಶ್ವರ ಸಂಕಲ್ಪ' ಎಂಬ ಪುಸ್ತಕವನ್ನೂ ರಚಿಸಿದ್ದಾರೆ. ಬರೆವಣಿಗೆ ಕೇವಲ ಚರ್ವಿತ ಚರ್ವಣವಾಗದೆ ಜ್ಞಾನಪರಂಪರೆಗೆ ನಿಜವಾದ ಕೊಡುಗೆಯಾಗಬೇಕೆಂಬುದು ಕೃಷ್ಣಭಟ್ಟರ ಸಂಕಲ್ಪ.

೧೯೮೫ರಲ್ಲಿ ಪ್ರಕಟಗೊಂಡ 'ಛಂದೋಗತಿ'ಯೆಂಬ ಇವರ ಮೇರುಕೃತಿಯು ಲೋಕಾರ್ಪಣೆಗೊಂಡು ವಿದ್ವದ್ವಲಯದಲ್ಲಿ ನವತರಂಗ ಗಳನ್ನೆ ಬ್ಬಿಸಿತು. ಸಂಗೀತದಲ್ಲಿ ಇರುವ ಲಯಕ್ಕೂ ಮತ್ತು ಛಂದಸ್ಸಿನಲ್ಲಿರುವ ಲಯಕ್ಕೂ ಇರುವ ಭೇದವನ್ನು ಮನಗಂಡ ಕೃಷ್ಣಭಟ್ಟರು, ವಾಸ್ತವಿಕವಾಗಿ ಲಯವೆಂದರೆ ಧ್ವನಿಪುಂಜಗಳ ಕಾಲಸಮತ್ವವೆಂದು ಹೇಳಿ, 'Metrical rhythm' ಎಂಬುದಕ್ಕೆ ಸಂವಾದಿಯಾಗಬಲ್ಲ ಶಬ್ದ 'ಛಂದೋಗತಿ'ಯೇ ಹೊರತು 'ಲಯ' ಸರ್ವಥಾ ಅಲ್ಲವೆಂದು ಸ್ಪಷ್ಟ ಪಡಿಸಿದರು. ಇದಾದ ಬಳಿಕ ಅನೇಕ ವಿದ್ವಾಂಸರು ಛಂದಸ್ಸು ವ್ಯಾಕರಣದ ಬಗೆಗೆ ತಮಗಿದ್ದ ಪೂರ್ವಾಭಿಪ್ರಾಯಗಳನ್ನು ಪುನಃ ಪರಾಮರ್ಶಿಸಿ, ಛಂದೋ ಗ್ರಂಥಗಳನ್ನು ಪರಿಷ್ಕರಿಸಬೇಕಾಯಿತು. 'ಛಂದೋಗತಿ' ಪ್ರಕಟವಾದ ನಾಲ್ಕುವರ್ಷದ ಅನಂತರ ಅಕ್ಕರ, ಗೀತಿಕೆ, ಸೀಸ, ಚೌಪದಿ, ಛಂದೋವತಂಸ, ತ್ರಿಪದಿ, ಸಾಂಗತ್ಯಗಳನ್ನು ಪ್ರೌಢವಾಗಿ ವಿವೇಚಿಸಿರುವ 'ಕನ್ನಡ ಛಂದಸ್ಸು' ಎಂಬ ಮತ್ತೊಂದು ಸ್ವೋಪಜ್ಞ ಕೃತಿಯನ್ನು ರಚಿಸಿದರು.

ಸೇಡಿಯಾಪು ಕೃಷ್ಣಭಟ್ಟರು ತಮ್ಮ ತೊಂಬತ್ತನೆಯ ಹುಟ್ಟುಹಬ್ಬಕ್ಕೆ 'ತಥ್ಯದರ್ಶನ' ಎಂಬ ಅಭೂತಪೂರ್ವ ಗ್ರಂಥವನ್ನು ರಚಿಸಿ ಪ್ರಕಟಿಸಿದರು. ಅನೇಕ ವರ್ಷಗಳಿಂದ ಪಾಶ್ಚಾತ್ಯ ಇತಿಹಾಸಜ್ಞರು, ಪುರಾತತ್ವ ಪ್ರಭೃತಿಗಳು ಗಟ್ಟಿಯಾಗಿ ನಂಬಿದ್ದ 'ಆರ್ಯ'ರೆಂದರೆ ಒಂದು ಜನಾಂಗ, ವರ್ಣ ಮತ್ತು ಜಾತಿ ಎಂದೂ ಲಿಂಗವೆಂದರೆ ಜನನೇಂದ್ರಿಯವೆಂದು ಈ ಶಬ್ದಗಳ ಮೂಲಾರ್ಥವನ್ನೇ ವಿರೂಪಗೊಳಿಸಿದ್ದರಿಂದ ಇವುಗಳ ಬಗೆಗೆ ಜಿಜ್ಞಾಸೆ ನಡೆಸಿದ ಸೇಡಿಯಾಪು ಅವರು ಆರ್ಯಾಕ್ರಮಣವಾದವು (Aryan Invasion Theory) ಬುಡವಿಲ್ಲದ್ದೆಂದು ತೋರ್ಪಡಿಸಿದ ರೀತಿ ವಿನೂತನ ಮತ್ತು ಸ್ವೀಕಾರಾರ್ಹವಾಯಿತು. ಇದರಿಂದ ವೇದಕಾಲದ ಭಾರತವನ್ನು, ಸಿಂಧುಸರಸ್ವತಿ ಸಂಸ್ಕೃತಿಯನ್ನು ಸರಿಯಾಗಿ ಅರ್ಥೈಸುವಂತಾಯಿತು. ''ವರ್ಣಭೇದವು ವೃತ್ತಿಭೇದವನ್ನು ಮಾತ್ರ ಸೂಚಿಸುವ 'ಹೆಸರು' ಎಂಬುದು ನಿಸ್ಸಂಶಯ. ಆದಕಾರಣ 'ಚಾತುರ್ವರ್ಣ್ಯ' ಎಂಬ ಶಬ್ದದಲ್ಲಿ ಅಡಕವಾಗಿರುವ 'ವರ್ಣ' ಎಂಬ ಶಬ್ದಕ್ಕೆ 'ಹೆಸರು' ಎಂಬುದೇ ಅರ್ಥವೆಂದು ತಿಳಿಯುವುದೇ ನ್ಯಾಯವಾಗಿದೆ'' ಎಂದು ಪ್ರತಿಪಾದಿಸಿದರು.

ತಮ್ಮ ಅನಾರೋಗ್ಯವನ್ನು ಗಂಭೀರವಾಗಿ ತೆಗೆದುಕೊಳ್ಳದ ಕೃಷ್ಣಭಟ್ಟರು, ಅದರ ಬಗ್ಗೆ ತಾವೇ ಯಥೋಚಿತವಾಗಿ ಲೇವಡಿಮಾಡಿಕೊಳ್ಳುವ ವಿನೋದ ಶೀಲತೆಯನ್ನು ಹಲವಾರು ಜನ ಕಂಡಿದ್ದಾರೆ. ಇವುಗಳ ಬಗ್ಗೆ ಅವರ ಶಿಷ್ಯ ಎಂ. ರಾಮ ಚಂದ್ರರಿಗೆ ಬರೆದ ಪತ್ರಗಳಲ್ಲಿ (ಪುಸ್ತಕರೂಪದಲ್ಲಿಯೂ ಪ್ರಕಟವಾಗಿದೆ) ಕಾಣಬಹುದು. ಇಂತಹ ಒಂದು ಪತ್ರದಲ್ಲಿ, ''ನನಗೆ ಪಾಸ್ಪೋರ್ಟ್ ಸಿಕ್ಕಿದೆ; ಇನ್ನೂ ವೀಸಾ ಸಿಕ್ಕಿಲ್ಲ.'' ಎಂದು ಹಾಸ್ಯ ಮಾಡಿಕೊಂಡಿದ್ದರಂತೆ. ಒಮ್ಮೆ ರಾ. ಗಣೇಶರು ಕೃಷ್ಣಭಟ್ಟರ ಆರೋಗ್ಯವನ್ನು ವಿಚಾರಿಸಲು ಅವರ ಮನೆಗೆ ಹೋದಾಗ ಶೃಂಗಾರ ಪದ್ಯವೊಂದನ್ನು ಉದ್ಧರಿಸಿ, ''ಅದು ಹಾಸಿಗೆಗೆ ಎಷ್ಟೆಷ್ಟು ಹತ್ತಿರವಾಗುತ್ತದೆಯೋ ನನ್ನ ಆರೋಗ್ಯ ಅಷ್ಟಷ್ಟು ದೂರವಾಗುತ್ತದೆ'' ಎಂದು ಮಂಚದ ಪಕ್ಕದಲ್ಲಿದ್ದ Bedpan ತೋರಿಸಿದ್ದರಂತೆ. ಶೃಂಗಾರ-ಬೀಭತ್ಸ ಎತ್ತಣಿಂದೆತ್ತ ಸಂಬಂಧ!

ಅವರ 'ತಥ್ಯದರ್ಶನ'ದ ಆಂಗ್ಲಾನುವಾದವಾದ 'Discovery of Facts', ೧೯೯೬ರ ಜೂನ್ ೮ರಂದು ಕೃಷ್ಣಭಟ್ಟರ ತೊಂಬತ್ತೈದನೆಯ ಜನ್ಮದಿನ ದಂದು ಶಿವರಾಮಕಾರಂತರಿಂದ ಬಿಡುಗಡೆಗೊಂಡಿತು. ಅವರು ಪುಸ್ತಕವನ್ನು ಪುಟ್ಟ ಮಕ್ಕಳಿನಂತೆ ತಡವಿ ಸಂತೋಷಪಟ್ಟಿದ್ದರು. ಅನಾರೋಗ್ಯಪೀಡಿತ ದುರ್ಬಲ

ದೇಹಿಯಾಗಿದ್ದರೂ ಅದ್ಭುತವಾದ ತಮ್ಮ ಧೀಶಕ್ತಿಯಿಂದಲೇ ತೊಂಬತ್ತೈದು ವರ್ಷಗಳ ಸಾರ್ಥಕ ಜೀವನವನ್ನು ನಡೆಸಿ ಅಂದೇ ರಾತ್ರಿ ಇಹಲೋಕವನ್ನು ತ್ಯಜಿಸಿದರು.

ಸೇಡಿಯಾಪು ಅವರ ಬರೆವಣಿಗೆಯು ಬಾಹುಳ್ಯದಲ್ಲಿ ಹೆಚ್ಚಿಲ್ಲದಿರಬಹುದು. ಶಾಸ್ತ್ರ, ಕಾವ್ಯ ಮತ್ತು ಕಥೆಗಳೂ ಸೇರಿದಂತೆ ಏಳು ಪುಸ್ತಕಗಳು; ಕೆಲವು ಧರ್ಮ ಪ್ರಬಂಧಗಳು ಮತ್ತು ಕೆಲವು ಬಿಡಿ ಲೇಖನಗಳು. "ಸಾಹಿತ್ಯದ ಸಂತೆಯಲ್ಲಿ ನನ್ನದು ಚಿಲ್ಲರೆ ಅಂಗಡಿ. ಸ್ವಲ್ಪ ಛಂದಸ್ಸು, ಸ್ವಲ್ಪ ವ್ಯಾಕರಣ, ಸ್ವಲ್ಪ ಕಥೆ, ಸ್ವಲ್ಪ ಕಾವ್ಯ – ಎಲ್ಲವೂ ಸ್ವಲ್ಪಸ್ವಲ್ಪ. ಗಿರಾಕಿಗಳೂ ಸ್ವಲ್ಪವೇ!" ಎಂದು ಅವರೇ ವಿನೋದವಾಗಿ ಹೇಳುತ್ತಿದ್ದುದುಂಟು. ಆದರೆ ಬರೆದದ್ದೆಲ್ಲವೂ ಅನರ್ಘ್ಯ ರತ್ನಗಳು.

ಪ್ರಮಾಣ ಗ್ರಂಥಾವಳಿ

- ಕವಳಿಗೆ, ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು, ೨೦೧೪
- ತುರಾಯಿ, ದಕ್ಷಿಣಕನ್ನಡ ಜಿಲ್ಲಾ ಒಂಬತ್ತನೆಯ ಸಾಹಿತ್ಯ ಸಮ್ಮೇಳನ ಪ್ರಕಟನಸಮಿತಿ, ಕಾರ್ಕಳ, ೧೯೯೬
- ನಂದಾದೀವಿಗೆ. ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಕೇಂದ್ರ, ಉಡುಪಿ, ೧೯೯೭
- ಪತ್ರಾವಳಿ, ವಿ.ಸೀ. ಸಂಪದ, ಬೆಂಗಳೂರು, ೨೦೧೧
- ವಿಚಾರ ಪ್ರಪಂಚ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೧
- ಶತಾಂಜಲಿ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಕೇಂದ್ರ, ಉಡುಪಿ, ೨೦೦೨
- ಸೇಡಿಯಾಪು ಛಂದಸ್ಸಂಪುಟ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಕೇಂದ್ರ, ಉಡುಪಿ, ೨೦೦೬
- ಪಾಂಡಿತ್ಯರಸಪ್ರತೀಕ – ಶ್ರೀ ಸೇಡಿಯಾಪು ಕೃಷ್ಣಭಟ್ಟ, ಬಿ.ಎನ್ ಶಶಿಕಿರಣ್ Prekshaa.in.

❐ ❐ ❐

ಕೋಟ ಶಿವರಾಮ ಕಾರಂತ

(೧೯೦೨-೧೯೯೭)

ಸಣ್ಣಪಾಪಯ್ಯ

ಕೋಟ ಶಿವರಾಮ ಕಾರಂತರು 'ನಡೆದಾಡುವ ವಿಶ್ವಕೋಶ' 'ಕಡಲತೀರದ ಭಾರ್ಗವ' ಎಂದೇ ಖ್ಯಾತರಾಗಿದ್ದರು. ಕಾರಂತರು ಒಬ್ಬ ವ್ಯಕ್ತಿಯಲ್ಲ 'ಅವರೊಂದು ಸಂಸ್ಥೆ'. 'ಅವರೇ ಒಂದು ವಿಶ್ವವಿದ್ಯಾಲಯ' ಇನ್ನಿತರ ಮಾತುಗಳು ಅವರ ಬಗ್ಗೆ ಜನಜನಿತವಾಗಿವೆ. ಕನ್ನಡ ಸಾಹಿತ್ಯದ ವಕ್ತಾರ, ಕವಿ, ಕಾದಂಬರಿಕಾರ, ನಾಟಕಕಾರ, ಅನುವಾದಕ, ನಿಘಂಟುಕಾರ, ವೈಜ್ಞಾನಿಕ ಬರಹಗಾರರಾಗಿದ್ದ ಅವರು, 'ಆಡು ಮುಟ್ಟದ ಸೊಪ್ಪಿಲ್ಲ, ಕಾರಂತರು ಬರೆಯದ ವಿಷಯವಿಲ್ಲ' ಎನ್ನುವಂತೆ ಎಲ್ಲ ಕ್ಷೇತ್ರಗಳಲ್ಲೂ ಕೃಷಿ ಮಾಡಿದ್ದಾರೆ. ವಿಶ್ವವಿದ್ಯಾಲಯಗಳಿಂದ ಪದವಿ, ಸ್ನಾತಕೋತ್ತರ ಪದವಿ ಪಡೆದವರಲ್ಲವಾದರೂ ಅವರ ಸಾಹಿತ್ಯ ಕೃಷಿ ಅಪಾರವಾದುದು. ಅವರ ಸಾಹಿತ್ಯ ಸೇವೆಗೆ ಜ್ಞಾನಪೀಠ, ಪದ್ಮಭೂಷಣ, ಪಂಪ ಪ್ರಶಸ್ತಿ, ನಾಡೋಜ ಪುರಸ್ಕಾರಗಳೇ ಅಲ್ಲದೆ ಎಂಟು ವಿಶ್ವವಿದ್ಯಾಲಯಗಳು ಗೌರವ ಡಾಕ್ಟೊರೇಟ್ ಪದವಿಗಳನ್ನಿತ್ತು ಪುರಸ್ಕರಿಸಿವೆ.

ಶಿವರಾಮ ಕಾರಂತರು ಉಡುಪಿ ಜಿಲ್ಲೆಯ 'ಕೋಟ' ಎಂಬಲ್ಲಿ ೧೯೦೨ ಅಕ್ಟೋಬರ್ ೧೦ ರಂದು ಜನಿಸಿದರು. ತಂದೆ ಶೇಷ ಕಾರಂತರು, ತಾಯಿ ಲಕ್ಷ್ಮೀ ಕಾರಂತರು. ಈ ದಂಪತಿಗಳಿಗೆ ಬಂಬತ್ತು ಜನ ಮಕ್ಕಳು. ಶಿವರಾಮ ಕಾರಂತರು ನಾಲ್ಕನೆಯ ಮಗ. ಶೇಷ ಕಾರಂತರು ಶಾಲಾಶಿಕ್ಷಕರಾಗಿದ್ದು, ತಮಗೆ ಬರುವ ಸಂಬಳದಲ್ಲಿ ದೊಡ್ಡ ಸಂಸಾರವನ್ನು ನಿಭಾಯಿಸುವುದು ಕಷ್ಟವಾಯಿತು. ಆಗ ಕುಟುಂಬವನ್ನು ಸಾಕಲು ಕೆಲಸ ಬಿಟ್ಟು ಜವಳಿ ಅಂಗಡಿ ವ್ಯಾಪಾರ ಆರಂಭಿಸಿದರು. ಭಾರತದಲ್ಲಿ ಆಂಗ್ಲರನ್ನು ಕಂಡರೆ ಭಯ, ಅಸಹ್ಯಪಡುತ್ತಿದ್ದ ಕಾಲದಲ್ಲಿ, ಶೇಷ ಕಾರಂತರು ತಮ್ಮ ಮಕ್ಕಳನ್ನು ಓದಲು ಆಂಗ್ಲಮಾಧ್ಯಮ ಶಾಲೆಗೆ ಕಳುಹಿಸಿದರು. ಕುಂದಾಪುರದ ಶಾಲೆಯಲ್ಲಿ ೧೯೨೦ ರಲ್ಲಿ ಶಿವರಾಮ ಕಾರಂತರು ಮೆಟ್ರಿಕ್ ಪರೀಕ್ಷೆಯಲ್ಲಿ ಪಾಸಾದರು. ಶಾಲೆಯಲ್ಲಿ ರಂಗರಾಯರೆಂಬ ಗುರುಗಳು ಕಾರಂತರಿಗೆ

ಬೆಂಬಲವಾಗಿ ನಿಂತರು. ಮಳಲಿ ಸುಬ್ಬರಾಯರೆಂಬ ಮತ್ತೊಬ್ಬರು ಶಿವರಾಮ ಕಾರಂತರಿಗೆ ಗುರುವಾಗಿದ್ದರು. ಇವರು ಮೂಲತಃ ಯಕ್ಷಗಾನ ರಚನೆ ಮಾಡಬಲ್ಲವರಾಗಿದ್ದು, ಶಿವರಾಮ ಕಾರಂತರಿಗೆ ಯಕ್ಷಗಾನದ ಬಗ್ಗೆ ಆಸಕ್ತಿ ಮೂಡಲು ಮುಖ್ಯ ಕಾರಣರಾದರು. ೧೯೨೦ರಲ್ಲಿ ಗಾಂಧೀಜಿಯವರು ಸ್ವತಂತ್ರ ಹೋರಾಟವನ್ನು ಬಲಗೊಳಿಸಬೇಕೆಂದು, ಶಾಲಾ ಮಕ್ಕಳು ಭಾಗವಹಿಸುವಂತೆ ಕರೆಕೊಟ್ಟರು. ಗಾಂಧೀಜಿ ಯವರ ಮಾತಿನಿಂದ ಪ್ರೇರಣೆಗೊಂಡ ಕಾರಂತರೂ ಚಳವಳಿಯಲ್ಲಿ ಭಾಗ ವಹಿಸಿದ್ದರು.

ಕಾರಂತರು ಬಾಲ್ಯದಿಂದಲೂ ವೈಜ್ಞಾನಿಕ ಮನೋಧರ್ಮವನ್ನು ಬೆಳೆಸಿಕೊಂಡವರು. ವಾಸ್ತವದ ನೆಲೆಯಲ್ಲಿ ಆಲೋಚನೆ ಮಾಡುತ್ತಿದ್ದ ಅವರ ಬದುಕು ಹಲವಾರು ಪ್ರಯೋಗಗಳಿಂದ ಕೂಡಿದೆ. ಅನುಭವ ಮಾಗಿದಂತೆಲ್ಲ ಅವರು ತಮ್ಮ ಹಿಂದಿನ ನಿಲುವುಗಳನ್ನು ಬದಲಾಯಿಸಿಕೊಂಡಿದ್ದಾರೆ. ಮನುಷ್ಯ ಎಷ್ಟೇ ಕಲಿತರೂ ಕಲಿಯಬೇಕಾದದ್ದೇ ಬಹಳ ಎಂದು ನಂಬಿರುವ ಕಾರಂತರಿಗೆ ಈ ಬದುಕೇ ಒಂದು ಪಾಠಶಾಲೆಯಾಗಿದೆ. ಶಾಲೆಯ ಪಠ್ಯಪುಸ್ತಕಗಳು ಕಲಿಸದ ಎಷ್ಟೋ ವಿಷಯಗಳನ್ನು ಬದುಕು ಕಲಿಸುತ್ತದೆ ಎಂಬುದು ಅವರ ನಿಲುವಾಗಿತ್ತು. ಚಿಕ್ಕವಯಸ್ಸಿನಲ್ಲಿಯೇ ಶಾಲೆ ಬಿಟ್ಟು ಸ್ವಾತಂತ್ರ್ಯ ಸಂಗ್ರಾಮದಲ್ಲಿ ತೊಡಗಿಸಿಕೊಂಡಿದ್ದ ಕಾರಂತರು ಮುಂದೆ ಎಲ್ಲ ಜ್ಞಾನಶಾಖೆಗಳಲ್ಲೂ ಆಸಕ್ತಿ ಬೆಳೆಸಿಕೊಂಡದ್ದು, ಸ್ವಂತವಾಗಿ ಕಲಿತದ್ದು, ಕಲಿತದ್ದನ್ನು ಸರಳವಾದ ಕನ್ನಡದಲ್ಲಿ ಬರೆದದ್ದು, ಮಾತನಾಡಿದ್ದು, ಅದೊಂದು ವಿಸ್ಮಯವೆ ಸರಿ. ತುರ್ತುಪರಿಸ್ಥಿತಿಯಲ್ಲಿ ಇಂದಿರಾಗಾಂಧಿಯವರ ಸರ್ವಾಧಿಕಾರ ಧೋರಣೆಯನ್ನು ಧಿಕ್ಕರಿಸಿ ಕಾರಂತರು ಪದ್ಮಭೂಷಣ ಪ್ರಶಸ್ತಿಯನ್ನು ಕೇಂದ್ರ ಸರಕಾರಕ್ಕೆ ವಾಪಸು ಮಾಡಿದ್ದು ಕೂಡ ಇತಿಹಾಸದಲ್ಲಿ ಸೇರಿಹೋಗಿದೆ.

ಕಾರಂತರ ಬರೆವಣಿಗೆಯ ಹರಹು ಬಹು ವಿಸ್ತಾರವಾದುದು. ಸಾಹಿತ್ಯ, ಕತೆ, ಕಾದಂಬರಿ, ನಾಟಕ, ಕವನಸಂಕಲನ, ರಂಗಭೂಮಿ, ಪ್ರವಾಸ ಕಥನ, ಆತ್ಮಚರಿತ್ರೆ, ಸಂಪಾದನೆ, ಚಲನಚಿತ್ರ, ವಿಜ್ಞಾನ, ಚಿತ್ರಕಲೆ, ಸಂಗೀತ, ಶಿಕ್ಷಣ, ರಾಜಕೀಯ, ಪತ್ರಿಕೋದ್ಯಮ, ಭಾಷೆ, ಸಂಸ್ಕೃತಿ ಹೀಗೆ ಪಟ್ಟಿ ಮಾಡುತ್ತ ಹೋದರೆ ಅದು ಬೆಳೆಯುತ್ತ ಹೋಗುತ್ತದೆ. ಕಾರಂತರು ಮಕ್ಕಳಿಗಾಗಿ 'ಬಾಲ ಪ್ರಪಂಚ', 'ವಿಜ್ಞಾನ ಪ್ರಪಂಚ' ಗಳನ್ನು ಬರೆದರು. ಸಿರಿಗನ್ನಡ ಅರ್ಥಕೋಶವನ್ನು ತಯಾರಿಸಿದ್ದು, ಯಕ್ಷಗಾನ ಕುರಿತ ಪುಸ್ತಕಗಳನ್ನು ಬರೆದಿದ್ದು ಮಾತ್ರವಲ್ಲ, ಸ್ವತಃ ಹಲವು ಪ್ರಯೋಗಗಳನ್ನು

ಮಾಡಿದ್ದಾರೆ. ಐವತ್ತಕ್ಕೂ ಹೆಚ್ಚು ನಾಟಕಗಳನ್ನು ಬರೆದಿದ್ದಾರೆ. ಶಿಲ್ಪಕಲೆ, ಚಿತ್ರಕಲೆ ಕುರಿತ ಪುಸ್ತಕಗಳನ್ನು ಬರೆದದ್ದು ಮಾತ್ರವಲ್ಲದೆ, ತಾವೇ ಸ್ವತಃ ಚಿತ್ರಗಳನ್ನು ಬರೆದಿದ್ದಾರೆ. ಚಲನ ಚಿತ್ರ ನಿರ್ಮಿಸಿದ್ದಾರೆ.

ಜ್ಞಾನಪೀಠ ಪುರಸ್ಕೃತ ಶಿವರಾಮ ಕಾರಂತರು ತೊಂಬತ್ತಾರು ವರ್ಷಗಳ ತುಂಬು ಜೀವನವನ್ನು ಅನುಭವಿಸಿದರು. ತಮ್ಮ ಈ ಸುದೀರ್ಘ ಜೀವನ ಪಯಣದಲ್ಲಿ ಸುಮಾರು ೪೨೭ ಪುಸ್ತಕಗಳನ್ನು ರಚಿಸಿದರು. ಇಷ್ಟು ಸಂಖ್ಯೆಯ ಕೃತಿಗಳನ್ನು ರಚಿಸುವುದು ಸಣ್ಣ ವಿಷಯವಲ್ಲ. ಅವುಗಳಲ್ಲಿ ಕಾದಂಬರಿಗಳು ೪೭. ತಮ್ಮ ೯೬ರ ಇಳಿವಯಸ್ಸಿನಲ್ಲೂ ಹಕ್ಕಿಗಳ ಕುರಿತು ಒಂದು ಪುಸ್ತಕವನ್ನು ಬರೆದಿದ್ದು, ಇದು ವಿಶ್ವ ದಾಖಲೆಗೆ ಅರ್ಹವಾಗಿರುವ ಒಂದು ಸಾಧನೆ ಎನ್ನಬಹುದು. ಶಿವರಾಮ ಕಾರಂತರು ಸಾಹಿತಿಯಾಗಿ ಪ್ರಸಿದ್ಧಿಯಾಗಿರುವಂತೆ, ಇತರ ಕ್ಷೇತ್ರಗಳಲ್ಲೂ ಅಪಾರ ಸಾಧನೆ ಮಾಡಿದವರು. ಕರ್ನಾಟಕದ ಪ್ರಮುಖ ಕಲೆಯಾದ ಯಕ್ಷಗಾನದ ಉಳಿವಿಗೆ ಪ್ರಯತ್ನಿಸಿ, ಅದರಲ್ಲಿ ಹಲವು ಪ್ರಯೋಗಗಳನ್ನು ಮಾಡಿದ್ದರು. ತಾವೇ ಸ್ವತಃ ನೃತ್ಯವನ್ನು ಕಲಿತು ಗಂಭೀರ ಪ್ರಯೋಗಗಳನ್ನು ಮಾಡಿದ್ದರು.

ಶಿವರಾಮ ಕಾರಂತರು ಯಕ್ಷಗಾನ ಕಲೆಗೆ ವಿಶ್ವಮಟ್ಟದ ಮಾನ್ಯತೆ ತಂದುಕೊಟ್ಟ ಮಹಾನ್ ಸಾಂಸ್ಕೃತಿಕ ಚಿಂತಕರು. ಅವರ ಸೃಜನಶೀಲ ಪ್ರವೇಶದಿಂದ ಯಕ್ಷಗಾನವು ದೇಶ–ವಿದೇಶಗಳ ಬುದ್ಧಿಜೀವಿ ವಲಯಗಳ ಗಮನ ಸೆಳೆಯಿತು. ಹುಟ್ಟೂರಿನ ಸಾಂಸ್ಕೃತಿಕ ಪರಿಸರದಲ್ಲಿಯೇ ಯಕ್ಷಗಾನ ಪ್ರದರ್ಶನಗಳನ್ನು ವೀಕ್ಷಿಸುತ್ತಾ ಬೆಳೆದವರು ಕೋಟ ಶಿವರಾಮ ಕಾರಂತರು. ಅಲ್ಲಿಯ ಸ್ಥಳೀಯ ಮೇಳಗಳಷ್ಟೇ ಅಲ್ಲದೆ, ಊರಿಗೆ ಆಗಮಿಸುವ ವಿವಿಧ ಮೇಳಗಳ ಆಟಗಳನ್ನು ಅವರು ನಿರಂತರವಾಗಿ ವೀಕ್ಷಿಸುತ್ತಿದ್ದರು.

ಯೌವನದ ದಿನಗಳಲ್ಲಿ ಕಾರಂತರ ಆಸಕ್ತಿ ನೃತ್ಯ ಮತ್ತು ನಾಟಕಗಳತ್ತ ತೀವ್ರವಾಗಿ ಹರಿಯಿತು. ಸ್ವತಃ ಅವರು ಐವತ್ತಕ್ಕೂ ಹೆಚ್ಚು ನಾಟಕಗಳನ್ನು ರಚಿಸಿದ್ದು, ಅವುಗಳಲ್ಲಿ ಬಹುತೇಕ ಸಾಮಾಜಿಕ ಪರಿವರ್ತನೆಯ ಆಶಯದಿಂದ ರೂಪುಗೊಂಡ ಕೃತಿಗಳಾಗಿವೆ. ಮದ್ಯಪಾನ, ಜೂಜು, ವೇಶ್ಯಾವೃತ್ತಿ ಮೊದಲಾದವುಗಳನ್ನು ನಾಟಕದ ಮೂಲಕ ನಿವಾರಿಸಬಹುದು ಎಂಬ ದೃಢ ನಂಬಿಕೆ ಅವರಿಗೆ ಇತ್ತು.

ಈ ಅವಧಿಯಲ್ಲಿ ಕಾರಂತರು ಚಿತ್ರಕಲೆ, ಶಿಲ್ಪಕಲೆಗಳನ್ನು ಅರಿಯಲು ದೇಶದ ವಿವಿಧ ಭಾಗಗಳಲ್ಲಿ ಸಂಚರಿಸಿದ್ದರು. ನೃತ್ಯವನ್ನು ಆಳವಾಗಿ ಅಭ್ಯಾಸ ಮಾಡಿದ್ದು, ಹಿಂದೂಸ್ತಾನಿ ಸಂಗೀತವನ್ನು ಗುರುಮುಖೇನ ಕಲಿತಿದ್ದರು. ನಾಟಕವನ್ನು ತೊರೆದ ಬಳಿಕ, ಬಾಲ್ಯದ ಯಕ್ಷಗಾನ ಅವರ ಮನಸ್ಸಿನಲ್ಲಿ ಪುನಃ ಜೀವಂತವಾಯಿತು. 'ನಮ್ಮ ಬಯಲಾಟದಲ್ಲಿ ನಾನು ಬಾಲ್ಯದಲ್ಲಿ ಗ್ರಹಿಸಿದ್ದಕ್ಕಿಂತ ಬಹಳ ಹೆಚ್ಚಿನ ಸೌಂದರ್ಯ ಅಡಗಿದೆ' ಎಂಬ ಅರಿವು ಅವರಿಗೆ ಮೂಡಿತು. ಇದರ ಪರಿಣಾಮವಾಗಿ ಹಳೆಯ ಯಕ್ಷಗಾನ ಪ್ರಸಂಗಗಳನ್ನು ಆಧಾರವಾಗಿಸಿಕೊಂಡು, ಪುತ್ತೂರಿನ ತಮ್ಮ ಕಾರ್ಯಕ್ಷೇತ್ರದಲ್ಲಿ ನವರಾತ್ರಿ ಸಂದರ್ಭಗಳಲ್ಲಿ ಹೊಸ ನೃತ್ಯ ಪ್ರಯೋಗಗಳನ್ನು ಆರಂಭಿಸಿದರು.

ಹಾಡು, ನೃತ್ಯ, ವೇಷಭೂಷಣ, ಮಾತುಗಾರಿಕೆ—ಎಲ್ಲವೂ ಒಂದಾಗಿ ಯಕ್ಷಗಾನವನ್ನು ಸರ್ವಾಂಗಸೌಂದರ್ಯಯುತ ಕಲೆಯನ್ನಾಗಿ ರೂಪಿಸುತ್ತವೆ ಎಂಬ ಅರಿವು ಅವರಿಗೆ ಕ್ರಮೇಣ ಗಾಢವಾಯಿತು. ೧೯೩೩ರಿಂದ ಪ್ರತಿ ವರ್ಷ ಮೂರು ತಿಂಗಳ ಕಾಲ ಯಕ್ಷಗಾನ ತಜ್ಞರೊಂದಿಗೆ ಒಂದೊಂದು ಪ್ರಸಂಗವನ್ನು ಕೇಂದ್ರವಾಗಿಟ್ಟುಕೊಂಡು ಅವರು ದಶಕಗಳ ಕಾಲ ಅಧ್ಯಯನ ನಡೆಸಿದರು. 'ಪಂಚವಟಿ', 'ಕೀಚಕವಧೆ', 'ಇಂದ್ರಕೀಲಕ', 'ಭೀಷ್ಮ ವಿಜಯ' ಮುಂತಾದ ಪ್ರಸಂಗಗಳನ್ನು ತಮ್ಮದೇ ತಂಡದ ಮೂಲಕ ಪ್ರದರ್ಶಿಸಿದರು. ಮಾತುಗಳಿಲ್ಲದೆ ಕೇವಲ ನೃತ್ಯದ ಮೂಲಕ ಯಕ್ಷಗಾನವನ್ನು ವ್ಯಕ್ತಪಡಿಸುವ ಪ್ರಯೋಗವನ್ನು ಅವರು ಅದಾಗಲೇ ಆರಂಭಿಸಿದ್ದರು. ಇದನ್ನು 'ಯಕ್ಷಗಾನ ನೃತ್ಯ' ಎಂದು ಕರೆಯುವುದರಿಂದ ಸಂಪ್ರದಾಯವಾದಿಗಳ ವಿರೋಧ ಉಂಟಾಗಬಹುದು ಎಂಬ ಕಾರಣದಿಂದ, ಅದಕ್ಕೆ 'ಕಿನ್ನರ ನೃತ್ಯ' ಎಂಬ ಹೆಸರನ್ನು ನೀಡಿದರು. ಸಂಗೀತಶಾಸ್ತ್ರ ಸಂಶೋಧಕ ಅರ್ನಾಲ್ಡ್ ಬಾಕೆ ಅವರಂತಹ ವಿದ್ವಾಂಸರೊಂದಿಗೆ ಸಂಚರಿಸಿ, ಜಾನಪದ ಸಂಗ್ರಹ ಕಾರ್ಯದಲ್ಲಿಯೂ ತೊಡಗಿಸಿಕೊಂಡರು. ಮಾತು ಮತ್ತು ಗೀತೆಯ ನಡುವೆ ಇರುವ ಆಳವಾದ ಸಂಬಂಧವನ್ನು ಅವರು ಈ ಸಂದರ್ಭದಲ್ಲೇ ಸಮಗ್ರವಾಗಿ ಗ್ರಹಿಸಿದರು. ಯಕ್ಷಗಾನ ಪದ್ಯಗಳಲ್ಲಿ ಈ ನಂಟು ಎಷ್ಟು ಸಹಜ ಹಾಗೂ ಸುಂದರವಾಗಿದೆ ಎಂಬುದನ್ನು ಕಂಡು ಅವರು ವಿಸ್ಮಯಗೊಂಡರು.

ಯಕ್ಷಗಾನದ ಸಮಗ್ರ ಅರಿವು ಮೂಡಿದಂತೆ, ಆ ಕಾಲದಲ್ಲಿ ಆಡಲಾಗುತ್ತಿದ್ದ ಪ್ರಸಂಗಗಳಲ್ಲಿಯ ದೋಷಗಳು ಅವರಿಗೆ ಸ್ಪಷ್ಟವಾಗಿ ಕಾಣಿಸತೊಡ

ಗಿದುವು. ಹುಟ್ಟೂರಾದ ಕೋಟದಲ್ಲಿ ಇನ್ನಷ್ಟು ಯಕ್ಷಗಾನ ಪ್ರದರ್ಶನಗಳನ್ನು ವೀಕ್ಷಿಸಿದ ಬಳಿಕ, ಇಲ್ಲಿ ನಾಟಕ ಮತ್ತು ಸಿನಿಮಾದ ಪ್ರಭಾವ ಕಡಿಮೆ ಇದೆ ಎಂಬುದನ್ನು ಅವರು ಗಮನಿಸಿದರು. ಕಾರಂತರ 'ಯಕ್ಷಗಾನ ಬಯಲಾಟ' ಕೃತಿ ೧೯೫೭ರಲ್ಲಿ ಪ್ರಕಟವಾಯಿತು. ಈ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಲಭಿಸಿದೆ. ಯಕ್ಷಗಾನ ಕುರಿತು ಮಾತನಾಡಲು ಕಾರಂತರಿಗೆ ಇರುವ ಅರ್ಹತೆ ಏನು, ಅವರ ಅಧ್ಯಯನದ ವ್ಯಾಪ್ತಿ ಎಷ್ಟು ವಿಶಾಲ, ವೇಷಭೂಷಣ, ಪದ್ಯ, ನಾಟ್ಯ ಮತ್ತು ಮಾತುಗಾರಿಕೆ ಕುರಿತಾಗಿ ಅವರ ಅನುಭವ ಏನು ಎಂಬ ಎಲ್ಲ ಪ್ರಶ್ನೆಗಳಿಗೆ ಈ ಕೃತಿ ಸಮಗ್ರ ಉತ್ತರ ನೀಡುತ್ತದೆ. ಯಕ್ಷಗಾನ ಇರುವ ಪ್ರದೇಶಗಳಾದ್ಯಂತ ಕಾರಂತರು ನಡೆಸಿದ ಅಲೆದಾಟ, ಅವರು ವೀಕ್ಷಿಸಿದ ಮೇಳಗಳು, ಭೇಟಿಯಾದ ಭಾಗವತರು, ಕಲಾವಿದರು, ವೇಷಭೂಷಣ ತಯಾರಕರು ಹಾಗೂ ಪ್ರೇಕ್ಷಕರೊಂದಿಗೆ ನಡೆಸಿದ ವಿಚಾರಮಂಥನಗಳ ಸಂಪೂರ್ಣ ಚಿತ್ರಣ ಇಲ್ಲಿ ಲಭ್ಯ.

ಯಾವ ವಿಷಯದ ಮೇಲಾದರೂ ಆಸಕ್ತಿ ಮೂಡಿದರೆ, ಅದರ ಆಮೂಲಾಗ್ರ ಅಧ್ಯಯನ ಮಾಡುವುದು ಕಾರಂತರ ಸ್ವಭಾವ. ಈ ಗುಣವೇ ಅವರನ್ನು ಯಕ್ಷಗಾನದ ತಾಳಪತ್ರ ಗ್ರಂಥಗಳ ಸಂಗ್ರಹ ಮತ್ತು ಅಧ್ಯಯನದತ್ತ ಕರೆದೊಯ್ದಿತು. ಯಕ್ಷಗಾನ ಇರುವ ಎಲ್ಲ ಜಿಲ್ಲೆಗಳ ಹಳ್ಳಿಹಳ್ಳಿಗಳನ್ನು ಸಂಚರಿಸಿ, ಅಪರೂಪದ ಹಾಗೂ ಅಮೂಲ್ಯ ತಾಳವೋಲೆಗಳನ್ನು ಸಂಗ್ರಹಿಸಿದರು. ಇದರ ಅಧ್ಯಯನದಿಂದ ಪ್ರಸಂಗಗಳು ಹಾಗೂ ಪ್ರಸಂಗಕರ್ತರ ಕುರಿತು ಅವರಿಗೆ ಸಮಗ್ರ ಮತ್ತು ವೈಜ್ಞಾನಿಕ ಅರಿವು ಮೂಡಿತು. ಈ ಮಹತ್ತರ ಕಾರ್ಯದಲ್ಲಿ ನೂರಾರು ಅರ್ಹ ವ್ಯಕ್ತಿಗಳ ಸಹಕಾರವನ್ನು ಅವರು ಪಡೆದರು.

ಯಕ್ಷಗಾನದ ಮೂಲ ಪ್ರಸಂಗಕರ್ತ ಪಾರ್ತಿಸುಬ್ಬ ಎಂಬ ರೂಢಿಗತ ನಂಬಿಕೆ ತಪ್ಪಾಗಿದೆ ಎಂಬ ಸತ್ಯವೂ ಅವರ 'ಯಕ್ಷಗಾನ–ಬಯಲಾಟ' ಕೃತಿಯಿಂದ ಬಹಿರಂಗವಾಯಿತು. ಈ ರೀತಿಯಾಗಿ, ವಿಶ್ವವಿದ್ಯಾಲಯಕ್ಕೂ ಅಸಾಧ್ಯವೆನಿಸುವ ಮಹತ್ತ್ವದ ಕಾರ್ಯವನ್ನು ಕಾರಂತರು ಏಕಾಂಗಿಯಾಗಿ ನೆರವೇರಿಸಿ ಈ ಗ್ರಂಥವನ್ನು ರಚಿಸಿದ್ದಾರೆ. ''ನನಗೆ ಅನಿಸಿದುದನ್ನು ಯಾವುದೇ ದಾಕ್ಷಿಣ್ಯವಿಲ್ಲದೆ ನಿಮ್ಮ ಮುಂದಿಟ್ಟಿದ್ದೇನೆ. ಎಲ್ಲರೂ ಒಪ್ಪಲೇಬೇಕು ಎಂಬ ಹಠ ನನಗಿಲ್ಲ'' ಎಂಬ ಅವರ ನಿಲುವು ಈ ಕೃತಿಯ ವೈಚಾರಿಕ ಪ್ರಾಮಾಣಿಕತೆಯನ್ನು ಪ್ರತಿಬಿಂಬಿಸುತ್ತದೆ. ಈ ಕೃತಿಗೆ

ಮೊದಲು ಅಂತಾರಾಷ್ಟ್ರೀಯ ನೃತ್ಯ ಆರ್ಕೈವ್ಸ್ (ಸ್ಟಾಕ್‌ಹೋಮ್) ಸಂಸ್ಥೆಯ ಪ್ರಶಸ್ತಿ ಲಭಿಸಿತು. ಅನಂತರ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯೂ ದೊರಕಿತು.

ಯಕ್ಷಗಾನ ಕಲೆಗೆ ಆಧುನಿಕ ಸ್ಪರ್ಶ ನೀಡಿದರು; ಅದರ ಬಗ್ಗೆ ವೈಚಾರಿಕ ಮತ್ತು ವೈಜ್ಞಾನಿಕವಾದ ಕೃತಿಗಳನ್ನು ರಚಿಸಿದರು. ಯಕ್ಷಗಾನ ತಂಡಗಳನ್ನು ಕಟ್ಟಿಕೊಂಡು ದೇಶ ವಿದೇಶಗಳಲ್ಲಿ ಈ ಕಲೆಯನ್ನು ಪ್ರಚುರಪಡಿಸಲು ಯತ್ನಿಸಿದರು. ಮಕ್ಕಳ ಬಗ್ಗೆ ಅಪಾರ ಪ್ರೀತಿ–ಕಾಳಜಿ ಹೊಂದಿದ್ದ ಕಾರಂತರು, ಅವರಲ್ಲಿದ್ದ ಪ್ರತಿಭೆಯನ್ನು ಅರಳಿಸಲು ಪುತ್ತೂರಿನಲ್ಲಿ 'ಬಾಲವನ' ಎಂಬ ಅಸಂಪ್ರದಾಯಿಕ ಶೈಕ್ಷಣಿಕ ಕೇಂದ್ರವನ್ನು ತೆರೆದಿದ್ದರು. ತಮ್ಮ ಪುಸ್ತಕಗಳನ್ನು ಮುದ್ರಿಸಲು ಪುತ್ತೂರಿನಲ್ಲಿ ಒಂದು ಮುದ್ರಣಾಲಯ ತೆರೆದರು. ತಮ್ಮ ಹಲವು ಕಾದಂಬರಿಗಳಿಗೆ ತಾವೇ ಮುಖಪುಟದ ಚಿತ್ರಗಳನ್ನೂ ಬರೆದು ಮುದ್ರಿಸಿದ ಬಹುಮುಖ ಪ್ರತಿಭೆ ಇವರದ್ದು!

ಬದುಕಿನ ಎಲ್ಲ ಸ್ತರಗಳನ್ನೂ ಅನುಭವಿಸಬೇಕು; ಹಾಗೆ ಅನುಭವಿಸಿದ್ದನ್ನು ಇತರರೊಂದಿಗೆ ಹಂಚಿಕೊಳ್ಳಬೇಕು ಎಂಬುದು ಕಾರಂತರ ಬದುಕಿನ ಸೂತ್ರವಾಗಿದೆ. ಹಾಗಾಗಿ ಅವರಿಗೆ ಜ್ಞಾನಶಾಖೆಗಳಲ್ಲಿ ಇದು ದೊಡ್ಡದು, ಚಿಕ್ಕದು ಎಂಬ ಭೇದವಿರಲಿಲ್ಲ. ಒಂದು ರೀತಿಯಲ್ಲಿ ಅವೆಲ್ಲ ಸತ್ಯಾನ್ವೇಷಣೆಯ ಬೇರೆ ಬೇರೆ ದಾರಿಗಳು ಎಂಬುದು ಅವರ ನಿಲುವಾಗಿತ್ತು. ಬಹುಮುಖಪ್ರತಿಭೆಯ ಕಾರಂತರು ಎಲ್ಲ ದಾರಿಗಳನ್ನು ಬಲ್ಲವರು. ಹಾಗಾಗಿ ಅವರ ಬದುಕು ಮತ್ತು ಬರೆವಣಿಗೆ ಬೇರೆಯಲ್ಲ; ಅವೆರಡು ಒಂದೇ. ಕಾರಂತರ ಲೋಕದೃಷ್ಟಿ ಅಸಾಧಾರಣವಾದದ್ದು. ಅವರ ನಿಷ್ಠೆ ಕೇವಲ ಮನುಷ್ಯ ಸಮಾಜಕ್ಕಾಗಿಯಾಗಲೀ, ಒಂದು ನಿರ್ದಿಷ್ಟ ಭೌಗೋಳಿಕ ಪರಿಸರಕ್ಕಾಗಿಯಾಗಲೀ ಸೀಮಿತವಾದುದಲ್ಲ. ಸಮಸ್ತವನ್ನೂ ಒಳಗೊಳ್ಳುವ ಹೃದಯ ಶ್ರೀಮಂತಿಕೆ ಕಾರಂತರದು. ಅವರು ಪರಿಸರ ಮಾಲಿನ್ಯದ ಬಗ್ಗೆಯಾಗಲೀ, ಪ್ರಾಕೃತಿಕ ಸಮತೋಲನದ ಬಗ್ಗೆಯಾಗಲೀ ಶಾಸ್ತ್ರೀಯವಾಗಿ ಬರೆಯುವಷ್ಟೇ ಕಾಳಜಿಯಿಂದ ಅವುಗಳನ್ನು ಕುರಿತ ಚಳವಳಿಗಳ ನೇತೃತ್ವವನ್ನು ವಹಿಸುತ್ತಿದ್ದರು. ಸಂಗೀತ, ಚಿತ್ರ, ನಟನೆ, ಪ್ರವಾಸ ಅದು ಯಾವುದೇ ವಿಷಯವಾಗಿರಲಿ ಅನುಭವಜನ್ಯವಾಗಿ ಬರದ ಹೊರತು ಅವರಿಗೆ ತೃಪ್ತಿಯಿರುತ್ತಿರಲಿಲ್ಲ. ಹೀಗಾಗಿ ವಿದ್ಯಾರ್ಥಿ, ಶಿಕ್ಷಕ, ಪಂಡಿತ ಈ ಎಲ್ಲ ಅಂಶಗಳೂ ಕಾರಂತರ ಸಮಗ್ರ ವ್ಯಕ್ತಿತ್ವದಲ್ಲಿ ಒಂದಾಗುತ್ತವೆ.

ಕಾರಂತರ ಪ್ರತಿಭೆ ಮತ್ತು ಜೀವನಾನುಭವ ಮಡುಗಟ್ಟಿ ನಿಂತಿರುವುದು ಅವರ ಕಾದಂಬರಿಗಳಲ್ಲಿ. ಅವರ ಪರಿಸರ ಪ್ರೇಮ ಅವರ ಕಾದಂಬರಿಗಳ ಉದ್ದಕ್ಕೂ ದಟ್ಟವಾಗಿ ಬಿಂಬಿಸಲ್ಪಟ್ಟಿದೆ. ಜೀವನದದುದ್ದಕ್ಕೂ ಪರಿಸರದ ಉಳಿವಿಗೆ ಹೋರಾಡಿದ ಕಾರಂತರು, ಕೈಗಾ ಅಣುವಿದ್ಯುತ್ ಸ್ಥಾವರದ ವಿರುದ್ಧ ಹೋರಾಟಕ್ಕೆ ನಾಯಕತ್ವ ವಹಿಸಿದ್ದು ಪ್ರಖ್ಯಾತವಾಗಿದೆ. ಕಿರಿಯರಿಂದ ಹಿರಿಯರವರೆಗೆ ಸಾಹಿತ್ಯ ಕೃಷಿ ಮಾಡಿದ ಕಾರಂತರು ದೇಶದ ನಿಧಿಯಾಗಿದ್ದರು. ನಾಡು, ದೇಶ, ವಿದೇಶಗಳ ಸಾಂಸ್ಕೃತಿಕ ಕೇಂದ್ರಗಳನ್ನು ಸುತ್ತುತ್ತ, ತಮ್ಮ ಕೊನೆಗಾಲದವರೆಗೂ ಪ್ರವಾಸ ಮಾಡಿದ್ದರು. ವಯಸ್ಸಿನ ದಣಿವು ಮರೆತು ಅರಿವಿನ ದಾರಿಯಲ್ಲಿ ಜನರನ್ನು ಕೊಂಡೊಯ್ದ ಕಾರಂತರು ವಿಶ್ವಪ್ರೇಮಿ, ಮಹಾಮಾನವತಾವಾದಿ ಆಗಿದ್ದರು.

ಕಾರಂತರನ್ನು ಕತೆ, ಕಾದಂಬರಿ, ವಿಜ್ಞಾನ, ಮಕ್ಕಳ ಸಾಹಿತ್ಯ ಇತ್ಯಾದಿ ವಿಭಾಗಗಳಿಗೆ ಸೀಮಿತಗೊಳಿಸಿ ನೋಡುವಂತಿಲ್ಲ. ಅವರು 'ನಡೆದಾಡುವ ವಿಶ್ವಕೋಶ'ವೇ ಆಗಿದ್ದರು. ಅವರ ನೂರಾರು ಪುಸ್ತಕಗಳಲ್ಲಿ ವೀಶ್ವಕೋಶಗಳೂ ಸೇರಿವೆ. ಅವರ ಕಲಾಪ್ರಪಂಚ ಒಂದು ಅಪೂರ್ವ ಸಾಧನೆ. ಜಾಗತಿಕ ಕಲೆಯ ಸ್ವರೂಪವನ್ನು ತಿಳಿಯಬಯಸುವವರಿಗೆ ಇದೊಂದು ಆಕರಗ್ರಂಥ.

ನಿಘಂಟು ಕ್ಷೇತ್ರದಲ್ಲೂ ಕಾರಂತರು ಗಣನೀಯ ಸೇವೆ ಮಾಡಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟು ಯೋಜನೆಯಲ್ಲಿ ಅವರು ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ೧೯೪೧ರಲ್ಲಿ ಕಾರಂತರು ಪ್ರಕಟಿಸಿದ ಸಿರಿಗನ್ನಡ ಅರ್ಥಕೋಶ ೫೬೦ ಪುಟಗಳಲ್ಲಿ ಮೂಡಿಬಂದಿದೆ. ಇದು ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ, ಸಂಶೋಧಕರಿಗೆ ಉಪಯುಕ್ತವಾದ ನಿಘಂಟಾಗಿದ್ದು ಅನೇಕ ಪ್ರಾದೇಶಿಕ ಪದಗಳನ್ನೊಳಗೊಂಡಿದೆ.

ಶಿವರಾಮಕಾರಂತರು ಸಾಹಿತ್ಯಕೃತಿಯ ಸಂಪಾದನ ಕಾರ್ಯಕ್ಕೂ ಕೈಹಾಕಿರುವುದು ಗಮನಾರ್ಹ. ಬತ್ತಲೇಶ್ವರ ಕವಿ (೧೫ನೆಯ ಶತಮಾನ) ವಿರಚಿತ ಕೌಶಿಕ ರಾಮಾಯಣವನ್ನು ಅವರು ಸಂಪಾದಿಸಿ ಪ್ರಕಟಿಸಿದ್ದಾರೆ. ಇದು ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಜನಪ್ರಿಯವಾಗಿದ್ದ ಷಟ್ಪದಿ ಛಂದಸ್ಸಿನ ಕಾವ್ಯ. ೫೨೧ ಪುಟಗಳ ಈ ಕಾವ್ಯವನ್ನು ಕಾರಂತರು ಉಗ್ರಾಣ ಮಂಗೇಶ ರಾಯರಂತಹ ಪಂಡಿತರ ನೆರವಿನಿಂದ ಪರಿಷ್ಕರಿಸಿ ೧೯೬೬ರಲ್ಲಿ ಸ್ವಂತ

ಮುದ್ರಣಾಲಯದ ಮೂಲಕ ಬೆಳಕಿಗೆ ತಂದರು. ಈ ಕೃತಿಯನ್ನು ಮತ್ತೆ ಬೆಂಗಳೂರಿನ ವಾಗ್ದೇವಿ ಗಮಕಕಲಾ ಪ್ರತಿಷ್ಠಾನದವರು ೨೦೨೩ರಲ್ಲಿ ಮರುಮುದ್ರಣ ಮಾಡಿದರು.

ಕೌಶಿಕ ರಾಮಾಯಣದ ಮುನ್ನುಡಿಯಲ್ಲಿ ಕಾರಂತರು ತಮಗೆ ಅಭಿಜಾತ ಸಾಹಿತ್ಯದ ಅನುಭವ ಹೇಗಾಯಿತೆಂಬುದನ್ನು ವಿವರಿಸಿದ್ದಾರೆ. ಯಕ್ಷಗಾನದ ಹಸ್ತಪ್ರತಿಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ತೊಡಗಿದ್ದಾಗ ೪೦೦–೫೦೦ ತಾಡವೋಲೆಗಳು ಅವರ ಗಮನಕ್ಕೆ ಬಂದುವು (ಈ ನನ್ನ ಶ್ರಮ ಸಾರ್ಥಕವಾಗಲು ಒಬ್ಬನಾದರೂ ಪೂರ್ವದ ಕವಿಯನ್ನು ಆರಿಸಿ, ಒಂದಾದರೂ ಗ್ರಂಥವನ್ನು ಪ್ರಕಟಿಸಬೇಡವೇ ಅನಿಸಿತು (ಮೊದಲ ಮಾತು).

ಕನ್ನಡ ನಾಡು–ನುಡಿಗೆ ಅಸಾಧಾರಣ ಸೇವೆ ಸಲ್ಲಿಸಿರುವ ಕಾರಂತಜ್ಜ ಕನ್ನಡಿಗರ ಹೆಮ್ಮೆ. ಅವರ ಹುಟ್ಟೂರಾದ ಉಡುಪಿ ಜಿಲ್ಲೆಯ ಸಾಲಿಗ್ರಾಮದಲ್ಲಿ 'ಕಾರಂತ ಸ್ಮೃತಿಚಿತ್ರ ಶಾಲೆ' ಎಂಬ ಕಟ್ಟಡದಲ್ಲಿ, ಕಾರಂತರಿಗೆ ಸಂಬಂಧಿಸಿದ ಹಲವಾರು ವಸ್ತುಗಳನ್ನು ಸಂಗ್ರಹಿಸಿಡಲಾಗಿದೆ. ಕಾದಂಬರಿಗಳ ಹಳೆಯ ಪ್ರತಿಗಳು ಮತ್ತು ಅವುಗಳ ಆಶಯ, ಕಾರಂತರು ಬರೆದ ಚಿತ್ರಗಳು, ದೊಡ್ಡ ದೊಡ್ಡಭಿತ್ತಿಚಿತ್ರಗಳು, ಯಕ್ಷಗಾನದ ಉಡುಗೆ ತೊಡುಗೆಗಳು, ಅವರು ಉಪಯೋಗಿಸುತ್ತಿದ್ದ ಲೇಖನಿ ಮುಂತಾದ ವಸ್ತುಗಳು ಇಲ್ಲಿವೆ. ಸಾಲಿಗ್ರಾಮದ ಅನತಿ ದೂರದಲ್ಲಿರುವ ಹೆದ್ದಾರಿಯ ಪಕ್ಕದಲ್ಲೇ ಈ ಸಂಗ್ರಹಾಲಯವಿದ್ದು, ಅದು ಕಣ್ಣಿಗೆ ಬಿದ್ದ ಕೂಡಲೇ ಮನಸ್ಸಿನಲ್ಲಿ ಕಾರಂತರ ಬಗ್ಗೆ ಅಭಿಮಾನ ಉಕ್ಕುತ್ತದೆ. ತುಂಬು ಜೀವನ ನಡೆಸಿದ ಶಿವರಾಮ ಕಾರಂತರು ೯ ಡಿಸೆಂಬರ್ ೧೯೯೭ರಂದು ನಿಧನರಾದರು.

ಗ್ರಂಥ ಋಣ

- ಮಾಲಿನಿ ಮಲ್ಯ. ಶಿವರಾಮ ಕಾರಂತ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೧.
- ಯಕ್ಷಗಾನ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೪.
- ಕೌಶಿಕ ರಾಮಾಯಣ, ವಾಗ್ದೇವಿ ಗಮಕಕಲಾ ಪ್ರತಿಷ್ಠಾನ, ಬೆಂಗಳೂರು, ೨೦೨೩.

❐ ❐ ❐

ಎಸ್. ಶ್ರೀಕಂಠಶಾಸ್ತ್ರಿ

(೧೯೦೪-೧೯೭೪)

ಬಿ. ವೆಂಕಟರಾಮಣ್ಣ

ಶ್ರೀಕಂಠಶಾಸ್ತ್ರಿಗಳು ವಿದ್ವಾಂಸರು, ಬಹುಭಾಷಾಪಂಡಿತರು, ಇತಿಹಾಸ, ಸಾಹಿತ್ಯ, ಸಂಸ್ಕೃತಿ ಇತ್ಯಾದಿ ಕ್ಷೇತ್ರಗಳಲ್ಲಿ ಗಣ ನೀಯವಾದ ಸೇವೆಸಲ್ಲಿಸಿದವರು. ಇತಿಹಾಸ ಸಂಸ್ಕೃತಿಗಳನ್ನು ಕುರಿತಂತೆ ಇವರು ಮಾಡಿರುವ ಸಂಶೋಧನೆ ಫ್ಲೀಟ್, ಭಂಡಾರ್ಕರ್ ಮತ್ತು ನರಸಿಂಹಾಚಾರ್ ಮೊದಲಾದವರ ಪರಂಪರೆಗೆ ಸೇರುವಂ ತಹದು. ಶ್ರೀಕಂಠಶಾಸ್ತ್ರಿಗಳು ೧೯೦೪ ನವೆಂಬರ್ ೫ರಂದು ನಂಜನಗೂಡಿನಲ್ಲಿ ಜನಿಸಿದರು. ಇವರ ಪೂರ್ಣ ಹೆಸರು ಸೊಂಡೆಕೊಪ್ಪ ಶ್ರೀಕಂಠಶಾಸ್ತ್ರಿ. ಇವರು ಎಸ್.ವಿ. ಕೃಷ್ಣಸ್ವಾಮಿ ಅಯ್ಯಂಗಾರ್, ಜೆ.ಸಿ.ರೋಲೋ, ಬಿ.ಎಂ.ಶ್ರೀಕಂಠಯ್ಯ, ಎಂ.ಎಚ್. ಕೃಷ್ಣ, ಎ.ಆರ್.ಕೃಷ್ಣಶಾಸ್ತ್ರಿ ಮೊದಲಾದ ಹೆಸರಾಂತ ಗುರುಗಳ ಗರಡಿಯಲ್ಲಿ ಬೆಳೆದವರು. ನವೋದಯ ಸಂದರ್ಭ ಇವರ ಅಧ್ಯಯನಕ್ಕೆ ಹಿನ್ನೆಲೆಯಾಗಿತ್ತು. ಜರ್ಮನಿಯ ಇತಿಹಾಸತಜ್ಞ ಅಸ್ವಾಲ್ಡ್ ಸ್ಪೆಂಗ್ಲರ್ ಮತ್ತು ಇಂಗ್ಲೆಂಡಿನ ಇತಿಹಾಸಕಾರ ಟಾಯ್ನ್‌ಬಿ ಅವರು ಮಾನವ ಸಂಸ್ಕೃತಿ ಅನಿವಾರ್ಯ ವಾಗಿ ನಾಶಹೊಂದ ಬೇಕಾಗುತ್ತದೆ ಎಂಬ ವಾದವನ್ನು ಪ್ರತಿಪಾದಿಸಿದಾಗ ಶ್ರೀಕಂಠ ಶಾಸ್ತ್ರಿಗಳು ಭಾರತೀಯ ಸಂಸ್ಕೃತಿಯ ಅನನ್ಯತೆ ಮತ್ತು ಜೀವಂ ತಿಕೆಯನ್ನು ಎತ್ತಿ ತೋರಿಸಿ ಅದು ಇತರ ಸಂಸ್ಕೃತಿಗಳ ಹಾಗೆ ನಾಶ ಹೊಂದುವಂಥದ್ದಲ್ಲವೆಂದು ಬಲವಾಗಿ ಸಮರ್ಥಿಸಿದರು.

ಭಾರತೀಯ ಸಂಸ್ಕೃತಿಯ ಬಗ್ಗೆ ಅವರಿಗೆ ವಿಶೇಷ ಅಭಿಮಾನವಿತ್ತು. ಶ್ರೀಕಂಠಶಾಸ್ತ್ರಿಗಳು ತಮ್ಮ ಅಭಿಪ್ರಾಯವನ್ನು ಸಾದರಪಡಿಸಲು ಜಗತ್ತಿನ ಬೇರೆ ಬೇರೆ ಸಂಸ್ಕೃತಿಗಳನ್ನು ಅಭ್ಯಸಿಸಿ, ಆಕರಗಳನ್ನು ಸಂಗ್ರಹಿಸಿ, ಒಂದಕ್ಕೊಂದನ್ನು ಹೋಲಿಸಿ ಅವುಗಳಲ್ಲಿಯ ಸಾಮ್ಯವೈಷಮ್ಯಗಳನ್ನು ಗುರುತಿಸಿ ಇತರ ಸಂಸ್ಕೃತಿಗಳಿಗಿಂತ ಭಾರತೀಯ ಸಂಸ್ಕೃತಿಯೇ ಪ್ರಾಚೀನವೆಂದು ಸಾಧಿಸಿ ತೋರಿಸುವ ಪ್ರಯತ್ನ ಮಾಡಿದ್ದಾರೆ.

ಶ್ರೀಕಂಠಶಾಸ್ತ್ರಿಗಳ ಹಿರಿಯರು ಬೆಂಗಳೂರು ಜಿಲ್ಲೆ (ಅಂದಿನ ನೆಲಮಂಗಲ) ತಾಲೂಕಿನ ಸೊಂಡೆಕೊಪ್ಪ ಗ್ರಾಮದವರು. ತಂದೆ ಸರ್ಕಾರಿ ನೌಕರಿಯಲ್ಲಿದ್ದುದರಿಂದ ಊರಿಂದೂರಿಗೆ ವರ್ಗವಾಗುತ್ತಿತ್ತು. ಹಾಗಾಗಿ ಶಾಸ್ತ್ರಿಗಳು ಶಿಕ್ಷಣವನ್ನು ಬೇರೆ ಬೇರೆ ಊರುಗಳಲ್ಲಿ ಪೂರೈಸಿದರು. ಚಿಕ್ಕಬಳ್ಳಾಪುರದಲ್ಲಿ ಪ್ರಾಥಮಿಕ ಶಿಕ್ಷಣ, ಅನಂತರ ಕೋಲಾರ, ಬೆಂಗಳೂರಿನಲ್ಲಿ ಪ್ರೌಢಶಿಕ್ಷಣ ಪೂರೈಸಿ, ಮೈಸೂರು ವಿಶ್ವವಿದ್ಯಾ ನಿಲಯದಿಂದ ಬಿ.ಎ., ಎಂ.ಎ. ಪದವಿಗಳನ್ನು ಗಳಿಸಿದರು. ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ ಇತಿಹಾಸ, ಸಂಸ್ಕೃತಿ ಕುರಿತು ವಿದ್ವತ್ಪೂರ್ಣ ಲೇಖನಗಳನ್ನು ಬರೆದಿದ್ದರು. ಅವು ಲಂಡನ್ನಿನ IRAS ಪತ್ರಿಕೆ, Indian Antiquary, Modern Review ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದುವು.

ಕರ್ನಾಟಕ ಇತಿಹಾಸದ ಸಂಶೋಧನೆಗಾಗಿ ಶಾಸ್ತ್ರಿಗಳಿಗೆ ೧೯೨೭–೨೮ರಲ್ಲಿ ತಿಂಗಳಿಗೆ ೭೫ ರೂಪಾಯಿ ದೊರೆಯುತ್ತಿತ್ತು. ಈ ಅವಧಿಯಲ್ಲಿ ಕನ್ನಡನಾಡಿನ ಇತಿಹಾಸಕ್ಕೆ ಅಗತ್ಯವಾದ ಆಕರ ಸಾಮಗ್ರಿಗಳನ್ನು ಸಂಗ್ರಹಿಸಲು ನಿರಂತರವಾಗಿ ಮೂರು ವರ್ಷ ಆ ಸಂಸ್ಥೆಯಲ್ಲಿ ದುಡಿದರು. ಈ ಪ್ರಯತ್ನದ ಫಲವಾಗಿ Sources of Karnataka History ಎಂಬ ಗ್ರಂಥ ಹೊರಬಂತು. ಶ್ರೀಕಂಠಶಾಸ್ತ್ರಿಗಳಿಗೆ ಹೆಸರನ್ನೂ ಕೀರ್ತಿಯನ್ನೂ ತಂದ ಈ ಗ್ರಂಥದಲ್ಲಿ ನೃಪತುಂಗ, ಪಂಪ, ಚಾವುಂಡರಾಯ, ಪೊನ್ನ, ರನ್ನ, ಚಂದ್ರರಾಜ, ದುರ್ಗಸಿಂಹ, ನಾಗವರ್ಮ(I,II), ಚಾವುಂಡರಾಯ(II), ನಾಗವರ್ಮಾಚಾರ್ಯ, ಶ್ರೀಧರಾಚಾರ್ಯ, ಕೀರ್ತಿ ವರ್ಮ, ನಯಸೇನ, ಬಸವಣ್ಣ, ಗುಣವರ್ಮ ಇವರ ಕೃತಿಗಳನ್ನು ಐತಿಹಾಸಿಕ ದೃಷ್ಟಿಕೋನದಿಂದಲೇ ಗ್ರಹಿಸಿದ್ದಾರೆ ಎಂಬುದು ನಿಚ್ಚಳವಾಗಿ ತಿಳಿದುಬರುತ್ತದೆ.

ಪ್ರಾಚೀನ ಕನ್ನಡ ಕೃತಿಗಳನ್ನು ಮೂಲದಲ್ಲಿಯೇ ಅಧ್ಯಯನ ಮಾಡಿ ವಿಶ್ಲೇಷಿಸಿರುವುದರಿಂದ ಆಯಾ ಕವಿಯ ಕಾಲ, ಜೀವನ, ಆಶ್ರಯ ಮೊದಲಾದ ಸಂಗತಿಗಳನ್ನು ಗ್ರಹಿಸಲು ಉತ್ತಮ ಆಕರವಾಗುತ್ತದೆ. ಪ್ರಾಚೀನ ರಾಜವಂಶಗಳು, ದೊರೆಗಳು, ವಂಶಾನುಕ್ರಮಣಿಕೆ, ಅವರ ಬಿರುದುಗಳು, ಪ್ರಾಚೀನ ಕವಿಗಳು ಮತ್ತು ಕೃತಿಗಳು ಎಲ್ಲವನ್ನು ಕ್ರಮಬದ್ಧವಾಗಿ ದಾಖಲಿಸಿದ್ದಾರೆ. ಟಿಪ್ಪಣಿಗಳನ್ನು ಇಂಗ್ಲಿಷ್ ಭಾಷೆಯಲ್ಲಿ ಕೊಟ್ಟಿರುವುದರಿಂದ ಅವು ಸಾರಾಂಶ ರೂಪದಲ್ಲಿವೆ.

ಶಾಸ್ತ್ರಿಗಳು ೧೯೩೦–೩೫ರ ಅವಧಿಯಲ್ಲಿ ಟ್ಯೂಟರ್ ಆಗಿದ್ದವರು, ಅನಂತರ ಮಹಾರಾಜ ಕಾಲೇಜಿನಲ್ಲಿ ಇತಿಹಾಸ ಅಧ್ಯಾಪಕ ರೆಂದು ನೇಮಕಗೊಂಡರು. ಬಿ.ಎ.ವಿದ್ಯಾರ್ಥಿಗಳಿಗೆ ಇತಿಹಾಸ ಮತ್ತು ಸಂಸ್ಕೃತಿ ಪಾಠಗಳನ್ನು ಬೋಧಿಸುತ್ತಿದ್ದರು. ಸುಮಾರು ೨೫ ವರ್ಷಗಳ ಕಾಲ ಶಾಸ್ತ್ರಿಗಳು ಇತಿಹಾಸ ಅಧ್ಯಾಪಕರಾಗಿ ಕಾರ್ಯನಿರ್ವಹಿಸಿದರು. ೧೯೫೫ಳ ರಿಂದ ಆರು ವರ್ಷಗಳ ಕಾಲ ಮೈಸೂರು ವಿಶ್ವವಿದ್ಯಾನಿಲಯದ ಇತಿಹಾಸ ವಿಭಾಗದ ಪ್ರಾಧ್ಯಾಪಕರಾಗಿ, ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿ, ೧೯೬೦ ರಲ್ಲಿ ಸೇವೆಯಿಂದ ನಿವೃತ್ತರಾದರು.

ಬಹುಭಾಷಾವಿಶಾರದರಾದ ಶಾಸ್ತ್ರಿಗಳು ಆಯಾ ದೇಶ, ಭಾಷೆಗಳ ಇತಿಹಾಸ, ಸಂಸ್ಕೃತಿಗೆ ಸಂಬಂಧಿಸಿದ ಆಕರಗಳನ್ನು ಶೋಧಿಸುವುದರಲ್ಲಿ ಆಸಕ್ತಿ ಯುಳ್ಳವರಾಗಿದ್ದರು. ಹಲವು ಭಾಷೆಗಳಲ್ಲಿ ರಚನೆಯಾಗಿರುವ ಗ್ರಂಥಗಳನ್ನು ಅಧ್ಯಯನ ಮಾಡಿ, ಇತಿಹಾಸತಜ್ಞರ ಅಭಿಪ್ರಾಯಗಳನ್ನು ಸಂಗ್ರಹಿಸಿ, ಚರ್ಚೆಯ ವಿಷಯಗಳನ್ನು ಎತ್ತಿಕೊಂಡು ಅವುಗಳ ಬಗ್ಗೆ ತಮ್ಮದೇ ಆದ ಸಿದ್ಧಾಂತವನ್ನು ಮಂಡಿಸುತ್ತಿದ್ದರು. ಅಜ್ಞಾತ ಮೂಲದ ಅತ್ಯಮೂಲ್ಯ ಸಾಮಗ್ರಿಯನ್ನು ಸಂಗ್ರಹಿಸುವ ಹವ್ಯಾಸ ಅವರದಾಗಿತ್ತು.

ಶಾಸ್ತ್ರಿಗಳು ಭಾರತೀಯ ಸಂಸ್ಕೃತಿಯನ್ನು ಕುರಿತು ವಿಶೇಷ ಒಲವನ್ನು ಹೊಂದಿದ್ದರು. ಪುರಾತತ್ವ ಶೋಧದ ಸಂದರ್ಭದಲ್ಲಿ ದೊರೆತ ಸಾಧನಸಾಮಗ್ರಿಗಳು ಹೇಳುವ ವಿಚಾರಗಳಿಂದ ಪ್ರಾಚೀನ ಸಂಸ್ಕೃತಿಯ ಬಗ್ಗೆ ಹೊಸ ಸಂಗತಿಗಳು ಪ್ರಕಟಗೊಳ್ಳುತ್ತಿದ್ದುವು. ಅವುಗಳ ಅಧ್ಯಯನದಿಂದ ಹಿಂದಿನ ವಿವರಗಳನ್ನು ಪರಿಶೀಲಿಸುವ, ಚರ್ಚಿಸುವ, ಪರಿಷ್ಕರಿಸುವ ಕಾರ್ಯವು ನಡೆಯಿತು. ಈ ಸಂದರ್ಭದಲ್ಲಿ ಶಾಸ್ತ್ರಿಗಳಿಗೆ ಭಾರತೀಯ ಸಂಸ್ಕೃತಿಗೆ ಸಂಬಂಧಿಸಿದಂತೆ ಕೆಲವು ಪ್ರಶ್ನೆಗಳು ಎದುರಾದುವು. ಹರಪ್ಪ ಸಂಸ್ಕೃತಿಯ ಕಾಲ ಯಾವುದು? ಅದಕ್ಕಿಂತ ಮೊದಲು ಈ ನೆಲದಲ್ಲಿ ಇನ್ಯಾವ ಸಂಸ್ಕೃತಿಗಳು ನೆಲಸಿದ್ದವು? ಅವುಗಳ ಭೌಗೋಳಿಕ ವಿಸ್ತಾರವೇನು? ಜನಾಂಗ ಯಾವುದು? ಆರ್ಯ–ದ್ರಾವಿಡ ಸಮಸ್ಯೆಯ ಸ್ವರೂಪವೇನು? ಸಂಸ್ಕೃತಿ ನಾಶಕ್ಕೆ ಒದಗಿದ್ದ ಆಪತ್ತುಗಳೇನು ಮೊದಲಾದ ವಿಷಯಗಳ ಬಗೆಗೆ ರೂಪಾಲಿನಲ್ಲಿ ನಡೆಸಿದ ಶೋಧಗಳು, ಸೌರಾಷ್ಟ್ರದ ರಂಗಪುರ ಶೋಧ, ಅಲ್ಲಲ್ಲಿಯ ಉತ್ಖನನದಿಂದ ದೊರೆತ ಕುಂಭಗಳು, ಅವುಗಳ ಆಕಾರ, ಬಣ್ಣ, ಇತರ ಚಿತ್ರಗಳು, ನಗರ ನಿರ್ಮಾಣ ಪದ್ಧತಿ, ಅಂದಿನ ಜನರು ಬಳಸುತ್ತಿದ್ದ

ಸಾಮಗ್ರಿಗಳು, ಅವರು ಉಪ ಯೋಗಿಸುತ್ತಿದ್ದ ಆಭರಣಗಳು, ಮುದ್ರೆಗಳು, ಲಿಪಿ, ಆರಾಧನೆ ಇತ್ಯಾದಿಗಳನ್ನು ಆಧರಿಸಿ ಇವುಗಳನ್ನೆಲ್ಲ ಇತರ ಸಂಸ್ಕೃತಿಗಳ ಅವಶೇಷ ಗಳೊಂದಿಗೆ ಹೋಲಿಸಿ ತಮ್ಮದೇ ಆದ ಸಿದ್ಧಾಂತ ಮಂಡಿಸಿದರು. ಮೊಹೆಂಜೊ ದಾರೊ ಸಂಸ್ಕೃತಿಗಿಂತ ಹರಪ್ಪ ಸಂಸ್ಕೃತಿ ಪ್ರಾಚೀನ. ಹರಪ್ಪ ಸಂಸ್ಕೃತಿಗಿಂತ ನಾಲ್ ನಂದಾರ್ ಸಂಸ್ಕೃತಿ ಪ್ರಾಚೀನ. ಅದಕ್ಕಿಂತ ಋಗ್ವೇದಸಂಸ್ಕೃತಿ (ಕ್ರಿ.ಪೂ.೧೦,೦೦೦) ಪ್ರಾಚೀನ. ಅದು ಶಿಲಾಯುಗವಾದ್ದರಿಂದ ಹರಪ್ಪ ಸಂಸ್ಕೃತಿಗಿಂತ ಬಹಳ ಪ್ರಾಚೀನ. ಹರಪ್ಪ ಸಂಸ್ಕೃತಿ ತೈತ್ತಿರೀಯ ಸಂಹಿತೆಯ ಕಾಲಕ್ಕಿಂತ ಆಧುನಿಕವಾದ ಆರಂಭಕಾಲದ ಸಂಸ್ಕೃತಿಯಾಗಿದ್ದು ಪಾಶ್ಚಾತ್ಯ ದೇಶಗಳಿಗೆ ಹೋಗಿ ಮಧ್ಯಪ್ರಾಚ್ಯ ದೇಶಗಳಲ್ಲೆಲ್ಲ ಕ್ರಿ.ಪೂ.೨೫೦೦ ರಲ್ಲಿ ಪ್ರಭಾವಶಾಲಿಯಾಗಿದ್ದಿತು. ಇದು ಭಾರತೀಯ ಸಂಸ್ಕೃತಿ, ಆರ್ಯ ಸಂಸ್ಕೃತಿ ಎಂದು ನಿರ್ಧರಿಸ ಬಹುದು(ಎಸ್.ಶ್ರೀಕಂಠಶಾಸ್ತ್ರಿ, ಭಾರತೀಯ ಸಂಸ್ಕೃತಿಯ ವ್ಯಾಪ್ತಿ, ಸಂಶೋಧನ ಲೇಖನಗಳು, ಸಂ. ಬಾ.ರಾ. ಗೋಪಾಲ್, ಟಿ.ವಿ. ವೆಂಕಟಾಚಲಶಾಸ್ತ್ರೀ, ಪು.೨೮, ೧೯೭೫). ಜಗತ್ತಿನಲ್ಲಿಯೇ ಭಾರತೀಯಸಂಸ್ಕೃತಿ ಪ್ರಾಚೀನವೆಂಬುದನ್ನು ಅದು ಆರ್ಯಸಂಸ್ಕೃತಿಯಾಗಿ ತ್ತೆಂಬುದು ಅವರ ವಾದವಾಗಿತ್ತು.

''ಹರಪ್ಪ ಸಂಸ್ಕೃತಿಯು ಸುಮೇರಿಯನ್ ಸಂಸ್ಕೃತಿಯ ಅನುಕೃತಿ ಎಂಬ ವಾದವನ್ನು ತಿರಸ್ಕರಿಸುವಂತೆ, ದ್ರಾವಿಡ ಸಂಸ್ಕೃತಿ ಎಂಬ ವಾದವನ್ನು ತಳ್ಳಿಹಾಕುತ್ತಾರೆ. ದಕ್ಷಿಣ ಭಾರತದಲ್ಲಿ ಹರಪ್ಪ ಸಂಸ್ಕೃತಿಯ ಕುರುಹುಗಳು ಸಿಕ್ಕಿಲ್ಲ. ದ್ರಾವಿಡ ಭಾಷೆ ಸಾಹಿತ್ಯದ ಇತಿಹಾಸ ಕ್ರಿ.ಶ.೩ನೆಯ ಶತಮಾನದಿಂದ ಆರಂಭವಾಗುತ್ತದೆ. ಆದ್ದರಿಂದ ಕ್ರಿ.ಪೂ.೫೦೦೦ದ ಹರಪ್ಪ ಸಂಸ್ಕೃತಿಯು ಆರ್ಯ ಸಂಸ್ಕೃತಿಯಾಗಿತ್ತೇ ಹೊರತು ದ್ರಾವಿಡ ಸಂಸ್ಕೃತಿಯಾಗಿರಲಿಲ್ಲ ಎಂದು ವಾದಿಸುತ್ತಾರೆ. ಆದರೆ ದ್ರಾವಿಡವು ಭಾಷೆಯೇ ಹೊರತು ಜನಾಂಗವಲ್ಲ, ಸಂಸ್ಕೃತಿಯಲ್ಲ ಎಂಬ ಶಾಸ್ತ್ರಿಗಳ ವಾದ ತುಂಬಾ ದುರ್ಬಲವಾಗಿದೆ''(ಮಹಾಮಾರ್ಗ, ಪು.೫೮೪) ಎಂದು ರಾಮಕೃಷ್ಣ ಮರಾಠೆ ಅವರು ಅಭಿಪ್ರಾಯಪಟ್ಟಿದ್ದಾರೆ.

ಸಂಸ್ಕೃತಿಅಧ್ಯಯನ ಕುರಿತ ಶಾಸ್ತ್ರಿಗಳ ಇನ್ನೊಂದು ಚಿಂತನೆ, ಆಚರಣೆ ಮತ್ತು ಸಂಸ್ಕೃತಿಗಳನ್ನು ಕುರಿತದ್ದಾಗಿದೆ. ಕಾಲಗಣನೆಯ ಕ್ರಮ, ಹಬ್ಬಗಳ ಆಚರಣೆಯ ಹಿನ್ನೆಲೆ, ತಾಂತ್ರಿಕ ಉಪಾಸನೆಯಲ್ಲಿ ಚಿಹ್ನೆಗಳಿಗಿರುವ ಅರ್ಥ ಇಂತಹ ಹಲವಾರು ವಿಷಯಗಳ ಕುರಿತಾದ ಲೇಖನಗಳು ಇದರಲ್ಲಿವೆ.

Sources of Karnataka History–1 ಇದು ಶಾಸ್ತ್ರಿಗಳ ಮೊದಲ ಸಂಶೋಧನ ಗ್ರಂಥ. ೧೯೩೦ರಲ್ಲಿ ಸಿದ್ಧವಾದರೂ ಪ್ರಕಟವಾದದ್ದು ೧೯೪೦ರಲ್ಲಿ. ಕರ್ನಾಟಕ ಇತಿಹಾಸ ಸಂಸ್ಕೃತಿಗಳ ಅಧ್ಯಯನಕ್ಕೆ ಆಕರಗಳಾದ ಸಾಹಿತ್ಯ ಕೃತಿಗಳು, ವಿದೇಶಿ ಯಾತ್ರಿಕರ ಬರೆವಣಿಗೆಗಳನ್ನು ಈ ಕೃತಿಯಲ್ಲಿ ಸಂಗ್ರಹಿಸಿ ಕೊಟ್ಟಿದ್ದಾರೆ. ಕರ್ನಾಟಕದ ಅಸ್ತಿತ್ವವನ್ನು ಶಾಸ್ತ್ರಿಗಳು ಶಿಲಾಯುಗದ ಸಂಸ್ಕೃತಿಯಿಂದಲೇ ಗುರುತಿಸಲು ಯತ್ನಿಸಿದ್ದಾರೆ. ಕೋಟ್ಯಂತರ ವರ್ಷಗಳ ಹಿಂದೆ ದಕ್ಷಿಣ ಆಫ್ರಿಕಾ ಮತ್ತು ಆಸ್ಟ್ರೇಲಿಯಾದವರೆಗೂ ವ್ಯಾಪಿಸಿದ್ದ 'ಗೊಂಡ್ವಾನ' ಎಂಬ ಭೂಭಾಗವಿದ್ದಿತೆಂದು ಹೇಳಿದ್ದಾರೆ. ನಂದ ಮೌರ್ಯರ ಕಾಲದಿಂದ ಸ್ವತಂತ್ರ ಭಾರತದವರೆಗಿನ ಕರ್ನಾಟಕದಲ್ಲಿ ಆಳಿದ ಅರಸರು, ಮಾಡಿದ ಯುದ್ಧಗಳು ಮತ್ತು ಆಯಾ ಕಾಲದ ಧರ್ಮ, ಕಲೆ, ಸಂಸ್ಕೃತಿಗಳ ಸಂಕ್ಷಿಪ್ತ ನೋಟವನ್ನು 'ಕನ್ನಡ ನಾಡಿನ ಚರಿತ್ರೆ' ಎಂಬ ಲೇಖನದಲ್ಲಿ ಒದಗಿಸಿದ್ದಾರೆ. ಮೈಸೂರು ಭಾಗವು ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಮಹಾರಾಜರ ಆಶ್ರಯದಲ್ಲಿ ಹಾಗೂ ಉತ್ತರ ಕರ್ನಾಟಕ ಲೋಕಮಾನ್ಯ ತಿಲಕ್‌ರ ಹಾದಿಯಲ್ಲಿ ಹೇಗೆ ಹೋರಾಟ ತೀವ್ರಗೊಳಿಸಿದವು ಎಂಬುದನ್ನು ಕುರಿತಾಗಿಯೂ ವಿವರವಾಗಿ ದಾಖಲಿಸಿದ್ದಾರೆ.

ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಶಾಸ್ತ್ರಿಗಳ ಹಲವು ಬಿಡಿ ಬರೆಹಗಳಿವೆ. 'ಬಸವೇಶ್ವರ' ಎಂಬ ಲೇಖನದಲ್ಲಿ ಬಸವಣ್ಣನವರು ಕರ್ನಾಟಕದ ಇತಿಹಾಸದಲ್ಲಿ ಕಾಣಿಸಿಕೊಳ್ಳುವ ಹಲವರು ಬಿಜ್ಜಳರಲ್ಲಿ ಯಾರ ಆಸ್ಥಾನದಲ್ಲಿದ್ದರೆಂಬ ವಿಚಾರ ಕುರಿತು ಚರ್ಚಿಸಿದ್ದಾರೆ. ಕೆಲವು ಶಾಸನಗಳನ್ನು ಮತ್ತು ಜೈನ ಗ್ರಂಥಗಳನ್ನು ಆಧರಿಸಿ ಬಸವಣ್ಣನವರು ಕಳಚೂರಿ ಬಿಜ್ಜಳನ ಆಸ್ಥಾನದಲ್ಲಿ ಇದ್ದಿರಲಾರರು. ರಾಯ ಮುರಾರಿ ಸೋಯಿದೇವನ ಪಾದಪದ್ಮೋಪಜೀವಿಯೂ ಸಿಂಧ್ ವಂಶದವನೂ ಮಂಗಳವಾಡೆ ರಾಜಧಾನಿಯಾಗಿ ತರಿಕಾಡು ಪ್ರದೇಶವನ್ನು ಆಳುತ್ತಿದ್ದವನೂ ಆದ ಬಿಜ್ಜಣ್ಣವೆಂಬುವನ ಆಸ್ಥಾನದಲ್ಲಿ ಇದ್ದಿರಬೇಕು ಎಂಬುದಾಗಿ ವಾದಿಸಿದ್ದಾರೆ. ಆದರೆ ಈ ವಿಷಯದಲ್ಲಿ ಮತ್ತೆ ಮುಂದುವರಿದಿರುವ ವಿದ್ವಾಂಸರು 'ಕಳಚೂರಿ ಬಿಜ್ಜಳನೇ ಬಸವಣ್ಣನವರ ಬಿಜ್ಜಳ' ಎಂದು ಅನಂತರದಲ್ಲಿ ಭಾವಿಸಿರುವುದು (ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ, ಪು.೪೫೬–೫೭) ಕಂಡುಬರುತ್ತದೆ.

ಶ್ರೀಕಂಠಶಾಸ್ತ್ರಿಗಳು ಬರೆದ ಪುಸ್ತಕಗಳು ಹಾಗೂ ಲೇಖನಗಳನ್ನು ಅವಲೋಕಿಸಿದರೆ ಅವರ ಅಧ್ಯಯನವು ಕೇವಲ ಇತಿಹಾಸಕ್ಕೆ ಮಾತ್ರ ಸೀಮಿತವಾಗಿರಲಿಲ್ಲವೆಂಬುದು ವೇದ್ಯವಾಗುತ್ತದೆ. ಶಾಸನಶಾಸ್ತ್ರ, ಪುರಾತತ್ವ, ಜ್ಯೋತಿಷ, ಸಾಹಿತ್ಯ,

ಸಂಗೀತ, ಧರ್ಮ, ಸಂಸ್ಕೃತಿ, ಚಿತ್ರಕಲೆ, ವಾಸ್ತುಶಾಸ್ತ್ರ, ಮೂರ್ತಿಶಿಲ್ಪ, ಅಲಂಕಾರಶಾಸ್ತ್ರ, ನಾಟಕ, ವಿಮರ್ಶೆ ಇತ್ಯಾದಿ ಅನೇಕ ಕ್ಷೇತ್ರಗಳನ್ನು ಅವರ ಬರೆವಣಿಗೆ ಒಳಗೊಂ ಡಿರುತ್ತದೆ.

'ಸಂಶೋಧಕರ ದೃಷ್ಟಿಯಲ್ಲಿ ಪುರಂದರದಾಸರು' ಎಂಬ ಲೇಖನದಲ್ಲಿ ಪುರಂದರದಾಸರ ವಿಷಯದಲ್ಲಿ ಪ್ರಚಲಿತವಿದ್ದ ಅನೇಕ ಐತಿಹ್ಯಗಳನ್ನು ಪ್ರಶ್ನಿಸುತ್ತಾರೆ. ತಮ್ಮ ಬರೆಹದಲ್ಲಿ ಪುರಂದರದಾಸರ ಮನೋಭೂಮಿಕೆಯನ್ನೇ ಒಳಹೊಕ್ಕು ನೋಡಿ, ಅದಕ್ಕೂ ವಿಜಯನಗರದ ಪತನಕ್ಕೂ ಒಂದು ಬಗೆಯ ಸಂಬಂಧವನ್ನು ಕಲ್ಪಿಸುತ್ತಾರೆ. ಇದಕ್ಕೆ ಪೂರಕ ಮಾಹಿತಿಯನ್ನು ಒದಗಿಸುತ್ತಾರೆ. 'ಅನ್ನಮಾಚಾರ್ಯ ಚರಿತ್ರ' ಎಂಬ ತೆಲುಗು ಕೃತಿಯನ್ನು ಮುಖ್ಯ ಆಧಾರವಾಗಿಟ್ಟುಕೊಂಡು ಬರೆದ 'ಪುರಂದರದಾಸ' ಲೇಖನವು ಆ ಕಾಲದಲ್ಲಿ ಕರ್ನಾಟಕ ಸಂಗೀತ ಹಾಗೂ ಕೀರ್ತನೆ, ಉಗಾಭೋಗ ಸಾಹಿತ್ಯಕ್ಕೆ ಪುರಂದರ ದಾಸರಿಂದ ಸಂದ ಸೇವೆಯನ್ನು ಕುರಿತಂತೆ ಹೊಸ ಬೆಳಕನ್ನು ಚೆಲ್ಲಿದಂತಾಯಿತು.

ಹಿರಿಯ ವಚನಕಾರ ದೇವರ ದಾಸಿಮಯ್ಯನ ಕಾಲ ಮತ್ತು ಜೀವನಕ್ಕೆ ಸಂಬಂಧಿಸಿದ ಆಕರಗಳನ್ನು ಶೋಧಿಸಿ ಬರೆದ ಲೇಖನ 'ದೇವರ ದಾಸಿಮಯ್ಯ' ಸುಮಾರು ೫೩ ಪುಟಗಳಷ್ಟು ವಿಸ್ತಾರವಾಗಿದೆ. ಇದರಲ್ಲಿ ಜಯಸಿಂಹ, ಸುಗ್ಗಲೆ, ಪೊಟ್ಟಲಕೆರೆ ಸಂಬಂಧ ಪಡೆದ ಮೊದಲು ದಾಸಿಮಯ್ಯನ ಸಂಬಂಧವಾದ ಕಥೆಗಳು ಹುಟ್ಟಿ ಬಿಜ್ಜಳನ ಹಿರಿಯ ಸಮಕಾಲೀನನಾದ ದೇವರ ದಾಸಿಮಯ್ಯನಿಗೆ ಅನ್ವಯಿಸ ಲ್ಪಟ್ಟವೆಂದು ತಾತ್ಕಾಲಿಕವಾಗಿ ಹೇಳಬಹುದು ಎಂದಿದ್ದಾರೆ.

ಕುಮುದೇಂದು ಕವಿ ರಚಿಸಿರುವ 'ಸಿರಿಭೂವಲಯ' ಎಂಬ ಕುತೂಹಲಕರ ಅಂಕ ನಿಬದ್ಧವಾದ ಕಾವ್ಯದ ಮೇಲೆ ಲೇಖನಗಳನ್ನು ಶ್ರೀಕಂಠಶಾಸ್ತ್ರಿಗಳು ಬರೆದಿದ್ದಾರೆ. ಗ್ರಂಥದ ೧-೨ನೆಯ ಭಾಗಗಳ ಬಗ್ಗೆ ವಿಸ್ತಾರವಾಗಿ ಚರ್ಚಿಸಿದ್ದಾರೆ. ಧವಳ ಗ್ರಂಥಗಳು, ಅವುಗಳ ಕರ್ತೃಗಳು ಮತ್ತು ಟೀಕೆಗಳು ಸಿರಿಭೂವಲಯದ ಕಾಲ, ವಸ್ತು ಮತ್ತು ಪ್ರಶಸ್ತಿ ಇತ್ಯಾದಿ ಸಂಗತಿಗಳನ್ನು ಕುರಿತಾಗಿ ಪರಿಚಯಿಸಿದ್ದಾರೆ.

೧೯೫೦ರಲ್ಲಿ ರಕ್ತದ ಒತ್ತಡ, ಪಾರ್ಶ್ವವಾಯುಗಳಿಂದ ಅವರು ದೈಹಿಕ ಸ್ವಾಸ್ಥ್ಯವನ್ನು ಕಳೆದುಕೊಂಡರು. ಓದು, ಬರೆಹ ಮಾತ್ರ ನಿರಂತರವಾಗಿ ಮುಂದುವ ರಿದಿತ್ತು. ಅವರು ಬರೆಯುತ್ತಿದ್ದ ಸಂಶೋಧನ ಲೇಖನಗಳು ನಾಡಿನ-ರಾಷ್ಟ್ರದ

ವಿದ್ವತ್ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದುವು. ಶಾಸ್ತ್ರಿಗಳಲ್ಲಿರುವ ಸೇವೆಯನ್ನು ಗುರುತಿಸಿ ಅವರ ವಿದ್ಯಾರ್ಥಿಗಳು, ಗೆಳೆಯರು ಸೇರಿ ೧೯೭೩ ಜನವರಿ ತಿಂಗಳಲ್ಲಿ 'ಶ್ರೀಕಂಠಿಕಾ' ಎಂಬ ಗೌರವ ಸಂಪುಟವನ್ನು ಅರ್ಪಿಸಿದರು. ಅದೇ ಸಂದರ್ಭದಲ್ಲಿ ಅವರು ಬರೆದಿರುವ ಎಲ್ಲಾ ಸಂಶೋಧನ ಲೇಖನಗಳನ್ನು ಸಂಗ್ರಹಿಸಿ ಪ್ರಕಟಿಸುವ ಯೋಜನೆಯನ್ನು ಮೈಸೂರು ವಿಶ್ವವಿದ್ಯಾನಿಲಯ ರೂಪಿಸಿತು. ಟಿ.ವಿ. ವೆಂಕಟಾಚಲಶಾಸ್ತ್ರೀ, ಬಾ.ರಾ. ಗೋಪಾಲ್ ಅವರ ಸಂಪಾದಕತ್ವದಲ್ಲಿ ೧೧೨ ಲೇಖನಗಳನ್ನೊಳಗೊಂಡ ಸಂಶೋಧನ ಲೇಖನಗಳ ಗ್ರಂಥ ೧೯೭೫ರಲ್ಲಿ ಪ್ರಕಟವಾಯಿತು. ಶ್ರೀಕಂಠಶಾಸ್ತ್ರಿಗಳು ಇದಕ್ಕಿಂತ ಒಂದು ವರ್ಷ ಮೊದಲೇ ೧೯೭೪ ಮೇ ೭ರಂದು ವಿಧಿವಶರಾದರು.

ಶ್ರೀಕಂಠಶಾಸ್ತ್ರಿಗಳು ೧೨ ಕೃತಿಗಳನ್ನು ೨೨೪ ಲೇಖನಗಳನ್ನು ಬರೆದಿದ್ದಾರೆ.

(೧೦೦ ಲೇಖನಗಳು ಇಂಗ್ಲಿಷ್‌ನಲ್ಲಿ, ೧೧೪ ಲೇಖನಗಳು ಕನ್ನಡದಲ್ಲಿವೆ. ೮ ತೆಲುಗು, ೧ ಸಂಸ್ಕೃತ ಮತ್ತು ಹಿಂದಿಯಲ್ಲಿವೆ)

೧. Sources of Karnataka History –1, 1940

೨. Geopolitics of India and Greater India, 1943

೩. Early Gangas of Talakad, 1952

೪. Iconography of Vidyaranara Tantra, 1944

೫. Proto–Indic Religion, 1948

೬. Roman Chakridipathya, 1949

೭. ಭಾರತೀಯಸಂಸ್ಕೃತಿ

೮. ಪ್ರಪಂಚ ಚರಿತ್ರೆಯ ರೂಪರೇಖೆಗಳು, ೧೯೫೭

೯. ಪುರಾತತ್ವ ಶೋಧನೆ, ೧೯೬೦

೧೦. ಹೊಯ್ಸಳ ವಾಸ್ತುಶಿಲ್ಪ, ೧೯೬೦

೧೧. ಸಂಶೋಧನ ಲೇಖನಗಳು, ೧೯೭೫

೧೨. ಶ್ರೀಕಂಠೇಶ್ವರ ಶತಕಂ, ೧೯೭೫

❐ ❐ ❐

ಎನ್. ಅನಂತರಂಗಾಚಾರ್

(೧೯೦೪-೧೯೮೬)

ವೀರಣ್ಣ ಎಂ.ಡಿ.

ಕನ್ನಡ ಸಾಹಿತ್ಯ ಲೋಕದ ಮಹಾನ್ ವಿದ್ವಾಂಸರಲ್ಲೊಬ್ಬರಾದ ಎನ್. ಅನಂತರಂಗಾಚಾರ್ಯರು ಮೈಸೂರು ಜಿಲ್ಲೆಯ ತಿರುಮಕೂಡಲು ನರಸೀಪುರದಲ್ಲಿ ಜೂನ್ ೪, ೧೯೦೪ ರಂದು ಜನಿಸಿದರು. ತಂದೆ ನರಸಿಂಹಾಚಾರ್, ತಾಯಿ ವೆಂಕಟಲಕ್ಷ್ಮಮ್ಮ. ಟಿ. ನರಸೀಪುರದ ಎ.ವಿ. ಶಾಲೆಯಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ವಿದ್ಯಾಭ್ಯಾಸ ಪೂರ್ಣಗೊಳಿಸಿ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಪ್ರಥಮದರ್ಜೆಯಲ್ಲಿ ಉತ್ತೀರ್ಣರಾದರು. ಅನಂತರ ಮೈಸೂರು ಮಹಾರಾಜ ಕಾಲೇಜಿ ನಲ್ಲಿ ಶಿಕ್ಷಣವನ್ನು ಮುಂದುವರಿಸಿ ಬಿ.ಎ. ಪದವಿ ಹಾಗೂ ಕನ್ನಡ ಎಂ.ಎ. ಪದವಿ ಪಡೆದರು. ಎಂ.ಎಚ್. ಕೃಷ್ಣ, ಬಿ.ಎಂ.ಶ್ರೀ., ಬಿ. ಕೃಷ್ಣಪ್ಪ, ಕಾನಕಾನಹಳ್ಳಿ ವರದಾ ಚಾರ್ಯರು, ಪ್ರೊ. ವೆಂಕಣ್ಣಯ್ಯ, ಎ.ಆರ್. ಕೃಷ್ಣಶಾಸ್ತ್ರಿಗಳು ಇವರ ವಿದ್ಯಾಗುರು ಗಳಾಗಿದ್ದರು.

ಎನ್. ಅನಂತರಂಗಾಚಾರ್ಯರ ಸಾಹಿತ್ಯಕೃಷಿ ಬಹುಶ್ರುತವಾದದ್ದು. ಗ್ರಂಥ ಸಂಪಾದಕರಾಗಿ ಸಾಹಿತ್ಯ ಸೇವೆ ಆರಂಭಿಸಿದ ಇವರು ಸಾಹಿತ್ಯ ಚರಿತ್ರೆ, ಧಾರ್ಮಿಕ ಸಾಹಿತ್ಯ, ರಾಮಾಯಣದ ಅಧ್ಯಯನ, ಕಲೆ, ಇತಿಹಾಸ, ಪುರಾತತ್ತ್ವ ವಿಷಯಗಳು, ಸೂಚಿಸಾಹಿತ್ಯ- ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ತಮ್ಮ ವಿದ್ವತ್ ಪ್ರೌಢಿಮೆಯನ್ನು ಪ್ರಕಟಪಡಿಸಿದ್ದಾರೆ.

ಪ್ರಾಚೀನ ಕಾವ್ಯಗಳ ಸಂಪಾದನೆಗೆ ಸಂಬಂಧಿಸಿದಂತೆ ಏಳು ಹಸ್ತಪ್ರತಿಗಳನ್ನು ಆಧರಿಸಿ ಮಲ್ಲಿಕಾರ್ಜುನನ 'ಸೂಕ್ತಿ ಸುಧಾರ್ಣವ' ಗ್ರಂಥವನ್ನು ಸಂಪಾದಿಸಿದ್ದು, ಕೃತಿಯ ಪ್ರಸ್ತಾವನೆಯಲ್ಲಿ ಉದ್ಧೃತ ಕೃತಿ ಭಾಗಗಳ ಆಕರಗಳ ವಿಷಯವನ್ನು ಅನುಲಕ್ಷಿಸಿ ಅಲಭ್ಯ ಸಾಹಿತ್ಯದ ವ್ಯಾಪ್ತಿ ವಿಸ್ತಾರ ವೈಶಿಷ್ಟ್ಯಗಳನ್ನು ಆಮೂಲಾಗ್ರವಾಗಿ ವಿಮರ್ಶಿಸಿದ್ದಾರೆ. ಕನ್ನಡ ನೆಲದ ಇತಿಹಾಸ, ಕನ್ನಡ ಸಾಹಿತ್ಯ

ಚರಿತ್ರೆಗೆ 'ಸೂಕ್ತಿಸುಧಾರ್ಣವ'ದ ಕೊಡುಗೆ ಅಪಾರವಾದದ್ದು ಎಂಬುದನ್ನು ಒತ್ತಿ ಹೇಳಿದ್ದಾರೆ. ಈ ಕೃತಿಯ ಲೇಖಕ ಜೈನನೇ ಅಥವಾ ಬ್ರಾಹ್ಮಣನೇ ಎಂಬ ಅಂಶ ವಾದಗ್ರಸ್ತ ವಾಗಿರುವುದರ ಬಗ್ಗೆ ಎ. ವೆಂಕಟಸುಬ್ಬಯ್ಯ, ಎಂ. ಎಚ್. ಕೃಷ್ಣ ಹಾಗೂ ಎ. ಪಿ. ಚೌಗಲೆ ಮೊದಲಾದವರ ವಿಚಾರಗಳನ್ನು ಸವಿವರವಾಗಿ ಪರಿಶೀಲನೆಗೈದು ಕರ್ತೃವಿನ ಮತ ವಿಚಾರದಲ್ಲಿ ಇವರು ಮಂಡಿಸಿರುವ ವಾದ ಇತರ ವಿದ್ವಾಂಸರಿಗೆ ಒಪ್ಪಿತವಾದಂತೆ ತೋರುತ್ತದೆ.

ಪ್ರಾಚೀನ ಕನ್ನಡ ಸಾಹಿತ್ಯ ಸಂಪಾದನೆಯಲ್ಲಿ ಇವರ ಮತ್ತೊಂದು ಪ್ರಮುಖ ಕೃತಿ ಕಾವ್ಯಸಾರ. ಇಲ್ಲಿ ಕವಿಕಾವ್ಯ ವಿಚಾರದ ಚರ್ಚೆಗಿಂತಲೂ ಆಕರಗಳು ದೊರೆಯದ ಪದ್ಯಗಳು ಎಷ್ಟು, ಯಾವುವು ಎಂಬುದರ ಪಟ್ಟಿಯ ಕಡೆಗೆ ಅವರ ಗಮನ ಹರಿದಿದೆ. ಸುಮಾರು ನಾಲ್ಕು ಸಾವಿರ ಪದ್ಯಗಳಿಗೆ ಆಕರ ತಿಳಿಯದಿರುವುದನ್ನು ಸೂಚಿಗಳ ಮೂಲಕ ನಮೂದಿಸಿರುವುದು ಕಾಣಸಿಗುತ್ತದೆ. ಇದರಿಂದ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಎಷ್ಟೊಂದು ರಚನೆಗಳು ಕಳೆದುಹೋಗಿವೆ ಎನ್ನುವ ಅಂದಾಜು ದೊರೆತು ಅದು ನಮಗೆ ವಿಷಾದವನ್ನುಂಟುಮಾಡುತ್ತದೆ.

ಇವರ 'ಕನ್ನಡ ಚಂಪೂಕಾವ್ಯಗಳ ಪದ್ಯಾನುಕ್ರಮಣಿಕೆ' ಕೃತಿಯು ೬೪೦ ಪುಟಗಳಲ್ಲಿ ಮುದ್ರಿತವಾಗಿದ್ದು ೪೫ ಚಂಪೂಕಾವ್ಯಗಳ ಪದ್ಯಗಳಿಗೆ ಅಕಾರಾದಿಯನ್ನು ಒಳಗೊಂಡಿದೆ. ಆದಿಕವಿ ಪಂಪನಿಂದ ಷಡಕ್ಷರಿಯ ತನಕ ಗೋಚರವಾಗುವ ಚಂಪೂಕೃತಿಗಳನ್ನು ಇಲ್ಲಿ ಅವಲೋಕಿಸಲಾಗಿದೆ.

'ಕರ್ಣಾಟಕ ಕಾದಂಬರಿ' ಮತ್ತು 'ಪಂಚತಂತ್ರ' ಆಚಾರ್ಯರ ಮತ್ತೆರಡು ಸಂಪಾದಿತ ಕೃತಿಗಳು. ೧೮೯೨ ರಲ್ಲಿ ಬಿ. ಮಲ್ಲಪ್ಪನವರಿಂದ ಸಂಪಾದಿತವಾಗಿ ಸಹೃದಯರಿಗೆ ಅಲಭ್ಯವಾಗಿದ್ದ 'ಕರ್ಣಾಟಕ ಕಾದಂಬರಿ' ಆವೃತ್ತಿಯನ್ನು ಆಕರವಾಗಿಸಿ ಕೊಂಡು ಸಂಪಾದಿಸಿದ್ದಾರೆ. ಇಲ್ಲಿ ಱ-ಱ ಅಕ್ಷರಗಳ ಶಬ್ದಗಳನ್ನು ಅವುಗಳ ರೂಪಗಳನ್ನು ಮಾರ್ಪಡಿಸಿರುವುದು, ಅಕ್ಷರ ಸ್ಖಾಲಿತ್ಯಗಳನ್ನು ತಿದ್ದಿರುವುದು, ಟೀಕೆ ಬರೆದಿರುವುದು, ಪದ್ಯಗಳನ್ನು ಅಕಾರಾದಿಯಾಗಿ ಕೊಟ್ಟಿರುವುದು ಯುಕ್ತವಾಗಿದೆ.

'ಪಂಚತಂತ್ರ' ಕೃತಿ ಸಂಪಾದನೆಗೆ ೧೮೯೮ ರಲ್ಲಿ ಎಸ್.ಜಿ. ನರಸಿಂಹಾ ಚಾರ್, ಮಂ.ಆ. ರಾಮಾನುಜಯ್ಯಂಗಾರ್ ಅವರಿಂದ ಸಂಪಾದಿತವಾಗಿದ್ದ ಮುದ್ರಿತ

ಗ್ರಂಥವನ್ನು ಹಾಗೂ ಹಲವು ಹಸ್ತಪ್ರತಿಗಳನ್ನು ಬಳಸಿದ್ದಾರೆ. ದೊರೆತ ಹಸ್ತಪ್ರತಿಗಳನ್ನು ತುಲನೆ ಮಾಡಿ ಈ ಕೃತಿಯನ್ನು ಸಿದ್ಧಪಡಿಸಿರುವುದರಿಂದ ಇದು ಹೊಸ ಪರಿಷ್ಕರಣವೇ ಆಗಿದೆ. ಇಲ್ಲಿ ಹಳೆಯ ಹಾಗೂ ಹೊಸ ಪರಿಷ್ಕರಣ ಗಳೆರಡ ರಲ್ಲಿಯೂ ಕಂಡುಬರುವ ಶ್ಲೋಕ ಸಂಬಂಧಿಯಾದ ಕನ್ನಡ ಟೀಕೆ ಹೊಸಗನ್ನಡ ದಲ್ಲಿರುವುದು ವಿಶೇಷ.

ಭಾರತದ ವಿವಿಧ ಭಾಷೆಗಳ ಸಾಹಿತ್ಯದ ಸಮೀಕ್ಷೆ ಕುರಿತ 'ಸಾಹಿತ್ಯ ಭಾರತೀ' ಅನಂತರಂಗಾಚಾರ್ಯರ ಬೃಹತ್ ಗ್ರಂಥ. ಸಾವಿರ ಪುಟಗಳಷ್ಟು ವಿಸ್ತಾರ ವಾದ ಈ ಕೃತಿಯ ಒಂದೊಂದು ಅಧ್ಯಾಯವೇ ಒಂದೊಂದು ಪುಸ್ತಕವಾಗ ಬಹುದಾದ ವ್ಯಾಪ್ತಿಯನ್ನು ಹೊಂದಿದೆ. ಬಹು ಸಾಹಿತ್ಯಕೋಶವಾದ ಇದರಲ್ಲಿ ಸಾಹಿತಿಗಳ ಚಿತ್ರಗಳು, ಶಾಸನಗಳ ಪಡಿಯಚ್ಚುಗಳು, ಭಾಷಾ ಮಾದರಿಗಳು, ಲಿಪಿವಿಕಾಸದ ಪದಗಳು, ನಕ್ಷೆಗಳಿದ್ದು ಕೃತಿಯ ಮೆರುಗನ್ನು ಇಮ್ಮಡಿಗೊಳಿಸಿವೆ. ಈ ಕೃತಿಗೆ ಮುನ್ನುಡಿ ಬರೆದ ಕೆ.ವಿ. ಪುಟ್ಟಪ್ಪನವರು ಇದರ ಸ್ವರೂಪವನ್ನು ಕುರಿತು ಹೇಳುತ್ತಾ "ಶ್ರೀಮಾನ್ ಎನ್. ಅನಂತರಂಗಾಚಾರ್ಯರ 'ಸಾಹಿತ್ಯಭಾರತೀ' ಒಂದು ಅಪೂರ್ವ ಕೃತಿ. ಏಕೆಂದರೆ ಮೊಟ್ಟಮೊದಲಬಾರಿಗೆ ಭರತಖಂಡದ ಹತ್ತೊಂಬತ್ತು ಅಧಿಕೃತ ಭಾಷೆಗಳ ಚರಿತ್ರೆಯ ಜೊತೆಗೆ ಇಲ್ಲಿ ಭಾರತೀಯರಿಂದ ರಚಿತವಾಗುತ್ತಿರುವ ಇಂಗ್ಲಿಷ್ ಸಾಹಿತ್ಯದ ಚರಿತ್ರೆಯೂ ರೂಪುಗೊಂಡಿದೆ. ನಮಗೆ ತಿಳಿದಂತೆ ಇಂಗ್ಲಿಷ್ ಭಾಷೆಯಲ್ಲಾಗಲೀ, ಭರತ ಖಂಡದ ಬೇರೆ ಭಾಷೆಗಳಲ್ಲಿಯಾಗಲೀ ಇಪ್ಪತ್ತು ಸಾಹಿತ್ಯ ಚರಿತ್ರೆಗಳನ್ನು ಉಗಮದಿಂದ ಇಂದಿನವರೆಗೆ ಸಮೀಕ್ಷಿಸಿರುವ ಮತ್ತೊಂದು ಗ್ರಂಥ ಇಲ್ಲ. ಈ ಗ್ರಂಥದಲ್ಲಿ ಪ್ರತಿಯೊಂದು ಸಾಹಿತ್ಯದ ವಿಷಯವಾಗಿಯೂ ಅದರ ಭೌಗೋಳಿಕ ವ್ಯಾಪ್ತಿ, ಮೂಲ, ಇತರ ಭಾಷೆಗಳ ಸಂಪರ್ಕ, ಆದಿಕಾಲದಿಂದ ಇಲ್ಲಿಯವರೆಗಿನ ಕವಿ ಕಾವ್ಯಗಳ ಪರಿಚಯ, ಅವುಗಳಿಗಾದ ವಿವಿಧ ಪ್ರಭಾವಗಳು, ಚರಿತ್ರೆಯ ವಿವಿಧ ಹಂತಗಳು, ಪ್ರಾದೇಶಿಕ ಗುಣಗಳು ಮೊದಲಾದವನ್ನು ಹೆಚ್ಚು ಚರ್ಚೆಗೆ ಪ್ರವೇಶಿಸದೆ, ಈಗ ಸಾಮಾನ್ಯವಾಗಿ ಬಹುಜನಮಾನ್ಯವಾದ ಅಭಿಪ್ರಾಯ ಗಳನ್ನು ಅಂಗೀಕರಿಸಿ ನಿರೂಪಿಸಿದ್ದಾರೆ" ಎಂದು ವಿವರಿ ಸಿರುವುದು ಪ್ರಸ್ತುತ ಕೃತಿಯ ಮೌಲ್ಯವೆಷ್ಟೆಂಬುದನ್ನು ತಿಳಿಸುತ್ತದೆ.

'ಭಾರತೀಯ ತೀರ್ಥಕಲಾಕ್ಷೇತ್ರ ಸಂದರ್ಶಿನಿ' ಅನಂತರಂಗಾಚಾರ್ಯರ ಮತ್ತೊಂದು ಕೃತಿ. ೩೬೪ ಪುಟಗಳ ಈ ಪುಸ್ತಕವು ಶ್ರೀವೈಷ್ಣವ ಹಾಗೂ ಶೈವಕ್ಷೇತ್ರ

ಗಳನ್ನೂ ಕಲಾಕ್ಷೇತ್ರಗಳನ್ನೂ ವಿವಿಧ ಶೀರ್ಷಿಕೆಗಳಡಿಯಲ್ಲಿ ಪ್ರಸ್ತುತಪಡಿಸುತ್ತದೆ. ಕೃತಿಯ ಪೂರ್ವಪೀಠಿಕೆಯಲ್ಲಿ ಭಾರತೀಯ ದೇವಾಲಯಗಳ ವಾಸ್ತು ವಿವರಗಳು, ಸಂಸ್ಕೃತಿ ಸ್ವರೂಪ, ಸಾಮಾಜಿಕ, ಐತಿಹಾಸಿಕ ನೆಲೆಗಳ ವಿಚಾರಧಾರೆ ನಿರೂಪಿತ ವಾಗಿದೆ. ಲೇಖಕರ ಮಾತಿನಂತೆ ''ಪ್ರತಿಯೊಬ್ಬ ಭಾರತೀಯನಿಗೂ ಅಖಿಲಭಾರತ ತೀರ್ಥಕಲಾಕ್ಷೇತ್ರಗಳ ಪರಿಚಯ ಬಹುಕಾಲ ದಿಂದಲೂ ಜೀವನದ ಒಂದು ಕಡ್ಡಾಯವಾದ ಅಂಗವಾಗಿತ್ತು. ಈಗಲಂತೂ ಅದರ ಆವಶ್ಯಕತೆ ಮತ್ತಷ್ಟು ಹೆಚ್ಚಿದೆ. ಹಾಗೆಯೇ ಸೌಲಭ್ಯಗಳೂ ವಿಶೇಷವಾಗಿವೆ. ಆದರೆ ಅಖಿಲಭಾರತ ತೀರ್ಥಕ್ಷೇತ್ರಗಳ ಯೋಗ್ಯ ಕೈಪಿಡಿಯೊಂದು ಲಭ್ಯವಾಗಿಲ್ಲ. ಕನ್ನಡದಲ್ಲೂ ಅತಿವಿರಳವೆಂದೇ ಹೇಳಬಹುದು. ಆ ಆವಶ್ಯಕತೆಯನ್ನು ಪೂರ್ಣಮಾಡುವುದಕ್ಕಾಗಿ ಈ ಗ್ರಂಥವನ್ನು ರಚಿಸಲಾಗಿದೆ''.

ಗ್ರಂಥಸಂಪಾದನಾ ಕ್ಷೇತ್ರದಲ್ಲಿ ದುಡಿದ ಅನಂತರಂಗಾಚಾರ್ಯರು ವಿರುಪ ರಾಜನ 'ಗುರುಭಕ್ತಚಾರಿತ್ರ', ಚಿಕ್ಕಪದ್ಮಣ ಸೆಟ್ಟಿಯ 'ಅನಂತನಾಥ ಚರಿತೆ', ಕೋಳೂರು ಶಂಕರರ 'ನವಮೋಹನ ತರಂಗಿಣಿ', ಕುಂಡಲಗಿರಿಯವರ 'ರಸಿಕ ಮನೋರಂಜನ ವಿಲಾಸ' ಕಾವ್ಯಗಳನ್ನು ಕವಿಚರಿತೆಕಾರರ ಮಾದರಿಯಲ್ಲಿ ಉದಾ ಹರಣೆ ಸಹಿತ ಸುಲಲಿತವಾಗಿ ಪರಿಚಯಿಸಿದ್ದು, ಇಲ್ಲಿಯ ವಸ್ತುವಿಚಾರ, ಭಾಷಾ ಪ್ರೌಢಿಮೆ, ಕವಿಯ ಸಂಗತಿ ಹಾಗೂ ಕಾವ್ಯಶೈಲಿ ಸಾಮಾನ್ಯರಿಗೆ ನಿಲಕುವಂತೆ ಸಂಕ್ಷಿಪ್ತವಾಗಿ ನಿರೂಪಿಸಿದ್ದಾರೆ.

ಹಲವಾರು ಸಾಹಿತ್ಯಕ ಯೋಜನೆಗಳ ರೂವಾರಿಯಾಗಿ ಮನ್ನಣೆ ಪಡೆದಿದ್ದ ಅನಂತರಂಗಾಚಾರ್ಯರು ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯ ಕೋಶಾಗಾರ ಹಮ್ಮಿಕೊಂಡಿದ್ದ ಕುಮಾರವ್ಯಾಸ ಭಾರತದ ಪರ್ವಗಳು 'ಕರ್ಣಾಟಕ ಮಹಾಭಾರತ'ದ ಭಾಗಗಳಾಗಿ ೧೯೧೨ ರಿಂದ ೧೯೨೨ ಅವಧಿಯಲ್ಲಿ ಹೊರಬಂದ ಭಾಗಗಳಲ್ಲಿ ದ್ರೋಣ, ಕರ್ಣ, ಶಲ್ಯ ಮತ್ತು ಗದಾಪರ್ವಗಳನ್ನು ಯಶಸ್ವಿಯಾಗಿ ಸಂಪನ್ನಗೊಳಿಸಿದ್ದಾರೆ. ಅಷ್ಟೇ ಅಲ್ಲದೆ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಲು ಯೋಜಿಸಿದ್ದ 'ಚಾವುಂಡ ರಾಯಪುರಾಣ' ಮತ್ತು 'ಆದಿಪುರಾಣ' ನಿಂತುಹೋಗಿದ್ದ ಸಮಯದಲ್ಲಿ ಆಚಾರ್ಯರು 'ಅಜಿತಪುರಾಣ'ದಿಂದ ತೊಡಗಿ 'ಶಾಂತಿಪುರಾಣ' ದವರೆಗೆ ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಯಲ್ಲಿ ಪಾಠಾಂತರಗಳ ಸಮೇತ ಸಂಪಾದಿಸಿ ಅನುಕ್ರಮಣೀಯವಾಗಿ ಪ್ರಕಟಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ

ಮತ್ತೊಂದು ಗದ್ಯಾನುವಾದ ಯೋಜನೆಯ ಅನ್ವಯ 'ಪಂಪಭಾರತ' ಗದ್ಯಾನುವಾದವನ್ನು ೧೯೭೭ ರಲ್ಲಿ ಸಿದ್ಧಪಡಿಸಿದರು.

'ಮಾನೌಮಿಯ ಚೌಪದ' ಇವರ ಕಿರುಹೊತ್ತಿಗೆಗಳಲ್ಲಿ ಪ್ರಮುಖವಾದುದು. ಕರ್ನಾಟಕದ ಕಲೆ, ಸಂಸ್ಕೃತಿ, ಇತಿಹಾಸ, ಗಣಿತ, ನಾಣ್ಯಪದ್ಧತಿಗೆ ಸಂಬಂಧಿಸಿದ ಹಲವಾರು ಕುತೂಹಲಕಾರಿ ವಿಚಾರಗಳು ಇದರೊಳಗೆ ಕಾಣಸಿಗುತ್ತವೆ. ಅಂತೆಯೇ ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸ ಮಾಲೆಗಾಗಿ ಪೊನ್ನನ ಕುರಿತ ಕೃತಿ, ರನ್ನನ ಮೇಲಿನ ಕಿರುಹೊತ್ತಿಗೆಗಳನ್ನು ರಚಿಸಿದ್ದಾರೆ.

ವಿದ್ಯಾರ್ಥಿಬಳಗಕ್ಕಾಗಿ 'ಕುಮಾರರಾಮನ ಸಾಂಗತ್ಯ ಸಂಗ್ರಹ', 'ಜಗನ್ನಾಥ ವಿಜಯ ಸಂಗ್ರಹ', 'ರಾಮಾಶ್ವಮೇಧ ಸಂಗ್ರಹ'ಗಳನ್ನು ಪೀಠಿಕೆ, ಪರಿಚ್ಛೇದ, ನಿರ್ದೇಶನಗಳೊಂದಿಗೆ ಬರೆದು ಕೊಟ್ಟಿದ್ದಾರೆ. ಇವರು ೧೯೮೬ ಆಗಸ್ಟ್ ೭ ರಂದು ನಿಧನರಾದರು.

ಅನಂತರಂಗಾಚಾರ್ಯರು ಹಲವು ಗೌರವ ಸನ್ಮಾನಗಳಿಗೆ ಪಾತ್ರರಾಗಿದ್ದು, ದುರ್ಗಸಿಂಹನ 'ಪಂಚತಂತ್ರ' ಕೃತಿಗೆ ಸಾಹಿತ್ಯ ಅಕಾಡೆಮಿ ಬಹುಮಾನ, 'ಕಾವ್ಯಸಾರ' ಕೃತಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 'ಸಾಹಿತ್ಯ ಭಾರತೀ' ಮಹಾಪ್ರಬಂಧಕ್ಕೆ ಡಿ.ಲಿಟ್. ಪದವಿ ಲಭಿಸಿವೆ.

❐ ❐ ❐

ಕುವೆಂಪು

(೧೯೦೪–೧೯೯೪)

ಸಣ್ಣಪಾಪಯ್ಯ

ಇಪ್ಪತ್ತನೆಯ ಶತಮಾನದ ಮೇರುಸದೃಶ ಕವಿ, ಕಾದಂಬರಿಕಾರರು, ನಾಟಕಕಾರರು, ವಿಮರ್ಶಕರು, ರಸಋಷಿ ಕುವೆಂಪು. ವರಕವಿ ಬೇಂದ್ರೆಯವರು 'ಯುಗದ ಕವಿ ಜಗದ ಕವಿ' ಎಂದು ಹೊಗಳಿದ್ದು ಅತಿಶಯೋಕ್ತಿ ಅಲ್ಲ. ಕುವೆಂಪು ಅವರು ೧೯೦೪ನೇ ಇಸವಿ ಡಿಸೆಂಬರ್ ೨೯ನೇ ತಾರೀಖಿನಂದು ಜನಿಸಿದರು. ತಂದೆ ವೆಂಕಟಪ್ಪ, ತಾಯಿ ಸೀತಮ್ಮ. ಇವರ ಪೂರ್ತಿ ಹೆಸರು ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ. 'ಕುವೆಂಪು' ಎಂದೇ ಪ್ರಸಿದ್ಧರಾದ ಇವರು ವಿಶ್ವಮಾನವ ಸಂದೇಶವನ್ನು ನೀಡಿ, 'ಓ ನನ್ನ ಚೇತನ, ಆಗು ನೀ ಅನಿಕೇತನ' ಎಂದು ಹಾಡಿದವರು.

ಕುವೆಂಪು ಅವರಿಗೆ ಚಿಕ್ಕಂದಿನಿಂದಲೇ ಸಾಹಿತ್ಯ ಸಂಸ್ಕಾರವೂ ದೊರಕಿತು. ಮನೆಯಲ್ಲಿ ತಂದೆ, ಚಿಕ್ಕಪ್ಪ ಇಬ್ಬರೂ ಸಾಹಿತ್ಯಾಸಕ್ತರು. ಜೈಮಿನಿ ಭಾರತ, ತೊರವೆ ರಾಮಾಯಣಗಳ ವಾಚನ ಮನೆಯಲ್ಲಿ ನಡೆಯುತ್ತಿತ್ತು. ಬಾಲಕ ಅದನ್ನು ಆಸಕ್ತಿಯಿಂದ ಕೇಳುತ್ತಿದ್ದ. ಹುಡುಗನಿಗೆ ತನ್ನ ಜೊತೆಯ ಇತರ ಬಾಲಕರೊಡನೆ ಮನೆಯಲ್ಲಿಯೇ ವಿದ್ಯಾಭ್ಯಾಸ ನಡೆಯುತ್ತಿತ್ತು. 'ಐಗಳು' ಬಂದು ಹೋಗಿ ಕಲಿಸುತ್ತಿದ್ದರು. ಕಡೆಗೆ ರೋಮನ್ ಕ್ಯಾಥೊಲಿಕ್ ಪಂಗಡಕ್ಕೆ ಸೇರಿದ ಮಂಗಳೂರು ಆನಂದರಾಯರೆಂಬ 'ಐಗಳು' ಬಂದು ಕವಿಯ ಚೇತನಕ್ಕೆ ಇಂಗ್ಲಿಷ್ ಭಾಷೆ, ಸಾಹಿತ್ಯಗಳ ಸ್ಪರ್ಶ ನೀಡಿದರು. ಮುಂದೆ ಎಂಟನೆಯ ವಯಸ್ಸಿನಲ್ಲಿ ಅವರನ್ನು ಸಮೀಪದ ತೀರ್ಥಹಳ್ಳಿಗೆ ಕರೆದೊಯ್ದು ಶಾಲೆಗೆ ಸೇರಿಸಲಾಯಿತು. ಈ ಮಧ್ಯೆ ಅವರು ತಂದೆಯನ್ನು ಕಳೆದುಕೊಂಡರು.

ಪುಟ್ಟಪ್ಪನವರ ವಿದ್ಯಾಭ್ಯಾಸ ಮೈಸೂರಿನ ಹಾರ್ಡ್ವಿಕ್ ಹೈಸ್ಕೂಲಿನಲ್ಲಿ ಮುಂದುವರಿಯಿತು. ಷೆಲ್ಲಿ, ವರ್ಡ್ಸ್‌ವರ್ತ್, ಕೀಟ್ಸ್ ಮೊದಲಾದ ಆಂಗ್ಲ ಕವಿಗಳ ಕವನಗಳನ್ನು ಸ್ವತಂತ್ರವಾಗಿ ಓದುವ ಶಕ್ತಿ ಅವರಿಗೆ ಬಂದಿತ್ತು. ಟಾಲ್‌ಸ್ಟಾಯ್ ಮೊದಲಾದವರ ಕಾದಂಬರಿಗಳು ; ಪೌರ್ವಾತ್ಯ, ಪಾಶ್ಚಾತ್ಯ ಪಂಡಿತರ ಚಿಂತನಶೀಲ ಬರೆವಣಿಗೆಗಳು; ಅವರ ಭಾವ ಬುದ್ಧಿಗಳಿಗೆ ಪುಷ್ಟಿ ನೀಡಿದುವು. ಮೈಸೂರಿನ

ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಶ್ರೀ ಸ್ವಾಮಿ ಸಿದ್ಧೇಶ್ವರಾನಂದರು ಬಾಲಕ ಕುವೆಂಪು ಅವರಿಗೆ ಬಹು ಪ್ರಿಯರಾಗಿ ಅವರ ಸಕಲ ಯೋಗಕ್ಷೇಮದ ಜವಾಬ್ದಾರಿಯನ್ನು ವಹಿಸಿಕೊಂಡರು. ಕುವೆಂಪು ಅವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತಮ್ಮ ಶಿಕ್ಷಣವನ್ನು ಪೂರ್ಣಗೊಳಿಸಿದರು. ಅವರು ಮೈಸೂರು ವಿಶ್ವವಿದ್ಯಾನಿಲಯದ ಎಂ.ಎ. ಮೊದಲತಂಡದ(೧೯೨೭–೨೯) ವಿದ್ಯಾರ್ಥಿ. ಬಿ.ಎಂ.ಶ್ರೀ, ತಳುಕಿನ ವೆಂಕಣ್ಣಯ್ಯ, ರಾಳ್ಳಪಲ್ಲಿ ಅನಂತಕೃಷ್ಣ ಶರ್ಮ ಮೊದಲಾದವರು ಅವರ ಗುರುಗಳು.

ಕುವೆಂಪು ಅವರು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದರು. ೧೯೩೬ ಮತ್ತು ೧೯೪೬ರ ನಡುವೆ ಅವರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಬಳಿಕ ೧೯೪೬ರಲ್ಲಿ, ಅವರು ಪುನಃ ಮೈಸೂರಿನ ಮಹಾರಾಜ ಕಾಲೇಜಿಗೆ ಪ್ರಾಧ್ಯಾಪಕರಾಗಿ ಮರಳಿ ಬಂದರು. ಅನಂತರ ಅವರು ಅದರ ಮುಖ್ಯಸ್ಥರಾದರು. ೧೯೫೬ರಲ್ಲಿ ಅವರನ್ನು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಯನ್ನಾಗಿ ನೇಮಿಸಲಾಯಿತು. ಅವರು ೧೯೬೦ರಲ್ಲಿ ನಿವೃತ್ತರಾಗುವ ವರೆಗೂ ಈ ಹುದ್ದೆಯಲ್ಲಿ ಸೇವೆ ಸಲ್ಲಿಸಿದರು. ಕುವೆಂಪು ಅವರು ಆ ಸ್ಥಾನವನ್ನು ಪಡೆದವರಲ್ಲಿ ವಿಶ್ವವಿದ್ಯಾನಿಲಯದ ಮೊದಲ ಪದವೀಧರರಾಗಿದ್ದಾರೆ.

ಹದಿನೆಂಟರ ಹರೆಯದ ಪುಟ್ಟಪ್ಪ ೧೯೨೨ರಲ್ಲಿ ತಮ್ಮ ಇಂಗ್ಲಿಷ್ ಕವನಗಳ ಸಂಕಲನವೊಂದನ್ನು 'ಬಿಗಿನರ್ಸ್ ಮ್ಯೂಸ್' ಎಂಬ ಹೆಸರಿನಲ್ಲಿ ಪ್ರಕಟಿಸಿದರು. ಕವನಗಳನ್ನು ಓದಿದ ಗೆಳೆಯರು, ಹಿರಿಯರು ಕವನಗಳ ಭಾಷೆ, ಉಪಮೆ ರೂಪಕಗಳಿಗೆ ಕಲ್ಪನಾ ಚಾತುರ್ಯಕ್ಕೆ, ವಸ್ತು ವೈವಿಧ್ಯತೆಗೆ ಬೆರಗಾದರು. ಆಕಸ್ಮಿಕ ಎಂಬಂತೆ ಮೈಸೂರಿಗೆ ಬಂದಿದ್ದ ಐರಿಷ್ ಕವಿ ಜೇಮ್ಸ್ ಕಸಿನ್ಸ್ ಅವರಿಗೆ ಕುವೆಂಪು ಕವನಗಳನ್ನು ತೋರಿಸಿದರು. ಕವನಗಳನ್ನು ಓದಿದ ಕಸಿನ್ಸ್ ಮೆಚ್ಚಿ ಪ್ರೋತ್ಸಾಹಿಸುವುದರ ಬದಲು, "ರವೀಂದ್ರನಾಥ ಠಾಗೂರರು ತಮ್ಮ ಮಾತೃಭಾಷೆ ಬಂಗಾಳಿಯಲ್ಲಿ ಬರೆದಂತೆ, ನೀವೂ ನಿಮ್ಮ ಮಾತೃಭಾಷೆಯಾದ ಕನ್ನಡದಲ್ಲಿ ಬರೆಯಿರಿ ಉತ್ತಮ ಕವಿಯಾಗುತ್ತೀರಿ" ಎಂದರಂತೆ ! ಅದರಂತೆಯೆ ತಮ್ಮದೇ 'ಏಪ್ರಿಲ್' ಎಂಬ ಇಂಗ್ಲಿಷ್ ಕವನವನ್ನು "ಚೈತ್ರ–ವೈಶಾಖ" ಎಂದು ಅನುವಾದಿಸಿ ಪ್ರಕಟಿಸಿದರು. ಅಲ್ಲಿಂದ ಕವಿಯ ಸಾಹಿತ್ಯವಾಹಿನಿ ಕನ್ನಡದ ಕಡೆಗೆ ತಿರುಗಿತು. ಅಲ್ಲಿಂದ ಮುಂದೆ

ಅವರು ಜೀವನದುದ್ದಕ್ಕೂ ಕನ್ನಡದಲ್ಲಿ ಬರೆಯಲು ನಿರ್ಧರಿಸಿದರು. ಅವರು ಇಪ್ಪತ್ತೈದು ಕವನ ಸಂಕಲನಗಳು, ಎರಡು ಕಾದಂಬರಿಗಳು, ಜೊತೆಗೆ ಜೀವನಚರಿತ್ರೆ ಮತ್ತು ಸಾಹಿತ್ಯ ವಿಮರ್ಶೆಗಳನ್ನು ಬರೆದು ಪ್ರಕಟಿಸಿದರು.

ಕುವೆಂಪು ಅವರ ಕನ್ನಡ ಕವನಗಳು ಬಹು ಜನಪ್ರಿಯತೆಯನ್ನು ಪಡೆದವು. ವಿದ್ಯಾರ್ಥಿಗಳು ಅಷ್ಟೇ ಅಲ್ಲದೆ ಅವರ ಗುರುಗಳು ತಮ್ಮ ನೆಚ್ಚಿನ ವಿದ್ಯಾರ್ಥಿ ಕವಿಯನ್ನು ಮೆಚ್ಚಿ ಪ್ರಶಂಸಿಸಿದರು. ಅಂತಹ ಮಹನೀಯರಲ್ಲಿ ಗುರುಗಳಾದ ಪ್ರೊ. ಟಿ.ಎಸ್. ವೆಂಕಣ್ಣಯ್ಯನವರೂ ಪ್ರೊ.ಎ.ಆರ್. ಕೃಷ್ಣಶಾಸ್ತ್ರಿಗಳೂ ಮಾತ್ರವಲ್ಲದೆ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದ ಪ್ರೊ.ಬಿ.ಎಂ. ಶ್ರೀಕಂಠಯ್ಯ ನವರೂ ಸೇರಿದ್ದರು. ತಮ್ಮ ಮೇಲೆ ಗಾಢವಾದ ಪ್ರಭಾವ ಬೀರಿದವರಲ್ಲಿ "ಪ್ರೊ. ವೆಂಕಣ್ಣಯ್ಯನವರು ಪೂಜ್ಯ ಸಿದ್ಧೇಶ್ವರಾನಂದರಿಗೆ ದ್ವಿತೀಯ ಮಾತ್ರರಾಗಿದ್ದರು" ಎಂದು ಸ್ವತಃ ಪುಟ್ಟಪ್ಪನವರೇ ಅಭಿಮಾನದಿಂದ ಹೇಳಿಕೊಂಡಿದ್ದಾರೆ.

ಕುವೆಂಪು ಅವರು ತಮ್ಮ ಸ್ಥಳೀಯ ಭಾಷೆಯಾದ ಕನ್ನಡದಲ್ಲಿ ಬರೆಯಲು ನಿರ್ಧರಿಸಿದ್ದು ಮಾತ್ರವಲ್ಲದೆ, ಕರ್ನಾಟಕದಲ್ಲಿ ಕನ್ನಡವನ್ನು ಶಿಕ್ಷಣ ಮಾಧ್ಯಮವಾಗಿ ಒತ್ತಿ ಹೇಳಿದ ಚಳವಳಿಯ ನೇತೃತ್ವವನ್ನೂ ವಹಿಸಿದ್ದರು. ಅವರು ಮೈಸೂರು ವಿಶ್ವವಿದ್ಯಾ ನಿಲಯದ ಆವರಣಕ್ಕೆ 'ಮಾನಸಗಂಗೋತ್ರಿ' ಎಂದು ನಾಮಕರಣ ಮಾಡಿದರು. ಯಾವುದೇ ವಿಶ್ವವಿದ್ಯಾಲಯದಲ್ಲಾದರೂ ಮೂರು ಅಂಗಗಳಿರ ಬೇಕೆಂದೂ ಅವು ಬೋಧನಾಂಗ, ಸಂಶೋಧನಾಂಗ ಮತ್ತು ಪ್ರಸಾರಾಂಗ ಎಂಬುದು ಅವರ ಅಭಿಪ್ರಾಯವಾಗಿತ್ತು.

'ಶ್ರೀ ರಾಮಾಯಣದರ್ಶನಂ' ವಾಲ್ಮೀಕಿಯ ಮಹಾಕಾವ್ಯವಾದ ರಾಮಾಯಣವನ್ನು ಆಧರಿಸಿ ರಾಷ್ಟ್ರಕವಿ ಕುವೆಂಪು ಅವರು ರಚಿಸಿದ ಆಧುನಿಕ ಕನ್ನಡ ಸಾಹಿತ್ಯದ ಮಹೋನ್ನತ ಕೃತಿಯಾಗಿದೆ. ಈ ಕೃತಿ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನೂ, ೧೯೬೮ರಲ್ಲಿ ಜ್ಞಾನಪೀಠ ಪ್ರಶಸ್ತಿಯನ್ನೂ ತಂದುಕೊಟ್ಟಿದೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮಹಾಕಾವ್ಯ ಪರಂಪರೆಗೆ ಹೊಸ ಆಯಾಮ ನೀಡಿದ ಕೃತಿಯಾಗಿ ಶ್ರೀ ರಾಮಾಯಣ ದರ್ಶನಂಗೆ ವಿಶಿಷ್ಟ ಸ್ಥಾನವಿದೆ. ಮಹಾಕಾವ್ಯಗಳ ರಚನಾ ಯುಗ ಅಂತ್ಯಗೊಂಡಿತು ಎಂಬ ಅಭಿಪ್ರಾಯ ಪ್ರಚಲಿತವಾಗಿದ್ದ ಕಾಲದಲ್ಲೇ ಉದಯಿಸಿದ ಈ ಕೃತಿ ಆಧುನಿಕ ಮಹಾಕಾವ್ಯದ ಶ್ರೇಷ್ಠ ಮಾದರಿಯಾಗಿದೆ.

ವಾಲ್ಮೀಕಿಯ ಕಥಾಹಂದರವನ್ನು ಆಧಾರವಾಗಿ ತೆಗೆದುಕೊಂಡು ಸರ್ವೋದಯ ಹಾಗೂ ಸಮನ್ವಯ ತತ್ತ್ವಗಳನ್ನು ಪ್ರತಿಪಾದಿಸುವಂತೆ ಕುವೆಂಪು ಈ ಕಾವ್ಯವನ್ನು ಸೃಜಿಸಿದ್ದಾರೆ. ಇದು ಕೇವಲ ಲೌಕಿಕ ಘಟನೆಗಳ ಪುನರಾವೃತ್ತಿಯಷ್ಟೇ ಅಲ್ಲದೆ, ಮಾನವೀಯ ಮೌಲ್ಯಗಳು ಹಾಗೂ ಅಲೌಕಿಕ ನಿತ್ಯಸತ್ಯಗಳನ್ನು ಪ್ರತಿಬಿಂಬಿಸುವ ಸಾರ್ಥಕ ಸತ್ಯಕಥನವೂ ಆಗಿದೆ.

'ಶ್ರೀ ರಾಮಾಯಣದರ್ಶನಂ' ಆಧುನಿಕ ಕಾಲದಲ್ಲಿ ಕನ್ನಡ ಮಹಾಕಾವ್ಯಗಳ ಉದ್ಭವಕ್ಕೆ ಪ್ರೇರಣೆಯಾಯಿತು. ಇದು ಕನ್ನಡದ ಒಂದು ವಿಶಿಷ್ಟತೆ. ಕುವೆಂಪು ಅವರ ಈ ಕಾವ್ಯ ಅನೇಕ ರೀತಿಯಲ್ಲಿ ಶಿಖರಪ್ರಾಯವಾದ ವಿದ್ವತ್ತಿನ ನಿದರ್ಶನವಾಗಿ ನಿಂತಿದೆ. ಈ ಕೃತಿ ಮಹಾಛಂದಸ್ಸಿನಲ್ಲಿ ರಚಿತವಾಗಿ ಮಹಾಕಾವ್ಯಗಳಿಗೆ ಒಂದು ಹೊಸ ಮಾಧ್ಯಮವನ್ನು ಕಲ್ಪಿಸಿದೆ. ನವಾಭಿಜಾತ ಕೃತಿಗಳ ಸಾಲಿನಲ್ಲಿ ಶ್ರೀ ರಾಮಾಯಣ ದರ್ಶನಂ ಅತ್ಯುತ್ತಮ ಕೃತಿಯಾಗಿ ನಿಂತಿದೆ ಮಾತ್ರವಲ್ಲ, ಅದು ಕನ್ನಡದ ಪ್ರಾಚೀನ ಅಭಿಜಾತ ಕೃತಿಗಳ ಸಾಲಿಗೆ ಸೇರುವಂಥದ್ದಾಗಿದೆ.

ಕುವೆಂಪು ಅವರ 'ರಸೋ ವೈ ಸಃ' ಕೃತಿ ಕನ್ನಡ ಸಾಹಿತ್ಯದಲ್ಲೊಂದು ಮಹತ್ವದ ಸೌಂದರ್ಯಶಾಸ್ತ್ರೀಯ ಕೃತಿ. ಉಪನಿಷತ್ತಿನ 'ರಸೋ ವೈ ಸಃ' (ಆ ಪರಮಾತ್ಮನೇ ರಸಸ್ವರೂಪ) ಎಂಬ ಸೂತ್ರವನ್ನು ಆಧಾರವಾಗಿಟ್ಟುಕೊಂಡು, ಕುವೆಂಪು ಅವರು ಸಾಹಿತ್ಯ, ಕಲೆ ಮತ್ತು ಜೀವನದ ಮೂಲಭೂತ ಅರ್ಥವನ್ನು ವಿಶ್ಲೇಷಿಸುತ್ತಾರೆ. ಈ ಕೃತಿಯಲ್ಲಿ ರಸ ಎಂಬುದು ಕೇವಲ ಕಾವ್ಯದ ಅಲಂಕಾರವಲ್ಲ; ಅದು ಮಾನವನ ಅಂತರಂಗದ ಆನಂದಾನುಭವ, ಆತ್ಮಾನುಭೂತಿ ಮತ್ತು ವಿಶ್ವಚೈತನ್ಯದೊಂದಿಗೆ ಹೊಂದಿಕೊಳ್ಳುವ ಸ್ಥಿತಿ ಎಂದು ಅವರು ಪ್ರತಿಪಾದಿಸುತ್ತಾರೆ.

ಕುವೆಂಪು ಅವರ ದೃಷ್ಟಿಯಲ್ಲಿ ಸಾಹಿತ್ಯದ ಗುರಿ ಮನರಂಜನೆ ಮಾತ್ರವಲ್ಲ, ಮಾನವನ ಮನಸ್ಸನ್ನು ಉನ್ನತ ಸ್ಥಿತಿಗೆ ಕರೆದೊಯ್ಯುವುದಾಗಿದೆ. ಕವಿ ತನ್ನ ವೈಯಕ್ತಿಕ ಅನುಭವವನ್ನು ವಿಶ್ವಾನುಭವವಾಗಿ ಪರಿವರ್ತಿಸುವಾಗ ರಸೋತ್ಪತ್ತಿಯಾಗುತ್ತದೆ. ಈ ಸಂದರ್ಭದಲ್ಲಿ ಜಾತಿ, ಮತ, ದೇಶದ ಸೀಮೆಗಳು ಕರಗಿಹೋಗಿ, ಮಾನವೀಯತೆಯೇ ಪ್ರಧಾನವಾಗುತ್ತದೆ. ಇದನ್ನೇ ಕುವೆಂಪು ಅವರು ತಮ್ಮ ವಿಶ್ವಮಾನವ ತತ್ತ್ವದೊಂದಿಗೆ ಜೋಡಿಸುತ್ತಾರೆ. ರಸಾನುಭವವು ವ್ಯಕ್ತಿಯನ್ನು ಸಂಕುಚಿತತೆಯಿಂದ ಹೊರತಂದು ವಿಶಾಲ ಮನಸ್ಸಿನತ್ತ ಕೊಂಡೊಯ್ಯುತ್ತದೆ.

'ರಸೋ ವೈ ಸಃ' ಕೃತಿ ಕೇವಲ ವಿಮರ್ಶಾತ್ಮಕ ಗ್ರಂಥವಲ್ಲ; ಅದು ಜೀವನ ವನ್ನು ಕಾವ್ಯದ ದೃಷ್ಟಿಯಿಂದ ನೋಡುವ ತಾತ್ತ್ವಿಕ ಮಾರ್ಗದರ್ಶಿ. ಸಾಹಿತ್ಯಾಸಕ್ತರು, ವಿದ್ಯಾರ್ಥಿಗಳು ಹಾಗೂ ಚಿಂತಕರು ಈ ಕೃತಿಯನ್ನು ಓದುವುದರಿಂದ ರಸದ ಆಂತರಿಕ ಅರ್ಥವನ್ನು ಅರಿತು, ಕಲೆ ಮತ್ತು ಬದುಕಿನ ನಡುವಿನ ಆಳವಾದ ಸಂಬಂಧವನ್ನು ಗ್ರಹಿಸಬಹುದು. ಹೀಗಾಗಿ ಈ ಕೃತಿ ಕನ್ನಡ ಸಾಹಿತ್ಯದ ಚಿಂತನಾ ಪರಂಪರೆಯಲ್ಲಿ ಅತ್ಯಂತ ಮಹತ್ತ್ವದ ಸ್ಥಾನವನ್ನು ಹೊಂದಿದೆ. ಭಾರತೀಯ ಕಾವ್ಯಮೀಮಾಂಸೆಯಲ್ಲಿ ಭರತನ ಕಾಲದಿಂದ ರಸಕ್ಕೆ ಅತ್ಯಂತ ಪ್ರಧಾನಸ್ಥಾನ ಸಿಕ್ಕಿದೆ. ರಸಾನುಭವವನ್ನು ವಿನೂತನ ರೀತಿಯಲ್ಲಿ ವಿಶ್ಲೇಷಿಸುವ ಮೂಲಕ ಕುವೆಂಪು ಅವರು ಭಾರತೀಯ ಕಾವ್ಯಮೀಮಾಂಸೆಗೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ ಕುವೆಂಪು ಅವರ ಪ್ರಬಂಧ ಸಾಹಿತ್ಯ ಮತ್ತು ವಿಮರ್ಶಾ ಕೊಡುಗೆಗಳು ಅತ್ಯಂತ ಮಹತ್ತ್ವದ ಸ್ಥಾನ ಪಡೆದಿವೆ. ಅವರು ಕೇವಲ ಕವಿ, ಕಾದಂಬರಿಕಾರರು ಮಾತ್ರವಲ್ಲ. ಆಳವಾದ ಚಿಂತನೆಗಳನ್ನು ಹೊಂದಿದ ಪ್ರಬಂಧಕಾರರೂ ಆಗಿದ್ದರು. ಅವರ ಪ್ರಬಂಧಗಳಲ್ಲಿ ಸಮಾಜ, ಸಂಸ್ಕೃತಿ, ಧರ್ಮ, ಶಿಕ್ಷಣ, ಮಾನವೀಯತೆ ಮೊದಲಾದ ಸಂಗತಿಗಳನ್ನು ಆಳವಾಗಿ ವಿಶ್ಲೇಷಿಸಿದ್ದಾರೆ. ಉದಾಹರಣೆಗೆ – 'ವಿಶ್ವಮಾನವ' ತತ್ತ್ವವನ್ನು ಅವರು ಪ್ರಬಂಧಗಳ ಮೂಲಕ ಜನಸಾಮಾನ್ಯರಿಗೆ ತಲುಪಿಸಿದರು. ಅವರ ಬರೆಹಗಳು ಸರಳ ನೇರ ಮತ್ತು ಸ್ಪಷ್ಟ. ಆದರೆ ಅವು ತತ್ತ್ವಚಿಂತನೆಯ ಆಳವನ್ನು ಹೊಂದಿದ್ದು, ಸಹೃದಯರಲ್ಲಿ ಹೊಸ ಆಲೋಚನೆಗೆ ಪ್ರೇರಣೆ ನೀಡುತ್ತವೆ.

ಅತ್ಯಂತ ಪ್ರಮುಖವಾದ ಕವಿಯೂ ಚಿಂತಕರೂ ಆದ ಕುವೆಂಪು ಅವರು, ಅನೇಕ ವರ್ಷಗಳ ಕಾಲ ವಿದ್ಯಾರ್ಥಿಗಳಿಗೆ ಸಾಹಿತ್ಯವನ್ನು ಬೋಧಿಸಿದ ಮಹತ್ವದ ಗುರುಗಳಾಗಿದ್ದರೆಂಬುದು, ಲೋಕದ ಕಣ್ಣಿಗೆ ಅಷ್ಟಾಗಿ ಗೋಚರಿಸುವಂಥದಾಗಿರಲಿಲ್ಲ. ಅವರು ಕಾಲೇಜಿಗೆ ಯಾವಾಗ ಬರುತ್ತಿದ್ದರು, ಯಾವಾಗ ಹೋಗುತ್ತಿದ್ದರು ಎನ್ನುವುದೇ ಬಹುತೇಕ ವಿದ್ಯಾರ್ಥಿಗಳ ಪಾಲಿಗೆ ಕುತೂಹಲದ ಸಂಗತಿಯಾಗಿತ್ತು.

ಕುವೆಂಪು ಅವರನ್ನು ನೋಡಲು, ಬೇರೆ ಬೇರೆ ವಿಭಾಗಗಳ ವಿದ್ಯಾರ್ಥಿಗಳು ಮಹಾರಾಜಾ ಕಾಲೇಜಿನ ಕಾರಿಡಾರು ಗಳಲ್ಲಿ, ಸಾಲುಗಟ್ಟಿ ನಿಲ್ಲುತ್ತಿದ್ದರಂತೆ. ಯಾವ ಮಾಯದಲ್ಲೋ ಅವರು ಗಂಭೀರವಾಗಿ ನಡೆದುಬಂದು ಬೋಧನಾ ಕೊಠಡಿಯನ್ನು

ಪ್ರವೇಶಿಸಿದರೆಂದರೆ ಮುಗಿಯಿತು. ಬಿ.ಎ. ಆನರ್ಸ್ ಮತ್ತು ಎಂ.ಎ. ವಿದ್ಯಾರ್ಥಿಗಳು ಕುವೆಂಪು ಅವರ ಬೋಧನೆಗೆ ಬೆರಗುಗಣ್ಣುಗಳಿಂದ ಎದೆತೆರೆದು ಕುಳಿತುಕೊಳ್ಳುತ್ತಿದ್ದರಂತೆ. ಅವರು ಮುಖ್ಯವಾಗಿ ತೌಲನಿಕ ಕಾವ್ಯಮೀಮಾಂಸೆಯನ್ನು ಪಾಠ ಮಾಡುತ್ತಿದ್ದರೆ, 'ಅವರ ಬೋಧನೆ ಒಂದು ಬಗೆಯ ನವನವೋನ್ಮೇಷಶಾಲಿಯಾದ ಅನುಭವ ಪ್ರಪಂಚವನ್ನು ಅನಾವರಣ ಗೊಳಿಸುವ ಸ್ವರೂಪದ್ದಾಗಿತ್ತು. ಹಾಗೆ ಪಾಠ ಮಾಡುವಾಗ ಅವರ ಎದುರಿಗೆ ಪೂರ್ವಸಿದ್ಧವಾದ ಯಾವ ತರಗತಿಯ ಟಿಪ್ಪಣಿಗಳೂ ಇರುತ್ತಿರಲಿಲ್ಲ, ಬದಲು ಅವರು ತಾವೇ ಕಾವ್ಯಚಿಂತನೆಯ ಮೂರ್ತರೂಪವೋ ಎಂಬಂತೆ ಕುಳಿತು, ತಮ್ಮ ಪಾಡಿಗೆ ತಾವು ಮಾತನಾಡಿಕೊಳ್ಳುವಂತೆ ಅಥವಾ ತೇಲಿ ಬರುವ ಹೊಳಹುಗಳಿಗೆ ಆಕಾರವನ್ನು ಕೊಡುವಂತೆ, ಅನೇಕ ಪೂರ್ವ ಹಾಗೂ ಪಶ್ಚಿಮದ ಕವಿಗಳ ಹಾಗೂ ಚಿಂತಕರ ವಿಚಾರಪಥಗಳಲ್ಲಿ ಸಂಚರಿಸುತ್ತ, ಜಾಗತಿಕ ಪ್ರಜ್ಞೆಯ ವಿಸ್ತಾರದಲ್ಲಿ ತಮ್ಮ ವಿದ್ಯಾರ್ಥಿಗಳ ಮನಸ್ಸು ಅರಳಿಕೊಳ್ಳಬೇಕೆಂದು ಸಂಕಲ್ಪ ಮಾಡಿದವರಂತೆ – ತೋರುತ್ತಿದ್ದರು'(ಡಾ.ಎಸ್. ಎಂ. ವೃಷಭೇಂದ್ರಸ್ವಾಮಿ, ತರಗತಿ ಗಳಲ್ಲಿ ಕುವೆಂಪು, ಒಂದೆರಡು ಮಾತು..ಪು.2).

ತರಗತಿಗಳಲ್ಲಿ ಕುವೆಂಪು ಒಬ್ಬ ವ್ಯಕ್ತಿಯಾಗಿರದೆ, ಅಪರೂಪದ ಕಲಾಕೃತಿ ಆಗಿದ್ದರು. ಕುವೆಂಪು ಅವರ ಪಾಠ ಯಾವುದೇ ಒಂದು ಕ್ರಮಬದ್ಧವಾದ ಚೌಕಟ್ಟಿಗೆ ಒಳಪಡದೆ, ಅದೊಂದು ಸಂಚರಿಸುತ್ತಿರುವ ಮಿಂಚು ಇದ್ದ ಹಾಗೆ ಎನ್ನಬಹುದೇನೋ. ಕುವೆಂಪು ತರಗತಿಯ ಪಾಠಗಳ 'ತೌಲನಿಕ ಕಾವ್ಯಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆ'ಯ ಅಭಿಪ್ರಾಯಗಳು, ವಾಕ್ಯಗಳು, ಸಾಂದರ್ಭಿಕ ಜೋಕುಗಳು, ತರಗತಿಯ ಮಾತಿನ ಶೈಲಿ' ಮುಂತಾದವುಗಳು ವಿದ್ಯಾರ್ಥಿಗಳಲ್ಲಿ ಆನಂದವನ್ನು ಆಸಕ್ತಿಯನ್ನು ಉಂಟುಮಾಡುತ್ತಿದ್ದುವು. ಕುವೆಂಪು ಅವರಿಂದ ಅವರ ತರಗತಿಯವರು ಕಲಿತ ಪಠ್ಯಗಳೆಂದರೆ ಪಂಪನ ಆದಿಪುರಾಣ, ಅಂಬಿಗರ ಚೌಡಯ್ಯನ ವಚನಗಳು ಮತ್ತು ಕಾವ್ಯಮೀಮಾಂಸೆ ಮೊದಲಾದವು. ಸಾಹಿತ್ಯ ರಚನೆ ಅವರದೇ ಎಂಬಂತೆ ಬೋಧನಕ್ರಮವೂ ಅವರದೇ ವಿಶಿಷ್ಟ ಶೈಲಿಯಲ್ಲಿರುತ್ತಿತ್ತು. ಉಚಿತವಾದ ಮಾತು. ಎಷ್ಟು ಬೇಕೋ ಅಷ್ಟೇ ಮಾತು. "ಹಿತಮಿತಮೃದುವಚನ!" ಅವರ ಮಾತುಗಳು ವಾಚ್ಯವಾಗುವುದಕ್ಕಿಂತ ಹೆಚ್ಚು ಸೂಚ್ಯ. ಅನೇಕ ಸಂದರ್ಭಗಳಲ್ಲಿ ವಾಗಿಂದ್ರಿಯಕ್ಕಿಂ ತಲೂ ಅವರ ಕೈ ಮುಖ ಕಣ್ಣುಗಳೇ ಹೆಚ್ಚು ಮಾತನಾಡುತ್ತಿದ್ದುವು!

ವಾಗಿಂದ್ರಿಯ ಮೊದಲು ಮಾಡಿದ ವಾಕ್ಯವನ್ನು ಮುಖ ಭಾವವೇ ಕೊನೆಗೊಳಿಸುತ್ತಿತ್ತು. ರಸಋಷಿಯ ವಾಕ್ಯದಲ್ಲಿ ಉಕ್ತಕ್ಕಿಂತಲೂ ಅನುಕ್ತದಲ್ಲಿಯೇ ಅಲ್ಲವೆ ರಸವಿರುವುದು? ಅನುಕ್ತದಿಂದಲೇ ಅವರು ಹೇಳಬೇಕೆಂದಿದ್ದ ಭಾವ ನೇರವಾಗಿ ವಿದ್ಯಾರ್ಥಿಗಳ ಹೃದಯಕ್ಕೆ ತಟ್ಟುತ್ತಿತ್ತು'' ('ಸಹ್ಯಾದ್ರಿ', ಬೋಧಕರಾಗಿ ಕುವೆಂಪು, ನ. ಸುಬ್ರಹ್ಮಣ್ಯಂ, ಪು.16) ಎಂದು ಕುವೆಂಪು ಅವರ ಶಿಷ್ಯರೆಲ್ಲರು ಅಭಿಮಾನದಿಂದ ಹೆಮ್ಮೆಯಿಂದ ಹೇಳಿಕೊಂಡಿ ದ್ದಾರೆ; ಬರೆದುಕೊಂಡಿದ್ದಾರೆ.

ಕುವೆಂಪು ಅವರಿಗೆ ಅನೇಕ ಪ್ರಶಸ್ತಿ ಪುರಸ್ಕಾರಗಳು ದೊರೆತಿವೆ. ಅವರ 'ಶ್ರೀರಾಮಾಯಣದರ್ಶನಂ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ, ಜ್ಞಾನಪೀಠ ಪ್ರಶಸ್ತಿ ನೀಡಲಾಯಿತು. ಭಾರತ ಸರ್ಕಾರದಿಂದ ಪದ್ಮಭೂಷಣ ಮತ್ತು ಪದ್ಮ ವಿಭೂಷಣ ಪ್ರಶಸ್ತಿಗಳನ್ನು ಪಡೆದರು. ಕರ್ನಾಟಕ ಸರ್ಕಾರವು ಅವರಿಗೆ 'ಕರ್ನಾಟಕ ರತ್ನ' ಎಂಬ ಅತ್ಯುನ್ನತ ಗೌರವವನ್ನು ನೀಡಿತು. ಜೊತೆಗೆ ಪಂಪ ಪ್ರಶಸ್ತಿ ಸೇರಿದಂತೆ ಅನೇಕ ಸಾಹಿತ್ಯ ಪ್ರಶಸ್ತಿಗಳು ಅವರ ಮುಡಿಗೇರಿದವು. ಈ ಪ್ರಶಸ್ತಿಗಳು ಕೇವಲ ಅವರ ಕೃತಿಗಳಿಗೆ ಮಾತ್ರವಲ್ಲ, ಕನ್ನಡ ಭಾಷೆಯ ಶುದ್ಧತೆ, ಕನ್ನಡ ಪ್ರೇಮ, ವಿಶ್ವಮಾನವ ತತ್ತ್ವ ಮತ್ತು ನವೋದಯ ಚಳವಳಿಗೆ ನೀಡಿದ ಕೊಡುಗೆಗಳಿಗೆ ಮಾನ್ಯತೆ ನೀಡಿದವು. ಒಟ್ಟಿನಲ್ಲಿ, ಕುವೆಂಪು ಪ್ರಶಸ್ತಿಗಳ ಮೂಲಕ ರಾಷ್ಟ್ರಮಟ್ಟದಲ್ಲಿ ಗೌರವಿಸಲ್ಪಟ್ಟರು. ೧೯೫೬ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವೂ ೧೯೬೬ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯವೂ ೧೯೬೯ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯವೂ ೧೯೮೫ರಲ್ಲಿ ಗುಲ್ಬರ್ಗ ವಿಶ್ವವಿದ್ಯಾಲಯವೂ ಗೌರವ ಡಿ.ಲಿಟ್. ಪದವಿಯನ್ನು ನೀಡಿ ಗೌರವಿಸಿದುವು. ೧೯೫೭ರಲ್ಲಿ ಧಾರವಾಡದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದರು. ೧೯೬೪ರಲ್ಲಿ ಕರ್ನಾಟಕ ಸರ್ಕಾರ 'ರಾಷ್ಟ್ರಕವಿ' ಎಂಬ ಬಿರುದು ನೀಡಿ ಸನ್ಮಾನಿಸಿದೆ.

ಕುವೆಂಪು ತಮ್ಮ ಜೀವನದ ಕೊನೆಯ ದಿನಗಳನ್ನು ಮೈಸೂರಿನಲ್ಲಿ ಕಳೆದರು. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸೂರ್ಯನಂತೆ ಪ್ರಕಾಶಮಾನವಾಗಿ ಬೆಳಗಿದ ಕುವೆಂಪು ಅವರು ೧೯೯೪ರ ನವೆಂಬರ್ ೧೦ರಂದು ಅಸ್ತಂಗತರಾದರು. ಅವರ ಕೃತಿಗಳು, ತತ್ತ್ವಗಳು ಮತ್ತು ವಿಶ್ವಮಾನವ ಸಂದೇಶವು ಅವರನ್ನು ಜೀವಂತವಾಗಿರಿಸಿವೆ.

❐ ❐ ❐

ತೀ.ನಂ. ಶ್ರೀಕಂಠಯ್ಯ

(೧೯೦೬-೧೯೬೬)

ನಾಗರತ್ನಮ್ಮ

ಇವರು ೨೬ ನವೆಂಬರ್ ೧೯೦೬ರಂದು ತುಮಕೂರು ಜಿಲ್ಲೆ, ಚಿಕ್ಕ ನಾಯಕನಹಳ್ಳಿ ತಾಲೂಕಿನ ತೀರ್ಥಪುರದಲ್ಲಿ ಜನಿಸಿದರು. ತಂದೆ ಶಾನುಭೋಗ ನಂಜುಂಡಯ್ಯ, ತಾಯಿ ಭಾಗೀರಥಮ್ಮ. ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲಾ ವಿದ್ಯಾಭ್ಯಾಸ ಕ್ರಮವಾಗಿ ತೀರ್ಥಪುರ, ಚಿಕ್ಕನಾಯಕನಹಳ್ಳಿ, ತುಮಕೂರುಗಳಲ್ಲಿ ಮುಗಿಸಿ, ಬಿ.ಎ. ಪದವಿಯನ್ನು ೧೯೨೬ರಲ್ಲಿ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಸ್ವರ್ಣ ಪದಕದೊಂದಿಗೆ ಪಡೆದರು. ೧೯೨೯ರಲ್ಲಿ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಮೂರನೇ ರ್‍ಯಾಂಕ್ ಪಡೆದು ರೆವೆನ್ಯೂ ಪ್ರೊಬೆಷನರ್ ಆಗಿ ನೇಮಕಗೊಂಡರು. ಆಡಳಿತದಲ್ಲಿ ಆಸಕ್ತಿ ಇಲ್ಲದಿದ್ದರಿಂದ ಅದನ್ನು ಬಿಟ್ಟು ಇಂಗ್ಲಿಷ್ ಎಂ.ಎ., ಅನಂತರ ಕನ್ನಡ ಎಂ.ಎ. (೧೯೩೧) ತರಗತಿಯಲ್ಲಿ ಪ್ರಥಮಸ್ಥಾನದೊಂದಿಗೆ ಪಡೆದರು.

೧೯೩೨ ರಿಂದ ಮಹಾರಾಜ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ವೃತ್ತಿಜೀವನ ಆರಂಭಿಸಿದ ಇವರು ೧೯೪೩ರಲ್ಲಿ ಪ್ರಾಧ್ಯಾಪಕರಾದರು. ೧೯೫೦ರಲ್ಲಿ ಕೆಲವು ಕಾಲ ದಾವಣಗೆರೆ, ಕೋಲಾರ ಕಾಲೇಜುಗಳಲ್ಲಿ ಪ್ರಾಂಶುಪಾಲರಾಗಿದ್ದರು. ಮೈಸೂರು ಸಂವಿಧಾನ ಪರಿಷತ್ತಿನಲ್ಲಿ ಭಾಷಾಂತರಕಾರರಾಗಿ, ಇದೇ ವೇಳೆಯಲ್ಲಿ ದೆಹಲಿಯ ಭಾರತ ಸಂವಿಧಾನ ಪರಿಷತ್ತಿನಲ್ಲಿ ಸದಸ್ಯರಾಗಿ ಕಾರ್ಯನಿರ್ವಹಿಸಿದರು. ಅನಂತರ ೧೯೫೨ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಆರಂಭವಾದಾಗ ಅಲ್ಲಿ ಮೊತ್ತಮೊದಲ ಕನ್ನಡ ಪ್ರಾಧ್ಯಾಪಕರಾಗಿ, ವಿಭಾಗದ ಮುಖ್ಯಸ್ಥರಾಗಿ ಕನ್ನಡ ವಿಭಾಗವನ್ನು ಬೆಳೆಸಿದರು. ೧೯೫೫ ರಿಂದ ೫೬ರ ತನಕ ರಾಕ್‌ಫೆಲರ್ ಫೌಂಡೇಷನ್ ನೆರವಿನಿಂದ ಅಮೆರಿಕ ವಿಶ್ವವಿದ್ಯಾಲಯದಲ್ಲಿ ಭಾಷಾವಿಜ್ಞಾನದ ಉನ್ನತ ಅಧ್ಯಯನ ಮಾಡಿ ಅಮೆರಿಕ, ಯುರೋಪ್ ಪ್ರವಾಸ ಮಾಡಿದರು. ೧೯೫೭ರಲ್ಲಿ ಕುವೆಂಪು

ವರು ಕುಲಪತಿಯಾಗಿ ಆಯ್ಕೆಯಾದಾಗ ತೆರವಾದ ಹುದ್ದೆಗೆ ತೀನಂಶ್ರೀ ಮಹಾರಾಜ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ನೇಮಕಗೊಂಡರು. ಅನಂತರ ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ವಿಭಾಗಕ್ಕೆ ವರ್ಗಾವಣೆಗೊಂಡು ಅಲ್ಲಿಯ ಮುಖ್ಯಸ್ಥರಾಗಿ ಕಲಾನಿಕಾಯದ ಡೀನ್ ಆಗಿ ಕಾರ್ಯನಿರ್ವಹಿಸಿ ೧೯೬೨ರಲ್ಲಿ ನಿವೃತ್ತರಾದರು. ೧೯೬೬ ಸೆಪ್ಟೆಂಬರ್ ೨ರಂದು ಕಲ್ಕತ್ತಾದಲ್ಲಿ ನಿಧನರಾದರು.

ಎಂ. ಹಿರಿಯಣ್ಣ, ಬಿಎಂಶ್ರೀ, ಎ.ಆರ್. ಕೃಷ್ಣಶಾಸ್ತ್ರಿ, ಟಿ.ಎಸ್. ವೆಂಕಣ್ಣಯ್ಯ ಮೊದಲಾದವರು ಗುರುಗಳಾಗಿ ಇವರ ಮೇಲೆ ಪ್ರಭಾವ ಬೀರಿದರು. ಎ.ಎನ್. ಮೂರ್ತಿರಾವ್, ಪು.ತಿ.ನ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಡಿ.ಎಲ್.ಎನ್. ಮೊದಲಾದ ಸಾಹಿತಿಗಳು ತೀನಂಶ್ರೀ ಅವರ ಆತ್ಮೀಯರು. ಡಾ. ಸುನೀತಿಕುಮಾರ್ ಚಟರ್ಜಿ, ಡಾ.ಎಂ.ಬಿ. ಎಮಿನೊ, ಡಾ. ಕತ್ರಿ ಮೊದಲಾದ ಪ್ರಸಿದ್ಧ ಭಾಷಾವಿಜ್ಞಾನಿಗಳು ತೀನಂಶ್ರೀ ಅವರ ಸ್ನೇಹಿತರು. ದೇಜಗೌ, ಜಿ.ಎಸ್.ಎಸ್, ಎಂ.ವಿ. ಸೀತಾರಾಮಯ್ಯ, ಎಂ. ಚಿದಾನಂದ ಮೂರ್ತಿ, ಹಂಪನಾ, ಸುಜನಾ ಮೊದಲಾದವರು ಇವರ ಶಿಷ್ಯರು.

ತೀನಂಶ್ರೀ ಅವರು ಅನೇಕ ವಿಶಿಷ್ಟ ಕೃತಿಗಳನ್ನು ರಚಿಸಿದ್ದಾರೆ ಹಾಗೂ ಸಂಪಾದನೆ ಮಾಡಿಕೊಟ್ಟಿದಾರೆ. ಹರಿಹರ ಕವಿಯ 'ನಂಬಿಯಣ್ಣನ ರಗಳೆ'(೧೯೪೯) ಶ್ರೀಕಂಠಯ್ಯನವರು ತಮ್ಮ ವಿದ್ವತ್ತು ಮತ್ತು ಗ್ರಂಥ ಸಂಪಾದನ ಶಾಸ್ತ್ರದ ಜ್ಞಾನಗಳನ್ನು ಧಾರೆಯೆರೆದು ಸಂಪಾದಿಸಿದ ಪ್ರಾಚೀನ ಕನ್ನಡ ಕಾವ್ಯ. ಹರಿಹರನ ಅತ್ಯುತ್ಕೃಷ್ಟ ಕಥೆಗಳಲ್ಲಿ ಒಂದಾದ ಇದನ್ನು ಮೊತ್ತಮೊದಲು ಸಂಪಾದಿಸಿ ಪ್ರಕಟಿಸಿದ ಕೀರ್ತಿ ತೀನಂಶ್ರೀ ಅವರದು. ಓಲೆ ಮತ್ತು ಕಾಗದ ಹಸ್ತಪ್ರತಿಗಳನ್ನು ಉಪಯೋಗಿಸಿಕೊಂಡು ಸಂಪಾದಿಸಿದ ಈ ಅಪರೂಪದ ಗ್ರಂಥವನ್ನು ಟಿ.ಎಸ್. ವೆಂಕಣ್ಣಯ್ಯನವರಿಗೆ ಅರ್ಪಿಸಿದ್ದಾರೆ. ಟಿ.ಎಸ್. ವೆಂಕಣ್ಣಯ್ಯನವರು ಹರಿಹರನ ಬಸವರಾಜದೇವರ ರಗಳೆಯನ್ನು ಸಂಪಾದಿಸುತ್ತಿದ್ದಾಗ ಶ್ರೀಕಂಠಯ್ಯನವರು, ಡಿ.ಎಲ್.ಎನ್. ಅವರೊಡನೆ ದುಡಿದಿದ್ದರು. ವೀರಶೈವ ಸಾಹಿತ್ಯದ ವಿಶೇಷ ಅಧ್ಯಯನ ಮತ್ತು ನಂಬಿಯಣ್ಣನ ರಗಳೆಯ ಸಂಪಾದನಕಾರ್ಯಕ್ಕೆ ಇದು ಸ್ಫೂರ್ತಿಯನ್ನು ಕೊಟ್ಟಿರಬೇಕು.

'ರನ್ನ ಕವಿಯ ಗದಾಯುದ್ಧ ಸಂಗ್ರಹಂ'(೧೯೪೯) ತೀನಂಶ್ರೀ ಸಂಪಾದಿಸಿದ ಇನ್ನೊಂದು ಮಹತ್ತ್ವದ ಕೃತಿ. ೯೨ ಪುಟಗಳಷ್ಟು ಪಠ್ಯಭಾಗವಿರುವ ಈ ಸಂಗ್ರಹಕ್ಕೆ ಕೊಟ್ಟಿರುವ ಟಿಪ್ಪಣಿಗಳು ೧೧೬ ಪುಟಗಳಷ್ಟು. ಈ ಟಿಪ್ಪಣಿಗಳು ಹಳಗನ್ನಡ ಭಾಷೆ, ಕಾವ್ಯಗಳನ್ನು ಅಭ್ಯಾಸ ಮಾಡುವವರಿಗೆ ಒಂದು ಅನನ್ಯವಾದ ವಸ್ತುಕೋಶವಾಗಿರುವುದಲ್ಲದೆ ಹಳೆಯ ಕಾವ್ಯಗಳಿಗೆ ಬರೆಯಬೇಕಾದ ಟಿಪ್ಪಣಿಗಳಿಗೆ ಒಂದು ಮಾದರಿಯೂ ಆಗಿವೆ. 'ಬಿಡಿಮುತ್ತು'(೧೯೭೦), 'ಅಮರ ಶತಕ' ಮತ್ತು ಇತರ ಕೆಲವು ಪ್ರಸಿದ್ಧ ಸಂಸ್ಕೃತ ಸುಭಾಷಿತ ಸಂಕಲನಗಳಿಂದ ಆಯ್ಕೆಮಾಡಿದ ೨೧೫ ಮುಕ್ತಕಗಳ ಕನ್ನಡ ಅನುವಾದ. ತೀನಂಶ್ರೀ ಅವರು ಕಾಲಕಾಲಕ್ಕೆ ಸಂಗ್ರಹಿಸಿ ಅನುವಾದ ಮಾಡಿಟ್ಟುಕೊಂಡ ಪದ್ಯಗಳು ಇದರಲ್ಲಿವೆ.

'ಭಾರತೀಯ ಕಾವ್ಯಮೀಮಾಂಸೆ'(೧೯೫೩) ತೀನಂಶ್ರೀ ಅವರ ಹೆಸರು ಶಾಶ್ವತವಾಗಿ ಉಳಿಯುವಂತೆ ಮಾಡಿದ ಕೃತಿ. ಇದನ್ನು ಬರೆಯಲು ಪ್ರೇರಣೆ ಕೊಟ್ಟವರು ಆಚಾರ್ಯ ಬಿ.ಎಂ.ಶ್ರೀ. ಅದಕ್ಕೆ ನೆರವು ಕೊಟ್ಟವರು ಪ್ರೊ.ಎಂ. ಹಿರಿಯಣ್ಣನವರು. ಈ ಇಬ್ಬರು ಗುರುಗಳಿಗೆ ನೀಡಿದ ಗುರುದಕ್ಷಿಣೆಯೇ ಈ ಕೃತಿ. ೪೭೬ ಪುಟಗಳ ಈ ಗ್ರಂಥ ಭಾರತೀಯ ಕಾವ್ಯ ಲಕ್ಷಣ, ಶಾಸ್ತ್ರಗ್ರಂಥಗಳ ಪರಂಪರೆಯನ್ನು ಸಾವಿರ ಪುಟಗಳಲ್ಲಿ ಹೇಳಲಾರದಷ್ಟು ಸಮಗ್ರವಾಗಿ ಪರಿಚಯ ಮಾಡಿಕೊಡುತ್ತದೆ. 'No Indian language has a book that can even distantly approach Bharathiya kaavya mimamse' (ಸಾಲುದೀಪ ಗಳು: ತೀ.ನಂ. ಶ್ರೀಕಂಠಯ್ಯ ಎಚ್.ಜಿ. ಸಣ್ಣಗುಡ್ಡಯ್ಯ, ಪು.೩೧೯) ಎಂದು ಪ್ರೊ.ಡಿ.ಎಲ್.ಎನ್. ಹೇಳಿದ್ದು ನಿರಾಧಾರವಾದ ಮಾತಲ್ಲ. ತೌಲನಿಕ ಕಾವ್ಯಮೀಮಾಂಸೆ ಶಾಸ್ತ್ರಕ್ಕೆ ಭರತಖಂಡದ ಕೊಡುಗೆಯಾದ ರಸ–ಧ್ವನಿ–ಔಚಿತ್ಯತತ್ತ್ವ– ಇವುಗಳ ಸಾರವನ್ನು ವಿಸ್ತಾರವಾಗಿ ಪ್ರತಿಪಾದಿಸುವ ಆಧುನಿಕ ಗ್ರಂಥ ಕನ್ನಡದಲ್ಲಿ ಇರಲಿಲ್ಲ. ಈ ಕೊರತೆಯನ್ನು ತೀನಂಶ್ರೀ ಅವರ ಗ್ರಂಥ ತುಂಬಿತು. ಇದು ಪ್ರಕಟವಾದ ಕಾಲಕ್ಕೆ ಇಂಗ್ಲಿಷ್ ಭಾಷೆಯಲ್ಲಿ ಕೂಡ ಈ ವಿಷಯವನ್ನು ಕುರಿತ ಒಂದು ಸಮಗ್ರ ಕೃತಿ ಇರಲಿಲ್ಲವೆಂಬುದು ಈ ಗ್ರಂಥದಲ್ಲಿ ಬಳಸಿಕೊಂಡಿರುವ ಪರಾಮರ್ಶನ ಗ್ರಂಥಗಳ ಪಟ್ಟಿಯಿಂದ ತಿಳಿಯುತ್ತದೆ. ಇದು ಪ್ರಕಟವಾದ ೨೬ ವರ್ಷಗಳ ಬಳಿಕ ಇದಕ್ಕೆ ಪಂಪ ಪ್ರಶಸ್ತಿ ದೊರೆತಿದೆ. ಈ ಕೃತಿಯ ಮಹತ್ತ್ವ ಮತ್ತು ಪ್ರಭಾವ ತಲೆಮಾರುಗಳು ಕಳೆದರೂ ಕಡಿಮೆಯಾಗದು ಎಂಬುದಕ್ಕೆ ಇದು ಸಾಕ್ಷಿಯಾಗಿದೆ.

'ಕಾವ್ಯಸಮೀಕ್ಷೆ'(೧೯೪೭) ಸಮೀಕ್ಷಾಲೇಖನಗಳ ಸಂಕಲನ. ಮೊದಲೆರಡು ಲೇಖನಗಳು ಕಾಳಿದಾಸನ ನಾಟಕದ ವಸ್ತು ಮತ್ತು ಪಾತ್ರಗಳನ್ನು ಕುರಿತವು. ಶ್ರೀಯವರ ಅಶ್ವತ್ಥಾಮನ್, ಪಾರಸಿಕರು ಈ ನಾಟಕಗಳ ರಚನೆಯಿಂದ ಪ್ರಾರಂಭವಾಗಿದ್ದ ಪಾಶ್ಚಾತ್ಯ ರುದ್ರನಾಟಕಗಳ ಬಗೆಗಿನ ಹೊಸ ಪ್ರೇಮದ ಹಿನ್ನೆಲೆಯಲ್ಲಿ ಭಾರತೀಯ ನಾಟಕಗಳ ವಸ್ತುವಿನಲ್ಲಿದ್ದ ಸಹಜ ದುರಂತವನ್ನು ಸುಖಾಂತವಾಗಿ ಮಾರ್ಪಡಿಸುತ್ತಿದ್ದ ನವಕವಿಗಳ ವಿವೇಕವನ್ನು ಒರೆಹಚ್ಚಿ ನೋಡುವ ಪ್ರಯತ್ನ ಮೊದಲ ಲೇಖನದಲ್ಲಿದೆ. 'ಕಾವ್ಯಾವಲೋಕನ'(೧೯೫೮) ಎಂಬ ಪುಸ್ತಕದಲ್ಲಿ ತೀನಂಶ್ರೀ ಅವರು ಭಾಷೆ, ವ್ಯಾಕರಣ ಮತ್ತು ಛಂದಸ್ಸನ್ನು ಕುರಿತಂತೆ ಪತ್ರಿಕೆಗಳಿಗೆ ಬರೆದ ಲೇಖನಗಳು ಉಪನ್ಯಾಸಗಳು ಮತ್ತು ಗ್ರಂಥಗಳಿಗೆ ಬರೆದ ಪ್ರಸ್ತಾವನೆಗಳು ಇತ್ಯಾದಿ ಸೇರಿವೆ. ಈ ಸಂಕಲನದಲ್ಲಿ ಛಂದಸ್ಸಿಗೆ ಸಂಬಂಧಿಸಿದ ನಾಲ್ಕು ಲೇಖನಗಳಿವೆ. ಒಂದು 'ಅಪೂರ್ವ' ಷಟ್ಪದಿಯ ಲಕ್ಷಣ ಕುರಿತ ಸಂಶೋಧನ ಲೇಖನ, ಹೊಸಗನ್ನಡ ಛಂದಸ್ಸಿನ ಅಭ್ಯಾಸಕ್ಕೆ ಅಸ್ತಿಭಾರ ಎನ್ನಬಹುದಾದ ಮೂರು ಮಹತ್ತ್ವದ ಲೇಖನಗಳು ಇದರಲ್ಲಿವೆ. ಹೊಸ ಕಾವ್ಯಕ್ಕೆ ಸಂಸ್ಕೃತ ಛಂದೋವೃತ್ತಗಳ ಅಳವಡಿಕೆಯಲ್ಲಿ ಉಂಟಾದ ಕೊರತೆಗಳನ್ನು ಸ್ಪಷ್ಟಪಡಿಸಿ ಅದಕ್ಕೆ ಹೊಸ ಮಟ್ಟುಗಳ ಆವಶ್ಯಕತೆ ಹೇಗೆ ಉಂಟಾಯಿತು ಎಂಬುದನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ. ಹಾಗೆಯೇ ಮಾತ್ರೆ, ಮುಡಿ, ಪದ್ಮಗಣ ಎಂಬ ಲೇಖನದಲ್ಲಿ ಸಾಮಾನ್ಯ ದೃಷ್ಟಿಗೆ ನಿಯಮಗಳ ಉಲ್ಲಂಘನೆಯಂತೆ ಕಾಣುವ ವೈವಿಧ್ಯತೆಗಳನ್ನೆಲ್ಲ ಪಟ್ಟಿ ಮಾಡಿ ಅವು ಸಹ ದ್ರಾವಿಡ ಛಂದಸ್ಸಿನ ಅಂಶಗಣದಿಂದ ಸ್ಫುರಿಸಿದವು ಎಂಬುದನ್ನು ಗುರುತಿಸಿ ಅವಕ್ಕೆ ಹೊಸ ಹೆಸರುಗಳನ್ನು ಕೊಟ್ಟು ಅವುಗಳ ಅಭ್ಯಾಸಕ್ಕೆ ಒಂದು ಶಾಸ್ತ್ರೀಯವಾದ ಚೌಕಟ್ಟನ್ನು ಕಲ್ಪಿಸಿದ್ದಾರೆ. ಅವರು ಈ ಲೇಖನದಲ್ಲಿ ಕೊಟ್ಟ ಮುಡಿ, ಪದ್ಮಗಣ, ಗಣಪರಿವೃತ್ತಿ, ಕಂಪಿತ ಮೊದಲಾದ ಹೆಸರುಗಳು ಪ್ರಸ್ತುತ ಹೊಸ ಛಂದಸ್ಸಿನ ಅಧ್ಯಯನದಲ್ಲಿ ಸುಪರಿಚಿತವಾಗಿವೆ. ಈ ಲೇಖನಗಳು ಕನ್ನಡ ಛಂದಸ್ಸಿನ ಅಧ್ಯಯನಕ್ಕೆ ತೀನಂಶ್ರೀ ಅವರು ಕೊಟ್ಟ ಮುಖ್ಯ ಕೊಡುಗೆಯಾಗಿವೆ.

'ಕಾವ್ಯಾನುಭವ'(೧೯೭೦) ತೀನಂಶ್ರೀ ಮರಣಾನಂತರ ಪ್ರಕಟವಾದ ಕೃತಿ. ಗದಾಯುದ್ಧದ ವಿಚಾರ, ಚತ್ತಾಣ ಮತ್ತು ಬೆದಂಡೆ ಮುಂತಾದ ಆರು ಲೇಖನಗಳ ಜೊತೆಗೆ ಕೆಲವು ಮುನ್ನುಡಿಗಳು, ಆಕಾಶವಾಣಿಯ ಭಾಷಣಗಳು ಸೇರಿ ಒಟ್ಟು ೧೭

ಲೇಖನಗಳಿವೆ. ಇವರ ಬರೆವಣಿಗೆಗಳು ಮೌಲಿಕವಾಗಿದ್ದು ಸಾಹಿತ್ಯ ಹಾಗೂ ವಿದ್ವತ್ತಿನ ವಿವಿಧ ಕ್ಷೇತ್ರಗಳಿಗೆ ಭದ್ರವಾದ ಬುನಾದಿಯನ್ನು ಹಾಕಿವೆ ಎಂದು ಹೇಳಬಹುದು.

ತೀನಂಶ್ರೀ ಅವರಿಗೆ ಲಭಿಸಿದ ಗೌರವ ಮತ್ತು ಪ್ರಶಸ್ತಿಗಳು ಹೀಗಿವೆ: ೧. ೧೯೫೭ರಲ್ಲಿ ದೆಹಲಿಯಲ್ಲಿ ನಡೆದ ಅಖಿಲ ಭಾರತ ರಾಜ್ಯ ವಿದ್ವತ್ ಸಮ್ಮೇಳನದ ದ್ರಾವಿಡ ಸಂಸ್ಕೃತಿ ಗೋಷ್ಠಿಯ ಅಧ್ಯಕ್ಷರಾಗಿದ್ದರು. ೨. ೧೯೬೧ ಡಿಸೆಂಬರ್‌ನಲ್ಲಿ ಗದಗಿನಲ್ಲಿ ನಡೆದ ೪೩ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಭಾಷಾಬಾಂಧವ್ಯ ಗೋಷ್ಠಿಯ ಅಧ್ಯಕ್ಷರಾಗಿದ್ದರು. ೩. ೧೯೬೦ರಲ್ಲಿ ಭಾರತ ಭಾಷಾವಿಜ್ಞಾನಿಗಳ ಸಂಘದ ಅಧ್ಯಕ್ಷರಾಗಿದ್ದರು. ೪. ಮರಣೋತ್ತರವಾಗಿ ಪಂಪಪ್ರಶಸ್ತಿ ಲಭಿಸಿತು(೧೯೮೮).

ತೀನಂಶ್ರೀ ಅವರು ಕವಿಯಾಗಿ, ಪ್ರಬಂಧಕಾರರಾಗಿ, ವಿಮರ್ಶಕರಾಗಿ, ಅನುವಾದಕರಾಗಿ ಕನ್ನಡ ಸಾಹಿತ್ಯದಲ್ಲಿ ಕೆಲಸ ಮಾಡಿದ್ದಾರೆ. ಕಾವ್ಯಮೀಮಾಂಸೆ, ಭಾಷಾವಿಜ್ಞಾನ, ಗ್ರಂಥಸಂಪಾದನೆ, ಛಂದಸ್ಸು ಈ ಕ್ಷೇತ್ರಗಳಲ್ಲೂ ದುಡಿದು ಶ್ರೇಷ್ಠ ವಿದ್ವಾಂಸರೆನಿಸಿಕೊಂಡಿದ್ದಾರೆ. ಇವರು ಸೆಪ್ಟೆಂಬರ್ ೭, ೧೯೬೮ರಂದು ನಿಧನರಾದರು.

❐ ❐ ❐

ಡಿ.ಎಲ್. ನರಸಿಂಹಾಚಾರ್

(೧೯೦೬–೧೯೭೧)

ಬಿ. ವೆಂಕಟರಾಮಣ್ಣ

ಕನ್ನಡ, ತಮಿಳು, ತೆಲುಗು, ಸಂಸ್ಕೃತ ಹಾಗೂ ಇಂಗ್ಲಿಷ್‌ಗಳಲ್ಲಿ ಅಪಾರ ಪ್ರಭುತ್ವ ಪಡೆದಿದ್ದು ಚಲಿಸುವ ವಿಶ್ವಕೋಶ ಎಂದು ಹೆಸರು ಮಾಡಿದವರು ಡಿ.ಎಲ್. ಎನ್. ಕನ್ನಡನಾಡಿನ ಪ್ರಸಿದ್ಧ ವಿದ್ವಾಂಸರಲ್ಲಿ ಅಗ್ರಗಣ್ಯರೆನಿಸಿ, ಕನ್ನಡ ಭಾಷೆ, ಸಾಹಿತ್ಯಗಳ ಸಂಶೋಧನ ಕ್ಷೇತ್ರದಲ್ಲಿ ಮೌಲಿಕವೂ ಮಾರ್ಗದರ್ಶಕವೂ ಆದ ಹಲವಾರು ಕೆಲಸಗಳನ್ನು ಮಾಡಿ ಕೀರ್ತಿಶಾಲಿಗಳಾದವರು. ಇವರ ಪೂರ್ಣ ಹೆಸರು ದೊಡ್ಡಬೆಲೆ ಲಕ್ಷ್ಮೀನರಸಿಂಹಾಚಾರ್. ಇವರು ೨೭–೧೦–೧೯೦೬ರಂದು ಚಿಕ್ಕನಾಯಕ ನಹಳ್ಳಿಯಲ್ಲಿ ತಮ್ಮ ತಾಯಿಯ ತಂದೆ ಅಣ್ಣಾಸ್ವಾಮಿ ಅಯ್ಯಂಗಾರ್ಯರ ಮನೆಯಲ್ಲಿ ಹುಟ್ಟಿದರು. ಇವರ ತಂದೆ ಶ್ಯಾಮಯ್ಯಂಗಾರ್. ಇವರ ಪೂರ್ವಿಕರು ಸೇಲಂ ಜಿಲ್ಲೆಯಿಂದ ಬಂದವರು. ಗಂಡಿಕೋಟ ಅವರ ನೆಲೆಯಾಗಿತ್ತು. ವಿಜಯನಗರದ ಕಾಲದಲ್ಲಿ ಅವರು ಈ ಕಡೆ ವಲಸೆ ಬಂದರು.

ಡಿ.ಎಲ್.ಎನ್. ಅವರ ತಂದೆ ಸರ್ಕಾರಿ ನೌಕರರಾದುದರಿಂದ ಆಗಾಗ ವರ್ಗಾವಣೆಯಾಗುತ್ತಿತ್ತು. ಹಾಗಾಗಿ ಡಿ.ಎಲ್.ಎನ್. ಅವರ ವಿದ್ಯಾಭ್ಯಾಸದ ಸ್ಥಾನವು ಬದಲಾಗುತ್ತಿತ್ತು. ಮೊದಲು ಪಾವಗಡದಲ್ಲಿಯೂ ಅನಂತರ ಮಧುಗಿರಿ ಮತ್ತು ಶಿರಾಗಳಲ್ಲಿ ಮುಂದಿನ ವಿದ್ಯಾಭ್ಯಾಸ ನಡೆಯಿತು. ನರಸಿಂಹಾಚಾರ್ಯರ ಅಜ್ಜ ದೊಡ್ಡಬೆಲೆ ಕೃಷ್ಣಮಾಚಾರ್ ಅವರು ಕುಮಾರವ್ಯಾಸ ಭಾರತವನ್ನು ವಾಚಿಸುತ್ತಿದ್ದರು. ಇದರ ಪ್ರಭಾವದಿಂದ ಡಿ.ಎಲ್.ಎನ್. ೧೨ನೇ ವಯಸ್ಸಿನಲ್ಲೇ ಜೈಮಿನಿ ಭಾರತದ ಕೆಲವು ಭಾಗಗಳ ಬಾಯಿಪಾಠ ಮಾಡಿದ್ದರು. ತುಮಕೂರಿನಲ್ಲಿ ಹೈಸ್ಕೂಲ್ ಓದುತ್ತಿದ್ದಾಗಲೇ ಅವರು ಲೇಖನಗಳನ್ನು ಬರೆಯುತ್ತಿದ್ದರು. ಖಾಸಗಿಯಾಗಿ

ಶಾಸ್ತ್ರಿಗಳೊಬ್ಬರಿಂದ ಸಂಸ್ಕೃತ ಕಲಿತು ರಘುವಂಶ ಮುಂತಾದ ಸಂಸ್ಕೃತ ಕೃತಿಗಳನ್ನು ವ್ಯಾಸಂಗ ಮಾಡಿದರು.

೧೯೨೪ರಲ್ಲಿ ಬಿ.ಎಂ.ಶ್ರೀ. ಅವರು ಕಾಲೇಜು ತರಗತಿಗಳ ಇನ್‌ಸ್ಪೆಕ್ಷನ್‌ಗಾಗಿ ತುಮಕೂರಿಗೆ ಹೋಗಿದ್ದಾಗ ಅವರ ಉಪನ್ಯಾಸ ಏರ್ಪಡಿಸಲಾಗಿತ್ತು. ಆಗ ಡಿ.ಎಲ್.ಎನ್. ಶ್ರೀಯವರ ಭಾಷಣದಿಂದ ತುಂಬಾ ಪ್ರಭಾವಿತರಾದರು. ಅನಂತರ ಅವರು ಬೆಂಗಳೂರಿನ ಸೆಂಟ್ರಲ್ ಕಾಲೇಜು ಸೇರಿ ಚಿನ್ನದ ಪದಕದೊಂದಿಗೆ ೧೯೨೭ರಲ್ಲಿ ಬಿ.ಎ. ಪದವಿ ಗಳಿಸಿದರು. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಎಂ.ಎ. ವ್ಯಾಸಂಗ ಮಾಡಿ ೧೯೨೯ರಲ್ಲಿ ಚಿನ್ನದ ಪದಕದೊಂದಿಗೆ ಎಂ.ಎ. ಪದವಿ ಪಡೆದರು. ಅನಂತರ ಮೈಸೂರು ವಿಶ್ವವಿದ್ಯಾಲಯದಿಂದ ಸಂಶೋಧನ ವಿದ್ಯಾರ್ಥಿವೇತನ ಪಡೆದು 'ವೀರಶೈವ ಸಾಹಿತ್ಯದ ಉಗಮ' ಎಂಬ ವಿಷಯದಲ್ಲಿ ಪ್ರಬಂಧವನ್ನು ಬರೆದರು. ಎಂ.ಎ. ಓದುತ್ತಿದ್ದಾಗ ಬಿ.ಎಂ.ಶ್ರೀ., ಟಿ.ಎಸ್. ವೆಂಕಣ್ಣಯ್ಯ, ಎ.ಆರ್. ಕೃಷ್ಣಶಾಸ್ತ್ರಿಗಳಂತಹ ಘನ ವಿದ್ವಾಂಸರು ಇವರಿಗೆ ವಿದ್ಯಾಗುರುಗಳಾಗಿದ್ದರು. ಇವರ ಸಹಪಾಠಿಗಳಾಗಿದ್ದವರು ಕುವೆಂಪು, ಎನ್. ಅನಂತರಂಗಾಚಾರ್, ಕೆ. ವೆಂಕಟರಾಮಪ್ಪ, ಡಿ.ಕೆ. ಭೀಮಸೇನರಾವ್ ಮೊದಲಾದ ಪ್ರತಿಭಾವಂತರೆಂಬುದು ಗಮನಿಸತಕ್ಕ ಸಂಗತಿ.

೧೯೩೦ರಲ್ಲಿ ಡಿ.ಎಲ್.ಎನ್. ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾ ಸಂಸ್ಥೆಯಲ್ಲಿ ರೆಸಿಡೆಂಟ್ ಕನ್ನಡ ಪಂಡಿತರಾಗಿ ವೃತ್ತಿಜೀವನವನ್ನು ಪ್ರಾರಂಭಿಸಿದರು. ತಿಂಗಳಿಗೆ ಒಂಬತ್ತು ರೂಪಾಯಿ ಸಂಬಳವಿತ್ತು. ಜೊತೆಗೆ ಮಹಾರಾಜ ಕಾಲೇಜಿನಲ್ಲಿ ಅರೆಕಾಲಿಕ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದರು. ಅನಂತರ ೧೯೩೨ರಲ್ಲಿ ಮಹಾರಾಜ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ನೇಮಕಗೊಂಡರು. ೧೯೪೫ರಲ್ಲಿ ಉಪಪ್ರಾಧ್ಯಾಪಕರಾಗಿ ಬೆಂಗಳೂರಿನ ಸೆಂಟ್ರಲ್ ಕಾಲೇಜು ಸೇರಿದರು. ಮುಂದೆ ೧೯೫೫ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ನೇಮಕವಾದರು. ೧೯೫೯ ರಿಂದ ೧೯೬೨ರ ತನಕ ಪ್ರಬುದ್ಧ ಕರ್ನಾಟಕ ಪತ್ರಿಕೆಯ ಸಂಪಾದಕರಾಗಿದ್ದು ಇದೇ ವರ್ಷ ನಿವೃತ್ತರಾದರು. ನಿವೃತ್ತಿಯ ಅನಂತರ ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗದ ಸಂಶೋಧನ ವಿದ್ವಾಂಸರಾಗಿ ಕೆಲಸ ಮಾಡಿದರು.

ಡಿ.ಎಲ್.ಎನ್. ಅವರು ಅನೇಕ ಕೃತಿಗಳನ್ನು ಹೊರತಂದು ಕನ್ನಡ ಸಾಹಿತ್ಯಕ್ಕೆ ಗಣನೀಯ ಕೊಡುಗೆ ನೀಡಿದವರು.

ಸಂಪಾದಿತ ಕೃತಿಗಳು: 'ಸಕಲವೈದ್ಯಸಂಹಿತಾಸಾರಾರ್ಣವ'(೧೯೩೨) ೧೯೨೦ರಲ್ಲಿ ಮುದ್ರಣವಾಗಿದ್ದ ಕಳಲೆ ವೀರರಾಜೇಂದ್ರನ ವೈದ್ಯಗ್ರಂಥದ ಮೊದಲ ಭಾಗವಿದು. ೧೯೩೨ರಲ್ಲಿ ಡಿ.ಎಲ್.ಎನ್. ಇದನ್ನು ಸಂಪಾದಿಸಿ ಪ್ರಕಟಿಸಿದರು. ಕವಿ ಕೃತಿಯನ್ನು ಕುರಿತು ಇಲ್ಲಿ ವಿವರವಾಗಿ ಚರ್ಚಿಸಲಾಗಿದೆ. ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾಲಯ ಈ ಕೃತಿಯನ್ನು ಪ್ರಕಟಿಸಿದೆ.

'ಕುಮಾರವ್ಯಾಸಭಾರತ'ದ ಭೀಷ್ಮಪರ್ವ(೧೯೩೩): ಕುಮಾರವ್ಯಾಸಭಾರತದ ಯುದ್ಧ ಪಂಚಕದಲ್ಲಿ ಇದು ಮೊದಲನೆಯದು. ೧೯೩೦ರಲ್ಲಿ ಡಿ.ಎಲ್.ಎನ್. ಅವರು ಟಿ.ಎಸ್. ವೆಂಕಣ್ಣಯ್ಯ ಹಾಗೂ ತೀ.ನಂ. ಶ್ರೀಕಂಠಯ್ಯ ಅವರೊಂದಿಗೆ ಸಂಗ್ರಹವನ್ನು ಸಿದ್ಧಪಡಿಸಿದ್ದರು. ಅನಂತರ ಹೊಸ ರೀತಿಯಲ್ಲಿ ಶುದ್ಧಪಾಠಗಳೊಂದಿಗೆ ಇದನ್ನು ಸಂಪಾದಿಸಿದ್ದಾರೆ. ಡಿ.ಎಲ್.ಎನ್ ಅವರು ಪಾಠನಿರ್ಣಯದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿರುವುದು ಇಲ್ಲಿ ಎದ್ದು ಕಾಣುತ್ತದೆ. ಗ್ರಂಥಸಂಪಾದನೆಯ ತತ್ವಗಳನ್ನು ಅರ್ಥಪೂರ್ಣವಾಗಿ ಪಾಲಿಸಿರುವುದು ಗೋಚರಿಸುತ್ತದೆ.

'ಪಂಪ ರಾಮಾಯಣ ಸಂಗ್ರಹ'(೧೯೩೬): ಇದು ಜೈನಕವಿ(೧೧೦೦) ನಾಗಚಂದ್ರನ ಪಂಪ ರಾಮಾಯಣದ ಸಂಗ್ರಹ. ವಿದ್ಯಾರ್ಥಿಗಳಿಗಾಗಿ ಸಂಪಾದಿಸಿರುವ ಇದರಲ್ಲಿ ಡಿ.ಎಲ್.ಎನ್. ಕವಿಯ ಕಾಲ, ಜೀವನ ಹಾಗೂ ಜೈನ ರಾಮಾಯಣಗಳ ಪ್ರಸ್ತಾಪ ಮಾಡಿದ್ದಾರೆ. ಸರಳವಾದ ರೀತಿಯಲ್ಲಿ ಕಾವ್ಯ ವಿಮರ್ಶೆಯನ್ನೂ ಮಾಡ ಲಾಗಿದೆ.

ರಾಘವಾಂಕ ಕವಿಯ 'ಸಿದ್ಧರಾಮಚಾರಿತ್ರ್ಯ'(೧೯೪೧) ವನ್ನು ಡಿ.ಎಲ್.ಎನ್. ವೆಂಕಣ್ಣಯ್ಯನವರೊಂದಿಗೆ ಸಂಪಾದಿಸಿದ್ದಾರೆ. ಈ ಕೃತಿಗೆ ಡಿ.ಎಲ್. ನರಸಿಂಹಾಚಾರ್ ಅವರೇ ಸುದೀರ್ಘ ಪೀಠಿಕೆಯನ್ನು ಬರೆದಿದ್ದಾರೆ. ಇಲ್ಲಿ ಕವಿಯ ಜೀವನ ಮತ್ತು ಕಾಲದ ಬಗೆಗೆ ಚರ್ಚಿಸಲಾಗಿದೆ. ರಾಘವಾಂಕನ ಕಾಲನಿರ್ಣಯದ ಸಂದರ್ಭದಲ್ಲಿ ಹರಿಹರ ಹಾಗೂ ಕೆರೆಯ ಪದ್ಮರಸರಂತಹ ಸಮಕಾಲೀನರ ಕಾಲದ ವಿವರಗಳನ್ನು ಪಡೆದುಕೊಂಡು ಅಂದಿನ ಆಳರಸರಾಗಿದ್ದ ರಾಚಮಲ್ಲ ಕಲಿದೇವ,

ಓರುಗಲ್ಲಿನ ಕಾಕತೀಯ ರುದ್ರ ಮೊದಲಾದವರ ಆಳ್ವಿಕೆಯ ಅವಧಿಯನ್ನು ಪರಿಶೀಲಿಸಿ ಕಿಟೆಲ್, ಆರ್. ನರಸಿಂಹಾಚಾರ್, ಕುಂದಣಗಾರ, ಗೋವಿಂದ ಪೈ ಮೊದಲಾದವರ ಅಭಿಪ್ರಾಯಗಳನ್ನು ಸಂಗ್ರಹಿಸಿ, ಚರ್ಚಿಸಿ ಒಂದು ನಿರ್ಣಯಕ್ಕೆ ಬರುತ್ತಾರೆ. ರಾಘವಾಂಕ ಕವಿಯ ಕಥಾನಾಯಕ ಸಿದ್ಧರಾಮನನ್ನು ಕುರಿತು ಆ ಕಥೆಯ ಮೂಲ ಬೆಳೆವಣಿಗೆಯ ಬಗೆಗೆ ಸುದೀರ್ಘವಾಗಿ ವಿವರಿಸಲಾಗಿದೆ. ಇದೇ ಸಂದರ್ಭದಲ್ಲಿ ಸಿದ್ಧರಾಮ ಶೈವನೇ ಅಥವಾ ವೀರಶೈವನೇ ಎಂಬ ವಿಷಯದ ಬಗ್ಗೆ ಚರ್ಚಿಸಿ ಸಿದ್ಧರಾಮ ಮೊದಲು ಶೈವನಾಗಿದ್ದು ಆನಂತರದಲ್ಲಿ ವೀರಶೈವನಾಗಿರಬೇಕೆಂಬ ತೀರ್ಮಾನಕ್ಕೆ ಬರುತ್ತಾರೆ.

ಶಿವಕೋಟ್ಯಾಚಾರ್ಯ ವಿರಚಿತ 'ವಡ್ಡಾರಾಧನೆ'(೧೯೪೯): ಈ ಕೃತಿಯನ್ನು ತಮ್ಮ ಗುರುಗಳಾದ ಬಿ.ಎಂ. ಶ್ರೀಕಂಠಯ್ಯ ನವರಿಗೆ ಅರ್ಪಿಸಿದ್ದಾರೆ. ಆರು ಹಸ್ತಪ್ರತಿಗಳನ್ನಾಧರಿಸಿ ಇದನ್ನು ಸಂಪಾದಿಸಿದ್ದಾರೆ. ಕೃತಿಯಲ್ಲಿ ಪ್ರತಿಯೊಂದು ಕಥೆಗೂ ಟಿಪ್ಪಣಿ ಗಳನ್ನು ಕೊಡಲಾಗಿದೆ. ಕಠಿಣ ಪದಗಳ ಶಬ್ದಕೋಶ, ಜೈನ ಪಾರಿಭಾಷಿಕ ಶಬ್ದಕೋಶ, ಉದ್ಧೃತ, ಪದ್ಯಗಳ ಅಕಾರಾದಿ, ಸಂಕೇತಗಳ ವಿವರ ಇವೆಲ್ಲ ಅನುಬಂಧದಲ್ಲಿ ಬಂದಿವೆ. ಕೃತಿಯ ಹೆಸರು, ಕವಿಯ ಹೆಸರು ಇವುಗಳನ್ನು ಕುರಿತು ಚರ್ಚಿಸಿದ್ದಾರೆ. ಕವಿಯ ಕಾಲದ ಬಗೆಗೆ ಶಾಸನ ಮತ್ತಿತರ ಆಧಾರಗಳಿಂದ ಕ್ರಿ.ಶ.೯೨೦ ಎಂದು ಖಚಿತಪಡಿಸಿದ್ದಾರೆ. ಶಿವಕೋಟ್ಯಾಚಾರ್ಯ ಬಳ್ಳಾರಿ ಜಿಲ್ಲೆಯ ಕೋಗಳಿ ನಾಡಿಗೆ ಸೇರಿರಬಹುದೆಂಬುದನ್ನು ಪ್ರಸ್ತಾಪಿಸಿದ್ದಾರೆ.

'ಸಿದ್ಧರಾಮಚರಿತೆಯ ಸಂಗ್ರಹ'(೧೯೫೧): ವೆಂಕಣ್ಣಯ್ಯ ಅವರೊಂದಿಗೆ ಸೇರಿ ೧೯೪೧ರಲ್ಲಿ ಸಂಪಾದಿಸಿರುವ ಕೃತಿ ಇದು. ಪೀಠಿಕೆ ವಿಸ್ತಾರವಾಗಿದ್ದು ರಾಘವಾಂಕ ಕವಿಯ ಇತಿವೃತ್ತ, ಸಿದ್ಧರಾಮನ ಐತಿಹಾಸಿಕ ವಿವರಗಳು, ಕಥಾಸಾರಾಂಶ ಹಾಗೂ ಟಿಪ್ಪಣಿಗಳನ್ನು ಕೊಡಲಾಗಿದೆ. ಶಿವಶರಣ ಸಿದ್ಧರಾಮನ ಲಿಂಗದೀಕ್ಷೆ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚಿಸಲಾಗಿದೆ.

'ಸುಕುಮಾರಚರಿತಂ'(೧೯೫೪) ಕೃತಿಯನ್ನು ತ.ಸು. ಶಾಮರಾವ್ ಅವರೊಂ ದಿಗೆ ಸೇರಿ ಎರಡು ಹಸ್ತಪ್ರತಿಗಳನ್ನು ಮಾತ್ರ ಇಟ್ಟುಕೊಂಡು ಸಂಪಾದಿಸಲಾಗಿದೆ. ಕವಿಯ ಇತಿವೃತ್ತ, ಕಥಾಸಾರಾಂಶ, ಕಥೆಯ ಮೂಲ ಮುಂತಾದವೆಲ್ಲ ಪೀಠಿಕೆಯಲ್ಲಿ ವಿಸ್ತಾರವಾಗಿ ಬಂದಿವೆ. ವಡ್ಡಾರಾಧನೆಯೊಂದಿಗೆ

ತುಲನೆ ಮಾಡಿ ವಿಮರ್ಶಿಸಲಾಗಿದೆ. ಕನ್ನಡದ ಇತರ ಸುಕುಮಾರ ಚರಿತೆಗಳ ಬಗ್ಗೆಯೂ ಪ್ರಸ್ತಾಪಿಸಲಾಗಿದೆ. ಕವಿ, ಕೃತಿಯ ಪರಿಚಯ ಮಾಡಿಕೊಡುವ ಪರಿಶಿಷ್ಟ ಹಾಗೂ ಶಬ್ದಕೋಶಗಳು ಇವೆ.

ಕೇಶಿರಾಜ ವಿರಚಿತ 'ಶಬ್ದಮಣಿದರ್ಪಣಂ'(೧೯೫೯): ಇದನ್ನು ಮೊದಲು ಸಂಪಾದಿಸಿ ಪ್ರಕಟಿಸಿದ್ದು ಜೆ. ಗ್ಯಾರೆಟ್ ಅವರು(೧೮೬೮). ಅನಂತರ ಕಿಟೆಲ್ ಅವರ ಸಂಪಾದಕತ್ವದಲ್ಲಿ ಮೂರು ಪರಿಷ್ಕೃತ ಮುದ್ರಣಗಳು ಪ್ರಕಟವಾದುವು. ೧೯೩೦ರಲ್ಲಿ ಎ. ವೆಂಕಟರಾವ್ ಮತ್ತು ಎಚ್. ಶೇಷಯ್ಯಂಗಾರ್ ಇವರಿಂದ ಸಂಪಾದಿಸಲ್ಪಟ್ಟ ಶಬ್ದಮಣಿದರ್ಪಣವು ಮದ್ರಾಸ್ ವಿಶ್ವವಿದ್ಯಾಲಯದಿಂದ ಪ್ರಕಟವಾಯಿತು. ಅನಂತರ ೧೯೫೫ರಲ್ಲಿ ಡಿ.ಎಲ್.ಎನ್. ಅವರ ಸಂಪಾದಕತ್ವದಲ್ಲಿ ಈ ಕೃತಿ ಪ್ರಕಟವಾಯಿತು. ಶ್ರವಣಬೆಳಗೊಳದ ಓಲೆಪ್ರತಿ ಡಿ.ಎಲ್.ಎನ್. ಅವರಲ್ಲಿದ್ದ ಓಲೆಪ್ರತಿ, ಕಿಟ್ಟೆಲ್‌ರ ಮೂರನೇ ಆವೃತ್ತಿಯ ಮುದ್ರಿತ ಪ್ರತಿ, ಕನ್ನಡ ಸಾಹಿತ್ಯ ಪರಿಷತ್ತಿನ ಮುದ್ರಿತ ಪ್ರತಿ ಇವೆಲ್ಲವನ್ನು ಇಟ್ಟುಕೊಂಡು ಮತ್ತೊಮ್ಮೆ ಪರಿಷ್ಕರಿಸಿ ಸಂಪಾದಿಸಿಕೊಟ್ಟಿದ್ದಾರೆ. ತಮಗಿಂತ ಹಿಂದಿನ ವಿದ್ವಾಂಸರ ಚರ್ಚೆಗಳನ್ನು ಡಿ.ಎಲ್.ಎನ್. ಅವರು ಗಂಭೀರವಾಗಿ ಪರಿಗಣಿಸಿ ತಮ್ಮ ಪ್ರಸ್ತಾವನೆಯಲ್ಲಿ ಉಲ್ಲೇಖಿಸಿದ್ದಾರೆ. ಡಿ.ಎಲ್.ಎನ್.ರ ಸಂಪಾದಿತ ಕೃತಿಯಲ್ಲಿ ನಿಟ್ಟೂರು ನಂಜಯ್ಯನ ಟೀಕೆ ಇದೆ. ಇದರಲ್ಲಿ ೩೪೧ ಸೂತ್ರಗಳಿವೆ.

ಗೋವಿನಹಾಡು: ಜನಪ್ರಿಯ ಕಥನಗೀತೆಯಾದ ಇದನ್ನು ಎರಡು ಕೈಬರಹ ಪ್ರತಿಗಳು ಹಾಗೂ ಮುದ್ರಣದ ಪ್ರಕಟಿತ ಪ್ರತಿಗಳನ್ನು ಪರಿಶೀಲಿಸಿ ಶುದ್ಧಪಾಠಗಳನ್ನು ಗುರುತಿಸಿ ಸಂಪಾದಿಸಲಾಗಿದೆ.

ಸ್ವತಂತ್ರ ಕೃತಿಗಳು: 'ಹಂಪೆ ಹರಿಹರ' (೧೯೩೯). ಇದರ ಮೊದಲನೆಯ ಅಧ್ಯಾಯದಲ್ಲಿ ಹರಿಹರನ ಜೀವನ ಚರಿತ್ರೆಯ ಬಗೆಗೆ ವಿವರಿಸಲಾಗಿದೆ. ಹರಿಹರನ ಗಿರಿಜಾಕಲ್ಯಾಣ, ಶತಕಗಳು, ರಗಳೆಗಳು, ಗದ್ಯ ಇವುಗಳನ್ನು ಕುರಿತಾಗಿ ಮುಂದಿನ ಅಧ್ಯಾಯಗಳಲ್ಲಿ ವಿವರಿಸಲಾಗಿದೆ. ಹರಿಹರ ಕವಿಯ ಶೈಲಿ, ಆತನ ಕೃತಿಗಳ ಉದ್ದೇಶವನ್ನು ಚರ್ಚಿಸಲಾಗಿದೆ.

'ಶಬ್ದವಿಹಾರ'(೧೯೫೦): ಪ್ರಾಚೀನ ಕನ್ನಡ ಕವಿಗಳಲ್ಲಿರುವ ಕೆಲವು ಕಠಿಣಶಬ್ದಗಳ ಅರ್ಥಗಳನ್ನು ಹಾಗೂ ಅವುಗಳನ್ನು ಕುರಿತಾದ ಲೇಖನಗಳ

ಸಂಗ್ರಹವಿದು. ಕೆಲವು ಸಮಸ್ಯೆಗಳ ಬಗೆಗೆ ಸರಿಯಾದ ಅರ್ಥಗಳನ್ನು ತಿಳಿಸುವ ವಿನೂತನ ಪ್ರಯೋಗ ವನ್ನು ಇಲ್ಲಿ ಡಿ.ಎಲ್.ಎನ್. ಮಾಡಿದ್ದಾರೆ.

'ಕನ್ನಡ ಗ್ರಂಥಸಂಪಾದನೆ'(೧೯೬೪): ಕನ್ನಡದಲ್ಲಿ ಗ್ರಂಥಸಂಪಾದನೆಗೆ ಸಂಬಂಧಿಸಿದಂತೆ ಬಂದಿರುವ ಮೊದಲ ಪ್ರಯತ್ನವಿದು. ಇದರಲ್ಲಿ ಪಾಶ್ಚಾತ್ಯ ವಿದ್ವಾಂಸರ ಗ್ರಂಥಸಂಪಾದನೆಯ ತತ್ತ್ವಗಳನ್ನು ಪ್ರಾಚೀನ ಮಧ್ಯಕಾಲೀನ ಕೃತಿಗಳಿಗೆ ಅನ್ವಯಿಸುವಲ್ಲಿ ಸವಿಸ್ತಾರವಾಗಿ ವಿವರಿಸಲಾಗಿದೆ. ಗ್ರಂಥಸಂಪಾದನೆಯ ಚರಿತ್ರೆಯನ್ನು ಮೊದಲ ಅಧ್ಯಾಯದಲ್ಲಿ ಲೇಖಕರು ವಿವರಿಸಿದ್ದಾರೆ. ಪಾಶ್ಚಾತ್ಯ ವಿದ್ವಾಂಸರ ಸೇವೆಯನ್ನು ಇಲ್ಲಿ ಸ್ಮರಿಸಲಾಗಿದೆ. ಗ್ರಂಥಸಂಪಾದನಶಾಸ್ತ್ರದಲ್ಲಿ ದುಡಿದ ಅಗ್ರಗಣ್ಯರಲ್ಲಿ ಒಬ್ಬರಾದ ಪಾಲ್‌ಮಸ್ರಂತಹವರನ್ನು ಉಲ್ಲೇಖಿಸಿದ್ದಾರೆ. ಜರ್ಮನಿಯಲ್ಲಿ ಗ್ರಂಥ ಸಂಪಾದನೆಯನ್ನು ಕುರಿತು ಆಗಿರುವ ಕೆಲಸವನ್ನು ಉಲ್ಲೇಖಿಸಿದ್ದಾರೆ. ಲೇಖನ ಸಾಮಗ್ರಿಗಳು, ಲಿಪಿಕಾರರು ಹಾಗೂ ಹಸ್ತಪ್ರತಿಗಳ ಸ್ವರೂಪ ಮತ್ತು ವಿಂಗಡಣೆಯನ್ನು ೧೨ ಅಧ್ಯಾಯಗಳಲ್ಲಿ ಚರ್ಚಿಸಲಾಗಿದೆ. ಹಸ್ತಪ್ರತಿಗಳ ಪರಸ್ಪರ ಸಂಬಂಧ, ಸ್ಖಾಲಿತ್ಯಗಳು, ಪಾಠಪರಿಷ್ಕರಣ– ಇವುಗಳ ಬಗ್ಗೆ ವಿವರಿಸಿದ್ದಾರೆ. ಈ ಕೃತಿಯಲ್ಲಿ ಮುದ್ರಿತಗ್ರಂಥಗಳ ಸಂಪಾದನೆಯನ್ನು ಮಾಡುವ ವಿಧಾನದ ಬಗೆಗೂ ತಿಳಿಸಲಾಗಿದೆ. ಅಕಾರಾದಿ ಸೂಚಿ ಪರಾಮರ್ಶನ ಪುಸ್ತಕಗಳ ಪಟ್ಟಿಗಳ ವಿವರಗಳು ಮೊದಲಾದವನ್ನು ಅನುಬಂಧದಲ್ಲಿ ನೀಡಲಾಗಿದೆ. ಲಿಪಿಕಾರರಿಂದಾದ ದೋಷ ಗಳಿರುವ ಕೂಡಿರುವ ಕವಿಗಳ ಕೃತಿಗಳನ್ನು ಪರಿಶುದ್ಧ ರೂಪಕ್ಕೆ ತರುವುದೇ ಗ್ರಂಥ ಸಂಪಾದನೆಯ ಪ್ರಮುಖ ಉದ್ದೇಶ.

'ಪಂಪಭಾರತ ದೀಪಿಕೆ'(೧೯೭೧): ಮೊದಲ ಬಾರಿಗೆ ಪಂಪ ಕವಿಯ 'ವಿಕ್ರಮಾರ್ಜುನವಿಜಯ'ದ ಪ್ರತಿಯೊಂದು ಪದದ ಅರ್ಥ, ವ್ಯಾಕರಣ, ಛಂದಸ್ಸು ಹೀಗೆ ಅನೇಕ ವಿಷಯಗಳನ್ನು ಇಲ್ಲಿ ವಿವರಿಸಲಾಗಿದೆ. ಪಾಠಪರಿಷ್ಕರಣ ಕಾರ್ಯವನ್ನು ವ್ಯವಸ್ಥಿತವಾಗಿ ಮಾಡಿರುವುದರಿಂದ ಸಾಮಾನ್ಯ ಜನರು ಓದಿ ಅರ್ಥಮಾಡಿಕೊಳ್ಳಲು ಪ್ರಯೋಜನಕಾರಿಯಾಗಿದೆ.

'ಪೀಠಿಕೆಗಳು ಲೇಖನಗಳು'(೧೯೭೧): ಡಿಎಲ್‌ಎನ್ ಕನ್ನಡದಲ್ಲಿ ಬರೆದ ೬೨ ಸಂಶೋಧನ ಲೇಖನಗಳು, ಇಂಗ್ಲಿಷ್‌ನಲ್ಲಿ ಬರೆದ ಎಂಟು ಲೇಖನಗಳು ಈ ಕೃತಿಯಲ್ಲಿವೆ. ಇವುಗಳಲ್ಲಿ ಅಗ್ಗಳದೇವ, ಅಭಿನವ ಪಂಪ ನಾಗಚಂದ್ರನ ಕಾಲ, ಕವಿ

ಲಕ್ಷ್ಮೀಶ, ಕೆಲವು ವಚನಕಾರರು, ರಗಳೆಯ ಕೆಲವು ಕವಿಗಳು, ಚೌಂಡರಸನ ಕಾಲವಾಚಿಕೆ, ನಾಲ್ಕನೇ ಮಂಗರಸ, ಬಸವಣ್ಣನ ಕೆಲವು ವಚನಗಳ ಪಾಠ, ಸಾಹಿತ್ಯ ಚರಿತ್ರೆಯ ಸ್ವರೂಪ, ವಿಜಯನಗರ ಕಾಲದ ಸಾಹಿತ್ಯ, ಲಿಂಗಾರ್ಚನೆ ಮತ್ತು ಲಿಂಗಾರಾಧನೆ ಮೊದಲಾದ ಸಂಶೋಧನ ಲೇಖನಗಳು ಇವೆ.

ಗೌರವ ಸನ್ಮಾನಗಳು: ಡಿಎಲ್ಎನ್ ಅವರು ೧೯೬೦ರಲ್ಲಿ ಬೀದರ್‌ನಲ್ಲಿ ನಡೆದ ೪೧ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದಾಗ ಅದರ ಸವಿನೆನಪಿನಲ್ಲಿ ಅವರಿಗೆ 'ಜ್ಞಾನೋಪಾಸಕ' ಎಂಬ ಅಭಿನಂದನ ಗ್ರಂಥವನ್ನು ಅರ್ಪಿಸಲಾಗಿದೆ. ೧೯೬೭ರಲ್ಲಿ 'ಉಪಾಯನ' ಎಂಬ ಇನ್ನೊಂದು ಅಭಿನಂದನ ಗ್ರಂಥ ಅರ್ಪಿತವಾಗಿದೆ. ೧೯೬೭ರಲ್ಲಿ ಮೈಸೂರು ಸರ್ಕಾರ ಡಿಎಲ್ಎನ್ ಅವರಿಗೆ 'ರಾಜ್ಯಪ್ರಶಸ್ತಿ' ನೀಡಿ ಗೌರವಿಸಿದೆ. ೧೯೬೯ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಅವರ ವಿದ್ವತ್ತನ್ನು ಗೌರವಿಸಿ ಡಿ.ಲಿಟ್. ಪದವಿಯನ್ನು ನೀಡಿ ಸನ್ಮಾನಿಸಿದೆ. ಡಿ.ಎಲ್.ಎನ್. ಅವರು ೦೮-೦೫-೧೯೭೧ರಂದು ನಿಧನರಾದರು.

❐ ❐ ❐

ಆ.ನೇ. ಉಪಾಧ್ಯೆ

(೧೯೦೬–೧೯೭೫)

ಗೀತಾ ನಾವಲ್

ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪ್ರಾಚ್ಯವಸ್ತು ಸಂಶೋಧಕ ವಿದ್ವಾಂಸರಾಗಿದ್ದ ಆದಿನಾಥ ನೇಮಿನಾಥ ಉಪಾಧ್ಯೆ ಅವರು ಜೈನಶಾಸ್ತ್ರ, ಪ್ರಾಚ್ಯವಿದ್ಯೆ, ಪ್ರಾಕೃತಭಾಷೆ ಮತ್ತು ಸಂಶೋಧನಕ್ಷೇತ್ರಗಳ ಅಧ್ಯಯನಾಸಕ್ತರಿಗೆ ಪ್ರಾತಃಸ್ಮರಣೀಯರು. ಜೀವನವಿಡೀ ಸಂಶೋಧನಾರ್ಥವಾಗಿಯೇ ಹುಟ್ಟಿದವರಂತೆ ಅಧ್ಯಯನದಲ್ಲಿಯೇ ಅತ್ಯಂತ ಗಂಭೀರವಾಗಿ ತಮ್ಮನ್ನು ತೊಡಗಿಸಿಕೊಂಡು ಅಗಾಧ ಪಾಂಡಿತ್ಯದಿಂದಲೂ ಖಚಿತ ನಿರ್ಧಾರಗಳಿಂದಲೂ ವಿದ್ವದ್ವಲಯವನ್ನು ಬೆರಗುಗೊಳಿಸಿದವರು ಉಪಾಧ್ಯೆಯವರು. ಶ್ರೀಯುತರು ೧೯೦೬ ಫೆಬ್ರವರಿ ೬ ರಂದು ಬೆಳಗಾವಿಯ ಚಿಕ್ಕೋಡಿ ತಾಲ್ಲೂಕಿನ 'ಸದಲಗಾ' ಎಂಬ ಗ್ರಾಮದಲ್ಲಿ ಜನಿಸಿದರು. ಜೈನ ಪುರೋಹಿತ ಕುಟುಂಬದ ನೇಮಿನಾಥ, ಚಂದ್ರಾಬಾಯಿ ಇವರ ತಂದೆ ತಾಯಿಗಳು. ಪುರೋಹಿತರನ್ನು ಜೈನರಲ್ಲಿ 'ಉಪಾಧ್ಯಾಯ' ಎಂದು ಕರೆಯುವುದು ಉತ್ತರ ಕರ್ನಾಟಕದಲ್ಲಿ ವಾಡಿಕೆಯಲ್ಲಿದ್ದುದರಿಂದ ಇವರ ಮನೆತನವನ್ನೂ 'ಉಪಾಧ್ಯೆ' ಎಂಬ ವಂಶನಾಮದಿಂದ ಗುರುತಿಸಲಾಯಿತು. 'ಕಲ್ಲಪ್ಪ'ನೆಂಬುದು ಇವರ ಹುಟ್ಟು ಹೆಸರು. ಮಗು ಕಲ್ಲಿನಂತೆ ಗಟ್ಟಿಮುಟ್ಟಾಗಿ ಬಹುಕಾಲ ಬಾಳಲಿ ಎಂಬ ಉದ್ದೇಶದಿಂದ ಹಿರಿಯರು ಹಾಗೆ ಹೆಸರಿಸಿದರಂತೆ!

ಉಪಾಧ್ಯೆಯವರ ಆರಂಭಿಕ ಶಿಕ್ಷಣ ಅವರ ಹುಟ್ಟೂರಾದ ಸದಲಗಾ ಗ್ರಾಮದಲ್ಲಿಯೇ ತಂದೆತಾಯಿಯರ ಉದ್ದೇಶದಂತೆ ಕನ್ನಡದಲ್ಲಿ ಆಯಿತು. ಮಾಧ್ಯಮಿಕ ಶಿಕ್ಷಣವನ್ನು ಬೆಳಗಾವಿಯ ಗಿಲಗಿಂಜಿ ಅರಟಾಳ ಹೈಸ್ಕೂಲಿನಲ್ಲಿಯೂ ಪ್ರೌಢಶಾಲಾ ವ್ಯಾಸಂಗವನ್ನು ಬೆಳಗಾವಿಯ ಮಾಣಿಕಭಾಗದ ಜೈನ್ ದಿಗಂಬರ ಬೋರ್ಡಿಂಗ್ ಶಾಲೆಯಲ್ಲಿ ಅಲ್ಲಿಯ ಉಚಿತ ವಿದ್ಯಾರ್ಥಿನಿಲಯದಲ್ಲಿದ್ದುಕೊಂಡು

ಮುಗಿಸಿದರು. ಅವರ ನಿಜವಾದ ಸಾಹಿತ್ಯದೀಕ್ಷೆ ಆರಂಭವಾದದ್ದು ಈ ಸಂದರ್ಭ ದಲ್ಲಿಯೇ. ಪ್ರಖ್ಯಾತ ಜೈನ ವಿದ್ವಾಂಸರೂ ಮೈಸೂರು ಅರಮನೆಯ ಖ್ಯಾತ ಆಸ್ಥಾನಪಂಡಿತರೂ ಆಗಿದ್ದ ಎ. ಶಾಂತಿರಾಜಶಾಸ್ತ್ರಿ ಅವರು ಈ ವಿದ್ಯಾರ್ಥಿನಿಲಯದಲ್ಲಿ ವರ್ಷಕ್ಕೊಮ್ಮೆ ಬಂದು ಉಳಿದುಕೊಂಡು ವಿದ್ಯಾರ್ಥಿಗಳಿಗೂ ಅಲ್ಲಿಯ ಸಾಮಾಜಿಕ ರಿಗೂ ಹಲಕೆಲವು ಶ್ರಾವಕರಿಗೂ ಜೈನಧರ್ಮ, ಶಾಸ್ತ್ರ ಮತ್ತು ಸಾಹಿತ್ಯಗಳ ಕುರಿತಂತೆ ಉಪನ್ಯಾಸ ನೀಡುತ್ತಿದ್ದುದು ಬಾಲಕ ಆದಿನಾಥರಲ್ಲೂ ಅಧ್ಯಯನಾಸಕ್ತಿಯನ್ನು ಹುಟ್ಟುಹಾಕಿತು. ೧೯೨೩ ರಲ್ಲಿ ಮೆಟ್ರಿಕ್ಯುಲೇಷನ್ ಮುಗಿಸಿದ ಅವರು ಬಳಿಕ ಕಾಲೇಜು ಶಿಕ್ಷಣವನ್ನು ಅಂದು ಕೊಲ್ಹಾಪುರದ ದಿವಾನರಾಗಿದ್ದ ಅಣ್ಣಾಸಾಹೇಬ ಲಠ್ಠೆ ಅವರ ಕೃಪಾಕಟಾಕ್ಷದಿಂದ ಅಲ್ಲಿಯ ರಾಜಾರಾಮ ಕಾಲೇಜಿನಲ್ಲಿಯೂ ಸಾಂಗ್ಲಿಯ ವಿಲ್ಲಿಂಗ್ಡನ್ ಕಾಲೇಜಿನಲ್ಲಿಯೂ ಪೂರೈಸಿದರು. ೧೯೨೮ ರಲ್ಲಿ ಮುಂಬಯಿ ವಿಶ್ವವಿದ್ಯಾಲಯದಿಂದ ಸಂಸ್ಕೃತ, ಪ್ರಾಕೃತ ಹಾಗೂ ಅರ್ಧಮಾಗಧಿ ವಿಷಯಗಳಲ್ಲೂ ಬಿ.ಎ., ಆನರ್ಸ್ ಪದವಿಯನ್ನು ಪಡೆದರು. ತದನಂತರ ಪುಣೆಯ ಭಂಡಾರ್ಕರ್ ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್ ಸೇರಿ ೧೯೩೦ರಲ್ಲಿ ಮುಂಬಯಿ ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ ಪಡೆದರು. ಅದೇ ವರ್ಷ ತಾವು ವ್ಯಾಸಂಗ ಮಾಡಿದ್ದ ಕೊಲ್ಹಾಪುರದ ರಾಜಾರಾಮ್ ಕಾಲೇಜಿನಲ್ಲಿ ಅರ್ಧಮಾಗಧಿ ಪ್ರಾಕೃತ ವಿಭಾಗದಲ್ಲಿ ಅಧ್ಯಾಪಕರಾಗಿ ನೇಮಕಗೊಳ್ಳುವುದರ ಮೂಲಕ ವೃತ್ತಿಜೀವನಕ್ಕೆ ಪದಾರ್ಪಣ ಮಾಡಿದರು. ಅತ್ಯಂತ ಗಂಭೀರ ವ್ಯಾಸಂಗನಿರತರಾಗಿದ್ದುದರಿಂದಲೂ ನುರಿತ ಶಿಕ್ಷಣವೇತ್ತರೂ ಆಗಿ ಖ್ಯಾತರಾಗಿದ್ದುದರ ಪರಿಣಾಮವಾಗಿ ಮುಂದಿನ ಮೂರು ವರ್ಷಗಳಲ್ಲಿ ಪ್ರಾಧ್ಯಾಪಕರೂ ಆದರು. ೧೯೩೯ ರಲ್ಲಿ ಮುಂಬಯಿ ವಿಶ್ವವಿದ್ಯಾಲಯದ ಡಿ.ಲಿಟ್. ಪದವಿ ಲಭ್ಯವಾಯಿತು. ಇದಕ್ಕಾಗಿ ಪ್ರಸ್ತುತಪಡಿಸಿದ ಗ್ರಂಥವನ್ನು ವಿದ್ವದ್ವಲಯವು ಉಪಾಧ್ಯೆಯವರ 'ಕೃತಿರತ್ನ'ವೆಂದು ಕೀರ್ತಿಸಿದೆ. ೧೯೪೧ ರಿಂದ ೪೩ರ ತನಕ ಅವರು ಮಾಡಿದ ಸಂಶೋಧನೆಗೆ ಮುಂಬಯಿ ವಿಶ್ವವಿದ್ಯಾಲಯ ಅಪಾರ ಮೆಚ್ಚುಗೆ ವ್ಯಕ್ತಪಡಿಸಿ ಸಂಶೋಧನ ಶಿಷ್ಯವೃತ್ತಿಯನ್ನು ದೊರಕಿಸಿಕೊಟ್ಟಿತು. ಈ ಅವಧಿಯಲ್ಲಿ ಹೈದರಾಬಾದಿನಲ್ಲಿ ನಡೆದ ಅಖಿಲಭಾರತ ಪ್ರಾಚ್ಯವಿದ್ಯಾ ಸಮ್ಮೇಳನದಲ್ಲಿ ಪ್ರಾಚ್ಯ, ಪಾಲಿ, ಜೈನಧರ್ಮ ಮತ್ತು ಬೌದ್ಧಧರ್ಮಗಳಿಗೆ ಸಂಬಂಧಿಸಿದ ವಿಭಾಗದ ಅಧ್ಯಕ್ಷತೆಯ ಗೌರವವನ್ನು ಪಡೆದರು. ರಾಜಾರಾಮ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ

ಸೇವೆ ಸಲ್ಲಿಸಿದ ಉಪಾಧ್ಯೆಯವರು ನಿವೃತ್ತಿಯ ಅನಂತರವೂ ಕೊಲ್ಹಾಪುರದ ಶಿವಾಜಿ ವಿಶ್ವವಿದ್ಯಾಲಯದಲ್ಲಿ ಯುಜಿಸಿ ಸಂಶೋಧನ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿದರು. ಅನಂತರ ಅವರ ೬೬ ನೇ ವಯಸ್ಸಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಜೈನಶಾಸ್ತ್ರ ಮತ್ತು ಪ್ರಾಕೃತ ವಿಭಾಗದ ಸಂಸ್ಥಾಪಕ ಪ್ರಾಧ್ಯಾಪಕರಾಗಿದ್ದರು (೧೯೭೧–೭೫). ಸಂಸ್ಕೃತ, ಪ್ರಾಕೃತ ಸಾಹಿತ್ಯಶಾಸ್ತ್ರಗಳಲ್ಲಿ ಅಸೀಮ ಸಾಧನೆಯನ್ನು ಮಾಡಿದ ಉಪಾಧ್ಯೆಯವರಿಗೆ ಅವರ ವಿದ್ಯಾರ್ಥಿದೆಸೆಯಿಂದಲೂ ಡಾ. ಎಸ್. ಕೆ. ಬೆಳ್ವಲ್ಕರ್, ಡಾ. ಪಿ. ಎಲ್. ವೈದ್ಯ, ಡಾ. ಪಿ. ಎನ್ ಸುಕ್ತಂಕರ್, ಡಾ. ಹೀರಾಲಾಲ್ ಜೈನ್ ಮೊದಲಾದ ವಿದ್ವಾಂಸರ ಮಾರ್ಗದರ್ಶನಗಳು ದೊರೆತಿದ್ದುವು.

ವಾಸ್ತವವಾಗಿ ಉಪಾಧ್ಯೆಯವರಿಗೆ ಮೊತ್ತಮೊದಲಿಗೆ ಸಾಹಿತ್ಯ, ಶಾಸ್ತ್ರಗ್ರಂಥ ಗಳತ್ತ ಕುತೂಹಲ ಮೊಳೆತಿದ್ದುದು ಅವರ ದೊಡ್ಡಪ್ಪನವರಲ್ಲಿದ್ದ ಅಪಾರವಾದ ಗ್ರಂಥರಾಶಿಯಿಂದ. ಬಾಲ್ಯದಲ್ಲಿಯೇ ಅವರಿಗೆ ಅವೆಲ್ಲವನ್ನು ಓದುವ, ಅರ್ಥೈಸಿ ಕೊಳ್ಳುವ ಅಭ್ಯಾಸ ಬೆಳೆಯಿತು. ಇವರು ಆರಂಭಿಕವಾಗಿ ಬರೆದದ್ದು 'Samantha bhadra–an outstanding personality' ಎಂಬ ಸಂಶೋಧನ ಲೇಖನ. ತದನಂತರ ಯೋಗೀಂದು ಕವಿಯ ಎಲ್ಲ ಅಪಭ್ರಂಶ ಕಾವ್ಯಗಳನ್ನು ಅಧ್ಯಯನ ಮಾಡಿ 'Yogindu and his Apabramsha Works' ಎಂಬ ದೀರ್ಘವಾದ ಪ್ರಬಂಧವನ್ನು ಸಿದ್ಧಪಡಿಸಿದರು. ಅದು ಆ ಕಾಲಕ್ಕೆ ಯುರೋ ಪಿಯನ್ ವಿದ್ವಾಂಸರ ಗಮನ ಸೆಳೆದು ಅಪಾರ ಮೆಚ್ಚುಗೆ ಗಳಿಸಿ ಉಪಾಧ್ಯೆಯವರಿಗೆ ಸಂಶೋಧನ ಕ್ಷೇತ್ರದಲ್ಲಿ ಉನ್ನತವಾದ ಗೌರವಾದರಗಳನ್ನು ತಂದಿತ್ತು. ಇದು ಅವರ ಇನ್ನಿತರ ಗಂಭೀರ ಸಂಶೋಧನ ಸಾಧನೆಗಳಿಗೆ ಮೊದಲ ಮೆಟ್ಟಿಲಾಯಿತು. ತದನಂತರ ಪ್ರಾಕೃತ ಭಾಷಾ ಸಾಹಿತ್ಯಾಸಕ್ತರ ಗಮನ ಸೆಳೆದದ್ದು ೧೯೩೫ ರಲ್ಲಿ ಅವರು ಶಾಸ್ತ್ರೀಯವಾಗಿ ಅಧ್ಯಯನ ಮಾಡಿ, ಸಂಪಾದಿಸಿ ಪ್ರಕಟಿಸಿದ 'ಪಂಚಸುತ್ತಂ' ಎಂಬ ಗ್ರಂಥ. ಇದು ಒಬ್ಬ ಅಜ್ಞಾತ ಜೈನಕವಿಯಿಂದ ರಚಿತವಾದ ಜೈನಸಿದ್ಧಾಂತಗಳ ಪ್ರಾಕೃತ ಗ್ರಂಥ. ಉಪಾಧ್ಯೆಯವರು ಇದಕ್ಕೆ ಬರೆದ ಅತ್ಯಂತ ವಿಸ್ತೃತವಾದ ಪ್ರಸ್ತಾವನೆಯಲ್ಲಿ ಆ ಕೃತಿಯ ವಸ್ತು ಮತ್ತು ಅದು ಒಳಗೊಂಡ ಜೈನಸಿದ್ಧಾಂತಗಳನ್ನು ಕುರಿತು ವಿಮರ್ಶಾತ್ಮಕವಾಗಿ ಚರ್ಚಿಸಿದ್ದಾರೆ. ಅವರ ೨೯ನೇ ವಯಸ್ಸಿನಲ್ಲಿ ಪ್ರಕಟವಾಗಿ, ಅನೇಕ ವಿದೇಶಿ ವಿದ್ವಾಂಸರ ಗಮನ ಸೆಳೆದ ಈ ಕೃತಿ ಅವರು ಡಾಕ್ಟೊರೇಟ್ ಪಡೆಯುವುದಕ್ಕೂ ಮುಂಚಿನದು. ಇದೇ ವರ್ಷ ಉಪಾಧ್ಯೆಯವರು

ಸಂಪಾದಿಸಿ ಪ್ರಕಟಿಸಿದ 'ಪ್ರವಚನಸಾರ' ಎಂಬ ಗ್ರಂಥವು ವಿದ್ವದ್ವಲಯದಲ್ಲಿ ದೊಡ್ಡ ಸಂಚಲನವನ್ನೇ ಉಂಟು ಮಾಡಿತು. ಈ ಗ್ರಂಥವು ಕ್ರಿ.ಪೂ. ೨೦೦–೧೦೦ ರಲ್ಲಿ ಕುಂದಕುಂದಾಚಾರ್ಯನಿಂದ ಶೌರಸೇನಿ ಭಾಷೆಯಲ್ಲಿ ರಚಿತವಾದ ದಿಗಂಬರ ಜೈನರ ಅಧಿಕೃತ ಆಗಮಗ್ರಂಥ. ಈತ ಒಬ್ಬ ದಿಗಂಬರ ಜೈನ ಸನ್ಯಾಸಿ ಮತ್ತು ಮಹಾನ್ ತತ್ತ್ವಜ್ಞಾನಿ. ಈತನನ್ನು ಜೈನ ತೀರ್ಥಂಕರರ ಮಟ್ಟದಲ್ಲಿ ಗೌರವಿಸಲಾಗುತ್ತದೆ. ಮಹಾನಿರ್ವಾಣ ಮತ್ತಿತರ ಜೈನ ಸಿದ್ಧಾಂತಗಳ ಕುರಿತ ಇವನ ಭಾವನೆಗಳಿಗೆ ಅತ್ಯಂತ ಮಹತ್ತ್ವವನ್ನು ನೀಡಲಾಗಿದೆ. ಕುಂದಕುಂದಾಚಾರ್ಯನೆಂಬ ಹೆಸರನ್ನು ಒಳಗೊಂಡಂತೆ ಈತನಿಗೆ ಪಾರಂಪರಿಕವಾಗಿ ಬಂದ ಪದ್ಮನಂದಿ, ವಕ್ರಗ್ರೀವ, ಗೃಧ್ರಪುಚ್ಛ ಹಾಗೂ ಏಲಾಚಾರ್ಯ ಎಂಬ ಐದು ಹೆಸರುಗಳಿ ದ್ದುವುವೆಂಬುದರ ಬಗ್ಗೆ ಮೊದಲು ಪ್ರಕಟಿಸಿದವರು ಉಪಾಧ್ಯೆಯವರೇ. ಇವನ 'ಪ್ರವಚನಸಾರ'ದಲ್ಲಿ ಚರ್ಚಿಸಲಾದ ಜೈನಧರ್ಮದ ತತ್ತ್ವಜ್ಞಾನ, ಮುನಿಧರ್ಮದ ನಡಾವಳಿಗಳನ್ನು ಮತ್ತು ಅವುಗಳ ಮಹತ್ತ್ವವನ್ನು ಕುರಿತು ಉಪಾಧ್ಯೆಯವರು ೧೨೫ ಪುಟಗಳ ಪ್ರಸ್ತಾವನೆ ಬರೆದಿದ್ದಾರೆ. ಉಪಾಧ್ಯೆಯವರ ಶೈಲಿ, ನಿರ್ದುಷ್ಟ ಪ್ರತಿಪಾದ ನೆಗಳು ಅನೇಕ ವಿದ್ವಾಂಸರ ಮೆಚ್ಚುಗೆ ಗಳಿಸಿದುವು. ನಾಡಿನ ಪ್ರಖ್ಯಾತ ಜರ್ನಲ್‌ಗಳು ಅವರ ಸಾಧನೆಯ ಮಹತ್ತ್ವವನ್ನು ಕುರಿತಂತೆ ತಮ್ಮ ಪತ್ರಿಕೆಗಳಲ್ಲಿ ವಿಸ್ತಾರವಾಗಿ ಪ್ರಕಟಿಸಿದುವು.

೧೯೩೫ ರಲ್ಲಿ ಮುಂಬಯಿಯ ರಾಯಚಂದ ಜೈನಶಾಸ್ತ್ರ ಮಾಲೆಯಿಂದ ಪ್ರಕಟಿತವಾದ ೬೮೦ ಪುಟಗಳ ಈ ಗ್ರಂಥವು ಒಳಗೊಂಡ ೧೨೫ ಪುಟಗಳ ಪ್ರಸ್ತಾವನೆಯಲ್ಲಿ ಕುಂದಕುಂದರ ಸಾಹಿತ್ಯ ಹಾಗೂ ಶಾಸನಗಳಲ್ಲಿ ದೊರೆಯುವ ಅಮೂಲ್ಯ ಪಾರಂಪರಿಕ ಮಾಹಿತಿಗಳ ವಿಮರ್ಶಾತ್ಮಕ ಮೌಲ್ಯಮಾಪನಗಳಿವೆ. ಕುಂದಕುಂದರ ಬದುಕು–ಬರೆಹಗಳು, ಅವರ ಆಧ್ಯಾತ್ಮಿಕ ಗುರುಪರಂಪರೆ, ಅವರ ಕಾಲನಿರ್ಣಯ, ಉಳ ಕ್ಕೂ ಹೆಚ್ಚಿನ ಕೃತಿಗಳು, 'ಪ್ರವಚನಸಾರ'ದ ಕುರಿತಂತೆ ವಿಸ್ತಾರವಾದ ಚರ್ಚೆ, ಆ ಗ್ರಂಥದ ಬಗ್ಗೆ ಇರುವ ವ್ಯಾಖ್ಯಾನಗಳ ಬಗೆಗಿನ ಚರ್ಚೆಗಳು ಹಾಗೂ ಪ್ರವಚನಸಾರದ ಪ್ರಾಕೃತ ಭಾಷಾ ಸ್ವರೂಪಗಳನ್ನು ಕುರಿತ ವಿವರಣೆಗಳಿವೆ. ಜೈನ ಶೌರಸೇನಿ ಭಾಷೆಯ ಬಗೆಗೆ ಕೂಡ ಅತ್ಯಂತ ಗಂಭೀರವಾಗಿ ಚರ್ಚಿಸಲಾಗಿದೆ. ಪ್ರಾಕೃತ ಭಾಷಾಶಾಸ್ತ್ರ ಮತ್ತು ಇತಿಹಾಸಗಳಿಗೆ ಸಂಬಂಧಿಸಿದ

ಚರ್ಚೆಗಳನ್ನೊಳಗೊಂಡ ಈ ಪ್ರಸ್ತಾವನಾ ಭಾಗವೇ ಒಂದು ಮೌಲಿಕ ಹಾಗೂ ಐತಿಹಾಸಿಕ ಕಿರುಹೊತ್ತಿಗೆ ಯಂತಿದೆ.

ಉಪಾಧ್ಯೆಯವರ ಮತ್ತೊಂದು ಅತ್ಯಂತ ಮೌಲಿಕ ಕೃತಿ ಅವರು ಸಂಪಾದಿಸಿದ ಯೋಗೀಂದುದೇವನ 'ಪರಮಾತ್ಮ ಪ್ರಕಾಶ' ಎಂಬ ಅಪಭ್ರಂಶ ಭಾಷಾಗ್ರಂಥ. ಮಧ್ಯಪೂರ್ವಯುಗದ(೫೦೦–೬೦೦)ಈ ಕೃತಿ ಜೈನ ಅಧ್ಯಾತ್ಮ ಸ್ವರೂಪವನ್ನು ಕುರಿತದ್ದು. ಪ್ರಾಚ್ಯ ಅಧ್ಯಯನ ಕ್ಷೇತ್ರದಲ್ಲಿ ಈ ಗ್ರಂಥದ ಮೌಲ್ಯನಿರ್ಣಯ, ಯೋಗೀಂದುದೇವನ ಸ್ಥಾನನಿರ್ಣಯ, ಕೃತಿಯ ವಸ್ತುವಿವೇಚನೆ, ಅಲಂಕಾರ, ಶೈಲಿ, ಛಂದಸ್ಸುಗಳನ್ನು ಕುರಿತು ಸುದೀರ್ಘವಾಗಿ ಚರ್ಚಿಸಿರುವುದು ಹಾಗೂ ಪೂರ್ವಕೃತಿ ಪರಂಪರೆಯ ಪ್ರಭಾವಗಳನ್ನು ಗುರುತಿಸಿರುವುದು ಇಲ್ಲಿಯ ವಿಶೇಷಗಳು. ಬಹಳ ಸೀಮಿತ ಹಸ್ತಪ್ರತಿಗಳ ನೆರವಿನಿಂದ ಪಠ್ಯವನ್ನು ಪುನಾರಚಿಸಿದ ಈ ಗ್ರಂಥವು ಸುಮಾರು ೧೨೪ ಪುಟಗಳ ದೀರ್ಘ ಪ್ರಸ್ತಾವನೆಯನ್ನೊಳಗೊಂಡಿದೆ. ಅಪಭ್ರಂಶ ಭಾಷೆಗೆ ಜೈನಾಚಾರ್ಯರ ಕೊಡುಗೆ ಏನೆಂಬುದರ ಕುರಿತು ಗಮನ ಸೆಳೆಯುತ್ತದೆ. 'ಜೋ ಇಂದು' ಎಂಬ ಸಂಸ್ಕೃತ ರೂಪವೇ 'ಯೋಗೀಂದು' ಎಂದಾಗಿದೆ ಎಂಬುದನ್ನು ಸ್ಪಷ್ಟಪಡಿಸುತ್ತ ಯೋಗೀಂದುದೇವನನ್ನೂ, ಅವನ ಇತರ ಕೃತಿಗಳಾದ ಯೋಗಸಾರ, ಸಾದಯಧಮ್ಮ ದೋಹಾ, ದೋಹಾ ಪಾಹುಡ, ಅಮೃತಾಶೀಥಿ ಮತ್ತು ನಿಜಾತ್ಮಸ್ಥಕಗಳ ಕುರಿತೂ ಈ ಪ್ರಸ್ತಾವನೆ ಸ್ಥೂಲಸಮೀಕ್ಷೆ ನಡೆಸಿದೆ. ಆತ್ಮ–ಪರಮಾತ್ಮಗಳ ಸ್ವರೂಪ ವಿವೇಚನೆ, ಸಂಸಾರ, ಮೋಕ್ಷ, ಧ್ಯಾನಸ್ವರೂಪ ವಿವೇಚನೆ, ಪಾಪ–ಪುಣ್ಯ ಮೌಲ್ಯವಿವೇಚನೆ, ಮುಂತಾದವುಗಳ ಕುರಿತು ಯೋಗೀಂದುವಿನ ವಿಚಾರಗಳೇನಿದ್ದುವು ಎಂಬುದನ್ನು ಕುರಿತು ಚರ್ಚಿಸಲಾಗಿದೆ. ಹೇಮಚಂದ್ರನ ವ್ಯಾಕರಣ ಶಾಸ್ತ್ರದ ಆಧಾರದಲ್ಲಿ ಪರಮಾತ್ಮ ಪ್ರಕಾಶದಲ್ಲಿಯ ಅಪಭ್ರಂಶ ಭಾಷೆಯ ಸ್ವರೂಪವನ್ನು ಕುರಿತು ಉಪಾಧ್ಯೆಯವರು ಚರ್ಚಿಸಿರುವುದು ಕನ್ನಡ ಸಾಹಿತ್ಯ ಸಂಶೋಧನ, ವಿಮರ್ಶನ ಹಾಗೂ ಗ್ರಂಥಸಂಪಾದನ ಮಾದರಿಯ ಅತ್ಯುತ್ಕೃಷ್ಟ ವಿಧಾನವೆಂದು ವಿಮರ್ಶಕರು ಅಭಿಪ್ರಾಯಪಟ್ಟಿದ್ದಾರೆ.

ಅವರ 'ತಿಲೋಯಪಣ್ಣತ್ತಿ' ಎಂಬ ಗ್ರಂಥವು ಕ್ರಿ.ಶ. ೩೦೦ ರ ಯತಿವೃಷಭಾಚಾರ್ಯ ವಿರಚಿತ ಜೈನ ವಿಶ್ವ ವಿವರಣಾಶಾಸ್ತ್ರ. ಗ್ರಂಥಸಂಪಾದನಾ

ಕಾರ್ಯಕ್ಕೆ ಸಂದ ಈ ಮಾರ್ಗದರ್ಶಕ ಕೈಪಿಡಿಯು ಜೈನಪುರಾಣ, ಕಥೆ, ಕಾವ್ಯಗಳ ಅಧ್ಯಯನಕ್ಕೂ ನಿಘಂಟಿನಂತಿದೆ ಎಂದು ಉಪಾಧ್ಯೆಯವರು ಚರ್ಚಿಸಿದ್ದಾರೆ.

ಉಪಾಧ್ಯೆಯವರು ಸಂಪಾದಿಸಿದ 'ಬೃಹತ್ ಕಥಾಕೋಶ'ವು ಸಂಸ್ಕೃತದಲ್ಲಿ ಹರಿಷೇಣಾಚಾರ್ಯರು ೯೩೧–೩೨ ರಲ್ಲಿ ರಚಿಸಿದ ಗ್ರಂಥ. ಇದನ್ನು ತಾವು ಮೂರು ನಿರ್ದುಷ್ಟ ಹಸ್ತಪ್ರತಿಗಳ ಸಹಾಯದಿಂದ ಪರಿಷ್ಕರಿಸಿದುದಾಗಿ ಉಪಾಧ್ಯೆ ಹೇಳಿಕೊಂಡಿದ್ದಾರೆ. ಇದು ೧೫೭ ಧಾರ್ಮಿಕ ಕಥಾಸಂಗ್ರಹ. ಕ್ರಿ.ಶ. ೧೦೦ ರಲ್ಲಿದ್ದ ಶಿವಕೋಟ್ಯಾಚಾರ್ಯನ 'ಮೂಲಾರಾಧನ' ಎಂಬ ಬೃಹತ್ ಆದಿಮಗ್ರಂಥವನ್ನು ಆಧರಿಸಿದೆ ಎಂಬ ಪೂರ್ವ ವಿದ್ವದ್ವಲಯದ ಹೇಳಿಕೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗಿದೆ ಹಾಗೂ ಉಪಾಧ್ಯೆಯವರು ಬರೆದ ೧೧೨ ಪುಟಗಳ ಪ್ರಸ್ತಾವನೆಯನ್ನು ಇದು ಒಳಗೊಂಡಿದೆ. ಭಾರತೀಯ ಕಥನಸಾಹಿತ್ಯದ ವಿಸ್ತೃತವಾದ ಇತಿಹಾಸ, ವೈದಿಕ, ಬೌದ್ಧ ಮತ್ತು ಜೈನ ಕಥಾಸ್ವರೂಪಗಳ ಪ್ರೌಢಚಿಂತನೆಗಳು ಇಲ್ಲಿವೆ. ಮೇಲೆ ಹೇಳಿದ ಎರಡೂ ಗ್ರಂಥಗಳಲ್ಲಿ ಹಲವೆಡೆ ಸಮಾನಾಂಶಗಳಿದ್ದರೂ ಶೈಲಿ ಮತ್ತು ಕಥಾರಚನಾಸ್ವರೂಪಗಳು ಭಿನ್ನವಾಗಿದ್ದು, ಭಗವತೀ ಆರಾಧನಾಕ್ರಮದ ಪ್ರಾಕೃತ ವ್ಯಾಖ್ಯಾನವೊಂದನ್ನು ಈ ಎರಡೂ ಗ್ರಂಥಗಳು ಅನುಸರಿಸಿರಬಹುದೆಂಬ ಅತಿಮುಖ್ಯ ತೀರ್ಮಾನವನ್ನು ಉಪಾಧ್ಯೆ ಮೊತ್ತಮೊದಲಿಗೆ ನೀಡಿದ್ದಾರೆ. ವಡ್ಡಾರಾಧನೆಯ ಕಾಲದ ಕುರಿತಂತೆ ಅವರು ನೀಡಿರುವ ಊಹೆ ಮತ್ತು ಅದಕ್ಕೆ ನೀಡಿರುವ ಆಧಾರಗಳನ್ನು ಕನ್ನಡ ಸಾಹಿತ್ಯ ಚರ್ಚೆಯು ಇಂದಿಗೂ ಅತ್ಯಮೂಲ್ಯವೆಂದು ಪರಿಗಣಿಸಿದೆ.

ಕ್ರಿ.ಶ. ೮೦೦ ರಲ್ಲಿದ್ದ ಕುತೂಹಲನ 'ಲೀಲಾವತಿ ಕಹಾ' ಹಾಗೂ ಕ್ರಿ.ಶ. ೬೦೦ ರಲ್ಲಿದ್ದ ಉದ್ಯೋತನಸೂರಿಯ 'ಕುವಲಯಮಾಲಾ' ಕೃತಿಗಳನ್ನು ಉಪಾಧ್ಯೆಯವರು ಪ್ರಪ್ರಥಮವಾಗಿಯೂ ಪರಿಪೂರ್ಣವಾಗಿಯೂ ಸಂಪಾದಿಸಿದ್ದಾರೆ. ಪ್ರಸ್ತಾವನೆಯಲ್ಲಿ ನೇಮಿಚಂದ್ರನ 'ಲೀಲಾವತಿ ಪ್ರಬಂಧಂ' ಕೃತಿಗೆ 'ಲೀಲಾವಈ ಕಹಾ'ದ ಪ್ರಭಾವ ವಿರುವುದೆಂಬುದನ್ನು ಗುರುತಿಸುತ್ತ, ಮೂಲದಲ್ಲಿದ್ದ ಶೈವಪರಿಸರಕ್ಕೆ ಬದಲಾಗಿ ನೇಮಿಚಂದ್ರನು ಜೈನಸ್ಪರ್ಶ ನೀಡಿರುವುದರ ಕುರಿತು ಚರ್ಚಿಸಿದ್ದಾರೆ. 'ಕುವಲಯಮಾಲಾ' ಕೃತಿಯೂ 'ಲೀಲಾವಈ ಕಹಾ' ದಂತೆಯೇ ಮಧ್ಯಪೂರ್ವ ಯುಗದ ಭಾರತೀಯ ಸಂಸ್ಕೃತಿಯನ್ನು ಬಿಂಬಿಸುವ ಮಹತ್ತ್ವಪೂರ್ಣ ಕೃತಿಯಾಗಿದೆ ಎಂಬುದನ್ನು ಅತ್ಯಂತ ನಿಖರವಾಗಿ ಪ್ರಸ್ತಾವಿಸಿದ್ದಾರೆ.

ಉಪಾಧ್ಯೆಯವರು ಸಂಪಾದಿಸಿದ ಮತ್ತೊಂದು ಅತ್ಯಮೂಲ್ಯ ಕೃತಿ 'ಧೂರ್ತಾಖ್ಯಾನ.' ಇದೊಂದು ವಿಡಂಬನ ಸಾಹಿತ್ಯ. ಕ್ರಿ.ಶ. ೮೦೦ ರಲ್ಲಿ ಪ್ರಸಿದ್ಧ ಜೈನಾಚಾರ್ಯನಾದ ಹರಿಭದ್ರಸೂರಿಯು ಪ್ರಾಕೃತದಲ್ಲಿ ರಚಿಸಿದ ಈ ಕೃತಿಯು ಪ್ರಾಚೀನ ಭಾರತೀಯ ಪ್ರಹಸನ ಸಾಹಿತ್ಯದ ಪ್ರಪ್ರಥಮ ಪ್ರಯತ್ನ ಎಂಬ ಹೆಗ್ಗಳಿಕೆಗೆ ಪ್ರಾಪ್ತವಾಗಿದೆ. ಇದು ಸಣ್ಣಗಾತ್ರದ ಕೃತಿ. ಇದು ನಾಲ್ಕು ಜನ ಧೂರ್ತರ ಕಥೆಗಳ ಮೂಲಕ ಭಾರತೀಯ ನೆಲದಲ್ಲಿ ಬೇರೂರಿದ್ದ ಹಿಂದೂ ಸಂಪ್ರದಾಯವನ್ನು ಆ ಸಮಾಜದ ರೂಪರೇಷೆಗಳನ್ನು ಮತ್ತು ಆ ಪರಂಪರೆ ಮತ್ತು ನಂಬಿಕೆಗಳಲ್ಲಿದ್ದ ಪೊಳ್ಳುತನವನ್ನು ಬಯಲಿಗೆಳೆಯುವ ಕೃತಿಯಾಗಿದೆ. ಹಿಂದೂ ಮಹಾಕಾವ್ಯ ಗಳಲ್ಲಿಯೂ ಪುರಾಣಗಳಲ್ಲಿಯೂ ಕಂಡುಬರುವ ಪರಂಪರಾನುಗತ ಪೌರಾಣಿಕ ನಂಬಿಕೆಗಳಲ್ಲಿರುವ ಅಸಂಗತ, ಅಸಂಬದ್ಧ ಘಟನೆಗಳನ್ನು ಈ ಕಥೆಗಳು ವಿಡಂಬಿ ಸುತ್ತವೆ. ಸಾಮಾಜಿಕವಾಗಿ ಚಿಂತನೆಗಳನ್ನು ಬಿತ್ತುವ ಇಂತಹ ಕೃತಿಗಳು ಹೆಚ್ಚು ಜನಮಾನ್ಯವಾಗದ ಕುರಿತು ಉಪಾಧ್ಯೆ ಗಮನ ಸೆಳೆಯುತ್ತಾರೆ.

ಗ್ರಂಥಸಂಪಾದನಾಕ್ಷೇತ್ರಕ್ಕೆ ಉಪಾಧ್ಯೆಯವರು ಸಲ್ಲಿಸಿರುವ ಕೊಡುಗೆ ಅತ್ಯಮೂಲ್ಯವಾದದ್ದು ಹಾಗೂ ಅಪಾರವಾದದ್ದು. ಅವರು ಸಂಪಾದಿಸಿರುವ ಪ್ರತಿಯೊಂದು ಕೃತಿಯೂ ಒಳಗೊಂಡಿರುವ ದೀರ್ಘ ಪ್ರಸ್ತಾವನೆಗಳೂ ಒಂದೊಂದು ಪಾಂಡಿತ್ಯಪೂರ್ಣ ಸಂಶೋಧನಾ ಕಿರುಕೈಪಿಡಿಗಳಂತಿವೆ. ಅಲ್ಲದೆ ಅನುಬಂಧದ ಸ್ವರೂಪ ಹಾಗೂ ರಚನಾ ಕ್ರಮಗಳಲ್ಲಿಯ ಬಹುರೂಪಿವಿನ್ಯಾಸಗಳು ಎಲ್ಲ ಕಾಲಕ್ಕೂ ಅನುಕರಣೀಯವೆಂಬಂತೆ ಶಿಸ್ತುಬದ್ಧವಾಗಿರುವುದೂ ಅನನ್ಯವಾದದ್ದು. ಹಸ್ತಪ್ರತಿಗಳನ್ನು ಬಳಸಿಕೊಳ್ಳುವ ವಿಧಾನ, ಆ ಸಂದರ್ಭದಲ್ಲಿ ವಹಿಸಬೇಕಾದ ಎಚ್ಚರಿಕೆ, ಲಿಪಿಕಾರ ಸ್ಖಾಲಿತ್ಯ, ಮೂಲಪ್ರತಿ ಹಾಗೂ ವಿವಿಧ ಹಸ್ತಪ್ರತಿಗಳ ಕುರಿತು ವಹಿಸಬೇಕಾದ ಜವಾಬ್ದಾರಿಗಳನ್ನು ಕುರಿತಂತೆ ಅವರಿಗಿರುವ ಸೂಕ್ಷ್ಮಾವಲೋಕನ, ಶಬ್ದಾರ್ಥಕೋಶ ರಚನಾಕ್ರಮ, ಅನುವಾದ, ಸಾರಾಂಶ ರೂಪಗಳು, ಟಿಪ್ಪಣಿಗಳ ನಿಖರ ವಿವರಗಳು, ಅಡಿಟಿಪ್ಪಣಿಗಳ ಕ್ರಮಾನುಬದ್ಧತೆ, ಪಾಠನಿರ್ಣಯ ಕ್ರಮ, ಪಾಠಪರಿಷ್ಕರಣ ಚಾತುರ್ಯ ಮುಂತಾದವುಗಳು ಹಸ್ತಪ್ರತಿಶಾಸ್ತ್ರದ ಸ್ವರೂಪಾಧ್ಯಯನಕ್ಕೆ ಮೂಲ ಆಕರಗಳಂತೆ ಇಂದೂ ಮಾರ್ಗದರ್ಶಕವಾಗಿವೆ.

ಉಪಾಧ್ಯೆಯವರು ಹಲವು ಸಹಸಂಪಾದಕರೊಂದಿಗೆ ಸೇರಿ ಸಂಪಾ ದಿಸಿರುವ ಕೃತಿಗಳ ಸಂಪಾದಕೀಯಗಳೇ ಸುಮಾರು ೮೦ ರಷ್ಟಿವೆ. ಇವರು ಪ್ರೊ.

ಕೆ.ಜಿ. ಕುಂದಣಗಾರರೊಂದಿಗೆ ಎರಡು ಕನ್ನಡ ಕಾವ್ಯಗಳನ್ನು ಸಂಪಾದಿಸಿದ್ದಾರೆ. 'ಚಿನ್ಮಯ ಚಿಂತಾಮಣಿ'(೧೯೩೦) ಹಾಗೂ 'ಜ್ಞಾನಭಾಸ್ಕರ ಚರಿತೆ'(೧೯೩೧) ಎರಡೂ ನಡುಗನ್ನಡದ ಕಿರುಕೃತಿಗಳೂ ಅವರ ಅಧ್ಯಾಪನ ವೃತ್ತಿಯ ಆರಂಭಿಕ ಹಂತದವು. ಅವರನ್ನು ಹಂಪನಾ ಅವರು 'ಗ್ರಂಥಸಂಪಾದನಾಚಾರ್ಯ' ಎಂದು ಗೌರವಪೂರ್ವಕವಾಗಿ ಅಭಿನಂದಿಸಿರುವುದು ಗ್ರಂಥಸಂಪಾದನಾಕ್ಷೇತ್ರದಲ್ಲಿ ಅವರು ಸೃಷ್ಟಿಸಿದ ರಾಜಮಾರ್ಗದ ಕುರುಹಾಗಿದೆ. ಬೇರೆ ಬೇರೆ ದೇಶಗಳ ಸ್ವತಂತ್ರ ಮತ್ತು ಸಂಪಾದಿತ ೭೦ ಕೃತಿಗಳನ್ನು ಕುರಿತ ಸಮೀಕ್ಷೆಗಳು, ೧೪ ಗ್ರಂಥಗಳ ಮುನ್ನುಡಿಗಳು ಅವರ ವಿಸ್ತಾರವಾದ ಅಧ್ಯಯನಾಸಕ್ತಿಗೂ ಭಾಷಾಪ್ರೌಢಿಮೆಗೂ ವಿದ್ವತ್ತಿಗೂ ಸಾಕ್ಷಿಯಾಗಿವೆ. ಬೇರೆ ಬೇರೆ ವಿಷಯಗಳನ್ನು ಕುರಿತು ಸುಮಾರು ೪೦ ವರ್ಷಗಳ ಕಾಲಮಾನದಲ್ಲಿ ಪ್ರಕಟವಾದ ಅವರ ಸಂಶೋಧನಾ ಬಿಡಿ ಲೇಖನಗಳು ಸುಮಾರು ೧೪೫ ರಷ್ಟಿವೆ. ಜೈನಭಾಷೆ, ಶಾಸ್ತ್ರ, ಸಾಹಿತ್ಯ ಮುಂತಾದವುಗಳಿಗೆ ಸಂಬಂಧಿಸಿದಂತೆ ಇದರಲ್ಲಿ ಅತಿಮುಖ್ಯವಾಗಿ ವಿದ್ವಾಂಸರ ಅಭಿನಂದನೆಗಳಿಗೂ ಸಂಶೋಧನಾಸಕ್ತರಿಗೂ ಮುಖ್ಯ ಆಕರವಾಗಿಯೂ ಪಾತ್ರವಾದವನ್ನು ಗಮನಿಸಲೇಬೇಕು. ಇನ್ನೂ ಹೇಳಹೊರಟರೆ ಮುಕ್ತಾಯವೇ ಇಲ್ಲವೇನೋ ಎಂಬಂತಹ ಅಗಾಧಕಾರ್ಯಗಳ ಹೊರೆಯೇ 'ಉಪಾಧ್ಯೆ' ಎಂಬ ಪ್ರತಿಭೆಯ ಬೆನ್ನ ಮೇಲಿರುವುದನ್ನು ಕಾಣಬಹುದು. ಪ್ರಾಚೀನ ಹಾಗೂ ಅಭಿಜಾತ ಗ್ರಂಥಗಳ ಸಂಪಾದಕರೂ, ಸಂಶೋಧನಾ ಲೇಖಕರೂ, ಹಸ್ತಪ್ರತಿಶಾಸ್ತ್ರಕೋವಿದರೂ ಆಗಿದ್ದ ಮಾನ್ಯರ ಕೆಲವು ಅಪೂರ್ವ ಗ್ರಂಥರಾಶಿಯ ಒಟ್ಟು ಸ್ವರೂಪವನ್ನು ಸಂಕ್ಷಿಪ್ತವಾಗಿ ಹೀಗೆ ವಿಂಗಡಿಸಬಹುದು–

ಅವರ ಎಲ್ಲ ಪ್ರಕಾರದ ಕೃತಿಗಳು, ಲೇಖನಗಳನ್ನು ಭಾಷಾದೃಷ್ಟಿಯಿಂದ ಲೆಕ್ಕ ಹಾಕಿದರೆ ಅವು ಈ ಕೆಳಗಿನ ಭಾಷೆ ಮತ್ತು ಉಪಭಾಷೆಗಳನ್ನು ಒಳಗೊಂಡಿವೆ. ಅವರ ಸಂಶೋಧನಾಸಕ್ತಿ ಹಾಗೂ ವಿದ್ವತ್ತಿಗೆ ಇವು ಸಾಕ್ಷಿಯಾಗಿವೆ. ಅವು:

1. ಪ್ರಾಕೃತ, 2. ಜೈನ ಶೌರಸೇನಿ, 3. ಜೈನ ಮಹಾರಾಷ್ಟ್ರಿ, 4. ಅರ್ಧಮಾಗಧಿ, 5. ಮಹಾರಾಷ್ಟ್ರಿ, 6. ಅಪಭ್ರಂಶ, 7. ಪೈಶಾಚಿ, 8. ಸಂಸ್ಕೃತ 9. ಇಂಗ್ಲೀಷ್ ಮತ್ತು 10. ಕನ್ನಡ.

ಈ ಗ್ರಂಥಗಳು ಮತ್ತು ಲೇಖನಗಳ ವಿಷಯ ವ್ಯಾಪ್ತಿಯನ್ನು ಗಮನಿಸಿದರೆ ಅವರ ಅಗಾಧ ಅಧ್ಯಯನ ಶೀಲತೆಯ ಕುರಿತು ಆಶ್ಚರ್ಯವಾಗುತ್ತದೆ. ಅವುಗಳನ್ನು ಹೀಗೆ ಸಂಗ್ರಹಿಸಬಹುದು:

1. ತರ್ಕಶಾಸ್ತ್ರ, 2. ಜೈನ ಕಾವ್ಯಗಳು, 3. ಜೈನ ನೀತಿಶಾಸ್ತ್ರ 4. ಜೈನ ತತ್ತ್ವಜ್ಞಾನ ಮತ್ತು ಧರ್ಮ, 5. ಜೈನ ಸೃಷ್ಟಿ ವಿವರಣಾ ಶಾಸ್ತ್ರ, 6. ಜೈನ ಕಥಾನಕಗಳು, 7. ಅಧ್ಯಾತ್ಮ, 8. ಪ್ರಮಾಣ – ಪ್ರಮೇಯ ವಿಚಾರ, 9. ವಸ್ತುಗಳ ಮೂಲ ತತ್ತ್ವವಿಚಾರ, 10. ಜೈನ ಅನುಭಾವ ವಿಚಾರಗಳು, 11. ಜೈನ ಪ್ರಹಸನ.

ವಿವಿಧ ವಿಷಯಗಳ ಅಧ್ಯಯನ ಮತ್ತು ಸಂಶೋಧನೆಗಳಿಗೆ ಸಂಬಂಧಿಸಿದಂತೆ ಉಪಾಧ್ಯೆಯವರು ಅತ್ಯಂತ ಕ್ರಿಯಾಶೀಲರಾಗಿ ತೊಡಗಿಸಿಕೊಂಡ ರೀತಿಯು ಬೆರಗುಗೊಳಿಸುವಂಥದು. ಅವುಗಳಲ್ಲಿ ಅತಿ ಮುಖ್ಯವಾದವನ್ನು ಹೀಗೆ ಸಂಗ್ರಹಿಸ ಬಹುದು;

1. ಪ್ರಾಕೃತ ಭಾಷೆ, ಸಾಹಿತ್ಯ ಮತ್ತು ಜೈನವಿದ್ಯೆಗಳ ಪ್ರಗತಿಗಾಗಿ ಮತ್ತು ಅಧ್ಯಯನಕ್ಕಾಗಿ ಕೋಲ್ಹಾಪುರ ಸಂಸ್ಥಾನದ ಸುಪರ್ದಿನಲ್ಲಿದ್ದ ರಾಜಾರಾಮ ಕಾಲೇಜಿನಲ್ಲಿ ಒಂದು ಸ್ವತಂತ್ರ ವಿಭಾಗವನ್ನೇ ದೊರಕಿಸಿ ಕೊಟ್ಟದ್ದು;
2. ಶಿವಾಜಿ ವಿಶ್ವವಿದ್ಯಾಲಯದ ಸ್ಥಾಪನೆಯಾದ ಅನಂತರದಲ್ಲಿ ಅದರ ಅಧೀನದಲ್ಲಿದ್ದ ಎಲ್ಲಾ ಕಾಲೇಜುಗಳಲ್ಲೂ ಪ್ರಾಕೃತ, ಸಂಸ್ಕೃತ ಭಾಷೆಗಳಿಗೆ ಸ್ವತಂತ್ರ ವಿಭಾಗಗಳನ್ನು ವ್ಯವಸ್ಥಿತವಾಗಿ ರೂಪಿಸಲು ಶ್ರಮಿಸಿದ್ದು;
3. ಮುಂಬಯಿ, ಪುಣೆ, ನಾಗಪುರ್, ಧಾರವಾಡ ಮೊದಲಾದ ಭಾರತದ ವಿವಿಧ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಪ್ರಾಕೃತ, ವೈಶಾಲಿ ಮತ್ತು ಜೈನವಿದ್ಯಾ ವಿಷಯಗಳ ಕಲಿಕೆಗೂ, ಸಂಶೋಧನೆಗೆ ಅನುಗುಣವಾಗುವಂತಹ ವ್ಯವಸ್ಥೆಗೂ ಕಾರಣರಾದದ್ದು, ಮತ್ತು ಅಲ್ಲಲ್ಲಿಯ ವಿಭಾಗಗಳ ಪ್ರಮುಖ ಸಮಿತಿಗಳ ಸಲಹೆಗಾರರಾಗಿ ಪಾತ್ರವಹಿಸಿದ್ದು;
4. ಮೈಸೂರು ವಿಶ್ವವಿದ್ಯಾನಿಲಯದ ಜೈನಶಾಸ್ತ್ರ ವಿಭಾಗದ ಸ್ಥಾಪಕ ಪ್ರಾಧ್ಯಾಪಕರಾದ ಅನಂತರ ಅದರ ಯಶಸ್ಸಿನ ಆಧಾರದ ಮೇಲೆ ಕರ್ನಾಟಕ ವಿಶ್ವವಿದ್ಯಾಲಯ (ಧಾರವಾಡ), ಪಟಿಯಾಲಾ ವಿಶ್ವವಿದ್ಯಾಲಯ (ಪಂಜಾಬ), ಸುಖಾಡಿಯ ವಿಶ್ವವಿದ್ಯಾಲಯ (ಉದಯಪುರ), ಮದ್ರಾಸು ವಿಶ್ವವಿದ್ಯಾಲಯ

(ಮದರಾಸು) ಮೊದಲಾದವುಗಳಲ್ಲಿ ಜೈನಶಾಸ್ತ್ರ – ಪ್ರಾಕೃತ ಅಧ್ಯಯನಗಳ ವಿಭಾಗಗಳಿಗೆ ಮಾದರಿಯಾಗಿ, ಸಲಹೆಗಾರರಾಗಿ, ಪಾತ್ರವಹಿಸಿದ್ದು;

5. 1968ರಷ್ಟು ಹಿಂದೆಯೇ ಯುಜಿಸಿ ಮಂಡಳಿಯ ನೆರವಿನೊಂದಿಗೆ ಶಿವಾಜಿ ವಿಶ್ವವಿದ್ಯಾಲಯದಲ್ಲಿ ಪ್ರಪ್ರಥಮ ಪ್ರಾಕೃತ ವಿಚಾರಗೋಷ್ಠಿಯನ್ನು ನಡೆಸಿದ್ದು; ಹಾಗೆಯೇ ಇದೇ ಮಾದರಿಯಲ್ಲಿ ಮುಂದೆ ಪುಣೆ, ಮುಂಬಯಿ ವಿಶ್ವ ವಿದ್ಯಾಲಯಗಳಲ್ಲಿ ಇಂತಹ ಗೋಷ್ಠಿಗಳನ್ನು ನಡೆಸಲು ಪ್ರಮುಖ ಪಾತ್ರ ವಹಿಸಿದ್ದು;

6. ಅತಿ ಮುಖ್ಯವಾಗಿ ಹಲವಾರು ಸಂಶೋಧನ ಸಂಸ್ಥೆಗಳು, ಸಾಹಿತ್ಯ ಪ್ರಶಸ್ತಿ, ವಿಶ್ವಸ್ಥನಿಧಿ ಮತ್ತು ಶಾಶ್ವತ ವ್ಯಾಖ್ಯಾನ ಮಾಲಾ ವಿಶ್ವಸ್ಥ ನಿಧಿಗಳ ಸಂಸ್ಥಾಪಕರು, ಸಲಹೆಗಾರರೂ ಆಗಿ ಕಾರ್ಯ ನಿರ್ವಹಿಸಿದ್ದು;

7. ಮಹಾವೀರನ ಜನ್ಮಸ್ಥಳವಾದ ವೈಶಾಲಿಯಲ್ಲಿ (ಬಿಹಾರ) ಪ್ರಾಕೃತ ಮತ್ತು ಜೈನ ವಿದ್ಯಾ ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸಲು ಪ್ರೇರಕರಾಗಿದ್ದುದು;

8. ಭಾರತೀಯ ಜ್ಞಾನಪೀಠದ ಪ್ರತಿಷ್ಠಿತ ಸೃಜನಶೀಲ ಸಾಹಿತ್ಯ ಪ್ರಶಸ್ತಿಯನ್ನು ಸಂಸ್ಥಾಪಿಸಲು ಹಾಗೂ ಅದಕ್ಕೆ ಪೂರಕವಾದ ರೂಪುರೇಷೆಗಳನ್ನು ಸಿದ್ಧ ಪಡಿಸಲು ಮುಖ್ಯ ಸಲಹೆಗಾರರಾಗಿ ಕಾರ್ಯ ನಿರ್ವಹಿಸಿದ್ದು;

9. ದಿಲ್ಲಿ ವಿಶ್ವವಿದ್ಯಾಲಯದಲ್ಲಿ 'ರಾಜಕೃಷ್ಣ ಜೈನ ವ್ಯಾಖ್ಯಾನಮಾಲೆ' ಎಂಬ ಟ್ರಸ್ಟನ್ನು ರೂಪಿಸಲು ಅತಿ ಮುಖ್ಯವಾದ ಪ್ರಣಾಲಿಕೆಯನ್ನು ಸಿದ್ಧಪಡಿಸಿ, ಪ್ರತಿವರ್ಷ ಒಬ್ಬ ಖ್ಯಾತ ವಿದ್ವಾಂಸರಿಂದ ಅಲ್ಲಿ ಜೈನ ಹಾಗೂ ಪ್ರಾಕೃತ ಭಾಷಾಸಾಹಿತ್ಯಗಳಿಗೆ ಸಂಬಂಧಿಸಿದಂತೆ ವ್ಯಾಖ್ಯಾನಗಳನ್ನು ಕೊಡಿಸುವುದು ಅವರ ಮಹತ್ತ್ವಪೂರ್ಣ ಕಾರ್ಯಸಿದ್ಧಿಯ ದ್ಯೋತಕವಾಗಿ ಪ್ರಚಲಿತ ದಲ್ಲಿರುವುದು.

ಈ ರೀತಿಯ ಕ್ರಿಯಾಶೀಲ ಕೊಡುಗೆಗಳಿಗಾಗಿ ಡಾ. ಉಪಾಧ್ಯೆಯವರು ಭಾರತೀಯ ಸಾಹಿತ್ಯಕ್ಷೇತ್ರಕ್ಕೆ ಪ್ರಾತಃಸ್ಮರಣೀಯರಾಗಿದ್ದಾರೆ. ದೇಶೀಯ ಹಾಗೂ ವಿದೇಶೀಯ ಸಾಹಿತ್ಯ ಹಾಗೂ ಭಾಷಾ ಸಮ್ಮೇಳನಗಳಲ್ಲಿ ವಾಗ್ಮಿಗಳಾಗಿ, ಮಾರ್ಗದರ್ಶಕರಾಗಿ ಗಮನಾರ್ಹ ಸಾಧಕರಾಗಿ ಮನಸೆಳೆದಿದ್ದಾರೆ. ತಮ್ಮ ಜೀವಿತಾವಧಿಯ ಕ್ಷಣಗಳನ್ನು ತಪಸ್ಸಿನಂತೆ ಕಳೆದ ಅವರ ಅತ್ಯಪೂರ್ವ ಸಾಧನೆಗಳು

ವಿದ್ಯಾರ್ಥಿಗಳಿಗೆ, ಕಾವ್ಯಜಿಜ್ಞಾಸುಗಳಿಗೆ, ವಿವಿಧ ಭಾಷಾವಿದರಿಗೆ ಮಹತ್ತ್ವಪೂರ್ಣವಾದ ದಾರಿದೀಪವಾಗಿ ಸಂದಿವೆ. ೧೯೭೫ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಜೈನಶಾಸ್ತ್ರ ವಿಭಾಗದಿಂದ ನಿವೃತ್ತರಾಗಿ ಕೊಲ್ಹಾಪುರಕ್ಕೆ ಮರಳಿದ ಕೆಲವೇ ದಿನಗಳಲ್ಲಿ ೦೮.೧೦.೧೯೭೫ ರಂದು ತೀವ್ರ ಹೃದಯಾಘಾತದಿಂದ ಕೊನೆಯುಸಿರೆಳೆದರೂ ಅವರ ಅಮೋಘ ಸಾಹಿತ್ಯಸೇವೆಯು ಸಂಶೋಧನ ಕ್ಷೇತ್ರದ ನಿತ್ಯಸ್ಮರಣೀಯವಾಗಿ ಸಂಶೋಧನಾಸಕ್ತರ ಹೃನ್ಮನದಲ್ಲಿ ಜೀವಂತವಾಗಿದೆ.

ಆಧಾರ

೧. ಡಾ. ಬಿ. ಕೆ. ಖಡಬಡಿ, ಆ. ನೇ. ಉಪಾಧ್ಯೆ ಅವರ ಜೀವನ ಮತ್ತು ಸಾಧನೆ.

೨. ಡಾ. ಪ್ರೀತಿ ಶುಭಚಂದ್ರ, ಆ.ನೇ. ಉಪಾಧ್ಯೆ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.

❐ ❐ ❐

ಮರಿಯಪ್ಪ ಭಟ್ಟ ಎಂ.

(೧೯೦೬–೧೯೮೦)

ಅಕ್ಕಮಹಾದೇವಿ

ಮರಿಯಪ್ಪ ಭಟ್ಟ ಮೂಲತಃ ಕರ್ನಾಟಕದವರಾದರೂ ತಮಿಳುನಾಡಿನಲ್ಲಿ ಸುಮಾರು ನಾಲ್ಕು ದಶಕಗಳಿಗೂ ಹೆಚ್ಚು ಕಾಲ ನೆಲಸಿ ಕನ್ನಡದ ಸಾಂಸ್ಕೃತಿಕ ರಾಯಭಾರಿಯಾಗಿ ಕನ್ನಡ ಭಾಷಾಸಾಹಿತ್ಯಗಳ ಹಳಮೆ, ಮೇಲ್ಮೈಗಳನ್ನು ಅಲ್ಲಿಯವರಿಗೆ ಪರಿಚಯ ಮಾಡಿಕೊಡುವುದರಲ್ಲಿ ಕೃತಕೃತ್ಯರಾದವರು. ಇವರು ದಕ್ಷಿಣಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಮಂಗ್ಲಿಮನೆಯಲ್ಲಿ ೨೭ ಜುಲೈ ೧೯೦೬ರಂದು ಜನಿಸಿದರು. ತಂದೆ ಗೋವಿಂದಭಟ್ಟ. ತಾಯಿ ಕಾವೇರಮ್ಮ.

ಹುಟ್ಟೂರಿನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿ ಪುತ್ತೂರಿನಲ್ಲಿ ಮಾಧ್ಯಮಿಕ ಶಾಲೆಗೆ ಸೇರಿದರು. ಆ ಕಾಲದಲ್ಲಿ ಅವರ ಮನಸ್ಸಿನ ಮೇಲೆ ಅಪಾರ ಪ್ರಭಾವ ಬೀರಿದ ಅಧ್ಯಾಪಕ ಉಗ್ರಾಣ ಮಂಗೇಶರಾಯರು. ಅವರ ಪ್ರಭಾವದಿಂದ ಮರಿಯಪ್ಪ ಭಟ್ಟರಲ್ಲಿ ಸ್ವಭಾಷಾಭಿಮಾನ ಮತ್ತು ಆಸಕ್ತಿಗಳು ಕೆರಳುವಂತಾಯಿತು.

೧೯೨೪ರಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು. ಮುಂದಿನ ವ್ಯಾಸಂಗಕ್ಕೆ ಮಂಗಳೂರಿಗೆ ತೆರಳಿದರು. ಅಲ್ಲಿಯೇ ಬಿ.ಎ. ವ್ಯಾಸಂಗ ಮುಂದುವರಿಸಿದರು. ಗಣಿತ ಇವರ ವಿಶೇಷ ಆಸಕ್ತಿಯ ವಿಷಯವಾಗಿತ್ತು. ಮುಳಿಯ ತಿಮ್ಮಪ್ಪ ಭಟ್ಟರಂಥ ಶ್ರೇಷ್ಠ ಪಂಡಿತರ ಶಿಷ್ಯರಾಗಿ ಕನ್ನಡದ ಬಗ್ಗೆ ಹೆಚ್ಚು ಒಲವು ಬೆಳೆಸಿಕೊಂಡರು.

೧೯೨೮ರಲ್ಲಿ ಪದವಿಯನ್ನು ಮುಗಿಸಿ ಮರಿಯಪ್ಪಭಟ್ಟರು ಮದ್ರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಅಧ್ಯಾಪಕರಾಗಿ ನೇಮಕಗೊಂಡರು. ಗಣಿತ ಮತ್ತು ಕನ್ನಡ

ಅವರ ಬೋಧನೆಯ ವಿಷಯಗಳಾಗಿದ್ದುವು. ದಿನಕಳೆದಂತೆಲ್ಲ ಕನ್ನಡದಲ್ಲಿ ಆಸಕ್ತಿ ಬೆಳೆದು ಹಳೆಯ ಸಾಹಿತ್ಯವನ್ನೆಲ್ಲ ಅಧ್ಯಯನ ಮಾಡತೊಡಗಿದರು. ಸ್ವಯಂ ಸಾಧನೆಯಿಂದ ಕನ್ನಡ ವಿದ್ವತ್ತು ಮತ್ತು ಎಂ.ಎ. ಪದವಿಗಳನ್ನು ಪಡೆದರು. ಅನಂತರ ಇವರ ಕಾರ್ಯಕ್ಷೇತ್ರ ವಿಸ್ತಾರವಾಯಿತು. ೧೯೪೦ರಲ್ಲಿ ಮದ್ರಾಸು ವಿಶ್ವವಿದ್ಯಾಲಯದಲ್ಲಿ ಕನ್ನಡ ಉಪನ್ಯಾಸಕರಾಗಿ ನೇಮಕಗೊಂಡರು. ಅನಂತರ ರೀಡರ್ ಆಗಿ ಬಡ್ತಿ ಪಡೆದರು. ಆ ವಿಭಾಗದ ಮುಖ್ಯಸ್ಥರಾಗಿ, ಹಿರಿಯ ಸಾಹಿತಿಯಾಗಿ, ಪ್ರಕಾಂಡ ಪಂಡಿತರಾಗಿ, ಸಮರ್ಥ ಮಾರ್ಗದರ್ಶಕರಾಗಿ, ಉತ್ತಮ ಸಂಶೋಧಕರಾಗಿ, ಹಿರಿಯ ಭಾಷಾ ವಿಜ್ಞಾನಿಯಾಗಿ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳಿಗೆ ಅನುಪಮ ಸೇವೆಸಲ್ಲಿಸಿದರು. ಕರ್ನಾಟಕ, ತಮಿಳುನಾಡು ಮಾತ್ರವಲ್ಲದೆ ಅಖಿಲ ಭಾರತಮಟ್ಟದಲ್ಲಿ ಖ್ಯಾತಿ ಪಡೆದವರು. ಅಜಾತಶತ್ರುವೆಂದೇ ಪ್ರಸಿದ್ಧರಾದರು.

೧೯೫೫–೫೬ರಲ್ಲಿ ಬ್ರಿಟಿಷ್ ಕೌನ್ಸಿಲಿನ ನೆರವಿನಿಂದ ಇಂಗ್ಲೆಂಡಿಗೆ ತೆರಳಿ, ಲಂಡನ್ನಿನ ಸ್ಕೂಲ್ ಆಫ್ ಓರಿಯೆಂಟಲ್ ಅಂಡ್ ಆಫ್ರಿಕನ್ ಸ್ಟಡೀಸ್‌ನಲ್ಲಿ ಭಾಷಾವಿಜ್ಞಾನದ ಮೇಲೆ ಹಲವು ಉಪನ್ಯಾಸಗಳನ್ನು ನೀಡಿದರು. ಅಲ್ಲದೆ ಆ ಕ್ಷೇತ್ರದಲ್ಲಿ ವಿಶೇಷ ಅಧ್ಯಯನ ನಡೆಸಿದರು. ಅಲ್ಲಿ ಎಂಟು ತಿಂಗಳು ಕೆಲಸ ಮಾಡಿ ಖ್ಯಾತ ಭಾಷಾವಿಜ್ಞಾನಿಗಳ ಸಂಪರ್ಕದಿಂದ ಅವರ ಪಾಂಡಿತ್ಯದ ಪ್ರಯೋಜನವನ್ನು ಪಡೆದರು. ಅನಂತರ ಆ ಶಾಖೆಯಲ್ಲಿ ಪೂರ್ಣ ಪಾಂಡಿತ್ಯವನ್ನು ಪಡೆದು, ಅನೇಕ ಸಂಶೋಧನ ಲೇಖನಗಳನ್ನು ಪ್ರಕಟಿಸಿದರು. ಭರತಖಂಡದ ಹಿರಿಯ ಭಾಷಾ ವಿಜ್ಞಾನಿಗಳಲ್ಲಿ ಒಬ್ಬರಾದರು.

ಇಂಗ್ಲೆಂಡಿನಿಂದ ಹಿಂತಿರುಗಿದ ಕೂಡಲೇ ೧೯೫೭ರಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ನೇಮಕಗೊಂಡರು. ಮದ್ರಾಸ್ ನಗರದಲ್ಲಿ ಕನ್ನಡ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದ್ದರೂ ಮರಿಯಪ್ಪಭಟ್ಟರ ಪಾಂಡಿತ್ಯಕ್ಕೆ ಮಾರುಹೋದ ವಿದ್ಯಾರ್ಥಿಗಳು ಕನ್ನಡ ಕಲಿಕೆಗಾಗಿ ಮದ್ರಾಸಿಗೆ ಹೋಗುತ್ತಿದ್ದರಂತೆ. ಸುಮಾರು ಒಂದು ದಶಕದ ಕಾಲ ಪ್ರೆಸಿಡೆನ್ಸಿ ಕಾಲೇಜಿನ ಕನ್ನಡ ಎಂ.ಎ. ವಿದ್ಯಾರ್ಥಿಗಳಿಗೆ ಸಾಹಿತ್ಯ ಮತ್ತು ಭಾಷಾವಿಜ್ಞಾನವನ್ನು ಕಲಿಸಿದರು. ಹಲವು ಕನ್ನಡ ವಿದ್ಯಾರ್ಥಿಗಳು ಭಟ್ಟರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿದರು. ಕೆಲವರು ಡಾಕ್ಟೊರೇಟ್ ಪದವಿ ಪಡೆದರು.

ಮರಿಯಪ್ಪಭಟ್ಟರು ಸಂಶೋಧಕರಾಗಿ, ಲೇಖಕರಾಗಿ ಕನ್ನಡ ಪ್ರಪಂಚಕ್ಕೆ ಬಹುಮುಖ್ಯವಾದ ಸೇವೆಸಲ್ಲಿಸಿದ್ದಾರೆ. ಮದ್ರಾಸು ರಾಜ್ಯದಿಂದ ದಕ್ಷಿಣ ಕನ್ನಡ ಬೇರ್ಪಟ್ಟ ಮೇಲೂ ಮದ್ರಾಸಿನಲ್ಲಿ ಕನ್ನಡವು ಜೀವಂತವಾಗಿರುವುದಕ್ಕೆ ಪ್ರೊ. ಮರಿಯಪ್ಪ ಭಟ್ಟರು ಮುಖ್ಯ ಕಾರಣವೆಂಬುದರಲ್ಲಿ ಸಂದೇಹವಿಲ್ಲ. ಕನ್ನಡ ಸಂಸ್ಕೃತಿಗೆ ಉಜ್ಜ್ವಲ ಉದಾಹರಣೆಯಾಗಿದ್ದ ಭಟ್ಟರು ನೇರ ನಡೆ–ನುಡಿಯ ನಿರಾಡಂಬರ ವ್ಯಕ್ತಿ. ಇವರನ್ನು ಪಾಂಡಿತ್ಯ ಪ್ರತಿಭೆಗಳಲ್ಲಿ ಮೀರಿಸಿರುವ ಜನ ಕನ್ನಡನಾಡಿನಲ್ಲಿ ಸಿಗಬಹುದು. ಆದರೆ ಅವರಂಥ ಸುಸಂಸ್ಕೃತ ವ್ಯಕ್ತಿಗಳು ತೀರಾ ವಿರಳ ಎಂದು ದೇ. ಜವರೇಗೌಡ ಅವರು ಅಭಿಪ್ರಾಯಪಟ್ಟಿದ್ದಾರೆ. ಸಾಹಿತ್ಯಕ್ಷೇತ್ರದಲ್ಲಿ ಅರ್ಧ ಶತಮಾನ ಕಾಲ ಪ್ರವರ್ತಿಸಿದ ಭಟ್ಟರು ಕರ್ನಾಟಕ ಮತ್ತು ತಮಿಳುನಾಡಿನ ಸ್ನೇಹಸೇತುವೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು ಎನ್ನುತ್ತಾರೆ ಕು.ಶಿ. ಹರಿದಾಸಭಟ್ಟರು. ಹಾ.ಮಾ.ನಾಯಕ ಅವರು ''ಮರಿಯಪ್ಪಭಟ್ಟರಲ್ಲಿ ಹೃದಯ ಮಾಧುರ್ಯವೂ ಜ್ಞಾನದ ಬೆಳಕು ಸಂಗಮಿಸಿದ್ದವು. ಅವರೊಬ್ಬ ಅಪರೂಪದ ಸುಸಂಸ್ಕೃತ ವ್ಯಕ್ತಿಯಾಗಿದ್ದರು'' ಎನ್ನುತ್ತಾರೆ. ಈ ಮಾತುಗಳು ಮರಿಯಪ್ಪ ಭಟ್ಟರ ವ್ಯಕ್ತಿತ್ವದ ಹಿರಿಮೆಗೆ ನಿದರ್ಶನ.

ಶ್ರೇಷ್ಠ ವಿದ್ವಾಂಸರು, ಉತ್ತಮ ಸಂಶೋಧಕರು, ಲೇಖಕರು ಆಗಿ ಕನ್ನಡಭಾಷೆ ಮತ್ತು ಸಾಹಿತ್ಯಪ್ರಪಂಚಕ್ಕೆ ಭಟ್ಟರು ಬಹುಮುಖವಾದ ಸೇವೆಸಲ್ಲಿಸಿದ್ದಾರೆ. ಹಲವಾರು ಕನ್ನಡಕಾವ್ಯಗಳನ್ನು ಶಾಸ್ತ್ರೀಯವಾಗಿ ಸಂಪಾದಿಸಿ ಅವುಗಳಿಗೆ ವಿಸ್ತಾರವೂ ಸಂಶೋಧನಾತ್ಮಕವೂ ಆದ ಮುನ್ನುಡಿ ಬರೆದು ಕನ್ನಡ ಸಾಹಿತ್ಯ ಚರಿತ್ರೆಗೆ ಸಂಬಂಧಿಸಿದ ಅನೇಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿದ್ದಾರೆ. ಪ್ರತಿಯೊಂದು ಮುನ್ನುಡಿಯಲ್ಲೂ ಕವಿಯ ಜೀವನ, ಕಾಲವಿಚಾರಗಳನ್ನು ಸೋದಾರಣವಾಗಿ, ಸಮಗ್ರವಾಗಿ ಚರ್ಚಿಸಿ ಕಾವ್ಯದ ಮೂಲ ಆಕರಗಳನ್ನು ಪರಿಶೀಲಿಸಿ ಅದರಲ್ಲಿ ಪ್ರತಿಪಾದಿತವಾದ ವಿಷಯವನ್ನು ದೀರ್ಘವಾಗಿ ವಿವರಿಸಿ ಅದರ ಗುಣಗಳನ್ನು ವಿಚಾರಿಸಿದ್ದಾರೆ. ನಿದರ್ಶನಾರ್ಥವಾಗಿ, ಪಾರ್ಶ್ವನಾಥಪುರಾಣದ ಪೀಠಿಕೆಯನ್ನು ಹೆಸರಿಸಬಹುದು. ಗ್ರಂಥದಲ್ಲಿ ಮುಕ್ತವಾಗಿರುವ ಆಂತರಿಕ ಸಂಗತಿಗಳಿಂದ ಹಾಗೂ ಪಾರ್ಶ್ವನಾಥ ಪಂಡಿತನಿಂದ ರಚಿತವಾದ ಶಾಸನಾಧಾರದಿಂದ ಅವನ ಕಾಲ ಸುಮಾರು ೧೨೦೫–೧೨೨೨ ಎಂದು ನಿರ್ಣಯಿಸಿದ್ದಾರೆ.

ಅವರು ಸಂಗ್ರಹಿಸಿ ಕೊಟ್ಟಿರುವ ಗಾದೆ, ಶ್ಲೋಕ, ಉಪಮಾರೂಪಕಗಳು ನುಡಿಗಟ್ಟುಗಳು ಹಾಗೂ ಅಪರೂಪದ ಶಬ್ದಗಳು ಸಾಹಿತ್ಯಚರಿತ್ರೆಗೆ ಸಂಬಂಧಿಸಿದ ತೌಲನಿಕ ವ್ಯಾಸಂಗದ ದೃಷ್ಟಿಯಿಂದ ತುಂಬಾ ಉಪಯುಕ್ತವಾಗಿವೆ. ಈ ಮಾರ್ಗದಲ್ಲಿ ಅವರು ಸಂಪಾದಿಸಿ ಪ್ರಕಟಿಸಿರುವ ಕಾವ್ಯಗಳು ೧.ಅಭಿನವ ಮಂಗರಾಜ ನಿಘಂಟು ೨. ಗುಣಚಂದ್ರನ ಛಂದಸ್ಸಾರ ೩. ವರ್ಧಮಾನ ಪುರಾಣ ೪. ಪಾರ್ಶ್ವನಾಥ ಪುರಾಣ ೫. ಜಾತಕತಿಲಕ ೬. ವಿಷ್ಣುಪುರಾಣ ಪಂಚಮಾಂಶ ೭. ಸಂಗೀತ ರತ್ನಾಕರ ೮. ವ್ಯವಹಾರ ಗಣಿತ ೯. ಸದ್ಗುರು ರಹಸ್ಯ (ಗುರುಬಸವ)

ಕವಿಗಳನ್ನು ಕುರಿತು ಬರೆದಿರುವ ವಿಮರ್ಶಾತ್ಮಕವೂ ಸಂಶೋಧನಾತ್ಮಕವೂ ಆದ ಲೇಖನಗಳು ಹಲವು. ಆಂಡಯ್ಯನ ಕಾವ್ಯದ ಸೊಗಸನ್ನು ವೈಶಿಷ್ಟ್ಯವನ್ನು ಆತ್ಮೀಯತೆಯಿಂದ ಪ್ರಶಂಸಿಸಿದ್ದಾರೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಆಂಡಯ್ಯನು ತದ್ಭವಗಳ ಮೂಲಕ ಸಂಸ್ಕೃತವನ್ನು ಸೋಲಿಸಿದನು. ದೇಶ್ಯಪದಗಳ ಮೂಲಕ ಕನ್ನಡದ ವ್ಯಕ್ತಿತ್ವವನ್ನು ವ್ಯಕ್ತಪಡಿಸಿದನು. ಸಮಕಾಲೀನ ಸಮಾಜ ಚಿತ್ರಣ, ಅಜಿತಪುರಾಣ ಮತ್ತು ಗದಾಯುದ್ಧಗಳಲ್ಲಿ ಎಷ್ಟರಮಟ್ಟಿಗೆ ಕಾಣುತ್ತದೆ ಎಂಬುದನ್ನು ಒಂದು ಲೇಖನದಲ್ಲಿ ನಿರೂಪಿಸಿದ್ದಾರೆ. 'ಮತ್ಸ್ಯಪುರಾಣದಲ್ಲಿ ಅಡಕವಾಗಿರುವ ಇತಿಹಾಸಗಳು' ಎಂಬ ಲೇಖನ ಕುತೂಹಲಕಾರಿಯಾಗಿದೆ. ಶತಕಗಳ ಉಗಮ, ಸ್ವರೂಪ, ಲಕ್ಷಣ, ವ್ಯಾಪ್ತಿಗಳು 'ಕನ್ನಡ ಶತಕಗಳು' ಎಂಬ ಲೇಖನದಲ್ಲಿ ಉಲ್ಲೇಖಗೊಂಡಿವೆ. 'ಕೆಲವು ಕನ್ನಡ ಶಾಸನ ಕವಿಗಳು' ಲೇಖನವೂ ಇತಿಹಾಸ ಸಂಶೋಧನೆಯ ದೃಷ್ಟಿಯಿಂದ ಗಮನ ಸೆಳೆಯುತ್ತದೆ. ಸಾವಿಯಣ್ಣ(೯೬೯), ನಾರಾಯಣ(೯೭೧), ಕಾಳಿದಾಸಯ್ಯ(೧೦೦೨), ಬಾಹುಬಲಿ(೧೦೦೭), ಕುಲಕರಣಿ ಭರ್ಮಯ್ಯ(೧೦೪೨), ಚಾಮಣ್ಣ ರಾಯ(೧೦೫೪) ಇವರ ಕಾಲದೇಶಾದಿ ವಿಚಾರವೂ ಅವರ ಕಾವ್ಯಪ್ರೌಢಿಮೆಯ ವಿಷಯವೂ ಆ ಲೇಖನದಲ್ಲಿ ವಿಶದಗೊಂಡಿದೆ.

ಕನ್ನಡ ಸಂಸ್ಕೃತಿಯನ್ನು ಕುರಿತ ಪ್ರಬಂಧ ಅವರ ಆಳವಾದ ಅಭ್ಯಾಸಕ್ಕೂ ವಿಷಯ ಸಂಗ್ರಹ ಸಾಮರ್ಥ್ಯಕ್ಕೂ ಅವರ ಶ್ರದ್ಧಾಸಕ್ತಿಗಳಿಗೂ ಸಾಕ್ಷಿಯಾಗಿದೆ. ಸೊಲ್ಲು, ನುಡಿಗಟ್ಟು, ನಾಣ್ಣುಡಿಗಳಿಂದ ಶಾಸನಸಾಹಿತ್ಯ ಸಾಕ್ಷಿಗಳಿಂದ ಸಾಹಿತ್ಯ ಕೃತಿಗಳ ಆಧಾರದಿಂದ ಅವರು ಕನ್ನಡ ಸಂಸ್ಕೃತಿಯ ಮೂರ್ತಸ್ವರೂಪವನ್ನು ಕಲ್ಪಿಸಲು ಪ್ರಯತ್ನಿಸಿದರು. ಆರ್ಯ-ದ್ರಾವಿಡ ಸಂಗಮಕ್ಕೆ ಹಿಂದೆಯೇ ದ್ರಾವಿಡ ಸಂಸ್ಕೃತಿ

ಸಾಕಷ್ಟು ಮೇಲ್ಮಟ್ಟದಲ್ಲಿದೆ ಎಂಬುದನ್ನು ಶಬ್ದಸಾಕ್ಷಿಯಾಗಿ ವಿವರಿಸಿದರು. ಹೊಂಡ, ಕೆರೆ, ಕಟ್ಟೆ, ಕೊಳ, ಪಳ್ಳ, ಹೊರೆ, ತೋಡು, ಕಣಿ, ಕಾಲುವೆ, ಕೈತೋಡು, ಸಾಲು ಮೊದಲಾದ ಪದಗಳನ್ನು ಉದಾಹರಿಸಿ, ಹಿಂದೆ ರೂಢಿಯಲ್ಲಿದ್ದ ನೀರಾವರಿ ಕೆಲಸಗಳ ವೈವಿಧ್ಯವನ್ನು ವಿವರಿಸಿದರು. ಕೆಳಕ್ಕೆ, ಒಳಕ್ಕೆ, ಮರುಳಕ್ಕೆ ಮೊದಲಾದ ನುಡಿಗಟ್ಟು ಗಳಿಂದ ಹೊರಹೊಮ್ಮಿದ ನಾಡವರ ವರ್ತನೆಯನ್ನು ತೋರಿಸಿಕೊಟ್ಟರು. ಪ್ರಾಚೀನ ಕಾವ್ಯಗಳಲ್ಲಿ ಉದ್ಧೃತವಾಗಿರುವ ನಾಣ್ಣುಡಿಗಳಿಂದ ನಮ್ಮ ಸಂಸ್ಕೃತಿಯ ಹಳಮೆ, ಹಿರಿಮೆಗಳು ಎಷ್ಟರಮಟ್ಟಿಗೆ ಅಭಿವ್ಯಕ್ತಗೊಂಡಿವೆ ಎಂಬುದನ್ನು ವಿವರಿಸಿದ್ದಾರೆ.

ಕನ್ನಡ ನಿಘಂಟು ಕ್ಷೇತ್ರಕ್ಕೆ ಭಟ್ಟರ ಕೊಡುಗೆ ಅಪೂರ್ವವಾದುದು. ಅಭಿನವ ಮಂಗರಾಜನ ಅಭಿನವಾಭಿದಾನಂ ಎಂಬ ಪ್ರಾಚೀನ ನಿಘಂಟನ್ನು ಅವರು ಶಾಸ್ತ್ರೀಯವಾಗಿ ಸಂಪಾದಿಸಿದ್ದಾರೆ. ತುಳು–ಇಂಗ್ಲಿಷ್ ನಿಘಂಟು ಹಾಗೂ ಹವ್ಯಕ–ಇಂಗ್ಲಿಷ್ ನಿಘಂಟುಗಳನ್ನು ರಚಿಸಿದ್ದಾರೆ. ಅವರು ಪರಿಷ್ಕರಿಸಿ ವಿಸ್ತೃತಗೊಳಿಸಿ ಪ್ರಕಟಿಸಿರುವ ರೆ.ಎಫ್. ಕಿಟೆಲ್‌ರ ಕನ್ನಡ–ಇಂಗ್ಲಿಷ್ ನಿಘಂಟು ಅವರಿಗೆ ಕೀರ್ತಿಯನ್ನು ತಂದುಕೊಟ್ಟಿದೆ. ಡಾ.ಎ. ಶಂಕರ ಕೆದಿಲಾಯರೊಂದಿಗೆ ಸೇರಿ ತುಳು–ಇಂಗ್ಲಿಷ್ ನಿಘಂಟನ್ನು ಸಂಪಾದಿಸಿ ೧೯೬೭ರಲ್ಲಿ ಪ್ರಕಟಿಸಿದರು. ಇದಕ್ಕೆ ಮೂಲ ಆಕರ ಮ್ಯಾನರ್‌ನ ತುಳು–ಇಂಗ್ಲಿಷ್ ಶಬ್ದಕೋಶವಾದರೂ ಆಡುಮಾತಿನಲ್ಲಿ ಪ್ರಚಲಿತವಾಗಿರುವ ತುಳುಪದಗಳನ್ನು ತಮ್ಮ ನಿಘಂಟಿನಲ್ಲಿ ಸೇರಿಸಿಕೊಂಡಿದ್ದಾರೆ. ಇದರಲ್ಲಿ ೮೪೨೮ ಶಬ್ದಗಳಿವೆ. ಈ ನಿಘಂಟಿನಲ್ಲಿ ನಮೂದಿತವಾದ ತುಳುವಿನ ಪ್ರತಿಯೊಂದು ಮುಖ್ಯ ಉಲ್ಲೇಖವನ್ನು ಕ್ರಮವಾಗಿ ಕನ್ನಡ ಮತ್ತು ಪರಿಷ್ಕೃತ ಅಂತಾರಾಷ್ಟ್ರೀಯ ಧ್ವನಿಲಿಪಿಯಲ್ಲಿ ಕೊಡಲಾಗಿದೆ. ವ್ಯಾಕರಣ ವಿಶೇಷಗಳನ್ನು ಗುರುತಿಸಿ, ಪದದ ಅರ್ಥವನ್ನು ಇಂಗ್ಲಿಷ್‌ನಲ್ಲಿಯೂ ಅಗತ್ಯವಿರುವ ಉತ್ತಮ ಹೇಳಿಕೆಗಳನ್ನು ರೋಮನ್ ಲಿಪಿಯಲ್ಲೂ ಕೊಡಲಾಗಿದೆ. ತುಳು ಭಾಷೆ ಮತ್ತು ಸಾಹಿತ್ಯದ ಬಗ್ಗೆ ಸಂಕ್ಷಿಪ್ತವಾಗಿ ನೀಡಿರುವ ವಿವರ ತುಳು ಸಾಹಿತ್ಯ ಇತಿಹಾಸಗಳ ಬಗೆಗೆ ಉತ್ತಮ ಆಕರವಾಗಿದ್ದು ತುಳುವಿನ ಬಗ್ಗೆ ತಿಳಿದುಕೊಳ್ಳಬೇಕೆನ್ನುವವರಿಗೆ ಉಪಯುಕ್ತ ಮಾಹಿತಿ ದೊರೆಯುತ್ತದೆ.

ಕಿಟ್ಟೆಲ್‌ರ ಕನ್ನಡ–ಇಂಗ್ಲಿಷ್ ನಿಘಂಟು(೧೮೯೪) ಪ್ರಕಟವಾದ ಮೇಲೆ ಕವಿರಾಜಮಾರ್ಗ, ವಡ್ಡಾರಾಧನೆ, ಪಂಪಭಾರತ, ಆದಿಪುರಾಣ, ಬಸವೇಶ್ವರ ಹಾಗೂ

ಚೆನ್ನಬಸವೇಶ್ವರರ ವಚನಗಳು ಮುಂತಾದ ಕೃತಿಗಳು ಲಭ್ಯವಾಗಿ ಪ್ರಕಟವಾದುವು. ಇವುಗಳಲ್ಲಿದ್ದ ಅನೇಕ ಶಬ್ದಗಳನ್ನು ಮರಿಯಪ್ಪ ಭಟ್ಟರು ಹೊಸದಾಗಿ ಸೇರಿಸುವುದರ ಜೊತೆಗೆ ಕೆಲವು ಶಬ್ದಗಳ ಅರ್ಥ ಸ್ಪಷ್ಟವಾಗಿಸುವುದಕ್ಕೆ ಹೊಸ ಪ್ರಯೋಗಗಳನ್ನು ನೀಡಿದರು. ಆ ಮೂಲಕ ನಿಘಂಟನ್ನು ಪರಿಷ್ಕರಿಸಿ, ವಿಸ್ತರಿಸಿ ನಾಲ್ಕು ಸಂಪುಟಗಳಲ್ಲಿ ಸುಮಾರು ೨೦೦೦ ಪುಟಗಳಲ್ಲಿ ಪ್ರಕಟಿಸಿದರು. ಈ ನಿಘಂಟಿನಲ್ಲಿ ಕನ್ನಡ ಪದವನ್ನು ಮೊದಲು ಕೊಟ್ಟು ಅನಂತರ ಅದನ್ನು ರೋಮನ್ ಲಿಪಿಯಲ್ಲಿ ಪದದ ಅರ್ಥವನ್ನು ಇಂಗ್ಲಿಷ್‌ನಲ್ಲಿ ಕೊಟ್ಟು ಕನ್ನಡದಲ್ಲಿ ಬಳಕೆಯಲ್ಲಿರುವ ದೇಶ್ಯ ಪದಗಳನ್ನು ಈ ನಿಘಂಟಿನಲ್ಲಿ ಸೇರಿಸಲಾಗಿದೆ. ಸಂಸ್ಕೃತ ಪದಗಳನ್ನು ಕೈಬಿಟ್ಟು ದೇಸಿ ಮತ್ತು ತದ್ಭವಗಳ ಪಟ್ಟಿಯನ್ನು ನೀಡಿ ಜ್ಞಾತಿ ಶಬ್ದಗಳನ್ನು ಕೈಬಿಡಲಾಗಿದೆ. ಹಿಂದಿನ ಆವೃತ್ತಿಯಲ್ಲಿಯ ತಪ್ಪುಗಳನ್ನು ಸರಿಪಡಿಸಿರುವುದು ಈ ಪರಿಷ್ಕೃತ ಆವೃತ್ತಿಯ ಪ್ರಮುಖ ಅಂಶವಾಗಿದೆ. ಈ ನಿಘಂಟುವಿನ ಮೊದಲ ಸಂಪುಟದ ಮುನ್ನುಡಿಯಲ್ಲಿ ಕನ್ನಡ ನಿಘಂಟುಗಳ ಇತಿಹಾಸವನ್ನು ನಿರೂಪಿಸಿದ್ದಾರೆ. A biographical Note ಎಂಬ ಭಾಗದಲ್ಲಿ ಕಿಟೆಲ್‌ನ ಜೀವನ ಮತ್ತು ಕೃತಿಗಳ ಪರಿಚಯವಿದೆ.

ಮರಿಯಪ್ಪ ಭಟ್ಟರು ರಚಿಸಿದ ಹವ್ಯಕ–ಇಂಗ್ಲಿಷ್ ನಿಘಂಟು ಅವರು ನಿಧನರಾದ ಮೂರು ವರ್ಷಗಳ ಬಳಿಕ ೧೯೮೩ರಲ್ಲಿ ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದವರು ಪ್ರಕಟಿಸಿದರು. ಈ ಶಬ್ದಕೋಶದಲ್ಲಿ ಸುಮಾರು ೪೭೦೦ ಹವ್ಯಕ ಶಬ್ದಗಳಿವೆ. ಈ ಶಬ್ದಗಳನ್ನು ಕನ್ನಡ ಅಕ್ಷರದಲ್ಲಿ ನೀಡಲಾಗಿದೆ.

ತೆಲುಗಿನ ಎನ್. ವೆಂಕಟರಾವ್, ತಮಿಳಿನ ಆರ್.ಪಿ. ಸೇತುಪಿಳ್ಳೈ ಹಾಗೂ ಮಲಯಾಳದ ಎಸ್.ಕೆ. ನಾಯರ್ ಅವರೊಂದಿಗೆ ಸೇರಿ Dravidian Comparative Vocabulary Vol–೧ನ್ನು ರಚಿಸಿದ್ದಾರೆ. ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ಪಂಚದ್ರಾವಿಡ ಭಾಷೆಗಳೆಂದು ಹೆಸರು ಪಡೆದಿರುವ ತಮಿಳು, ಕನ್ನಡ, ತೆಲುಗು, ಮಲಯಾಳಂ ಮತ್ತು ತುಳು ಭಾಷೆಗಳಲ್ಲಿ ಕಂಡುಬರುವ ಜ್ಞಾತಿಶಬ್ದಗಳನ್ನು ಒಂದೆಡೆ ಕೊಟ್ಟು ತೌಲನಿಕ ಅಧ್ಯಯನಕ್ಕೆ ನೆರವು ನೀಡುವುದು ಈ ಕೋಶರಚನೆಯ ಉದ್ದೇಶ. ಈ ಗುಂಪಿಗೆ ಸೇರುವ ಜ್ಞಾತಿಪದಗಳನ್ನು ಒಟ್ಟು ೨೨ ವಿಭಾಗಗಳಲ್ಲಿ ವರ್ಗೀಕರಿಸಿ, ಸುಮಾರು ೭೦೦೦ ಶಬ್ದಗಳನ್ನು ಮುಖ್ಯ ಉಲ್ಲೇಖಗಳಾಗಿ ಮೊದಲು ಇಂಗ್ಲಿಷ್‌ನಲ್ಲಿ ಕೊಡಲಾಗಿದೆ.

ಇವರ 'ಕನ್ನಡ ಸಂಸ್ಕೃತಿ' ಎಂಬ ಕೃತಿಯು ಕನ್ನಡ ಸಂಶೋಧನ ಕ್ಷೇತ್ರದ ಒಂದು ವಿಶಿಷ್ಟ ಕೃತಿಯಾಗಿದೆ. ಸಾಹಿತ್ಯಾಭ್ಯಾಸಿಗಳಿಗೆ ಸಹಾಯಕವಾಗುವಂತೆ ಕವಿ, ಕಾವ್ಯಗಳ ಪರಿಚಯದೊಂದಿಗೆ ಕೃತಿ ಮೌಲ್ಯದ ಮತ್ತು ಭಾಷೆಯ ಬೆಳೆವಣಿಗೆಗಳನ್ನು ಸಂಕ್ಷಿಪ್ತವಾಗಿ ದಾಖಲಿಸಿದ ಇವರ ಸಂಕ್ಷಿಪ್ತ ಕನ್ನಡ ಸಾಹಿತ್ಯಚರಿತ್ರೆ ೧೯೬೩ರಲ್ಲಿ ಪ್ರಕಟವಾಯಿತು. ಹಳೆಗನ್ನಡ, ಗದ್ಯಸಾಹಿತ್ಯ, ಚಂಪೂ ಕಾವ್ಯಗಳು, ಶಾಸನ ಸಾಹಿತ್ಯ, ಶತಕ ಸಾಹಿತ್ಯ, ಲಕ್ಷಣ ಸಾಹಿತ್ಯ, ಶಾಸ್ತ್ರೀಯ ಸಾಹಿತ್ಯ, ನಡುಗನ್ನಡ ಸಾಹಿತ್ಯ, ಜಾನಪದ ವಾಙ್ಮಯ, ಹೊಸಗನ್ನಡ ಸಾಹಿತ್ಯ ಹೀಗೆ ಒಂಬತ್ತು ವಿಭಿನ್ನ ಕ್ರಮಗಳನ್ನು ಅನುಸರಿಸಿ ಈ ಕೃತಿ ರಚನೆಯಾಗಿದೆ. ಈ ವಿಧಾನದಿಂದ ಒಂದೊಂದು ಪ್ರಕಾರದ ಚರಿತ್ರೆ ಒಂದೆಡೆ ನಿಲುಕುವಂತಾಗಿ, ಅವುಗಳ ಸಮಗ್ರ ಚಿತ್ರ ಓದುಗರಿಗೆ ಸುಲಭವಾಗಿ ದಕ್ಕುವಂತಾಗಿದೆ.

ಸಂಪಾದಿತ ಕೃತಿಗಳು: 'ಛಂದಸ್ಸಾರ.(೧೯೪೪), 'ಸಂಗೀತರತ್ನಾಕರ' (೧೯೫೦), 'ಸದ್ಗುರುರಹಸ್ಯ'(೧೯೫೧), 'ಅಭಿನಾವಾ ಭಿದಾನಂ'(೧೯೫೨), 'ವರ್ಧ ಮಾನಪುರಾಣ'(೧೯೫೩), 'ಪಾರ್ಶ್ವನಾಥಪುರಾಣ'(೧೯೫೪), 'ಜಾತಕತಿಲಕಂ' (೧೯೫೫), 'ವ್ಯವಹಾರ ಗಣಿತಂ'(೧೯೫೫), 'ವಿಷ್ಣುಪುರಾಣಂ'(೧೯೫೭), ನಾಲ್ನುಡಿ–ನಾಣ್ನುಡಿ(೧೯೬೨), 'ಹಳಗನ್ನಡ ನಡುಗನ್ನಡ ಕಾವ್ಯ ಸಂಗ್ರಹ. (೧೯೭೭), 'ಹೊಸಗನ್ನಡ ಕಾವ್ಯಶ್ರೀ'(೧೯೫೭).

ಮರಿಯಪ್ಪ ಭಟ್ಟರು ಪುರಾಣಗಳಿಗೆ ಸಂಬಂಧಿಸಿದಂತೆ ಮೂರು ಕೃತಿಗಳನ್ನು ಸಂಪಾದಿಸಿದ್ದಾರೆ. ಅವುಗಳಲ್ಲಿ ಎಂ.ಗೋವಿಂದರಾವ್ ಅವರೊಂದಿಗೆ ಸೇರಿ ಸಂಪಾದಿಸಿದ ಚಿಕುಪಾಧ್ಯಾಯನ ವಿಷ್ಣುಪುರಾಣದಲ್ಲಿ ಕವಿ, ಕಾವ್ಯವನ್ನು ಕುರಿತು ಇಂಗ್ಲಿಷ್‌ನಲ್ಲಿ ಪ್ರಸ್ತಾವನೆ ಇದೆ. ಇದರಲ್ಲಿ ಪುರಾಣ ಲಕ್ಷಣಗಳು, ಕವಿ–ಕಾವ್ಯ ವಿಚಾರ ಕೃತಿಯಲ್ಲಿ ಕಂಡುಬರುವ ಇತರ ಕವಿಗಳ ಪ್ರಭಾವ ಹಾಗೂ ಕೃತಿಯ ವೈಶಿಷ್ಟ್ಯಗಳನ್ನು ಸ್ಥೂಲವಾಗಿ ಹೇಳಲಾಗಿದೆ. ಇವರು ಸಂಪಾದಿಸಿರುವ ಆಚಣ್ಣ ಕವಿಯ ವರ್ಧಮಾನ ಪುರಾಣ ಚಂಪೂ ಕೃತಿಯು ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನ ಪಡೆದಿದೆ. ಇದರಲ್ಲಿ ೨೪ನೇ ತೀರ್ಥಂಕರನಾದ ವರ್ಧಮಾನ ಮಹಾವೀರನ ಚರಿತ್ರೆ ಅಡಕವಾಗಿದೆ. ಪೀಠಿಕೆಯಲ್ಲಿ ಕವಿ–ಕಾವ್ಯ ವಿಚಾರ ಹಾಗೂ ಕಥಾಸಾರವನ್ನು ಕಟ್ಟಿಕೊಟ್ಟಿದ್ದಾರೆ. ವರ್ಧಮಾನ ಮಹಾವೀರನನ್ನು ಕುರಿತ ಮೊದಲ ಕೃತಿ ಇದಾಗಿರುವುದರಿಂದ ಇದಕ್ಕೆ ಹೆಚ್ಚಿನ ಪ್ರಾಶಸ್ತ್ಯವಿದೆ.

'ಅಭಿನವಾಭಿಧಾನ' ಕೃತಿಯ ಆರಂಭದಲ್ಲಿ ಕವಿ ಕುರಿತು ಇಂಗ್ಲಿಷ್‌ನಲ್ಲಿ ಪ್ರಸ್ತಾವನೆ ಹಾಗೂ ಮುನ್ನುಡಿ ಇದೆ. ಇದನ್ನು ಮೂರು ತಾಳಿಯೋಲೆ ಪ್ರತಿಗಳ ಆಧಾರದಿಂದ ಸಂಪಾದಿಸಲಾಗಿದೆ. ಜಾತಕತಿಲಕಂ ಕೃತಿಯಲ್ಲಿ ಭಾರತೀಯ ಖಗೋಳಶಾಸ್ತ್ರದ ಇತಿಹಾಸ, ಗ್ರೀಕ್ ಖಗೋಳಶಾಸ್ತ್ರದ ಪ್ರಭಾವ, ಕನ್ನಡದಲ್ಲಿ ಜ್ಯೋತಿಷ ಕುರಿತು ಬಂದ ಗ್ರಂಥಗಳ ಉಲ್ಲೇಖ ಮುಂತಾದವುಗಳನ್ನು ನೀಡಲಾಗಿದೆ. ಕವಿಯ ಕಾಲ, ದೇಶ, ಮತವನ್ನು ವಿವರಿಸಿ ಜಾತಕತಿಲಕವು ಕನ್ನಡದಲ್ಲಿ ಬಂದ ಮೊತ್ತಮೊದಲ ಜ್ಯೋತಿಷ ಗ್ರಂಥವೆಂದು ಅದನ್ನು ರಚಿಸಿದ ಶ್ರೀಧರಾಚಾರ್ಯನೂ ವರಾಹಮಿಹಿರನ ಬೃಹಜ್ಜಾತಕಕ್ಕೆ ಋಣಿಯಾಗಿರುವನೆಂದು ಆಧಾರ ಸಹಿತವಾಗಿ ಸಂಪಾದಕರು ಸ್ಪಷ್ಟಪಡಿಸಿದ್ದಾರೆ. ಇಲ್ಲಿ ಪ್ರತಿಪಾದಿಸಿದ ವಿಚಾರಗಳನ್ನು ಗ್ರಂಥದ ೨ಳ ಅಧಿಕಾರಗಳಲ್ಲಿ ಗದ್ಯದಲ್ಲಿ ಕೊಡಲಾಗಿದೆ.

'ಸಂಗೀತ ರತ್ನಾಕರ' ಕೃತಿಯನ್ನು ಕಾಗದದ ಹಸ್ತಪ್ರತಿ ಆಧಾರದಿಂದ ಸಂಪಾದಿಸಿದ್ದು ಆರಂಭದಲ್ಲಿ ಕೃತಿಯನ್ನು ಕುರಿತು ಇಂಗ್ಲಿಷ್‌ನಲ್ಲಿ ಪೀಠಿಕೆ ಇದೆ. ಸಂಸ್ಕೃತದಲ್ಲಿ ರಚಿತವಾದ ಸಂಗೀತ ರತ್ನಾಕರ ಇದಕ್ಕೆ ಸ್ಫೂರ್ತಿ ನೀಡಿರಬೇಕೆಂದು ಸಂಗೀತಶಾಸ್ತ್ರದಲ್ಲಿ ಸಂಶೋಧನೆ ನಡೆಸುವವರಿಗೆ ಈ ಗ್ರಂಥವು ಉಪಯುಕ್ತ ವಾಗಬಹುದೆಂದು ಸಂಪಾದಕರು ಅಭಿಪ್ರಾಯಪಟ್ಟಿದ್ದಾರೆ.

ರಾಜಾದಿತ್ಯನ ವ್ಯವಹಾರ ಗಣಿತದ ಆರಂಭದಲ್ಲಿ ಕವಿ ಹಾಗೂ ಕೃತಿಯ ಕುರಿತು ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಮುನ್ನುಡಿ ಇದೆ. ಗಣಿತಶಾಸ್ತ್ರದ ಬಗ್ಗೆ ತೌಲನಿಕ ಅಧ್ಯಯನ ನಡೆಸುವವರಿಗೆ ವ್ಯವಹಾರ ಗಣಿತವು ಒಂದು ಮುಖ್ಯ ಆಕರಗ್ರಂಥವಾಗಿದೆ. ಗುಣಚಂದ್ರನ ಛಂದಸ್ಸಾರದ ಮುನ್ನುಡಿಯಲ್ಲಿ ಕನ್ನಡ ಛಂದೋಗ್ರಂಥಗಳ ಇತಿಹಾಸ, ವಸ್ತು ಸಂಕ್ಷಿಪ್ತ ಪರಿಚಯವನ್ನು ಸಂಪಾದಕರು ನೀಡಿದ್ದಾರೆ. ಗುರುಬಸವನ ಸದ್ಗುರುರಹಸ್ಯ ಕೃತಿಯ ಮುನ್ನುಡಿಯಲ್ಲಿ ಕವಿ, ಕಾಲ, ದೇಶ, ಬಿರುದುಗಳ ವಿಚಾರವನ್ನು ತಿಳಿಸಿರುವುದು ಮಾತ್ರವಲ್ಲದೆ ಕವಿ ಬಳಸಿದ ಭಾಷೆಯ ಶೈಲಿ, ವಿಚಾರವನ್ನು ಉದಾಹರಣೆಯೊಂದಿಗೆ ವಿವರಿಸಿದ್ದಾರೆ.

೧೯೭೦ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಕಟಿಸಿದ ವಚನ ಸಂಗ್ರಹ ಸಂಪಾದಕರಾಗಿ ಸರ್ವಜ್ಞನ ವಚನಗಳಿಗೂ ತಮಿಳಿನ ತಿರುಕ್ಕುರಳ್ ಮಾತುಗಳಿಗೂ ಇರುವ ಹೋಲಿಕೆಗಳನ್ನು ಗುರುತಿಸಿದ್ದಾರೆ. ಮರಿಯಪ್ಪಭಟ್ಟರ ಮತ್ತೊಂದು

ಸಂಪಾದಿತ ಕೃತಿ Selected Kannada Inscriptions. ಈ ಕೃತಿಯಲ್ಲಿ ಹಲ್ಮಿಡಿ ಶಾಸನದಿಂದ ಹಿಡಿದು ೧೦೬೬ರ ಅವಧಿಯ ೩೦ ಶಾಸನಗಳಿವೆ. ಇದರಲ್ಲಿ ಶಾಸನದ ಹೆಸರು, ಕಾಲ, ದೇಶ, ಸ್ಥಳ, ಭಾಷೆ ಹಾಗೂ ರಾಜವಂಶವನ್ನು ಕುರಿತಂತೆ ನಿಖರವಾಗಿ ತಿಳಿಸಿ ಶಾಸನದ ಪೂರ್ಣ ಪಾಠವನ್ನು ನೀಡಲಾಗಿದೆ.

ನಾಲ್ನುಡಿ–ನಾಣ್ನುಡಿ ಎಂಬ ಸಂಪಾದಿತ ಕೃತಿಯಲ್ಲಿ ದಕ್ಷಿಣ ದ್ರಾವಿಡ ಭಾಷೆಗಳ ಸಮಾನ ಗಾದೆಗಳ ಸಂಗ್ರಹವಿದೆ. ಸುಮಾರು ೪೬೭ ಗಾದೆಗಳನ್ನು ಇದರಲ್ಲಿ ಸಂಗ್ರಹಿಸಲಾಗಿದೆ. ಕನ್ನಡ ಗಾದೆಗಳಿಗೆ ಸಮಾನಾರ್ಥವಾದ ಸಮಾನ ಭಾವದ ತಮಿಳು ತೆಲುಗು ಮತ್ತು ಮಲಯಾಳ ಭಾಷೆಗಳಲ್ಲಿಯ ಗಾದೆಗಳನ್ನು ಈ ಕೃತಿಯಲ್ಲಿ ಕೊಟ್ಟಿರುವುದು ಇಲ್ಲಿಯ ವೈಶಿಷ್ಟ್ಯವಾಗಿದೆ. ಹಳಗನ್ನಡ, ನಡುಗನ್ನಡ ಕಾವ್ಯ ಸಂಗ್ರಹದಲ್ಲಿ ಕವಿರಾಜಮಾರ್ಗದಿಂದ ಮುದ್ದಣನ ರಾಮಾಶ್ವಮೇಧದವರೆಗಿನ ಅವಧಿಯಲ್ಲಿ ವಿವಿಧ ಕವಿಗಳು ರಚಿಸಿದ ಕಾವ್ಯಗಳಿಂದ ಆಯ್ದ ಭಾಗಗಳನ್ನು ಭಟ್ಟರು ಸಂಗ್ರಹಿಸಿದ್ದಾರೆ.

ಮರಿಯಪ್ಪಭಟ್ಟರಿಗೆ ಡಾಕ್ಟೊರೇಟ್ ಪದವಿ ಇಲ್ಲದಿದ್ದರೂ ಹಿರಿಯ ವಿದ್ವಾಂಸರು, ಅನುಭವಿ ಪ್ರಾಧ್ಯಾಪಕರೆಂಬ ನೆಲೆಯಲ್ಲಿ ಮದ್ರಾಸ್ ವಿಶ್ವವಿದ್ಯಾಲಯವು ಪಿಎಚ್.ಡಿ. ಮಾಡುವವರಿಗೆ ಮಾರ್ಗದರ್ಶನ ಮಾಡಲು ಅನುಮತಿಯನ್ನಿತ್ತಿದ್ದು ಅವರ ಹಿರಿಮೆಗೆ ಸಾಕ್ಷಿ ಯಾಗಿದೆ.

ಭಟ್ಟರಿಗೆ ಕನ್ನಡ ವಿದ್ವಾಂಸರುಗಳಾದ ತೀ.ನಂ.ಶ್ರೀಕಂಠಯ್ಯ, ಡಿ.ಎಲ್. ನರಸಿಂಹಾಚಾರ್, ರಂ.ಶ್ರೀ.ಮುಗಳಿ, ದ.ರಾ. ಬೇಂದ್ರೆ, ಕೆ.ವಿ. ರಾಘವಾಚಾರ್, ದೇ. ಜವರೇಗೌಡ, ಆರ್.ಸಿ. ಹಿರೇಮಠ, ಶಿವರಾಮ ಕಾರಂತ, ಹಾ.ಮಾ. ನಾಯಕ ಮೊದಲಾದ ವರೊಡನೆ ಇದ್ದ ಸ್ನೇಹ, ಗೆಳೆತನ ವಿಶೇಷವಾದುದು. ತಮಿಳು ವಿದ್ವಾಂಸರಾದ ಟಿ.ಪಿ.ಮೀನಾಕ್ಷಿ ಸುಂದರಂ, ಮು. ವರದರಾಜನ್ ಮೊದಲಾದ ವರೊಂದಿಗೆ ಒಡನಾಟ ಹಾಗೂ ಸ್ನೇಹವಿತ್ತು.

ಭಟ್ಟರು ವಿನಯಸಂಪನ್ನರೂ ಸ್ನೇಹಶೀಲರೂ ಸರಸ ಮಾತುಗಾರರೂ ವಿನೋದ ಪ್ರಿಯರೂ ಆಗಿದ್ದರು. ಮರಿಯಪ್ಪ ಭಟ್ಟರು ೨೧ ಫೆಬ್ರವರಿ ೧೯೮೦ರಲ್ಲಿ ನಿಧನ ರಾದರು.

❐ ❐

ಕೆ. ವೆಂಕಟರಾಮಪ್ಪ

(೧೯೦೬–೧೯೯೧)

ಬಿ. ವೆಂಕಟರಾಮಣ್ಣ

ಇವರು ಕನ್ನಡ, ತೆಲುಗು, ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಒಳ್ಳೆಯ ಪರಿಶ್ರಮವನ್ನು ಹೊಂದಿದ್ದರು. ಇವರ ಸಾಹಿತ್ಯ ಕೃಷಿ ಸಂಶೋಧನೆ, ಸಂಪಾದನೆ, ವಿಮರ್ಶೆ, ಸಾಹಿತ್ಯ ಚರಿತ್ರೆ, ಸಾಹಿತ್ಯ ಅಧ್ಯಯನ ಹೀಗೆ ಹಲವು ಮುಖಗಳಲ್ಲಿ ಹರಡಿದೆ. ಕೆ.ವೆಂಕಟರಾಮಪ್ಪನವರು ಕೋಟಿಬಂಡೆ ಸುಬ್ಬಶಾಸ್ತ್ರಿ ಮತ್ತು ಸಾವಿತ್ರಮ್ಮನವರ ಮಗನಾಗಿ ತುಮಕೂರು ಜಿಲ್ಲೆಯ ಪಾವಗಡದಲ್ಲಿ ೨೮–೦೫–೧೯೦೬ರಂದು ಜನಿಸಿದರು. ಇವರ ಪ್ರಾಥಮಿಕ ಶಿಕ್ಷಣ ಪಾವಗಡ ಮತ್ತು ತುಮಕೂರುಗಳಲ್ಲಿ ನಡೆಯಿತು. ಅನಂತರ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ೧೯೨೭ರಲ್ಲಿ ಕನ್ನಡ ಎಂ.ಎ. ಪದವಿ ಶಿಕ್ಷಣ ಪ್ರಾರಂಭವಾದಾಗ ಕೆಲವು ಗಣ್ಯರು ಅಧ್ಯಾಪಕರಾಗಿದ್ದರು. ಕೆ.ವೆಂಕಟರಾಮಪ್ಪನವರು ಇದೇ ವರ್ಷ ಎಂ.ಎ.ಗೆ ಸೇರಿದಾಗ ಇವರ ಸಹಪಾಠಿಗಳಾಗಿದ್ದವರೆಂದರೆ ಕುವೆಂಪು, ಡಿ.ಎಲ್. ನರಸಿಂಹಾಚಾರ್, ಎನ್. ಅನಂತರಂಗಾಚಾರ್, ಡಿ.ಕೆ. ಭೀಮಸೇನರಾವ್ ಮೊದಲಾದ ಗಣ್ಯರು. ಇವರು ೧೯೨೯ರಲ್ಲಿ ಕನ್ನಡ ಎಂ.ಎ. ಪದವಿಯನ್ನು ಗಳಿಸಿದರು.

ಉಪನ್ಯಾಸಕರಾಗಿ ಹಳೆಯ ಮೈಸೂರು ಪ್ರಾಂತ್ಯದ ಬೇರೆಬೇರೆ ಸರ್ಕಾರಿ ಕಾಲೇಜುಗಳಲ್ಲಿ, ಬೆಂಗಳೂರು ಸೆಂಟ್ರಲ್ ಕಾಲೇಜು ಮತ್ತು ಮೈಸೂರು ಮಹಾರಾಜ ಕಾಲೇಜುಗಳಲ್ಲಿ ಅಧ್ಯಾಪಕರಾಗಿ ಸೇವೆಸಲ್ಲಿಸಿದರು. ಅನಂತರ ಮಾನಸಗಂಗೋತ್ರಿಯ ಕನ್ನಡ ಸ್ನಾತಕೋತ್ತರ ಮತ್ತು ಸಂಶೋಧನಾ ವಿಭಾಗದಲ್ಲಿ ಉಪನ್ಯಾಸಕರಾಗಿ ದುಡಿದು ೧೯೬೧ರಲ್ಲಿ ನಿವೃತ್ತರಾದರು. ನಿವೃತ್ತಿಯ ಅನಂತರವೂ ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗದ ನೆರವಿನಿಂದ ಸಂಶೋಧನೆಯನ್ನು

ಮುಂದುವರಿಸಿ ಪಂಪ ಭಾರತ ಮತ್ತು ನನ್ನಯನ ತೆಲುಗು ಭಾರತವನ್ನು ತೌಲನಿಕವಾಗಿ ಅಧ್ಯಯನ ಮಾಡಿ ವಿಮರ್ಶಾ ಕೃತಿಯನ್ನು ಸಿದ್ಧಪಡಿಸಿದರು. ಇದನ್ನು ೧೯೭೧ರಲ್ಲಿ ಕನ್ನಡ ಅಧ್ಯಯನ ಸಂಸ್ಥೆ ಪ್ರಕಟಿಸಿತು.

ವೆಂಕಟರಾಮಪ್ಪನವರು ವಿಶೇಷವಾಗಿ ಪ್ರಬಂಧಕಾರರಾಗಿ ಪ್ರಸಿದ್ಧರು. ಅವರ ತೆಲುಗು ಭಾಷೆಯ ಪರಿಶ್ರಮ ಪರಿಣತಿಗಳು ಹೊಸ ಕಾಲದ ದಿನಪತ್ರಿಕೆ, ಕಥೆ, ಕಾದಂಬರಿಗಳ ಪರಿಚಯಕ್ಕೆ ಸೀಮಿತವಾಗಿರಲಿಲ್ಲ. ಪ್ರಾಚೀನ ತೆಲುಗು ಸಾಹಿತ್ಯವನ್ನು ಅವರು ವ್ಯವಸ್ಥಿತವಾಗಿ ಅಧ್ಯಯನ ಮಾಡಿದರು. ರಾಳ್ಳಪಲ್ಲಿ ಅನಂತಕೃಷ್ಣಶರ್ಮರ ಅನಂತರದಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಪಕವಾಗಿ ತೆಲುಗು ಸಾಹಿತ್ಯದ ಪ್ರೌಢ ಗ್ರಂಥಗಳನ್ನು ಅಧ್ಯಯನ ಮಾಡಿ ತೌಲನಿಕವಾಗಿಯೂ ಸ್ವತಂತ್ರವಾಗಿಯೂ ಕನ್ನಡದಲ್ಲಿ ಬರೆಯಬಲ್ಲ, ವಿಮರ್ಶಿಸಬಲ್ಲ ಸಾಹಿತಿಗಳಲ್ಲಿ ಇವರು ಅಗ್ರಗಣ್ಯರಾಗಿದ್ದರು. ತೆಲುಗು ಭಾಷೆಯಿಂದ ಕನ್ನಡಕ್ಕೆ ಹಲವು ಗ್ರಂಥಗಳನ್ನು ಸಮರ್ಥವಾಗಿ ಅನುವಾದಿಸಿದ್ದಾರೆ. ಪ್ರಚಾರೋಪನ್ಯಾಸಗಳಲ್ಲಿ ತೆಲುಗು ಕವಿಗಳನ್ನು, ಕಾವ್ಯಗಳನ್ನು ಪರಿಚಯಿಸಿದ್ದಾರೆ.

'ಚಾಟು ಪದ್ಯಗಳು'(೧೯೪೨): ಇದನ್ನು ಐದು ಭಾಗಗಳಲ್ಲಿ ವಿವೇಚಿಸ ಲಾಗಿದೆ. ಪೀಠಿಕೆ, ಕವಿಕಥೆ, ದೇಶವರ್ಣನೆ, ನೀತಿಯ ಪದ್ಯಗಳು ಹಾಗೂ ಸಂಕೀರ್ಣ ಎಂಬುದಾಗಿದೆ. ತೆಲುಗು ಸಾಹಿತ್ಯದ ಸುಂದರವಾದ ಚತುರೋಕ್ತಿಗಳನ್ನು ತಿಕ್ಕನ, ಶ್ರೀನಾಥ, ತೆನಾಲಿ ರಾಮಕೃಷ್ಣ, ವೇಮನ ಮೊದಲಾದವರ ಕೃತಿಗಳಿಂದ ಸಂಗ್ರಹಿಸಿ ಮೂಲ ಮತ್ತು ತಾತ್ಪರ್ಯ ಸಹಿತವಾಗಿ ಅದನ್ನು ಪರಿಚಯಿಸಿದ್ದಾರೆ.

'ವೇಮನ'(೧೯೬೨): ಸುಮಾರು ೧೭ನೆಯ ಶತಮಾನದ ಉತ್ತರಾರ್ಧ ದಲ್ಲಿದ್ದವನೆಂದು ಊಹಿಸಲಾಗಿರುವ ಕವಿ ವೇಮನನ ಸಾಮಾನ್ಯ ವ್ಯಕ್ತಿಪರಿಚಯ ದೊಂದಿಗೆ ಅವನ ಪದ್ಯಗಳ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ಕೃತಿಯಲ್ಲಿ ಪರಿಚಯ, ಶ್ರೀಮಂತಿಕೆ–ಬಡತನ, ಲೋಭ–ತ್ಯಾಗ, ಸಂಸಾರ–ಸ್ತ್ರೀತತ್ವ–ಮತ–ಜಾತಿ, ರಾಜ–ಪ್ರಜೆ, ವಿಧಿವಿಲಾಸ, ನೀತಿ ಎಂಬ ವಿಷಯಗಳ ವಿವರಣೆ ಇದೆ.

'ಶ್ರೀನಾಥ'(೧೯೫೯): ೧೫ನೆಯ ಶತಮಾನದ ಆದಿಭಾಗದಲ್ಲಿದ್ದ ಶ್ರೀನಾಥ ಕವಿಯ ಜೀವನ ಮತ್ತು ಕೃತಿಗಳ ಪರಿಚಯವನ್ನು ಸಂಕ್ಷಿಪ್ತವಾಗಿ ಮಾಡಿಕೊಡಲಾಗಿದೆ. ಇದರಲ್ಲಿ ಪೀಠಿಕೆ, ಜೀವನಕಥೆ, ಶ್ರೀನಾಥನ ಕೃತಿಗಳು,

ಕಾಶೀಖಂಡ, ಶೃಂಗಾರ ನೈಷಧ, ಹರವಿಲಾಸಮು, ಭೀಮಖಂಡಮು, ಉಪಸಂಹಾರ ಎಂಬ ಭಾಗಗಳಿವೆ.

'ಹರವಿಲಾಸ'(೧೯೬೬): ಇದು ಶ್ರೀನಾಥನ ತೆಲುಗು ಮಹಾಕಾವ್ಯ. ಇದರಲ್ಲಿ ಪುರಾಣಮೂಲದ ಕಥಾ ಪ್ರಸಂಗಗಳಿವೆ. ಈ ಕಥೆಗಳೆಲ್ಲ ಶಿವನ ಮಹಿಮೆಯನ್ನು ಹೇಳುತ್ತವೆ.

'ಪಂಪ–ನನ್ನಯ–ಒಂದು ಸಮೀಕ್ಷೆ'(೧೯೭೧): ಕನ್ನಡ–ತೆಲುಗು ಎರಡೂ ಸೋದರ ಭಾಷೆಗಳಾಗಿದ್ದು ಇಬ್ಬರು ಶ್ರೇಷ್ಠ ಕವಿಗಳು ಒಂದೇ ಕಾವ್ಯವಸ್ತುವನ್ನು ಹೇಗೆ ನಿರ್ವಹಿಸಿ ಕೃತಿರಚನೆ ಮಾಡಿದ್ದಾರೆ ಎಂಬುದನ್ನು ಇಲ್ಲಿ ತೌಲನಿಕವಾಗಿ ವಿವರಿಸಲಾಗಿದೆ. ತೌಲನಿಕವಾಗಿ ವಿವೇಚಿಸುವಾಗ ನಡುನಡುವೆ ಮೂಲ ಭಾರತದ ಭಾಗಗಳನ್ನು ಪರಿಶೀಲನೆಗಾಗಿ ಗಮನಿಸಲಾಗಿದೆ. ಪಂಪ ಭಾರತಕ್ಕೆ ಪ್ರಾಶಸ್ತ್ಯ ನೀಡಿ ವಿವೇಚನೆ ಮುಂದುವರಿಸಿದ್ದು ಕಥಾಂಶಗಳ ವ್ಯತ್ಯಾಸಗಳನ್ನು ಅಲ್ಲಲ್ಲಿಯೇ ತೌಲನಿಕವಾಗಿ ಪರಿಶೀಲಿಸ ಲಾಗಿದೆ. ನನ್ನಯ ಪಂಪನ ಕೃತಿಯನ್ನು ಗಮನಿಸಿ ದ್ದಾನೆಂದು ತಿಳಿಯುವುದಕ್ಕೆ ಸ್ಪಾಕ್ಯಗಳನ್ನು ಕೊನೆಯ ಅಧ್ಯಾಯದಲ್ಲಿ ಸಂಕ್ಷಿಪ್ತವಾಗಿ ಸೂಚಿಸಲಾಗಿದೆ.

'ಶ್ರೀಕೃಷ್ಣದೇವರಾಯನ ಕಾಲದ ಕರ್ನಾಟಕಾಂಧ್ರ ಸಾಹಿತ್ಯ ಸಮೀಕ್ಷೆ' (೧೯೭೪): ಕೃಷ್ಣದೇವರಾಯನ ಪೋಷಣೆಯಲ್ಲಿದ್ದ ತೆಲುಗು, ಕನ್ನಡ ಕವಿಗಳ ಜೀವನ ಮತ್ತು ಸಾಹಿತ್ಯ, ಸಾಧನೆ ಕುರಿತ ವಿಮರ್ಶೆಯನ್ನೊಳಗೊಂಡ ಕೃತಿ ಇದು. ತೆಲುಗಿನ ಅಲ್ಲಸಾನಿ ಪೆದ್ದನ, ನಂದಿತಿಮ್ಮನ ಮತ್ತು ಧೂರ್ಜಟಿ ಕವಿಗಳ ಹಾಗೂ ಕನ್ನಡದ ತಿಮ್ಮಣ್ಣ ಕವಿಯ ಸಾಹಿತ್ಯ ಪರಿಚಯವೂ ಇದರಲ್ಲಿದೆ. ಕೃತಿಯ ಮೊದಲ ಭಾಗದಲ್ಲಿ ಕೃಷ್ಣದೇವರಾಯನ ವ್ಯಕ್ತಿತ್ವ, ಸಾಹಿತ್ಯ ಮತ್ತು ಅವನ ಚರಿತ್ರೆಯನ್ನು, ಅಂದಿನ ಸ್ಥಿತಿಗತಿಗಳನ್ನು 'ರಾಯವಾಚಕಮು' ಆಧಾರದಿಂದ ಚಿತ್ರಿಸಲಾಗಿದೆ. ಅವನ 'ಆಮುಕ್ತಮಾಲ್ಯ'ದ ಕೃತಿ ಪರಿಚಯವನ್ನು ಮಾಡಿದ್ದಾರೆ. ಪೆದ್ದನನ 'ಮನುಚರಿತ್ರ', ನಂದಿತಿಮ್ಮನ 'ಪಾರಿಜಾತಾಪಹರಣ', ಧೂರ್ಜಟಿಯ 'ಕಾಳಹಸ್ತಿಮಾಹಾತ್ಮ್ಯ' ಮತ್ತು 'ಕಾಳಹಸ್ತೀಶ್ವರ ಶತಕ'–ಈ ಕೃತಿಗಳನ್ನು, ಕನ್ನಡ ಕವಿ ತಿಮ್ಮಣ್ಣನ 'ಶ್ರೀಕೃಷ್ಣರಾಯ ಭಾರತ ಕಥಾಮಂಜರಿ'ಯನ್ನು ಪರಿಚಯಿಸಲಾಗಿದೆ.

'ರುದ್ರಮದೇವಿ': ಇದು ಐತಿಹಾಸಿಕ ಕಾದಂಬರಿ. ನೋರಿ ನರಸಿಂಹಶಾಸ್ತ್ರಿಗಳ ತೆಲುಗು ಮೂಲದ ಕೃತಿಯನ್ನು ಕೆ. ವೆಂಕಟ ರಾಮಪ್ಪನವರು ಕನ್ನಡಿಸಿದ್ದಾರೆ. ಕಾಕತೀಯ ರಾಜವಂಶದ ಶಕ್ತ ಆಡಳಿತಗಾರ್ತಿ ರುದ್ರಮದೇವಿಯ ಸಾಹಸಕಥನವನ್ನು ವರ್ಣಿಸುವ ಕೃತಿ ಇದು.

'ವೇಮನ'(೧೯೭೨): ತೆಲುಗಿನಲ್ಲಿ ವಿ.ಆರ್. ನಾರ್ಲ ಬರೆದ ವೇಮನನ ಜೀವನ ಚರಿತ್ರೆಯನ್ನು ವೆಂಕಟರಾಮಪ್ಪನವರು ಅತ್ಯಂತ ಸಮರ್ಥವಾಗಿ ಕನ್ನಡಿ ಸಿದ್ದಾರೆ.

'ಕುಮಾರವ್ಯಾಸ ಭಾರತದ ಭಾಷಾಶೈಲಿಗಳ ವಿಶ್ಲೇಷಣೆ' ಅವರ ಸಂಶೋಧ ನಾತ್ಮಕ ಕೃತಿ. ವಿಶ್ವವಿದ್ಯಾಲಯ ಧನಸಹಾಯ ಪಡೆದು ಕುಮಾರವ್ಯಾಸ ಭಾರತದ ವ್ಯಾಕರಣವನ್ನು ಅತ್ಯಂತ ವ್ಯವಸ್ಥಿತವಾಗಿ ರಚಿಸಿಕೊಟ್ಟಿದ್ದಾರೆ. ಕುಮಾರವ್ಯಾಸ ವಿರಚಿತ ದಶಪರ್ವ ಭಾರತದ ಪದಸಂಪತ್ತು, ವಾಕ್ಯವಿನ್ಯಾಸ ಕ್ರಮ, ಪದಪ್ರಯೋಗ ಪದ್ಧತಿ ಮುಂತಾದ ವ್ಯಾಕರಣಾಂಶಗಳ ಅವಲೋ ಕನವೇ ಈ ಅಧ್ಯಯನದ ಗುರಿಯಾಗಿತ್ತು. ಅಕ್ಷರ, ಸಂಧಿ, ನಾಮಪದ, ತದ್ಧಿತ, ಸರ್ವನಾಮ, ತದ್ಭವ, ಸಮಾಸ, ಕ್ರಿಯಾಪದ, ಅವ್ಯಯ–ಹೀಗೆ ಒಂಬತ್ತು ಪ್ರಕರಣಗಳನ್ನಾಗಿ ವಿಂಗಡಿಸಿಕೊಳ್ಳಲಾಗಿದೆ. ವರ್ಣನಾತ್ಮಕ ಭಾಷಾವಿಜ್ಞಾನದ ವಿಧಿಗಳಿಗೆ ತಕ್ಕಂತೆ ಕುಮಾರವ್ಯಾಸ ಭಾರತದ ಪದಭಂಡಾರವನ್ನು ಆಕರಸೂಚಿಸಿ, ಪ್ರಯೋಗ ಉದ್ಧರಿಸಿ ವಿಶ್ಲೇಷಿಸಿದ್ದಾರೆ. ಒಟ್ಟಿನಲ್ಲಿ ಕುಮಾರವ್ಯಾಸ ಶಬ್ದಭಂಡಾರದ ವಿವಿಧ ಮುಖಗಳನ್ನು ಕಿರಿದರೊಳ್ ಹಿರಿದನ್ನು ಕನ್ನಡಿಯಲ್ಲಿ ತೋರಿಸುವಂತೆ ಮಾಡಿರುವುದು ಅವರ ಪಾಂಡಿತ್ಯಕ್ಕೆ ಮೆರಗನ್ನು ತಂದಿದೆ.

ಸಂಪಾದನ ಕ್ಷೇತ್ರದಲ್ಲಿಯೂ ಕೆ.ವಿ. ದುಡಿದಿದ್ದಾರೆ. ಕನ್ನಡ ಭಾಗವತದ ಕೆಲವು ಸ್ಕಂಧಗಳನ್ನು ಸಂಪಾದಿಸಿ ಶಾರದಾ ಮಂದಿರದಿಂದ ಪ್ರಕಟಿಸುವ ಮುನ್ನ ಅದರ ಸಂಗ್ರಹ ರೂಪವಾಗಿ 'ಶ್ರೀಕೃಷ್ಣ ಚರಿತೆ'ಯನ್ನು ಮೈಸೂರು ವಿಶ್ವವಿದ್ಯಾ ನಿಲಯದ ಗ್ರಂಥಮಾಲೆಯಲ್ಲಿ ೧೯೫೫ಕ್ಕಿಂತ ಹಿಂದೆಯೇ ಸಿದ್ಧಪಡಿಸಿ ಪ್ರಕಟಿಸಿದ್ದಾರೆ. ಶಬ್ದಕೋಶದ ಸಿದ್ಧತೆಯಲ್ಲಿಯೂ ಅವರ ಸಂಶೋಧನ ಶಿಸ್ತು ಎದ್ದು ಕಾಣುತ್ತದೆ. ಸಂಸ್ಕೃತ, ಕನ್ನಡ ಭಾಗವತಗಳ ಸಾಮಾನ್ಯ ಪರಿಚಯ, ಗ್ರಂಥಕರ್ತೃ ವಿಚಾರ, ಶ್ರೀಕೃಷ್ಣನ ಕಾಲ ಇತ್ಯಾದಿ ವಿಚಾರಗಳು ಇದರಲ್ಲಿವೆ. ಕುಮಾರವ್ಯಾಸ ಭಾರತದ ಭೀಷ್ಮಪರ್ವವನ್ನು ಶೇಷಗಿರಿರಾವ್ ಅವರೊಂದಿಗೆ ಸಿದ್ಧಪಡಿಸಿ ೧೯೫೬ರಲ್ಲಿ

ಪ್ರಕಟಿಸಿದ್ದಾರೆ. ೧೯೬೦-೬೫ರ ನಡುವೆ ಮೈಸೂರಿನ ಶಾರದಾ ಮಂದಿರ ಪ್ರಕಟನಾಲಯ ಈ ಗ್ರಂಥದ ಐದು ಸ್ಕಂಧಗಳನ್ನು ಪ್ರಕಟಿಸಿದೆ. ಪ್ರತಿ ಸಂಪುಟಕ್ಕೆ ಕವಿ ಪರಿಚಯ, ಕಥಾಸಾರ, ಶಬ್ದಕೋಶ ಮುಂತಾದವನ್ನು ವಿಸ್ತೃತವಾಗಿಯೇ ಒದಗಿಸ ಲಾಗಿದೆ.

'ಲೀಲಾವತಿ ಪ್ರಬಂಧ'(೧೯೬೬)ವನ್ನು ದೇ.ಜವರೇಗೌಡ ಅವರೊಂದಿಗೆ ಸಂಪಾದಿಸಿದ್ದಾರೆ. ಇದನ್ನು ಮೊದಲು ಎಸ್.ಜಿ. ನರಸಿಂಹಾಚಾರ್, ಎಂ.ಎ. ರಾಮಾನುಜಯ್ಯಂಗಾರ್ ಅವರು ಸೇರಿ(೧೮೯೯ರಲ್ಲಿ) ಸಂಪಾದಿಸಿಕೊಟ್ಟಿದ್ದರು. ನೇಮಿಚಂದ್ರನ ಕಾವ್ಯ ಗಳೆರಡೂ ಪ್ರೌಢವಾಗಿರುವುದರಿಂದಲೂ ವಿಪುಲ ಪಾಠ ಭೇದಗಳಿಗೆ ಎಡೆಮಾಡಿರುವುದರಿಂದಲೂ ಶಬ್ದಾರ್ಥಗಳ ಹಾಗೂ ಪಾಠನಿಷ್ಕರ್ಷೆಯ ಸಮಸ್ಯೆಗಳು ಹೆಚ್ಚು ಇದ್ದುದರಿಂದಲೂ ಲೀಲಾವತಿಯ ಸಂಪಾದನೆ ಕಷ್ಟಕರ ವಾದುದ್ದಾಗಿದೆ. ನಯಸೇನನ ಧರ್ಮಾಮೃತದ ವಿಚಾರ ಕುರಿತು ಮೈಸೂರು ಪ್ರಾಚ್ಯ ಕೋಶಾಗಾರದ ಮುದ್ರಿತ ಪಾಠವನ್ನೇ ಮೂಲವಾಗಿ ಇಟ್ಟುಕೊಂಡು ಪರಿಷ್ಕರಿಸ ಲಾಗಿದೆ.

ಕವಿ-ಕಾವ್ಯಗಳಿಗೆ ಸಂಬಂಧಿಸಿದಂತೆಯೂ ವೆಂಕಟರಾಮಪ್ಪನವರು ಪುಸ್ತಕ ಗಳನ್ನು ಪ್ರಕಟಿಸಿದ್ದಾರೆ. 'ಕನ್ನಡ ಸಾಹಿತ್ಯ ಚರಿತ್ರೆ' ಎಂಬ ಸಣ್ಣ ಪುಸ್ತಕವನ್ನು ವೆಂಕಟರಾಮಪ್ಪನವರು ರಚಿಸಿದ್ದಾರೆ. ಇದನ್ನು ೧೯೩೯ರಲ್ಲಿ ಪ್ರಸಾರಾಂಗ ಪ್ರಕಟಿಸಿತು. ಕನ್ನಡ ಸಾಹಿತ್ಯದ ಆರಂಭಕಾಲ, ಪಂಪ ಯುಗ, ಸ್ವತಂತ್ರ ಯುಗ, ಚಿಕ್ಕದೇವರಾಯನ ಕಾಲ, ಸಂಧಿಕಾಲ ಮತ್ತು ಪರಿಸಮಾಪ್ತಿ ಎಂಬ ಆರು ಅಧ್ಯಾಯಗಳಲ್ಲಿ ಇಡೀ ಕನ್ನಡ ಸಾಹಿತ್ಯದ ಬಗ್ಗೆ ತೋರುದೀಪದಂತೆ ಕಂಡರಿಸಿದ್ದಾರೆ. ಇದರ ವಿಸ್ತೃತ ರೂಪವೇ 'ಕನ್ನಡ ಸಾಹಿತ್ಯ ಚರಿತ್ರೆ'ಯಾಗಿ ೧೯೭೪ರಲ್ಲಿ ಪ್ರಕಟವಾಯಿತು. ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ ಪ್ರಕಟಿಸಿದ ಪಂಪನ 'ವಿಕ್ರಮಾರ್ಜುನ ವಿಜಯ'ದ ಮೇಲಣ ಸಂಕಲನ 'ಪಂಪಭಾರತ ದರ್ಶನ'(೧೯೭೦). ಪಂಪ ಕವಿಯ ಭಾರತವನ್ನು ಸುಲಭವಾಗಿ ರಸಭಾವಗಳ ಜೊತೆಗೆ ಪರಿಚಯ ಮಾಡಿಕೊಳ್ಳಬೇಕು ಎನ್ನುವವರಿಗೆ ಇದು ಉತ್ತಮ ಕೃತಿ. ಇಂತಹವೇ 'ಕನಕದಾಸರು'(೧೯೭೧), 'ದುರ್ಗಸಿಂಹ'(೧೯೭೧), 'ಶ್ರೀ ಪುರಂದರ ದಾಸರು', 'ಕವಿ ರಾಘವಾಂಕ'(೧೯೭೫), 'ಕವಿ ನೇಮಿ ಚಂದ್ರ'(೧೯೮೨) ಎಂಬ ಕೃತಿಗಳು. 'ಕವಿ ನೇಮಿಚಂದ್ರ' ನೇಮಿಚಂದ್ರನ ಇತಿವೃತ್ತವನ್ನು ಪರಿಚಯಿಸುತ್ತದೆ. ಅಲ್ಲಲ್ಲಿ ಪದ್ಯಗಳನ್ನು

ಉದ್ಧರಿಸಿ ವಿವೇಚಿಸಲಾಗಿದೆ. 'ಕವಿ ರಾಘವಾಂಕ' ಕೃತಿಯನ್ನು ೧೯೭೫ರಲ್ಲಿ ಡಿವಿಕೆ ಮೂರ್ತಿ ಪ್ರಕಾಶನ ಹೊರತಂದಿದೆ. ಮೊದಲಿಗೆ ಇತಿವೃತ್ತವನ್ನು ಹೇಳಿ ಅನಂತರ ರಾಘವಾಂಕನ ಪ್ರಸಿದ್ಧ ಕಾವ್ಯ 'ಹರಿಶ್ಚಂದ್ರ ಚಾರಿತ್ರ್ಯ'ದ ವಿಚಾರವನ್ನು ತೆಗೆದುಕೊಂಡು ವಸ್ತುವನ್ನು ಪೌರಾಣಿಕ ಮೂಲದೊಂದಿಗೆ ಹೋಲಿಕೆ ಮಾಡಿ ವಸ್ತು ರಚನೆ ಮತ್ತು ಕಾವ್ಯ ವಿಮರ್ಶೆ, ಪಾತ್ರ ರಚನೆ ಮೊದಲಾದವನ್ನು ತರಲಾಗಿದೆ. ಅನಂತರ 'ಸೋಮನಾಥ ಚರಿತ್ರೆ', 'ಸಿದ್ಧರಾಮ ಚರಿತ್ರೆ' ಇವುಗಳ ಕಥಾ ಸಂಗ್ರಹ ಹಾಗೂ ವಸ್ತುವಿಮರ್ಶೆ ಜೊತೆಗೂಡಿಸಿ ರಾಘವಾಂಕನ ಒಟ್ಟು ಕೃತಿಗಳ ಪರಿಚಯಕ್ಕೆ ಪ್ರವೇಶಿಕೆಯನ್ನು ನೀಡಲಾಗಿದೆ.

ಕವಿಚಕ್ರವರ್ತಿ ಜನ್ನನ ಕಾವ್ಯ ಪರಿಚಯ: ಇದರಲ್ಲಿ ಮೊದಲು ಜನ್ನ ಕವಿಯ ವ್ಯಕ್ತಿ ವಿಚಾರವನ್ನು ಪರಿಚಯಿಸಿ ಅನಂತರ ಯಶೋಧರ ಚರಿತ್ರೆಯ ಕಥಾಸಂಗ್ರಹ ಕಾವ್ಯದ ಉದ್ದೇಶ, ವಿಧಿವಿಲಾಸ, ಪಾತ್ರ ವಿಶ್ಲೇಷಣೆ ಮೊದಲಾದವನ್ನು ಸರಳವಾಗಿ ಹೇಳಲಾಗಿದೆ. ಮುಂದೆ 'ಅನಂತನಾಥ ಪುರಾಣ'ದ ವಸ್ತು, ಅಲ್ಲಿಯ ಮುಖ್ಯ ಕಥಾ ಭಾಗವಾದ ಚಂಡಶಾಸನ ವೃತ್ತಾಂತವನ್ನು ವಿವರಿಸಲಾಗಿದೆ. ಜನ್ನನ ಕೃತಿಗಳಿಗೆ ಒಂದು ಕೈಗನ್ನಡಿಯನ್ನು ಲೇಖಕರು ಸಮರ್ಥವಾಗಿ ಇಲ್ಲಿ ಅಣಿಗೊಳಿಸಿದ್ದಾರೆ

'ವಚನ ಭಾಗವತ': ೧೨ ಸ್ಕಂಧ ಸುಮಾರು ೧೨ ಸಾವಿರ ಪದ್ಯಗಳ ವ್ಯಾಪ್ತಿಯಲ್ಲಿ ಗದ್ಯರೂಪದಲ್ಲಿದ್ದು ಇದನ್ನು ಸಂಗ್ರಹಿಸಲಾಗಿದೆ. ಒಂದು ಚಿಕ್ಕ ಕವಿ–ಕಾವ್ಯ ವಿಚಾರದ ಪೀಠಿಕೆಯೊಂದಿಗೆ ಸಂಕ್ಷಿಪ್ತವಾಗಿ ಸರಳ ಗದ್ಯ ಕಥೆಯಾಗಿ ರೂಪುಗೊಂಡಿದೆ. ''ಆದಮಟ್ಟಿಗೆ ಭಾಗವತ ಕಥೆಯ ಪೂರ್ಣ ಚಿತ್ರವನ್ನು ಕೊಡುವ ಈ ಪ್ರಯತ್ನ ವಿಸ್ತಾರವಾದ ಗಗನ ಮಂಡಲವನ್ನು ಒಂದು ಚಿಕ್ಕ ಕನ್ನಡಿಯಲ್ಲಿ ತೋರಿಸುವ ಸಾಹಸದಂತೆ ತೋರಬಹುದು'' ಎಂದಿದ್ದಾರೆ ಲೇಖಕರು.

ಕನ್ನಡ ಮತ್ತು ತೆಲುಗು ಅಭಿಜಾತ ಸಾಹಿತ್ಯವನ್ನು ಕುರಿತಂತೆ ಅನನ್ಯ ಸೇವೆ ಮಾಡಿದ ಕೆ. ವೆಂಕಟರಾಮಪ್ಪನವರು ೦೨.೦೯.೧೯೯೧ರಂದು ನಿಧನರಾದರು.

❐ ❐ ❐

ರಂ.ಶ್ರೀ. ಮುಗಳಿ

(೧೯೦೬–೧೯೯೩)

ಬಿ. ವೆಂಕಟರಾಮಣ್ಣ

ಮುಗಳಿ ಅವರು 'ರಸಿಕರಂಗ' ಕಾವ್ಯನಾಮದಿಂದ ಸಾಹಿತ್ಯಕ್ಷೇತ್ರವನ್ನು ಪ್ರವೇಶಿಸಿದರು. ರಂ.ಶ್ರೀ. ಮುಗಳಿಯವರ ಪೂರ್ಣ ಹೆಸರು ರಂಗನಾಥ ಶ್ರೀನಿವಾಸ ಮುಗಳಿ. ಧಾರವಾಡದಲ್ಲಿ ವರಕವಿ ಬೇಂದ್ರೆಯವರ ಮುಂದಾಳತ್ವದಲ್ಲಿ ಸಾಹಿತ್ಯದೀಪವನ್ನು ಹೊತ್ತಿಸಿ, ಮನೆಮನೆಗೆ ಕನ್ನಡ ಕಾವ್ಯದ ಬೆಳಕನ್ನು ಮುಟ್ಟಿಸಿದ ಗೆಳೆಯರ ಗುಂಪಿನಲ್ಲಿ ಮುಗಳಿ ಅವರು ಪ್ರಮುಖರಾಗಿದ್ದಾರೆ. ಕಾವ್ಯ, ಕಥೆ, ಕಾದಂಬರಿ, ನಾಟಕ, ವಿಮರ್ಶೆ, ಸಾಹಿತ್ಯ ಚರಿತ್ರೆ ಮೊದಲಾದ ಪ್ರಕಾರಗಳಲ್ಲಿ ಕೃಷಿ ಮಾಡಿದ್ದಾರೆ. ಮುಗಳಿ ಅವರು ೧೫ ಜುಲೈ ೧೯೦೬ರಂದು ಗದಗ ಜಿಲ್ಲೆಯ ಆಲೂರಿನಲ್ಲಿ ಜನಿಸಿದರು. ತಂದೆ ಶ್ರೀನಿವಾಸರಾಯರು, ತಾಯಿ ಕಮಲಕ್ಕ. ಕನ್ನಡ ಸಾಹಿತ್ಯ ಚರಿತ್ರೆ ರಚನೆಯ ಮೂಲಕ ಅವರ ಕೀರ್ತಿ ಕನ್ನಡನಾಡಿನಾಚೆಗೂ ಹರಡಿದೆ. ಇವರು ಕರ್ನಾಟಕ–ಮಹಾರಾಷ್ಟ್ರ ಗಡಿಭಾಗದ ಸಾಂಗಲಿಯ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸುವುದರ ಮೂಲಕ ಗಡಿನಾಡಿನ 'ಕನ್ನಡದೀಪ', 'ಕನ್ನಡ ಪಾರಿಜಾತ' ಮುಂತಾದ ಬಿರುದುಗಳನ್ನು ಪಡೆದು ಕನ್ನಡ ಮತ್ತು ಮರಾಠಿ ಭಾಷೆ ಸಾಹಿತ್ಯಗಳ ಸೇತುವೆಯಾಗಿ ಭಾಷಾ ಬಾಂಧವ್ಯವನ್ನು ಬೆಸೆದವರು.

ಮುಗಳಿಯವರು ಬಾಲ್ಯದಿಂದಲೂ ಭಾವಜೀವಿ. ಇವರ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ ಬಾಗಲಕೋಟೆ, ಬಿಜಾಪುರ ಗಳಲ್ಲಿ ನಡೆಯಿತು. ಬಿಜಾಪುರದ ಪ್ರೌಢಶಾಲೆಯಲ್ಲಿ ಕಲಿಯುತ್ತಿದ್ದಾಗ(೧೯೨೦) ಗಾಂಧೀಜಿಯವರ ಅಸಹಕಾರ ಆಂದೋಲನ ದಿಂದ ಪ್ರಭಾವಕ್ಕೊಳಗಾಗಿ ಶಾಲೆಯಿಂದ ವಿಮುಖರಾದರು. ಹಿರಿಯರ ಒತ್ತಾಯದ ಮೇರೆಗೆ ಶಾಲೆಗೆ ಹೋಗದೆ ೧೯೨೪ರಲ್ಲಿ ಮೆಟ್ರಿಕ್ ಪರೀಕ್ಷೆ ಕಟ್ಟಿ ಉತ್ತೀರ್ಣರಾದ ಮೇಲೆ ಧಾರವಾಡದ ಕರ್ನಾಟಕ ಕಾಲೇಜಿಗೆ ಸೇರಿದರು.

ಧಾರವಾಡದ ವಿಕ್ಟೋರಿಯಾ ಹೈಸ್ಕೂಲಿನಲ್ಲಿ(೧೯೨೪) ಬೇಂದ್ರೆಯವರು ಮಾಡಿದ ಭಾಷಣದ ಮಾತಿನ ಮೋಡಿ ರಂ.ಶ್ರೀ.ಮುಗಳಿ ಅವರನ್ನು ಮಂತ್ರ ಮುಗ್ಧರನ್ನಾಗಿಸಿ ಅಂದಿನಿಂದಲೇ ಅವರನ್ನು ತಮ್ಮ 'ಕಾವ್ಯದ ಗುರು'ವನ್ನಾಗಿ ಸ್ವೀಕರಿಸಿಬಿಟ್ಟರು. ಅಲ್ಲಿ ಅವರಲ್ಲಿದ್ದ ಕನ್ನಡದ ಪ್ರೇಮ ಕಾಲೇಜಿನ ಕನ್ನಡ ಚಟುವಟಿಕೆಗಳಲ್ಲಿ ಪರಿಮಳ ಸೂಸಿತು. ತಮ್ಮ ವಾಕ್ಚಟುತ್ವದಿಂದ ಮಧುರಕಂಠದ ಭಾವಗೀತೆಗಳ ಗಾಯನದಿಂದ ಎಲ್ಲರ ಗಮನವನ್ನು ಸೆಳೆದಿದ್ದರು. ಈ ಎಲ್ಲಾ ಸಾಂಸ್ಕೃತಿಕ ಚಟುವಟಿಕೆಗಳ ಮಧ್ಯೆ ವ್ಯಾಸಂಗದಲ್ಲಿ ಮುಂದಿದ್ದರು. ೧೯೨೮ರಲ್ಲಿ ಸಂಸ್ಕೃತ, ಕನ್ನಡ, ಇಂಗ್ಲಿಷ್‌ಗಳಲ್ಲಿ ಉತ್ತಮ ಶ್ರೇಣಿಯಲ್ಲಿ ಬಿ.ಎ. ಪದವಿ ಗಳಿಸಿದರು. ಇವರ ಪ್ರತಿಭೆಯನ್ನು ಗುರುತಿಸಿ 'ದೀಪದ ಮೆಡಲ್' ಮತ್ತು 'ದಕ್ಷಿಣ ಫೆಲೋ' ವೇತನವನ್ನು ಕಾಲೇಜು ವತಿಯಿಂದ ನೀಡಲಾಯಿತು.

ಕರ್ನಾಟಕ ಕಾಲೇಜಿನಲ್ಲಿ ಸ್ನಾತಕೋತ್ತರ ಕನ್ನಡ ಪದವಿಗೆ ಸೇರಿ ಉತ್ತಮ ವಿದ್ಯಾರ್ಥಿಯಾಗಿ ೧೯೩೦ರಲ್ಲಿ ಕನ್ನಡ ವಿಷಯದಲ್ಲಿ ಎಂ.ಎ. ಪದವಿಯನ್ನು ವಿದ್ಯಾರಣ್ಯ ಪಾರಿತೋಷಿಕದೊಂದಿಗೆ ದಕ್ಕಿಸಿಕೊಂಡರು. ಶಿಕ್ಷಣ ಕ್ಷೇತ್ರದಲ್ಲಿ ತಿಲಕ, ಗೋಖಲೆ ಯವರಂತೆ ಸೇವೆಸಲ್ಲಿಸಬೇಕೆಂಬ ಬಯಕೆ ಹುಟ್ಟಿತು. ಶಿಕ್ಷಕರಾಗಲು ಬಿ.ಟಿ. ಪರೀಕ್ಷೆಯನ್ನು ಮುಗಿಸಿದರು. ಅನಂತರ ಹುಬ್ಬಳ್ಳಿಯ ನ್ಯೂ ಸ್ಕೂಲ್ ಶಾಲೆಯಲ್ಲಿ ಸ್ವಲ್ಪಕಾಲ ಶಿಕ್ಷಕರಾಗಿ ದುಡಿದರು. ಮುಂದೆ ೧೯೩೩ರಲ್ಲಿ ಮಹಾರಾಷ್ಟ್ರದ ಸಾಂಗಲಿಯ ವಿಲ್ಲಿಂಗ್ಟನ್ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಆಯ್ಕೆಯಾದರು. ಇದೇ ಕಾಲೇಜಿನಲ್ಲಿ ಪ್ರಾಧ್ಯಾಪಕ, ಉಪಪ್ರಾಚಾರ್ಯ ಮತ್ತು ಪ್ರಾಚಾರ್ಯರಾಗಿ ಸೇವೆಸಲ್ಲಿಸುವ ಮೂಲಕ ತಮ್ಮ ಸಾಹಿತ್ಯ ಅನುಭವವನ್ನು ವಿಸ್ತರಿಸಿಕೊಂಡರು. ೧೯೬೬ರಲ್ಲಿ ತಾವು ನಿವೃತ್ತ ರಾಗುವ ತನಕ ಅಲ್ಲೇ ಇದ್ದು ನಿರಂತರವಾಗಿ ಸಾಹಿತ್ಯಸೇವೆಯನ್ನು ಕೈಗೊಂಡರು. ಅಲ್ಲಿಯೇ ಅವರ ಅತ್ಯಂತ ಜನಪ್ರಿಯ ಆಚಾರ್ಯ ಕೃತಿ, ಕನ್ನಡ ಸಾಹಿತ್ಯ ಚರಿತ್ರೆ ಸಿದ್ಧವಾಯಿತು. ಇದರ ಮೌಲ್ಯವನ್ನರಿತ ಪುಣೆ ವಿಶ್ವವಿದ್ಯಾಲಯ ಇವರಿಗೆ ಡಿ.ಲಿಟ್. ಪದವಿಯನ್ನು ನೀಡಿತು. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಕೂಡ ಲಭಿಸಿತು. ಇದರಿಂದ ಇವರ ಕೀರ್ತಿ ಭಾರತಾದ್ಯಂತ ಹಬ್ಬುವಂತೆ ಮಾಡಿತು. ಕನ್ನಡ ಲೇಖಕರೊಬ್ಬರಿಗೆ ಪುಣೆ ವಿಶ್ವವಿದ್ಯಾಲಯದಿಂದ ಡಿ.ಲಿಟ್. ಪದವಿ ಸಿಕ್ಕಿದ್ದು ಕನ್ನಡಿಗರಿಗೂ ಹೆಮ್ಮೆ ಎನಿಸಿತು.

ವಿಲ್ಲಿಂಗ್ಟನ್ ಕಾಲೇಜಿನಲ್ಲಿದ್ದಾಗಲೇ ಅವರ ಸಾಹಿತ್ಯಕೃಷಿ ಅವ್ಯಾಹತವಾಗಿ ಮುಂದುವರಿಯಿತು. 'ಬಾಳುರಿ', 'ಅನ್ನ', 'ಕಾರಣಪುರುಷ' ಕಾದಂಬರಿಗಳು, 'ಬಾಸಿಗ', 'ಅಪಾರ ಕರುಣೆ', 'ಓಂ ಅಶಾಂತಿಃ' ಕವನ ಸಂಕಲನಗಳು, ಅಕ್ಕಮಹಾದೇವಿ, ಪಾವನ ಪಾವಕ, ನಾಮಧಾರಿ ಮೊದಲಾದ ನಾಟಕಗಳು, ರನ್ನನ ಕೃತಿರತ್ನ, ಸಾಹಿತ್ಯೋಪಾಸನೆ, ತವನಿಧಿ, ಕನ್ನಡ ಸಾಹಿತ್ಯದಲ್ಲಿ ಸರಸ್ವತಿಯ ದರ್ಶನ ಮೊದಲಾದ ಕೃತಿಗಳು ರೂಪತಳೆದುವು.

ಈ ಅವಧಿಯಲ್ಲಿಯೇ ಡಾ.ವಿನಾಯಕ ಕೃಷ್ಣ ಗೋಕಾಕರು ಆಂಗ್ಲಭಾಷಾ ಪ್ರಾಧ್ಯಾಪಕರಾಗಿ ಬಂದರು. ಮುಗಳಿ ಅವರ ಪರಿಚಯವಾಯಿತು. ಇವರಿಬ್ಬರ ಸ್ನೇಹದ ಫಲವಾಗಿ ಕಾಲೇಜಿನ ವರುಣಕುಂಜ ಹುಟ್ಟಿಕೊಂಡಿತು. ಇದೊಂದು ಸಾಹಿತ್ಯ ಕೂಟ. ಇದರಲ್ಲಿ ಅಂದಿನ ಯುವ ಪೀಳಿಗೆಯ ಲೇಖಕರೊಂದಿಗೆ ವಿನೋದಮಯ ಮುಕ್ತ ವಾತಾವರಣದಲ್ಲಿ ಸಾಹಿತ್ಯ, ಕಾವ್ಯಶಾಸ್ತ್ರಗಳನ್ನು ಕುರಿತು ಪ್ರಬಂಧಗಳನ್ನು ಮಂಡಿಸುವುದು, ಚರ್ಚಿಸುವುದು ಮುಂತಾದ ಕಾರ್ಯಕ್ರಮಗಳನ್ನು ರೂಪಿಸಿ ಯುವಕರಲ್ಲಿ ಕನ್ನಡದ ಬಗ್ಗೆ ಅಭಿರುಚಿ ಬೆಳೆಸಿ ಮಾರ್ಗದರ್ಶನ ಮಾಡುತ್ತಿದ್ದರು.

ಧಾರವಾಡದ ಗೆಳೆಯರ ಗುಂಪು ಮುಗಳಿ ಅವರ ವ್ಯಕ್ತಿತ್ವವನ್ನು ರೂಪಿಸುವುದರಲ್ಲಿ ಮಹತ್ತರವಾದ ಪಾತ್ರವನ್ನು ವಹಿಸಿದೆ. ವರಕವಿ ಬೇಂದ್ರೆ ಅವರ ಸುತ್ತ ಬೆಳೆದ ಈ ಗುಂಪಿನಲ್ಲಿ ಆಲೂರು ವೆಂಕಟರಾಯರು, ಗೋಕಾಕ್, ಮಧುರಚೆನ್ನ(ಹಲಸಂಗಿ ಚನ್ನಪ್ಪ), ಆನಂದ ಕಂದ(ಬೆಟಗೇರಿ ಕೃಷ್ಣಶರ್ಮ), ಪ್ರಹ್ಲಾದ ನರೇಗಲ್ಲ, ಶಂಬಾ ಜೋಶಿ ಮೊದಲಾದ ಅತಿರಥ-ಮಹಾರಥರಿದ್ದ ರಥದ ಸಾರಥ್ಯವನ್ನು ವಹಿಸಿ ನಡೆಸಿದವರು ಮುಗಳಿಯವರು. ಅಂದು ಗೆಳೆಯರ ಗುಂಪಿನ ಮುಖಪತ್ರವೆನಿಸಿಕೊಂಡು ಪ್ರಸಿದ್ಧವಾಗಿದ್ದ 'ಜಯ ಕರ್ನಾಟಕ', 'ಜೀವನ' ನಿಯತಕಾಲಿಕಗಳ ನಿರ್ವಹಣೆಯಲ್ಲಿ ಮುಗಳಿ ಅವರ ಪ್ರಮುಖ ಪಾತ್ರವಿತ್ತು.

೧೯೪೦-೪೩ರ ತನಕ 'ಜೀವನ' ಸಂಪಾದಕರಾಗಿಯೂ ಕೆಲಸ ಮಾಡಿದರು. ಅಥಣಿಯ ಗ್ರಂಥಮಾಲೆ, ಸೇಡಬಾಳದ ಮಿರ್ಜಿ ಅಣ್ಣಾರಾಯರ ಶಾಂತಿ ಸೇವಾಸದನ, ಸ್ನೇಹ ಪ್ರಕಾಶನ, ಸಾಂಗಲಿಯ ಕಾವ್ಯ ಪ್ರಕಾಶನ ಸಮಿತಿ ಇವೆಲ್ಲವನ್ನು ಮುಗಳಿ ಅವರು ಬೆಳಗಿದರು.

ನಿವೃತ್ತಿಯ ಅನಂತರ ಅವರು ಬೆಂಗಳೂರಿಗೆ ಬಂದು ನೆಲಸಿದರು. ೧೯೬೦-೬೭ರಲ್ಲಿ ಅಂದಿನ ವಿಶಾಲ ಮೈಸೂರು ಸರ್ಕಾರ ಇವರನ್ನು ಅಲ್ಪಾವಧಿಗೆ ಕನ್ನಡ ಸಂಸ್ಕೃತಿ ಇಲಾಖೆಯ ಪ್ರಧಾನ ಅಧಿಕಾರಿಯಾಗಿ ನೇಮಿಸಿತು. ೧೯೬೭ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಪ್ರಾಧ್ಯಾಪಕರಾಗಲು ಹಾಗೂ ಮುಖ್ಯಸ್ಥರಾಗಲು ಆಹ್ವಾನಿಸಲಾಯಿತು. ಇಲ್ಲಿ ಮೂರು ವರ್ಷ ಕೆಲಸ ಮಾಡಿದರು. ಮುಂದೆ ವಿಕಸನಗೊಂಡ ಕನ್ನಡ ಅಧ್ಯಯನ ಕೇಂದ್ರಕ್ಕೆ ಅಡಿಪಾಯ ಹಾಕಿದರು. ೧೯೭೦ರಿಂದ ೭೩ರ ತನಕ ಯುಜಿಸಿ ಪ್ರಾಧ್ಯಾಪಕರಾಗಿರುವಾಗ ಸಂಶೋಧನೆ ನಡೆಸಿ 'ಪ್ರಾಚೀನ ಕನ್ನಡ ಸಾಹಿತ್ಯ ರೂಪಗಳು' ಎಂಬ ಶ್ರೇಷ್ಠ ಸಂಶೋಧನ ಗ್ರಂಥವನ್ನು ರಚಿಸಿ ಪ್ರಕಟಿಸಿದರು. ಬಳಿಕ ಬೆಂಗಳೂರು ವಿಶ್ವವಿದ್ಯಾಲಯ ಇವರ ಸೇವೆಯನ್ನು ಬಿಟ್ಟುಕೊಡದೆ, ಕನ್ನಡ ಅಧ್ಯಯನ ಕೇಂದ್ರ ಯೋಜಿಸಿದ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆಯ ಸಂಪುಟಗಳಿಗೆ ಕಾರ್ಯನಿರ್ವಾಹಕ ಸಂಪಾದಕರಾಗಿ ನೇಮಿಸಿತು. ಹೀಗೆ ಅವರ ನಿವೃತ್ತಿಯ ಬಳಿಕವೂ ಸತತವಾಗಿ ಕನ್ನಡ ತಾಯಿಯ ಸೇವೆಗೈದಿದ್ದಾರೆ.

ಕನ್ನಡ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕಥೆ, ಕಾದಂಬರಿ, ನಾಟಕ, ಕಾವ್ಯ, ಪ್ರಬಂಧ, ಜೀವನ ಚರಿತ್ರೆ, ಸಾಹಿತ್ಯ ಚರಿತ್ರೆ, ವಿಮರ್ಶೆ-ಹೀಗೆ ಅವರ ಕಾರ್ಯವ್ಯಾಪ್ತಿ ಸಾಗಿದೆ. ಸುಮಾರು ೩೭ ಕೃತಿಗಳನ್ನು ಅವರು ಪ್ರಕಟಿಸಿದ್ದಾರೆ. ಸಂವೇದನೆ, ಅನುಭವ, ಪಾಂಡಿತ್ಯ, ವಿವೇಚನೆಗಳಿಂದ ಅವರ ಕೃತಿಗಳು ಗಮನಿಸತಕ್ಕ ವೆನಿಸಿಕೊಂಡಿವೆ. ಅವರ ಸೃಜನಶೀಲ ಬರಹಗಳಲ್ಲಿ ನವೋದಯ ಕಾಲದ ಭಾವುಕ, ಚಿಂತನಶೀಲ ಆದರ್ಶ, ಕನಸುಗಾರನ ದರ್ಶನವಾದರೆ, ಸೃಜನೇತರ ಬರಹಗಳಲ್ಲಿ ವಿಮರ್ಶೆ, ಪರಂಪರೆ ಯಲ್ಲಿಯ ಪರಿಶ್ರಮ, ವಿವೇಚನೆ ಕಂಡುಬರುತ್ತದೆ.

ಹಳೆಯ ಪೀಳಿಗೆಯ ವಿದ್ವಾಂಸರಾದ ಗೋವಿಂದ ಪೈ, ಮುಳಿಯ ತಿಮ್ಮಪ್ಪಯ್ಯ, ಡಿ.ಎಲ್. ನರಸಿಂಹಚಾರ್, ತೀ.ನಂ. ಶ್ರೀಕಂಠಯ್ಯ ಮೊದಲಾದ ವಿದ್ವಾಂಸರಂತೆ ಹಳಗನ್ನಡ ಕಾವ್ಯಲೋಕದ ಕಾಯಕದಲ್ಲಿ ಮುಗಳಿ ಅವರು ಪರಿಣತರು. ಇವರು ಕನ್ನಡಸಾಹಿತ್ಯದಲ್ಲಿ ಬೀರಿದ ಪ್ರಭಾವಕ್ಕಿಂತ ವಿಮರ್ಶೆ, ಸಾಹಿತ್ಯ ಚರಿತ್ರೆಕಾರರೆಂದೇ ಸಾಹಿತ್ಯವಲಯ ಗುರುತಿಸಿದೆ. ಇವರ ವಿಮರ್ಶೆಯ ಲೇಖನಗಳಲ್ಲಿ ಮುಖ್ಯವಾದವು ಪಂಪನ ದೇಶೀಯ ಸೊಬಗು, ರನ್ನನ ನಾಟ್ಯಮಯ ಶೈಲಿ, ಆಂಡಯ್ಯನ ಅಚ್ಚಗನ್ನಡದೊಲವು, ಕನ್ನಡ ಸಾಹಿತ್ಯ ಸರಸ್ವತಿಯ ವಿಶ್ವರೂಪದ

ಹರವು, ಚಂಪೂ ಮೂಲದ ಶೋಧನೆ, ದೇಶೀ ಮತ್ತು ಮಾರ್ಗ ಛಂದೋಬಂಧಗಳ ಐತಿಹಾಸಿಕ ಬೆಳೆವಣಿಗೆ ಮುಂತಾದವನ್ನು ಹೆಸರಿಸಬಹುದು.

ತವನಿಧಿಯಲ್ಲಿ ಹಳಗನ್ನಡ ಸಾಹಿತ್ಯದ ಅವಲೋಕನ ಕ್ರಮವನ್ನು ಅನುಸರಿಸಿ ಪಂಪ, ರಾಘವಾಂಕ, ನಯಸೇನ, ಆಂಡಯ್ಯ, ಮುದ್ದಣ, ತಿರುಮಲಾರ್ಯ ಇಂತಹ ಪ್ರಮುಖ ಕವಿಗಳ ವಿಲಕ್ಷಣ ಗುಣಗಳನ್ನು ಗುರುತಿಸಿ ವಿಮರ್ಶೆ ಮಾಡಿದ್ದಾರೆ. ಸಾಹಿತ್ಯೋಪಾಸನೆಯಲ್ಲಿ ಹೊಸಗನ್ನಡ ಸಾಹಿತ್ಯದ ಬೆಳೆವಣಿಗೆಯಲ್ಲಿ ಕಾದಂಬರಿ, ಕಾವ್ಯ, ನಾಟಕ, ಸಣ್ಣಕಥೆ, ಏಕಾಂಕ ನಾಟಕ ಮುಂತಾದ ಪ್ರಕಾರಗಳು ಸಾಧಿಸಿರುವ ಗಟ್ಟಿತನವನ್ನು ರೂಪಲಕ್ಷಣ ವಿವೇಚನೆಯನ್ನು ಕುರಿತು ಚಿತ್ರಿಸಿದ್ದಾರೆ.

ಮುಗಳಿಯವರ 'Heritage of Karnataka' ಕರ್ನಾಟಕದ ಸಾಂಸ್ಕೃತಿಕ ಪರಂಪರೆಯನ್ನು ಪರಿಚಯಿಸುವ ಅಪೂರ್ವ ಕೃತಿ. ಇದರಲ್ಲಿ ಕರ್ನಾಟಕದ ಇತಿಹಾಸ, ಸೈನಿಕ ಜೀವನ, ಧಾರ್ಮಿಕ ಇತಿಹಾಸ, ಕಲೆ, ಸಾಹಿತ್ಯ ಮೊದಲಾದವುಗಳನ್ನು ಕುರಿತು ಪರಿಚಯವಿದೆ. ೧೯೭೬ರಲ್ಲಿ ಇದನ್ನು ಕೆ.ಜಿ.ಶಾಸ್ತ್ರಿ ಮತ್ತು ಎಸ್.ಪಾಟೀಲ್ ಅವರು 'ಕರ್ನಾಟಕ ಸಾಂಸ್ಕೃತಿಕ ಪರಂಪರೆ' ಎಂಬ ಹೆಸರಿನಲ್ಲಿ ಕನ್ನಡೀಕರಿಸಿದ್ದಾರೆ.

'ಕನ್ನಡ ಸಾಹಿತ್ಯ ಚರಿತ್ರೆ': ಇದು ಮುಗಳಿ ಅವರ ಹಲವು ವರ್ಷಗಳ ಬೋಧನಾನುಭವ ಮತ್ತು ಸಂಶೋಧನೆಯ ಫಲವಾಗಿ ಮೂಡಿಬಂದ ಕೃತಿ. ಕನ್ನಡ ಸಾಹಿತ್ಯಾಭ್ಯಾಸಿಗಳಿಗೆ ಒಂದು ಉತ್ತಮ ಆಧಾರಗ್ರಂಥವಾಗಿ ಇದು ತನ್ನ ಮೌಲ್ಯವನ್ನು ಇಂದಿಗೂ ಕಾಯ್ದುಕೊಂಡಿದೆ. ಈ ಕೃತಿ ೧೯೫೨ರಲ್ಲಿ ಪ್ರಕಟವಾಗುವ ಮೊದಲು ಕನ್ನಡಸಾಹಿತ್ಯ ಚರಿತ್ರೆಯ ಅಧ್ಯಯನಕ್ಕೆ ಇದ್ದ ಆಕರ ಗ್ರಂಥಗಳೆಂದರೆ ಆರ್. ನರಸಿಂಹಾಚಾರ್ಯರ ಕನ್ನಡ ಕವಿಚರಿತೆಯ ಮೂರು ಸಂಪುಟಗಳು ಹಾಗೂ ಇ.ಪಿ.ರೈಸ್, ಕಿಟ್ಟೆಲ್ ಮೊದಲಾದ ಪಾಶ್ಚಾತ್ಯ ವಿದ್ವಾಂಸರು ಬರೆದ ಸಾಹಿತ್ಯ ಚರಿತ್ರೆಯ ಸ್ಥೂಲ ಬರೆಹಗಳು, ಬಿ.ಎಂ.ಶ್ರೀ ಅವರು ಕನ್ನಡ ಕೈಪಿಡಿಯಲ್ಲಿ ಬರೆದ ಅಪೂರ್ಣ ಭಾಗಗಳು ಮಾತ್ರ. ಈ ಕೊರತೆಯನ್ನು ಮನಗಂಡ ಮುಗಳಿಯವರು ಸಾಹಿತ್ಯ ಚರಿತ್ರೆಯ ಬೋಧನೆಗಾಗಿ ತಾವು ಬರೆದುಕೊಂಡ ಟಿಪ್ಪಣಿಗಳನ್ನೇ ಗ್ರಂಥರೂಪಕ್ಕೆ ಇಳಿಸಿದರು. ಅನೇಕ ಕನ್ನಡ ಸಾಹಿತ್ಯ ಚರಿತ್ರೆಗಳು ಬಂದಿದ್ದರೂ ಈ ಗ್ರಂಥ ಮೊದಲ

ಸ್ಥಾನದಲ್ಲಿಯೇ ಇರುವುದು ಇದರ ಮಹತ್ತ್ವವನ್ನು ತಿಳಿಸುತ್ತದೆ. ಕನ್ನಡ ಸಾಹಿತ್ಯದ ಇತಿಹಾಸ ಎಂಬ ಇನ್ನೊಂದು ಗ್ರಂಥವನ್ನು ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಗಾಗಿ ರಚಿಸಿಕೊಟ್ಟರು. ಕೇಂದ್ರ ಸಾಹಿತ್ಯ ಅಕಾಡೆಮಿಯವರು ಈ ಕೃತಿಯನ್ನು ಭಾರತದ ಬೇರೆ ಬೇರೆ ಭಾಷೆಗಳಿಗೆ ಅನುವಾದ ಮಾಡಿಸಿ ಪ್ರಕಟಿಸಿದ್ದಾರೆ.

'ಪ್ರಾಚೀನ ಕನ್ನಡ ಸಾಹಿತ್ಯ ರೂಪಗಳು' ಎಂಬ ಗ್ರಂಥದಲ್ಲಿ ಮುಗಳಿ ಅವರು ಆರಂಭಕಾಲದಿಂದ ಕನ್ನಡ ಕವಿಗಳಿಂದ ರೂಪಿಸಲ್ಪಟ್ಟ ಛಂದೋರೂಪಗಳನ್ನು, ಅವುಗಳ ಇತಿಹಾಸ, ಲಕ್ಷಣಗಳನ್ನು ಕುರಿತು ಸುದೀರ್ಘವಾಗಿ ಚರ್ಚಿಸಿದ್ದಾರೆ. ಶಾಸನಗಳಲ್ಲಿ ಕವಿರಾಜಮಾರ್ಗದಲ್ಲಿ ಉಲ್ಲೇಖಿಸಿರುವ ಮೊದಲಿನ ಸಾಹಿತ್ಯ ರೂಪಗಳಾದ ಚತ್ತಾಣ, ಬೆದಂಡೆ, ಒನಕೆವಾಡು ಮೊದಲಾದವನ್ನು ಕುರಿತು ವಿಚಾರ-ವಿಮರ್ಶೆ, ಚಂಪೂ ಕಾವ್ಯಗಳ ಬೆಳೆವಣಿಗೆ, ಕಂದ, ವೃತ್ತ, ಅಷ್ಟಕ, ಶತಕ, ವಚನ ಸಾಹಿತ್ಯ, ಇತರ ಗದ್ಯ, ರಗಳೆ, ಷಟ್ಪದಿ, ತ್ರಿಪದಿ, ಸಾಂಗತ್ಯ ಮೊದಲಾದ ದೇಶೀ ಮತ್ತು ಮಾರ್ಗ ಶೈಲಿಯ ಛಂದೋರೂಪಗಳನ್ನು ಕುರಿತಂತೆ ವಿಸ್ತಾರವಾದ ವಿವೇಚನೆಯನ್ನೊಳಗೊಂಡ ಈ ಕೃತಿ ಕನ್ನಡ ವಿದ್ವಾಂಸರು ಹಾಗೂ ವಿದ್ಯಾರ್ಥಿಗಳಿಗೆ ವಿಶೇಷ ಆಧಾರ ಗ್ರಂಥವಾಗಿದೆ.

ಮುಗಳಿ ಅವರು ಸಾಂಗಲಿಯಲ್ಲಿ ಪ್ರಾಧ್ಯಾಪಕರಾಗಿದ್ದಾಗ ೧೯೩೭ರಲ್ಲಿ ಪುಣೆಯ ಡೆಕ್ಕನ್ ಎಜುಕೇಶನ್ ಸೊಸೈಟಿಯ ಆಜೀವ ಸದಸ್ಯತ್ವ ಪಡೆದರು. ಅವರ ಕನ್ನಡ ಸಾಹಿತ್ಯ ಚರಿತ್ರೆಗೆ ೧೯೫೩ರಲ್ಲಿ ಎರಡು ವಿಶಿಷ್ಟ ಪ್ರಶಸ್ತಿಗಳು ದೊರೆತವು. ಮೊದಲನೆಯದು ಪುಣೆ ವಿಶ್ವವಿದ್ಯಾಲಯದ ಡಿ.ಲಿಟ್. ಪದವಿ, ಮತ್ತೊಂದು ಕೇಂದ್ರ ಸಾಹಿತ್ಯ ಅಕಾಡೆಮಿಯ ಪುರಸ್ಕಾರ. ೧೯೬೩ರಲ್ಲಿ ತುಮಕೂರು ಬಳಿಯ ಸಿದ್ಧಗಂಗಾ ಕ್ಷೇತ್ರದಲ್ಲಿ ನಡೆದ ಸಾಹಿತ್ಯ ಸಮ್ಮೇಳನಕ್ಕೆ ಪರಿಷತ್ತು ಅಧ್ಯಕ್ಷರನ್ನಾಗಿ ಆರಿಸಿ ಗೌರವಿಸಿದೆ. ೧೯೬೯ರಲ್ಲಿ ಸ್ವಿಟ್ಜರ್‌ಲ್ಯಾಂಡ್ ದೇಶದ ಇಂಕಾ ಸಂಸ್ಥೆಯ ಪರವಾಗಿ ನಡೆದ ಜಾಗತಿಕ ಸಾಹಿತ್ಯ ಸಮ್ಮೇಳನದಲ್ಲಿ ಅವರು ಕನ್ನಡವನ್ನು ಪ್ರತಿನಿಧಿಸಿ ತಮ್ಮ ಪ್ರಬಂಧವನ್ನು ಮಂಡಿಸಿ ವಿದೇಶದಲ್ಲಿ ಕನ್ನಡದ ಕೀರ್ತಿಯನ್ನು ಬೆಳಗಿದರು. ಸುಮಾರು ೧೦ ವರ್ಷಗಳ ತನಕ ಅವರು ಕೇಂದ್ರ ಸಾಹಿತ್ಯ ಅಕಾಡೆಮಿಯ ಸಾಮಾನ್ಯ ಸಭೆ ಮತ್ತು ಕಾರ್ಯಕಾರಿ ಸಮಿತಿಗಳಲ್ಲಿ ಸದಸ್ಯರಾಗಿದ್ದು ಅಕಾಡೆಮಿಯ ಮನಃಸಾಕ್ಷಿಯ ಸಂರಕ್ಷಕ ಎಂಬ ಪ್ರಶಂಸೆಗೂ ಪಾತ್ರರಾಗಿದ್ದಾರೆ.

ಮುಗಳಿ ಅವರು ಜೀವನದಲ್ಲಿ ರಸಿಕ ದೃಷ್ಟಿ, ವಿಶಾಲ ಹೃದಯ ಸಂಪತ್ತು, ಸ್ನೇಹ ಸೌಜನ್ಯ ತುಂಬಿದ ಗುಣಗಳ ನಡವಳಿಕೆಗಳಿಂದ ಬದುಕಿನಲ್ಲಿ ಉತ್ತಮ ಗುಣಗಳನ್ನು ರೂಢಿಸಿಕೊಂಡು ಬಂದವರು. ಅವರು ೨೦ ಫೆಬ್ರವರಿ ೧೯೩೩ರಂದು ಮರಣ ಹೊಂದಿದರು.

❐ ❐ ❐

ತ.ಸು. ಶಾಮರಾಯ

(೧೯೦೬–೧೯೯೮)

ವೀರಣ್ಣ ಎಂ.ಡಿ.

ಕನ್ನಡ ಸಾಹಿತ್ಯ ಪರಂಪರೆಯ ಪ್ರಮುಖ ಲೇಖಕರೂ ವಿದ್ವಾಂಸರೂ ಆದ ತ.ಸು. ಶಾಮರಾಯರದು ವಿದ್ವತ್ತು, ವಿನಯ, ಮಾನವೀಯತೆಗಳು ಮುಪ್ಪಿರಿಗೊಂಡ ವ್ಯಕ್ತಿತ್ವ. ಅವರು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ತಳುಕು ಗ್ರಾಮದಲ್ಲಿ ೧೨–೦೬–೧೯೦೬ ರಂದು ಜನಿಸಿದರು. ತಂದೆ ಸುಬ್ಬಣ್ಣ ವೃತ್ತಿಯಲ್ಲಿ ಶಾನುಭೋಗರಾಗಿದ್ದು ಛತ್ರದ ಸುಬ್ಬಣ್ಣನವರೆಂದೇ ಪ್ರಸಿದ್ಧರಾಗಿದ್ದರು. ತಾಯಿ ಲಕ್ಷ್ಮೀದೇವಮ್ಮ ಪುರಾಣ, ರಾಮಾಯಣಗಳನ್ನು ಪಾರಾಯಣ ಮಾಡುತ್ತಿದ್ದರು. ಅಣ್ಣನಾದ ಟಿ.ಎಸ್. ವೆಂಕಣ್ಣಯ್ಯನವರು ಕನ್ನಡದ ಪ್ರಥಮ ಪ್ರಾಧ್ಯಾಪಕರಾಗಿದ್ದವರು. ಇಂತಹ ಕೌಟುಂಬಿಕ ಪರಿಸರದಲ್ಲಿ ಬೆಳೆದ ತ.ಸು. ಶಾಮರಾಯರು ತಮ್ಮ ಹನ್ನೆರಡನೇ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡರು. ಇದರಿಂದಾಗಿ ವಿದ್ಯಾಭ್ಯಾಸ ಮುಂದುವರಿಸಲು ಅಣ್ಣ ರಾಮಸ್ವಾಮಿಯವರ ಆಶ್ರಯ ಪಡೆದು ೧೯೧೯ ರಲ್ಲಿ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ತರುವಾಯ ಎರಡು ವರ್ಷಗಳ ಕಾಲ ಪ್ರೈಮರಿ ಶಾಲಾ ಶಿಕ್ಷಕರಾಗಿ ಕಾರ್ಯ ನಿರ್ವಹಿಸಿದರು.

ಮನೆಯಲ್ಲಿದ್ದುಕೊಂಡೇ ಪ್ರೌಢಶಾಲಾ ಶಿಕ್ಷಣವನ್ನು ಮುಂದುವರಿಸಿದ ಶಾಮ ರಾಯರು, ಆ ಮೇಲೆ ಬೆಂಗಳೂರಿನ ನ್ಯಾಷನಲ್ ಸ್ಕೂಲಿನಲ್ಲಿ ದಾಖಲಾತಿ ಹೊಂದಿ ೧೯೨೬ ರಲ್ಲಿ ಮೆಟ್ರಿಕ್ ಪರೀಕ್ಷೆಯಲ್ಲಿ ಪಾಸಾದರು. ಈ ಮಧ್ಯೆ ಕೆಲವು ಕಾಲ ಉಪಾಧ್ಯಾಯರಾಗಿ, ಮುಖ್ಯೋಪಾಧ್ಯಾಯರಾಗಿ ಕರ್ತವ್ಯ ನಿರ್ವಹಿಸಿದ ಶಾಮ ರಾಯರು ಮತ್ತೆ ೧೯೩೦ರಲ್ಲಿ ವಿದ್ಯಾಭ್ಯಾಸ ಮುಂದುವರಿಸಿದರು. ಮೈಸೂರಿನ ಯುವರಾಜ ಕಾಲೇಜಿನಲ್ಲಿ ಇಂಟರ್‌ಮೀಡಿಯಟ್‌ಗೆ ಸೇರಿ ಕನ್ನಡ, ಸಂಸ್ಕೃತ, ತರ್ಕಶಾಸ್ತ್ರಗಳ ಅಧ್ಯಯನ ಕೈಗೊಂಡು ಉತ್ತೀರ್ಣರಾದರು. ೧೯೩೬ರಲ್ಲಿ ಮೈಸೂರು

ಮಹಾರಾಜ ಕಾಲೇಜಿನಲ್ಲಿ ಬಿ.ಎ., ಆನರ್ಸ್ ತರಗತಿಗೆ ಸೇರಿ ೧೯೪೦ ರಲ್ಲಿ ಬಿ.ಎ., ಆನರ್ಸ್ ಪರೀಕ್ಷೆಯಲ್ಲಿ ಅಧಿಕ ಅಂಕಗಳಿಸಿ ಎಚ್.ವಿ. ನಂಜುಂಡಯ್ಯನವರ ಚಿನ್ನದ ಪದಕವನ್ನು ತಮ್ಮದಾಗಿಸಿಕೊಂಡರು. ಶಾಮರಾಯರು ಕುವೆಂಪು ಅವರ ಮಾರ್ಗ ದರ್ಶನದಲ್ಲಿ 'ಕನ್ನಡ ನಾಟಕಗಳು' ಎಂಬ ವಿಷಯವನ್ನು ಆಯ್ದುಕೊಂಡು ಮಹಾಪ್ರಬಂಧ ರಚಿಸಿ ಎಂ.ಎ. ಪದವಿ ಪಡೆದರು.

ಇವರ ವ್ಯಾಸಂಗದ ಅವಧಿಯಲ್ಲಿ ಕನ್ನಡದ ಆಚಾರ್ಯಪುರುಷರೆನಿಸಿ ಕೊಂಡಿದ್ದ ಬಿ.ಎಂ. ಶ್ರೀಕಂಠಯ್ಯ, ಟಿ.ಎಸ್. ವೆಂಕಣ್ಣಯ್ಯ, ಡಿ.ಎಲ್. ನರಸಿಂಹಾ ಚಾರ್, ತೀ.ನಂ. ಶ್ರೀಕಂಠಯ್ಯ ಮೊದಲಾದದ ವಿದ್ವಾಂಸೋತ್ತಮರು, ಕವಿಗಳು ಗುರು ಗಳಾಗಿದ್ದರು.

ಶಾಮರಾಯರ ಮೊದಲ ಅಧ್ಯಾಪಕ ವೃತ್ತಿ ಶಿವಮೊಗ್ಗೆಯ ಸರ್ಕಾರಿ ಕಾಲೇಜಿನಲ್ಲಿ ಆರಂಭವಾಯಿತು. ಕೆಲವು ಕಾಲ ಮಹಾರಾಜ ಹೈಸ್ಕೂಲಿನಲ್ಲಿ, ಅನಂತರ ಯುವರಾಜ ಕಾಲೇಜಿನಲ್ಲಿ ಅಧ್ಯಾಪಕರ ಹುದ್ದೆ ನಿರ್ವಹಿಸಿದರು. ಇಂತಹ ತಮ್ಮ ವೃತ್ತಿ ಬದುಕಿನಲ್ಲಿ ಹಲವಾರು ಶಿಷ್ಯವೃಂದವನ್ನು ಪೋಷಿಸಿದರು. ಅವರಲ್ಲಿ ಪ್ರಮುಖರೆಂದರೆ ಡಾ.ನಾ. ಸುಬ್ರಮಣ್ಯಂ, ಜಿ.ಎಸ್. ಶಿವರುದ್ರಪ್ಪ, ಜಿ. ಬ್ರಹ್ಮಪ್ಪ, ಪ್ರಭುಶಂಕರ, ಲಕ್ಷ್ಮೀನಾರಾಯಣ ಭಟ್ಟ, ಹಾ.ಮಾ. ನಾಯಕ, ಎನ್. ಅಬ್ದುಲ್ ನಜೀರ್ ಸಾಬ್, ಮುಖ್ಯಮಂತ್ರಿಯಾಗಿದ್ದ ಬಂಗಾರಪ್ಪ ಮೊದಲಾದವರು. ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ನಿರ್ದೇಶಕರಾಗಿ ಅವರು ಸಲ್ಲಿಸಿದ ಸೇವೆ ಚಿರಸ್ಮರಣೀಯವಾದುದು.

ಸಾಹಿತ್ಯಚರಿತ್ರೆಕಾರರು, ಪ್ರಾಚೀನ ಕಾವ್ಯ ಹಾಗೂ ಶಾಸ್ತ್ರಗ್ರಂಥಗಳ ಸಂಪಾದಕರು, ಆದರ್ಶ ಶಿಕ್ಷಕರು ಆದ ತ.ಸು. ಶಾಮರಾಯರ ಬರೆವಣಿಗೆಗಳು ಸಹೃದಯರ ಮನ್ನಣೆ ಪಡೆದು ಹೊಸ ಆಯಾಮವನ್ನು ಸೃಷ್ಟಿಸಿವೆ ಎಂಬುದರಲ್ಲಿ ಸಂಶಯವಿಲ್ಲ. ಈ ನಿಟ್ಟಿನಲ್ಲಿ ಶಿವಶರಣರ ವಿಚಾರದಲ್ಲಿ ಹೊಸ ಬೆಳಕನ್ನು ಚೆಲ್ಲುವ 'ಶಿವಶರಣ ಕಥಾ ರತ್ನಕೋಶ' ಸಂಪಾದನೆ ಮತ್ತು ಸಂಶೋಧನೆಯ ಹಿತದೃಷ್ಟಿಯಿಂದ ಅಗ್ರಗಣ್ಯವಾಗಿದೆ. ಈ ಕೃತಿರಚನೆಗೆ ಬಳಸಿಕೊಂಡಿರುವ ಆಕರ ಗ್ರಂಥಗಳ ಪಟ್ಟಿ ೨೫೯.

'ಕನ್ನಡ ಸಾಹಿತ್ಯ ಚರಿತ್ರೆ' ಕೃತಿಯು ಮುಖ್ಯವಾಗಿ ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಪಂಪಪೂರ್ವಯುಗದಿಂದ ಆಧುನಿಕ ಯುಗದ ಪ್ರಾರಂಭದ ವರೆಗಿನ ಬಹುಪಾಲು ಕವಿಗಳ ವಿಚಾರವನ್ನೊಳಗೊಂಡಿದೆ. ಸಾಹಿತ್ಯ ವಿದ್ಯಾರ್ಥಿಗಳ ಹಿತೈಷಿಯಾದ ಶಾಮರಾಯರು ಕೃತಿಯ ಆರಂಭದಲ್ಲಿ ಕನ್ನಡ ಭಾಷೆಯ ಪ್ರಾಚೀನತೆಯ ಅನನ್ಯತೆಯನ್ನು ವಿವೇಚಿಸಿ, ಕನ್ನಡ ಸಾಹಿತ್ಯ ಚರಿತ್ರೆಯ ವಿಭಾಗಕ್ರಮವನ್ನು ನಿರೂಪಿಸಿದರು. ಕನ್ನಡ ಭಾಷೆಯ ಪ್ರಾಚೀನ ಅಕ್ಷರ ಮುದ್ರೆಯನ್ನೊತ್ತಿದ ಆದಿಕಾಲ ಎಂದು ಪರಿಗಣಿಸ ಬಹುದಾದ ೫ನೇ ಶತಮಾನದ ಹಲ್ಮಿಡಿ ಶಾಸನದಿಂದ ಹಿಡಿದು ನವ್ಯಕಾವ್ಯದ ರಚನೆಗಳನ್ನೊಳಗೊಂಡಂತೆ ಆಧುನಿಕ ಕಾಲದವರೆಗಿನ ಸಾಹಿತ್ಯ ಸಂಗತಿಯನ್ನು ಉದ್ಧರಣೆಗಳೊಡನೆ ವಸ್ತುನಿಷ್ಠವಾಗಿ, ತರ್ಕಬದ್ಧವಾಗಿ ವಿಮರ್ಶಿಸಿದ್ದಾರೆ.

'ವಚನ ಭಾಗವತ' ಶಾಮರಾಯರ ಜನಪ್ರಿಯ ಕೃತಿಗಳಲ್ಲೊಂದು. ಭಾಗವತದ ಕಥೆಯನ್ನು ಅತ್ಯಂತ ಸರಳವೂ ಸ್ವಾರಸ್ಯಪೂರ್ಣವೂ ಆದ ರೀತಿಯಲ್ಲಿ ನಿರೂಪಿಸಿದ್ದಾರೆ. 'ಕೇಶಿರಾಜ ವಿರಚಿತ ಶಬ್ದಮಣಿದರ್ಪಣಂ' ಎಂಬ ಸಂಪಾದಿತ ಗ್ರಂಥದಲ್ಲಿ ಶಾಮರಾಯರು, ನಿಟ್ಟೂರು ನಂಜಯ್ಯನವರ ಟೀಕೆಯನ್ನು ಗಣನೆಗೆ ತೆಗೆದುಕೊಳ್ಳದೆ ಹೊಸಗನ್ನಡದಲ್ಲಿ ತಮ್ಮದೇ ಆದ ತಾತ್ಪರ್ಯವನ್ನು, ವಿಷಯ ವಿವರಣೆಯನ್ನು ರಚಿಸಿರುವುದು ವಿಶೇಷ. ಇದರಲ್ಲಿ ವೃತ್ತಿಯ ಬಳಿಕ ತಾತ್ಪರ್ಯವನ್ನು, ಪ್ರಯೋಗ ಭಾಗದ ಬಳಿಕ ವಿಶೇಷಾಂಶಗಳನ್ನು ವಿಚಾರವೆಂಬ ಹೆಸರಿನಲ್ಲಿ ಅಳವಡಿಸಲಾಗಿದೆ. ಈ ಕೃತಿಯಲ್ಲಿ ಮೊದಲಿಗೆ ಭಾರತೀಯ ವ್ಯಾಕರಣಶಾಸ್ತ್ರ, ದ್ರಾವಿಡ ಭಾಷಾ ವ್ಯಾಕರಣಗಳ ಕಿರು ಪರಿಚಯವಿದ್ದು ತರುವಾಯ ಕವಿರಾಜಮಾರ್ಗದಲ್ಲಿಯ ವ್ಯಾಕರಣಾಂಶಗಳ ಉಲ್ಲೇಖವಿದೆ. ಕನ್ನಡ ವ್ಯಾಕರಣ ಸಾಹಿತ್ಯ ಕುರಿತ ಮಾಹಿತಿಯಿದೆ. ಅನಂತರ ಕೇಶಿರಾಜನ ಇತಿವೃತ್ತವನ್ನು ಪ್ರಸ್ತುತಪಡಿಸಲಾಗಿದೆ. ಶಬ್ದಮಣಿದರ್ಪಣದ ವ್ಯಾಕರಣ ಸಂಗತಿಗಳನ್ನು ಆಳವಾಗಿ ಪರಾಮರ್ಶಿಸುವುದಾಗಲಿ, ವೃತ್ತಿ ಪ್ರಯೋಗಗಳ ಸಂದಿಗ್ಧತೆಗಳನ್ನು ವಿಶ್ಲೇಷಿಸುವುದಾಗಲಿ ಇದರ ಉದ್ದೇಶವಾಗಿಲ್ಲ. ಇದೊಂದು ವಿದ್ಯಾರ್ಥಿ ಓದಬಹುದಾದಂತಹ ಒಂದು ಪರಿಷ್ಕರಣ ಗ್ರಂಥವಷ್ಟೇ.

ಇವರ ವಿಮರ್ಶಾತ್ಮಕ ಕಿರುಹೊತ್ತಿಗೆಗಳಲ್ಲಿ ರತ್ನಾಕರವರ್ಣಿಯ ಬೃಹದ್ಗ್ರಂಥವನ್ನು ಸುಸ್ಪಷ್ಟವಾಗಿ ಸಂಕ್ಷಿಪ್ತವಾಗಿ ವಿವೇಚಿ ಸಿರುವ 'ರತ್ನಾಕರವರ್ಣಿ' ಮೊದಲನೆಯದು. ಇದರಲ್ಲಿ ಕವಿಚರಿತ್ರೆ, ಭರತೇಶ ವೈಭವ ಕೃತಿಯ ಮೂಲ,

ಕಥಾಸಾರ, ಕಥಾವಸ್ತು, ಕವಿಮಾಡಿಕೊಂಡಿರುವ ಬದಲಾವಣೆಗಳು, ಕವಿಕಾವ್ಯದೃಷ್ಟಿ, ಕಾವ್ಯಗುಣಗಳು, ಮೆಚ್ಚಿಕೆಯಾದ ಪಾತ್ರಗಳು, ಭರತನ ಸಂಸಾರದ ಚಿತ್ರ, ರತ್ನಾಕರನ ಶೈಲಿ, ಸಾಹಿತ್ಯದಲ್ಲಿ ರತ್ನಾಕರನ ಸ್ಥಾನ ಮುಂತಾದ ಅಧ್ಯಾಯಗಳಿವೆ. ಅಂತೆಯೇ ಪ್ರಚಾರ ಪುಸ್ತಕ ಮಾಲೆಯಲ್ಲಿ ಬರೆದ 'ಮುದ್ದಣ' ಪುಸ್ತಕವು ಕವಿ ಪರಿಚಯ, ಕವಿಯ ಕಾವ್ಯಗಳು, ಶ್ರೀರಾಮಾಶ್ವಮೇಧಂ, ಮುದ್ದಣನ ವೈಶಿಷ್ಟ್ಯ ಎಂಬ ನಾಲ್ಕು ಪ್ರಕರಣಗಳಿಂದ ಕೂಡಿದೆ. ಬೆಂಗಳೂರು ವಿಶ್ವವಿದ್ಯಾಲಯದ ಪ್ರಚಾರೋಪನ್ಯಾಸ ಮಾಲೆಗೆ ರಚಿಸಿದ 'ಪಂಪ' ಕಿರು ಹೊತ್ತಿಗೆಯಲ್ಲಿ ಮೊದಲ ಮಾತು, ಕವಿಚರಿತ್ರೆ, ಪಂಪನ ಕಾವ್ಯಗಳು. ಕಡೆಯ ಮಾತು, ಎಂಬ ನಾಲ್ಕು ವಿಭಾಗಗಳಿವೆ. ಪಂಪನ ಕಾವ್ಯಗಳು ಇಂದಿಗೂ ಅಗ್ರಸ್ಥಾನದಲ್ಲಿರುವುದಕ್ಕೆ ಅವನ ಪಾಂಡಿತ್ಯ, ಪ್ರತಿಭೆ, ಲೋಕಾನುಭವ, ಕಲ್ಪನಾ ವಿಲಾಸಗಳೇ ಬಹುಮುಖ್ಯ ಕಾರಣವಾಗಿದೆ ಎಂದು ನಿರೂಪಿಸಿದ್ದಾರೆ.

'ಭದ್ರಾಚಲ ರಾಮದಾಸರು' ಎಂಬುದು ಗೋಲ್ಕೊಂಡದ ರಾಜರ ಹತ್ತಿರ ನೌಕರಿಯಲ್ಲಿದ್ದು ಸೆರೆವಾಸ ಅನುಭವಿಸಿದರೂ ರಾಮನ ಧ್ಯಾನ ಬಿಡದೆ ಭದ್ರಾಚಲದಲ್ಲಿ ನೆಲೆಸಿ, ಕೀರ್ತನೆಗಳನ್ನು ಬರೆದು ಪ್ರಖ್ಯಾತರಾದ ರಾಮದಾಸರನ್ನು ಕುರಿತು ರಚಿಸಿದ ಕೃತಿ. ಧಾರವಾಡ ಜಿಲ್ಲೆಯಲ್ಲಿ ಜನಿಸಿ ತಪಸ್ವಿಯಾಗಿ ದಕ್ಷಿಣ ಭಾರತದ ಪುಣ್ಯಕ್ಷೇತ್ರಗಳಲ್ಲೆಲ್ಲಾ ಸಂಚಾರ ಕೈಗೊಂಡು ತಮ್ಮ ಆಧ್ಯಾತ್ಮಿಕ ವಿಚಾರವನ್ನು ಲೋಕೋದ್ಧಾರಕ್ಕೆ ವಿನಿಯೋಗಿಸಿದ ಶೇಷಾಚಲರ ಜೀವನ ಮಹಿಮೆಯನ್ನು ತಿಳಿಸುವ ಕೃತಿಯೇ 'ಶ್ರೀ ಶೇಷಾಚಲರು'.

ಕನ್ನಡ ಪಂಡಿತ ಸಂಪ್ರದಾಯಕ್ಕೆ ತ.ಸು. ಶಾಮರಾಯರ ಕೊಡುಗೆ ವಿಶಿಷ್ಟವಾಗಿದೆ. ಗ್ರಂಥ ಸಂಪಾದನೆ ಮತ್ತು ಸಂಗ್ರಹ ಕಾರ್ಯಗಳಂತಹ ಕ್ಷೇತ್ರದಲ್ಲಿ ತಮ್ಮನ್ನು ಆಸಕ್ತಿಯಿಂದ ತೊಡಗಿಸಿಕೊಂಡು ತಮ್ಮ ಪಾಂಡಿತ್ಯಪೂರ್ಣ ಪ್ರತಿಭೆಯನ್ನು ತೋರ್ಪಡಿಸಿದ್ದಾರೆ. 'ಕರ್ಣಾಟಕ ಶಬ್ದಾನುಶಾಸನಂ' ಎಂಬ ಗ್ರಂಥವನ್ನು ಕೂಲಂ ಕಷವಾಗಿ ವಿಮರ್ಶಿಸಿ ಸಂಪಾದಿಸಿ ಓದುಗರಿಗೆ ಅದರಲ್ಲೂ ವಿದ್ಯಾರ್ಥಿಗಳಿಗೆ ಒದಗಿಸಿಕೊಟ್ಟಿದ್ದಾರೆ. ಕುಮಾರವ್ಯಾಸ ಭಾರತದ ಆದಿಪರ್ವ, ಸಭಾಪರ್ವ, ಅರಣ್ಯಪರ್ವ, ವಿರಾಟ ಪರ್ವ, ಉದ್ಯೋಗಪರ್ವ ಸಂಗ್ರಹಗಳನ್ನೊಳಗೊಂಡ 'ಕನ್ನಡ ಮಹಾಭಾರತ ಸಂಗ್ರಹ ಭಾಗ-1' ಹಾಗೂ 'ಕುಮಾರವ್ಯಾಸ ಭಾರತ'ಗಳನ್ನು ಪ್ರಕಟಿಸಿದ್ದಾರೆ. ರನ್ನನ 'ಅಜಿತಪುರಾಣ', ಲಕ್ಷ್ಮೀಶನ 'ಜೈಮಿನಿಭಾರತ', ಆಚಣ್ಣ

ಕವಿಯ 'ವರ್ಧಮಾನ ಪುರಾಣ', 'ಸುಕುಮಾರ ಚರಿತಂ', ಹರಿಹರನ 'ಉಡುತಡಿಯ ಅಕ್ಕಮಹಾದೇವಿಯ ರಗಳೆ', 'ಭರತೇಶ ವೈಭವ ಸಂಗ್ರಹ' ಮುಂತಾದವುಗಳನ್ನು ಯಶಸ್ವಿಯಾಗಿ ಸಂಗ್ರಹಿಸಿ ಸುಲಭವಾಗಿ ಓದುಗರು ಅರ್ಥೈಸಿಕೊಳ್ಳುವಂತೆ ಮಾಡಿದ ಕಾರ್ಯ ಶ್ಲಾಘನೀಯವಾಗಿದೆ. ಇವಿಷ್ಟೇ ಅಲ್ಲದೆ ಕುಮಾರವ್ಯಾಸ ಭಾರತದ ನಿಘಂಟು, ಜೈನ ಪರಿಭಾಷಾ ರತ್ನಕೋಶ, ವ್ಯಾಕರಣಸಾರ, ಆದಿಪುರಾಣ ದೀಪಿಕೆ ಇವರ ಪಾಂಡಿತ್ಯಕ್ಕೆ ಸಾಕ್ಷಿಯಾಗಿದೆ.

ಹಲವಾರು ಗೌರವ ಪುರಸ್ಕಾರಗಳಿಗೆ ಪಾತ್ರರಾಗಿದ್ದ ಶಾಮರಾಯರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ಚಾವುಂಡರಾಯ ಪ್ರಶಸ್ತಿ (೧೯೯೫). ಮೈಸೂರು ವಿಶ್ವ ವಿದ್ಯಾನಿಲಯದ ಗೌರವ ಡಾಕ್ಟೊರೇಟ್ (೧೯೯೭) ಸಂದಿವೆ. ತ.ಸು. ಶಾಮರಾಯರಿಗೆ 'ಸ್ವಸ್ತಿ' ಎಂಬ ಅಭಿನಂದನ ಗ್ರಂಥವನ್ನು ಸಮರ್ಪಿಸಲಾಗಿದೆ. ಇವರು ೨೧-೦೮-೧೯೯೮ ರಂದು ನಿಧನರಾದರು.

ತ.ಸು. ಶಾಮರಾಯರ ಮುಖ್ಯವಾದ ರಚನೆಗಳು:

ಕವಿ, ಕಾವ್ಯ, ಸಾಹಿತ್ಯ ವಿಚಾರ: ಕನ್ನಡ ನಾಟಕ, ಕನ್ನಡ ಸಾಹಿತ್ಯ ಚರಿತ್ರೆ- ಒಂದು ಸಮೀಕ್ಷೆ. ಜನಪ್ರಿಯ ಕನ್ನಡ ಸಾಹಿತ್ಯ ಚರಿತ್ರೆ. ಪಂಪ (ಕವಿಕಾವ್ಯ ಪರಿಚಯ), ರತ್ನಾಕರವರ್ಣಿ, ಮುದ್ದಣ, ವಚನ ರಾಮಾಯಣ, ವಚನ ಭಾಗವತ, ವಚನ ಭಾರತ.

ಸಂಪಾದಿತ ಕಾವ್ಯ ಸಂಗ್ರಹ : ಆಚಣ್ಣ ಕವಿ ವಿರಚಿತ ವರ್ಧಮಾನ ಪುರಾಣ, ಸುಕುಮಾರ ಚರಿತಂ, ಹರಿಹರನ ಉಡುತಡಿಯ ಅಕ್ಕಮಹಾದೇವಿಯ ರಗಳೆ, ಅಜಿತ ಪುರಾಣ ಸಂಗ್ರಹ, ಅರಣ್ಯಪರ್ವ ಸಂಗ್ರಹ, ಆದಿಪರ್ವ ಸಂಗ್ರಹ, ಉದ್ಯೋಗಪರ್ವ, ಸಭಾಪರ್ವ, ಕುಮಾರ ವ್ಯಾಸ ಭಾರತ (ಕಾವ್ಯ ಸಂಗ್ರಹ). ಜೈಮಿನಿ ಭಾರತದ ಸಂಗ್ರಹ, ಭರತೇಶ ವೈಭವ ಸಂಗ್ರಹ, ಭರತೇಶ ವೈಭವ, ಮಹಾಶ್ವೇತೆ, ವಿರಾಟ ಪರ್ವ ಸಂಗ್ರಹ.

ಕೋಶ, ವ್ಯಾಕರಣ: ಕರ್ನಾಟಕ ಶಬ್ದಾನುಶಾಸನಂ, ಕುಮಾರವ್ಯಾಸ ಭಾರತದ ನಿಘಂಟು, ಜೈನ ಪರಿಭಾಷಾ ರತ್ನಕೋಶ, ಕೇಶಿರಾಜ ವಿರಚಿತ ಶಬ್ದಮಣಿದರ್ಪಣಂ, ವ್ಯಾಕರಣಸಾರ, ಆದಿಪುರಾಣ ದೀಪಿಕೆ.

❐ ❐ ❐

ಸ.ಸ. ಮಾಳವಾಡ

(೧೯೧೦-೧೯೮೭)

ವಿನೋದ

ಕನ್ನಡನಾಡಿನ ಶೈಕ್ಷಣಿಕ ಹಾಗೂ ಸಾಹಿತ್ಯಕ ಕ್ಷೇತ್ರಗಳಲ್ಲಿ ಕೆಲಸ ಮಾಡಿದ ಅನೇಕ ಜನ ಮಹನೀಯರಲ್ಲಿ ಸ.ಸ. ಮಾಳವಾಡ ಅವರೂ ಒಬ್ಬರು. ಕನ್ನಡ ಪ್ರಾಧ್ಯಾಪಕರಾಗಿ, ವಿಮರ್ಶಕರಾಗಿ, ಪ್ರಾಮಾಣಿಕವಾಗಿ ದುಡಿದ ವಿದ್ವಾಂಸರಾಗಿ ಮಾಳ ವಾಡರು ಹೆಸರುವಾಸಿಯಾಗಿದ್ದಾರೆ. ಕನ್ನಡ ನವೋದಯ ಸಾಹಿತ್ಯದಲ್ಲಿ ಪ್ರಮುಖವಾಗಿ ಗುರುತಿಸಿಕೊಳ್ಳಬೇಕಾದವರಲ್ಲಿ ಅವರೂ ಪ್ರಮುಖರು. ಮೂಲತಃ ಇವರು ಧಾರವಾಡ ಜಿಲ್ಲೆಯ ಮಾಳವಾಡದವರು. ಮಾಳವಾಡ ಅವರ ಹಿರಿಯರು ನೆಲಸಿದ್ದು ಬಿಜಾಪುರ ಜಿಲ್ಲೆಯ ಗೋವನಕೊಪ್ಪ ಗ್ರಾಮದಲ್ಲಿ. ಇವರು ಧಾರವಾಡ ಜಿಲ್ಲೆಯ ಮೆಣಸಗಿಯಲ್ಲಿ ನವೆಂಬರ್ ೧೪, ೧೯೧೦ ರಂದು ಜನಿಸಿದರು. ಇವರ ನಿಜನಾಮ ಸಂಗಪ್ಪ. ಇವರ ತಂದೆ ಸಂಗನಬಸಪ್ಪ, ತಾಯಿ ಕಾಳಮ್ಮ. ಮಾಳವಾಡರ ಬಾಲ್ಯ ಮತ್ತು ವಿದ್ಯಾಭ್ಯಾಸಗಳು ಗೋವನಕುಪ್ಪ, ಗುಳೇದಗುಡ್ಡ, ಬಾಗಲಕೋಟೆ ಮತ್ತು ಬಿಜಾಪುರ ಗಳಲ್ಲಿ ನಡೆದುವು. ಗಜೇಂದ್ರಗಡ ರಾಮರಾಯ ಮಾಸ್ತರರು ಇವರಲ್ಲಿ ಸಾಹಿತ್ಯ ಪ್ರೇಮ ಬೆಳೆಸಿದರು. ಇದನ್ನೇ ಸ್ಫೂರ್ತಿಯಾಗಿ ಸ್ವೀಕರಿಸಿ ಮಾಳವಾಡ ಅವರು ಉನ್ನತ ಸಂಶೋಧಕರಾಗಿ ಬೆಳೆದರು.

ಪ್ರಾರಂಭಿಕ ಶಿಕ್ಷಣ ಆದಮೇಲೆ ಮಾಳವಾಡ ಅವರು ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಇತಿಹಾಸ ಮತ್ತು ಅರ್ಥಶಾಸ್ತ್ರಗಳನ್ನು ವಿಶೇಷ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡು ೧೯೩೩ ರಲ್ಲಿ ಮುಂಬೈ ವಿಶ್ವವಿದ್ಯಾಲಯದಿಂದ ಬಿ.ಎ. ಪದವಿ ಪಡೆದರು. ಅನಂತರ ಕೊಲ್ಹಾಪುರದಲ್ಲಿ ಸ್ನಾತಕೋತ್ತರ ಶಿಕ್ಷಣ ಮುಂದುವರಿಸಿ ಕನ್ನಡ, ಇಂಗ್ಲಿಷ್ ಭಾಷೆಗಳ ವಿಶೇಷ ಅಭ್ಯಾಸದೊಂದಿಗೆ ಮುಂಬಯಿ ವಿಶ್ವವಿದ್ಯಾಲಯ ದಿಂದಲೇ ಎಂ.ಎ. ಪದವಿಯನ್ನು ೧೯೩೫ ರಲ್ಲಿ ಪ್ರಥಮ ಸ್ಥಾನದೊಂದಿಗೆ ಪಡೆದರು. ವಿದ್ಯಾರ್ಥಿಯಾಗಿದ್ದಾಗಲೇ ಮಾಳವಾಡರು ಮಂಗ ಮಠ ಎಂಬ ಸಂಸ್ಥೆಯನ್ನು ಕಟ್ಟಿ ಸಾಹಿತ್ಯ ಸೇವೆಗೆ ತೊಡಗಿದರು.

ಎಂ.ಎ. ಪದವೀಧರರಾದ ಮೇಲೆ ಉತ್ತರ ಕರ್ನಾಟಕ ಭಾಗದ ಬೇರೆ ಬೇರೆ ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಾರ್ಯ ನಿರ್ವಹಿಸಿ ೧೯೩೬ರಲ್ಲಿ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ನೇಮಕಗೊಂಡರು. ಮೂವತ್ತು ವರ್ಷಗಳ ಕಾಲ ಅದೇ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದು ೧೯೬೬ ರಲ್ಲಿ ಪ್ರಾಚಾರ್ಯರಾಗಿ ನೇಮಕಗೊಂಡು ನಿವೃತ್ತರಾದರು. ಅನಂತರದಲ್ಲಿ ೧೯೭೦ರ ತನಕ ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಸಂಶೋಧಕ ಪ್ರಾಧ್ಯಾಪಕರಾಗಿ ಅದೇ ಕಾಲೇಜಿನಲ್ಲಿ ಕೆಲಸ ಮಾಡಿದರು.

ಶೈಕ್ಷಣಿಕ ರಂಗಕ್ಕೆ ಮಾಳವಾಡರು ಮಾಡಿದ ಸೇವೆ ಚಿರಸ್ಮರಣೀಯ ವಾದುದು. ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಇರುವಾಗಲೇ ಅವರು ವಿವಿಧ ಸಂಸ್ಥೆಗಳ ಮೂಲಕ ಗಣನೀಯ ಸೇವೆ ಸಲ್ಲಿಸಿದರು. ಇದರಿಂದ ಕರ್ನಾಟಕ ಕಾಲೇಜಿನ ಹಿರಿಮೆ ಹೆಚ್ಚಾಯಿತು. ಮುಖ್ಯವಾಗಿ ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆಯಲ್ಲಿ ಅವರ ಪಾತ್ರ ಗಮನಿಸತಕ್ಕದ್ದು. ಧಾರವಾಡದಲ್ಲಿ ಆಕಾಶವಾಣಿ ಕೇಂದ್ರ ಸ್ಥಾಪನೆ ಆಗಲು ಕೂಡ ಶ್ರಮಿಸಿದರು.

ಮೈಸೂರು ಮುಂಬಯಿ ಸರ್ಕಾರಗಳ ಶಿಕ್ಷಣ ಇಲಾಖೆಗಳ ಅನೇಕ ಕೆಲಸಗಳಲ್ಲಿ ಮಾಳವಾಡರನ್ನು ತೊಡಗಿಸಿಕೊಳ್ಳಲಾಯಿತು. ಪಠ್ಯಪುಸ್ತಕ ಸಮಿತಿ, ನೇಮಕಾತಿ ಸಮಿತಿಗಳಲ್ಲಿ ಅವರು ಕಾರ್ಯನಿರ್ವಹಿಸಿದ್ದಾರೆ. ಮುಂಬಯಿ ಸರ್ಕಾರದ ಕನ್ನಡ ಸಂಸ್ಕೃತಿ ಸಂಶೋಧನ ಸಮಿತಿಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ಅಲ್ಲದೆ ಮುಂಬಯಿ ವಿಶ್ವವಿದ್ಯಾಲಯದ ಶಿಕ್ಷಣ ಮಂಡಳಿ ಮತ್ತು ಸೆನೆಟ್‌ಗಳಲ್ಲಿ ಸದಸ್ಯರಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ವಿದ್ಯಾವರ್ಧಕ ಸಂಘ, ಅಖಿಲ ಭಾರತ ಪಿ.ಇ.ಎನ್. ಸಂಸ್ಥೆ, ಕೇಂದ್ರ ಮತ್ತು ರಾಜ್ಯ ಸಾಹಿತ್ಯ ಅಕಾಡೆಮಿಗಳು, ಭಾರತೀಯ ಜ್ಞಾನಪೀಠ, ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಬಸವಸಮಿತಿ ಮುಂತಾದ ಸಂಘ ಸಂಸ್ಥೆಗಳಲ್ಲಿ ಸದಸ್ಯರಾಗಿ, ಸಲಹೆಗಾರರಾಗಿ ಕರ್ತವ್ಯವನ್ನು ನಿರ್ವಹಿಸಿದ್ದಾರೆ.

ಶೈಕ್ಷಣಿಕ ಹಾಗೂ ಸಾಹಿತ್ಯಕ ಸಂಬಂಧವಿರುವ ಅನೇಕ ಚಟುವಟಿಕೆಗಳಲ್ಲಿ ಮಾಳವಾಡರು ಸಕ್ರಿಯವಾಗಿ ಭಾಗವಹಿಸಿ ಕನ್ನಡ ಭಾಷಾಸೇವೆಗೆ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಹಲವು ವಿದ್ವತ್ಪತ್ರಿಕೆಗಳ ಸಂಪಾದಕ ಮಂಡಳಿ ಸದಸ್ಯರಾಗಿ,

ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಸಮಿತಿ ಸದಸ್ಯರಾಗಿ, ಉಪಾಧ್ಯಕ್ಷರಾಗಿ ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟು ಸಮಿತಿ ಸದಸ್ಯರಾಗಿ ಕೆಲಸ ನಿರ್ವಹಿಸಿದರು. ಪಿ.ಇ.ಎನ್. ಸಮ್ಮೇಳನಗಳಲ್ಲಿ ಅಖಿಲ ಭಾರತ ಪ್ರಾಚ್ಯವಿದ್ಯಾ ಪರಿಷತ್ತಿನ ಅಧಿವೇಶನಗಳಲ್ಲಿ, ಅರವಿಂದ ಶತಾಬ್ದಿ ಉತ್ಸವಗಳಿಗೆ ಸಂಬಂಧಿಸಿದ ವಿಚಾರಗೋಷ್ಠಿಗಳಲ್ಲಿ ಇವರು ಭಾಗವಹಿಸಿ ಪ್ರಬಂಧ ಮಂಡಿಸಿದ್ದಾರೆ. ೧೯೪೫ ರಲ್ಲಿ ಮದರಾಸು ಕನ್ನಡ ಸಾಹಿತ್ಯ ಸಮ್ಮೇಳನದ ಸಾಹಿತ್ಯಗೋಷ್ಠಿಯ ಅಧ್ಯಕ್ಷರಾಗಿಯೂ ಧಾರವಾಡ, ಬಿಜಾಪುರ ಜಿಲ್ಲಾ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರಾಗಿಯೂ ಗೌರವವನ್ನು ಪಡೆದಿದ್ದಾರೆ.

ಆಧುನಿಕ ಕನ್ನಡ ಸಾಹಿತ್ಯವು ಹೊಸ ವಿಚಾರಧಾರೆಗಳಿಗೆ ತೆರೆದುಕೊಳ್ಳುತ್ತಿದ್ದ ಸಮಯದಲ್ಲಿ ಸ.ಸ. ಮಾಳವಾಡರಂತಹ ವಿದ್ವಾಂಸರ ಸಂಶೋಧನ ಕೆಲಸಗಳು ಕನ್ನಡ ಸಾಹಿತ್ಯದ ಬೆಳೆವಣಿಗೆಗೆ ತುಂಬಾ ಸಹಕಾರಿಯಾದುವು. ವಿದ್ಯಾರ್ಥಿಯಾಗಿದ್ದಾಗಲೇ ಸಂಸ್ಥೆಗಳನ್ನು ಕಟ್ಟುವುದು, ಸಂಶೋಧನಾತ್ಮಕ ಚಟುವಟಿಕೆಗಳಲ್ಲಿ ಭಾಗವಹಿಸುವುದು ಮಾಳವಾಡ ಅವರಿಗೆ ಇಷ್ಟವಾದ ವಿಷಯ ವಾಗಿತ್ತು.

ಮಾಳವಾಡರು ಸುಮಾರು ನಲವತ್ತಕ್ಕೂ ಮೇಲ್ಪಟ್ಟ ಕೃತಿಗಳನ್ನು ಬರೆದಿದ್ದಾರೆ. ಅವುಗಳಲ್ಲಿ ವಿಚಾರ ಸಾಹಿತ್ಯ, ಅಧ್ಯಾತ್ಮ ಸಾಹಿತ್ಯ, ಪ್ರವಾಸ ಕಥನ, ವಿಮರ್ಶೆ, ಸಂಪಾದನೆ, ಆತ್ಮಚರಿತ್ರೆ ಮೊದಲಾದವು ಸೇರಿವೆ. 'ಕರ್ನಾಟಕ ಸಾಹಿತ್ಯ–ಸಂಸ್ಕೃತಿ ದರ್ಶನ' ಮಾಳವಾಡರ ಮೊತ್ತಮೊದಲ ಕೃತಿ. ಅನಂತರದಲ್ಲಿ ಸಾಹಿತ್ಯ ಸಮಾ ಲೋಚನೆ, ಹರಿಹರನ ರಗಳೆಗಳಲ್ಲಿ ಜೀವನ ದರ್ಶನ, ಕಾವ್ಯ ಮತ್ತು ಜೀವನ ಚಿತ್ರಣ, ಸಾಹಿತ್ಯ ಸಂಗಮ, ಷಡಕ್ಷರಿ, ಹರಿಹರ–ರಾಘವಾಂಕರು ಮೊದಲಾದ ಹಲವಾರು ಸಂಶೋಧನಾತ್ಮಕ ಹಾಗೂ ವಿಮರ್ಶಾ ಗ್ರಂಥಗಳನ್ನು ಪ್ರಕಟಿಸಿದರು. ಇವುಗಳಲ್ಲಿ 'ರಾಘವಾಂಕ ಚರಿತೆ', 'ಹರಿಹರನ ಮೂರು ರಗಳೆಗಳು', 'ಕನ್ನಡ ಗದ್ಯಮಾಲೆ', 'ಶ್ರೀ ಬಸವಣ್ಣನವರ ವಚನ ಸಂಗ್ರಹ', 'ಕಾವ್ಯಪದಮಂಜರಿ' ಮೊದಲಾದವು ಸಂಪಾದಿತ ಕೃತಿಗಳು. 'ಸಂಗೀತರತ್ನ', 'ಕರ್ನಾಟಕ ಕುಲಪುರೋ ಹಿತರು' ಇವರ ಸಂಪಾದಕತ್ವದ ಗೌರವ ಗ್ರಂಥಗಳು. 'ಸಾಹಿತ್ಯಸಂಗಮ' ವೆಂಬುದು ಇವರ ಸಾಹಿತ್ಯ ಕೃಷಿಯ ವೈವಿಧ್ಯವನ್ನು ತಿಳಿಸುವ ೬೦ ಲೇಖನಗಳ ಸಂಕಲನ. 'ದಾರಿ ಸಾಗಿದೆ' ಇವರ ಆತ್ಮಚರಿತ್ರೆ.

ಸ.ಸ. ಮಾಳವಾಡರು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಅಮೂಲ್ಯ ಕೊಡುಗೆಯನ್ನು ಗಮನಿಸಿ ೧೯೭೨ ರಲ್ಲಿ ರಾಜ್ಯ ಸಾಹಿತ್ಯ ಆಕಾಡೆಮಿ ಇವರನ್ನು ಪ್ರಶಸ್ತಿ ನೀಡಿ ಗೌರವಿಸಿದೆ. ಪ್ರಾಧ್ಯಾಪಕರಾಗಿ, ಸಂಶೋಧಕರಾಗಿ, ಶಿಕ್ಷಣ ತಜ್ಞರಾಗಿ ಇವರು ಮಾಡಿದ ಸೇವೆಯನ್ನು ಗಮನಿಸಿ ಇವರ ೭೩ನೆಯ ಹುಟ್ಟುಹಬ್ಬಕ್ಕೆ 'ವ್ಯಾಸಂಗ' ಎಂಬ ಅಭಿನಂದನ ಗ್ರಂಥವನ್ನು ೧೯೮೩ರಲ್ಲಿ ಸಮರ್ಪಿಸಲಾಗಿದೆ. ೧೯೮೫ ರಲ್ಲಿ ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಲಭಿಸಿತು.

ಸ.ಸ. ಮಾಳವಾಡರಿಗೆ ಅವರ ಸಮಕಾಲಿಕರಾದ ಅನೇಕ ವಿದ್ವಜ್ಜನರ ಸಂಪರ್ಕವಿತ್ತು. ಅವರ ಸಾಹಿತ್ಯ ಸೇವೆ ಸಂಶೋಧನ ಪ್ರವೃತ್ತಿ ಆ ಪಂಡಿತರನ್ನು ಆಕರ್ಷಿಸಿತ್ತು. ಅವರು ಬೇರೆಯವರ ಮೆಚ್ಚುಗೆಯನ್ನು ಪಡೆದದ್ದು ಮಾತ್ರವಲ್ಲ. ಪ್ರತಿಭಾವಂತ ವಿದ್ಯಾರ್ಥಿ ಗಳು ಕನ್ನಡ ಸಾಹಿತ್ಯ ಮತ್ತು ಸಂಶೋಧನೆಯ ಅಧ್ಯಯನದಲ್ಲಿ ತೊಡಗಿಸಿಕೊಳ್ಳಲು ಸ್ಫೂರ್ತಿ ನೀಡುತ್ತಿದ್ದರು. ಮಾಳವಾಡರು ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆ ಚಿರಸ್ಮರಣೀಯ. ಸ.ಸ. ಮಾಳವಾಡ ಅವರು ದಿ. ೩೦-೦೮-೧೯೮೭ ರಂದು ನಿಧನರಾದರು.

❐ ❐ ❐

ಎಂ.ವಿ. ಸೀತಾರಾಮಯ್ಯ

(೧೯೧೦–೧೯೯೦)

ಮಾಲಿನಿ ಎನ್. ಅಭ್ಯಂಕರ್

ಕನ್ನಡ ಸಾಹಿತ್ಯ ಲೋಕದ ನವೋದಯ ಕಾಲಘಟ್ಟದಲ್ಲಿ ಕವಿ, ಕಥೆಗಾರ, ಕಾದಂಬರಿಕಾರ, ವಿಮರ್ಶಕ ಹಾಗೂ ಅಪ್ರತಿಮ ಚಿತ್ರಕಾರರಾಗಿ ಗುರುತಿಸಿಕೊಂಡವರು ಎಂ.ವಿ. ಸೀತಾರಾಮಯ್ಯನವರು. 'ರಾಘವ' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಇವರ ಪೂರ್ಣ ಹೆಸರು ಮೈಸೂರು ವೆಂಕಟದಾಸಪ್ಪ ಸೀತಾರಾಮಯ್ಯ. ೧೯೧೦, ಸೆಪ್ಟೆಂಬರ್ ೯ ರಂದು ಮೈಸೂರಿನಲ್ಲಿ ಜನಿಸಿದ ಇವರ ಜೀವನ ಪ್ರವಾಸವು ಸಾಹಿತ್ಯ ಮತ್ತು ಕಲೆಯ ಸಮನ್ವಯದಂತಿತ್ತು.

ಸೀತಾರಾಮಯ್ಯನವರ ಆರಂಭಿಕ ಶಿಕ್ಷಣವು ಮೈಸೂರಿನ ಕೃಷ್ಣರಾಜ ಪ್ರಾಥಮಿಕ ಶಾಲೆ ಹಾಗೂ ಬನುಮಯ್ಯ ಪ್ರೌಢಶಾಲೆಯಲ್ಲಿ ನಡೆಯಿತು. ಹೈಸ್ಕೂಲಿನಲ್ಲಿರುವಾಗಲೇ ವಾಲ್ಟರ್ ಸ್ಕಾಟ್ ಮತ್ತು ಚಾರ್ಲ್ಸ್ ಡಿಕನ್ಸ್, ಥಾಮಸ್ ಹಾರ್ಡಿ ಮೊದಲಾದ ಪ್ರಸಿದ್ಧ ಇಂಗ್ಲಿಷ್ ಲೇಖಕರ ಕೃತಿಗಳನ್ನು ಓದಿದರು. ಇದರಿಂದ ಹೈಸ್ಕೂಲು ಹಂತದಲ್ಲೇ ಅವರು ಇಂಗ್ಲಿಷ್ ಮತ್ತು ಕನ್ನಡದ ಮೇಲೆ ಅದ್ಭುತ ಹಿಡಿತ ಸಾಧಿಸಿದ್ದರು. ಎಸ್.ಎಸ್.ಎಲ್.ಸಿ ಬಳಿಕ ಜ್ಯೂನಿಯರ್ ಇಂಟರ್ ತರಗತಿಯಲ್ಲಿ ದ್ದಾಗಲೇ ಕುಮಾರವ್ಯಾಸ ಭಾರತ, ಜೈಮಿನಿ ಭಾರತಗಳಲ್ಲಿ ವಿಶೇಷವಾದ ಆಸಕ್ತಿ ಬೆಳೆಸಿಕೊಂಡಿದ್ದರು.

ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಬಿ.ಎ. ಮುಗಿಸಿದ ಅನಂತರ, ಟಿ.ಎಸ್. ವೆಂಕಣ್ಣಯ್ಯನವರ ಮಾರ್ಗದರ್ಶನ ದಿಂದಾಗಿ ಕನ್ನಡದಲ್ಲಿ ಎಂ.ಎ. (೧೯೩೧–೩೩) ಪದವಿಯನ್ನು 'ಶ್ರೀ' ಚಿನ್ನದ ಪದಕದೊಂದಿಗೆ ಪೂರೈಸಿದರು. ಬಿ.ಎಂ.ಶ್ರೀ, ಟಿ.ಎಸ್. ವೆಂಕಣ್ಣಯ್ಯ, ವಿದ್ವಾನ್ ಟಿ.ಎನ್. ಸುಬ್ಬರಾಯಶಾಸ್ತ್ರಿಗಳು ಮತ್ತು ಎಂ.ಆರ್. ವರದಾಚಾರ್ಯರಂತಹ ಘನತೆವೆತ್ತ ಗುರುಗಳ ಶಿಷ್ಯತ್ವ ಇವರ ಪ್ರತಿಭೆಗೆ ಸಾಣೆ ಹಿಡಿಯಿತು.

ಕೇವಲ ಅಕ್ಷರಲೋಕಕ್ಕೆ ಸೀಮಿತವಾಗದ ಸೀತಾರಾಮಯ್ಯನವರು ಒಬ್ಬ ಪರಿಣತ ಮೃದಂಗವಾದಕರೂ ಮತ್ತು ಶ್ರೇಷ್ಠ ಚಿತ್ರಕಾರರೂ ಆಗಿದ್ದರು. ಮೈಸೂರಿನ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್‌ನಲ್ಲಿ ಕಲಾಶಿಕ್ಷಣ ಪಡೆದ ಇವರು ಬರೆದ 'His Majesty Drinks' ಮತ್ತು 'ಕುಡುಕ ಭಿಕ್ಷುಕ' ಚಿತ್ರಗಳು ಇಂದಿಗೂ ಸುಪ್ರಸಿದ್ಧ. ಸ್ವತಃ ಕುವೆಂಪು ಅವರ 'ಬೊಮ್ಮನಹಳ್ಳಿ ಕಿಂದರಿಜೋಗಿ' ಪದ್ಯಕ್ಕೆ ಇವರೇ ಚಿತ್ರಗಳನ್ನು ಬಿಡಿಸಿದ್ದರು ಎಂಬುದು ವಿಶೇಷ. ಹೆಸರಾಂತ ಕಲಾವಿದ ಕೆ. ವೆಂಕಟಪ್ಪನವರ ಶಿಷ್ಯತ್ವವೂ ಇವರಿಗೆ ಲಭಿಸಿತ್ತು.

ಇವರ ವೃತ್ತಿ ಹಾಗೂ ಬದುಕು ಸಾಹಿತ್ಯ ಸೇವೆಯ ಮೈಲುಗಲ್ಲುಗಳಂತಿವೆ. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ (೧೯೩೪–೩೯) ಸೇವೆ ಸಲ್ಲಿಸಿದ ಇವರು, ಅನಂತರ ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟಿನ ಸಹಾಯಕ ಸಂಪಾದಕರಾಗಿ ಮಹತ್ವದ ಕೆಲಸ ಮಾಡಿದರು. ಬೆಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ ಅಧ್ಯಾಪಕರಾಗಿ ಆರಂಭವಾದ ಇವರ ಬೋಧನಾ ವೃತ್ತಿ, ಬೆಂಗಳೂರು ವಿಶ್ವವಿದ್ಯಾಲಯದ ಯುಜಿಸಿ ಪ್ರಾಧ್ಯಾಪಕರಾಗಿ ನಿವೃತ್ತರಾಗುವವರೆಗೆ ಮುಂದುವರಿಯಿತು. ವ್ಯಾಕರಣ ಮತ್ತು ಹಸ್ತಪ್ರತಿಶಾಸ್ತ್ರ ಕ್ಷೇತ್ರಕ್ಕೆ ಇವರು ನೀಡಿದ ಕೊಡುಗೆ ಅಪಾರವಾದುದು.

ಸೀತಾರಾಮಯ್ಯನವರು ನೂರಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ೧೫ ಕವನ ಸಂಕಲನಗಳು, ೧೦ ಕಥಾ ಸಂಕಲನಗಳು ಹಾಗೂ ೧೧ ಕಾದಂಬರಿಗಳನ್ನು ಸಾಹಿತ್ಯಲೋಕಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಇವರ ಮೊದಲ ಕವನ ಸಂಗ್ರಹ 'ಹಕ್ಕಿಹಾಡು' (೧೯೪೪) ಇಂದಿಗೂ ಪ್ರಸ್ತುತ. 'ಭಾಗ್ಯಲಕ್ಷ್ಮಿ', 'ಮಾವನ ಮಗಳು', 'ನಂಜಿನ ಸವಿ' ಇವರ ಕೆಲವು ಪ್ರಮುಖ ಕಾದಂಬರಿಗಳು. ಕೇವಲ ದೊಡ್ಡವರಿಗಷ್ಟೇ ಅಲ್ಲದೆ 'ಹೂವಾಡಗಿತ್ತಿ', 'ಹಾವಾಡಿಗ' ಮುಂತಾದ ಮಕ್ಕಳ ಸಾಹಿತ್ಯ ಕೃತಿಗಳನ್ನೂ ರಚಿಸಿ ಎಳೆಯರ ಮನಸ್ಸನ್ನು ಗೆದ್ದಿದ್ದಾರೆ.

ನಾಟಕ ಕ್ಷೇತ್ರದಲ್ಲಿಯೂ 'ಸ್ವಯಂವರ', 'ಕವಿಯ ಹೆಂಡತಿ' ಈ ಮುಂತಾದ ಕೃತಿಗಳ ಮೂಲಕ ಸಕ್ರಿಯರಾಗಿದ್ದರು. ಗ್ರಂಥ ಸಂಪಾದನ ಕ್ಷೇತ್ರದಲ್ಲಿ ಇವರು ಸಂಪಾದಿಸಿದ 'ಕವಿರಾಜಮಾರ್ಗ', 'ಉದಯಾದಿತ್ಯಾಲಂಕಾರ' ಹಾಗೂ 'ಸರ್ವಜ್ಞ ವಚನಗಳು' ವಿದ್ವತ್ಪೂರ್ಣ ಕೃತಿಗಳಾಗಿವೆ. ಭಾರತೀಯ ಕಾವ್ಯಮೀಮಾಂಸೆ

ಮತ್ತು ಪ್ರಾಚೀನ ವ್ಯಾಕರಣಗಳ ಕುರಿತಾದ ಇವರ ಸಂಶೋಧನೆಗಳು ಕನ್ನಡ ಭಾಷೆಯ ಆಳವನ್ನು ತೋರಿಸುತ್ತವೆ.

ಕವಿರಾಜಮಾರ್ಗ(೧೯೭೫, ೧೯೯೪, ೨೦೦೫): ಕನ್ನಡ ಸಾಹಿತ್ಯಲೋಕದ ಅತ್ಯಂತ ಪ್ರಾಚೀನ ಲಕ್ಷಣ ಗ್ರಂಥ ವಾದ 'ಕವಿರಾಜಮಾರ್ಗ'ವನ್ನು ಕುರಿತು ಎಂ.ವಿ. ಸೀತಾರಾಮಯ್ಯ (ಎಂ.ವಿ.ಸಿ) ಅವರು ಕೈಗೊಂಡ ಕೆಲಸವು ಅತ್ಯಂತ ಮೌಲ್ಯಯುತ ವಾದುದು. ಕವಿರಾಜಮಾರ್ಗವನ್ನು ಕೇವಲ ಒಂದು ಹಳೆಯ ಪಠ್ಯವಾಗಿ ನೋಡದೆ, ಅದನ್ನು ವೈಜ್ಞಾನಿಕವಾಗಿ ಮತ್ತು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿದ್ದಾರೆ. ಕವಿರಾಜ ಮಾರ್ಗಕ್ಕೆ ಸಂಬಂಧಿಸಿದ ಹಸ್ತಪ್ರತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಅವುಗಳಲ್ಲಿಯ ಪಾಠಾಂತರಗಳನ್ನು (Textual Variations) ಗುರುತಿಸಿ, ಅತ್ಯಂತ ಸಮರ್ಪಕವಾದ ಪಠ್ಯವನ್ನು ಸಿದ್ಧಪಡಿಸಿದರು. ವೈಜ್ಞಾನಿಕ ಗ್ರಂಥಸಂಪಾದನೆಯ ನೆಲೆಗಟ್ಟಿನಲ್ಲಿ ಸಂಪಾದಿಸಿದರು. ಇದು ವಿದ್ವಾಂಸರಿಗೆ ಮತ್ತು ವಿದ್ಯಾರ್ಥಿಗಳಿಗೆ ಕವಿರಾಜಮಾರ್ಗವನ್ನು ಅರ್ಥಮಾಡಿಕೊಳ್ಳಲು ದಾರಿದೀಪವಾಯಿತು.

ಕವಿರಾಜಮಾರ್ಗದ ಕರ್ತೃ ಯಾರು? ಎಂಬ ಚರ್ಚೆ ದೀರ್ಘಕಾಲ ದಿಂದಲೂ ನಡೆಯುತ್ತಿತ್ತು. ಅದು ಅಮೋಘವರ್ಷ ನೃಪತುಂಗನೋ ಅಥವಾ ಆತನ ಆಸ್ಥಾನ ಕವಿ ಶ್ರೀವಿಜಯನೋ ಎಂಬ ಗೊಂದಲಕ್ಕೆ ಎಂ.ವಿ.ಸೀ. ಅವರು ತಮ್ಮ ಬರೆವಣಿಗೆಗಳ ಮೂಲಕ ತರ್ಕಬದ್ಧ ವಿವರಣೆ ನೀಡಿದ್ದಾರೆ. ಲಕ್ಷಣಕಾರ ಮತ್ತು ಕವಿಯ ನಡುವಿನ ವ್ಯತ್ಯಾಸವನ್ನು ಇವರು ಗುರುತಿಸಲು ಪ್ರಯತ್ನಿಸಿದ್ದಾರೆ.

ಕವಿರಾಜಮಾರ್ಗದಲ್ಲಿ ಬರುವ "ಕಾವೇರಿಯಿಂದಮಾ ಗೋದಾವರಿವರ ಮಿರ್ದ..." ಎಂಬ ಕನ್ನಡನಾಡಿನ ಗಡಿರೇಖೆಯ ಬಗ್ಗೆ ಎಂ.ವಿ.ಸಿ ವಿಶೇಷವಾಗಿ ಬರೆದಿದ್ದಾರೆ. ಆ ಕಾಲದ ಕನ್ನಡ ಭಾಷೆಯ ಹರವು, ಉಪಭಾಷೆಗಳು ಮತ್ತು ಜನಸಾಮಾನ್ಯರ "ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್" ಎನ್ನುವ ಕಾವ್ಯಪ್ರಜ್ಞೆಯನ್ನು ಇವರು ಆಧುನಿಕ ವಿಮರ್ಶಾ ದೃಷ್ಟಿಕೋನದಿಂದ ವಿಶ್ಲೇಷಿಸಿದ್ದಾರೆ. ಕವಿರಾಜಮಾರ್ಗವು ಒಂದು ಅಲಂಕಾರ ಗ್ರಂಥ. ಇದರಲ್ಲಿಯ ಕಾವ್ಯ ಲಕ್ಷಣಗಳು, ದೋಷಗಳು ಮತ್ತು ಅಲಂಕಾರಗಳನ್ನು ಎಂ.ವಿ.ಸೀ. ಅವರು ಭಾರತೀಯ ಕಾವ್ಯಮೀಮಾಂಸೆಯ ಹಿನ್ನೆಲೆಯಲ್ಲಿ ವಿವರಿಸಿದ್ದಾರೆ. ಸಂಸ್ಕೃತದ ಭಾಮಹ, ದಂಡಿಯರ ಪ್ರಭಾವವಿದ್ದರೂ ಕನ್ನಡದ ದೇಶೀ ಸೊಗಡು ಈ ಗ್ರಂಥದಲ್ಲಿ

ಹೇಗೆ ಉಳಿದುಕೊಂಡಿದೆ ಎಂಬುದನ್ನು ಇವರು ಎತ್ತಿ ತೋರಿಸಿದ್ದಾರೆ. ಹಸ್ತಪ್ರತಿಶಾಸ್ತ್ರದಲ್ಲಿ ಪರಿಣತರಾಗಿದ್ದ ಎಂ.ವಿ.ಸೀ. ಅವರು, ಕವಿರಾಜಮಾರ್ಗದ ಹಳೆಯ ತಾಳೆಗರಿಗಳ ಲೇಖನದೋಷಗಳನ್ನು ತಿದ್ದಿ, ಮೂಲ ಕವಿ ಏನು ಹೇಳಿರಬಹುದು ಎಂಬುದನ್ನು ತರ್ಕಬದ್ಧವಾಗಿ ಮಂಡಿಸಿದ್ದಾರೆ. ಇವರ ಸಂಪಾದಿತ ಕೃತಿಯು ಇಂದಿಗೂ 'ಕವಿರಾಜಮಾರ್ಗ'ದ ಅಧಿಕೃತ ಆವೃತ್ತಿಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟಿದೆ.

'ಉದಯಾದಿತ್ಯಾಲಂಕಾರ'(೧೯೭೦) ಕನ್ನಡದ ಚಿಕ್ಕದಾದ ಆದರೆ ಮಹತ್ತ್ವದ ಅಲಂಕಾರ ಗ್ರಂಥ. ಇದನ್ನು ಎಂ.ವಿ.ಸೀ. ಅವರು ಅತ್ಯಂತ ವೈಜ್ಞಾನಿಕವಾಗಿ ಸಂಪಾದಿಸಿದ್ದಾರೆ. ಇದು ಸಂಸ್ಕೃತದ ದಂಡಿಯ 'ಕಾವ್ಯಾದರ್ಶ'ವನ್ನು ಅನುಸರಿಸಿ ರಚಿತವಾದರೂ ಕನ್ನಡದ ದೇಶೀ ಕಾವ್ಯ ಲಕ್ಷಣಗಳಿಗೆ ಹೆಚ್ಚಿನ ಒತ್ತು ನೀಡುತ್ತದೆ. ಈ ಗ್ರಂಥದ ಲಭ್ಯವಿದ್ದ ಅತ್ಯಂತ ವಿರಳವಾದ ಹಸ್ತಪ್ರತಿಗಳನ್ನು ಸಂಗ್ರಹಿಸಿ, ಅವುಗಳಲ್ಲಿಯ ಪದ್ಯಗಳನ್ನು ವಿಶ್ಲೇಷಿಸಿ ಅರ್ಥಸಹಿತವಾಗಿ ಪ್ರಕಟಿಸಿದರು. ಲಕ್ಷಣಗ್ರಂಥಗಳನ್ನು ಓದುಗರಿಗೆ ಸರಳವಾಗಿ ತಲಪಿಸುವಲ್ಲಿ ಇವರು ಯಶಸ್ವಿಯಾದರು. ಈ ಗ್ರಂಥದ ಕರ್ತೃ ಉದಯಾದಿತ್ಯನು ಒಬ್ಬ ಚಾಲುಕ್ಯ ರಾಜಕುಮಾರನೆಂದು ಇತಿಹಾಸ ಮತ್ತು ಶಾಸನಗಳ ಆಧಾರದ ಮೇಲೆ ಎಂ.ವಿ.ಸಿ ಸಾದರಪಡಿಸಿದರು.

ಇವರು ಕನ್ನಡದ ಹಸ್ತಪ್ರತಿ ಶಾಸ್ತ್ರದ ಪಿತಾಮಹರಲ್ಲಿ ಒಬ್ಬರೆಂದು ಪರಿಗಣಿಸಲ್ಪಡುತ್ತಾರೆ. ತಾಳೆಗರಿಗಳಲ್ಲಿ ಅಡಗಿದ್ದ ಜ್ಞಾನವನ್ನು ಆಧುನಿಕ ಜಗತ್ತಿಗೆ ತರುವಲ್ಲಿ ಇವರು ತಾಂತ್ರಿಕ ಮತ್ತು ವೈಜ್ಞಾನಿಕ ಹಾದಿಯನ್ನು ಅನುಸರಿಸಿದರು. ಇತರ ವಿದ್ವಾಂಸರ ಜೊತೆಗೂಡಿ 'ಹಸ್ತಪ್ರತಿ ಶಾಸ್ತ್ರ' ಎಂಬ ಬೃಹತ್ ಗ್ರಂಥವನ್ನು ಸಂಪಾದಿಸಿದರು. ಇದು ಹಸ್ತಪ್ರತಿಗಳನ್ನು ಹೇಗೆ ಸಂಗ್ರಹಿಸಬೇಕು, ಸಂರಕ್ಷಿಸಬೇಕು ಮತ್ತು ಅವುಗಳಿಂದ ಮೂಲ ಪಾಠವನ್ನು ಹೇಗೆ ಸಿದ್ಧಪಡಿಸಬೇಕು ಎಂಬುದನ್ನು ತಿಳಿಸುವ ಕೈಪಿಡಿಯಂತಿದೆ. ಹಳೆಯ ಕನ್ನಡದ ಲಿಪಿಗಳು (ಹಳಗನ್ನಡ, ನಡುಗನ್ನಡ) ಕಾಲಕಾಲಕ್ಕೆ ಹೇಗೆ ಬದಲಾದವು ಎಂಬುದನ್ನು ಇವರು ಸೂಕ್ಷ್ಮವಾಗಿ ಅಧ್ಯಯನ ಮಾಡಿದ್ದರು. ಇದು ಹಸ್ತಪ್ರತಿಗಳ ಕಾಲನಿರ್ಣಯ ಮಾಡುವಲ್ಲಿ ಅವರಿಗೆ ಸಹಾಯ ಮಾಡಿತು. ಹಸ್ತಪ್ರತಿಗಳಲ್ಲಿ ಲಿಪಿಕಾರರಿಂದ ಉಂಟಾದ ತಪ್ಪುಗಳನ್ನು (Scribal

Errors) ಗುರುತಿಸಿ, ಕವಿ ಬರೆದಿದ್ದ ಮೂಲರೂಪ ಯಾವುದು ಎಂಬು ದನ್ನು ತರ್ಕಬದ್ಧವಾಗಿ ಮಂಡಿಸುವ ಕಲೆ ಇವರಿಗೆ ಸಿದ್ಧಿಸಿತ್ತು.

ಹಸ್ತಪ್ರತಿಗಳ ಸಂರಕ್ಷಣೆಗಾಗಿ ಬೆಂಗಳೂರಿನಲ್ಲಿ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನವನ್ನು ಬಲಪಡಿಸುವಲ್ಲಿ ಎಂ.ವಿ.ಸಿ ಅವರ ಪಾತ್ರ ದೊಡ್ಡದು. ಇಂದು ಅಲ್ಲಿ ಸಾವಿರಾರು ಅಪರೂಪದ ತಾಳೆಗರಿಗಳ ಸಂಗ್ರಹವಿದ್ದು, ಅದಕ್ಕೆ ಅಡಿಪಾಯ ಹಾಕಿದವರು ಸೀತಾರಾಮಯ್ಯನವರು. ಅವರು ಹಸ್ತಪ್ರತಿಶಾಸ್ತ್ರದ ಬಗ್ಗೆ ಅನೇಕ ತರಬೇತಿ ಶಿಬಿರಗಳನ್ನು ಮತ್ತು ಕಮ್ಮಟಗಳನ್ನು ನಡೆಸಿ ಹೊಸ ತಲೆಮಾರಿನ ಸಂಶೋಧಕರನ್ನು ಬೆಳೆಸಿದರು. ಎಂ.ವಿ. ಸೀತಾರಾಮಯ್ಯನವರ ವಿಮರ್ಶಾ ಪದ್ಧತಿಯು ಕೇವಲ ಗುಣ–ದೋಷಗಳನ್ನು ಎಣಿಸುವುದಕ್ಕೆ ಸೀಮಿತವಾಗಿರಲಿಲ್ಲ. ಅವರ ವಿಮರ್ಶೆಯಲ್ಲಿ ಸಂಶೋಧನೆ, ವಿಶ್ಲೇಷಣೆ ಮತ್ತು ಸೌಂದರ್ಯ ಪ್ರಜ್ಞೆ ಎನ್ನುವ ಮೂರು ಎಳೆಗಳು ಸದಾ ಜೊತೆಯಾಗಿರುತ್ತಿದ್ದವು.

ಸರ್ವಜ್ಞನ ವಚನಗಳು ಜನಪದರ ಬಾಯಲ್ಲಿ ಅಚ್ಚೊತ್ತಿ ಹೋಗಿದ್ದರಿಂದ ಅವುಗಳಲ್ಲಿ ಸಾಕಷ್ಟು ಸೇರ್ಪಡೆಗಳು (ಪ್ರಕ್ಷೇಪಗಳು) ಆಗಿದ್ದವು. ಎಂ.ವಿ.ಸೀ. ಅವರು ಲಿಖಿತ ಪ್ರತಿಗಳನ್ನು ಆಧರಿಸಿ ಸರ್ವಜ್ಞನ ಅಪ್ಪಟ ವಚನಗಳನ್ನು ಗುರುತಿಸಲು ಪ್ರಯತ್ನಿಸಿದರು. ಕೇವಲ ನೀತಿಬೋಧನೆಯಾಗಿ ನೋಡದೆ, ಸರ್ವಜ್ಞನ ವಚನಗಳಲ್ಲಿಯ ಸಮಾಜೋ–ಸಾಂಸ್ಕೃತಿಕ ಅಂಶಗಳನ್ನು ಅವರು ವಿಶ್ಲೇಷಿಸಿದರು.

ಕುಮಾರವ್ಯಾಸನ 'ಕರ್ಣಾಟ ಭಾರತ ಕಥಾಮಂಜರಿ' ಮತ್ತು ಲಕ್ಷ್ಮೀಶನ 'ಜೈಮಿನಿ ಭಾರತ' ಗ್ರಂಥಗಳ ಬಗ್ಗೆ ಇವರಿಗೆ ಅಪಾರ ಗೌರವವಿತ್ತು. ಕುಮಾರವ್ಯಾಸ ಭಾರತದ ಬೃಹತ್ ವ್ಯಾಪ್ತಿಯನ್ನು ಗಮನಿಸಿ, ಸಾಮಾನ್ಯ ಓದುಗರಿಗೆ ಅದರ ತಿರುಳು ತಿಳಿಯುವಂತೆ 'ಕುಮಾರವ್ಯಾಸ ಭಾರತ ಸಂಗ್ರಹ'ವನ್ನು ಮಾಡಿಕೊಟ್ಟರು. ಇದು ಸಂಶೋಧಕರಿಗಿಂತ ಓದುಗರನ್ನು ದೃಷ್ಟಿ ಯಲ್ಲಿಟ್ಟುಕೊಂಡು ಮಾಡಿದ ಕೆಲಸ. ಲಕ್ಷ್ಮೀಶನ ಪದಪ್ರಯೋಗ ಮತ್ತು ಕುಮಾರವ್ಯಾಸನ ರೂಪಕಗಳ ಬಗ್ಗೆ ಇವರು ಬರೆದಿರುವ ಲೇಖನಗಳು ಇಂದಿಗೂ ವಿಮರ್ಶಾಲೋಕದಲ್ಲಿ ಅತ್ಯಂತ ಜನಪ್ರಿಯ ವಾಗಿವೆ.

'ಭಾರತೀಯ ಕಾವ್ಯಮೀಮಾಂಸೆಗೆ ಕನ್ನಡ ಕವಿಗಳ ಕೊಡುಗೆ'(೧೯೭೦) ಒಂದು ವಿಶಿಷ್ಟಕೃತಿ. ಕನ್ನಡದಲ್ಲಿ ಕವಿರಾಜ ಮಾರ್ಗದಂತಹ ಮಹತ್ತ್ವದ

ಕೃತಿಗಳಿರುವುದರ ಜತೆಗೆ ಕನ್ನಡ ಕವಿಗಳು ಕಾವ್ಯಮೀಮಾಂಸೆಯ ಬಗೆಗೆ ತಮ್ಮವೇ ಆದ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ. ಇದನ್ನು ಈ ಪುಸ್ತಕದಲ್ಲಿ ಎಂ.ವಿ.ಸೀ. ಸ್ಪಷ್ಟಪಡಿಸಿದ್ದಾರೆ. 'ಕನ್ನಡ ಸಾಹಿತ್ಯದಲ್ಲಿ ಶಾಂತರಸ'(೧೯೭೦) ಅವರ ಇನ್ನೊಂದು ವಿಮರ್ಶಾಕೃತಿ.

ಕನ್ನಡಕ್ಕೆ ಇರುವ ಇನ್ನೊಂದು ವಿಶಿಷ್ಟತೆ ಅದರ ಶಾಸ್ತ್ರ ಸಾಹಿತ್ಯ. ಕನ್ನಡದಲ್ಲಿರುವ ನೂರಾರು ಶಾಸ್ತ್ರಗ್ರಂಥಗಳು, ಅವುಗಳ ವೈವಿಧ್ಯ ಬೆರಗನ್ನು ಉಂಟುಮಾಡುತ್ತದೆ. ಅಶ್ವಶಾಸ್ತ್ರ, ಗಜಶಾಸ್ತ್ರ, ಸೂಪಶಾಸ್ತ್ರ, ಕಾಮಶಾಸ್ತ್ರ, ಕಾವ್ಯ ಮೀಮಾಂಸೆ, ವ್ಯಾಕರಣ, ಛಂದಸ್ಸು, ನಿಘಂಟುಗಳು ಇತ್ಯಾದಿ ಕನ್ನಡ ಶಾಸ್ತ್ರ ಸಾಹಿತ್ಯಕ್ಕೆ ಮೆರಗನ್ನು ನೀಡಿವೆ. ಈ ವಿಷಯವನ್ನು ಸೀತಾರಾಮಯ್ಯನವರು ತಮ್ಮ 'ಶಾಸ್ತ್ರ ಸಾಹಿತ್ಯ' ಪುಸ್ತಕದಲ್ಲಿ ವಿವರಿಸಿದ್ದಾರೆ(೧೯೭೫).

ಎಂ.ವಿ.ಸೀ. ಅವರ ಮತ್ತೊಂದು ವಿದ್ವತ್ಪೂರ್ಣ ಕೃತಿ 'ಪ್ರಾಚೀನ ಕನ್ನಡ ವ್ಯಾಕರಣಗಳು'(೧೯೮೦). ಕನ್ನಡಕ್ಕೆ ಸುದೀರ್ಘವಾದ ವ್ಯಾಕರಣ ಪರಂಪರೆ ಇದೆ. 'ಶಬ್ದಮಣಿದರ್ಪಣ'ದಂತಹ ವ್ಯಾಕರಣ ಗ್ರಂಥಗಳು ಇಂದಿಗೂ ಪಠ್ಯಗ್ರಂಥಗಳಾಗಿ ಕನ್ನಡದ ವಿಶೇಷ. ಇಂತಹ ವಿಶಿಷ್ಟತೆ ಇರುವ ಪರಂಪರೆಯನ್ನು ಈ ಪುಸ್ತಕದಲ್ಲಿ ಸೀತಾರಾಮಯ್ಯನವರು ನಿರೂಪಿಸಿದ್ದಾರೆ.

ಯಾವುದೇ ಕೃತಿಯನ್ನು ವಿಮರ್ಶಿಸುವಾಗ ಅವರು ಪೂರ್ವಗ್ರಹಪೀಡಿತ ರಾಗುತ್ತಿರಲಿಲ್ಲ. ಕೃತಿಯ ಚಾರಿತ್ರಿಕ ಹಿನ್ನೆಲೆ ಮತ್ತು ಕವಿಯ ಕಾಲಮಾನವನ್ನು ಗಮನಿಸಿ ವಸ್ತುನಿಷ್ಠವಾಗಿ ವಿಮರ್ಶಿಸುತ್ತಿದ್ದರು. ಹಳೆಯ ಸಾಹಿತ್ಯವನ್ನು ಹೊಸ ಗನ್ನಡದ ಕಣ್ಣಿನಿಂದ ನೋಡುವುದು ಮತ್ತು ಹೊಸ ಸಾಹಿತ್ಯದಲ್ಲಿಯ ಹಳೆಯ ಬೇರುಗಳನ್ನು ಹುಡುಕುವ ಸಮನ್ವಯ ದೃಷ್ಟಿ ಇವರ ವೈಶಿಷ್ಟ್ಯವಾಗಿತ್ತು. ಎಷ್ಟೇ ಕಠಿಣವಾದ ವ್ಯಾಕರಣ ಅಥವಾ ಅಲಂಕಾರ ಶಾಸ್ತ್ರದ ವಿಷಯವಿದ್ದರೂ ಅದನ್ನು ಓದುಗರಿಗೆ ಸರಳವಾದ ಕನ್ನಡದಲ್ಲಿ ಮನವರಿಕೆ ಮಾಡಿಕೊಡುವ ಶೈಲಿ ಅವರಿಗಿತ್ತು.

ಹೀಗೆ ಎಂ.ವಿ.ಸೀ. ಅವರು 'ರಾಘವ' ಎಂಬ ಹೆಸರಿನಲ್ಲಿ ಕಾವ್ಯ ಬರೆಯುವಾಗ ಕವಿಯಾಗುತ್ತಿದ್ದರು, ಆದರೆ ಸೀತಾರಾಮಯ್ಯನಾಗಿ ವಿಮರ್ಶೆ ಬರೆಯುವಾಗ ಕಟ್ಟುನಿಟ್ಟಿನ ಸಂಶೋಧಕರಾಗುತ್ತಿದ್ದರು. ಒಬ್ಬ ಸಂಶೋಧಕನಿಗೆ ಇರಬೇಕಾದ ನಿಖರತೆ ಮತ್ತು ಒಬ್ಬ ಕವಿಗೆ ಇರಬೇಕಾದ ಕಲ್ಪನಾಶಕ್ತಿ ಎರಡೂ

ಅವರಲ್ಲಿ ಸಮಾನವಾಗಿತ್ತು. ಹೀಗೆ 'ಕವಿ–ಸಂಶೋಧಕ'ರಾಗಿ ಕನ್ನಡ ಸಾಹಿತ್ಯಕ್ಕೆ ಎಂ.ವಿ. ಸೀತಾರಾಮಯ್ಯ ಅವರ ಕೊಡುಗೆ ಅಪಾರವಾದುದು.

ಸಾಹಿತ್ಯ, ಚಿತ್ರಕಲೆ ಮತ್ತು ಸಂಗೀತ—ಹೀಗೆ ತ್ರಿವೇಣೀಸಂಗಮದಂತಿದ್ದ ಎಂ.ವಿ. ಸೀತಾರಾಮಯ್ಯನವರು ೧೯೯೦ ಮಾರ್ಚ್ ೧೨ರಂದು ಇಹಲೋಕ ತ್ಯಜಿಸಿದರು. ಹಸ್ತಪ್ರತಿಶಾಸ್ತ್ರ ಮತ್ತು ಹಳಗನ್ನಡ ವ್ಯಾಕರಣದ ಅಧ್ಯಯನಕ್ಕೆ ಹೊಸ ಆಯಾಮ ನೀಡಿದ ಇವರ ಹೆಸರಿನಲ್ಲಿ ಬೆಂಗಳೂರಿನ 'ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ'ವು ಇಂದಿಗೂ ಅನೇಕ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುತ್ತಿದೆ. ಕನ್ನಡನಾಡು ಕಂಡ ಒಬ್ಬ ವಿದ್ವಾಂಸ ಮತ್ತು ಕ್ರಿಯಾಶೀಲ ಕಲಾವಿದರಾಗಿ ಎಂ.ವಿ. ಸೀತಾರಾಮಯ್ಯನವರು ಸದಾ ಸ್ಮರಣೀಯರು.

❐ ❐ ❐

ಸಂ.ಶಿ. ಭೂಸನೂರ ಮಠ

(೧೯೧೦-೧೯೯೧)

ಬಿ. ವೆಂಕಟರಾಮಣ್ಣ

ಭೂಸನೂರಮಠ ಕನ್ನಡದ ಪ್ರಸಿದ್ಧ ವಿದ್ವಾಂಸರು. ಇವರು ಹುಟ್ಟಿದ್ದು ಗದಗ ಜಿಲ್ಲೆಯ ರೋಣ ತಾಲ್ಲೂಕಿನ ನಿಡಗುಂದಿಯಲ್ಲಿ ೧೯೧೦ ನವೆಂಬರ್ ೭ರಂದು. ತಂದೆ ಶಿವಮೂರ್ತಯ್ಯ, ತಾಯಿ ರಾಚಮ್ಮ. ಆರಂಭದ ಶಿಕ್ಷಣವನ್ನು ನಿಡಗುಂದಿ, ಗದಗ ಮತ್ತು ಹುಬ್ಬಳ್ಳಿಗಳಲ್ಲಿ ಮುಗಿಸಿ ೧೯೩೧ರಲ್ಲಿ ಮೆಟ್ರಿಕ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಅನಂತರ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ೧೯೩೫ರಲ್ಲಿ ವಿದ್ಯಾರಣ್ಯ ಬಹುಮಾನದೊಂದಿಗೆ ಬಿ.ಎ.(ಆನರ್ಸ್) ಪದವಿ ಯನ್ನು ಗಳಿಸಿದರು. ಅನಂತರ ಮುಂಬಯಿ ವಿಶ್ವವಿದ್ಯಾಲಯದಲ್ಲಿ ಎಂ.ಎ. ಕನ್ನಡ ಪದವಿಯನ್ನು ೧೯೩೭ರಲ್ಲಿ ವಿಶ್ವವಿದ್ಯಾ ಲಯಕ್ಕೆ ಮೊದಲಿಗರಾಗಿ ತೇರ್ಗ ಡೆಯಾದರು.

೧೯೩೯-೪೨ರ ತನಕ ಕರ್ನಾಟಕ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸ್ವಲ್ಪಕಾಲ ಕೆಲಸ ಮಾಡಿದರು. ಆನಂತರ ಬೆಳಗಾವಿಯ ಲಿಂಗರಾಜ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದರು. ಮುಂದೆ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠದಲ್ಲಿ ೧೯೬೬ ರಿಂದ ೧೯೭೧ ರವರೆಗೆ ವೀರಶೈವ ಸಾಹಿತ್ಯ ಮತ್ತು ಧರ್ಮದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ೧೯೭೧ ರಿಂದ ೧೯೭೬ರವರೆಗೆ ಯುಜಿಸಿ ಪ್ರಾಧ್ಯಾಪಕರಾಗಿಯೂ ದುಡಿದರು.

ಗೂಳೂರು ಸಿದ್ಧವೀರಣ್ಣೊಡೆಯರು ಅಣಿಗೊಳಿಸಿದ 'ಶೂನ್ಯಸಂಪಾದನೆ' ಎಂಬ ಹೆಸರಿನ ವೀರಶೈವ ಶರಣರ ತತ್ತ್ವಾನುಭವಬೋಧಕ ಗ್ರಂಥವನ್ನು ಭೂಸನೂರುಮಠ ಅವರು ಆಧುನಿಕ ಸಂಶೋಧನ ದೃಷ್ಟಿಯಿಂದ ಸಂಶೋಧಿಸಿ ಮೊದಲ ಬಾರಿಗೆ ಪ್ರಕಟಿಸಿದ್ದಾರೆ. ೧೦೦೦ ಪುಟಗಳನ್ನೊಳಗೊಂಡ ಬೃಹತ್ ಗ್ರಂಥವಿದು. ಕನ್ನಡ ಪ್ರಾಧ್ಯಾಪಕರಾಗಿದ್ದ ಇವರು ಸಂಸ್ಕೃತ, ಕನ್ನಡ, ಇಂಗ್ಲಿಷ್

ಸಾಹಿತ್ಯವನ್ನು ಸ್ವಯಂಪ್ರೇರಣೆಯಿಂದಲೇ ಆಳವಾಗಿ ಅಭ್ಯಸಿಸಿ ಪ್ರಾವೀಣ್ಯವನ್ನು ಪಡೆದವರು. ಪರಂಪರೆಯಿಂದ ಬಂದ ಭಾರತದ ಸನಾತನಜ್ಞಾನ, ಆಧುನಿಕ ಭೌತವಿಜ್ಞಾನ ಎರಡನ್ನೂ ಆಸ್ಥೆಯಿಂದ ಅಭ್ಯಸಿಸಿದ ಪಂಡಿತರು. ವೀರಶೈವ ಕಾವ್ಯಗಳು ಹಾಗೂ ವಚನಗಳನ್ನು ಹೊಸಕಾಲದ ರೀತಿಯನ್ನನುಸರಿಸಿ ಸಂಪಾದನೆ ಮಾಡಿ ಪ್ರಕಟಿಸುತ್ತಾ ಬಂದವರು. ಇವರ ಬಹುಕಾಲದ ಅಭ್ಯಾಸ, ಪರಿಪಕ್ವ ಅನುಭವಗಳ ಫಲವಾಗಿ ಈ 'ಶೂನ್ಯಸಂಪಾದನೆಯ ಪರಾಮರ್ಶೆ' ಎಂಬ ಬೃಹತ್ ಕೃತಿ ಹೊರಹೊಮ್ಮಿದೆ.

ಭೂಸನೂರಮಠರು ಶೂನ್ಯಸಂಪಾದನೆಯ ಪರಾಮರ್ಶೆಯನ್ನು ತಿಳಿಗನ್ನಡ ನುಡಿಯಲ್ಲಿ ಸುಲಭವಾಗಿ ಗ್ರಹಿಕೆಗೆ ನಿಲುಕುವ ಶೈಲಿಯಲ್ಲಿ ಬರೆದಿರುವುದರಿಂದ ಬಹುಜನರಿಗೆ ಸುಲಭವೇದ್ಯವೆನಿಸಿದೆ. ಮೂಲಗ್ರಂಥದಲ್ಲಿಯ ವಿಷಯಗಳು ಹೆಚ್ಚು ಜನರಿಗೆ ನಿಚ್ಚಳವಾಗಿ ತಿಳಿಯಬೇಕೆಂಬ ಬಯಕೆಯಿಂದ ಅವುಗಳ ರಹಸ್ಯವನ್ನು ವಿಶದೀಕರಿಸುವುದಕ್ಕೆಂದು ಈ ವಿಶಿಷ್ಟ ಹೊತ್ತಿಗೆಯನ್ನು ಬರೆದಿದ್ದಾರೆ. ಮೂಲ ಗ್ರಂಥಕಾರನು ಶೂನ್ಯಾನುಭವ ಸಿದ್ಧಾಂತ ಸಿದ್ಧಿಗಾಗಿ ಅನೇಕ ಶಿವಶರಣರ ವಚನಗಳನ್ನು ಬಳಸಿಕೊಂಡಿದ್ದಾರೆ. ಇವೆಲ್ಲ ವಚನಗಳು ತತ್ವಸೂತ್ರಗಳಂತಿವೆ. ಕೃತಿಯ ಪ್ರಾರಂಭದಲ್ಲಿ 'ಶೂನ್ಯ', 'ತತ್ವ', 'ವಿಶ್ವಪ್ರಪಂಚಸ್ಥಿತಿ', 'ವಿಜ್ಞಾನ', 'ತತ್ವಜ್ಞಾನ'ಗಳ ತೌಲನಿಕ ಪರಿಶೀಲನೆಯಲ್ಲಿ ಇನ್ನೆಲ್ಲಿಯೂ ಕಾಣದಷ್ಟು ವಿವರ-ವಿರಳವಾಗಿ ಆಧಿಕಾರಿಕವಾಗಿ, ಆಧುನಿಕ ವಿಚಾರವಾದಿಯೂ ತಲೆದೂಗುವಂತೆ ನೂರಾರು ಆಧಾರ ಹೇಳಿಕೆಗಳೊಡನೆ ಪ್ರಸ್ತಾಪಿಸಿದ್ದಾರೆ.

ಭೂಸನೂರಮಠರಿಗೆ 'ಶೂನ್ಯಸಂಪಾದನೆ' ಒಂದು ಕಮನೀಯ ಕಾವ್ಯವಾಗಿ ಯಾಗಲೀ ಅಥವಾ ಒಂದು ಧರ್ಮ-ದರ್ಶನಗಳನ್ನು ಎತ್ತಿಹಿಡಿಯುವ ಪಠ್ಯಪುಸ್ತಕ ವಾಗಿಯಾಗಲೀ ಗೋಚರಿಸಲಿಲ್ಲ. ಮಾನವನಲ್ಲಿ ವಿಶ್ವಮಾನವಪ್ರಜ್ಞೆಯನ್ನು ಯುಗಯುಗಕ್ಕೂ ಜಾಗೃತಗೊಳಿಸಬಲ್ಲ ತಾತ್ತ್ವಿಕ ಅಧ್ಯಯನವಾಗಿ ಕಂಡಿದೆ. ಕೇವಲ ಅನುಭವವನ್ನೇ ತನ್ನ ಮೂಲದ್ರವ್ಯ ವನ್ನಾಗಿಸಿಕೊಂಡ ಶೂನ್ಯಸಂಪಾದನೆಗೆ ವೈಜ್ಞಾನಿಕ ವಿಶ್ಲೇಷಣೆ ಬೇಕಾಗಿತ್ತು. ಅದರ ಮೂಲನೆಲೆಯನ್ನು ಇಲ್ಲಿ ಗುರುತಿಸಿದ್ದಾರೆ.

'ಭವ್ಯಮಾನವ' ಕೃತಿಯ ವಸ್ತು ೧೨ನೇ ಶತಮಾನದಲ್ಲಿದ್ದ ಅಕ್ಕನ ಅಧ್ಯಾತ್ಮ ಜೀವನ. ಕವಿ ಕಥೆಯನ್ನು ಇತಿಹಾಸದಿಂದಲೇ ಆಯ್ದುಕೊಂಡಿದ್ದಾರೆ. ಅಕ್ಕನ

ಜನಪ್ರಿಯ ಕಥೆಗಳು ಗುರುಚೆನ್ನಮಲ್ಲ ಮತ್ತು ಶಿಷ್ಯ ಗಿರಿಮಲ್ಲರ ಕಥಾನಕಗಳನ್ನು ಜೋಡಿಸಿದ್ದಾರೆ. 'ಸಮರಸ' ಎಂಬ ಶೀರ್ಷಿಕೆಯ ನೀಳ್ಗವನ ೨೦ ವರ್ಷಗಳಾದ ಮೇಲೆ ಭವ್ಯಮಾನವ ಮಹಾಕಾವ್ಯಕ್ಕೆ ಪೀಠಿಕಾ ಸಂಧಿಯಾಯಿತು. 'ಕಲ್ಯಾಣ ಕಾಂಡ'ವೆಂಬ ಅಭಿಧಾನ ತಳೆದು ಅದು ಮುಂದೆ ಆರು ಕಾಂಡಗಳ ಸುಮಾರು ೯೦೦ ಪುಟಗಳ ಬೃಹತ್ ಕಾವ್ಯರೂಪ ಪಡೆಯಿತು. ಇದು ಹೊಸಗನ್ನಡದ ನವಾಭಿಜಾತ ಕಾವ್ಯ. ಈ ಕಾವ್ಯದ ಭವ್ಯಮಾನವ ಕಲ್ಪನೆ ಅದ್ಭುತ ವಾದುದು. 'ಮಾನವತೆ' ಅದರ ಅಡಿಗಲ್ಲು. ಆ ಭವ್ಯಮೌಲ್ಯ ಸದಾ ಬೆಳಗಬೇಕು. ಜಾತಿ ಎಂಬ ಸೂತಕ ಸ್ವಾರ್ಥವೆಂಬ ಮೈಲಿಗೆಗಳನ್ನು ಕಳಚಿ ದೂರ ಬಿಸಾಡಬೇಕು. ದೇಶ, ಭಾಷೆ, ಮತ, ಮತವನ್ನು ಬೆಂಬಲಿಸುವ ವಿಚಿತ್ರ ದೈವನಿರ್ಮಾಣ ಇವೆಲ್ಲವುಗಳಿಗೂ ಅತೀತವಾಗಬೇಕು. ಸಂಕುಚತತೆಯ ಸಂಕೋಲೆಯಲ್ಲಿ ಸ್ಥಗಿತವಾಗಬಾರದು. ಅವನು ವಿಶ್ವಾತ್ಮನಾಗಬೇಕು, ವಿಶ್ವಮಾನವನೆನಿಸಬೇಕು.

ಸಂಪಾದಿತ ಕೃತಿಗಳು: ಘನಮಠದ ಶಿವಯೋಗಿಗಳು ರಚಿಸಿದ ಹತ್ತಾರು ತತ್ವಪದಗಳ ಸುಂದರ ಸಂಗ್ರಹ 'ಭಕ್ತಿ ಸುಧಾಸಾರ'. ಶಿವಯೋಗಿಗಳ ಸಂಗೀತ ಪ್ರಜ್ಞೆಗೆ ಇದು ನಿದರ್ಶನವಾಗಿದೆ. ಇದನ್ನು ಭಕ್ತಿ ಸುಧಾಸಾರ ಎನ್ನುವುದಕ್ಕಿಂತ ಘನಮಠಾರ್ಯರ ತತ್ತ್ವಪದಗಳು ಎನ್ನುವುದು ಉಚಿತವೆಂದಿದ್ದಾರೆ ಭೂಸ ನೂರುಮಠ.

'ಗುರುರಾಜ ಚಾರಿತ್ರ್ಯ'(ಸು.೧೬೫೦) ಒಂದು ಧಾರ್ಮಿಕ ಗ್ರಂಥ. ಇದನ್ನು ವೀರಶೈವ ಇತಿಹಾಸ ಗ್ರಂಥವೆಂದು ಕರೆಯಬಹುದು. ೧೨ನೆಯ ಶತಮಾನದ ವೀರಶೈವ, ೧೫ನೇ ವಿರಕ್ತ ಪಂಥ, ಅನಂತರದ ಬೆಳೆವಣಿಗೆ ಮೊದಲಾದವನ್ನು ಕುರಿತು ಸಿದ್ಧ ನಂಜೇಶ ಬರೆದಿರುವ ಇದನ್ನು ಭೂಸನೂರಮಠರು ಸಂಪಾದಿಸಿ, ಇದಕ್ಕೆ ೯೦ ಪುಟಗಳ ಪ್ರಸ್ತಾವನೆಯನ್ನು ಬರೆದಿದ್ದಾರೆ.

ಕವಿ ಗೌರಾಂಕನ 'ಮೋಳಿಗಯ್ಯನ ಪುರಾಣ'(ಕ್ರಿ.ಶ.೧೫೨೫) ಎಂಬ ಸಾಂಗತ್ಯ ಕೃತಿಗೆ ವಿಸ್ತೃತ ಪ್ರಸ್ತಾವನೆ ಬರೆಯುತ್ತಾ ಸಾಂಗತ್ಯ ಛಂದಸ್ಸಿನ ಅನೇಕ ಮಗ್ಗಲುಗಳನ್ನು ಪರಿಚಯಿಸಿದ್ದಾರೆ. ಉತ್ತಂಗಿಯವರ ಸಹಸಂಪಾದಕತ್ವದಲ್ಲಿ ಮೋಳಿಗೆ ಮಾರಯ್ಯ ಮತ್ತು ರಾಣಿ ಮಹಾದೇವಿಯವರ ವಚನಗಳನ್ನು ವ್ಯವಸ್ಥಿತವಾಗಿ ಸಂಕಲನ ಮಾಡಿ ಕೊಟ್ಟಿದ್ದಾರೆ.

ವಿಜಯನಗರದ ಸಂಗಮ ವಂಶದ ಅರಸರ ಕಾಲ(೧೪೦೯–೧೪೪೬) ವೀರಶೈವ ಧರ್ಮ, ಸಾಹಿತ್ಯ, ಸಂಸ್ಕೃತಿಗಳ ಪುನರುತ್ಥಾನದ ಸಂದರ್ಭವಾಗಿತ್ತು. ಆ ಕಾಲದಲ್ಲಿ ಬಂದ ಕೃತಿಗಳಲ್ಲಿ ಕಲ್ಲುಮಠದ ಪ್ರಭುದೇವನ 'ಲಿಂಗಲೀಲಾ ವಿಲಾಸಚಾರಿತ್ರ್ಯ'ವನ್ನು, ಜಕ್ಕಣಾರ್ಯನ 'ಏಕೋತ್ತರಷಟ್‌ಸ್ಥಲ'ವನ್ನು ಸಂಪಾದಿಸಿ ದ್ದಾರೆ. ಇವುಗಳಲ್ಲಿ ಮೊದಲ ಎರಡು ಕೃತಿಗಳು ವೀರಶೈವಪರವಾದ ಧಾರ್ಮಿಕ ಗ್ರಂಥಗಳು. ಇವಲ್ಲದೆ 'ಪ್ರೌಢರಾಯನ ಕಾವ್ಯ'ವನ್ನು(೧೫೨೫) ಸಂಪಾದಿಸಿ ಮೌಲ್ಯಯುತವಾದ ಸುದೀರ್ಘವಾದ ಪ್ರಸ್ತಾವನೆಯನ್ನು ಬರೆದಿದ್ದಾರೆ. ವೈಜ್ಞಾನಿಕ ರೀತಿಯ ಗ್ರಂಥಸಂಪಾದನೆಗೆ ಇದು ಮಾದರಿಯಾಗಿದೆ.

ಅರವತ್ತಾರು ವಚನಕಾರರ ೨೧೩೯ ವಚನಗಳ ಬೃಹತ್ ಸಂಗ್ರಹ ವಚನ ಸಾಹಿತ್ಯ ಸಂಗ್ರಹ. ಇಂತಹ ವೈಜ್ಞಾನಿಕ ಸಂಪಾದನೆ, ತಲಸ್ಪರ್ಶಿ ಅಧ್ಯಯನಗಳಿಂದಾಗಿ ಭೂಸನೂರಮಠರು ಶ್ರೇಷ್ಠ ಸಂಶೋಧಕ, ಪ್ರಾಮಾಣಿಕ ಗ್ರಂಥಸಂಪಾದನಕಾರ, ವಸ್ತುನಿಷ್ಠ ದೃಷ್ಟಿಯುಳ್ಳ ವಿಮರ್ಶಕ ಹಾಗೂ ದಾರ್ಶನಿಕ ಎಂಬ ಅಭಿಧಾನಕ್ಕೆ ಪಾತ್ರರಾಗಿದ್ದಾರೆ. ಸಂಶೋಧನೆ ಮತ್ತು ಗ್ರಂಥ ಸಂಪಾದನೆಗಳಲ್ಲಿ ಇವರದು ಬಹುದೊಡ್ಡ ಹೆಸರು.

೧೯೭೧ರಲ್ಲಿ 'ಶೂನ್ಯಸಂಪಾದನೆಯ ಪರಾಮರ್ಶೆ' ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ, 'ಭವ್ಯಮಾನವ' ಮಹಾಕಾವ್ಯಕ್ಕೆ ಪಂಪಪ್ರಶಸ್ತಿ (೧೯೯೦), ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (೧೯೬೯)ಗಳು ಲಭಿಸಿವೆ. ಇವರು ೧೯೯೧ ನವೆಂಬರ್ ೬ರಂದು ಕಾಲವಶರಾದರು.

❐ ❐ ❐

ಎಚ್. ದೇವೀರಪ್ಪ

(೧೯೧೩–೧೯೮೮)

ಅನ್ನಪೂರ್ಣ ಎನ್.ಎಸ್.

ಎಚ್. ದೇವೀರಪ್ಪನವರು ಕಥೆ, ಕಾದಂಬರಿ, ನಾಟಕಗಳನ್ನು ಬರೆಯುವದರ ಮೂಲಕ ಸೃಜನಶೀಲ ಸಾಹಿತಿಯಾಗಿ, ಹಳಗನ್ನಡ ಕಾವ್ಯಗಳನ್ನು ಶಾಸ್ತ್ರೀಯವಾಗಿ ಸಂಪಾದಿಸಿ ವಿಸ್ತೃತವಾದ ಪ್ರಸ್ತಾವನೆಯನ್ನು ನೀಡುವುದರ ಮೂಲಕ ಶ್ರೇಷ್ಠಮಟ್ಟದ ಸಂಶೋಧಕರಾಗಿ ಎರಡೂ ಕ್ಷೇತ್ರಗಳಲ್ಲಿ ಸವ್ಯಸಾಚಿ ಎನಿಸಿ ಕೊಂಡಿದ್ದಾರೆ.

ದೇವೀರಪ್ಪನವರು ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ ತಾಲೂಕಿನ ಮಲ್ಲಿಗೇನಹಳ್ಳಿಯ ಸುಸಂಸ್ಕೃತ ರೈತ ಕುಟುಂಬದಲ್ಲಿ ೬–೬–೧೯೧೩ರಂದು ಜನಿಸಿದರು. ತಂದೆ ತೀರ್ಥಪ್ಪ, ತಾಯಿ ಸಾವಿತ್ರಮ್ಮ ಇಬ್ಬರೂ ಅನಕ್ಷರಸ್ಥರು. ಕಡುಬಡತನದ ಜೀವನ ಪರಿಸರದಲ್ಲಿಯೇ ಹಸಿದ ಹೊಟ್ಟೆಯನ್ನು ಲೆಕ್ಕಿಸದೆ ಸ್ವಸಾಮರ್ಥ್ಯದಿಂದ ಜ್ಞಾನದಾಹವನ್ನು ನೀಗಿಸಿಕೊಂಡು ಉತ್ತಮ ಸಾಹಿತಿಯಾಗಿ, ಸಂಶೋಧಕರಾಗಿ, ದಕ್ಷ ಆಡಳಿತಗಾರರಾಗಿ ಮಾದರಿಯ ಬದುಕು ನಡೆಸಿದರು.

ದೇವೀರಪ್ಪನವರ ಪ್ರಾಥಮಿಕ ಅಭ್ಯಾಸ ಮಲ್ಲಿಗೇನಹಳ್ಳಿ ಮತ್ತು ಬೆಳಗುತ್ತಿಯಲ್ಲಿ ನಡೆಯಿತು. ೧೯೨೪ರಲ್ಲಿ ಕನ್ನಡ ಲೋಯರ್ ಸೆಕಂಡರಿ ಪರೀಕ್ಷೆಯಲ್ಲಿ, ೧೯೨೮ರಲ್ಲಿ ಇಂಗ್ಲಿಷ್ ಲೋಯರ್ ಸೆಕಂಡರಿ ಪರೀಕ್ಷೆಯಲ್ಲಿ ಪಾಸಾದರು. ದಾವಣಗೆರೆಯಲ್ಲಿ ಮಾಧ್ಯಮಿಕ ಶಿಕ್ಷಣ ಮುಂದುವರಿಸಿ, ೧೯೩೨ರಲ್ಲಿ ಎಸ್.ಎಸ್.ಎಲ್.ಸಿ ತೇರ್ಗಡೆ ಹೊಂದಿದರು. ಶಿವಮೊಗ್ಗೆಯಲ್ಲಿ ಇಂಟರ್ ಮೀಡಿಯಟ್, ಮೈಸೂರಿನಲ್ಲಿ ಕನ್ನಡದಲ್ಲಿ ಬಿ. ಎ. ಆನರ್ಸ್ ಮುಗಿಸಿದರು. ೧೯೪೦ರಲ್ಲಿ ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನ ಸಂಸ್ಥೆಯಲ್ಲಿ ಗ್ರಾಜುಯೇಟ್

ಕನ್ನಡ ಸ್ಪೆಷಲಿಸ್ಟ್ ಆಗಿ ನೇಮಕಗೊಂಡರು. ಅನಂತರ ಎರಡು ವರ್ಷ ವ್ಯಾಸಂಗಮಾಡಿ ೧೯೪೫ರಲ್ಲಿ ಎಂ.ಎ. ಪದವಿ ಪಡೆದುಕೊಂಡರು. ಈ ಅವಧಿಯಲ್ಲಿ ಎ.ಆರ್. ಕೃಷ್ಣಶಾಸ್ತ್ರಿ, ಡಿಎಲ್ಎನ್. ಬಿಎಂಶ್ರೀ, ವಿ. ಸೀತಾರಾಮಯ್ಯ, ಎ.ಎನ್. ನರಸಿಂಹಯ್ಯ, ತೀನಂಶ್ರೀ, ಕೆ. ವೆಂಕಟರಾಮಪ್ಪ ಅವರಂಥ ಉದ್ದಾಮ ಸಾಹಿತಿಗಳು ಇವರ ಗುರುಗಳಾಗಿದ್ದರು. ಅವರ ಪ್ರತಿಭೆ, ಪಾಂಡಿತ್ಯ, ಸಂಶೋಧನ ಪ್ರವೃತ್ತಿಗಳಿಂದ ದೇವೀರಪ್ಪನವರು ಪ್ರಭಾವಿತರಾದರು.

ಎಂ.ಎ. ಮುಗಿದ ಬಳಿಕ ಕುವೆಂಪು ಅವರ ಮಾರ್ಗದರ್ಶನದಲ್ಲಿ 'ಭಕ್ತಿತತ್ವ ಮತ್ತು ಕನ್ನಡ ಸಾಹಿತ್ಯದಲ್ಲಿ ಅದರ ಮೈದೋರಿಕೆ' ಎಂಬ ವಿಷಯ ಕುರಿತು ಎರಡು ವರ್ಷಗಳಕಾಲ ರಿಸರ್ಚ್ ಫೆಲೊ ಆಗಿ ಕೆಲಸ ಮಾಡಿದರು. ಇದು ಮುಗಿದೊಡನೆ ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನ ಸಂಸ್ಥೆಯಲ್ಲಿ ಅಸಿಸ್ಟೆಂಟ್ ಕ್ಯೂರೇಟರ್ ಹುದ್ದೆ ಲಭಿಸಿತು.

ದೇವೀರಪ್ಪನವರ ವೃತ್ತಿಜೀವನದ ಬಹುಭಾಗ ಪ್ರಾಚ್ಯವಿದ್ಯಾ ಸಂಶೋಧನ ಸಂಸ್ಥೆಯಲ್ಲಿಯೇ ವಿನಿಯೋಗವಾಯಿತು. ಅಲ್ಲಿ ಅವರು ಪದವೀಧರ ತಜ್ಞ, ಸಹಾಯಕ ನಿರ್ದೇಶಕ, ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದರು. ೧೯೫೪ರಿಂದ ೧೯೬೭ರ ವರೆಗೆ ಈ ಸಂಸ್ಥೆಯ ನಿರ್ದೇಶಕರಾಗಿ ಅವರು ಮಾಡಿದ ಕಾರ್ಯ ಅಪೂರ್ವವಾದುದು. ಸರಿಯಾದ ವೇಳೆಗೆ ಕಚೇರಿಗೆ ಬರುವುದು, ಸಂಶೋಧಕ ವಿದ್ವಾಂಸರಿಗೆ ವಹಿಸಿದ ಕಾವ್ಯವನ್ನು ಪರಿಶೀಲಿಸುವುದು, ಪರಿಷ್ಕರಣಕಾಲದಲ್ಲಿ ಅವರಿಗೆ ತಲೆದೋರಿದ್ದ ಸಂದೇಹಗಳನ್ನು ನಿವಾರಿಸುವುದು, ಉಳಿದ ಸಿಬ್ಬಂದಿಯ ಕೆಲಸದ ತಪಾಸಣೆ, ಇವು ಇವರ ದಕ್ಷ ಆಡಳಿತದ ಹವ್ಯಾಸವಾಗಿತ್ತು. ಕೆಲಸದಲ್ಲಿ ಕಟ್ಟುನಿಟ್ಟು, ಕೆಲಸಗಾರರ ಮೇಲೆ ಉತ್ಕಟ ಪ್ರೀತಿ, ವಿಶ್ವಾಸ ಇದ್ದುದರಿಂದ ಈ ಸಂಸ್ಥೆ ದಿನದಿಂದ ದಿನಕ್ಕೆ ಬೆಳೆಯಲು, ಉನ್ನತ ಕೀರ್ತಿ ಗಳಿಸಲು ಸಾಧ್ಯವಾಯಿತು.

ದೇವೀರಪ್ಪನವರ ಸೇವಾವಧಿಯಲ್ಲಿ ಪ್ರಾಚ್ಯವಿದ್ಯಾ ಸಂಶೋಧನ ಸಂಸ್ಥೆಯ ಹಸ್ತಪ್ರತಿ ಭಂಡಾರ ಬಹುವಾಗಿ ವರ್ಧಿಸಿತು. ಅನೇಕ ಉತ್ತಮ ಅಪ್ರಕಟಿತ ಗ್ರಂಥಗಳು ಶಾಸ್ತ್ರೀಯ ಪರಿಷ್ಕರಣದೊಂದಿಗೆ ಪ್ರಕಟವಾದುವು. ಅವರು ಕೆಲಸಕ್ಕೆ ಸೇರಿದಾಗ ಅಲ್ಲಿ ಕೇವಲ ಒಂದೂವರೆ ಸಾವಿರ ಕನ್ನಡ ಹಸ್ತಪ್ರತಿಗಳು, ಸು. ೨೦೦೦ ಸಂಸ್ಕೃತ ಹಸ್ತಪ್ರತಿಗಳು ಸಂಗ್ರಹವಾಗಿದ್ದುವು. ಇವರು ಕೈಕೊಂಡ ವ್ಯಾಪಕ ಸಂಗ್ರಹಣೆಯ

ಕಾರಣದಿಂದ ಆ ಸಂಖ್ಯೆ ಸು. ೧೩೦೦೦ಕ್ಕೆ ಏರಿತು. ಸು. ೧೦೦೦೦ದಷ್ಟು ಹಸ್ತಪ್ರತಿಗಳನ್ನು ಹೊಸದಾಗಿ ಸಂಗ್ರಹಿಸಿ ವ್ಯವಸ್ಥಿತವಾಗಿ ಜೋಡಿಸಿ, ಸಂರಕ್ಷಣೆಮಾಡಿ, ಸೂಚೀಕಾರ್ಯ ಕೈಕೊಂಡ ದೇವೀರಪ್ಪನವರ ಈ ದುಡಿಮೆ ಈ ಸಂಸ್ಥೆಯ ಇತಿಹಾಸದಲ್ಲಿಯೇ ಎದ್ದು ಕಾಣುವಂತಹದಾಗಿದೆ.

ದೇವೀರಪ್ಪನವರ ಕಾಲಾವಧಿಯಲ್ಲಿ ಈ ಸಂಸ್ಥೆಯಿಂದ ಶಾಸ್ತ್ರೀಯ ವರಿಷ್ಕರಣದೊಂದಿಗೆ ಬೆಳಕು ಕಂಡ ಕೃತಿಗಳಲ್ಲಿ ಕೌಟಿಲ್ಯನ ಅರ್ಥಶಾಸ್ತ್ರ (ಪುನರ್‌ಮುದ್ರಣ), ಶಿವತತ್ತ್ವರತ್ನಾಕರ, ನ್ಯಾಯಮಂಜರಿ, ಕ್ರಿಯಾಸಾರ, ವಿಷ್ಣುಸಹಸ್ರನಾಮ ಭಾಷ್ಯ, ರಾಮಾಯಣ ಕಥಾಟೀಕಾ, ತತ್ತ್ವಮುಕ್ತಾಕಲಾಪ, ಸೌಂದರ್ಯಲಹರಿಯ ಕನ್ನಡ ಟೀಕಾ, ಸೌಂದರ್ಯಲಹರಿ ಎಂಬ ಸಂಸ್ಕೃತ ಗ್ರಂಥಗಳು, ಸಿಂಗಿರಾಜಪುರಾಣ, ಶಿವತತ್ತ್ವಚಿಂತಾಮಣಿ, ಪದಾರ್ಥಸಾರ, ರಾಮನಾಥಚರಿತೆ, ತೊರವೆ ರಾಮಾಯಣ, ಕಾವ್ಯಾವ ಲೋಕನ, ಲಾಸ್ಯರಂಜನಂ, ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ (ನಾಲ್ಕು ಸಂಪುಟಗಳು) ಎಂಬ ಕನ್ನಡ ಗ್ರಂಥಗಳು ಮುಖ್ಯವಾಗಿವೆ. ಇವುಗಳಲ್ಲಿ ಕೆಲವು ದೇವೀರಪ್ಪನವರೇ ಸಂಪಾದಿಸಿದುವಾದರೆ, ಮತ್ತೆ ಕೆಲವು ಅವರ ಮಾರ್ಗದರ್ಶನದಲ್ಲಿ ಸಂಶೋಧಕ ಸಿಬ್ಬಂದಿ ಸಂಪಾದಿಸಿದಂಥವು.

ಪ್ರಾಚ್ಯವಿದ್ಯಾ ಸಂಶೋಧನ ಸಂಸ್ಥೆಯಲ್ಲಿ ಹೊಸದಾಗಿ ಮೈಕ್ರೋಫಿಲ್ಮ್ ವಿಭಾಗವನ್ನು ಅಳವಡಿಸಿ ಬೆಳೆಸಿದ್ದು, ಹಸ್ತಪ್ರತಿ ಸಂರಕ್ಷಣೆಯಲ್ಲಿ ಆಧುನಿಕ ವೈಜ್ಞಾನಿಕ ಪದ್ಧತಿಗಳನ್ನು ಅಳವಡಿಸಿದ್ದು, ಸಂಶೋಧಕರಿಗೆ ಅಧ್ಯಯನಕ್ಕೆ ವಿಶೇಷ ಅನುಕೂಲ ಒದಗಿಸಿದ್ದು ದೇವೀರಪ್ಪನವರು ಮಾಡಿದ ವಿಶೇಷಕಾರ್ಯಗಳೆನಿಸಿವೆ. ಪ್ರಾಚ್ಯವಿದ್ಯಾ ಸಂಶೋಧನ ಸಂಸ್ಥೆಯ ಹಸ್ತಪ್ರತಿ ಭಂಡಾರ ೧೯೬೬ರಲ್ಲಿ ಕನ್ನಡ ವಿಭಾಗ ಮತ್ತು ಸಂಸ್ಕೃತ ವಿಭಾಗ ಎಂದು ಇಬ್ಭಾಗವಾಯಿತು. ಕನ್ನಡ ವಿಭಾಗವನ್ನು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಸಂಪಾದನ ವಿಭಾಗವನ್ನಾಗಿ ಮಾಡಲಾಯಿತು. ಅದಕ್ಕೆ ದೇವೀರಪ್ಪನವರನ್ನೇ ಪ್ರಥಮ ನಿರ್ದೇಶಕರನ್ನಾಗಿ ನೇಮಿಸಲಾಯಿತು. ಅಲ್ಲಿ ಎರಡು ವರ್ಷ ಕಾರ್ಯನಿರ್ವಹಿಸಿ ೧೯೬೮ರಲ್ಲಿ ನಿವೃತ್ತಿ ಹೊಂದಿದರು. ಮುಂದೆ ಮತ್ತೊಂದು ವರ್ಷಕ್ಕೆ ಪುನರ್ನೇಮಕಗೊಂಡರೂ ಹೊಂದಾಣಿಕೆಯಾಗದೆ ಬಿಟ್ಟು ಬಂದರು. ನಿವೃತ್ತಿಯ ಬಳಿಕ ಬೀರೂರಿನಲ್ಲಿ ಹೊಸದಾಗಿ ಆರಂಭವಾದ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಸೇರಿ ಆರೇಳು ತಿಂಗಳು

ಕೆಲಸ ಮಾಡಿ, ಅಲ್ಲಿಯ ವಾತಾವರಣ ಅವರ ಸ್ವಭಾವಕ್ಕೆ ಹೊಂದಿಕೆಯಾಗದೆ ಹೊರ ಬಂದು ಬೆಂಗಳೂರಿನಲ್ಲಿ ನೆಲಸಿದರು.

ನಿವೃತ್ತಿಯ ಬಳಿಕ ದೇವೀರಪ್ಪನವರ ಸಂಶೋಧನ ಪ್ರವೃತ್ತಿಗೆ ಇನ್ನೂ ಹೆಚ್ಚಿನ ವೇಗ–ವ್ಯಾಪ್ತಿಗಳು ಉಂಟಾದುವು. ಪ್ರಾಚೀನ ಗ್ರಂಥಪರಿಷ್ಕರಣ, ಸಂಶೋಧನ ಸಂಪ್ರಬಂಧಗಳ ರಚನಾಕಾರ್ಯವನ್ನು ಗಂಭೀರವಾಗಿ ಮುಂದುವರಿಸಿದರು. ಹತ್ತಾರು ಮೌಲಿಕ ಕೃತಿಗಳನ್ನು ಈ ಕ್ಷೇತ್ರಕ್ಕೆ ಕೊಟ್ಟರು. ದೇವೀರಪ್ಪನವರು ಪಂಡಿತ ಪರಂಪರೆಯಲ್ಲಿ ಬೆಳೆದುಬಂದವರಾದರೂ ಸೃಜನಸಾಹಿತ್ಯ ರಚನೆಯಲ್ಲಿಯೂ ತಮ್ಮ ಉಜ್ಜ್ವಲ ಪ್ರತಿಭೆಯನ್ನು ಮೆರೆದುದು ಒಂದು ವಿಶೇಷ. ಹೀಗಾಗಿ, ಅವರ ಒಟ್ಟು ಸಾಹಿತ್ಯವನ್ನು ಸೃಜನಸಾಹಿತ್ಯ ಮತ್ತು ಸೃಜನೇತರ ಸಾಹಿತ್ಯ ಎಂದು ವಿಂಗಡಿಸಿ ವಿವೇಚಿಸಬೇಕಾಗುತ್ತದೆ.

ಸೃಜನಸಾಹಿತ್ಯದಲ್ಲಿ 'ಸುವರ್ಣಸಂಪುಟ' ಎಂಬ ಕಥಾಸಂಕಲನ, 'ಹಳ್ಳಿಯ ಬದುಕು', 'ಬೆಳುವಲದ ಮಡಿಲಲ್ಲಿ' ಎಂಬ ಕಾದಂಬರಿಗಳು, 'ತುಂಗಭದ್ರ', 'ಕಲಾಯೋಗಿ' ಎಂಬ ನಾಟಕಗಳು ಪ್ರಮುಖವಾದವು. ಗ್ರಾಮೀಣ ಪರಿಸರದಲ್ಲಿ ಬೆಳೆದುಬಂದ ದೇವೀರಪ್ಪನವರು ಹಳ್ಳಿಯ ಬದುಕಿನ ಜೀವಂತ ಚಿತ್ರಣವನ್ನು ತಮ್ಮ ಈ ಸೃಜನಾತ್ಮಕ ಕೃತಿಗಳಲ್ಲಿ ಕಟ್ಟಿಕೊಡಲು ಪ್ರಯತ್ನಿಸಿದ್ದಾರೆ. ಅವರ ಬೆಳುವಲದ ಮಡಿಲಲ್ಲಿ ಕಾದಂಬರಿ ಚಲನಚಿತ್ರವಾಗಿಯೂ ಜನಪ್ರಿಯತೆಯನ್ನು ಪಡೆದಿದೆ. 'ದಯಾವೀರ' ಎಂಬ ಕಾವ್ಯನಾಮದಿಂದ ಕೆಲವು ಕವಿತೆಗಳನ್ನೂ ಬರೆದಿದ್ದಾರೆ.

ದೇವೀರಪ್ಪನವರ ಹೆಸರು ಹೆಚ್ಚು ಪ್ರಸಿದ್ಧಿಯನ್ನು ಪಡೆದದ್ದು ಗ್ರಂಥ ಸಂಪಾದನೆ ಹಾಗೂ ಸಂಶೋಧನ ಕ್ಷೇತ್ರಗಳಲ್ಲಿ. ಪಾಂಡಿತ್ಯ, ಪರಿಶ್ರಮ, ಸಂಯಮ, ಶ್ರದ್ಧೆ–ನಿಷ್ಠೆಗಳನ್ನು ಏಕಕಾಲಕ್ಕೆ ಬಯಸುವ ಈ ಕಾವ್ಯಗಳನ್ನು ಅವರು ತಮ್ಮ ಬದುಕಿನ ಬಹುಮುಖ್ಯ ಮಣಿಹವನ್ನಾಗಿ ಸ್ವೀಕರಿಸಿ ಸಮರ್ಪಣ ಭಾವದಿಂದ ಜೀವನಪರ್ಯಂತ ಮಾಡಿದರು.

ದೇವೀರಪ್ಪನವರು ಪರಿಷ್ಕರಿಸಿ ಪ್ರಕಟಿಸಿದ ಪ್ರಾಚೀನ ಗ್ರಂಥಗಳಲ್ಲಿ ಹರಿಹರನ 'ಗಿರಿಜಾಕಲ್ಯಾಣ ಮಹಾಪ್ರಬಂಧಂ', ರನ್ನನ 'ಅಜಿತತೀರ್ಥಂಕರ ಪುರಾಣತಿಲಕಂ', ಜನ್ನನ 'ಅನಂತನಾಥಪುರಾಣಂ' ಮೊದಲಾದ ಚಂಪೂಕಾವ್ಯಗಳು; ಸಿಂಗಿರಾಜನ 'ಸಿಂಗಿರಾಜ ಪುರಾಣ', ಲಕ್ಕಣ್ಣ ದಂಡೇಶನ 'ಶಿವತತ್ತ್ವಚಿಂತಾಮಣಿ'

ಎಂಬ ಪಟ್ಟದಿ ಕಾವ್ಯಗಳು; ಮಹಾಕವಿ ಹರಿಹರದೇವರ ಐದು ರಗಳೆಗಳು, ಹಂಪೆಯ ಹರಿಹರದೇವರ ಎಂಟು ರಗಳೆಗಳು, ವಿರೂಪಾಕ್ಷಾಂಕಿತ ಶಿವಶರಣ ಸಂಪುಟ, ಹಂಪೆಯ ಹರಿಹರ ವಿರಚಿತ ಉಡುತಡಿಯ ಮಹಾದೇವಿಯ ರಗಳೆ, ಹಂಪೆಯ ಹರಿಹರದೇವರ ಮೂರು ರಗಳೆಗಳು ಎಂಬ ರಗಳೆ ಕಾವ್ಯಗಳು; ಜೇಡರ ದಾಸಿಮಯ್ಯನ ವಚನಗಳು ಎಂಬ ವಚನಗ್ರಂಥ ಪ್ರಮುಖವೆನಿಸಿವೆ.

ಪ್ರತಿಯೊಂದು ಕಾವ್ಯಪರಿಷ್ಕರಣದಲ್ಲಿ ಅವರು ಗ್ರಂಥಸಂಪಾದನೆಯ ಶಾಸ್ತ್ರೀಯ ವಿಧಾನಗಳನ್ನು ತಪ್ಪದೆ ಪಾಲಿಸಿದ್ದಾರೆ. ಆಯಾ ಕಾವ್ಯಕ್ಕೆ ಸಂಬಂಧಿಸಿ ದೊರಕುವ ಎಲ್ಲ ಹಸ್ತಪ್ರತಿಗಳನ್ನು ಕಣ್ಣ ಮುಂದಿಟ್ಟುಕೊಂಡು, ಈ ಮೊದಲು ಆ ಕಾವ್ಯ ಪ್ರಕಟವಾಗಿದ್ದರೆ ಆ ಮುದ್ರಿತ ಪ್ರತಿಯನ್ನು ಗಮನಿಸಿ, ಹೊಸದಾಗಿ ದೊರೆತ ಹಸ್ತಪ್ರತಿಗಳ ಸಹಾಯದಿಂದ ಶುದ್ಧಪಾಠಗಳನ್ನು ಹುಡುಕಿ ತೆಗೆದು ಹೆಚ್ಚು ಶುದ್ಧವಾಗಿ ಪರಿಷ್ಕರಿಸಲು ಪ್ರಯತ್ನಿಸಿದ್ದಾರೆ. ಆರಂಭದಲ್ಲಿ ಬರೆದ ವಿಸ್ತಾರವಾದ ಪೀಠಿಕೆಯಲ್ಲಿ ಕವಿಯ ಕಾಲ–ದೇಶ–ಮತ, ಕೃತಿಯ ಸ್ವರೂಪ–ಆಕರ–ವಸ್ತು–ಮೌಲ್ಯಮಾಪನ–ವಿಮರ್ಶೆ–ವಿವೇಚನೆ, ಪರಿಷ್ಕರಣಕ್ಕೆ ಬಳಸಿಕೊಂಡ ಹಸ್ತಪ್ರತಿಗಳ ವಿವರ; ಅನುಬಂಧದಲ್ಲಿ ಪದ್ಯಗಳ ಅಕಾರಾದಿ, ಗ್ರಂಥಕ್ಕೆ ಪೂರಕವಾದ ನಾಮಸೂಚಿ, ವಿಶಿಷ್ಟ ಪದಕೋಶ ಇತ್ಯಾದಿಗಳನ್ನು ತುಂಬ ಪರಿಶ್ರಮದಿಂದ ಸಿದ್ಧಪಡಿಸಿ ಕೊಡಲಾಗಿದೆ. ಒಂದೊಂದು ಕೃತಿಯ ಪ್ರಸ್ತಾವನೆಯೂ ಸ್ವತಂತ್ರ ಸಂಶೋಧನ ಪ್ರಬಂಧಗಳ ವ್ಯಾಪ್ತಿಯನ್ನು ಪಡೆದಿವೆ. ಪ್ರಾಚೀನ ಗ್ರಂಥಗಳಲ್ಲಿ 'ಸಿಂಗಿರಾಜಪುರಾಣ', 'ರಾಮನಾಥಚರಿತೆ', 'ಷಟ್‌ಸ್ಥಲವಲ್ಲಭ', 'ಶರಣಚರಿತಮಾನಸಂ', 'ಶಿವಶರಣಸಂಪುಟ' ದೇವೀರಪ್ಪನವರಿಂದ ಪ್ರಪ್ರಥಮವಾಗಿ ಪರಿಷ್ಕರಣಗೊಂಡು ಬೆಳಕು ಕಂಡವು ಗಳಾದರೆ, ಉಳಿದವು ಮರುಪರಿಷ್ಕರಣಗಳೆನಿಸಿವೆ.

ಹರಿಹರನು ದೇವೀರಪ್ಪನವರ ಅಚ್ಚುಮೆಚ್ಚಿನ ಕವಿ. ಹೀಗಾಗಿ, ಅವರು ತಮ್ಮ ಬದುಕಿನ ಬಹುಭಾಗವನ್ನು ಈತನ ಕೃತಿಗಳ ಪರಿಷ್ಕರಣ, ಪ್ರಕಟನೆ, ವಿವೇಚನೆಗಾಗಿ ಮೀಸಲಾಗಿಟ್ಟಿದ್ದರು. ಅವರು ವಿಶೇಷ ಪರಿಶ್ರಮದಿಂದ ಸಂಪಾದಿಸಿದ 'ಶರಣಚರಿತ ಮಾನಸಂ' ಒಂದು ಅಪೂರ್ವ ಕೃತಿ. ಇದರಲ್ಲಿ ಹರಿಹರನ ೨೪ ಪುರಾತನರ ರಗಳೆಗಳನ್ನು ೧೦ ಹಸ್ತಪ್ರತಿಗಳ ಆಧಾರದಿಂದ ಪರಿಷ್ಕರಿಸಿ ಕೊಡಲಾಗಿದೆ. ಈ ಕೃತಿಗೆ ಬರೆದ ಸು. ೨೧೦ ಪುಟಗಳ ಸುದೀರ್ಘ ಪೀಠಿಕೆಯಲ್ಲಿ ಕವಿಪರಿಚಯ, ಕೃತಿಗಳು, ರಗಳೆಗಳ ಸಂಖ್ಯಾನಿರ್ಣಯ, ಹರಿಹರನ ರಗಳೆಗಳ

ಪ್ರಮುಖ ಲಕ್ಷಣಗಳು, ೨೪ ರಗಳೆಗಳ ಕಥಾಸಮೀಕ್ಷೆ, ಕೃತಿ ಪರಿವೀಕ್ಷಣ (ಕಥಾವಸ್ತು, ವರ್ಣನೆಗಳು, ಶೈಲಿ, ಛಂದಸ್ಸು) ರಗಳೆಗಳಲ್ಲಿ ಜನಜೀವನ, ರಗಳೆಗಳ ಮೂಲಸಾಮಗ್ರಿ, ವ್ಯಕ್ತಿತ್ವ, ಪ್ರಭಾವ, ಪಾಠಶೋಧನೆ ಮೊದಲಾದ ವಿಷಯಗಳನ್ನು ಕುರಿತು ಸಾಧಾರವಾಗಿ ನಿರೂಪಿಸಿದ್ದಾರೆ. ಅನುಬಂಧದಲ್ಲಿ ಅರುವತ್ತು ಮೂವರ ಕಥಾಗರ್ಭ, ಹರಿಹರಕೃತವೆಂಬಂತೆ ತೋರುವ ರಗಳೆಗಳು, ಅರುವತ್ತು ಮೂವರ ಹೆಸರು, ಕಾಯಕ, ಕುಲ, ಸ್ಥಳ, ರಗಳೆಗಳ ಆನುಪೂರ್ವಿ, ನಾಮಸೂಚಿ, ಟಿಪ್ಪಣಿ, ಪುರಾತನರನ್ನು ಕುರಿತ ಪ್ರಾಚೀನ ತಮಿಳು ಗ್ರಂಥಗಳು, ಕಠಿಣಪದಗಳ ಅರ್ಥ, ಆಕರ ಗ್ರಂಥಸೂಚಿಗಳನ್ನು ಕೊಟ್ಟಿದ್ದಾರೆ.

ಹರಿಹರನ ರಗಳೆಗಳ ಸಂಖ್ಯಾನಿರ್ಣಯ ಮಾಡುವಲ್ಲಿ ದೇವೀರಪ್ಪನವರು ಪಟ್ಟ ಪರಿಶ್ರಮ ಅನನ್ಯ. ಹರಿಹರನ ರಗಳೆಗಳ ವಿಶಿಷ್ಟ ಲಕ್ಷಣಗಳನ್ನು ಗುರುತಿಸಿ, ಕ್ರೋಡೀಕರಿಸಿ, ಆ ಲಕ್ಷಣ ಮಾನದಂಡದಿಂದ ಅವನ ಹೆಸರಿನಲ್ಲಿ ದೊರೆಯುವ ಎಲ್ಲ ರಗಳೆಗಳನ್ನು ಪರಿಶೀಲಿಸಿ, ಅವುಗಳಲ್ಲಿ ಹರಿಹರನ ರಗಳೆಗಳನ್ನು ತೆಗೆದು ತೋರಿಸಿದ ಅವರ ಪ್ರಯತ್ನ ಶ್ಲಾಘನೀಯವೆನಿಸಿದೆ. ಅವರ ಪ್ರಕಾರ ಹರಿಹರ ರಚಿಸಿದ ಪುರಾತನರ ರಗಳೆಗಳು ೨೪, ಇತರ ರಗಳೆಗಳು ೬೧, ಒಟ್ಟು ೮೫. ವಿರೂಪಾಕ್ಷಾಂಕಿತದಲ್ಲಿ ಹರಿಹರನವೆಂದು ಆರೋಪಿತವಾಗಿರುವ ೫೪ ರಗಳೆಗಳು ಭಿನ್ನ ಕರ್ತೃಕವೆನಿಸಿವೆ. ಅರುವತ್ತು ಮೂವರ ಕಥಾಗರ್ಭ ಹರಿಹರ ರಚಿತವಲ್ಲ. ಈ ನಿರ್ಣಯಗಳಿಗೆ ಅವರು ಕೊಡುವ ಆಧಾರಗಳು ಅಲ್ಲಗಳೆಯುವಂಥವಲ್ಲ. ಇನ್ನೂ ಹರಿಹರ ರಚಿಸಿದ ಒಟ್ಟು ರಗಳೆಗಳ ಸಂಖ್ಯಾನಿರ್ಣಯಕ್ಕೆ ಅಂತಿಮ ಸ್ವರೂಪ ಕೊಡಲು ಸಾಧ್ಯವಾಗಿಲ್ಲವಾದರೂ ದೇವೀರಪ್ಪನವರ ಅಭಿಪ್ರಾಯವನ್ನು ಬಹುಜನ ವಿದ್ವಾಂಸರು ಸಮ್ಮತಿಸಿರುವುದು ಗಮನಿಸತಕ್ಕ ಸಂಗತಿಯಾಗಿದೆ. ಈ ದೃಷ್ಟಿಯಿಂದ 'ಶರಣಚರಿತಮಾನಸಂ' ದೇವೀರಪ್ಪನವರ ಮೇರುಕೃತಿ ಎನಿಸಿದ್ದು, ಅದರ ಪೀಠಿಕೆ ಒಂದು ಸ್ವತಂತ್ರ ಸಂಶೋಧನ ಗ್ರಂಥದ ಮೌಲ್ಯವನ್ನು ಪಡೆದಿದೆ.

ಶಿವಶರಣಸಂಪುಟ ಹರಿಹರೇತರಕೃತವೆಂದು ನಿರ್ಧರಿಸಿದ ವಿರೂಪಾಕ್ಷಾಂಕಿತ ೪೨ ರಗಳೆಗಳ ಸಂಪುಟ ಐದು ತಾಳೆಗರಿ ಹಸ್ತಪ್ರತಿಗಳ ಆಧಾರದಿಂದ ಮೊದಲ ಬಾರಿಗೆ ಪ್ರಕಟವಾಗಿದೆ. ಶರಣಚರಿತಮಾನಸದಲ್ಲಿ ಹರಿಹರನ ರಗಳೆಗಳ ಸಂಖ್ಯಾನಿರ್ಣಯ ಮಾಡಿ ಅವನ ನಿಜರಗಳೆಗಳನ್ನು ಸಂಗ್ರಹಿಸಿದರೆ, ಇಲ್ಲಿ ಅವನಿಗೆ ಆರೋಪಿತವಾದ ರಗಳೆಗಳನ್ನು ಒಂದೆಡೆ ಪರಿಷ್ಕರಿಸಿ ಕೊಡಲಾಗಿದೆ. ಇದರಲ್ಲಿಯೂ

ಸು. ೧೩೦ ಪುಟ ವ್ಯಾಪ್ತಿಯ ಪೀಠಿಕೆಯನ್ನು ಬರೆದು ರಗಳೆಗಳ ಕರ್ತೃತ್ವ, ವಿಚಾರ, ಲಕ್ಷಣ, ಕಥಾವಸ್ತು, ಕೃತಿವಿವೇಚನೆಯನ್ನು ಮಾಡಲಾಗಿದೆ. ಈ ಎರಡೂ ಸಂಪುಟಗಳು ಹರಿಹರನ ರಗಳೆಗಳ ಅಧ್ಯಯನಕ್ಕೆ ಬಹುಮುಖ್ಯ ಹಾಗೂ ಮೌಲಿಕ ಆಕರಗ್ರಂಥಗಳೆನಿಸಿವೆ.

'ಜೇಡರದಾಸಿಮಯ್ಯನ ವಚನಗಳು' ದೇವೀರಪ್ಪನವರು ಸಂಪಾದಿಸಿದ ಏಕೈಕ ಹಾಗೂ ಮಹತ್ತ್ವದ ವಚನಗ್ರಂಥ. ಈ ಮೊದಲು ಹಳಕಟ್ಟಿ, ಎಲ್. ಬಸವರಾಜು ಅವರಿಂದ ಸಂಪಾದನೆಗೊಂಡಿದ್ದ ಈ ವಚನಗಳನ್ನು ೧೨ ಹಸ್ತಪ್ರತಿಗಳ ಆಧಾರದಿಂದ ಶುದ್ಧವಾಗಿ ಪರಿಷ್ಕರಿಸಿ ಕೊಟ್ಟಿದ್ದಾರೆ. ಒಟ್ಟು ೧೩೩ ವಚನಗಳ ಜೊತೆಗೆ ೧೮ ಹೆಚ್ಚಿನ ವಚನಗಳನ್ನು ಶೋಧಿಸಿ ಪರಿಶಿಷ್ಟದಲ್ಲಿ ಜೋಡಿಸಿದ್ದಾರೆ. ಪ್ರಸ್ತಾವನೆಯಲ್ಲಿ ಕರ್ತೃವಿನ ನಿಜನಾಮ ಕುರಿತು ಚರ್ಚಿಸುತ್ತ ಜೇಡರದಾಸಿಮಯ್ಯ, ದೇವರದಾಸಿಮಯ್ಯ ಇಬ್ಬರೂ ಭಿನ್ನರು. ಜೇಡರದಾಸಿಮಯ್ಯ ಎಂಬುದೇ ವಚನ ಕಾರನ ಹೆಸರು ಎಂದು ಆಧಾರಪೂರ್ವಕವಾಗಿ ದೃಢಪಡಿಸಿದ್ದಾರೆ. ಹಾಗೆಯೇ ಕರ್ತೃವಿನ ಕಾಲ–ದೇಶ–ಮತ ವಿಚಾರ, ವಚನಗಳ ವಿವೇಚನೆ, ಪರಿಷ್ಕರಣ ವಿಧಾನ ಕುರಿತು ವಿವರಿಸಿದ್ದಾರೆ.

ದೇವೀರಪ್ಪನವರ ವಿದ್ವತ್ತು, ಸಂಶೋಧನ ನಿಷ್ಠೆ–ವಿಧಾನ, ಬಹುಶ್ರುತತ್ವ ಗಳನ್ನು ಎತ್ತಿ ತೋರುವ ಮೌಲಿಕ ಕೃತಿ ಸಂಶೋಧನ ಸಂಪುಟ. ಇದರಲ್ಲಿ ಅವರು ಆಗಾಗ ಬರೆದು ಪ್ರಕಟಿಸಿದ ಸಂಶೋಧನಾತ್ಮಕ ಲೇಖನಗಳಲ್ಲಿ ಮುಖ್ಯವೆನಿಸಿದ ೫೧ ಸಂಪ್ರಬಂಧಗಳನ್ನು ಅಳವಡಿಸಲಾಗಿದೆ. ಅವು ಕವಿಚರಿತೆ (೯), ಕವಿಕಾವ್ಯವಿಚಾರ (೧೦), ವಚನಸಂಪಾದನೆ (೬), ಛಂದಸ್ಸು (೩), ಶಬ್ದ ವಿವೇಕ (೮),ಸಂಕೀರ್ಣ (೧೫) ಎಂಬ ಆರು ಭಾಗಗಳಲ್ಲಿ ವಿಂಗಡಣೆಗೊಂಡಿವೆ. ಈ ವಿಭಾಗಗಳು ದೇವೀರಪ್ಪನವರ ಬಹುಮುಖ ಪ್ರತಿಭೆಯನ್ನು, ಅವರ ಆಸಕ್ತಿ ಕ್ಷೇತ್ರಗಳ ವೈವಿಧ್ಯವನ್ನು ಸ್ಪಷ್ಟಪಡಿಸುತ್ತವೆ.

''ಕವಿಚರಿತೆ' ಎಂಬ ಭಾಗದಲ್ಲಿ ಶಿವಕೋಟ್ಯಾಚಾರ್ಯ, ಕವಿತಾಗುಣೋ ದಯ ನಾಗವರ್ಮ, ಜೇಡರದಾಸಿಮಯ್ಯ, ಬ್ರಹ್ಮಶಿವ, ಹರಿಹರನ ರಗಳೆಗಳ ಸಂಖ್ಯಾನಿರ್ಣಯ, ವಚನಕಾರ ತರಳಬಾಳು ಸಿದ್ಧೇಶ್ವರ, ಲಕ್ಕಣ್ಣ ದಂಡೇಶ ಹೊಗಳಿರುವ ಕೆಲವು ಕವಿಗಳು, ಕವಿಕಥೆಯ ಹರಿಕಥೆ, ಕುಮಾರವ್ಯಾಸ ಭಾಸ್ಕರರ

ಕಾಲವನ್ನು ಕುರಿತು ಎಂಬ ಲೇಖನಗಳು ಅಳವಟ್ಟಿವೆ. ಇಲ್ಲಿ ಕವಿಗಳ ಜೀವನ–ಕಾಲ–ಮತ–ಚರಿತ್ರೆ ನಿರ್ಧರಿಸುವಲ್ಲಿ ಶಾಸನ, ಕಾವ್ಯ ಹಾಗೂ ಇತರ ಆಕರಗಳನ್ನು ತುಂಬ ಎಚ್ಚರಿಕೆಯಿಂದ ಪರಿಶೀಲಿಸಿ ತಮ್ಮ ಅಭಿಪ್ರಾಯವನ್ನು ಸಮರ್ಥಿಸಿಕೊಳ್ಳುವ ರೀತಿ ಅಪೂರ್ವವೆನಿಸಿದೆ.

'ಕವಿಕಾವ್ಯ ವಿಚಾರ' ಎಂಬ ಎರಡನೆಯ ಭಾಗದಲ್ಲಿ ಹರಿಹರನ ಕಾವ್ಯಧರ್ಮ, ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿ, ಕುಮಾರವ್ಯಾಸನ ಇಂದ್ರಕೀಲ ಮೊದಲಾದ ಹತ್ತು ಲೇಖನಗಳಿವೆ. ಇವು ಮುಖ್ಯವಾಗಿ ಕೃತಿವಿವೇಚನೆ, ಮೌಲ್ಯಮಾಪನ, ಕವಿಯ ಆಶಯಶೋಧ ಮಾಡುತ್ತವೆ. ಹೀಗಾಗಿ, ಇಲ್ಲಿ ಶೋಧನೆ ಮತ್ತು ವಿಮರ್ಶೆ ಎರಡೂ ಜೊತೆಗೂಡಿ ಸಾಗಿ ಕೃತಿಯ ಒಟ್ಟು ಗುಣ–ದೋಷ ಹಾಗೂ ಮೌಲ್ಯವನ್ನು ಎತ್ತಿ ಹೇಳುತ್ತವೆ.

'ವಚನಸಂಪಾದನೆ' ಎಂಬ ಮೂರನೆಯ ಭಾಗದಲ್ಲಿ ಜೇಡರದಾಸಿಮಯ್ಯನ ವಚನಗಳು, ಬಸವರಾಜದೇವರ ಷಟ್‌ಸ್ಥಲದ ವಚನಗಳು, ವೀರಶೈವ ನಿರ್ಣಯ ಪರಮಾವತಾರ, ಈ ಕೆಲಸ ಮೊದಲು ಆಗಬೇಕು, ಕೆಲವು ಮಹತ್ವದ ವಚನಗಳು, ಬಸವಣ್ಣನವರ ಎರಡು ವಚನಗಳು ಎಂಬ ಆರು ಪ್ರಬಂಧಗಳಿದ್ದು ವಚನಗಳ ಲಕ್ಷಣ, ಉಗಮ, ವಸ್ತುವಿವೇಚನೆ, ಪಟ್‌ಸ್ಥಲವಚನಗಳ ಸ್ವರೂಪ, ಕೆಲವು ಹೊಸ ವಚನಗಳ ಪರಿಚಯ, ಕೆಲವು ವಚನಗಳ ನಿಜಪಾಠ ನಿರ್ಣಯ, ಬಸವಣ್ಣನವರ ವಚನಗಳ ಶುದ್ಧ ಪರಿಷ್ಕರಣದ ಅಗತ್ಯ ಕುರಿತು ವಿವೇಚಿಸಲಾಗಿದೆ.

'ಛಂದಸ್ಸು' ಎಂಬ ನಾಲ್ಕನೆಯ ಭಾಗದಲ್ಲಿರುವ ಸಾಂಗತ್ಯ ಪಟ್ಟದಿ, ಹರಿಹರನ ರಗಳೆ ಮತ್ತು ಶಾರದ ಎಂಬ ಹಾಡುಗಬ್ಬ ಮೂರೂ ಲೇಖನಗಳು ಛಂದಸ್ಸಿಗೆ ಸಂಬಂಧಿಸಿದ ದೇವೀರಪ್ಪನವರ ನೂತನ ವಿಚಾರಗಳನ್ನು ಪ್ರಕಟಿಸುವ ಬರೆಹಗಳೆನಿಸಿವೆ. "ಸಾಂಗತ್ಯ ಹತ್ತನೆಯ ಶತಮಾನದ ಪಟ್ಟದದ ಪುನರವತಾರ, ಅದು ಹದಿನಾಲ್ಕನೆಯ ಶತಮಾನದ ಉತ್ತರಾರ್ಧದಲ್ಲಿ ಹಠಾತ್ತನೆ ಮೂಡಿಬರಲಿಲ್ಲ" "ವರ್ಣಕದ ಒಂದು ಪ್ರಭೇದವಾದರೂ ರಗಳೆಯು ಒಂದು ಸ್ವತಂತ್ರ ಕಾವ್ಯಪ್ರಕಾರ" ಎಂಬ ದೇವೀರಪ್ಪನವರ ಅಭಿಪ್ರಾಯಗಳಿಗೆ ಆಧಾರಸಾಮಗ್ರಿಯ ಸಮರ್ಥನೆ ಇದ್ದರೂ ಸಾಂಗತ್ಯ ಪಟ್ಟದಿಯ ಪುನರವತಾರ ಎಂಬ ಅಭಿಪ್ರಾಯಕ್ಕೆ ಇನ್ನಷ್ಟು ಖಚಿತ ಆಧಾರ ಗಳು ಅಪೇಕ್ಷಣೀಯವೆನಿಸಿವೆ.

'ಶಬ್ದವಿವೇಕ' ಎಂಬ ಐದನೆಯ ಭಾಗದಲ್ಲಿ ಜಾಣ, ಕರ್ಣಾಟಕವೊ ಕರ್ನಾಟಕವೊ, ಮರುಳಯ್ಯನ್> ಮಲ್ಲಿಕಾರ್ಜುನ, ಕಪ್ಪಡಿ–ಮೊದಲಾದ ಪದಗಳ ಸ್ವರೂಪ–ಅರ್ಥ, ನಿಜರೂಪ ನಿರ್ಧರಿಸುವಲ್ಲಿ ಆಧಾರವಾಗಿ ಬಳಸಿಕೊಂಡ ಕಾವ್ಯ, ಶಾಸನ, ಐತಿಹ್ಯಗಳ ಉದಾಹರಣೆಗಳು ದೇವೀರಪ್ಪನವರ ಅಧ್ಯಯನದ ವಿಸ್ತಾರವನ್ನು, ಸೂಕ್ಷ್ಮದೃಷ್ಟಿ, ತರ್ಕತೀಕ್ಷ್ಣತೆಯನ್ನು ತಿಳಿಸಿಕೊಡುತ್ತವೆ.

'ಸಂಕೀರ್ಣ' ಎಂಬ ಆರನೆಯ ಭಾಗದಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ೧೫ ಲೇಖನಗಳಿವೆ. ಅರ್ಜುನವಾಡದ ಶಿಲಾಲೇಖ, ಪಂಚಾಚಾರರು ಎಂಬುವರು ಎಲ್ಲಿದ್ದರು? ಕೇಶಾಂಬರೆ ದಿಗಂಬರೆಯೆ? ಕನ್ನಡ ನಾಡಿನ ಹಸ್ತಪ್ರತಿಗಳು ಮೊದಲಾದ ಲೇಖನಗಳು ನೂತನ ಅಂಶಗಳನ್ನು ಪ್ರಕಟಿಸುವ ಪ್ರಮುಖ ಬರೆಹಗಳೆನಿಸಿವೆ.

ದೇವೀರಪ್ಪನವರು ಸಂಶೋಧನಕಾರ್ಯದ ಜೊತೆಗೆ ಮೈಸೂರು ವಿಶ್ವವಿದ್ಯಾ ನಿಲಯದ ಪಠ್ಯಪುಸ್ತಕ ಸಮಿತಿಯ ಸದಸ್ಯರಾಗಿಯೂ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಕೇರಳ ಸರ್ಕಾರದ ಪಠ್ಯಪುಸ್ತಕ ಸಮಿತಿಯ ವತಿಯಿಂದ ಕಾಸರಗೋಡಿನ ಕನ್ನಡ ಶಾಲೆಯ ಮಕ್ಕಳಿಗಾಗಿ ಸವಿಗನ್ನಡ ಪಾಠಮಾಲೆಯ ಅಡಿಯಲ್ಲಿ ಎಂಟು ಪುಸ್ತಕಗಳನ್ನು ವಿವಿಧ ತರಗತಿಗಳಿಗಾಗಿ ಸಿದ್ಧಪಡಿಸಿಕೊಟ್ಟಿದ್ದಾರೆ. ಶಿವಕುಮಾರ ಪ್ರಕಾಶನ ಎಂಬುದನ್ನು ಸ್ಥಾಪಿಸಿ ಅದರ ಮೂಲಕ ತಮ್ಮ ಅನೇಕ ಗ್ರಂಥಗಳನ್ನು ಪ್ರಕಟಿಸಿದ್ದಾರೆ.

ದೇವೀರಪ್ಪನವರಿಗೆ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ೧೯೭೫ನೆಯ ಸಾಲಿನ ಸಾಹಿತ್ಯ ಪ್ರಶಸ್ತಿ ನೀಡಿ ಗೌರವಿಸಿದೆ. ಸಿರಿಗೆರೆಯ ತರಳಬಾಳು ಸಂಸ್ಥೆ ೧೯೬೯ರಲ್ಲಿ ಸಾಹಿತ್ಯಶ್ರೀ ಎಂಬ ಪ್ರಶಸ್ತಿ ನೀಡಿದೆ.

ದೇವೀರಪ್ಪನವರು ಜೀವನದ ಕೊನೆಯುಸಿರಿರುವವರೆಗೂ ಸಾಹಿತ್ಯ ಸಂಶೋಧನ ಕಾವ್ಯದಲ್ಲಿ ತೊಡಗಿದ್ದರು. ಬಸವಣ್ಣನವರ ವಚನ ಸಂಸ್ಕರಣ ಕಾರ್ಯ ಮಾಡಿ ಮುಗಿಸಬೇಕೆಂಬುದು ಅವರ ಕೊನೆಯ ಬಯಕೆಯಾಗಿತ್ತು. ಆದರೆ, ಅದು ಈಡೇರಲಿಲ್ಲ. ಶ್ರೀಯುತರು ೦೩.೦೧.೧೯೮೮ ರಂದು ಮರಣಹೊಂದಿದರು.

❐ ❐ ❐

ಜಿ. ವೆಂಕಟಸುಬ್ಬಯ್ಯ

(೧೯೧೩–೨೦೨೧)

ಬಿ. ವೆಂಕಟರಾಮಣ್ಣ

ವಿದ್ವತ್ ಮನೆತನಕ್ಕೆ ಸೇರಿದ ಜಿ. ವೆಂಕಟಸುಬ್ಬಯ್ಯನವರು ೨೩–೦೮–೧೯೧೩ರಂದು ವಿದ್ವಾನ್ ತಿಮ್ಮಣ್ಣಯ್ಯ ಮತ್ತು ಶ್ರೀಮತಿ ಸುಬ್ಬಮ್ಮ ದಂಪತಿಗಳ ಹಿರಿಯ ಮಗನಾಗಿ ಮಂಡ್ಯ ಜಿಲ್ಲೆಯ ಕೈಗೊನಹಳ್ಳಿಯಲ್ಲಿ ಜನಿಸಿದರು. ಪೂರ್ಣ ಹೆಸರು ಗಂಜಾಂ ವೆಂಕಟಸುಬ್ಬಯ್ಯ. ತಂದೆ ಗಂಜಾಂ ತಿಮ್ಮಣ್ಣಯ್ಯನವರು ಮೈಸೂರಿನಲ್ಲಿ ಸಂಸ್ಕೃತದಲ್ಲಿ ವಿದ್ವಾನ್ ಪೂರೈಸಿ ರಾಜ್ಯದ ವಿವಿಧೆಡೆ ಪ್ರೌಢಶಾಲೆಗಳಲ್ಲಿ ಉಪಾಧ್ಯಾಯರಾಗಿದ್ದರು. ಕನ್ನಡ ಮತ್ತು ಸಂಸ್ಕೃತಗಳಲ್ಲಿ ಅವರದು ಅಗಾಧ ಪಾಂಡಿತ್ಯ. ಅವರು ಅರಮನೆಯ ವಿದ್ವಾಂಸರಾಗಿದ್ದರು. ರಘುವೀರ ಚರಿತೆ ಮತ್ತು ಮಾಲತೀಮಾಧವ ಕೃತಿಗಳನ್ನು ಅನುವಾದ ಮಾಡಿದ್ದಾರೆ. ತಂದೆಯ ಪಾಂಡಿತ್ಯ, ಪ್ರತಿಭೆ, ಪ್ರೇರಣೆ ಮತ್ತು ಮಾರ್ಗದರ್ಶನಗಳಿಂದ ವೆಂಕಟಸುಬ್ಬಯ್ಯನವರು ವಿದ್ವತ್ತನ್ನು ಮೈಗೂಡಿಸಿಕೊಂಡರು, ನಿಘಂಟುತಜ್ಞರೆಂದು ಹೆಸರಾದರು.

ಇವರ ಬಾಲ್ಯ ಕಡುಬಡತನದಿಂದ ಕೂಡಿತ್ತು. ತಂದೆ ಬನ್ನೂರಿನ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದರಿಂದ ಅಲ್ಲಿ ಕನ್ನಡ ಲೋವರ್ ಸೆಕೆಂಡರಿಗೆ ಸೇರಿಸಿದರು. ತಂದೆಗೆ ಮಧುಗಿರಿಗೆ ವರ್ಗವಾದಾಗ ರೆನ್ ಅಂಡ್ ಮಾರ್ಟಿನ್ ಇಂಗ್ಲಿಷ್ ವ್ಯಾಕರಣವನ್ನು ಸ್ವತಃ ಅಭ್ಯಾಸ ಮಾಡಿ ಅಲ್ಲಿ ಇಂಗ್ಲಿಷ್ ಕಲಿತರು. ಅವರ ಜ್ಞಾನ, ತಿಳಿವಳಿಕೆ ಕೇವಲ ಕನ್ನಡಕ್ಕೆ ಮಾತ್ರ ಸೀಮಿತಗೊಳ್ಳದೆ, ತನ್ನ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಯಿತು. ೧೯೩೯ರಲ್ಲಿ ಕನ್ನಡ ಎಂ.ಎ. ಪದವಿಯನ್ನು ಕೇಣಿಸಿದ್ದಪ್ಪ ಸುವರ್ಣಪದಕ ಮತ್ತು ಪೊನ್ನಶೆಟ್ಟಿ ಬಹುಮಾನಗಳೊಂದಿಗೆ ಪ್ರಥಮ ಸ್ಥಾನದಲ್ಲಿ ಪಡೆದರು. ಮನೆಯಲ್ಲಿ ಬಡತನವಿದ್ದ ಕಾರಣ ಅವರಿಗೆ ಕೆಲಸದ ಅಗತ್ಯವಿತ್ತು. ಕೆಲವು ಕಾಲ ಪ್ರೊ. ಗೋಪಾಲಸ್ವಾಮಿಯವರು ನಡೆಸುತ್ತಿದ್ದ ಬಾಲವಾಡಿಯಲ್ಲಿ ಕೆಲಸ ಮಾಡಿದರು.

ಎಲ್ಲೂ ಕೆಲಸ ಸಿಗದಿದ್ದಾಗ ಬಿ.ಟಿ.ಗೆ ಸೇರಿದರು. ಬಿ.ಟಿ.ಯಲ್ಲಿ ಉತ್ತೀರ್ಣರಾದ ಮೇಲೆ (೧೯೩೯) ಮೈಸೂರು ಮಹಾರಾಜ ಕಾಲೇಜಿನಲ್ಲಿ ಕೆಲಕಾಲ

ಹಂಗಾಮಿ ಅಧ್ಯಾಪಕರಾಗಿ ಕೆಲಸ ಮಾಡಿದರು. ನಾಲ್ಕು ವರ್ಷಗಳ ಬಳಿಕ ಮತ್ತೆ ನಿರುದ್ಯೋಗಿಯಾದರು. ಅನಂತರ ಬೆಂಗಳೂರು ಹೈಸ್ಕೂಲ್‌ನಲ್ಲಿ ಸೆಂಟ್ರಲ್ ಕಾಲೇಜಿನ ಪ್ರಿನ್ಸಿಪಾಲರಾದ ಪ್ರೊ.ಸಿ.ಆರ್. ನಾರಾಯಣರಾವ್ ಅವರ ಶಿಫಾರಸ್ಸಿನ ಮೇಲೆ ಕೆಲಸ ಮಾಡಲು ಅವಕಾಶ ದೊರೆಯಿತು. ಅಲ್ಲಿ ಅವರು ಇಂಗ್ಲಿಷ್ ವ್ಯಾಕರಣವನ್ನು ಪಾಠ ಮಾಡಬೇಕಾಗಿತ್ತು. ಅದು ಅವರಿಗೆ ಸವಾಲಿನ ಕೆಲಸವಾಗಿತ್ತು. ಅವರು ಇಂಗ್ಲಿಷ್ ವ್ಯಾಕರಣ ತರಗತಿಗಳನ್ನು ವಿದ್ಯಾರ್ಥಿಗಳು ಮೆಚ್ಚುವಂತೆ ಪಾಠ ಮಾಡುತ್ತಿದ್ದರು. ಇವರ ತರಗತಿಗಳಿಗೆ ಬೇರೆ ತರಗತಿಗಳಿಂದಲೂ ಮಕ್ಕಳು ಬಂದು ಪಾಠ ಕೇಳುತ್ತಿದ್ದರಂತೆ. ಅನಂತರ ಬೆಣಗಳೂರಿನ ವಿಜಯ ಕಾಲೇಜಿನಲ್ಲಿ ಅಧ್ಯಾಪಕರಾಗಿ ಸೇರಿ, ಅಲ್ಲೇ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ನಿವೃತ್ತರಾದರು.

ಸುದೀರ್ಘ ಕಾಲ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದ ಜಿ. ವೆಂಕಟಸುಬ್ಬಯ್ಯ ಅವರು ಅಭಿಜಾತ ಸಾಹಿತ್ಯಕ್ಕೆ, ಭಾಷೆಗೆ ಅಪಾರ ಸೇವೆ ಮಾಡಿದ್ದಾರೆ. ಅವರ 'ಇಣುಕುನೋಟ' ಎಂಬುದು ಜನಪ್ರಿಯ ಮಾಸಪತ್ರಿಕೆಗೆ ಬರೆದ ಲೇಖನಗಳ ನ್ನೊಳಗೊಂಡ ಕೃತಿ. ಪಂಪ, ರನ್ನ, ನಾಗಚಂದ್ರ, ಹರಿಹರ, ರಾಘವಾಂಕ, ಚಾಮರಸ, ಕುಮಾರವ್ಯಾಸ, ಲಕ್ಷ್ಮೀಶ, ನಯಸೇನ, ಕನಕದಾಸ, ಕುಮಾರವಾಲ್ಮೀಕಿ, ರತ್ನಾಕರ ವರ್ಣಿ, ಗೋವಿಂದ ವೈದ್ಯ, ನಿತ್ಯಾತ್ಮಶುಕಯೋಗಿ, ಕೆಂಪು ನಾರಾಯಣ, ಮುದ್ದಣ ಮತ್ತು ಬಸವಪ್ಪಶಾಸ್ತ್ರಿ ಮೊಸಲಾದವರ ಹಳಗನ್ನಡ–ನಡುಗನ್ನಡ– ಹೊಸಗನ್ನಡ ಕೃತಿಗಳ ವಿವೇಚನೆ ಇಲ್ಲಿದೆ.

'ಅನುಕಲ್ಪನ' ಜಿ.ವಿ.ಯವರ ವಿಮರ್ಶಾಲೇಖನಗಳ ಸಂಕಲನ. "ಕವಿಯ ಪ್ರತಿಭೆಯನ್ನನುಸರಿಸಿದ ಅವನ ಕಲ್ಪನೆಗೆ ಸರಿಯಾದ ಪುನಃ ಕಲ್ಪನೆಯನ್ನು ಅನುಕಲ್ಪನೆ ಎಂದು ಕರೆಯಬಹುದೇ?" ಎಂದು ಪ್ರಶ್ನಿಸುತ್ತಾರೆ. ಇದು ಸಹೃದಯ ಎಂಬ ಭಾರತೀಯ ಕಾವ್ಯ ಮೀಮಾಂಸೆಯ ಪರಿಕಲ್ಪನೆಗೆ ಅನುಗುಣವಾದ ವಿವರಣೆ ಆಗುತ್ತದೆ. ಅದಕ್ಕೆ ಅನುಗುಣವಾದ ಕೃತಿ ಪರಿಶೀಲನೆಯನ್ನಿಲ್ಲಿ ನೋಡಬಹುದು. ಹಳಗನ್ನಡದ ಕೆಲವು ಕಾವ್ಯಗಳು ಹಾಗೂ ಹೊಸ ಕನ್ನಡದ ವಿವಿಧ ಸಾಹಿತ್ಯ ಪ್ರಕಾರಗಳ ಕೃತಿಗಳನ್ನು ಈ ಸಂಕಲನದಲ್ಲಿ ವಿಮರ್ಶಿಸಿದ್ದಾರೆ. ಹರಿಹರನ 'ಗಿರಿಜಾಕಲ್ಯಾಣ'ದಿಂದ ಹಿಡಿದು ಗದಾಯುದ್ಧದ ನಾಟಕ, ವಿ.ಸೀ.ಅವರ 'ದ್ರಾಕ್ಷಿ ದಾಳಿಂಬೆ' ಸಂಕಲನ, ಮಾಸ್ತಿಯವರ 'ಯಶೋಧರಾ' ನಾಟಕ, ಕಾರಂತರ 'ಕುಡಿಯರ ಕೂಸು' ಕಾದಂಬರಿ, ಭಾರತೀಪ್ರಿಯರ 'ರುದ್ರವೀಣೆ' ಕಥಾಸಂಕಲನ,

ಗೋಕಾಕ್, ಚನ್ನವೀರ ಕಣವಿ, ರಾಮಚಂದ್ರ ಶರ್ಮರ ಕವನಗಳ ಪರಿಶೀಲನೆಯನ್ನೊಳಗೊಂಡ ಲೇಖನಗಳ ಸಂಕಲನವಿದು. ಈ ಲೇಖನಗಳ ವೈಶಿಷ್ಟ್ಯವೆಂದರೆ ಕವಿಯ ಕಾಲ ಹಾಗೂ ಅವನ ಮನೋಭಾವನೆಗಳ ಹಿನ್ನೆಲೆಯಲ್ಲಿ ಚಿತ್ರಿಸಿರುವುದು.

ಆರ್. ನರಸಿಂಹಾಚಾರ್ಯರ ಕರ್ನಾಟಕ ಕವಿಚರಿತೆ ಸಂಪುಟಗಳ ಪರಿಷ್ಕರಣೆಯಲ್ಲೂ ತೊಡಗಿಸಿಕೊಂಡು ಹೊಸ ಅಂಶಗಳನ್ನು ಸಂಶೋಧನೆ ಮಾಡಿ ಅದನ್ನು ಅನುಬಂಧವಾಗಿ ಸೇರಿಸಲು ಶ್ರಮಿಸಿದ್ದಾರೆ. ವಿ.ಸೀ. ಅವರ ನೇತೃತ್ವದಲ್ಲಿ ಸಾಗಿದ್ದ ಐ.ಬಿ.ಎಚ್. ಪ್ರಕಾಶನದ ಕವಿ-ಕಾವ್ಯ ಮಾಲೆಯಲ್ಲಿ, ಅವರ ಅನಂತರ ಜಿ.ವಿ. ಅವರು ಅನೇಕ ಗ್ರಂಥಗಳ ಸಂಪಾದನೆಯ ಕೆಲಸವನ್ನು ನಿರ್ವಹಿಸಿದ್ದಾರೆ. ಅನೇಕ ಹಳಗನ್ನಡ ಗ್ರಂಥಗಳ ಸಂಗ್ರಹಗಳನ್ನು ಪ್ರಸ್ತಾವನೆಯೊಂದಿಗೆ ಸಿದ್ಧಪಡಿಸಿರುವ ಇವರು ಆಯಾ ಕೃತಿ-ಕವಿಗಳ ಬಗ್ಗೆ ವಿಶದ ಮಾಹಿತಿ ನೀಡಿದ್ದಾರೆ. ಚೌಂಡರಸನ ನಳಚಂಪೂ ಸಂಗ್ರಹಕ್ಕೆ ಬರೆದ ಪ್ರಸ್ತಾವನೆ ಪ್ರಬುದ್ಧವಾಗಿದೆ. ಮುದ್ದಣ ಭಂಡಾರದ ಎರಡು ಸಂಪುಟಗಳು ಜಿ.ವಿ. ಅವರ ಗ್ರಂಥಸಂಪಾದನ ಕೌಶಲಕ್ಕೆ ನಿದರ್ಶನ.

ವೆಂಕಟಸುಬ್ಬಯ್ಯನವರು ನಿಘಂಟುಗಳ ಕ್ಷೇತ್ರಕ್ಕೆ ಮಾಡಿದ ಸೇವೆ ಗಣನೀಯವಾದುದು. ಇವರ ಪ್ರಧಾನ ಸಂಪಾದಕತ್ವದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ನಿಘಂಟು ಸಂಪುಟಗಳು ಪ್ರಕಟವಾದುವು. ಈ ಕಾರ್ಯಕ್ಕಾಗಿ ಅವರು ಮಾಡಿದ ವ್ಯಾಪಕ ಅಧ್ಯಯನ ಮತ್ತು ಸಿದ್ಧತೆಗಳು ಅವರಿಂದ ಸ್ವತಂತ್ರವಾದ ನಿಘಂಟುಗಳ ರಚನೆಗೆ ಉತ್ತಮ ಭೂಮಿಕೆಯನ್ನೊದಗಿಸಿದುವು. ಐಬಿಎಚ್ ಹೊರತಂದ ಕನ್ನಡ-ಕನ್ನಡ-ಇಂಗ್ಲಿಷ್ ನಿಘಂಟು ಮತ್ತು ಕನ್ನಡ-ಕನ್ನಡ ನಿಘಂಟು ಗಳನ್ನು ಜಿ.ವಿ.ಯವರೇ ಸಿದ್ಧಪಡಿಸಿಕೊಟ್ಟರು.

'ಮುದ್ದಣ ಪದಪ್ರಯೋಗಕೋಶ'ವನ್ನು ಸಿದ್ಧಪಡಿಸಿ ಮುದ್ದಣನ ಕಾವ್ಯಗಳನ್ನು ಸಂಪಾದಿಸಿ ಆ ಕವಿಯ ಅಧ್ಯಯನಕ್ಕೆ ಪೂರಕವಾಗಿ ತಯಾರಿಸಿದ್ದಾರೆ. ಮುದ್ದಣನ ಶಬ್ದಪ್ರಪಂಚ ಬಹುವಿಸ್ತಾರವಾದುದು. ಮುದ್ದಣ ತನ್ನ ಕಾವ್ಯಗಳಲ್ಲಿ ಪ್ರಯೋಗಿಸಿರುವ ನಾಲ್ಕು ಸಾವಿರಕ್ಕೂ ಹೆಚ್ಚಿನ ಶಬ್ದಗಳನ್ನು ಅರ್ಥಸಹಿತವಾಗಿ ಕೊಟ್ಟಿದ್ದಾರೆ. ಕೋಶದ ಪ್ರಾರಂಭದಲ್ಲಿ ಬರೆದಿರುವ ಮುದ್ದಣನ 'ಶಬ್ದಕಲ್ಪ' ಮತ್ತು ಎರಡು ಪ್ರಸ್ತಾವನೆಗಳು ಕವಿಯ ಶಬ್ದಕೌಶಲದ ಮೂಲಚೂಲಗಳನ್ನು ಕೆದಕಿ ಹೊಸ ಸಂಶೋಧನೆಯನ್ನು ಮುಂದಿಡುತ್ತಾರೆ. ಈ ಕೋಶದ ಕೊನೆಯಲ್ಲಿ ಸೇರಿರುವ

ಅನುಬಂಧ 'ಶ್ರೀರಾಮಾಶ್ವಮೇಧ'ದಲ್ಲಿಯ ಮುದ್ದಣ ಮನೋರಮೆಯವರ ಎಲ್ಲಾ ಸಂಭಾಷಣೆಗಳನ್ನು ಹೊಸಗನ್ನಡದಲ್ಲಿ ಅನುವಾದಿಸಿ ಹಾಗೂ ಅಲ್ಲಿಯ ಸಂದರ್ಭಗಳ ಹಿನ್ನೆಲೆಯಲ್ಲಿ ಕಾಣುವ ಕಾವ್ಯ ವಿಮರ್ಶನ ಸಿದ್ಧಾಂತವನ್ನು ಗುರುತಿಸಿದ್ದಾರೆ.

ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ 'ಇಗೋ ಕನ್ನಡ' ಹೆಸರಿನ ಅಂಕಣ ಬರೆಹ ಭಾಷಾಸಕ್ತರಲ್ಲಿ ಕುತೂಹಲ ಮೂಡಿಸಿತು. ಇದರಲ್ಲಿ ಶಬ್ದಗಳ ಹಿಂದೆ ನಡೆದಿರುವ ಸಾಮಾಜಿಕ ಪಲ್ಲಟಗಳ ಹಾಗೂ ಜನಮನ ಸ್ಪಂದನ ಹರಳುಗಟ್ಟಿ ಅಪರೂಪದ ಶಬ್ದಲೋಕವನ್ನೇ ಸೃಷ್ಟಿಸಿರುವುದನ್ನು ಕಾಣಬಹುದು. ಲೇಖಕರು ಇದನ್ನು ಸಾಮಾಜಿಕ ನಿಘಂಟು ಎಂದು ಕರೆದಿದ್ದಾರೆ. ಈ ನಿಘಂಟಿಗೆ ಒಂದು ಪ್ರವೇಶ ಸಿದ್ಧತೆ ಎಂಬ ಪ್ರಸ್ತಾವನೆಯ ಭಾಗದಲ್ಲಿ ಭಾಷೆಯನ್ನು ಆಧುನಿಕ ಗೊಳಿಸುವುದು, ಕನ್ನಡದ ಬೆಳೆವಣಿಗೆ ಆಸಕ್ತರಿಂದ ಬರುವ ಸಂದೇಶಗಳ ಸ್ವರೂಪ, ಅಧ್ಯಾಪಕರ ಸಂಶಯಗಳು ಮುಂತಾದವುಗಳ ಬಗ್ಗೆ ಸ್ಪಷ್ಟ ವಿವರಣೆ ನೀಡಲಾಗಿದೆ. ಈ ಅಂಕಣ ಬರೆಹಗಳು ಮೂರು ಸಂಪುಟಗಳಲ್ಲಿ ಹೊರಬಂದಿರುವುದು ಇವುಗಳ ಮೌಲ್ಯವನ್ನು ತಿಳಿಸುತ್ತದೆ.

'ಎರವಲು ಪದಕೋಶ' ಕನ್ನಡದಲ್ಲಿ ಬಳಕೆಯಲ್ಲಿರುವ ಸ್ವೀಕರಣ ಶಬ್ದಗಳ ಮೂಲಚೂಲಗಳನ್ನು ವಿವರಿಸುತ್ತದೆ. ಎರವಲು ಶಬ್ದಗಳು ಕನ್ನಡಕ್ಕೆ ಬಂದಾಗ ಆಗುವ ರೂಪ ವ್ಯತ್ಯಾಸ ಹಾಗೂ ಅರ್ಥವ್ಯತ್ಯಾಸಗಳ ಸ್ವರೂಪವನ್ನು ವಿವರಿಸಿ, ಇಂಗ್ಲಿಷ್–ಅರಬ್ಬೀ–ಪಾರಸೀ ಹಾಗೂ ಇತರ ಭಾರತೀಯ ಭಾಷೆಗಳಿಂದ ಶಬ್ದಗಳು ಕನ್ನಡಕ್ಕೆ ಬಂದಿರುವ ಬಗೆಯನ್ನು ಪೀಠಿಕೆಯಲ್ಲಿ ನೀಡುತ್ತಾರೆ.

ಪ್ರಿಸಮ್ ಇಂಗ್ಲಿಷ್–ಕನ್ನಡ ನಿಘಂಟನ್ನು ಶ್ರೀಮತಿ ರಾಜ್ಯಶ್ರೀ ಸತೀಶ್ ಅವರೊಂದಿಗೆ ಜಿ.ವಿ. ಅವರು ಸಿದ್ಧಪಡಿಸಿದ್ದಾರೆ. ಇದರಲ್ಲಿ ಸುಮಾರು ೨೫,೦೦೦ ಮುಖ್ಯ ಉಲ್ಲೇಖಗಳಿವೆ. ಇವುಗಳ ಅಡಿಯಲ್ಲಿ ಇವುಗಳಿಗೆ ಸಂಬಂಧಿಸಿದ ಪದಪುಂಜಗಳ ಮತ್ತು ನುಡಿಗಟ್ಟುಗಳ ಅರ್ಥ ವಿವರಣೆಯನ್ನು ಒಂದು ಲಕ್ಷಕ್ಕೂ ಹೆಚ್ಚಿನ ಕನ್ನಡ ಶಬ್ದಗಳ ಮೂಲಕ ನೀಡಲಾಗಿದೆ. ಕೊನೆಯಲ್ಲಿ ವಿರಾಮಚಿಹ್ನೆಗಳ ಬಗೆಗಿನ ವಿವರಣೆ, ಇಂಗ್ಲಿಷ್‌ನಲ್ಲಿ ಬಳಕೆಗೊಳ್ಳುವ ಅನ್ಯಭಾಷಾ ಪದಪುಂಜಗಳ ಅರ್ಥವಿವರಣೆ, ವಿಶ್ವ, ಭಾರತ ಹಾಗೂ ಕರ್ನಾಟಕಕ್ಕೆ ಸಂಬಂಧಿಸಿದ ಅನೇಕ ಉಪಯುಕ್ತ ಕೋಷ್ಟಕಗಳನ್ನು ಸೇರಿಸಲಾಗಿದೆ. ವಿಶೇಷವೆಂದರೆ ಇದನ್ನು ಬ್ರೈಲ್

ಲಿಪಿಯ ಆವೃತ್ತಿಯಲ್ಲಿ ದೊರೆಯುವಂತೆ ಮಾಡಲಾಗಿದೆ. ಕೆನರಾ ಬ್ಯಾಂಕ್ ರಿಲೀಸ್ ಅಂಡ್ ವೆಲ್ಫೇರ್ ಸೊಸೈಟಿ ಈ ಕೆಲಸವನ್ನು ಮಾಡಿದೆ.

ಪ್ರಿಸಮ್ ಕನ್ನಡ ಕ್ಲಿಷ್ಟ ಪದಕೋಶದಲ್ಲಿ ಶಬ್ದಗಳ ಕಾಗುಣಿತದ ವಿವರ, ವ್ಯಾಕರಣ ವಿವರ, ಅರ್ಥ ವಿವರಣೆ ಹಾಗೂ ಅವುಗಳ ವ್ಯುತ್ಪತ್ತಿಯನ್ನು ನೀಡಲಾಗಿದೆ. ಕೊನೆಯಲ್ಲಿ ಪರಭಾಷಾ ಪದಪುಂಜಗಳಿಗೆ ನೀಡಿರುವ ಅರ್ಥ ವಿವರಣೆ, ಸಂಕ್ಷಿಪ್ತಗಳು ಹಾಗೂ ಕೋಷ್ಟಕಗಳನ್ನು ಸೇರಿಸಿರುವುದು ಈ ನಿಘಂಟಿನ ವೈಶಿಷ್ಟ್ಯ.

ಕನ್ನಡ ನಿಘಂಟುಶಾಸ್ತ್ರ ಪರಿಚಯ ಜಿ.ವಿ. ಅವರ ಹೊಸಪ್ರಯತ್ನ ಎನ್ನಲಾಗಿದೆ. ಹಿಂದಿನ ಕೋಶ ನಿರ್ಮಾಣ ಪದ್ಧತಿ ಮತ್ತು ಆಧುನಿಕ ನಿಘಂಟು ರಚನೆಗಳ ಮೇರೆಗಳಲ್ಲಿ ಈ ಶಾಸ್ತ್ರದ ಬೆಳೆವಣಿಗೆಯನ್ನು ಅದರ ವಿವಿಧ ಮಗ್ಗಲುಗಳನ್ನು ಈ ಕೃತಿ ನಿರೂಪಿಸುತ್ತದೆ. ಭಾಷೆ ಬೆಳೆಯುವುದು ಅದನ್ನು ದಿನನಿತ್ಯ ಬಳಸುವ ಜನರಿಂದ. ಹಾಗಾಗಿ ಜನರಲ್ಲಿ ಭಾಷಾಪ್ರಜ್ಞೆಯನ್ನು ಬೆಳೆಸುವುದರಿಂದ ಮತ್ತು ಅವರ ತಿಳಿವಳಿಕೆಯನ್ನು ಮೊನಚುಗೊಳಿಸುವುದರಿಂದ ಕನ್ನಡ ಬೆಳೆವಣಿಗೆಗೆ ಅಪೇಕ್ಷಣೀಯ ಮಾರ್ಗವನ್ನು ನಿರ್ಮಿಸಬಹುದು ಎಂಬುದು ಜಿ.ವಿ. ಅವರ ಬಲವಾದ ನಂಬಿಕೆ.

ಜಿ.ವೆಂಕಟಸುಬ್ಬಯ್ಯ ಅವರು ನಿಘಂಟುತಜ್ಞರಾಗಿ ಮುಂದೆ ಆಗಬೇಕಾ ಗಿರುವ ಕಾರ್ಯಗಳನ್ನು ವಿವರಿಸುತ್ತಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಸಂಪುಟಗಳ ಒಂದು ಬೃಹನ್ನಿಘಂಟು ಸಂಪೂರ್ಣಗೊಂಡಿದೆ. ಒಂದು ಭಾಷೆಯ ನಿಘಂಟು ಕಾರ್ಯ ಸಮಗ್ರವಾಗಿ ಪೂರ್ಣಗೊಳ್ಳಬೇಕೆಂದು ಅವರು ಬಯಸುತ್ತಾರೆ. ಆದರೆ ನಿಘಂಟು ನಿರ್ಮಾಣವೆಂಬುದು ಯಾವ ಭಾಷೆಯಲ್ಲಿಯೂ ಎಂದೂ ಕೊನೆಗಾಣು ವುದೇ ಇಲ್ಲವೆಂದು ಅಭಿಪ್ರಾಯಪಡುತ್ತಾರೆ.

ಅನೇಕ ಭಾರತೀಯ ಭಾಷಾನಿಘಂಟು ಸಮಿತಿಗಳು ಜಿ.ವಿ. ಅವರನ್ನು ಸಲಹಾ ಸಮಿತಿ ಸದಸ್ಯರನ್ನಾಗಿ ಮಾಡಿಕೊಂಡು ಅವರ ವಿದ್ವತ್ತು ಮತ್ತು ಅನುಭವಗಳ ಪ್ರಯೋಜನವನ್ನು ಪಡೆದಿವೆ. ಅನೇಕ ವರ್ಷಗಳ ಕಾಲ ಇವರು ಅಖಿಲಭಾರತ ನಿಘಂಟುಕಾರರ ಸಂಘಕ್ಕೆ ಉಪಾಧ್ಯಕ್ಷರಾಗಿ ಮಾರ್ಗದರ್ಶನವನ್ನು ನೀಡಿದ್ದಾರೆ. ಅಂದಿನ ಆಂಧ್ರಪ್ರದೇಶದ ತೆಲುಗು ಅಕಾಡೆಮಿಯು ತನ್ನ 'ಶಬ್ದಸಾಗರ' ಯೋಜನೆಗೆ ಸಲಹೆಗಾರರನ್ನಾಗಿ ಮಾಡಿಕೊಂಡು ಇವರ ಜ್ಞಾನದ ಲಾಭವನ್ನು ಪಡೆದಿದೆ. ಮದರಾಸಿನ ಇನ್‌ಸ್ಟಿಟ್ಯೂಟ್ ಆಫ್ ಏಷ್ಯನ್ ಸ್ಟಡೀಸ್ ಆಯೋಜಿಸಿದ

ಕನ್ನಡ–ಇಂಗ್ಲಿಷ್–ತಮಿಳು–ಜಪಾನೀಸ್ ನಿಘಂಟಿನ ಸಲಹೆಗಾರರನ್ನಾಗಿ ನೇಮಿಸಿತ್ತು. ಕರ್ನಾಟಕ ಮಾಧ್ಯಮ ಅಕಾಡೆಮಿಯು ಪತ್ರಿಕಾ ಪದಕೋಶಕ್ಕೆ ಜಿ.ವಿ. ಅವರನ್ನು ಪ್ರಧಾನ ಸಂಪಾದಕರನ್ನಾಗಿ ಆಯ್ದುಕೊಂಡಿತ್ತು.

ಜಿ.ವಿ. ಅವರು ೧೯೬೪–೧೯೬೯ರ ತನಕ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಇವರ ಅವಧಿಯಲ್ಲಿ ರಾಜ್ಯಾದ್ಯಂತ ಸಂಚರಿಸಿ ತಮ್ಮ ಉಪನ್ಯಾಸಗಳ ಮೂಲಕ ಜನರಲ್ಲಿ ತಾಯಿನುಡಿಯ ಬಗ್ಗೆ ಅಭಿಮಾನ ಮೂಡುವಂತೆ ಪ್ರೇರೇಪಿಸಿದವರು. ಬೆಂಗಳೂರಿನ ಶ್ರೀರಾಮಕೃಷ್ಣ ಸ್ಟೂಡೆಂಟ್ಸ್ ಹೋಂನ ಅಧ್ಯಕ್ಷರಾಗಿ ವಿದ್ಯಾರ್ಥಿಗಳ ಏಳಿಗೆಗಾಗಿ ಶ್ರಮಿಸಿದವರು.

ಜಿ.ವಿ. ಅವರ ಬಹುಮುಖೀ ಸಾಧನೆಗಾಗಿ ಕೆಲವು ಪ್ರಶಸ್ತಿಗಳು, ಗೌರವಗಳು ಸಂದಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ ಹಾಗೂ ಗೌರವ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಪತ್ರಿಕಾ ಅಕಾಡೆಮಿಯ ವಿಶೇಷ ಪುರಸ್ಕಾರ, ಶಂಬಾ ಜೋಷಿ, ಕಾರಂತ, ಸೇಡಿಯಾಪು, ಮಾಸ್ತಿ, ಮುದ್ದಣ ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಪ್ರಶಸ್ತಿಗಳು ದೊರೆತಿವೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯ ಇವರಿಗೆ 'ನಾಡೋಜ' ಎಂಬ ಗೌರವ ಡಾಕ್ಟೊರೇಟ್ ನೀಡಿ ಗೌರವಿಸಿದೆ. ಸುವರ್ಣ ಕರ್ನಾಟಕ ಆಚರಣೆಯ ಸಂದರ್ಭದಲ್ಲಿ ಕರ್ನಾಟಕ ಸರ್ಕಾರ ಸುವರ್ಣ ಮಹೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಜಿ.ವಿ. ಅವರಿಗೆ ಅರವತ್ತು ವರ್ಷ ತುಂಬಿದಾಗ ಅಭಿಮಾನಿಗಳು 'ಸಾಹಿತ್ಯಜೀವಿ' ಎಂಬ ಗೌರವ ಗ್ರಂಥವನ್ನು ಸಮರ್ಪಿಸಿದರು. ಇವರ ಸಾಧನೆಗಳನ್ನು ಬಿಂಬಿಸುವ 'ಶಬ್ದಸಾಗರ' ಎಂಬ ಬೃಹತ್‌ಗ್ರಂಥವನ್ನು ಹೊರತರಲಾಗಿದೆ. ಪ್ರೊ.ಜಿ.ವಿ. ಅವರ ಜೀವ, ಭಾವ ಎಂಬ ಪರಿಚಯ ಗ್ರಂಥವೂ ಬಂದಿದೆ. ಇವರು ೧೯ ಏಪ್ರಿಲ್ ೨೦೨೧ರಲ್ಲಿ ಕೀರ್ತಿಶೇಷರಾದರು.

❐ ❐ ❐

ತೆಕ್ಕುಂಜ ಗೋಪಾಲಕೃಷ್ಣಭಟ್ಟ

(೧೯೧೬–೧೯೮೦)

ಗೀತಾ ನಾವಲ್

ದಕ್ಷಿಣ ಕನ್ನಡದ ಪಂಡಿತ ಪರಂಪರೆಯಲ್ಲಿ ಹೆಸರಾದ ಮುಳಿಯ ತಿಮ್ಮಪ್ಪಯ್ಯ, ಕುಕ್ಕಿಲ ಕೃಷ್ಣಭಟ್ಟರಂತಹವರ ಸಾಲಿಗೆ ಸೇರಿದ ಮತ್ತೊಬ್ಬ ಪಂಡಿತವರೇಣ್ಯರು ಗೋಪಾಲಕೃಷ್ಣಭಟ್ಟರು. ಕರಾವಳಿ ಕರ್ನಾಟಕದಲ್ಲಿ ಇವರನ್ನು ಡಿ.ಎಲ್. ನರಸಿಂಹಾ ಚಾರ್ಯರಿಗೆ ಹೋಲಿಸುವುದು ರೂಢಿ. 'ತೆಕ್ಕುಂಜ' ಎಂಬುದು ಗೋಪಾಲಕೃಷ್ಣಭಟ್ಟರ ಮನೆತನದ ಹೆಸರು. ಅದು ಬಂಟ್ವಾಳದ ಅಮ್ಮೆಂಬಳ ಮಾಗಣೆಯ ಕುರ್ನಾಡು ಗ್ರಾಮದಲ್ಲಿರುವ ಗುರಿಕಾರತನದ ಮನೆ. ತಂದೆ ಶಂಕರಭಟ್ಟರು ಆಯುರ್ವೇದ ಪಂಡಿತರು ಹಾಗೂ ಸಂಸ್ಕೃತ ಅಧ್ಯಾಪಕರು. ಮನೆಯಲ್ಲಿಯೇ ಔಷಧ ತಯಾರಿಸಿ ಚಿಕಿತ್ಸೆ ನೀಡುವ ರೂಢಿಯಿಂದ ಆ ಸುತ್ತುಮುತ್ತಿನ ಗ್ರಾಮಗಳಿಗೆಲ್ಲ ಬೇಕಾದವರಾಗಿದ್ದರು. ೧೯೧೬ರಲ್ಲಿ ಹುಟ್ಟಿದ ಗೋಪಾಲಕೃಷ್ಣರಿಗೆ ಎಳವೆಯಲ್ಲಿ ತಂದೆಯವರೇ ಪ್ರಥಮ ಗುರು. ರಘವಂಶ, ಕುಮಾರಸಂಭವ, ಕಿರಾತಾರ್ಜುನೀಯ, ನೈಷಧ ಮೊದಲಾದ ಸಂಸ್ಕೃತದ ಪಂಚಮಹಾಕಾವ್ಯಗಳನ್ನು ಆಗಿನ ಕಾಲದ ಆಸ್ತಿಕ ಮನೆತನಗಳ ರೂಢಿಯಂತೆ ಇವರಿಗೂ ಕಲಿಸಲಾಗಿತ್ತು. ಇವಲ್ಲದೆ ದಶಕುಮಾರಚರಿತ, ಚಂಪೂರಾಮಾಯಣ, ಪ್ರತಾಪರುದ್ರೀಯ ಮೊದಲಾದ ಕಾವ್ಯಗಳೂ ತಂದೆಯವರಿಂದಲೇ ಪಾಠವಾಗಿತ್ತು. ಸಂಸ್ಕೃತದಲ್ಲಿ ಸಂಭಾಷಿಸುವ ಚಾತುರ್ಯವೂ ಒಲಿದಿತ್ತು. ಅಮ್ಮೆಂಬಳದ ಸೋಮನಾಥ ಪಾಠಶಾಲೆಯಲ್ಲಿ ಕನ್ನಡ, ಸಂಸ್ಕೃತ, ಇಂಗ್ಲಿಷ್, ಗಣಿತ ಮೊದಲಾದದ ವಿಷಯಗಳನ್ನು ಅಭ್ಯಸಿಸಿ ೧೯೩೨ರಲ್ಲಿ ಮದರಾಸು ಸರಕಾರದ ಸಂಸ್ಕೃತ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ತದನಂತರ ಮಂಗಳೂರಿನ ಕೆನರಾ ಪ್ರೌಢಶಾಲೆಯಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಆಗ ಅವರಿಗೆ ೧೯ ವರ್ಷ ಪ್ರಾಯ. ೧೯೩೫ರಿಂದ ೧೯೩೭ರ ಅವಧಿಯಲ್ಲಿ

ಮಂಗಳೂರಿನ ಸೈಂಟ್ ಅಲೋಶಿಯಸ್ ಕಾಲೇಜಿನಲ್ಲಿ ಇಂಟರ್‌ಮೀಡಿಯಟ್ ಓದುತ್ತಿದ್ದಾಗ ಅಲ್ಲಿ ಕನ್ನಡ ಅಧ್ಯಾಪಕರಾಗಿದ್ದ ಮುಳಿಯ ತಿಮ್ಮಪ್ಪಯ್ಯನವರ ಪ್ರಭಾವಕ್ಕೆ ಒಳಗಾದರು. ಮುಳಿಯರ ಹತ್ತಿರದ ಬಂಧುವೂ ಆದುದರಿಂದ ಅವರ ವಾಸ್ತವ್ಯ ಮುಳಿಯರ ಮನೆಯಲ್ಲೇ ಆಗಿ ತೆಕ್ಕುಂಜರಿಗೆ ಕನ್ನಡ ಸಾಹಿತ್ಯದ ನಿಕಟ ಒಡನಾಟ ಸಾಧ್ಯವಾಯಿತು.

ಇಂಟರ್‌ಮೀಡಿಯಟ್ ಉತ್ತೀರ್ಣರಾದ ಬಳಿಕ ತೆಕ್ಕುಂಜರು ನಾಲ್ಕೈದು ವರ್ಷಗಳು ತೆಕ್ಕುಂಜಕ್ಕೆ ಮರಳಿ ತಂದೆಯವರ ಸಂಸ್ಕೃತ ಶಾಲೆಯಲ್ಲೇ ಶಿಕ್ಷಕರಾಗಿ ಸೇವೆ ಸಲ್ಲಿಸಿದರು. ಇದೇ ಅವಧಿಯಲ್ಲಿ ಖಾಸಗಿಯಾಗಿ ಓದಿ ಕನ್ನಡ ವಿದ್ವತ್ ಪದವಿಯನ್ನೂ ಪಡೆದರು. ಆ ಕಾಲದಲ್ಲಿ ಕನ್ನಡ ಎಂ.ಎ. ಪದವಿಯನ್ನು ಬಿ.ಓಎಲ್ ಎಂದು ಕರೆಯಲಾಗುತ್ತಿತ್ತು. ಮದರಾಸು ವಿಶ್ವವಿದ್ಯಾಲಯದಲ್ಲಿ ಬಿ.ಓಎಲ್ ಪದವಿ ಗಳಿಸಿ ೧೯೪೨ರಲ್ಲಿ ಮಂಗಳೂರಿನ ಸೈಂಟ್ ಅಲೋಶಿಯಸ್ ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿ ನೇಮಕ ಗೊಂಡರು. ೧೯೪೬ರಲ್ಲಿ ಅದೇ ಸಂಸ್ಥೆಯ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇರಿ, ಮೂವತ್ತು ವರ್ಷಗಳ ಕಾಲ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ೧೯೭೬ ರಲ್ಲಿ ನಿವೃತ್ತರಾದ ಬಳಿಕವೂ ವಿವಿಧ ವಿಶ್ವವಿದ್ಯಾಲಯಗಳ ಪರೀಕ್ಷಾ ಮಂಡಲಿಗಳಲ್ಲಿ ವಿವಿಧ ರೀತಿಯ ಕಾರ್ಯ ಭಾರಗಳನ್ನು ನಿರ್ವಹಿಸಿದರು. ಮಂಗಳಗಂಗೋತ್ರಿಯ ಯುಜಿಸಿ ಸಂಶೋಧನಾ ಪ್ರಾಧ್ಯಾಪಕರಾಗಿಯೂ ಕೆಲವರ್ಷಗಳು ಅವರ ಸೇವೆ ಮುಂದುವರಿಯಿತು. ಅವರಿಗೆ ೧೯೪೨ರಲ್ಲಿ ವಿವಾಹವಾಯಿತು. ಪತ್ನಿಯೂ ಕನ್ನಡ ಸಾಹಿತ್ಯದಲ್ಲಿ ಆಸಕ್ತರಾಗಿದ್ದರು. ಸೂಕ್ಷ್ಮಗ್ರಹಿಕೆಯೂ, ವಸ್ತುನಿಷ್ಠ ವಿಮರ್ಶೆಯೂ ಆಕೆಯನ್ನು ತೆಕ್ಕುಂಜರ ಆದರ್ಶಪತ್ನಿಯನ್ನಾಗಿಸಿದೆ ಎಂದು ಹೊಗಳಿ ಎಸ್.ವಿ. ಪರಮೇಶ್ವರಭಟ್ಟರು ಈ ದಂಪತಿಯನ್ನು 'ಆಧುನಿಕ ಮುದ್ದಣ ಮನೋರಮೆಯರು' ಎನ್ನುತ್ತಿದ್ದರು.

ತೆಕ್ಕುಂಜ ಗೋಪಾಲಕೃಷ್ಣಭಟ್ಟರು ಅತ್ಯುತ್ತಮ ವಾಗ್ಮಿಗಳು. ಅವರ ಭಾಷಣಗಳೆಂದರೆ ಸಾಕು, ಸಭೆಯು ಮಾತು, ಇರುವಿಕೆಗಳೆಲ್ಲವನ್ನೂ ಮರೆತಂತೆ ನಿಶ್ಶಬ್ದವಾಗಿರುತಿತ್ತು. ತಿಳಿಹಾಸ್ಯ, ಇಂಪಾದ ಕಂಠ ಹಾಗೂ ಅಲ್ಲಲ್ಲಿ ಇಣುಕುತ್ತಿದ್ದ ಕಾವ್ಯ ಸಂದರ್ಭಗಳ ಉದಾಹರಣೆಗಳು ಅವರ ಮಾತಿಗೆ ಒಂದು ಗಾಂಭೀರ್ಯ ವನ್ನೂಡಿಸುತ್ತ ಸಭೆಯನ್ನು ಆವರಿಸುತ್ತಿತ್ತು. ಅನೇಕರು ಅವರನ್ನು 'ಪುರುಷಸರಸ್ವತಿ' ಎನ್ನುತ್ತಿದ್ದುದು ಅತಿಶಯೋಕ್ತಿಯಲ್ಲ. ಅವರು ಹೊರನೋಟಕ್ಕೆ ಅತಿಕಠಿಣ

ಎನಿಸುತ್ತಿದ್ದುದರಿಂದ ಅನೇಕರು ಅವರನ್ನು 'ಅಹಂಕಾರಿ' ಎಂದು ದೂರವಿಟ್ಟಿರುತ್ತಿದ್ದುದೂ ಉಂಟು. ಆದರೆ ಅದು ಬಹಳ ಸಮಯ ಇರುತ್ತಿರಲಿಲ್ಲ. ಅವರ ಸನಿಹದ ಇರುವಿಕೆಯೆಂಬುದು ಒಂದು ಆಪ್ತಭಾವವನ್ನು ಸೃಷ್ಟಿಸುವುದಿತ್ತು. ಸೈಂಟ್ ಅಲೋಶಿಯಸ್ ಕಾಲೇಜಿನಲ್ಲಿ ತೆಕ್ಕುಂಜರು ಬರುವುದಕ್ಕೂ ಮುಂಚೆ ಅಲ್ಲಿ ಅಧ್ಯಾಪಕರಾಗಿದ್ದ ಸೇಡಿಯಾಪು ಕೃಷ್ಣಭಟ್ಟರು ತೆಕ್ಕುಂಜರ ಕುರಿತು "ಮುಖ ಮುದ್ರೆಯಲ್ಲಾಗಲಿ ಮಾತು ರೀತಿಗಳಲ್ಲಾಗಲಿ ಆಕರ್ಷಕವಾದುದೇನೂ ಇಲ್ಲದವರು ತೆಕ್ಕುಂಜದವರು.....ಆದರೆ ಅವರ ಸಮೀಪೋಪಸ್ಥಿತಿ ನನಗೆ ನಾಲ್ಕಾರು ವರ್ಷ ಲಭಿಸಿದುದರ ಫಲವಾಗಿ–ಹೊರನೋಟಕ್ಕೆ 'ಒರಟು'ಎಂದೆನಿಸಿದ್ದ ವ್ಯಕ್ತಿತ್ವದೊಳಗೆ ಅಡಗಿದ್ದ ಅಂತರಂಗದ ನಿರ್ಮಲ ಬಿಂಬವು ಕೆಸರೊಳಗಿಂದ ಕಮಲವರಳಿದಂತೆ ನನ್ನ ಕಣ್ಣಮುಂದೆ ಅನಾವೃತವಾಯಿತು. ಆಗ–"ನಾರೀಕೇಲಫಲಾಕಾರಾಃ ಸಜ್ಜನಾಃ ಸಂತಿ ಭೂತಲೇ" ಎಂಬ ಸುಭಾಷಿತವು ಅನ್ವಯಿಸುವುದಿದ್ದರೆ ಅದು ತೆಕ್ಕುಂಜದವರಿಗೆ ಎಂದು ನನಗೆ ಮನವರಿಕೆಯಾಯಿತು" ಎಂದು ಬರೆದಿದ್ದಾರೆ.(ಉದ್ಧೃತ–ನಿಷ್ಕುರ ವಿದ್ವಾಂಸ ತೆಕ್ಕುಂಜ ಗೋಪಾಲಕೃಷ್ಣಭಟ್ಟ–ನಂದಳಿಕೆ ಬಾಲಚಂದ್ರರಾವ್)

ತೆಕ್ಕುಂಜರದು ಶುಷ್ಕಪಾಂಡಿತ್ಯ, ರಂಧ್ರಾನ್ವೇಷಣ ಬುದ್ಧಿ–ಎಂದೂ ಹಲವರು ಖಂಡಿಸುತ್ತಿದ್ದರು. ಭಾಷೆಯಲ್ಲಿಯ ಅಶುದ್ಧ ಪ್ರಯೋಗಗಳನ್ನು ಅವರು ಕಟುವಾಗಿ ಖಂಡಿಸುತ್ತಿದ್ದರು. ಕನ್ನಡವಾಗಿರಲಿ, ತುಳು, ಇಂಗ್ಲಿಷ್–ಹೀಗೆ ಯಾವುದೇ ಭಾಷೆಯಾಗಿರಲಿ ಪ್ರಯೋಗಸಹ್ಯವಾಗಿ ಕಲಿಯಬೇಕು. ಬಳಕೆಯಲ್ಲಿ ಶುದ್ಧತೆಯನ್ನು ಇಷ್ಟಪಟ್ಟು ಕಷ್ಟಪಟ್ಟು ಗ್ರಹಿಸಬೇಕು ಎಂಬುದು ಅವರ ಆಗ್ರಹವಾಗಿತ್ತು. ಕನ್ನಡದ ಅಭಿವೃದ್ಧಿಯ ಕುರಿತ ಕಾರ್ಯಕ್ರಮಗಳನ್ನು ಈ ಹಿನ್ನೆಲೆಯಲ್ಲಿಯೇ ಅವರು ಅತ್ಯಂತ ಮುತು ವರ್ಜಿಯಿಂದ ಹಮ್ಮಿಕೊಳ್ಳುತ್ತಿದ್ದರು. ಅವರು ಮಂಗಳೂರು ಕನ್ನಡ ಸಂಘದ ಅಧ್ಯಕ್ಷರಾಗಿದ್ದರು. ಕನ್ನಡ ಸಾಹಿತ್ಯದ ಪ್ರಚಾರ, ಕನ್ನಡ ಸಂಸ್ಕೃತಿಯ ಉಳಿವು ಈ ಮೂಲಕ ಆಗಬೇಕೆಂದು ಅತ್ಯಂತ ಪ್ರಾಮಾಣಿಕವಾದ ಆಸೆ ಅವರಿಗಿತ್ತು. ತಮ್ಮ ಗುರುಗಳಾಗಿದ್ದ ಮುಳಿಯ ತಿಮ್ಮಪ್ಪಯ್ಯನವರ ಸ್ಮರಣಾರ್ಥ 'ಶ್ರದ್ಧಾಂಜಲಿ' ಎಂಬ ಸಂಪುಟವೊಂದನ್ನು (೧೯೫೬–೫೭) ಏಕಾಂಗಿಯಾಗಿ ಪ್ರಕಟಿಸಿದ್ದುದು ಅವರ ಜನಪ್ರೀತಿ, ಕನ್ನಡದ ಕೆಲಸಗಳ ಕುರಿತಂತೆ ಅವರಿಗಿದ್ದ ಆಸ್ಥೆಗಳನ್ನು ನಿದರ್ಶಿಸುತ್ತದೆ. ಅಂತೆಯೇ ಸೈಂಟ್ ಅಲೋಷಿಯಸ್ ಕಾಲೇಜಿನ ಕರ್ನಾಟಕ ಸಂಘದಿಂದ 'ಒಸಗೆ' ಎಂಬ ಸೇಡಿಯಾಪು ಅಭಿನಂದನಾ ಗ್ರಂಥವನ್ನು (೧೯೫೯) ಹೊರತರುವು

ದರಲ್ಲಿಯೂ ಅವರು ತೋರಿದ ಉತ್ಸಾಹ, ಕಾರ್ಯವೈಖರಿ ಅನನ್ಯ ವಾದದ್ದು. ತೆಕ್ಕುಂಜ ಅವರ ಸಂಸ್ಮರಣಾರ್ಥ ಮಂಗಳೂರಿನ ಕನ್ನಡ ಸಂಘವು ಹೊರತಂದಿರುವ 'ವರ್ಣಮಾಲೆ' ಎಂಬ ಸಂಪುಟವು(೧೯೮೬) ಅವರ ಕಾರ್ಯವೈಖರಿಯನ್ನು ಕನ್ನಡಾಭಿಮಾನವನ್ನು ಎತ್ತಿಹಿಡಿದಿದೆ. ಅದರಲ್ಲಿ ಸೇಡಿಯಾಪು ಕೃಷ್ಣಭಟ್ಟ, ಎಸ್.ವಿ. ಪರಮೇಶ್ವರಭಟ್ಟ, ಅಮ್ಮೆಂಬಳ ಶಂಕರ ನಾರಾಯಣ ನಾವಡ, ಕಯ್ಯಾರ ಕಿಞ್ಞಣ್ಣ ರೈ ಮೊದಲಾದ ಹಿರಿಯರು ಬರೆದ ಲೇಖನಗಳು ತೆಕ್ಕುಂಜರ ವ್ಯಕ್ತಿತ್ವದ ಅನಾವರಣ ರೂಪಗಳಾಗಿವೆ.

ಸಾಹಿತ್ಯ ಪ್ರಚಾರ, ಕನ್ನಡ ಸೇವೆ ಎಂಬುದು ತೆಕ್ಕುಂಜರಿಗೆ ಹಲವು ಕ್ರೀಯಾಶೀಲ ಸಾಹಿತ್ಯ ಸಂಚಾರ ಸಾಧನೆಯಾಗಿತ್ತು. ಅವರು ಅಮ್ಮೆಂಬಳದಲ್ಲಿ ವಾಸವಾಗಿದ್ದಾಗ ಶಂಕರನಾರಾಯಣ ನಾವಡರೊಂದಿಗೆ ಅಲ್ಲಿ 'ಕನ್ನಡ ಸೇವಾಸಂಘ'ವನ್ನು ಸ್ಥಾಪಿಸಿದ್ದರು. ಆಗ ಆ ಹಳ್ಳಿಯು ಕನ್ನಡದ ಹಾಗೂ ಸಾಹಿತ್ಯದ ನಂಟನ್ನು ಸವಿಯಬೇಕೆಂಬ ಹಿರಿಯಾಸೆಯಿಂದ ತೆಕ್ಕುಂಜರು ಪ್ರಯತ್ನಪಟ್ಟು ಜಯಕರ್ನಾಟಕ, ತ್ರಿವೇಣಿ, ಬಡವರಬಂಧು ಮುಂತಾದ ಮಾಸಪತ್ರಿಕೆಗಳನ್ನು; ರಾಷ್ಟ್ರಬಂಧು, ಸ್ವದೇಶಾಭಿಮಾನಿ, ಕಂಠೀರವ, ನವಯುಗ, ಅಂತರಂಗ ಮೊದಲಾದ ವಾರಪತ್ರಿಕೆಗಳನ್ನೂ ಮನೋಹರ ಗ್ರಂಥಮಾಲೆ, ಲಲಿತಸಾಹಿತ್ಯಮಾಲೆ ಮೊದಲಾದ ನಿಯತಕಾಲಿಕೆಗಳನ್ನೂ ತರಿಸುವ ಏರ್ಪಾಡು ಮಾಡಿದರು. ಈ ಸಂಘದಿಂದಲೇ ಮುಳಿಯ ತಿಮ್ಮಪ್ಪಯ್ಯ ಅವರ 'ನವನೀತ ರಾಮಾಯಣ'ದ ಮೊದಲ ಭಾಗವು ಪ್ರಕಟವಾಯಿತು. 'ಸುಧಾ' ಎಂಬ ಕೈಬರಹದ ಮಾಸಪತ್ರಿಕೆಯನ್ನು ನಡೆಸಿದವರೂ ತೆಕ್ಕುಂಜರೇ. ಸಾಹಿತ್ಯಕ್ಷೇತ್ರವೆಂದ ಕೂಡಲೇ ದಕ್ಷಿಣ ಕನ್ನಡದವರಿಗೆ ಯಕ್ಷಗಾನದ ನಂಟಿರಲೇಬೇಕು ಎಂಬ ನಿಯಮವೊಂದಿದೆ ಎಂಬಂತೆ ತೆಕ್ಕುಂಜದವರಿಗೂ ಯಕ್ಷಗಾನಕ್ಕೂ ಆಪ್ತ ಸಂಬಂಧವಿತ್ತು. ಕೃಷ್ಣಸಂಧಾನದ ಕೃಷ್ಣ–ಕೌರವ; ಅಂಗದಸಂಧಾನದ ಅಂಗದ, ಭೀಷ್ಮಾರ್ಜುನಕಾಳಗದ ಭೀಷ್ಮ, ಕೃಷ್ಣ ಮೊದಲಾದ ಪಾತ್ರಗಳನ್ನು ಮೆಚ್ಚಿ ತಾಳಮದ್ದಲೆ ಕಾರ್ಯಕ್ರಮಗಳಲ್ಲಿ ಅವರು ಅರ್ಥಧಾರಿಯಾಗಿ ಸಹಾ ಪಾಲ್ಗೊಳ್ಳುತ್ತಿದ್ದುದುಂಟು. ಹಳಗನ್ನಡದಲ್ಲಿಯೂ ಸಂಸ್ಕೃತ ಸಾಹಿತ್ಯದಲ್ಲಿಯೂ ಸಾಕಷ್ಟು ಅಧ್ಯಯನ ನಡೆಸಿದ್ದ ಅವರಿಗೆ ತಾಳಮದ್ದಲೆಯಲ್ಲಿಯ ಅರ್ಥಧಾರಿಯಾಗಿ ಕಾರ್ಯನಿರ್ವಹಿಸುವುದು ಕಷ್ಟಕರವೇನೂ ಆಗಿರಲಿಲ್ಲ. ಯಕ್ಷಗಾನ ಕಲೆಯಾದ ತಾಳಮದ್ದಲೆ ವಾಚಿಕಾಭಿನಯವಾದದ್ದು. ಪಾತ್ರಗಳ ಅಭಿನಯ ಪ್ರಸಂಗಗಳಿಗೆ ತಕ್ಕಂತೆ

ಅರ್ಥ, ವಾದ, ಪ್ರತಿವಾದ ಗಳಿಂದ ಸಂದರ್ಭವನ್ನು ರಸೋಪೇತವಾಗಿಸುವುದು ಅರ್ಥಧಾರಿಯ ಕರ್ತವ್ಯ. ಅರ್ಥಧಾರಿಗೆ ಇರುವ ಭಾಷಾಜ್ಞಾನ, ಪುರಾಣ, ಕಾವ್ಯ, ವ್ಯಾಕರಣಜ್ಞಾನಗಳನ್ನು ಸಂದರ್ಭಕ್ಕೆ ತಕ್ಕಂತೆ ಆಶುಪಟುತ್ವದಿಂದ ನಿರ್ವಹಿಸುವ ಧಾಟಿ ಇರಬೇಕು. ಈ ವಿಷಯದಲ್ಲಿ ತೆಕ್ಕುಂಜ ಅವರ ಪ್ರಸ್ತುತಿಯ ಧಾಟಿ ಜನಪ್ರಿಯವಾಗಿತ್ತು. ಬೆಂಗಳೂರು ವಿಶ್ವವಿದ್ಯಾಲಯದ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅವರ 'ಈ ಕಾಲದ ಯಕ್ಷಗಾನ ಕೃತಿಗಳು' ಎಂಬ ಲೇಖನ (6ನೇ ಸಂಪುಟ–1950–1954) ಯಕ್ಷಗಾನ ಚರಿತ್ರೆಯ ಕುರಿತ ಒಂದು ಸಿಂಹಾವಲೋಕನ ಲೇಖನವಾಗಿದೆ.

ತೆಕ್ಕುಂಜ ಅವರು ಆರಂಭಿಕವಾಗಿ ವಿನೋದ ಪ್ರಬಂಧಗಳು, ಕವಿತೆ, ಕಥೆ ಹಾಗೂ ಸಾಮಾಜಿಕ ಚಿಂತನೆಯ, ಲೇಖನಗಳಲ್ಲಿ ತೊಡಗಿಕೊಂಡರೂ ಹೆಚ್ಚಾಗಿ ಅಲ್ಲಿ ನೆಲೆನಿಲ್ಲದಿರಲು ಅವರಿಗೆ ವ್ಯಾಕರಣ ಮತ್ತು ಭಾಷಾ ವಿಚಾರಗಳತ್ತ ಹೆಚ್ಚು ಒಲವಿದ್ದುದೇ ಕಾರಣವಿರಬಹುದು. ಅವರು 'ಗೋಪಬಾಲ' ಎಂಬ ಕಾವ್ಯನಾಮದಲ್ಲಿ ಕತೆ, ಕವಿತೆಗಳನ್ನು ಬರೆದಿರುವುದು ಸರಿಸುಮಾರು ೧೯೩೦–೪೦ ರ ಅವಧಿಯ ವಿವಿಧ ಸಾಹಿತ್ಯ, ಸಂಚಿಕೆಗಳಲ್ಲಿ ಲಭ್ಯವಿದೆ. ಹದಿನೆಂಟರ ಹರೆಯದವರಾಗಿದ್ದಾಗಿನ ಅವರ ಮೊದಲ ಕವನ 'ಮುರಲಿ' ಕಾರ್ಕಳದ 'ಕಲಾಚಂದ್ರ' ಮಾಸಪತ್ರಿಕೆಯಲ್ಲಿ ಬೆಳಕು ಕಂಡಿತು (೧೯೩೪). ಅದಲ್ಲದೆ ಅವರ ಇನ್ನೂ ಹಲವಾರು ಕಥೆ, ಕವನಗಳು ಕೆಲವು ಕಾಲ ಬೇರೆಬೇರೆ ಪತ್ರಿಕೆಗಳಲ್ಲಿ ಪ್ರಕಟವಾದವು. ಆದರೆ ಅಂತಿಮವಾಗಿ ಅವರ ಸಾಹಿತ್ಯಕೃಷಿ ಬೇರೊಂದು ದಿಕ್ಕಿನಲ್ಲಿ ಹೊರಳಿದ್ದುದನ್ನು ನೋಡಬಹುದು. ಅವರ ಅತ್ಯಂತ ಪ್ರಮುಖವಾದ ಕೃತಿಗಳು ಕನ್ನಡ ಸಾಹಿತ್ಯದ ಮಹತ್ವ ಮತ್ತು ಬೆಳೆವಣಿಗೆ ಯನ್ನು ಕುರಿತಂತೆ ಅನೇಕ ಸಂಗತಿಗಳನ್ನು ಗಮನಕ್ಕೆ ತರುತ್ತವೆ.

'ವೀರಲಸಿತ'(೧೯೭೦) ಎಂಬುದು ರಾಮಾಯಣದ ಉತ್ತರಕಾಂಡದ ಕಥಾವಸ್ತುವುಳ್ಳ ಖಂಡಕಾವ್ಯ. ಇದು ಪಿರಿಯಕ್ಕರದಲ್ಲಿರುವ ಮೂವತ್ತಾರು ಪದ್ಯಗಳ ಕಿರುಕೃತಿ. 'ಮಧುರಂಜಿನಿ' ಶೃಂಗಾರ ಮುಕ್ತಕಗಳ ಸಂಗ್ರಹ. 'ಕನ್ನಡ ಸಮಾಸಗಳು' ಕೇಶೀರಾಜನ ಶಬ್ದಮಣಿದರ್ಪಣದ ಸಮಾಸ ಪ್ರಕರಣವನ್ನು ಆಧರಿಸಿದ ಕೃತಿ. ಇದರಲ್ಲಿ ತೆಕ್ಕುಂಜ ಅವರು ಸಾಮಾನ್ಯವಾಗಿ ಬಳಕೆಯಲ್ಲಿರುವ ಸಮಾಸಗಳ ತಪ್ಪು ಪ್ರಯೋಗಗಳನ್ನು ಪರಿಶೀಲಿಸುತ್ತಿದ್ದರು. ಪರಿಭಾಷೆಗಳು, ಸಮಾಸಗಳು ಮತ್ತು ಸಮಾಸಕಾರ್ಯಗಳು ಎಂಬ ಮೂರೂ ಅಧ್ಯಾಯಗಳು ಕೇಶಿರಾಜನ ವ್ಯಾಕರಣ

ಚಿಂತನೆಗಳನ್ನು ಸ್ಪಷ್ಟಪಡಿಸುವ ಉದ್ದೇಶವುಳ್ಳವು. ಪಂಚಮೀವಿಭಕ್ತಿ, ತೃತೀಯಾ ವಿಭಕ್ತಿಗಳ ಬಳಕೆಯಲ್ಲಿರುವ ಸಂದೇಹಗಳನ್ನು ವಿವೇಚಿಸುವ ಹಾಗೂ ಅದಕ್ಕೆ ಪರಿಹಾರಗಳನ್ನು ಸೂಚಿಸುವ ಎಚ್ಚರದ ನಡೆ ಗಮನಾರ್ಹವಾಗಿದೆ. ತದ್ಧಿತಪದ–ಸಮಸ್ತಪದಗಳ ಕುರಿತು ವಿಶ್ಲೇಷಣೆ ಇದೆ. ಗಮಕಸಮಾಸದ ಅಗತ್ಯವನ್ನು ಕುರಿತು ಸೂಕ್ಷ್ಮವಾಗಿ ಚರ್ಚಿಸಲಾಗಿದೆ. ಕೇಶಿರಾಜನ 'ಶಬ್ದಮಣಿದರ್ಪಣ'ವು ಹಲವಾರು ಕಾರಣಗಳಿಂದ ಅವರನ್ನು ಹೆಚ್ಚು ಕಾಡಿರುವುದು ಸ್ಪಷ್ಟ. ಅವರ ಅತ್ಯಂತ ಮಹತ್ವದ ಕೃತಿಗಳಲ್ಲಿ 'ಕೇಶಿರಾಜದರ್ಪಣ'ಕ್ಕೆ (೧೯೯೯) ವಿಶೇಷ ಸ್ಥಾನಮಾನಗಳಿವೆ. ಶಬ್ದಮಣಿದರ್ಪಣಕ್ಕೆ ಒಂದು ವಿಸ್ತಾರವಾದ ವ್ಯಾಖ್ಯಾನವನ್ನು ಸಿದ್ಧಪಡಿಸಬೇಕೆಂಬ ಮಹತ್ವಾಕಾಂಕ್ಷೆ ಅವರದಾಗಿತ್ತು. ಹಳಗನ್ನಡ ವ್ಯಾಕರಣವನ್ನು ಕುರಿತು ದೀರ್ಘಕಾಲ ಚಿಂತಿಸಿ, ವಿಮರ್ಶಿಸಿ ತೊಡಗಿಕೊಂಡ ಕೃತಿ 'ಕೇಶಿರಾಜದರ್ಪಣ'. ಸುಮಾರು ೧೯೭೭–೮೦ರ ಅವಧಿಯಲ್ಲಿ, ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರವಾಗಿದ್ದ ಮಂಗಳಗಂಗೋತ್ರಿಯಲ್ಲಿ, ಯುಜಿಸಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದ ಅವಧಿಯಲ್ಲಿ ಈ ಗ್ರಂಥದ ರಚನೆಗೆ ಅವರು ತೊಡಗಿಸಿಕೊಂಡಿದ್ದ ರೆಂಬುದು ತಿಳಿದುಬರುತ್ತದೆ. ಹಸ್ತಪ್ರತಿಯಲ್ಲಿ ೬೮೪ ಪುಟಗಳಷ್ಟು ವಿಸ್ತಾರವಾಗಿ ಹರಡಿಕೊಂಡಿದ್ದ ಈ ವ್ಯಾಖ್ಯಾನ ಗ್ರಂಥವು ಅವರ ಮಹತ್ವಾಕಾಂಕ್ಷೆಯ ಸೃಷ್ಟಿಯಾಗಿತ್ತು. ಅವರು ದೈವಾಧೀನರಾದ ಮೂರು ದಶಕಗಳ ತರುವಾಯ ಅದು ಪ್ರಕಟಗೊಂಡಿತು. ಶಬ್ದಮಣಿದರ್ಪಣದ ಅನೇಕ ಅಂಶಗಳನ್ನು ಚರ್ಚಿಸಿ ಮುಗಿಸಿದ್ದರೂ ಅವರ ಅನಾರೋಗ್ಯ ಕಾರಣ ವ್ಯಾಖ್ಯಾನಗ್ರಂಥವು ಪೂರ್ಣವಾಗಲಿಲ್ಲ. ಅಪಭ್ರಂಶ ಪ್ರಕರಣದ ೨೦ನೆಯ ಸೂತ್ರದವರೆಗೂ ಸಾಗಿದ ಕೆಲಸ ಅವರ ಅನಿರೀಕ್ಷಿತ ಮರಣದ ಕಾರಣ ಅಲ್ಲಿಗೇ ಸಮಾಪ್ತಗೊಂಡಿತು. ಆದರೆ ಆ ಕೆಲಸದ ಉಳಿದ ಭಾಗವನ್ನು ಪ್ರೊ.ಎಂ. ರಾಜಗೋಪಾಲಾಚಾರ್ಯರಿಂದ ವಿವರಣೆ ಬರೆಯಿಸಿ ಪೂರ್ಣ ಗೊಳಿಸಲಾಯಿತು. ಹಲವಾರು ಅಡೆತಡೆಗಳ ಕಾರಣದಿಂದ ತಡವಾದರೂ ಆ ಗ್ರಂಥವನ್ನು ಪಾದೇಕಲ್ಲು ವಿಷ್ಣುಭಟ್ಟರ ಸಂಪಾದಕತ್ವದಲ್ಲಿ ಉಡುಪಿಯ ರಾಷ್ಟ್ರಕವಿ ಗೋವಿಂದಪೈ ಸಂಶೋಧನ ಕೇಂದ್ರವು ೧೯೯೯ರಲ್ಲಿ ಪ್ರಕಟಿಸಿತು.

ಜಿ. ನಾರಾಯಣ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ಪ್ರಕಟಿಸಿದ ಹಳಗನ್ನಡ ಕಾವ್ಯಗಳ ಹೊಸಗನ್ನಡ ಗದ್ಯಾನುವಾದ ಯೋಜನೆಯಲ್ಲಿ ಹೊರಬಂದದ್ದು ಜನ್ನನ 'ಯಶೋಧರ ಚರಿತೆ'ಯ ಗದ್ಯಾನುವಾದ. ಹಲವಾರು

ಕಾರಣಗಳಿಂದ ಕನ್ನಡ ಸಾಹಿತ್ಯದಲ್ಲಿ ಮಹತ್ವಪೂರ್ಣ ವಿಮರ್ಶೆಗಳಿಗೆ ಒಳಗಾಗಿದ್ದ ಜನ್ನನ ಈ ಕೃತಿಯ ಗದ್ಯಾನುವಾದಕ್ಕೆ ತೆಕ್ಕುಂಜ ಅವರು ಅತ್ಯಂತ ವೈಚಾರಿಕವಾದ ಉಪೋದ್ಘಾತವನ್ನು ಬರೆದಿದ್ದಾರೆ.

ತೆಕ್ಕುಂಜ ಅವರಿಗೆ ಅಪಾರ ಮನ್ನಣೆಯನ್ನು ದೊರಕಿಸಿಕೊಟ್ಟ ಮತ್ತೊಂದು ಕೃತಿ, 'ಟಿಪ್ಪಣಿ ಸಾರಸಮೇತ ಶ್ರೀರಾಮಾಶ್ವಮೇಧಂ'(೧೯೭೨). ಇದು ಮುದ್ದಣ ಕವಿಯ 'ರಾಮಾಶ್ವಮೇಧ'ಕ್ಕೆ ತೆಕ್ಕುಂಜ ಅವರ ಟಿಪ್ಪಣಿ. ರಾಮಾಶ್ವಮೇಧದ ವಿವಿಧ ಪಾಠಾಂತರಗಳ ಆಮೂಲಾಗ್ರ ಪರಿಶೀಲನೆ, ಶುದ್ಧಪಾಠ ನಿರ್ಣಯ, ಮುದ್ದಣನ ವಾಗ್ವೈಖರಿ, ಅವನ ನುಡಿಗಟ್ಟುಗಳ ಅರ್ಥವಿವರಣೆಗಳನ್ನು ಒಳಗೊಂಡಿರುವುದು ಈ ಕೃತಿಯ ವಿಶೇಷ. ಇದು ೨೦೦೬ರಲ್ಲಿ ಮುದ್ದಣ ಪ್ರಕಾಶನ, ಮಂಗಳೂರು ಇವರಿಂದ ಪುನರ್ಮುದ್ರಣವನ್ನೂ ಕಂಡಿದೆ. ಮುದ್ದಣನ ವಿಶಿಷ್ಟ ಭಾಷಾಪ್ರಯೋಗದ ಮಹತ್ವವೇನೆಂಬುದರ ಕುರಿತಾಗಿ ತೆಕ್ಕುಂಜರ ಅರ್ಥವಿವರಣೆ ಗಮನಿತಕ್ಕದ್ದಾಗಿದೆ.

ತೆಕ್ಕುಂಜ ಅವರ ಅನೇಕ ಲೇಖನಗಳು ವಿವಿಧ ಪತ್ರಿಕೆಗಳಲ್ಲಿ ಬೆಳಕು ಕಂಡಿದ್ದು, ಅವರ ಸೂಕ್ಷ್ಮ ವಿಮರ್ಶನ ಶೈಲಿಗೆ ಹೆಸರಾಗಿವೆ. ಗಿರಿಜಾಕಲ್ಯಾಣದ ಕುರಿತ ಲೇಖನ, ಯಶೋಧರಚರಿತೆ ಕಾವ್ಯಕ್ಕೆ ಬರೆದ ದೀರ್ಘವಾದ ಉಪೋದ್ಘಾತ, ಹವೀಕರ (ಹವ್ಯಕ ಎಂಬ ಬಳಕೆ ತಪ್ಪು ಎಂಬುದು ಅವರ ಅಭಿಪ್ರಾಯ) ಆಡುನುಡಿಯ ವೈಶಿಷ್ಟ್ಯಗಳು, ದಕ್ಷಿಣ ಕನ್ನಡದ ಸಂಶೋಧನೆ ಮತ್ತು ವಿಮರ್ಶೆ, ಇಪ್ಪತ್ತನೆಯ ಶತಮಾನದ ಕನ್ನಡ ಪದ್ಯಸಾಹಿತ್ಯ, ಅಹಲ್ಯೆಯ ಒಂದು ಚಿತ್ರ, ಯಕ್ಷಗಾನ ಪದ– ಕೆಲವು ದಂತ ಕಥೆಗಳು, ತುಳುವಿನ ವರ್ಣಮಾಲೆ, ಮುದ್ದಣನ ಭರತವಾಕ್ಯ, ಕೆಲವು ಷಟ್ಪದಿಗಳು ಮೊದಲಾದವು ಅವರ ಪ್ರಸಿದ್ಧ ಲೇಖನಗಳು. 'ದಕ್ಷಿಣ ಕನ್ನಡದ ಸಾಹಿತ್ಯ ಪರಂಪರೆ' ಎಂಬ ಲೇಖನವು 'ಸುದರ್ಶನ' ಎಂಬ ಮಾಸಪತ್ರಿಕೆಯಲ್ಲಿ ಪ್ರಕಟವಾಯಿತು. ಅದರಲ್ಲಿ ಶ್ರೀಯುತರು 'ಶೃಂಗಾರರಸ' ಕೃತಿಕರ್ತ ಸೋಮರಾಜ (೧೨೨೨), 'ಜ್ಞಾನಚಂದ್ರಾಭ್ಯುದಯ'ದ ಕರ್ತೃ ಕಲ್ಯಾಣ ಕೀರ್ತಿ(೧೪೩೯), 'ಜೀವಂಧರ ಷಟ್ಪದಿ'ಯ ಕೋಟೇಶ್ವರ (೧೫೦ನೇಶ) 'ರಸ ರತ್ನಾಕರ'ದ ಕರ್ತೃ ಸಾಳ್ವ(೧೫೫೦), 'ಭರತೇಶ ವೈಭವ'ದ ಕರ್ತೃ ರತ್ನಾಕರವರ್ಣೀ(೧೫೬೦), ಪಾರ್ತಿಸುಬ್ಬ(೧೭೫೦), ಮುದ್ದಣ (೧೮೬೯) ಮೊದಲಾದವರನ್ನು ಈ ಭಾಗದ ಹೆಮ್ಮೆಯ ಕವಿವರೇಣ್ಯರೆಂದು ಪರಿಚಯಿಸುತ್ತ ಅವರವರ ಸಾಹಿತ್ಯಸೃಷ್ಟಿಯ ವೈಶಿಷ್ಟ್ಯಗಳನ್ನು ಗುರುತಿಸಿದ್ದಾರೆ. ಇವಲ್ಲದೆ

ಕಾರ್ಕಳದಲ್ಲಿ ನಡೆದ ದಕ್ಷಿಣ ಕನ್ನಡ ಜಿಲ್ಲಾ ಪ್ರಥಮ ಸಾಹಿತ್ಯ ಸಮ್ಮೇಳನದ ಸ್ಮೃತಿ ಸಂಪುಟ 'ಬಾಸಿಗ'ದಲ್ಲಿ ಪ್ರಕಟವಾದ 'ಸಂಶೋಧನೆ ಮತ್ತು ವಿಮರ್ಶೆ' ಎಂಬ ಲೇಖನವು, 'ಪಂಜೆಯವರ ಸಂಶೋಧನ ಸಾಹಿತ್ಯ', ಮೈಸೂರು ವಿಶ್ವವಿದ್ಯಾನಿಲಯದ 'ಕನ್ನಡ ಛಂದಸ್ಸಿನ ಚರಿತ್ರೆ'ಯಲ್ಲಿ (ಪ್ರಥಮ ಸಂಪುಟ) ಪ್ರಕಟವಾದ 'ಕನ್ನಡ ಸಾಹಿತ್ಯದಲ್ಲಿ ಸಮ, ಅರ್ಧಸಮ ವೃತ್ತಗಳು; ಲಕ್ಷಣ, ಪ್ರಯೋಗ, ಪ್ರಾಚುರ್ಯ' ಎಂಬ ಲೇಖನಗಳು ಅವರ ಭಾಷಾಜ್ಞಾನಕ್ಕೆ, ಛಂದಸ್ಸುಗಳ ಗುಣಲಕ್ಷಣ ವಿಮರ್ಶೆಗೆ ಸಾಕ್ಷಿಯಾಗಿವೆ. ೧೯೭೯ರಲ್ಲಿ ಧರ್ಮಸ್ಥಳದಲ್ಲಿ ನಡೆದ ೫೧ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪ್ರಸ್ತುತ ಪಡಿಸಿದ 'ದಕ್ಷಿಣ ಕನ್ನಡ ಜಿಲ್ಲೆಯ ಕನ್ನಡ' ಎಂಬ 'ಭಾಷಾಬಾಂಧವ್ಯ ಗೋಷ್ಠಿ'ಯ ಉಪನ್ಯಾಸವು ತದನಂತರದಲ್ಲಿ 'ನವನೀತ' ಎಂಬ ಗ್ರಂಥದಲ್ಲಿ ಪ್ರಕಟವಾಯಿತು. ದಕ್ಷಿಣ ಕನ್ನಡ ಜಿಲ್ಲೆಯ ಕನ್ನಡದ ರೂಪಸ್ವರೂಪಗಳ ವೈಶಿಷ್ಟವನ್ನು ತುಳು, ಮಲಯಾಳ, ಕೊಂಕಣಿ ಭಾಷೆಗಳ ಪ್ರಭಾವ ಅವುಗಳ ಮೇಲೆ ಹೇಗೆ ಆಗಿದೆ ಎಂಬುದನ್ನು ಭಾಷಾವಿಜ್ಞಾನದ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಅವರ ಅತ್ಯುತ್ತಮ ಲೇಖನಗಳಲ್ಲಿ ಇದು ಒಂದು ಎಂಬ ಹೆಗ್ಗಳಿಕೆಗೆ ಈ ಲೇಖನ ಪಾತ್ರವಾಗಿದೆ.

೧೯೬೨ರಲ್ಲಿ ಸ್ಥಾಪನೆಯಾದ 'ಮಂಗಳೂರು ಕನ್ನಡಸಂಘ'ವು ಮಂಗಳೂರಿನ ಸರಕಾರಿ ಕಾಲೇಜಿನ ಕನ್ನಡ ಭಾಷಾಭಿಮಾನಿಗಳಾದ ಸಂತೋಷ್‌ಕುಮಾರ್ ಗುಲ್ವಾಡಿ, ಅ. ಬಾಲಕೃಷ್ಣ ಶೆಟ್ಟಿ ಪೊಳಲಿ, ಎ.ಎಸ್.ಎನ್. ಹೆಬ್ಬಾರ್, ವೀರಪ್ಪ ಮೊಯಿಲಿ ಅವರುಗಳ ಶ್ರಮದಿಂದ ಆದದ್ದು. ಅದರ ಸ್ಥಾಪಕ ಅಧ್ಯಕ್ಷರಾಗಿ ತೆಕ್ಕುಂಜ ಅವರು ಸುಮಾರು ಹತ್ತೊಂಬತ್ತು ವರ್ಷಗಳ ಕಾಲ ನಿರಂತರವಾಗಿ ಸೇವೆ ಸಲ್ಲಿಸಿದರು. ಕೆಲಕಾಲ ಅನಾರೋಗ್ಯ ಪೀಡಿತರಾಗಿದ್ದ ತೆಕ್ಕುಂಜರು ಮಂಗಳೂರಿನಲ್ಲಿ ೧೯೮೦ರ ಮಾರ್ಚ್ ೨೫ ರಂದು ದೈವಾಧೀನರಾದರು.

ಆಧಾರ

ನಿಷ್ಠುರ ವಿದ್ವಾಂಸ: ತೆಕ್ಕುಂಜ ಗೋಪಾಲಕೃಷ್ಣಭಟ್ಟ– ನಂದಳಿಕೆ ಬಾಲಚಂದ್ರರಾವ್. ಪ್ರ. ಕಾಂತಾವರ ಕನ್ನಡ ಸಂಘ. ೨೦೧೦.

❐ ❐ ❐

ಜಿ. ಎಸ್. ಗಾಯಿ

(೧೯೧೭–೧೯೯೫)

ಬಿ. ವೆಂಕಟರಾಮಣ್ಣ

ವಿದ್ವತ್ ಲೋಕದಲ್ಲಿ ಜಿ.ಎಸ್.ಗಾಯಿ ಎಂದು ಹೆಸರು ಮಾಡಿರುವ ಇವರ ಪೂರ್ಣ ಹೆಸರು ಗೋವಿಂದ ಸ್ವಾಮಿರಾವ್ ಗಾಯಿ. ಇವರ ವಸ್ತುನಿಷ್ಠ ಸಂಶೋಧನೆಗಳು ಕೇವಲ ಶಾಸನ ಪ್ರಪಂಚಕ್ಕಷ್ಟೇ ಅಲ್ಲದೆ ಭಾಷಾವಿಜ್ಞಾನಕ್ಷೇತ್ರಕ್ಕೂ ವಿಸ್ತರಿಸಿವೆ. ಇವರ ಸೇವೆ ಕರ್ನಾಟಕಕ್ಕಷ್ಟೇ ಅಲ್ಲದೆ ಭಾರತಕ್ಕೂ ಸಂದಿದೆ.

ಜಿ.ಎಸ್.ಗಾಯಿ ಅವರ ಪೂರ್ವಜರು ಉತ್ತರ ಕರ್ನಾಟಕದ ಕುಲಕರ್ಣಿಗಳ ಮನೆತನಕ್ಕೆ ಸೇರಿದವರು. ಬಿಜಾಪುರ ಜಿಲ್ಲೆಯ ಅಥರ್ಗಾ ಅಥವಾ ಅತ್ತರಕಿ ಗ್ರಾಮದಲ್ಲಿ ಇವರಿಗೆ ಅಲ್ಪಸ್ವಲ್ಪ ಭೂಮಿ ಇತ್ತು. ಕಾಲಾಂತರದಲ್ಲಿ ತಮಗಿದ್ದ ಭೂಮಿ ಬಿಟ್ಟು ನೆರೆಯ ಪಟ್ಟಣವಾದ ಬಿಜಾಪುರದಲ್ಲಿ ಬಂದು ನೆಲಸಿದರು. ಜಿ.ಎಸ್. ಗಾಯಿಯವರ ತಂದೆ ಸ್ವಾಮಿರಾವ್, ತಾಯಿ ಅಂಬಿಕಾ(ಅಂಬಕ್ಕ). ಈ ದಂಪತಿಗಳ ಕೊನೆಯ ಮಗನಾಗಿ ಗಾಯಿ ೩ ಮಾರ್ಚ್ ೧೯೧೭ರಂದು ಜನಿಸಿದರು. ಗಾಯಿ ಅವರು ೧೪ನೇ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡರು. ಹಿರಿಯ ಅಣ್ಣ ಶ್ರೀನಿವಾಸ ಅವರು ಗಾಯಿಯವರ ವಿದ್ಯಾಭ್ಯಾಸಕ್ಕೆ ನೆರವಾದರು.

ಬಿಜಾಪುರದ ಪಿ.ಡಿ.ಜೆ. ಹೈಸ್ಕೂಲಿನಲ್ಲಿ ಪ್ರೌಢಶಾಲಾ ವಿದ್ಯಾಭ್ಯಾಸವನ್ನು ಮುಗಿಸಿದ ಅನಂತರ ಅವರು ವಾಡಿಯಾ ಮತ್ತು ಫರ್ಗೂಸನ್ ಕಾಲೇಜುಗಳಲ್ಲಿ ಶಿಕ್ಷಣ ಮುಂದುವರಿಸಿದರು. ಸಂಸ್ಕೃತ ಭಾಷೆಯನ್ನು ಅಧ್ಯಯನ ವಿಷಯವಾಗಿ ಆಯ್ಕೆಮಾಡಿಕೊಂಡು ಮುಂಬಯಿ ವಿಶ್ವವಿದ್ಯಾಲಯದಿಂದ ಬಿ.ಎ. ಪದವಿಯನ್ನು (ಆನರ್ಸ್) ೧೯೩೯ರಲ್ಲಿ ಪಡೆದರು. ೧೯೩೯ರಲ್ಲಿ ಪುಣೆಯ ಡೆಕ್ಕನ್ ಕಾಲೇಜ್ ಪೋಸ್ಟ್ ಗ್ರಾಜುಯೇಟ್ ಅಂಡ್ ರಿಸರ್ಚ್ ಇನ್‌ಸ್ಟಿಟ್ಯೂಟ್ನಲ್ಲಿ ಮೊದಲ ತಂಡದ ಸಂಶೋಧಕ ವಿದ್ಯಾರ್ಥಿಯಾಗಿ ಸೇರಿದರು(೧೯೩೯). ಜಿ.ಎಸ್.ಗಾಯಿ ಅವರು ಭಾಷಾಶಾಸ್ತ್ರಕ್ಕೆ ಸಂಬಂಧಿಸಿದಂತೆ "Historical Grammer of Old Kannada" ಎಂಬ ವಿಷಯದ ಬಗ್ಗೆ ೮–೯ ಮತ್ತು ೧೦ನೇ ಶತಮಾನದ ಕನ್ನಡ ಶಾಸನಗಳ

ಹಿನ್ನೆಲೆಯಲ್ಲಿ ಅಧ್ಯಯನವನ್ನು ಪ್ರೊ.ಸಿ.ಆರ್. ಶಂಕರನ್ ಅವರ ಮಾರ್ಗ ದರ್ಶನದಲ್ಲಿ ಕೈಗೊಂಡರು. ಈ ಸಂದರ್ಭದಲ್ಲಿ ಡೆಕ್ಕನ್ ಕಾಲೇಜ್ ಸಂಸ್ಥೆಯ ಮಾಜಿ ನಿರ್ದೇಶಕರಾದ ಪ್ರೊ.ಐ.ಜಿ.ಎಸ್. ತಾರಾಪುರವಾಲ ಆಗ ನಿರ್ದೇಶಕರಾಗಿದ್ದ ಡಾ.ಎಸ್.ಎಂ. ಕತ್ರೆ ಅವರುಗಳ ಪ್ರೋತ್ಸಾಹ ಗಾಯಿ ಅವರಿಗೆ ದೊರಕಿತು. ಈ ಸಂಸ್ಥೆಯ ಮೊದಲ ಪಿಎಚ್.ಡಿ. ಪದವೀಧರರಾಗಿ ೧೯೪೩ರಲ್ಲಿ ಹೊರಬಂದರು. ಅನಂತರ ಅದೇ ಸಂಸ್ಥೆಯಿಂದ ಇವರು ಸಿದ್ಧಪಡಿಸಿದ್ದ ಪಿಎಚ್.ಡಿ. ಪ್ರಬಂಧ ಮೊದಲ ಕೃತಿಯಾಗಿ ೧೯೪೬ರಲ್ಲಿ ಪ್ರಕಟವಾಯಿತು.

೧೯೪೩ರಲ್ಲಿ ಉದಕಮಂಡಲದಲ್ಲಿದ್ದ ಕೇಂದ್ರ ಸರ್ಕಾರದ ಶಾಸನತಜ್ಞರ ಕಚೇರಿಯಲ್ಲಿ ಶಾಸನ ಸಹಾಯಕರಾಗಿ ಸೇರಿದರು. ಅಲ್ಲಿ ಅವರು ೧೯೪೫ರ ತನಕ ಮುಂದುವರಿದರು. ಅನಂತರ ಮುಂಬಯಿ ಸರ್ಕಾರದ ಆಶ್ರಯದಲ್ಲಿ ಧಾರವಾಡದಲ್ಲಿ ಆರಂಭಗೊಂಡಿದ್ದ ಕನ್ನಡ ಸಂಶೋಧನಾ ಸಂಸ್ಥೆಯ ದ್ರಾವಿಡ ಭಾಷಾಶಾಸ್ತ್ರದ ಪ್ರವಾಚಕರು ಹಾಗೂ ಉಪನಿರ್ದೇಶಕರಾಗಿ ಗಾಯಿ ಅವರು ನೇಮಕವಾಗಿದ್ದರು. ೧೯೫೬ರ ತನಕ ಅಲ್ಲಿ ಸೇವೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಹಿರಿಯ ವಿದ್ವಾಂಸರಾದ ಆರ್.ಎಸ್. ಪಂಚಮುಖಿ, ಎ.ಎಂ. ಅಣ್ಣಿಗೇರಿ ಅವರೊಂದಿಗೆ ಸೇರಿ ಅನೇಕ ಮಹತ್ತ್ವದ ಸಂಶೋಧನ ಕಾರ್ಯಗಳಲ್ಲಿ ತೊಡಗಿಸಿ ಕೊಂಡರು.

ಅನಂತರ ಹಿರಿಯ ಶಾಸನ ಸಹಾಯಕರಾಗಿ ೧೯೫೬ರಲ್ಲಿ ಉದಕ ಮಂಡಲದಲ್ಲಿದ್ದ ಸರ್ಕಾರಿ ಶಾಸನತಜ್ಞರ ಕಚೇರಿಗೆ ಹಿಂತಿರುಗಿದರು. ಅಲ್ಲಿರುವಾಗಲೇ ರಾಕ್‌ಫೆಲರ್ ಫೌಂಡೇಶನ್ ಫೆಲೋ ಆಗಿ ಒಂಬತ್ತು ತಿಂಗಳ ಕಾಲ ಅಮೆರಿಕ ಮತ್ತು ಯೂರೊಪ್ ದೇಶಗಳನ್ನು ಸಂದರ್ಶಿಸುವ ಗೌರವ ಗಾಯಿಯವರಿಗೆ ಲಭಿಸಿತು. ಹಿಂತಿರುಗಿ ಬಂದಮೇಲೆ ೧೯೫೭-೫೮ರಲ್ಲಿ ಸಹಾಯಕ ಸೂಪರಿಂಟೆಂಡೆಂಟ್ ಶಾಸನತಜ್ಞರಾದರು. ಮುಂದಿನ ವರ್ಷ ಸೂಪರಿಂಟೆಂಡೆಂಟ ರಾಗಿ ಬಡ್ತಿ ಪಡೆದರು. ಇವರ ಕಾರ್ಯದಕ್ಷತೆಯನ್ನು ಪರಿಗಣಿಸಿದ ಸರ್ಕಾರ ಆ ಸಂಸ್ಥೆಯ ಅತ್ಯುನ್ನತ ಪದವಿಯಾದ ಪ್ರಧಾನ ಶಾಸನತಜ್ಞ ಹುದ್ದೆಗೆ ೧೯೬೨ರಲ್ಲಿ ಬಡ್ತಿ ನೀಡಿ ನೇಮಿಸಿತ್ತು.

೧೯೬೯ರಲ್ಲಿ ವಿಷಿಯನ್ ಪುರಾತತ್ತ್ವದ ಬಗ್ಗೆ ಶ್ರೀಲಂಕಾದಲ್ಲಿ ಸಮಾವೇಶಗೊಂಡಿದ್ದ ಎರಡನೇ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಭಾರತ

ಸರ್ಕಾರದ ಪ್ರತಿನಿಧಿಯಾಗಿ ಭಾಗವಹಿಸಿ ಅಲ್ಲಿ ಶಾಸನತಜ್ಞ ಮತ್ತು ಲಿಪಿಶಾಸ್ತ್ರ ಗೋಷ್ಠಿಯ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದರು. ಅನಂತರ ೧೯೭೧ ರಿಂದ ೧೯೭೬ರ ತನಕ ಎಪಿಗ್ರಾಫಿಯ ಕರ್ನಾಟಿಕ ಸಂಪುಟಗಳ ಪರಿಷ್ಕರಣ ಸಲಹಾ ಸಮಿತಿಯ ಸದಸ್ಯರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸಿದರು. ಅಲ್ಲಿ ಕೆಲಸ ನಿರ್ವಹಿಸುತ್ತದ್ದಾಗಲೇ ಅವರು ೧೯೭೩ರಲ್ಲಿ ಪ್ಯಾರಿಸ್‌ನಲ್ಲಿ ಸಮಾವೇಶಗೊಂಡಿದ್ದ ೨೯ನೇ ಅಂತಾರಾಷ್ಟ್ರೀಯ ಕಾಂಗ್ರೆಸ್ ಆಫ್ ಓರಿಯೆಂಟಲಿಸ್ಟ್ ಆಹ್ವಾನದ ಮೇರೆಗೆ ಭಾರತ ವಿಭಾಗದ ಪ್ರಾಚೀನ ಇತಿಹಾಸಗೋಷ್ಠಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. ಅದೇ ವರ್ಷ ಬೆಂಗಳೂರಿನ ಮಿಥಿಕ್ ಸೊಸೈಟಿಯು ಅವರ ಶಾಸನಶಾಸ್ತ್ರ ಪರಿಚಯ ಸೇವೆಯನ್ನು ಪುರಸ್ಕರಿಸಿ ಪದಕ ಹಾಗೂ ತಾಮ್ರಪತ್ರಗಳನ್ನು ನೀಡಿ ಗೌರವಿಸಿತು. ಕನ್ನಡ ಸಾಹಿತ್ಯ ಪರಿಷತ್ತು ಬಿಜಾಪುರದಲ್ಲಿ ೧೯೭೩ ಹಾಗೂ ೧೯೮೫ರಲ್ಲಿ ಗೌರವಿಸಿತು.

ಮೈಸೂರಿನಲ್ಲಿ ೧೯೭೪ರಲ್ಲಿ ಭಾರತೀಯ ಪುರಾಭಿಲೇಖ ಪರಿಷತ್ತು (Epigraphical Soceity of India) ಎಂಬ ಸಂಸ್ಥೆಯನ್ನು ಮೊದಲ ಬಾರಿಗೆ ಹುಟ್ಟು ಹಾಕಿ ಅದರ ಸ್ಥಾಪಕ ಅಧ್ಯಕ್ಷರಾಗಿ ೧೯೮೦ರ ತನಕ ಮುನ್ನಡೆಸಿದರು. ಜಿ.ಎಸ್.ಗಾಯಿ ಅವರು ಈ ಸಂಸ್ಥೆಯ ಮುಖ್ಯ ಉದ್ದೇಶ ಕಿರಿಯ ಪೀಳಿಗೆ ವಿದ್ವಾಂಸರಲ್ಲಿ ಶಾಸನಗಳ ಅಧ್ಯಯನ ಮತ್ತು ಸಂಶೋಧನೆಗಳ ಬಗ್ಗೆ ಆಸಕ್ತಿಯನ್ನು ಉಂಟುಮಾಡುವುದಾಗಿತ್ತು ಎಂದಿದ್ದಾರೆ. ರಾಷ್ಟ್ರಮಟ್ಟದ ಶಾಸನ ಸಂಶೋಧನೆ, ಪರಸ್ಪರ ಅರಿವು, ವಿಚಾರ ವಿನಿಮಯಕ್ಕೆ ಈ ಸಂಸ್ಥೆ ಕಾರಣವಾಗಿದ್ದು ಅನೇಕ ಯುವ ಸಂಶೋಧಕರ ಬೆಳೆವಣಿಗೆಗೆ ನಾಂದಿ ಹಾಡಿದೆ ಎಂದರೆ ತಪ್ಪಾಗಲಾರದು.

ಭಾರತೀಯ ಪುರಾಭಿಲೇಖ ಪರಿಷತ್ತಿನ ಯಶಸ್ಸನ್ನು ಅನುಸರಿಸಿ ಭಾರತೀಯ ಸ್ಥಳನಾಮ ಪರಿಷತ್ತು (Place name society of India) ಎಂಬ ಸಂಸ್ಥೆ ಮೈಸೂರಿನಲ್ಲಿ ೧೯೭೮ರಲ್ಲಿ ಸ್ಥಾಪನೆಗೊಂಡಿತು. ಪ್ರೊ.ದೇ. ಜವರೇಗೌಡರು ಇದರ ಸ್ಥಾಪಕರು. ಇದರ ಹುಟ್ಟಿಗೆ ಪ್ರೇರಕರಾದವರು ಡಾ.ಜಿ.ಎಸ್. ಗಾಯಿ ಅವರು. ಈ ಯೋಜನೆಗೆ ಗಾಯಿಯವರು ತಮ್ಮ ಪೂರ್ಣ ಬೆಂಬಲ ನೀಡಿದ್ದಲ್ಲದೆ ಆ ಸಂಸ್ಥೆಯ ಸಂಸ್ಥಾಪಕ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಅವರ ಮುಖ್ಯ ಉದ್ದೇಶವಾದ ಸ್ಥಳನಾಮ ಮತ್ತು ವ್ಯಕ್ತಿನಾಮಗಳ ಕುರಿತಾದ ಸಂಶೋಧನೆ, ವೈಜ್ಞಾನಿಕ ರೀತಿಯಲ್ಲಿ ಅಧ್ಯಯನ, ಗ್ರಂಥ ಪ್ರಕಟನೆ, Journal of the place

name society–Studies in Indian place names ಪತ್ರಿಕೆಯನ್ನು ನಿಯತವಾಗಿ ಪ್ರಕಟಿಸುವುದು ಹಾಗೂ ವಿಚಾರ ಗೋಷ್ಠಿ, ಅಧಿವೇಶನಗಳನ್ನು ನಡೆಸುವುದರ ಜೊತೆಗೆ ಸ್ಥಳನಾಮ ಸಂಶೋಧನೆಯಲ್ಲಿ ವಿದ್ಯಾರ್ಥಿ ಮತ್ತು ಪಂಡಿತರನ್ನು ತೊಡ ಗಿಸುವ ಕಾರ್ಯವನ್ನು ಮುಂದುವರಿಸಿತು.

ಜಿ.ಎಸ್. ಗಾಯಿಯವರು ೧೯೩೯ ರಿಂದಲೂ ಕನ್ನಡ ಸಾಹಿತ್ಯ ಪರಿಷತ್ತು ಸಿದ್ಧಪಡಿಸುತ್ತಿದ್ದ ಕನ್ನಡ–ಕನ್ನಡ ಬೃಹತ್ ನಿಘಂಟುವಿನ ರಚನಾ ಸಮಿತಿಯ ಸದಸ್ಯರಾಗಿದ್ದರು. ೧೯೯೨ರಿಂದ ೧೯೯೫ರ ತನಕ ನಿಘಂಟು ಸಂಪಾದಕ ಸಮಿತಿಯ ಅಧ್ಯಕ್ಷರಾದರು. ಏಳನೆಯ ಸಂಪುಟದ ಕಾರ್ಯವನ್ನು ಯಶಸ್ವಿಯಾಗಿ ಮುಗಿಸಿ ಎಂಟನೆಯ ಸಂಪುಟದ ಸಿದ್ಧತೆಯಲ್ಲಿದ್ದಾಗ ಬೆಂಗಳೂರಿಗೆ ಹೋಗಿ ನೆಲಸಿದರು. ಎಂಟನೇ ಸಂಪುಟ(ಅಂತಿಮ ಸಂಪುಟ) ಅಚ್ಚಿನ ಮನೆಯಲ್ಲಿರುವಾಗಲೇ ಗಾಯಿಯವರು ತಮ್ಮ ೭೮ನೇ ವಯಸ್ಸಿನಲ್ಲಿ ನಿಧನರಾದರು(೦೬.೦೨.೧೯೯೫). ಕನ್ನಡ, ಸಂಸ್ಕೃತ, ಇಂಗ್ಲಿಷ್ ಭಾಷೆಗಳಲ್ಲಿ ಪ್ರಗಲ್ಭ ಪಾಂಡಿತ್ಯ, ಭಾಷಾವಿಜ್ಞಾನ, ಸಾಹಿತ್ಯ, ಶಾಸನಶಾಸ್ತ್ರ, ಲಿಪಿಶಾಸ್ತ್ರ, ಇತಿಹಾಸ ಈ ಶಾಸ್ತ್ರಗಳ ಹಿತವಾದ ಸಮನ್ವಯ ಅವರಲ್ಲಿ ಮೇಳೈಸಿದ್ದುವು. ಅವರ ಸಾಧನೆಯ ಹಿಂದೆ ಕಠಿಣವಾದ, ನಿಯಮಬದ್ಧವಾದ ಪರಿಶ್ರಮವಿರುವುದು ಅವರ ಅಧಿಕಾರಾವಧಿಯಲ್ಲಿ ಅವರ ಇಲಾಖೆಯಿಂದ ಹೊರಬಂದಿರುವ ಪ್ರಕಟನೆಗಳನ್ನು ಅವಲೋಕಿಸಿದರೆ ಮನವರಿಕೆ ಯಾಗುತ್ತದೆ. ಅವರು ಮುಖ್ಯ ಶಾಸನತಜ್ಞರಾದಾಗಿನಿಂದ, ಅಂದರೆ ೧೯೬೨ರಿಂದ ಆ ಇಲಾಖೆಯ ಪ್ರತಿಷ್ಠಿತ ಪ್ರಕಟನೆಯಾದ ಎಪಿಗ್ರಾಫಿಯಾ ಇಂಡಿಕಾ ಹಾಗೂ ಇಂಡಿಯನ್ ಎಪಿಗ್ರಫಿ ವಾರ್ಷಿಕ ವರದಿಗಳನ್ನು ಕ್ರಮಬದ್ಧವಾಗಿ ಸಂಪಾದಿಸಿ ಪ್ರಕಟಿಸಿದ್ದಲ್ಲದೆ ಬಾಂಬೆ ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್ ಸಂಪಾದಿಸಿ ಪ್ರಕಟಿಸಿದರು. ಡೈನಾಸ್ಟಿಕ್ ಆಫ್ ಇನ್‌ಸ್ಕ್ರಿಪ್ಷನ್ಸ್ ಮುಂತಾದವುಗಳು ಇವರ ಅಧಿಕಾರಾವಧಿಯಲ್ಲಿ ಹೊರಬಂದುವು. ಸುಮಾರು ೬೦ಕ್ಕೂ ಹೆಚ್ಚು ಲೇಖನಗಳು ಸಂಶೋಧನ ಪತ್ರಿಕೆಗಳಾದ ಜರ್ನಲ್ ಆಫ್ ಓರಿಯೆಂಟಲ್ ರಿಸರ್ಚ್, ಕ್ವಾರ್ಟರ್ಲಿ ಜರ್ನಲ್ ಆಫ್ ಮಿಥಿಕ್ ಸೊಸೈಟಿ, ಜರ್ನಲ್ ಆಫ್ ಇಂಡಿಯನ್ ಹಿಸ್ಟರಿ, ಜರ್ನಲ್ ಆಫ್ ಗಂಗನಾಥ ಝಾ ರಿಸರ್ಚ್ ಇನ್‌ಸ್ಟಿಟ್ಯೂಟ್, ಇಂಡಿಯನ್ ಹಿಸ್ಟರಿ ಬುಲೆಟಿನ್ ಆಫ್ ಡೆಕ್ಕನ್ ಕಾಲೇಜ್ ರಿಸರ್ಚ್, ಜರ್ನಲ್ ಆಫ್ ಏಷಿಯಾಟಿಕ್ ಸೊಸೈಟಿ(ಬಾಂಬೆ), ಜರ್ನಲ್ ಆಫ್ ಎಪಿಗ್ರಾಫಿಕಲ್ ಸೊಸೈಟಿ ಆಫ್ ಇಂಡಿಯಾ, ನ್ಯೂ ಇಂಡಿಯನ್ ಆಂಟಿಕ್ವರಿ, ಪ್ರಬುದ್ಧ ಕರ್ನಾಟಕ

ಮೊದಲಾದವುಗಳಲ್ಲಿ ಹಾಗೂ ಅನೇಕ ಗೌರವ ಸಂಸ್ಮರಣ ಮತ್ತು ಸೆಮಿನಾರ್ ಗ್ರಂಥಗಳಲ್ಲಿ ಬೆಳಕು ಕಂಡಿವೆ.

Historical Grammer of Old Kannada (1946) ಅವರು ಸಂಶೋಧನೆ ನಡೆಸಿ ಪ್ರಕಟಿಸಿದ ಮೊದಲ ಕೃತಿ. Introduction to Indian Epigraphy(1986), Inscriptions of the early Gupta Kings, Some select inscriptions(1990), Epigraphy and Culture(1992) ಅವರ ಇತರ ಮುಖ್ಯ ಪ್ರಕಟನೆಗಳು.

ಗಾಯಿ ಅವರನ್ನು ಮೈಸೂರಿನಲ್ಲಿರುವ ಭಾರತೀಯ ಭಾಷಾ ಸಂಸ್ಥಾನ 'ಸೀನಿಯರ್ ಫೆಲೋ' ಎಂದು ಗೌರವಿಸಿತು. ತಿರುವನಂತಪುರದಲ್ಲಿರುವ ದ್ರಾವಿಡ ಭಾಷಾ ಸಂಸ್ಥೆಯು ೧೯೮೦-೮೧ರ ಅವಧಿಯ ಅಧ್ಯಕ್ಷ ಸ್ಥಾನವನ್ನು ನೀಡಿ ಗೌರವಿಸಿದೆ. ಹಾಗೆಯೇ ಕರ್ನಾಟಕ ಸರ್ಕಾರವು ೧೯೮೦ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿತು. ಮೈಸೂರು ಪುರಾತತ್ವ ಇಲಾಖೆ ೨೨.೧೦.೧೯೮೫ರಲ್ಲಿ ಆಗಿನ ರಾಷ್ಟ್ರಪತಿಗಳಾಗಿದ್ದ ಗ್ಯಾನಿ ಜೈಲ್‌ಸಿಂಗ್ ಅವರ ಸಮ್ಮುಖದಲ್ಲಿ ಜಿ.ಎಸ್. ಗಾಯಿ ಅವರನ್ನು ವಿಶೇಷವಾಗಿ ಸನ್ಮಾನಿಸಿತು. ಭಾರತೀಯ ಪುರಾಭಿಲೇಖ ಪರಿಷತ್ತಿನ ೧೭ನೇ ಸಮ್ಮೇಳನ ೧೯೯೧ರಲ್ಲಿ ತಂಜಾವೂರಿನಲ್ಲಿ ನಡೆದಾಗ ಗಾಯಿ ಅವರಿಗೆ Indian History and Epigraphy ಎಂಬ ಹೆಸರಿನ ಸಂಭಾವನ ಗ್ರಂಥವನ್ನು ಅರ್ಪಿಸಿತು.

❐ ❐ ❐

ಜಿ. ವರದರಾಜರಾವ್

(೧೯೧೮-೧೯೮೭)

ಪೂರ್ಣಿಮಾ ಸಿ.ಎಸ್.

ಇವರ ಪೂರ್ಣ ಹೆಸರು ಗುಂಡಮರಾಜು ವರದರಾಜರಾವ್. ಇವರು ಆದರ್ಶ ಶಿಕ್ಷಕ, ಸಂಶೋಧಕ, ಕವಿ, ವಿಮರ್ಶಕ, ಹರಿದಾಸ ಸಾಹಿತ್ಯ ಸಂಗ್ರಾಹಕ ಮತ್ತು ಗ್ರಂಥ ಸಂಪಾದಕರು. ಇವರು ಜನಿಸಿದ್ದು ಬೆಂಗಳೂರಿನಲ್ಲಿ ೧೯೧೮ ಜನವರಿ ೩ ರಂದು. ತಂದೆ ಜಿ.ವೆಂಕಟರಾವ್, ತಾಯಿ ಜಾನಕಮ್ಮ. ವರದರಾಜ ರಾಯರು ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲಾಶಿಕ್ಷಣವನ್ನು ಬೆಂಗಳೂರಿನಲ್ಲಿ ಪೂರೈಸಿದರು. ಇಂಟರ್‌ಮೀಡಿಯೇಟ್‌ನಲ್ಲಿ ವಿಜ್ಞಾನದ ವಿದ್ಯಾರ್ಥಿಯಾಗಿದ್ದರು. ಎಂ.ವಿ. ಸೀತಾರಾಮಯ್ಯ, ಎ.ಆರ್. ಕೃಷ್ಣಶಾಸ್ತ್ರಿ, ಎನ್.ಎಸ್. ಸುಬ್ಬರಾವ್, ಬಿ.ಎಂ. ಶ್ರೀಕಂಠಯ್ಯ ನವರಂಥ ಗುರುವೃಂದದ ಪ್ರೋತ್ಸಾಹದಿಂದ ಕನ್ನಡ ಸಾಹಿತ್ಯದಲ್ಲಿ ವಿಶೇಷ ಆಸಕ್ತಿ ಬೆಳೆಸಿಕೊಂಡರು.

ಇವರು ಮಹಾರಾಜ ಕಾಲೇಜಿನಲ್ಲಿ ಬಿ.ಎ.(ಆನರ್ಸ್), ಎಂ.ಎ. ಪದವಿ ಪಡೆದರು. ಡಿ.ಎಲ್.ಎನ್. ಅವರ ಮಾರ್ಗ ದರ್ಶನದಲ್ಲಿ ಸಂಶೋಧನೆ ನಡೆಸಿ 'ಕುಮಾರರಾಮನ ಸಾಂಗತ್ಯಗಳು' ಎಂಬ ಪ್ರೌಢಪ್ರಬಂಧ ಸಿದ್ಧಪಡಿಸಿ ಮೈಸೂರು ವಿಶ್ವವಿದ್ಯಾನಿಲಯದಿಂದ ಪಿಎಚ್.ಡಿ. ಪದವಿ ಪಡೆದರು(೧೯೬೧). ಇವರ ವೃತ್ತಿ ಜೀವನ ಪ್ರಾರಂಭವಾದುದು ಕರ್ನಾಟಕ ಸರ್ಕಾರದ ಕನ್ನಡ ಭಾಷಾಂತರ ಕಛೇರಿಯಲ್ಲಿ ಭಾಷಾಂತರಕಾರರಾಗಿ, ಬಳಿಕ ಸರ್ಕಾರಿ ಕಾಲೇಜಿನಲ್ಲಿ ಅಧ್ಯಾಪಕರಾಗಿ ಕೆಲಕಾಲ ಕಾರ್ಯನಿರ್ವಹಿಸಿದರು. ಆ ಸಂದರ್ಭದಲ್ಲಿ ಇತಿಹಾಸತಜ್ಞರಾದ ಹುಲ್ಲೂರು ಶ್ರೀನಿವಾಸ ಜೋಯಿಸರ ಪರಿಚಯವಾಗಿ ಇತಿಹಾಸದೆಡೆಗೆ ಮನಸ್ಸು ಹೊರಳಿತು. ಇದರ ಫಲವಾಗಿ ರಾಯರಿಗೆ ಸಂಶೋಧನೆ ನಡೆಸಲು ವಿಷಯ ಸಿಕ್ಕಿ ಐತಿಹಾಸಿಕ ಕಾವ್ಯಗಳನ್ನು ಪಿಎಚ್.ಡಿ. ಸಂಶೋಧನೆಗೆ ಆಯ್ಕೆ ಮಾಡಿಕೊಳ್ಳಲು ಪ್ರೇರಣೆ ಲಭಿಸಿತು. ಅನಂತರ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರಾಗಿ, ಪ್ರವಾಚಕರಾಗಿ,

ಪ್ರಾಧ್ಯಾಪಕರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಕೇಂದ್ರವಾದ್ದ ಮಂಗಳೂರಿನ ಮಂಗಳಗಂಗೋತ್ರಿಯಲ್ಲಿ ಪ್ರಾಧ್ಯಾಪಕರಾಗಿ, ಕನ್ನಡ ವಿಭಾಗದ ಮುಖ್ಯಸ್ಥರಾಗಿ, ಆ ಕೇಂದ್ರದ ನಿರ್ದೇಶಕರಾಗಿ ಸೇವೆಸಲ್ಲಿಸಿ ನಿವೃತ್ತರಾದರು.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಯುಜಿಸಿ ಸಹಕಾರದಿಂದ ೧೯೬೮ರಲ್ಲಿ ಪ್ರಾರಂಭವಾದ 'ಹರಿದಾಸ ಸಾಹಿತ್ಯದ ಶಾಸ್ತ್ರೀಯ ಸಂಪಾದನ ಯೋಜನೆ'ಯಲ್ಲಿ ಗೌರವ ಸಂಪಾದಕರಾಗಿ ಜವಾಬ್ದಾರಿ ವಹಿಸಿಕೊಂಡರು. ಮೊದಲಿಗೆ ಹಸ್ತಪ್ರತಿಗಳ ಸಂಗ್ರಹಕ್ಕಾಗಿ ಕರ್ನಾಟಕಾದ್ಯಂತ ಸಂಚರಿಸಿ ಹಸ್ತಪ್ರತಿಗಳನ್ನು ಸಂಗ್ರಹಿಸುವುದರೊಂದಿಗೆ ಸಾಂಪ್ರದಾಯಿಕವಾಗಿ ದಾಸರ ಪದಗಳನ್ನು ಹಾಡುತ್ತಿದ್ದ ಮಟ್ಟುಗಳು ಮುಂದಿನ ಪೀಳಿಗೆಗೂ ತಿಳಿಯಬೇಕೆಂಬ ಸದುದ್ದೇಶದಿಂದ ಧ್ವನಿಮುದ್ರಣ ಮಾಡಿಕೊಳ್ಳುವ ಕಾರ್ಯವೂ ನಡೆಯಬೇಕಿತ್ತು. ಎರಡನೆಯದಾಗಿ ಹಸ್ತಪ್ರತಿಗಳ ಮತ್ತು ಮೌಖಿಕ ಸಂಪ್ರದಾಯದ ಸಾಹಿತ್ಯವನ್ನು ಆಧಾರ ವಾಗಿಟ್ಟುಕೊಂಡು ಶಾಸ್ತ್ರೀಯ ಗ್ರಂಥಸಂಪಾದನಕಾರ್ಯಕ್ಕೆ ಅನುಗುಣವಾಗಿ ಪಠ್ಯಗಳನ್ನು ತಯಾರಿಸುವುದು, ಮೂರನೆಯದಾಗಿ ಸಿದ್ಧಪಡಿಸಿದ ಪಠ್ಯಗಳ ಗಾತ್ರಕ್ಕೆ ಅನುಗುಣವಾಗಿ ಬೇರೆ ಬೇರೆ ಸಂಪುಟಗಳಲ್ಲಿ ದಾಸರ ಹಾಡುಗಳನ್ನು ಪ್ರಕಟಿಸುವುದು– ಇದು ಈ ಯೋಜನೆಯ ಪ್ರಮುಖ ಧ್ಯೇಯವಾಗಿತ್ತು.

ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಹರಿದಾಸ ಸಾಹಿತ್ಯ ಸಂಪಾದನೆಗೆ ಭದ್ರವಾದ ಬುನಾದಿ ಹಾಕಿಕೊಟ್ಟವರು, ಸಂಪಾದನೆಗೆ ಸಂಬಂಧಿಸಿದ ವಿಧಿವಿಧಾನಗಳನ್ನು ರೂಪಿಸಿದವರು, ಮಾದರಿಗಾಗಿ ಕೆಲವು ಕೃತಿಗಳನ್ನು ಸಂಪಾದಿಸಿದವರು, ಹರಿದಾಸ ಸಾಹಿತ್ಯ ಸಂಶೋಧನಾಸಕ್ತರಿಗೆ ದಾಸರ ಪದಗಳ ಪಂಡಿತ ಆವೃತ್ತಿ ಮತ್ತು ಜನಸಾಮಾನ್ಯರಿಗಾಗಿ ಜನಪ್ರಿಯ ಆವೃತ್ತಿಯನ್ನು ಪ್ರತ್ಯೇಕ, ಪ್ರತ್ಯೇಕವಾಗಿ ಪ್ರಕಟಿಸುವಂತೆ ಮಾಡಿದವರು ವರದರಾಜರಾಯರೇ. ಇವರು ಮೂವರು ಸಂಶೋಧನ ಸಹಾಯಕರು ಹಾಗೂ ಇಬ್ಬರು ಪ್ರತಿಕಾರರೊಂದಿಗೆ ಗ್ರಂಥಸಂಪಾದನೆಯ ಕಾರ್ಯವನ್ನು ಆರಂಭಿಸಿದರು. ಇವರ ಅಧೀನದಲ್ಲಿ ಬೆಳೆದ ಇವರ ಶಿಷ್ಯರಾದ ಟಿ.ಎನ್. ನಾಗರತ್ನ ಅವರು ಹರಿದಾಸಸಾಹಿತ್ಯಕ್ಕೆ ಅಪಾರ ಕೊಡುಗೆಯನ್ನು ನೀಡಿ, ಅನೇಕ ಗೌರವ ಮನ್ನಣೆಗಳಿಗೆ ಪಾತ್ರರಾಗಿದ್ದಾರೆ.

ವರದರಾಜರಾವ್ ಅವರು ಮೂವರು ಸಂಶೋಧನ ಸಹಾಯಕರು ಹಾಗೂ ಇಬ್ಬರು ಪ್ರತಿಕಾರರೊಂದಿಗೆ ಮೊದಲಿಗೆ ಶ್ರೀಪಾದರಾಜರ ಕೀರ್ತನೆಗಳನ್ನು ಸಂಪಾದಿಸಿದರು. ಈ ಪುಸ್ತಕದ ಮುನ್ನುಡಿಯಲ್ಲಿಯ ಹಾ. ಮಾ. ನಾಯಕರ ಮಾತನ್ನು ಇಲ್ಲಿ ಉಲ್ಲೇಖಿಸಲಾಗಿದೆ: "ಶ್ರೀಪಾದರಾಜರ ಕೀರ್ತನೆಗಳ ಆವೃತ್ತಿಯನ್ನು ತಾಳೆಗರಿ, ಕಾಗದದ ಪ್ರತಿ ಮತ್ತು ಮುದ್ರಿತ ಪ್ರತಿಗಳಿಂದ ಕೂಡಿದ ೧೧೨ ಆಕರಗಳ ಆಧಾರದಿಂದ ಸಿದ್ಧಪಡಿಸಲಾಗಿದೆ. ಯೋಜನೆಗೆ ಅನುಗುಣವಾಗಿ, ಶ್ರೀಪಾದರಾಜರ ಜೀವನ, ಕೃತಿಗಳನ್ನು ಕುರಿತ ವಿಸ್ತಾರವಾದ ಪ್ರಸ್ತಾವನೆಯನ್ನೂ ಬಗೆಬಗೆಯ ಸಹಾಯಕ ಸೂಚಿಗಳನ್ನೂ ಜೋಡಿಸಲಾಗಿದೆ. ಇದುವರೆಗೆ ಪ್ರಕಟವಾಗದ ಕೆಲವು ಕೀರ್ತನೆಗಳನ್ನು ಒಳಗೊಂಡಿರುವುದು ಈ ಸಂಪುಟದ ಒಂದು ವೈಶಿಷ್ಟ್ಯ. ಗ್ರಂಥಸಂಪಾದನೆಯ ಅಭ್ಯಾಸಿಗಳಿಗೆ ಇದು ಅಪೂರ್ವ ಆಕರವಾಗಿದೆ." ಸಂಪಾದನಾ ಕಾರ್ಯದ ಕಾರ್ಯವೈಖರಿ ಹಾಗೂ ಅದರ ಕಠಿಣ ಪರಿಶ್ರಮವನ್ನು ಇವರ ಮಾತುಗಳು ತಿಳಿಸುತ್ತವೆ.

ಶ್ರೀಪಾದರಾಜರ ಕೃತಿಯ ಪೀಠಿಕಾಭಾಗದಲ್ಲಿ ವರದರಾಜರಾಯರು ಶ್ರೀಪಾದರಾಜರ ಬಗೆಗಿನ ವಿವರಗಳನ್ನು ನೀಡಿದ್ದಾರೆ. ಕೀರ್ತನೆಗಳನ್ನು ಸಂಪಾದಿಸುವಾಗ ಹಲವು ಕೀರ್ತನೆಗಳ ಒಂದೊಂದೇ ಹಸ್ತಪ್ರತಿ ಕಂಡುಬಂದಿತ್ತು ಅಥವಾ ಅವು ಮುದ್ರಿತಗೊಂಡಿದ್ದವು. ಕನಿಷ್ಠ ಎರಡು ಭಿನ್ನ ಪಾಠಗಳಿರುವ ಕೀರ್ತನೆಗಳಿದ್ದರೆ ಅವುಗಳಲ್ಲಿ ವಿಶ್ವಸನೀಯ ಎಂದು ಕಾಣುವುದನ್ನು ಮುಖ್ಯ ಪಠ್ಯವಾಗಿಟ್ಟುಕೊಂಡು ಮತ್ತೊಂದರಲ್ಲಿರುವುದನ್ನು ಅಡಿಟಿಪ್ಪಣಿಯುಲ್ಲಿ ನೀಡುವುದು. ಒಂದೇ ಪ್ರತಿ ಸಿಕ್ಕ ಕೀರ್ತನೆಗಳನ್ನು 'ಏಕೈಕ ಆಕರ' ಎಂದು ವಿಭಾಗಿಸಿ ಅನುಬಂಧದಲ್ಲಿ ನೀಡುವ ಕ್ರಮ ಬಳಸಿದ್ದಾರೆ. ಅವುಗಳಲ್ಲಿ ಅನುಮಾನವಿದ್ದರೆ ಅದನ್ನು ಸೂಚಿಸುವುದು ಒಂದು ಬಗೆಯಾದರೆ, ಆ ಕೀರ್ತನೆಗಳು ಬೇರೆ ಯಾವುದೇ ದಾಸರ ಹೆಸರಿನಲ್ಲಿ ದೊರೆಯುವ ತನಕ ಅಥವಾ ದೊರೆಯದಿದ್ದರೆ ಅವನ್ನು ಮೂಲ ಲೇಖಕರ ಹೆಸರಿನಲ್ಲಿಯೇ ಇಟ್ಟುಕೊಳ್ಳುವುದು. ಹರಿದಾಸಸಾಹಿತ್ಯ ಮೌಖಿಕ ಪರಂಪರೆ ಯಾದ್ದರಿಂದ ಎಲ್ಲ ಬಗೆಯ ಭಿನ್ನ ಪಾಠಗಳನ್ನೂ ಸ್ವೀಕರಿಸಿ ಪರಿಶೀಲಿಸಬೇಕು. ಅವು ಶುದ್ಧ-ಅಶುದ್ಧ ಎಂಬ ಭೇದವಿಲ್ಲದೆ ಪರಿಗಣಿಸಬೇಕಾಗುತ್ತದೆ.

ವರದರಾಜರಾಯರು ಈ ಬಗೆಯಲ್ಲಿ ಸಂಗ್ರಹಿಸಿ ಒಂದೊಂದು ಕೀರ್ತನೆಗೆ ಎಷ್ಟು ಪ್ರತಿಗಳು ದೊರೆಯುವುವೋ ಎಲ್ಲವನ್ನು ಪಟ್ಟಿಮಾಡಿ, ಆಯಾ ಕೀರ್ತನೆಯಲ್ಲಿ

ಬರುವಂಥಹ ಅಂಕಿತಗಳ ಸಂಖ್ಯೆಗೆ ಅನುಗುಣವಾಗಿ ಅದು ಯಾರ ರಚನೆ ಯೆಂಬುದನ್ನು ನಿರ್ಧರಿಸಿದ್ದಾರೆ. ಒಂದೇ ರೀತಿಯ ರಚನೆಯೆನಿಸಿದರೂ ಭಿನ್ನ ಅಂಕಿತಗಳಾಗಿ ಸಮವಾದ ಸಂಖ್ಯೆಯಲ್ಲಿ ದೊರೆತಿ ರುವುದ್ನು 'ಅಂಕಿತ ಸಂದಿಗ್ಧ' ಎಂದು ಬೇರೆ ವರ್ಗೀಕರಿಸಿದ್ದಾರೆ. ಒಟ್ಟಾರೆ ರಚನೆಯಲ್ಲಿ ಭಿನ್ನತೆ ಇದ್ದಾಗ ಅದನ್ನು 'ಪಾಠಪ್ರಭೇದ' ಎಂದು ಗುರುತಿಸಿದ್ದಾರೆ. ಒಂದೊಮ್ಮೆ ಇತರ ದಾಸರ ಪದಗಳು ಅಂಕಿತ ಪಲ್ಲಟದಿಂದಾಗಿ ಬೆರೆತುಕೊಂಡಿದ್ದರೆ, ಅವುಗಳನ್ನು ಆಕರಬಾಹುಳ್ಯ, ಅಂತಸಂಭಾ ವತೆಗಳನ್ನಾಧರಿಸಿ'ಅಂಕಿತ ಪಲ್ಲಟ' ಎಂದು ವರ್ಗೀಕರಿಸಿದ್ದಾರೆ. ಹೀಗೆ ಅಂಕಿತ ನಿರ್ಧಾರವಾದ ಮೇಲೆ ದೊರಕಿರುವ ಎಲ್ಲ ಕೀರ್ತನೆಗಳನ್ನು ಕ್ರೂಡೀಕರಿಸಿ, ತಾಳ್ಮೆಯಿಂದ ಪಾಠಾಂತರ ಸಂಕಲನ ಮಾಡಬೇಕು. ಇದೇ ವರದರಾಜರಾಯರು ನಡೆಸಿದ ಕ್ರಮವಾಗಿದೆ. ಪಾಠಾಂತರ ಸಂಕಲನವನ್ನು ಮಾಡುವಾಗಕ್ರಮವಾಗಿ ಮೊದಲಿಗೆ ಓಲೆಪ್ರತಿಯಲ್ಲಿಯ ಪಾಠ, ಕಾಗದದ ಪ್ರತಿಯಪಾಠ, ಮುದ್ರಿತ ಪ್ರತಿಯ ಪಾಠ ಅನುಸರಿಸಿದ್ದಾರೆ. 'ಹರಿದಾಸ ಸಾಹಿತ್ಯ ಸಮೀಕ್ಷೆ' ಎಂಬ ಪುಸ್ತಕದಲ್ಲಿ ಇವರ 'ಹರಿದಾಸ ಸಾಹಿತ್ಯ ಸಂಪಾದನೆಯ ಸಮಸ್ಯೆಗಳು ಲೇಖನವು ಒಟ್ಟು ದಾಸ ಸಾಹಿತ್ಯದ ಆಕರಗಳನ್ನು ಸಂಗ್ರಹಿಸುವುದರಿಂದ ಮೊದಲು ಗೊಂಡು ಅಂಕಿತಗಳನ್ನು ಗುರುತಿಸುವ, ಪಾಠಪ್ರಭೇದಗಳನ್ನು ಗುರುತುಮಾಡಿಕೊಳ್ಳುವ ಕೆಲಸದ ಪರಿಶ್ರಮ ಅದಕ್ಕೆ ಬೇಕಾದ ಸಿದ್ಧತೆ ಮತ್ತು ಬಗೆಗಳ ಬಗ್ಗೆ ಕೂಲಂಕಷವಾಗಿ ವಿವರಿಸಿದ್ದಾರೆ. ಪ್ರಕ್ಷಿಪ್ತ ಪಾಠಗಳನ್ನು ಸ್ವೀಕರಿಸುವ, ಬಿಡುವ ಕ್ರಮ, ನುಡಿಗಳ ಪಲ್ಲಟಗಳ ಜೋಡನೆ ಕೊನೆಯದಾಗಿ ಹರಿದಾಸರ ಭಾಷೆಯ ಸ್ವರೂಪವನ್ನು ಮನಗಂಡು ಯಾರದ್ದೆಂದು ತಿಳಿಯುವುದು, ಪಾಠನಿರ್ಣಯದಂತೆ ಸಂಗೀತದ ಅಳವಡಿಕೆಯ ಬಗ್ಗೆ ಜ್ಞಾನವನ್ನು ಹೊಂದಿರುವುದು ಬಹುಮುಖ್ಯ. ಹೀಗೆ ಹಸ್ತಪ್ರತಿಗಳ ಸಂಪಾದನೆಯ ಬಗ್ಗೆ ಸಂಪೂರ್ಣವಾದ ಮಾಹಿತಿ ನೀಡುವುದು ವರದರಾಜರಾವ್ ಅವರ ಗ್ರಂಥಸಂಪಾದನೆಯ ವಿಧಾನವಾಗಿತ್ತು.

ಹರಿದಾಸ ಸಾಹಿತ್ಯಸಾರ, ಹರಿದಾಸ ಹೃದಯ, ಹರಿಭಕ್ತಿವಾಹಿನಿ (೧೯೮೨), ಹರಿದಾಸ ಸಾಹಿತ್ಯ ಸಮೀಕ್ಷೆ, ಹರಿದಾಸ ಸಾಹಿತ್ಯ ದಿಗ್ಗಜರು (೧೯೮೭)- ಇವು ಹರಿದಾಸ ಸಾಹಿತ್ಯಕ್ಕೆ ವರದರಾಜರಾಯರು ನೀಡಿದ ಕೊಡುಗೆಗಳು. 'ಹರಿಭಕ್ತಿ ವಾಹಿನಿ" ದಾಸಸಾಹಿತ್ಯ ಮತ್ತು ಭಕ್ತಿ ಪರಂಪರೆಯ ಪ್ರಮುಖ ಪದ್ಯಗಳು ಮತ್ತು ಕೀರ್ತನೆಗಳ ಸಂಗ್ರಹ. ಹರಿದಾಸ ಸಾಹಿತ್ಯ ಸಮೀಕ್ಷೆ' ಎಂಬ ಕೃತಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ

ನಡೆದ ವಿಚಾರಸಂಕಿರಣದಲ್ಲಿ ಮಂಡಿತವಾದ ಪ್ರಬಂಧಗಳ ಸಂಕಲನ. 'ಹರಿದಾಸ ಸಾಹಿತ್ಯ ಸಾರ'– ಈ ಕೃತಿ ಹರಿದಾಸ ಸಾಹಿತ್ಯದ ಅಧ್ಯಯನದ ಕ್ರಮ, ಅದರ ಆಳ ಅಗಲಗಳನ್ನು ಅರಿಯಲು ಮಾರ್ಗಸೂಚಿಯಂತಿದೆ. ದಾಸಸಾಹಿತ್ಯದ ಆರಂಭಿಕ ಘಟ್ಟದಲ್ಲಿ ಯತಿಶ್ರೇಷ್ಠರು (ಶ್ರೀಪಾದರಾಜರು, ವ್ಯಾಸರಾಯರು, ವಾದಿ ರಾಜರು), ಪುರಂದರ ಕನಕಾದಿಗಳ ಕೊಡುಗೆಯ ಬಗೆಗೆ ವಿಸ್ತಾರವಾದ ಮಾಹಿತಿ ಇದೆ. ಬೇರೆ ಬೇರೆ ಕಾರಣಗಳಿಗಾಗಿ ಸ್ತಬ್ಧವಾಗಿದ್ದ ದಾಸಸಾಹಿತ್ಯದ ಎರಡನೆಯ ಘಟ್ಟದಲ್ಲಿ– ವಿಜಯದಾಸರು, ಜಗನ್ನಾಥದಾಸರು, ಪ್ರಸನ್ನ ವೆಂಕಟದಾಸರು, ಗೋಪಾಲದಾಸರು, ಹೆಳವನಕಟ್ಟೆ ಗಿರಿಯಮ್ಮ ಅವರಿಂದ ಪುನರುಜ್ಜೀವನಗೊಂಡ ಬಗೆಯನ್ನು ಅನೇಕ ಕೃತಿಗಳ ನಿದರ್ಶನಗಳನ್ನು ನೀಡಿ ವಿವರಿಸಿದ್ದಾರೆ. ಹರಿದಾಸರ ಆರಾಧನಾ ವಿಧಾನ, ಹರಿದಾಸ ಸಾಹಿತ್ಯ ಕೃತಿಗಳ ಆಧ್ಯಾತ್ಮಿಕ ಮೌಲ್ಯ, ಹರಿದಾಸರ ಕೃತಿಗಳಲ್ಲಿರುವ ಪೌರಾಣಿಕ ಪ್ರಾಶಸ್ತ್ಯ, ಮಾನವ ಜೀವನದಲ್ಲಿ ಹೇಗೆ ಸದಾಚಾರವನ್ನು ಮೈಗೂಡಿ ಸಕೊಳ್ಳಬೇಕೆಂಬ ವಿಷಯ. ಹರಿದಾಸ ಸಾಹಿತ್ಯದ ವಿಶ್ಲೇಷಣೆ, ಹರಿದಾಸ ಸಾಹಿತ್ಯದ ವಿವಿಧ ಪ್ರಕಾರಗಳು ವಚನ ಸಾಹಿತ್ಯ ಹಾಗೂ ದಾಸ ಸಾಹಿತ್ಯದ ತೌಲನಿಕ ವಿವೇಚನೆಗಳಿವೆ.

ದಾಸಸಾಹಿತ್ಯದ ದಿಗ್ಗಜರು (೧೯೮೭)– ಈ ಕೃತಿ ದಾಸಸಾಹಿತ್ಯಕ್ಕೆ ಯತಿತ್ರಯರ–ಶ್ರೀಪಾದರಾಜರು, ಶ್ರೀವ್ಯಾಸರಾಯರು, ಶ್ರೀವಾದಿರಾಜರು–ಕೊಡುಗೆ ಏನೆಂಬುದನ್ನು ವಿಶದಪಡಿಸುತ್ತದೆ. ಅಂದು ಮಠಮಾನ್ಯಗಳಲ್ಲಿ ಸಂಸ್ಕೃತ ಭಾಷೆಯೇ ಪ್ರಧಾನವಾಗಿತ್ತು. ಆ ಸಂದರ್ಭದಲ್ಲಿ ಮೂವರು ಯತಿಗಳ ಕನ್ನಡದ ಬಗೆಗಿನ ಅಭಿಮಾನ ಮೆಚ್ಚುವಂಥದು; ಕನ್ನಡದಲ್ಲಿ ಕೀರ್ತನೆಗಳನ್ನು ರಚಿಸಿ ಜನಪ್ರಿಯರಾದರು. ಜನಸಾಮಾನ್ಯರೂ ಸುಲಭವಾಗಿ ಗ್ರಹಿಸುವಂತೆ ಮಧ್ವಮತದ ತತ್ತ್ವಗಳನ್ನು ತಮ್ಮ ಕೀರ್ತನೆಗಳಲಿ ಅಭಿವ್ಯಕ್ತಿಸಿರುವ ವಿಚಾರವನ್ನು ರಾಯರು ಪ್ರಸ್ತುತ ಕೃತಿಯಲ್ಲಿ ತಿಳಿಸಿದ್ದಾರೆ.

ಕುಮಾರರಾಮ ಕನ್ನಡ ಮತ್ತು ತೆಲುಗು ಭಾಷಾ ಸಾಹಿತ್ಯಗಳಲ್ಲಿ ಜನಪ್ರಿಯವಾದ ಐತಿಹ್ಯಾತ್ಮಕ ವ್ಯಕ್ತಿ. ಕನ್ನಡದಲ್ಲಿ ಮತ್ತು ತೆಲುಗಿನಲ್ಲಿ ಇವನ ಬಗೆಗೆ ಅನೇಕ ಜನಪದ ಲಾವಣಿಗಳು, ಕಥೆಗಳು ಪ್ರಚಾರದಲ್ಲಿವೆ. ಜನಪದ ಮತ್ತು ಇತರ ದೇಶೀಸಾಹಿತ್ಯದ ನಾಯಕನಾದ ಕುಮಾರರಾಮನ ಬಗೆಗೆ ವರದರಾಜರಾವ್ ಅವರು ವಿದ್ವತ್ಪೂರ್ಣ ಪ್ರೌಢಪ್ರಬಂಧವನ್ನು ರಚಿಸಿದ್ದಾರೆ. 'ಕುಮಾರ ರಾಮನ ಸಾಂಗತ್ಯಗಳು'–

ವರದರಾಜರಾಯರ ಪಿಎಚ್.ಡಿ. ಮಹಾಪ್ರಬಂಧದ ಗ್ರಂಥರೂಪ. ಪಾಂಚಾಳ ಗಂಗನ ಚೆನ್ನರಾಮನ ಸಾಂಗತ್ಯ, ನಂಜುಂಡ ಕವಿಯ ಕುಮಾರರಾಮನ ಚರಿತೆ, ಮಹಾಲಿಂಗನ ಬಾಲರಾಮನ ಸಾಂಗತ್ಯ– ಎಂಬ ಮೂರು ಕೃತಿಗಳನ್ನು ಆಧಾರವಾಗಿಟ್ಟುಕೊಂಡು ಹಸ್ತಪ್ರತಿಗಳು, ಜನಪದ ಸಾಹಿತ್ಯ, ಕೈಫಿಯತ್ತುಗಳನ್ನು ಆಳವಾಗಿ ಅಧ್ಯಯನ ಮಾಡಿ ವಿಶ್ಲೇಷಣಾತ್ಮಕ, ವಿಮರ್ಶಾತ್ಮಕ ಹಾಗೂ ಐತಿಹಾಸಿಕವಾಗಿ ಅಧ್ಯಯನ ಕೈಗೊಳ್ಳಲಾಗಿದೆ. ಕನ್ನಡ ಸಾಹಿತ್ಯ ಮತ್ತು ಕರ್ನಾಟಕದ ಇತಿಹಾಸಕ್ಕೆ ಇದೊಂದು ಉತ್ಕೃಷ್ಟ ಕೊಡುಗೆಯಾಗಿದೆ. ನಿರ್ಲಿಪ್ತಭಾವ, ವಸ್ತುನಿಷ್ಠ ವಿಮರ್ಶೆ, ಪ್ರಾಮಾಣಿಕ ಪರಿಶ್ರಮ, ಅಧ್ಯಯನಶೀಲತೆಗಳು ಕೃತಿಯುದ್ದಕ್ಕೂ ಗೋಚರಿಸುತ್ತವೆ. ಕುಮಾರರಾಮನ ಬಗೆಗಿರುವ ಕೃತಿಗಳಲ್ಲಿಯ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಐತಿಹಾಸಿಕ, ಸಾಹಿತ್ಯಕ ಮೌಲ್ಯಗಳ ಬಗೆಗಿನ ವಿವರಗಳನ್ನೂ ಇಲ್ಲಿ ವಿಶದೀಕರಿಸಲಾಗಿದೆ.

ಇತರ ಕೃತಿಗಳು: ತೋರಣ, ವಿಜಯದಶಮಿ, ಪರಂಪರೆ, ಓಬವ್ವ ಇವು ಕವನಸಂಕಲನಗಳು, ಕಸ್ತೂರಬಾ, ಕಲಿಕರಣ ಗದ್ಯ ಗ್ರಂಥಗಳು. ಕಲಿಕರಣ ಪಠ್ಯಪುಸ್ತಕವಾಗಿಯೂ ಪ್ರಸಿದ್ಧವಾಗಿತ್ತು.

ಇವರ ಸಾಹಿತ್ಯಸೇವೆಗೆ ಅನೇಕ ಪ್ರಶಸ್ತಿಗಳು ಲಭಿಸಿವೆ. ಕೇಣಿಸಿದ್ದಪ್ಪ ಚಿನ್ನದ ಪದಕ, ಹೊನ್ನಶೆಟ್ಟಿ ಬಹುಮಾನ, ದೇವರಾಜ ಬಹದ್ದೂರ್ ಬಹುಮಾನ, ರಾಜ್ಯೋತ್ಸವ ಸ್ವರಣ ಪದಕ, ಹರಿದಾಸ ಸೇವಾ ಪ್ರಶಸ್ತಿಗಳ ಜೊತೆಗೆ ದಾಸಸಾಹಿತ್ಯ ಧುರೀಣ ಎಂಬ ಬಿರುದಿಗೂ ಪಾತ್ರರಾಗಿದ್ದಾರೆ.

ಇವರು ೧೯೮೭ ನವೆಂಬರ್ ೧೩ ರಂದು ನಿಧನರಾದರು.

❐ ❐ ❐

ಎಲ್. ಬಸವರಾಜು

(೧೯೧೯-೨೦೧೨)

ವೀರಣ್ಣ ಎಂ.ಡಿ.

ಕನ್ನಡ ಸಾಹಿತ್ಯ ವಿದ್ವತ್‌ಲೋಕದಲ್ಲಿ ಎಲ್.ಬಿ. ಎಂದೇ ಪ್ರಸಿದ್ಧರಾದ ಎಲ್. ಬಸವರಾಜು ಅವರು ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಇಡಗೂರು ಗ್ರಾಮದಲ್ಲಿ ೦೫-೧೦-೧೯೧೯ರಂದು ಜನಿಸಿದರು. ತಂದೆ ಲಿಂಗಪ್ಪ. ತಾಯಿ ಈರಮ್ಮ. ಇವರಿಗೆ ಗಂಗಾಂಬಿಕೆ ಎಂಬ ತಂಗಿ, ಚಂದ್ರಶೇಖರ್ ಎಂಬ ಸಹೋದರ ರಿದ್ದರು. ಇಡಗೂರು ಗ್ರಾಮವು ಆಂಧ್ರಪ್ರದೇಶ ಹಾಗೂ ತಮಿಳುನಾಡಿನ ಗಡಿಯ ಲ್ಲಿದ್ದು, ಸಹಜವಾಗಿಯೇ ಎಲ್.ಬಿ. ಅವರ ಮೇಲೆ ಅಲ್ಲಿಯ ಭಾಷೆಗಳು ಪ್ರಭಾವ ಬೀರಿದುವು. ಬಾಲ್ಯದಲ್ಲಿಯೇ ತಮಿಳು, ತೆಲುಗು ಭಾಷೆಗಳನ್ನು ಕರಗತ ಮಾಡಿಕೊಂಡ ಇವರು ಎಂ.ಎ. ವ್ಯಾಸಂಗ ಮಾಡುವಾಗ ತೆಲುಗನ್ನು ಐಚ್ಛಿಕ ವಿಷಯವಾಗಿ ಆರಿಸಿಕೊಂಡಿದ್ದರು. ತಂದೆ ಲಿಂಗಪ್ಪ ಇಡಗೂರಿನ ಭೀಮೇಶ್ವರ ದೇವಸ್ಥಾನದ ಅರ್ಚಕರಾಗಿದ್ದರು. ತಾಯಿ ಈರಮ್ಮ ಕೂಲಿ ಕೆಲಸ ಮಾಡುತ್ತಿದ್ದರು. ಬಾಲ್ಯದಲ್ಲಿಯೇ ತಂದೆ ತಾಯಿ ಅಸುನೀಗಿದ್ದರಿಂದ ಆರ್ಥಿಕ ಸಂಕಷ್ಟಕ್ಕೀಡಾದರು.

ಸ್ವಗ್ರಾಮದಲ್ಲಿ ಪ್ರಾಥಮಿಕ ಶಿಕ್ಷಣ ಆರಂಭಿಸಿದ ಬಸವರಾಜು ಅವರು ತಾಯಿಯ ನಿಧನದ ತರುವಾಯ ಸೋದರಮಾವ ವೀರಪ್ಪನವರೊಂದಿಗೆ ತೆರಳಿ ಬೆಂಗಳೂರಿನ ಶಾಲೆಯೊಂದರಲ್ಲಿ ವಿದ್ಯಾಭ್ಯಾಸ ಮುಂದುವರಿಸಿದರು. ಬಳಿಕ ಸಿದ್ಧಗಂಗ ಮಠಕ್ಕೆ ಪ್ರವೇಶಾತಿ ಪಡೆದರು. ಮಠದಲ್ಲಿ ಕೇವಲ ಸಂಸ್ಕೃತ ಮತ್ತು ವೇದಪಾಠಶಾಲೆ ಮಾತ್ರ ಇದ್ದುದರಿಂದ ಹತ್ತಿರದ ಕ್ಯಾತಸಂದ್ರದಲ್ಲಿ ಸರ್ಕಾರಿ ಮಾಧ್ಯಮಿಕ ಶಾಲೆಗೆ ಸೇರಿ ೧೯೩೪ರಲ್ಲಿ ಮಾಧ್ಯಮಿಕ ಶಿಕ್ಷಣ ಪೂರೈಸಿದರು. ತುಮಕೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಪ್ರೌಢಶಿಕ್ಷಣವನ್ನು ಪೂರ್ಣಗೊಳಿಸಿ ತರುವಾಯ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಬಿ.ಎ., ಆನರ್ಸ್ ಹಾಗೂ ಎಂ.ಎ., ಪದವಿ ಪಡೆದರು.

ಮಹಾರಾಜ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಎಲ್. ಬಸವರಾಜು ಅವರಿಗೆ ತೀ.ನಂ. ಶ್ರೀಕಂಠಯ್ಯ, ಡಿ.ಎಲ್. ನರಸಿಂಹಾಚಾರ್, ಕೆ. ವೆಂಕಟರಾಮಪ್ಪ, ಕುವೆಂಪು, ಜಿ. ವೆಂಕಟಸುಬ್ಬಯ್ಯ, ಎಂ.ಎಚ್. ಕೃಷ್ಣ, ಜಿ.ಪಿ. ರಾಜರತ್ನಂ, ಎ.ಆರ್. ಕೃಷ್ಣಶಾಸ್ತ್ರಿ ಮತ್ತಿತರರು ಗುರುಗಳಾಗಿದ್ದರು.

ಕನ್ನಡದ ವಿದ್ವತ್ ಪರಂಪರೆಯಲ್ಲಿ ಪ್ರಮುಖ ವಿದ್ವಾಂಸರು, ಗ್ರಂಥ ಸಂಪಾದಕರು, ಭಾಷಾಂತರಕಾರರು, ಅಂಕಣ ಬರೆಹಗಾರರು ಹಾಗೂ ಕವಿಗಳಾದ ಎಲ್. ಬಸವರಾಜು ಅವರು ಸುಮಾರು ಎಪ್ಪತ್ತೆರಡು ಕೃತಿಗಳನ್ನು ರಚಿಸಿದ್ದಾರೆ. ೧೯೫೧ ರಲ್ಲಿ ಪ್ರಕಟವಾದ 'ಭಾಷಾಂತರ ಮತ್ತು ಭಾವಾನುವಾದ' ಎಂಬ ಕೃತಿಯು ಇವರ ಮೊದಲ ರಚನೆಯಾಗಿದೆ. 'ತೊರವೆ ರಾಮಾಯಣ ಸಂಗ್ರಹ', ಭಾಸನ 'ರಾಮಾಯಣ ನಾಟಕ ತ್ರಿವೇಣಿ' ಇವರು ಆರಂಭದಲ್ಲಿ ಸಂಪಾದಿಸಿದ ಕೃತಿಗಳು. ಸಂಸ್ಕೃತ ಕವಿ ಭಾಸನ ಯಜ್ಞಫಲ, ಪ್ರತಿಮಾ ನಾಟಕ, ಅಭಿಷೇಕ ಈ ಮೂರು ನಾಟಕಗಳನ್ನೊಳಗೊಂಡ ಅನುವಾದ ಸಂಗ್ರಹ ರೂಪವೇ ರಾಮಾಯಣ ನಾಟಕ ತ್ರಿವೇಣಿಯಾಗಿದೆ. ಭಾಸ, ಕಾಳಿದಾಸ, ಭವಭೂತಿ, ಹರ್ಷ, ಶೂದ್ರಕರ ನಾಟಕಗಳಲ್ಲಿಯ ಆಕರ್ಷಣೀಯವಾದ ಕೆಲವು ಪ್ರಮುಖ ಪ್ರಸಂಗಗಳನ್ನು 'ನಾಟಕಾಮೃತ ಬಿಂದುಗಳು' ಎಂಬ ಗ್ರಂಥರೂಪದಲ್ಲಿ ಕನ್ನಡೀಕರಿಸಿದ್ದಾರೆ. ಈ ಮುಖೇನ ಸಂಸ್ಕೃತ ಓದಲು ಬಾರದವರೂ ಸಹ ಸಂಸ್ಕೃತ ಕವಿಗಳ ನಾಟಕಗಳನ್ನು ಅಧ್ಯಯನ ಮಾಡಿ ಅರ್ಥೈಸಿ ಕೊಳ್ಳುವಂತೆ ಸಾಧ್ಯಮಾಡಿಕೊಟ್ಟಿದ್ದಾರೆ.

ಕನ್ನಡ ಸಾಹಿತ್ಯದ ಮೇರು ಕೃತಿಗಳೆಂದು ಪರಿಗಣಿಸಲ್ಪಟ್ಟ ಕನ್ನಡದ ಆದಿಕವಿ ಪಂಪನ 'ಆದಿಪುರಾಣ' ಹಾಗೂ 'ವಿಕ್ರಮಾರ್ಜುನವಿಜಯ' ಮಹಾಕಾವ್ಯಗಳನ್ನು ಶಾಸ್ತ್ರೀಯವಾಗಿ ಸಂಪಾದಿಸಿದ್ದಾರೆ. 'ಆದಿಪುರಾಣ' ಸಂಪಾದನೆಗೆ ಸಂಬಂಧಿಸಿದಂತೆ ಒಂಬತ್ತು ಸೂಕ್ಷ್ಮ ಛಾಯಾಪ್ರತಿಗಳನ್ನು ಐದು ಓಲೆಗರಿ ಪ್ರತಿಗಳನ್ನು ಪರಿಶೀಲಿಸಿದ್ದಾರೆ. ಜೊತೆಗೆ ಆದಿಪುರಾಣದ ಮೂಲ ಆಕರವಾಗಿರುವ ಜಿನಸೇನಾಚಾರ್ಯರ ಪೂರ್ವ ಪುರಾಣವನ್ನು ತೌಲನಿಕವಾಗಿ ಅವಲೋಕಿಸಲಾಗಿದೆ. ಪಂಪ ಮಹಾಕವಿಯ ಕೃತಿಗಳು ಹಳಗನ್ನಡದಲ್ಲಿರುವ ಕಾರಣ ಸಹೃದಯರನ್ನು ತಲಪುವಲ್ಲಿ ಸಫಲವಾಗಬೇಕೆಂಬ ಇಂಗಿತದಿಂದ 'ಪಂಪನ ಸರಳ ಆದಿಪುರಾಣ', 'ಸರಳ ಪಂಪಭಾರತ' ಎಂಬ ಹೆಸರಿನಲ್ಲಿ ಪ್ರತಿಯೊಂದು ಪದ್ಯವನ್ನು ಬಿಡಿಸಿ, ವ್ಯಾಖ್ಯಾನಿಸಿ ಓದಲು ಅನುವಾಗುವಂತೆ ಸರಳೀಕರಿಸಿದ್ದಾರೆ. ಅಷ್ಟೇ ಅಲ್ಲದೆ

ಈ ಕೃತಿಗಳ ಮೂಲ ರೂಪಕ್ಕೆ ಚ್ಯುತಿಬಾರದಂತೆ ಕಥಾಮೃತ ರೂಪದಲ್ಲಿ ಛಾಯಾನುವಾದ ಮಾಡಿದ್ದಾರೆ. ರನ್ನನ 'ಗದಾಯುದ್ಧ' ಕಾವ್ಯವನ್ನು ಅರ್ಥ ಮತ್ತು ಭಾವಕ್ಕೆ ತಕ್ಕಂತೆ ವಿಭಾಗಿಸಿ, ಕ್ಲಿಷ್ಟವೆನಿಸಿದೆಡೆ ಸಂಧಿ ಸಮಾಸಗಳನ್ನು ಬಿಡಿಸಿ, ಛಂದೋಬಂಧಗಳನ್ನು ಸೂಚಿಸಿ 'ಸರಳ ಗದಾಯುದ್ಧ' ಶೀರ್ಷಿಕೆಯಲ್ಲಿ ಹೊರತಂದಿದ್ದಾರೆ.

ವಚನ ಸಾಹಿತ್ಯದೆಡೆಗೂ ಆಸಕ್ತಿ ತಾಳಿದ ಎಲ್. ಬಸವರಾಜು ಅವರು ಶರಣರ ವಚನಗಳನ್ನು ಪರಿಷ್ಕರಿಸಿ, ಅರ್ಥಪೂರ್ಣವಾಗಿ ವ್ಯಾಖ್ಯಾನಿಸುವ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. 'ದೇವರ ದಾಸಿಮಯ್ಯನ ವಚನಗಳು' ಕೃತಿಯಲ್ಲಿ ದೇವರ ದಾಸಿಮಯ್ಯನ ಜೀವನ ವೃತ್ತಾಂತ ಹಾಗೂ ವೈಯಕ್ತಿಕ ಸಂಗತಿಗಳನ್ನು ಮಂಡಿಸಲು ಬಸವಣ್ಣ ಮತ್ತು ಆತನ ಸಮಕಾಲೀನ ಬರೆಹಗಾರರ ವಚನಗಳು, ಹರಿಹರ, ಪಾಲ್ಕುರಿಕೆ ಸೋಮನಾಥ, ತ್ರಿಭುವನತಾತರ ರಚನೆಗಳು, ಕೆಲವು ಪುರಾಣ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು ಪರಿಶೀಲಿಸಿದ್ದಾರೆ. ಹಲವಾರು ಓಲೆಯ ಗ್ರಂಥಗಳ ನೆರವಿನಿಂದ ದಾಸಿಮಯ್ಯನ ೧೫೦ ವಚನಗಳನ್ನು ಸಂಗ್ರಹಿಸಿ ಸಂಪಾದಿಸಿದ್ದಾರೆ. ವಚನ ಚಿಂತನ ಗ್ರಂಥದಲ್ಲಿ ದೇವರ ದಾಸಿಮಯ್ಯನ ವಚನಗಳಿಗೆ ಭಾವಾರ್ಥವನ್ನು ಟಂಕಿಸಲಾಗಿದೆ. ನಾಲ್ಕು ಹಸ್ತಪ್ರತಿಗಳನ್ನು ಬಳಸಿಕೊಂಡು 'ಬಸವಣ್ಣನವರ ಷಟ್‌ಸ್ಥಲದ ವಚನಗಳು' ಕೃತಿಯನ್ನು ಸಂಪಾದಿಸಲಾಗಿದ್ದು, ಇದರ ಲ್ಲಿರುವ ಪ್ರತಿಯೊಂದುವಚನಕ್ಕೂ 'ಸಹಚಿಂತನ'ಎಂಬ ವ್ಯಾಖ್ಯಾನ ಕೊಡಲಾಗಿದೆ. 'ಬಸವ ವಚನಾಮೃತ ಭಾಗ ೧ ಮತ್ತು ೨ ರಲ್ಲಿ ಬಸವಣ್ಣನವರ ಬಹುಮುಖ್ಯವಾದ ೨೧೬ ಆಯ್ದ ವಚನಗಳಿಗೆ ವಿಸ್ತೃತವಾದ ವ್ಯಾಖ್ಯಾನವಿದೆ.

'ಅಲ್ಲಮನ ವಚನಚಂದ್ರಿಕೆ' ೧೩೨೧ ವಚನಗಳನ್ನೊಳಗೊಂಡಿದ್ದು, ಈ ಹೊತ್ತಿಗೆಯ ಪೀಠಿಕಾ ಭಾಗದಲ್ಲಿ ವಚನ ಸಾಹಿತ್ಯದ ಪ್ರಾಚೀನತೆಯನ್ನು ವಿಶ್ಲೇಷಿಸುತ್ತಾ ಆರಂಭದ ವಚನಕಾರರ ಬರೆಹಗಳು ಕ್ರಿ.ಶ.೯-೧೦ ನೆಯ ಶತಮಾನದಲ್ಲಿಯೇ ಕಾಣಿಸಿಕೊಂಡಿರುವುದನ್ನು ಉಲ್ಲೇಖಿಸಿದ್ದಾರೆ. ಹಾಗೆಯೇ ಅಲ್ಲಮಪ್ರಭುವಿನ ವಚನಗಳ ಅಂಕಿತ ಹಾಗೂ ಮೂಲದ ಬಗ್ಗೆ ಸವಿವರವಾಗಿ ಚರ್ಚಿಸಿದ್ದಾರೆ. ಪ್ರಭುದೇವರ ಷಟ್‌ಸ್ಥಲದ ವಚನಗಳು ಕೃತಿಯಲ್ಲಿ ಪ್ರಭುದೇವರ ೬೯ಳ ವಚನಗಳಿಗೆ ಷಟ್‌ಸ್ಥಲದ ಮಾದರಿಯಲ್ಲಿ ವ್ಯಾಖ್ಯಾನ ನೀಡಿದ್ದಾರೆ. ಅಕ್ಕ ಮಹಾದೇವಿಯ

ವಚನಗಳನ್ನು ಸ್ಥೂಲ ವಾಗಿ ಪರಿಷ್ಕರಿಸಿ 'ಅಕ್ಕನ ವಚನಗಳು' ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ.

'ಶಿವದಾಸ ಗೀತಾಂಜಲಿ' ಕೃತಿಯ ಮುಖಾಂತರ ವಚನಕಾರರು ವಚನ ಗಳನ್ನು ಹಾಡಲು ಸಾಧ್ಯವಾಗುವಂತಹ ಸ್ವರ ಸಂಯೋಜನೆಯಲ್ಲಿ ರಚಿಸಿದ್ದಾರೆ ಎಂಬ ಅಂಶವನ್ನು ಮೊದಲ ಬಾರಿಗೆ ಸಂಶೋಧನೆಗೈದು ಬೆಳಕಿಗೆ ತಂದಿದ್ದಾರೆ. ಈ ಕೃತಿಯನ್ನು ಅಂದಿನ ಸಾಹಿತ್ಯ ದಿಗ್ಗಜರು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ. 'ಪರಮಾರ್ಥ' ಎಂಬ ಕೃತಿಯಲ್ಲಿ 'ಸರ್ವಜ್ಞ' ಎಂಬ ಅಂಕಿತಕ್ಕೆ ಪರ್ಯಾಯವಾಗಿ 'ಪರಮಾರ್ಥ' ಎಂಬ ಅಂಕಿತವಿರುವುದನ್ನು ಗಮನಿಸಿ ಪರಮಾರ್ಥವೆಂಬುದೇ ಸರ್ವಜ್ಞನ ಅಂಕಿತವೆಂಬ ವಿಷಯವನ್ನು ಸಾಬೀತುಪಡಿಸಿದ್ದಾರೆ. ಇದು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ವಿವಾದಾತ್ಮಕ ಕೃತಿ ಎನಿಸಿದೆ. ಅಷ್ಟೇ ಅಲ್ಲದೆ ಪ್ರಭುದೇವರ ಶೂನ್ಯ ಸಂಪಾದನೆ, ಗೂಳೂರು ಸಿದ್ಧವೀರಣ್ಣನ ಶೂನ್ಯಸಂಪಾದನೆ, ಹರಿಹರನು ಕಂಡ ಜ್ಯೋತಿರ್ಲಿಂಗದ ಮೂರು ಮುಖಗಳು, ಸರಳ ಸಿದ್ಧರಾಮ ಚರಿತೆ, ಸರಳ ಹರಿಶ್ಚಂದ್ರ ಚಾರಿತ್ರ್ಯ, ನಿಜಗುಣ ಶಿವಯೋಗಿಯ ತತ್ತ್ವದರ್ಶನ ಮುಂತಾದ ವೀರಶೈವ ಸಾಹಿತ್ಯಕ್ಕೆ ಸಂಬಂಧಿಸಿದ ಕೃತಿಗಳನ್ನು ಆಮೂಲಾಗ್ರವಾಗಿ ಶೋಧಿಸಿದ್ದಾರೆ.

ಠಾಣಾಂತರ, ಜಾಲಾರಿ, ಚಾಯೀ ಬಾಬಾ, ಡೊಂಕು ಬಾಲದ ನಾಯಕರು, ಚಿತ್ರಗುಪ್ತ ಚಂಪು, ತುಳಿಯುವ ಕಾಲಿಗೆ ಬಿದ್ದೀರ ಎಂಬ ಕವನ ಸಂಕಲನಗಳು ಇವರ ಅನುಭವದ ಮೂಸೆಯಿಂದ ಹೊರಬಂದ ಸೃಜನಶೀಲ ಸಾಹಿತ್ಯ ಕೃತಿಗಳಾಗಿವೆ. ಇವುಗಳಲ್ಲಿ ತಮ್ಮ ಅಂತರಂಗದ ದನಿಗೆ ಕಾವ್ಯರೂಪ ಲೇಪಿಸಿ ತಳಸಮುದಾಯದ ಬಗೆಗೆ ಪ್ರೀತಿ ಕಾಳಜಿ ಪ್ರಕಟಪಡಿಸುತ್ತಾ ಪ್ರಜಾಪ್ರಭುತ್ವ ವ್ಯವಸ್ಥೆ, ಸರ್ಕಾರ, ಜಾತಿವ್ಯವಸ್ಥೆ, ಮೌಢ್ಯ, ಕಂದಾಚಾರ, ಕೌಟುಂಬಿಕ ಸಂಬಂಧಗಳು ಇತ್ಯಾದಿ ವಸ್ತು ವಿಷಯಗಳ ಚಿಂತನೆಯಲ್ಲಿ ಸಮಸಮಾಜದ ಸೃಷ್ಟಿಯ ಕನಸನ್ನು ಜೀವಂತ ಗೊಳಿಸಿದ್ದಾರೆ.

ಪ್ರಜಾವಾಣಿ ಪತ್ರಿಕೆಯ 'ಬಾಳಬುತ್ತಿ', ಸುಧಾ ವಾರಪತ್ರಿಕೆಯ 'ಅರಿವಿನ ಅಂತರಾಳ' ವಿಭಾಗದಲ್ಲಿ ಎಲ್. ಬಸವರಾಜು ಅವರು ಬರೆದ ಅಂಕಣ ಬರೆಹಗಳನ್ನು 'ಕತ್ತಲೆ ರಾಕ್ಷಸರಿಗೆ ಬೆಳಕು' ಎನ್ನುವ ಸಂಪುಟದಲ್ಲಿ ಹೊರತರಲಾಗಿದೆ. ಈ ಕೃತಿಯಲ್ಲಿ ೧೭೦ ಅಂಕಣಬರೆಹಗಳಿವೆ. ದೇವನೂರು

ಮಹಾದೇವರ ಕುಸುಮಬಾಲೆ ಕಾದಂಬರಿಯನ್ನು ಲಯವಿನ್ಯಾಸಕ್ಕೆ ಒಳಗು ಮಾಡಿ ಕಾವ್ಯ ಕುಸುಮಬಾಲೆಯಾಗಿ ಪರಿವರ್ತಿಸಿದ್ದಾರೆ.

ಕನ್ನಡ ಪಂಡಿತ ಸಂಪ್ರದಾಯಕ್ಕೆ ಎಲ್. ಬಸವರಾಜು ಅವರ ಕೊಡುಗೆ ಮಹತ್ತರವಾಗಿದೆ. ಹಳಗನ್ನಡ, ನಡುಗನ್ನಡ ಕೃತಿಗಳ ಸಂಪಾದನಾ ಕಾರ್ಯದೊಂದಿಗೆ ಶಾಸ್ತ್ರ ಸಂಬಂಧಿತ ಗ್ರಂಥಗಳನ್ನು ಪರಿಶೋಧಿಸಿ ಪ್ರಕಟಿಸಿದ್ದಾರೆ. ನಾಗವರ್ಮನ ಛಂದೋಂಬುಧಿ, ಈಶ್ವರ ಕವಿಯ ಕವಿಜಿಹ್ವಾಬಂಧನ, ಗುಣಚಂದ್ರನ ಛಂದಸ್ಸಾರ, ವೀರಭದ್ರನ ನಂದಿಛಂದೋರ್ಣವ ಕೃತಿಗಳನ್ನು ಒಟ್ಟಾಗಿ ಪರಿಷ್ಕರಿಸಿ 'ಕನ್ನಡ ಛಂದಸ್ಸಂಪುಟ' ಎಂಬ ಗ್ರಂಥರೂಪದಲ್ಲಿ ಸಿದ್ಧಪಡಿಸಿದ್ದಾರೆ. ಕೇಶಿರಾಜನ ಶಬ್ದಮಣಿದರ್ಪಣವನ್ನು ಸುಮಾರು ೩೭ ಪ್ರಕಟಿತ ಮತ್ತು ಅಪ್ರಕಟಿತ ಹಸ್ತಪ್ರತಿಗಳ ಸಹಾಯದಿಂದ ಸಂಪಾದಿಸಿದ್ದು, ಪ್ರತಿಯೊಂದು ಸೂತ್ರವೃತ್ತಿಗೂ ಅರ್ಥಬದ್ಧ ವ್ಯಾಖ್ಯಾನ ಹಾಗೂ ವಿಶೇಷ ಸೂಚನೆ, ಟಿಪ್ಪಣಿ, ಪದವಿಭಜನೆ ಒದಗಿಸಿದ್ದು, ಓದುಗರಿಗೆ ಸುಲಭವಾಗಿ ಗ್ರಾಹ್ಯವಾಗುವಂತಿದೆ. ಶಿವಗಣ ಪ್ರಸಾದಿ ಮಹದೇವಯ್ಯನ ಶೂನ್ಯ ಸಂಪಾದನೆ ಒಂದು ಸಂವಾದಿ ಮಹಾಕಾವ್ಯದ ಸ್ಥಗಿತ ಲಕ್ಷಣಗಳನ್ನು ಮೀರಿ ನಿಲ್ಲುವ ಕನ್ನಡ ಸಾಹಿತ್ಯ ಸಂಸ್ಕೃತಿಯ ಹೊಸ ಮಹಾಕಾವ್ಯವೆಂಬುದನ್ನು ಮನೋಜ್ಞವಾಗಿ ನಿರೂಪಿಸಿದ್ದಾರೆ. ಅಲ್ಲದೆ ಇದನ್ನು ಅನುಪಾಲಿಸಿ ಬಂದ ಇನ್ನಿತರ ಶೂನ್ಯ ಸಂಪಾದನೆಗಳ ಇತಿಮಿತಿಗಳೇನೆಂಬುದನ್ನು ತೋರ್ಪಡಿಸಿದ್ದಾರೆ. ಇವರ ಪ್ರಾಚೀನ ಮತ್ತು ಮಧ್ಯಕಾಲೀನ ಕನ್ನಡ ಕಾವ್ಯಗಳ ಸಂಪಾದನೆ ಆ ಕಾಲದ ಸಾಹಿತ್ಯದ ಪ್ರಜ್ಞಾಪೂರ್ಣ ಕೊಡುಗೆಯನ್ನು ಸಂಶೋಧನಾ ತಳಹದಿಯಲ್ಲಿ ವಿವೇಚಿಸಲು ಸಹಕಾರಿಯಾಗಿದೆ. ಅಷ್ಟೇ ಅಲ್ಲದೆ ಹಳಗನ್ನಡ, ನಡುಗನ್ನಡ ಸಾಹಿತ್ಯ ಕೃತಿಗಳೊಡನೆ ಕವಿ-ಕಾಲ ವಿಚಾರಗಳನ್ನು ಗುಣಾತ್ಮಕವಾಗಿ ಶೋಧಿಸಿ ವ್ಯವಸ್ಥಿತವಾದ ಪುಸ್ತಿಕೆಗಳನ್ನು ಒದಗಿಸಿಕೊಟ್ಟಿರುವುದು ಇವರ ವಿದ್ವತ್ತಿಗೆ ಒಂದು ಮೆರುಗು ನೀಡಿದೆ. ಇವರು ೨೯-೦೧-೨೦೧೨ ರಂದು ನಿಧನರಾದರು.

ಕನ್ನಡ ಸಾಹಿತ್ಯದ ನಾನಾ ಕ್ಷೇತ್ರಗಳಲ್ಲಿ ಕೃಷಿ ಮಾಡಿರುವ ಎಲ್. ಬಸವರಾಜು ಅವರಿಗೆ ಹಲವಾರು ಗೌರವ ಪ್ರಶಸ್ತಿಗಳು ಸಂದಿವೆ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (೧೯೯೪), ಕರ್ನಾಟಕ ರಾಜ್ಯಸಾಹಿತ್ಯ ಅಕಾಡೆಮಿ ಪ್ರಶಸ್ತಿ (೧೯೯೭), ಚಿದಾನಂದ ಪ್ರಶಸ್ತಿ (೧೯೯೮), ಸಂ.ಶಿ.ಭೂಸನೂರಮಠ ಪ್ರತಿಷ್ಠಾನ ಪ್ರಶಸ್ತಿ (೧೯೯೯), ಪಂಪ ಪ್ರಶಸ್ತಿ (೨೦೦೦), ಚಾವುಂಡರಾಯ ಪ್ರಶಸ್ತಿ (೨೦೦೨),

ಬಸವಪುರಸ್ಕಾರ ರಾಷ್ಟ್ರೀಯ ಸಮ್ಮಾನ್ (೨೦೦೫), ರಾಷ್ಟ್ರಕವಿ ಗೋವಿಂದ ಪೈ ರಾಷ್ಟ್ರೀಯ ಪ್ರಶಸ್ತಿ (೨೦೦೮), ಬುದ್ಧಚರಿತ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಅನುವಾದ ಪುರಸ್ಕಾರ(೨೦೦೧), ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ (೨೦೦೮) ಪ್ರಶಸ್ತಿಗಳು ಲಭಿಸಿವೆ. ಶಿವದಾಸ ಗೀತಾಂಜಲಿ ಕೃತಿಗೆ ಮೈಸೂರು ವಿಶ್ವವಿದ್ಯಾಲಯ ೧೯೬೫ರಲ್ಲಿ ಡಿ.ಲಿಟ್. ಪದವಿಯನ್ನು ಸಹ ನೀಡಿ ಸನ್ಮಾನಿಸಿದೆ. ೨೦೦೯ರಲ್ಲಿ ಚಿತ್ರದುರ್ಗದಲ್ಲಿ ಜರುಗಿದ ೭೫ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುವುದು ಇವರ ಪಾಂಡಿತ್ಯಕ್ಕೆ ದೊರೆತ ಮನ್ನಣೆಯಾಗಿದೆ.

❐ ❐ ❐

ಆರ್.ಸಿ. ಹಿರೇಮಠ

(೧೯೨೦-೧೯೯೮)

ಅಕ್ಕಮಹಾದೇವಿ

ಆರ್.ಸಿ. ಹಿರೇಮಠ ಅವರದು ಕನ್ನಡ ಸಂಶೋಧನಕ್ಷೇತ್ರದಲ್ಲಿ ಮಹತ್ತ್ವದ ಹೆಸರು. ಕನ್ನಡಭಾಷೆ ಮತ್ತು ಸಾಹಿತ್ಯ ಕುರಿತಂತೆ ಅವರು ಅನೇಕ ವಿಷಯಗಳಲ್ಲಿ ತಲಸ್ಪರ್ಶಿಯಾದ ಅಧ್ಯಯನ ಮಾಡಿ ಅಮೂಲ್ಯವಾದ ಮಾಹಿತಿಗಳನ್ನು ಹಾಗೂ ಫಲಿತಗಳನ್ನು ನೀಡಿದ್ದಾರೆ. ಇವರ ಪೂರ್ಣ ಹೆಸರು ರುದ್ರಯ್ಯ ಚಂದ್ರಯ್ಯ ಹಿರೇಮಠ. ಇವರು ೧೯೨೦ರ ಜನವರಿ ೧೫ರಂದು ಗದಗ ಜಿಲ್ಲೆಯ ರೋಣ ತಾಲೂಕಿನ ಕುರುಡಗಿನಲ್ಲಿ ಜನಿಸಿದರು. ತಂದೆ ರುದ್ರಯ್ಯ, ತಾಯಿ ವೀರಮ್ಮ. ತಂದೆ ತಾಯಿಗಳಿಬ್ಬರೂ ಸುಶಿಕ್ಷಿತ, ಸುಸಂಸ್ಕೃತ ಮನೆತನಕ್ಕೆ ಸೇರಿದವರು. ಮೊದಲು ಸಾಕಷ್ಟು ಅನುಕೂಲವಂತರಾಗಿದ್ದರೂ ರುದ್ರಯ್ಯನವರು ಜನಿಸುವ ಕಾಲಕ್ಕೆ ಮನೆಯ ಆರ್ಥಿಕ ಪರಿಸ್ಥಿತಿ ತೀರಾ ಶೋಚನೀಯವಾಗಿತ್ತು. ಆದುದರಿಂದ ಬಾಲ್ಯದಲ್ಲಿ ಜೋಳಿಗೆ ಏರಿಸಬೇಕಾಯಿತು. ಬಡತನದೊಂದಿಗೆ ಎಲ್ಲಾ ಕಷ್ಟಗಳನ್ನು ಸಹಿಸಿಕೊಂಡು ಚಲದಿಂದ ಓದಿ, ಮುಂದೆ ಬಂದು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಯ ಹುದ್ದೆಯನ್ನು ಅಲಂಕರಿಸಿದರು. ಕನ್ನಡದಲ್ಲಿ ಶ್ರೇಷ್ಠಮಟ್ಟದ ಸಂಶೋಧಕರಾಗಿ ಪ್ರಸಿದ್ಧಿ ಪಡೆದರು.

ಬಾಲ್ಯದಲ್ಲಿ ಅಣ್ಣ ರಾಚಯ್ಯ, ತಮ್ಮ ರುದ್ರಯ್ಯ ಇಬ್ಬರೂ ಭಿಕ್ಷಾಟನೆ ಆರಂಭಿಸಿದರು. ಹೀಗಿದ್ದರೂ ಅಧ್ಯಯನದಲ್ಲೂ ಆಸಕ್ತಿಯನ್ನು ತಳೆದಿದ್ದ ಆರ್.ಸಿ. ಹಿರೇಮಠ ಅವರು ಗಣಿತದಲ್ಲಿ ತುಂಬಾ ಚುರುಕು ಇದ್ದರು. ಇವರ ಉತ್ಸಾಹವನ್ನು ಕಂಡ ಕೆಲವು ಉಪಾಧ್ಯಾಯರು ಇವರನ್ನು ಪ್ರೋತ್ಸಾಹಿಸಿ, ಓದಲು ಅನುಕೂಲ ಮಾಡಿಕೊಟ್ಟರು. ಶಾಲೆಯ ಒಳಗೆ ಕಲಿತದ್ದಕ್ಕಿಂತ ಹೆಚ್ಚಿನ ಜ್ಞಾನ, ಅನುಭವಗಳನ್ನು

ಇವರು ಶಾಲೆಯ ಹೊರಗೆ ಗಳಿಸಿಕೊಂಡರು. ಆ ಕಾಲದಲ್ಲಿ ಭಜನೆ, ಬಯಲಾಟ, ಗೊಂಬೆಯಾಟ, ಕಿಳ್ಳೇಕೇತರ ಆಟ ಮೊದಲಾದವು ಊರುಗಳಲ್ಲಿರುತ್ತಿದ್ದುವು. ಇದರ ಜೊತೆಗೆ ದೇವೀಪುರಾಣ, ಬಸವ ಪುರಾಣ, ಚನ್ನಬಸವ ಪುರಾಣ ಇತ್ಯಾದಿಗಳನ್ನು ಮೇಲಿಂದ ಮೇಲೆ ಕೇಳುತ್ತಿದ್ದರು, ನೋಡುತ್ತಿದ್ದರು. ಇವುಗಳಿಂದ ಧರ್ಮ, ನೀತಿ, ತತ್ವ, ಶರಣಚಿಂತನೆಗಳ ಪರಿಚಯವಾಯಿತು. ಕುರುಡಗಿಯ ಅನಂತರ ತಮ್ಮ ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿದ್ಯಾಭ್ಯಾಸವನ್ನು ಗದಗಿನಲ್ಲಿ ಮುಂದುವರಿಸಿದ ಆರ್.ಸಿ. ಹಿರೇಮಠರಿಗೆ ಕ.ಬ. ಅಂಗಡಿ ಮತ್ತು ಶಿವಪ್ಪ ಸಿದ್ಧರಾಮ ಶೆಟ್ಟರ್ ಎಂಬುವವರು ಗುರುಗಳಾಗಿದ್ದು, ಅವರ ಗರಡಿಯಲ್ಲಿ ಪಳಗಿ ಅವರ ವ್ಯಕ್ತಿತ್ವ ರೂಪು ಪಡೆದುಕೊಳ್ಳತೊಡಗಿತು. ಕನ್ನಡನಾಡು–ನುಡಿ, ಸಂಸ್ಕೃತಿಗಳ ಬಗೆಗೆ ಪ್ರೇಮ ಇವೆಲ್ಲವನ್ನು ಅವರು ಬೆಳೆಸಿಕೊಂಡರು, ೧೯೩೪ರಲ್ಲಿ ಮುಲ್ಕಿ ಪರೀಕ್ಷೆಯಲ್ಲಿ ಧಾರವಾಡ ಜಿಲ್ಲೆಗೆ ಪ್ರಥಮಸ್ಥಾನ ಪಡೆದು ಉತ್ತೀರ್ಣರಾದರು.

ಧಾರವಾಡದ ಕರ್ನಾಟಕ ಆರ್ಟ್ಸ್ ಕಾಲೇಜು, ಅನಂತರ ಬೆಳಗಾವಿಯ ಲಿಂಗರಾಜ ಕಾಲೇಜುಗಳಲ್ಲಿ ಅವರು ವ್ಯಾಸಂಗ ಮಾಡಿ ೧೯೪೩ರಲ್ಲಿ ಮುಂಬೈ ವಿಶ್ವವಿದ್ಯಾಲಯದಿಂದ ಬಿ.ಎ. ಪದವಿಯನ್ನು ಪ್ರಥಮ ದರ್ಜೆಯಲ್ಲಿ ಪಡೆದರು. ಮುಂದೆ ಲಿಂಗರಾಜ ಕಾಲೇಜಿನ ಪ್ರಥಮ ಫೆಲೋ ಆಗಿ ೧೯೪೫ರಲ್ಲಿ ಮುಂಬೈ ವಿಶ್ವವಿದ್ಯಾಲಯದಿಂದಲೇ ಪ್ರಥಮ ದರ್ಜೆಯಲ್ಲಿ ಎಂ.ಎ. ಪದವಿಯನ್ನು ಪ್ರಶಸ್ತಿಯೊಂದಿಗೆ ಪಡೆದರು. ಅಲ್ಲಿ ಎಸ್.ಸಿ. ನಂದೀಮಠ, ಕೆ.ಆರ್. ಶ್ರೀನಿವಾಸ ಅಯ್ಯಂಗಾರ್, ಶಿ.ಶಿ. ಬಸವ ನಾಳರು, ಎಸ್.ಎಸ್. ಭೂಸನೂರುಮಠ, ವಿ.ಜಿ. ಕುಲಕರ್ಣಿ ಮೊದಲಾದ ಗುರುಗಳ ಮಾರ್ಗದರ್ಶನದಲ್ಲಿ ಕನ್ನಡ, ಸಂಸ್ಕೃತ, ಇಂಗ್ಲಿಷ್ ಸಾಹಿತ್ಯದಲ್ಲಿ ಸಾಕಷ್ಟು ಪರಿಣತಿ ಪಡೆದರು. ೧೯೪೫ ಮೇ ೧೬ರಂದು ಅವರು ಬಾಗಲಕೋಟೆಯ ಬಸವೇಶ್ವರ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ವೃತ್ತಿಜೀವನ ಆರಂಭಿಸಿದರು. ೧೯೫೧ರ ತನಕ ಅಲ್ಲಿದ್ದರು. ಆ ಸಮಯದಲ್ಲಿ ಒಂದು ಕವನ ಸಂಕಲನ ಹಾಗೂ ಕೆಲವು ವಿಮರ್ಶಾಗ್ರಂಥಗಳನ್ನು ಪ್ರಕಟಿಸಿದರು. ೧೯೪೮ರಲ್ಲಿ ಬೆಳಗಾವಿಯ ತುರಮುರಿಯ ದೊಡ್ಡ ಮನೆತನದ ಶ್ರೀಮತಿ ಸುಮತಿದೇವಿಯವರನ್ನು ವಿವಾಹವಾದರು.

೧೯೫೧ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಭಾಗ ಆರಂಭವಾದಾಗ ಅಲ್ಲಿ ಪ್ರವಾಚಕರಾಗಿ ಸೇರಿಕೊಂಡರು. ೧೯೫೭ರಲ್ಲಿ ಆ ವಿಭಾಗದ

ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಆದರು. ೧೯೬೬ರಲ್ಲಿ ಕನ್ನಡ ಅಧ್ಯಯನ ಪೀಠವಾದಾಗ ಸೀನಿಯರ್ ಪ್ರೊಫೆಸರ್ ಆಗಿ ನೇಮಕಗೊಂಡರು. ಇವರ ಪರಿಶ್ರಮದ ಫಲವಾಗಿ ಪಠ್ಯಪುಸ್ತಕ ನಿರ್ದೇಶನಾಲಯ, ಬಸವಪೀಠಗಳು ಈ ವಿಭಾಗದ ಎರಡು ಭಾಗಗಳಾಗಿ ಮೂಡಿಬಂದುವು. ವಚನಸಾಹಿತ್ಯ, ದಾಸಸಾಹಿತ್ಯ, ಜೈನಸಾಹಿತ್ಯಗಳ ಅಧ್ಯಯನ ಪ್ರತ್ಯೇಕವಾಗಿ, ಸಂಶೋಧನಾತ್ಮಕವಾಗಿ ಇಲ್ಲಿ ಮುಂದುವರಿಯು ವಂತಾಯಿತು. ಇದಲ್ಲದೆ ಇವರ ಪ್ರಯತ್ನದ ಫಲವಾಗಿ ಕನ್ನಡ ಎಂ.ಎ.ತರಗತಿ ಮಾತ್ರವಲ್ಲದೆ ಜನಪದ ಸಾಹಿತ್ಯ, ಭಾಷಾಶಾಸ್ತ್ರಗಳಲ್ಲಿ ಎಂ.ಎ. ಕೋರ್ಸ್‌ಗಳು, ಬಿ.ಲಿಟ್, ಎಂ.ಲಿಟ್ ಪದವಿ ತರಗತಿಗಳು, ಭಾಷಾವಿಜ್ಞಾನ, ಭಾಷಾಂತರ, ಧರ್ಮಗಳ ತೌಲನಿಕ ಅಧ್ಯಯನ ಮುಂತಾದ ಡಿಪ್ಲೊಮಾ ತರಗತಿಗಳು ಪ್ರಾರಂಭವಾಗು ವಂತಾಯಿತು. ಹೀಗೆ ಕನ್ನಡ ಅಧ್ಯಯನಪೀಠ ಆ ವಿಶ್ವವಿದ್ಯಾಲಯದಲ್ಲಿಯೇ ಒಂದು ಮಹತ್ತ್ವದ ವಿಭಾಗವಾಗಿ ಬೆಳೆವಣಿಗೆ ಹೊಂದಲು ಆರ್.ಸಿ. ಹಿರೇಮಠರು ಶ್ರಮಿಸಿದರು.

ಶ್ರೀಮತಿ ಜಯಲಕ್ಷ್ಮಮ್ಮಣ್ಣಿ ಅವರು ೧೯೭೪ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದಾಗ ಅನಾರೋಗ್ಯ ದಿಂದ ದೀರ್ಘಾವಧಿ ರಜೆಯ ಮೇಲೆ ತೆರಳಿದಾಗ ಆರ್.ಸಿ. ಹಿರೇಮಠರನ್ನು ಪ್ರಭಾರ ಕುಲಪತಿಗಳಾಗಿ ನೇಮಿಸಲಾಯಿತು. ಅನಂತರ ಅದೇ ವಿಶ್ವವಿದ್ಯಾಲಯದ ಕುಲಪತಿಗಳಾಗಿ ಇವರು ೧೯೭೫ ರಿಂದ ೧೯೮೦ರ ತನಕ ಕಾರ್ಯನಿರ್ವಹಿಸಿದರು. ಈ ಅವಧಿಯಲ್ಲಿ ವಿಶ್ವವಿದ್ಯಾಲಯದ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಅಭಿವೃದ್ಧಿಗಳ ಕಡೆ ವಿಶೇಷ ಗಮನಕೊಟ್ಟರು. ಗುಲ್ಬರ್ಗ, ಸೊಂಡೂರು, ಕಾರವಾರಗಳಲ್ಲಿ ಸ್ನಾತಕೋತ್ತರ ಕೇಂದ್ರಗಳನ್ನು ಅಭಿವೃದ್ಧಿಗೊಳಿಸಿದ ಫಲವಾಗಿ ಎಲ್ಲಾ ಕೇಂದ್ರಗಳಲ್ಲಿಯೂ ಹೊಸ ಕಟ್ಟಡ ಪ್ರಾರಂಭವಾಗಿ ಹೊಸ ಅಧ್ಯಯನಪೀಠಗಳು ಸ್ಥಾಪನೆಯಾದುವು. ಇವರ ಕಾಲದಲ್ಲಿ ವಿಶ್ವವಿದ್ಯಾಲಯದ ರಜತಮಹೋತ್ಸವ ಜರುಗಿತು. ೫೬ ಸಮ್ಮೇಳನಗಳು ಭಾರತ ಮಟ್ಟದಲ್ಲಿ ನಡೆದು ಅಂಬೇಡ್ಕರ್ ಅಧ್ಯಯನ ಸಂಸ್ಥೆಯು ಇವರ ಅವಧಿಯಲ್ಲಿಯೇ ಸ್ಥಾಪನೆಯಾಯಿತು.

ಕುಲಪತಿಗಳಾಗಿ ನಿವೃತ್ತಿ ಪಡೆದ ಬಳಿಕ ತಿರುವನಂತಪುರದಲ್ಲಿ ಇಂಟರ್ನ್ಯಾಷನಲ್ ಸ್ಕೂಲ್ ಆಫ್ ದ್ರವಿಡಿಯನ್ ಸ್ಟಡೀಸ್ ನ್ಯಾಷನಲ್ ಫೆಲೋ ಆಗಿ ಗೌರವ ಪಡೆದರು. ಈ ನಡುವೆ ಗೋಕಾಕ್ ಚಳವಳಿಯಲ್ಲಿ ಸಕ್ರಿಯವಾಗಿ

ಪಾಲ್ಗೊಂಡ ಇವರು ಜೈಲುವಾಸವನ್ನು ಕೂಡ ಅನುಭವಿಸಿದ್ದರು. ಕನ್ನಡನಾಡು-ನುಡಿಯ ಮೇಲಣ ಉತ್ಕಟ ಅಭಿಮಾನ ಅವರಲ್ಲಿ ಬಾಲ್ಯದಿಂದಲೂ ಇತ್ತು. ಮೈಸೂರಿನಲ್ಲಿ 'ಶಂಕರೇಗೌಡರ ವಿಶೇಷ ಉಪನ್ಯಾಸ'ದಡಿಯಲ್ಲಿ ಕಾವೇರಿ-ಗೋದಾವರಿ ಆಚೆಗಿನ ಕನ್ನಡ ನಾಡನ್ನು ಕುರಿತು ಉಪನ್ಯಾಸ ನೀಡಿದ್ದರು. ಅನೇಕ ಮಹತ್ವದ ಸಮ್ಮೇಳನಗಳಲ್ಲಿ ಅಧ್ಯಕ್ಷತೆ ವಹಿಸಿ, ನಾಡು-ನುಡಿಯ ಅಭಿಮಾನ ವನ್ನು ಮೂಡಿಸಿದ್ದಾರೆ. ೧೯೯೦ರಲ್ಲಿ ಹುಬ್ಬಳ್ಳಿಯಲ್ಲಿ ಜರುಗಿದ ೫೯ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಹಿರೇಮಠರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಎಸ್.ಸಿ. ನಂದೀಮಠ ಅವರ ಮಾರ್ಗದರ್ಶನದಲ್ಲಿ ಅಧ್ಯಯನ ನಡೆಸಿ, 'Linguistic investigation of some problems in the relationship of Indo-Aryan and Dravidian Languages' ಎಂಬ ವಿಷಯದಲ್ಲಿ ಪಿಎಚ್.ಡಿ. ಪದವಿ ಗಳಿಸಿದರು. ಆಧುನಿಕ ಭಾಷಾವಿಜ್ಞಾನದಲ್ಲಿ ಪೋಸ್ಟ್ ಡಾಕ್ಟೊರೇಟ್ ತರಬೇತಿಯನ್ನು ಅಮೆರಿಕೆಯ ಬರ್ಕಲಿ ವಿಶ್ವವಿದ್ಯಾಲಯದಲ್ಲಿ ಪಡೆದರು. ೧೯೬೫ರಲ್ಲಿಯೇ ಇಂಗ್ಲೆಂಡ್ ಮತ್ತು ಅಮೆರಿಕ ಗಳಲ್ಲಿ ದ್ರಾವಿಡ ಭಾಷಾವಿಜ್ಞಾನ ಮತ್ತು ವೀರಶೈವ ತತ್ತ್ವಜ್ಞಾನ ಕುರಿತು ವಿಶೇಷ ಉಪನ್ಯಾಸಗಳನ್ನು ನೀಡಿದ್ದಾರೆ. ಇವರ ಮಾರ್ಗ ದರ್ಶನದಲ್ಲಿ ೩೯ ಸಂಶೋಧಕರು ಕವಿ, ಕಾವ್ಯ, ವಿಮರ್ಶೆ, ಕನ್ನಡ ಸಾಹಿತ್ಯ ಚರಿತ್ರೆ, ಪೌರಾಣಿಕ ಅಧ್ಯಯನ, ಭಾಷಾಶಾಸ್ತ್ರ, ಕಾವ್ಯಮೀಮಾಂಸೆ, ವೀರಶೈವ ತತ್ತ್ವಸಾಹಿತ್ಯ, ಶಾಸನ ಸಂಸ್ಕೃತಿ, ಜಾನಪದ ಸಾಹಿತ್ಯ ಮುಂತಾದ ವಿಷಯಗಳನ್ನು ಕುರಿತು ಅಧ್ಯಯನ ಮಾಡಿ ಪಿಎಚ್.ಡಿ. ಪದವಿ ಪಡೆದುಕೊಂಡಿದ್ದಾರೆ.

ಆರ್.ಸಿ. ಹಿರೇಮಠ ಅವರು ಅನೇಕ ಹಳಗನ್ನಡ, ನಡುಗನ್ನಡ ಕಾವ್ಯಗಳನ್ನು ಪರಿಷ್ಕರಿಸಿ ಸಂಪಾದಿಸಿದ್ದಾರೆ. ನೂತನ ಮತ್ತು ಪುರಾತನ ವಚನ ಕಾರರ ವಚನಗಳನ್ನು ಸಂಪಾದಿಸಿ, ಕೆಲವು ಸಂಶೋಧನಾತ್ಮಕ, ವಿಮರ್ಶಾತ್ಮಕ ಗ್ರಂಥಗಳನ್ನು ರಚಿಸಿದ್ದಾರೆ. 'ಸುಮಾಂಜಲಿ' ಮತ್ತು 'ಮೌನಸ್ಪಂದನ' ಎಂಬೆರಡು ಕವನ ಸಂಕಲನಗಳನ್ನೂ ಪ್ರಕಟಿಸಿದ್ದಾರೆ. ಹರಿಶ್ಚಂದ್ರ ನಾಟಕವನ್ನು ರಚಿಸಿದ್ದಾರೆ. ರಾಘವಾಂಕ, ಸಾಹಿತ್ಯ ಸಂಸೃಷ್ಟಿ, ಕವಿ ಪದ್ಮಣಾಂಕ ಇವು ಇವರ ವಿಮರ್ಶಾ ಕೃತಿಗಳು.

ಇವರ ಸಂಪಾದಿತ ಕೃತಿಗಳು ಹಲವು: ಕನ್ನಡ ಶಾಸನ ಸಂಪದ, ಬಸವಪುರಾಣ–೧, ಮಹಾಲಿಂಗಲೀಲೆ, ಬಸವಪುರಾಣ–೨, ಪದ್ಮರಾಜ ಪುರಾಣ, ಸೋಮನಾಥ ಚಾರಿತ್ರ್ಯ,, ಕೊಟ್ಟೂರು ಬಸವೇಶ್ವರ ಚಾರಿತ್ರ್ಯ, ಸಮರದುಂದುಭಿ, ಶ್ರೀಬಾಲಲೀಲ ಮಹಾಂತ ಶಿವಯೋಗಿಗಳ ಪುರಾಣ, ಸೋಮನಾಥಚಾರಿತ್ರ್ಯ ಸಂಗ್ರಹ, ಕವಿ–ಕಾವ್ಯ ಮಹೋನ್ನತಿ, ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ–೧, ಷಟ್‌ಸ್ಥಲ ಜ್ಞಾನಸಾರಾಮೃತ, ತ್ರಿಷಷ್ಟಿ ಪುರಾತನ ಚಾರಿತ್ರಂ, ಬಸವರಾಜವಿಜಯಂ, ರಾಜಶೇಖರವಿಳಾಸ ಸಂಗ್ರಹ, ವೀರಶೈವ ಚಿಂತಾಮಣಿ, ಮುಕ್ತಿಕಂಠಾಭರಣ, ಬಸವಪುರಾಣ(ಸಮಗ್ರ), ವಿಶೇಷಾನುಭವ ಷಟ್‌ಸ್ಥಲ, ಹರಿಹರನ ಪುರಾತನರ ರಗಳೆಗಳು, ಶೂನ್ಯಸಂಪಾದನೆ, ಗುಮ್ಮಳಾಪುರದ ಸಿದ್ಧಲಿಂಗದೇವ, ಸಕಲಪುರಾತನರ ವಚನಗಳು–೧, ಪುರಾತನ ರಗಳೆಗಳು, ಪ್ರಭುಲಿಂಗಲೀಲೆ, ಬ್ರಹ್ಮಾದ್ವೈತ ಸಿದ್ಧಾಂತ, ಷಟ್‌ಸ್ಥಲಾಭರಣ, ಮೋಹನತರಂಗಿಣಿ, ಪುರಾತನರ ಆರು ರಗಳೆಗಳು, ಜಾನಪದ ಸಾಹಿತ್ಯ ದರ್ಶನ–೧, ಕನ್ನಡ ಶಾಸನ ಸಂಪುಟ, ರಾಮಚಂದ್ರಚರಿತ ಪುರಾಣಂ, ಅಲ್ಲಮಪ್ರಭುದೇವರ ವಚನಗಳು, ಧರ್ಮದೀಪ್ತಿ, ವೀರಶೈವಾಮೃತ ಪುರಾಣಂ, ಬಸವೇಶ್ವರ ವಚನಾಮೃತ, ಶಿವದೀಪ್ತಿ, ಸಿಂಗಿರಾಜಪುರಾಣ, ಪಂಪನ ಆದಿಪುರಾಣ, ನೇಮಿನಾಥಪುರಾಣ, ಮಲ್ಲಿನಾಥ ಪುರಾಣ, ವೀರಶೈವದರ್ಶನ, ಸರ್ವಧರ್ಮ ದರ್ಶನ, ಅಮೃತಬಿಂದುಗಳು, ಕನ್ನಡಗದ್ಯ ಮುನ್ನಡೆ(೧೯೬೪), ಜ್ಯೋತಿ ಬೆಳಗುತಿದೆ, ಶೂನ್ಯಸಂಪಾದನೆ ಶಿವಗಣಪ್ರಸಾದಿ, ಮಹದೇವಯ್ಯ, ಕೈವಲ್ಯದರ್ಪಣ ಇತ್ಯಾದಿ.

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಹಮ್ಮಿಕೊಂಡಿದ್ದ ಸಮಗ್ರ ವಚನ ವಾಙ್ಮಯ ಸಂಶೋಧನ ಪರಿಷ್ಕರಣ ಮತ್ತು ಪ್ರಕಟನ ಯೋಜನೆಯಡಿ ಅವರು ಪ್ರಮುಖ ವಚನಕಾರರ ವಚನಗಳನ್ನು ಸಂಪಾದಿಸಿ ಪ್ರಕಟಿಸಿದರು. ಈ ಯೋಜನೆಯಡಿ ಇವರ ಸಂಪಾದಕತ್ವದಲ್ಲಿ ಅಖಂಡೇಶ್ವರ ವಚನಗಳು, ಚನ್ನಬಸವಣ್ಣನವರ ವಚನಗಳು, ಅಮುಗೆ ರಾಯಮ್ಮನ ಮತ್ತು ಅಕ್ಕಮ್ಮನ ವಚನಗಳು, ಬಸವಣ್ಣನವರ ವಚನಗಳು, ಇಪ್ಪತ್ತೇಳು ಶಿವಶರಣೆಯರ ವಚನಗಳು, ನೀಲಮ್ಮನ ವಚನಗಳು ಮತ್ತು ಲಿಂಗಮ್ಮನ ವಚನಗಳು, ಸಿದ್ಧರಾಮೇಶ್ವರ ವಚನಗಳು, ಮಹಾದೇವಿಯಕ್ಕನ ವಚನಗಳು, ಸಕಲ ಪುರಾತನರ ವಚನಗಳು ಮತ್ತು ಶೂನ್ಯ ಸಂಪಾದನೆಗಳು ಪರಿಷ್ಕರಣೆಗೊಂಡು ಪ್ರಸ್ತಾವನೆ,

ಶಬ್ದಕೋಶ, ವಿಶೇಷ ಪದಕೋಶ, ಪಾರಿಭಾಷಿಕ ಪದಕೋಶಗಳೊಂದಿಗೆ ಸಮರ್ಥವಾಗಿ ಪ್ರಕಟಗೊಂಡಿವೆ.

ವಚನಗಳ ಪರಿಷ್ಕರಣೆಯಲ್ಲಿ ಪುಣೆಯ ಭಂಡಾರಕರ ಪ್ರಾಚ್ಯ ಸಂಶೋಧನ ಸಂಸ್ಥೆಯಲ್ಲಿ ಪಿ.ಎಸ್. ಸುಕ್ತಂಕರ್ ಮಹಾಭಾರತ ಸಂಸ್ಕರಣೆಗಾಗಿ ಬಳಸಿದ ವಿಧಾನಗಳನ್ನು ಗಮನಿಸಲಾಗಿದೆ. ಚನ್ನಬಸವಣ್ಣನವರು ವಚನಗಳ ಕೃತಿಯನ್ನು ೮೦ ಹಸ್ತಪ್ರತಿಗಳ ಸಹಾಯದಿಂದ ಹುಡುಕಿ ತೆಗೆದು ಪ್ರತಿಯೊಂದು ವಚನಕ್ಕೂ ಆಯಾ ಪುಟದಲ್ಲಿ ಅಡಿಟಿಪ್ಪಣಿ ರೂಪದಲ್ಲಿ ಬೇರೆ ಪಾಠಗಳನ್ನು ಒದಗಿಸಿದ್ದಾರೆ. ಹಳಕಟ್ಟಿಯವರು ಸಂಪಾದಿಸಿ ಪ್ರಕಟಿಸಿದ ಚನ್ನಬಸವಣ್ಣನವರ ವಚನಗಳು ಕೇವಲ ೩೧೯ ಇದ್ದರೆ, ಆರ್.ಸಿ. ಹಿರೇಮಠರ ಸಂಪಾದಿತ ಕೃತಿಯಲ್ಲಿ ೧೫೦೩ ವಚನಗಳಿವೆ. ೨೪ ವಚನಕಾರರ ಅಂಕಿತಗಳಲ್ಲಿರುವ ಸಾಮ್ಯತೆಯನ್ನು ಇವರು ಗುರುತಿಸಿ, ಕೆಲವು ಸೂತ್ರಗಳ ಮೇಲೆ ಸಿದ್ಧರಾಮೇಶ್ವರನ ವಚನಗಳನ್ನು ನಿರ್ಧರಿಸುವ ಪ್ರಯತ್ನವನ್ನು ಮಾಡಿದ್ದಾರೆ. ಶಿವಗಣಪ್ರಸಾದಿ ಮಹಾದೇವಯ್ಯಗಳ ಶೂನ್ಯಸಂಪಾದನೆ ಹಾಗೂ ಗುಮ್ಮಳಾಪುರದ ಸಿದ್ಧವೀರಣಾಚಾರ್ಯರ ಶೂನ್ಯ ಸಂಪಾದನೆಗಳಲ್ಲಿ ಉಪಲಬ್ಧವಾದವುಗಳ ತೌಲನಿಕ ಪಟ್ಟಿಕೆಯನ್ನು ಅಳವಡಿಸಿರುವುದು ಅಧ್ಯಯನ ಕಾರರಿಗೆ ಉಪಯುಕ್ತವಾಗಿದೆ. ಷಟ್‌ಸ್ಥಲ ಗ್ರಂಥವನ್ನು ಸಂಪಾದಿಸಿ ಪ್ರಕಟಿಸುವ ಮೊದಲು ಸಿದ್ಧಲಿಂಗ ಪರಂಪರೆಯನ್ನು ಕುರಿತು ಇವರು ಆಳವಾಗಿ ಅಧ್ಯಯನ ಮಾಡಿದ್ದಾರೆ. ಶೂನ್ಯಸಂಪಾದನೆಗಳ ಹಾಗೆ ಮುಕ್ತಿ ಕಂಠಾಭರಣ ಸಂವಾದ ರೂಪದಲ್ಲಿದೆ. ಹೀಗೆ ವಚನ ಸಾಹಿತ್ಯವನ್ನು ಶಾಸ್ತ್ರೀಯವಾಗಿ ಪರಿಷ್ಕರಿಸಿ ಸಾಮಾಜಿಕ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ಅವುಗಳ ಮಹತ್ವವನ್ನು ತಿಳಿಸಿದ್ದಾರೆ.

ಆರ್.ಸಿ. ಹಿರೇಮಠರು ಕನ್ನಡಕಾವ್ಯ ಹಾಗೂ ವಚನಗಳ ಸಂಪಾದನೆ ಯನ್ನಲ್ಲದೆ ಭಾಷಾವಿಜ್ಞಾನ, ವೀರಶೈವ ಹಾಗೂ ಬೌದ್ಧಧರ್ಮಗಳನ್ನು ಕುರಿತಂತೆ ಆಳವಾದ ಸಂಶೋಧನೆಯನ್ನು ಮಾಡಿ ಕೆಲವು ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಇವರ ಪಿಎಚ್.ಡಿ. ಮಹಾಪ್ರಬಂಧದಲ್ಲಿ ದ್ರಾವಿಡ ಮತ್ತು ಆರ್ಯಭಾಷೆಗಳ ತೌಲನಿಕ ಅಧ್ಯಯನವಿದೆ. ದ್ರಾವಿಡ–ಆರ್ಯ ಭಾಷೆಗಳ ಇತಿಹಾಸ ದೊಂದಿಗೆ ಸ್ವರ, ವ್ಯಂಜನ, ನಾಮ, ಸರ್ವನಾಮ, ಸಂಖ್ಯಾವಾಚಕಗಳು, ಸಂಧಿ, ಸಮಾಸಗಳು, ಲಿಂಗ, ವಚನಗಳು, ವಿಭಕ್ತಿ ಪ್ರತ್ಯಯಗಳು, ಕ್ರಿಯಾಪ್ರಕೃತಿ–ಪ್ರತ್ಯಯಗಳು, ಪ್ರಯೋಗ,

ವ್ಯಾಕರಣ–ಹೀಗೆ ಭಾಷಾ ರಚನೆಯ ಪ್ರಮುಖ ಅಂಶಗಳನ್ನು ಕೂಲಂಕಷವಾಗಿ ಹೋಲಿಸಲಾಗಿದೆ. ಕಾಲ್ಡ್ವೆಲ್, ಕಿಟೆಲ್ ಮುಂತಾದವರು ಸಂಸ್ಕೃತದಲ್ಲಿ ಬಳಕೆಯಲ್ಲಿರುವ ಕೆಲವು ಶಬ್ದಗಳು ದ್ರಾವಿಡ ಮೂಲದ್ದೆಂದು ತೋರಿಸಿಕೊಟ್ಟಿದ್ದರ ಜೊತೆಗೆ ಇನ್ನೂ ಕೆಲವು ಶಬ್ದಗಳನ್ನು ಇವರು ಪತ್ತೆಹಚ್ಚಿದ್ದಾರೆ. ವಿಶೇಷವಾಗಿ ದ್ರಾವಿಡ ಭಾಷೆಗಳನ್ನು ಕುರಿತು ಮಂಡಿತವಾದ ಕೆಲವು ವಿಚಾರಗಳನ್ನು ವಿಮರ್ಶಿಸುವುದರ ಜತೆಗೆ ಕನ್ನಡದಲ್ಲಿ ಚ, ಜ ಗಳ ಉಚ್ಚಾರದ ವೈಶಿಷ್ಟ್ಯವನ್ನು ಕಾಲ್ಡ್ವೆಲ್ ಸೂಚಿಸಿದ್ದರೂ ಆರ್.ಸಿ.ಹಿರೇಮಠರು ಅದನ್ನು ಮತ್ತಷ್ಟು ಖಚಿತಗೊಳಿಸಿದರು.

The structure of Kannada ಗ್ರಂಥ ಇವರು ರಾಕ್ಫೆಲರ್ ಫೌಂಡೇಷನ್‌ನ ಫೆಲೋಶಿಪ್ ಪಡೆದು ಅಮೆರಿಕಾಗೆ ಹೋದಾಗ ರಚಿಸಿದ್ದು. ಇದರಲ್ಲಿ ಧ್ವನಿಮಾ, ಆಕೃತಿಮಾ ಮತ್ತು ವಾಕ್ಯರಚನೆಗಳೆಂಬ ಮೂರು ಹಂತಗಳಲ್ಲಿ ಧಾರವಾಡ (ಬ್ರಾಹ್ಮಣೇತರ) ಕನ್ನಡದ ವರ್ಣನಾತ್ಮಕ ವಿಶ್ಲೇಷಣೆಯನ್ನು ಮಾಡಿದ್ದಾರೆ. ವಾಕ್ಯರಚನಾ ಘಟ್ಟದಲ್ಲಿ ಪ್ರಧಾನ ಮತ್ತು ಗೌಣ ವಾಕ್ಯರಚನೆಗಳು, ಅವುಗಳ ಸ್ವರೂಪ, ಅದರಂತೆ ಸರಳ, ಮಿಶ್ರ ಮತ್ತು ಸಂಕೀರ್ಣ ವಾಕ್ಯರಚನೆಗಳನ್ನು ಉದಾಹರಣೆ ಸಹಿತ ಪ್ರಸ್ತುತಪಡಿಸಿದ್ದಾರೆ. ಹೀಗೆ ಈ ಕೃತಿಯಲ್ಲಿ ಧಾರವಾಡ ಕನ್ನಡದ ಅನೇಕ ವಿಶಿಷ್ಟಾಂಶಗಳು ಮೊದಲ ಬಾರಿಗೆ ವೈಜ್ಞಾನಿಕವಾಗಿ ವಿಶ್ಲೇಷಣೆಗೆ ಒಳಗಾಗಿವೆ.

ಭಾಷಾವಿಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಇವರು 'The genesis and growth of Dravidian' ಎಂಬ ಗ್ರಂಥವನ್ನು ಕೊಡುಗೆಯಾಗಿ ನೀಡಿದ್ದಾರೆ. ೧೯೮೦–೮೧ರಲ್ಲಿ ತಿರುವನಂತಪುರದಲ್ಲಿದ್ದಾಗ ನ್ಯಾಷನಲ್ ಫೆಲೋಶಿಪ್ ಅಡಿಯಲ್ಲಿ ಕೈಗೊಂಡ ಸಂಶೋಧನೆಯ ಫಲವಾಗಿ ಹೊರಬಂದ ಕೃತಿ ಇದು. ಇದರಲ್ಲಿ ಐದು ಭಾಗಗಳಿದ್ದು, ಮೊದಲನೆಯದರಲ್ಲಿ ದ್ರಾವಿಡಶಬ್ದ ವಿವೇಚನೆ, ದ್ರಾವಿಡ ಭಾಷೆಗಳು, ಅವುಗಳ ಒಳಗುಂಪುಗಳು, ದ್ರಾವಿಡ ಜನಾಂಗ, ಭಾಷೆ ಮತ್ತು ಅವುಗಳ ಸಂಬಂಧ ಇತ್ಯಾದಿಗಳ ವಿವೇಚನೆ ಇದೆ. ಭಾಗ ಎರಡರಲ್ಲಿ ಸಿಂಧೂ ಸಂಸ್ಕೃತಿ ಮತ್ತು ದ್ರಾವಿಡರು, ಸಿಂಧೂ ಸಂಸ್ಕೃತಿಯ ಅವನತಿ, ದಾಸ ಮತ್ತು ದಸ್ಯುಗಳು ಮುಂತಾದ ವಿಷಯಗಳನ್ನು ಚರ್ಚಿಸಲಾಗಿದೆ. ಭಾಗ ಮೂರರಲ್ಲಿ ಮೆಸಪೊಟೋಮಿಯಾದಲ್ಲಿಯ ನಾಗರಿಕತೆ, ಸಿಂಧುಕೊಳ್ಳದ ಸಂಸ್ಕೃತಿಯೊಂದಿಗೆ ಪ್ರಾಚೀನ ಜಗತ್ತಿನ ಸಂಬಂಧಗಳು ಹಾಗೂ ಅಂದಿನ ಸಮಕಾಲೀನ ಸಂಸ್ಕೃತಿಗಳ ತೌಲನಿಕ ಅಧ್ಯಯನವಿದೆ. ನಾಲ್ಕನೇ ಭಾಗದಲ್ಲಿ ಪೂರ್ವ ಮತ್ತು ಪಶ್ಚಿಮಗಳಲ್ಲಿ ದ್ರಾವಿಡಭಾಷಾ

ಸಂಬಂಧಗಳು, ಸುಮೇರಿಯನ್ ಭಾಷೆಯೊಂದಿಗೆ ದ್ರಾವಿಡಭಾಷಾ ಸಾಮ್ಯತೆ ಮತ್ತು ದ್ರಾವಿಡ ಮೂಲದ ಬಗ್ಗೆ ವಿಶೇಷವಾಗಿ ಚರ್ಚಿಸಲಾಗಿದೆ. ಕೊನೆಯ ಹಾಗೂ ಐದನೆಯ ಭಾಗದಲ್ಲಿ ಭಾರತದಲ್ಲಿ ದ್ರಾವಿಡರು ಹಾಗೂ ಆರ್ಯರು ದ್ವಿಭಾಷಿಕತೆ, ಆರ್ಯ–ದ್ರಾವಿಡ ಸಮನ್ವಯದ ಫಲವಾಗಿ ಮೂಡಿಬಂದ ಸಂಸ್ಕೃತಿ ಮುಂತಾದ ವಿಷಯಗಳನ್ನು ವಿವೇಚಿಸಲಾಗಿದೆ. ಸಂಸ್ಕೃತಿಗೂ ಭಾಷೆಗೂ ಅವಿನಾಭಾವ ಸಂಬಂಧವಿರುವುದರಿಂದ ದ್ರಾವಿಡ ಸಂಸ್ಕೃತಿ ಕುರಿತ ವಿವೇಚನೆ ಇಲ್ಲಿ ಪ್ರಸ್ತುತವೇ ಆಗಿದೆ. ದ್ರಾವಿಡ ಭಾಷೆಗಳ ಮೇಲೆ ಅಧ್ಯಯನ ಮಾಡುವವರಿಗೆ ಇದೊಂದು ಪ್ರಮುಖ ಆಕರವಾಗಬಲ್ಲದು.

'ಮಹಾಯಾತ್ರೆ' ಎಂಬುದನ್ನು ಆರ್.ಸಿ. ಹಿರೇಮಠರು ಅಮೆರಿಕದಲ್ಲಿದ್ದಾಗ ವೀರಶೈವ ಧರ್ಮವನ್ನು ಕುರಿತಂತೆ ರಚಿಸಿದ್ದಾರೆ. ಇದರ ರಚನೆಗೆ ಕನ್ನಡ, ಸಂಸ್ಕೃತ, ತೆಲುಗು ಮುಂತಾದ ಭಾಷೆಗಳಲ್ಲಿರುವ ಹಲವು ಸಾಹಿತ್ಯಕ ಹಾಗೂ ಧಾರ್ಮಿಕ ಗ್ರಂಥಗಳನ್ನು ವ್ಯಾಪಕವಾಗಿ ಅಧ್ಯಯನ ಮಾಡಿದ್ದಾರೆ. ಈ ಕೃತಿಯು ಭಾರತೀಯ ದರ್ಶನಗಳು, ಶಿವಾಗಮಗಳು, ಶೈವಧರ್ಮದ ಸಿದ್ಧಾಂತಶಿಖಾಮಣಿ, ವಚನ ವಾಙ್ಮಯ, ಮಹಾಯಾತ್ರೆಯ ಪ್ರವೃತ್ತಿ ಮತ್ತು ಮಹಾಯಾತ್ರೆ ಎಂಬ ಆರು 'ಅಲೆ'ಗಳಲ್ಲಿ ಮೂಡಿಬಂದಿದೆ. ವೀರಶೈವದ ಪ್ರಾಚೀನತೆಯನ್ನು ಇಲ್ಲಿ ಕ್ರಿಸ್ತಪೂರ್ವಕ್ಕೆ ಕೊಂಡೊ ಯ್ಯುತ್ತಾರೆ. ಶಿವಾಗಮಗಳ ಕಾಲದಿಂದ ಬಂದ ಪಂಚಾಚಾರ್ಯ ಪ್ರಣೀತ ವೀರಶೈವವನ್ನು ಬಸವಾನುಯಾಯಿಗಳು ಒಪ್ಪಬೇಕು ಎಂಬುದು ಆರ್.ಸಿ. ಹಿರೇಮಠರ ಇಂಗಿತ. ಇವರ ಪ್ರಕಾರ ವೀರಶೈವರಿಗೆ ಆರು ಸ್ಥಳಗಳು, ಆರು ಪೀಠಗಳು, ನೂರೊಂದು ನೆಲೆಗಳು.

Budhism in Karnataka ಕೃತಿಯಲ್ಲಿ ಬೌದ್ಧಧರ್ಮದ ಸ್ವರೂಪ, ಕರ್ನಾಟಕದಲ್ಲಿ ಅದರ ಉಗಮ, ಪ್ರಾಚೀನ, ಮಧ್ಯಕಾಲೀನ ಹಾಗೂ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಬೌದ್ಧ ಧರ್ಮ–ಈ ಕುರಿತ ವಿವೇಚನೆಯಿದೆ. ಅಶೋಕನಿಗಿಂತ ಹಿಂದೆಯೇ ಬೌದ್ಧಧರ್ಮ ಕರ್ನಾಟಕಕ್ಕೆ ಬಂದಿರಬೇಕೆಂಬುದು ಇವರ ಅನಿಸಿಕೆ.

ಹೀಗೆ ಆರ್.ಸಿ.ಹಿರೇಮಠರು ಕಾವ್ಯ ಹಾಗೂ ವಚನಗಳ ಸಂಪಾದನೆಗೆ ಅತ್ಯುತ್ತಮ ಮಾದರಿಗಳನ್ನು ರೂಪಿಸಿಕೊಟ್ಟಿದ್ದಾರೆ. ಇವರು ೧೯೯೮ ನವಂಬರ್ ೩ರಂದು ನಿಧನರಾದರು.

❐ ❐ ❐

ಟಿ. ಕೇಶವ ಭಟ್ಟ

(೧೯೨೦–೨೦೦೫)

ಸುಂದರ ಕೇನಾಜೆ

ಕನ್ನಡದ ವಿದ್ವತ್ ಪರಂಪರೆಗೆ ಕರ್ನಾಟಕದ ದಕ್ಷಿಣ ಕರಾವಳಿಯ ಕೊಡುಗೆ ಸಣ್ಣದೇನಲ್ಲ. ಮೂಲತಃ ಈ ಕರಾವಳಿ ಭಾಷಿಕ ವೈವಿಧ್ಯವಿರುವ ಪ್ರದೇಶ. ಬಹಳ ಕಾಲದಿಂದಲೂ ಇಲ್ಲಿ ಕನ್ನಡಕ್ಕಿಂತ ಅನ್ಯ ಭಾಷೆಗಳನ್ನು ಬಳಸುವವರ ಸಂಖ್ಯೆಯೇ ಹೆಚ್ಚು. ಹಾಗಾಗಿ ಕರಾವಳಿ ಕರ್ನಾಟಕದ ಬಹುತೇಕರ ಮನೆ ಭಾಷೆ ಕನ್ನಡವಲ್ಲ. ಹಾಗೆಂದು ಕನ್ನಡ ಕಲಿಕಾ ಭಾಷೆಯಾಗಿ ಬಹಳ ಪೂರ್ವದಿಂದಲೇ ಜಾರಿ ಯಲ್ಲಿದ್ದದ್ದನ್ನು ಅಲ್ಲಗಳೆಯುವಂತೆಯೂ ಇಲ್ಲ. ಕರಾವಳಿ ಕರ್ನಾಟಕದಲ್ಲೂ ಅನೇಕ ವೈಯಾಕರಣಿಗಳು, ಶಾಸ್ತ್ರಜ್ಞರು, ವಿದ್ವಾಂಸರು, ಗಮಕಿಗಳು, ಭಾಗವತರು ಹುಟ್ಟಿ ಕೊಂಡಿದ್ದಾರೆ. ಕನ್ನಡ ಭಾಷೆಯನ್ನು ಶಾಸ್ತ್ರೀಯವಾಗಿ ಉಳಿಸಿ ಬೆಳೆಸುವಲ್ಲಿ ಇವರ ಪಾತ್ರ ದೊಡ್ಡದು. ಹೀಗೆ ಕನ್ನಡ ವಿದ್ವತ್ಪರಂಪರೆಗೆ ಕೊಡುಗೆ ನೀಡಿದ ಕರಾವಳಿಯ ಬಹುಮುಖ್ಯ ವಿದ್ವಾಂಸರಲ್ಲಿ ಟಿ. ಕೇಶವ ಭಟ್ಟರು ಪ್ರಾತಃಸ್ಮರಣೀಯರು.

ಮೂಲತಃ ಕಾಸರಗೋಡು ಜಿಲ್ಲೆಯ (ಇಂದು ಕೇರಳ ರಾಜ್ಯ) ಬಾಯಾರು ಗ್ರಾಮದ ತಾಳ್ತಜೆಯವರಾದ ಕೇಶವ ಭಟ್ಟರು ತಮ್ಮ ಕಾರ್ಯಕ್ಷೇತ್ರದ ನೆಲೆ ಕಂಡುಕೊಂಡದ್ದು ಬೆಂಗಳೂರಿನಲ್ಲಿ. ಅಧ್ಯಾಪನ, ಸಂಶೋಧನೆ, ಕೃತಿರಚನೆಯಲ್ಲಿ ತಮ್ಮ ಬದುಕಿನ ಬಹುಭಾಗವನ್ನು ಅಲ್ಲೇ ಕಳೆದವರು. ಬಾಲ್ಯ ಮತ್ತು ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣವನ್ನು ಪೆರ್ವಡಿ ಮತ್ತು ಕಾಸರಗೋಡು ಬೋರ್ಡ್ ಹೈಸ್ಕೂಲ್ ನಲ್ಲಿ ಪಡೆದರೂ ಕೃಷಿ ಇವರ ಅತ್ಯಾಪ್ತ ಕ್ಷೇತ್ರವೂ ಆಗಿತ್ತು. ಹಾಗೆ ನೋಡಿದರೆ ಕೇಶವ ಭಟ್ಟರ ನಿಯಮಿತ ಶಿಕ್ಷಣವೇ ಎಂಟನೇ ತರಗತಿಯವರೆಗಿನದ್ದು, ಮತ್ತೇನಿದ್ದರೂ ದೂರ ಶಿಕ್ಷಣ ಅಥವಾ ಸ್ವಾಧ್ಯಾಯ ಶಿಕ್ಷಣ. ಎಂಟನೇ ತರಗತಿ ಮುಗಿಯುತ್ತಿದ್ದಂತೆ ತಮ್ಮ ತಂದೆಯವರಾದ ಗೋವಿಂದ ಭಟ್ಟರ ಪಿತ್ರಾರ್ಜಿತ

ಆಸ್ತಿಯಲ್ಲಿ ಕೃಷಿ ಕಾರ್ಯದಲ್ಲಿ ತೊಡಗಿಕೊಂಡಿದ್ದರು. ಅಡಕೆ ಕೃಷಿಯಲ್ಲಿ ಓರ್ವ ಸಾಮಾನ್ಯ ಕೂಲಿಯಾಳುವಿನಂತೆ ಕೆಲಸವನ್ನೂ ಮಾಡಿ, ಅಡಕೆ ಮರ ಹತ್ತುವ, ಅದಕ್ಕೆ ನೀರು ಬಿಡುವ, ಗೊಬ್ಬರ ಹಾಕುವ ಹೀಗೆ ಅದಕ್ಕೆ ಸಂಬಂಧಪಟ್ಟ ಏನೆಲ್ಲಾ ಕೆಲಸಗಳಿವೆಯೋ ಎಲ್ಲವನ್ನೂ ಕರಗತ ಮಾಡಿಕೊಂಡಿದ್ದರು. ಬಾಲ್ಯದ ಕಲಿಕೆಯ ಜತೆಗೆ ಅಮ್ಮ ಸಾವಿತ್ರಿ ಯಾನೆ ಸಾಂತಮ್ಮನವರ ಬಾಯಿಗೆ ಬರುತ್ತಿದ್ದ ಚರಿತ್ರೆ, ಕಲ್ಯಾಣ, ಹಾಡುಗಳು, ಕಥೆಗಳಿಗೂ ಕಿವಿಯಾಗಿದ್ದರು. ಐವರು ಒಡಹುಟ್ಟಿದವರ ಮಧ್ಯೆ ಕಿರಿಯವರಾಗಿ ಬೆಳೆದ ಕೇಶವ ಭಟ್ಟರು ಕಲೆ ಮತ್ತು ಸಾಹಿತ್ಯದ ಪಾರಂಪರಿಕ ತುಂಬು ಮನೆಯ ಆಸರೆಯಲ್ಲೂ ಇದ್ದವರು. ಯಕ್ಷಗಾನ ಈ ಮನೆತನದ ಪಾರಂಪರಿಕ ಕಲಾರಾಧನೆ ಯಾದರೆ, ಹವ್ಯಕ ಭಾಷೆ ಇವರ ತಾಯಿ ಭಾಷೆಯಾಗಿತ್ತು. ಬಾಲ್ಯದಲ್ಲೇ ಯಕ್ಷಗಾನ ಬಯಲಾಟ ಮತ್ತು ತಾಳ ಮದ್ದಳೆಯನ್ನು ಆಸ್ವಾದಿಸುತ್ತಾ ಅದರ ಹಿಮ್ಮೇಳ ಮುಮ್ಮೇಳಗಳ ನಾನಾ ಪ್ರಕಾರಗಳಲ್ಲೂ ತೊಡಗಿಸಿಕೊಳ್ಳುತ್ತಾ ಬೆಳೆದವರು. ಭಾಗವತಿಕೆ, ಚಂಡೆ, ಮದ್ದಳೆ ವಾದನವಲ್ಲದೇ ಅರ್ಥಗಾರಿಕೆಯಲ್ಲೂ ತೊಡಗಿಸಿಕೊಂಡಿದ್ದರು. ತನ್ನ ಈ ಹವ್ಯಾಸಿ ವೃತ್ತಿ ಕೇವಲ ತನ್ನ ಆಸ್ವಾದನೆಗೆ ಮಾತ್ರ ಸೀಮಿತವಾಗಿರದೇ ತೆಂಕಿನ ಅದ್ವಿತೀಯ ಚಂಡೆ ಮದ್ದಳೆವಾದಕರ ಸೃಷ್ಟಿಗೂ ಕಾರಣವಾಗಿ ಕಲೆಗಳಲ್ಲಿ ಅವರಿಗಿದ್ದ ಆಸಕ್ತಿಗೆ ನಿದರ್ಶನವಾಯಿತು.

ಕೇಶವ ಭಟ್ಟರು ಲೋವರ್ ಗ್ರೇಡ್(5ನೇತರಗತಿ) ಮುಗಿಸಿ ತಮ್ಮ ಮನೆಯ ಸಮೀಪದ ಪೆರೋಡಿ ಶಾಲೆಯಲ್ಲಿ ಅಧ್ಯಾಪಕರಾಗಿ ಸೇರಿಕೊಂಡರು. ಅನಂತರ ಮದ್ರಾಸ್ ವಿಶ್ವವಿದ್ಯಾಲಯದಿಂದ ವಿದ್ವಾನ್ ಪದವಿ ಪಡೆದು ಆ ಕಾಲದಲ್ಲಿ ಬಹುದೊಡ್ಡ ಸಾಧನೆಯನ್ನೇ ಮಾಡಿದರು. ಜತೆಗೆ ಹೈಯರ್ ಗ್ರೇಡ್ ತರಬೇತಿಗೂ ಸೇರಿಕೊಂಡರು. ಅದರೊಂದಿಗೆ ಕಾಸರಗೋಡು ಜಿಲ್ಲೆಯ ಪೆರ್ಲ ಸತ್ಯನಾರಾಯಣ ಶಾಲೆಯಲ್ಲಿ ಕನ್ನಡ ಪಂಡಿತರಾಗಿಯೂ ನಿಯುಕ್ತಿಗೊಂಡರು. ಅನಂತರ ಅದನ್ನು ಬಿಟ್ಟು ಕೊಡಗಿನ ಹಾತೂರು ಮತ್ತು ಮಡಿಕೇರಿ ಪ್ರೌಢಶಾಲೆಯಲ್ಲಿ ಕನ್ನಡ ಅಧ್ಯಾಪಕರಾಗಿ ಒಂದಷ್ಟು ಕಾಲ ದುಡಿದರು. ಮುಂದೆ ಖಾಸಗಿಯಾಗಿ ಪರೀಕ್ಷೆ ಬರೆಯುತ್ತಾ ಬಿ.ಓ.ಎಲ್ ಮತ್ತು ಎಂ.ಎ. ಪದವಿ ಪೂರೈಸಿದರು. ಮೈಸೂರಿನ ಶಿಕ್ಷಕ ತರಬೇತಿ ಕಾಲೇಜು, ಬಳಿಕ ಬೆಂಗಳೂರಿನ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕನ್ನಡ ಉಪನ್ಯಾಸಕರಾಗಿ ಸೇವೆಸಲ್ಲಿಸಿದರು. ಅಲ್ಲಿಂದ ನಿವೃತ್ತಿಯಾದ ಅನಂತರ ಯು.ಜಿ.ಸಿ ನೆರವಿನ ಉನ್ನತ ಸಂಶೋಧನೆಗಳನ್ನು ಕೈಗೆತ್ತಿಕೊಂಡರು. ಮೂವತ್ತೆಂಟು ವರ್ಷಗಳ

ಉದ್ಯೋಗದ ಹರಹಿನಲ್ಲಿ ಪ್ರಾಥಮಿಕ ಹಂತದಿಂದ ವಿಶ್ವವಿದ್ಯಾಲಯದವರೆಗಿನ ಶ್ರೇಣಿಯನ್ನು ಪೂರೈಸಿದ್ದು ಹಾಗೂ ಬಹುತೇಕ ಎಲ್ಲ ಉನ್ನತ ಶಿಕ್ಷಣಗಳನ್ನು ಖಾಸಗಿಯಾಗಿ ಪಡೆದದ್ದು ಸಾಧನೆಯ ಸಾಧ್ಯತೆಗೆ ಸಾಕ್ಷಿಯಾಗಿದೆ. ಆದರೆ ತಾನು ಇಷ್ಟಪಟ್ಟ ವಿಷಯ ವೊಂದನ್ನು(ದಕ್ಷಿಣ ಕನ್ನಡದ ಜನಪದ ಗೀತೆಗಳು) ಅಧ್ಯಯನ ನಡೆಸಿ ಮಹಾಪ್ರಬಂಧವನ್ನು ಸಲ್ಲಿಸಿದರೂ ಬಾಹ್ಯ ಪರೀಕ್ಷೆಯಲ್ಲಿ ಎತ್ತಿದ ಆಕ್ಷೇಪ ಗಳಿಂದ ಇವರಿಗೆ ಪಿಎಚ್.ಡಿ. ಪದವಿ ದೊರಕದೇ ಹೋಯಿತು. ಈ ನೋವು ಭಟ್ಟರಲ್ಲಿ ಕೊನೆಯವರೆಗೂ ಉಳಿದಿತ್ತು. ಆದರೆ ಅವರ ಸಾಧನೆ ಪದವಿಗಳಿಗೂ ಮೀರಿದಂಥದು.

ಕೇಶವ ಭಟ್ಟರು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಮೂಲ್ಯವಾದುದು. ಅದರಲ್ಲೂ ಶಾಸ್ತ್ರೀಯ ವಿಚಾರಗಳಲ್ಲಿ ಭಟ್ಟರಿಗಿದ್ದ ಜ್ಞಾನ, ಆಸಕ್ತಿ ಬೆರಗುಗೊಳಿಸುವಂಥದ್ದು. ಐವತ್ತಕ್ಕೂ ಹೆಚ್ಚಿನ ಸಂಖ್ಯೆಯ ಕೃತಿ ರಚನೆ ಮಾಡಿರುವ ಕೇಶವ ಭಟ್ಟರು ಸ್ವತಂತ್ರ, ಸಂಪಾದಿತ ಮತ್ತು ಪಠ್ಯಪುಸ್ತಕ ಎಂಬ ಮೂರು ವಿಭಾಗಕ್ಕೂ ಸೇರುವ ಕೃತಿಗಳನ್ನೂ ರಚಿಸಿದ್ದರು. ಕಾವ್ಯ, ಬಿಡಿ ಕವಿತೆಗಳು, ವಿಮರ್ಶೆ, ಯಕ್ಷಗಾನ ಸಂಬಂಧ ಕೃತಿಗಳು ಸ್ವತಂತ್ರ ರಚನೆಗಳಾದರೆ, ಪ್ರಾಚೀನ ಕಾವ್ಯ ಅರ್ಥ ವಿವರ, ಶಬ್ದಕೋಶ, ಕಾವ್ಯ ಸಾರಾಂಶ, ವ್ಯಾಕರಣ ಇತ್ಯಾದಿಗಳು ಸಂಪಾದಿತ ವಿಭಾಗದ ಕೃತಿಗಳು. ಪಠ್ಯಪುಸ್ತಕಗಳ ಸಾಲಿನಲ್ಲಿ ಮತ್ತೆ ವ್ಯಾಕರಣ, ಛಂದಸ್ಸು, ಗಮಕ ಇತ್ಯಾದಿಗಳು ಸೇರಿವೆ.

ಇವರು ಬರೆದ 'ಸತ್ತ್ವಾಲೋಕನಂ' ಚಂಪೂಕಾವ್ಯದ ಕೃತಿಗೆ ಕರ್ನಾಟಕ ರಾಜ್ಯ ಸರಕಾರ ಪ್ರಶಸ್ತಿ ನೀಡಿದೆ. ಆಧುನಿಕ ಕಾವ್ಯವಾದರೂ ವ್ಯಾಕರಣ, ಛಂದಸ್ಸನ್ನು ಉಲ್ಲಂಘಿಸದೇ ರಚಿಸಿರುವ ಹಳಗನ್ನಡದ ಗದ್ಯ ಪದ್ಯಾತ್ಮಕ ಚಂಪೂಕಾವ್ಯವಿದು. ಪೂರ್ವ ಕವಿಗಳ ಕಾವ್ಯಾಧ್ಯಯನ, ಲಕ್ಷಣ ಶಾಸ್ತ್ರಗಳ ಅರಿವು, ರಚನಾ ಪರಿಶ್ರಮಗಳೇ ಇದರ ರಚನೆಗೆ ತಳಹದಿ. ಇವುಗಳೊಂದಿಗೆ ಹಿಂದಿನ ಮತ್ತು ಇಂದಿನ ಲೋಕಪರಿಸ್ಥಿತಿಯ ಚಿಂತನೆ, ರಾಷ್ಟ್ರೋನ್ನತಿಯ ದಿಗ್ದರ್ಶನ ಜಾಗೃತಿ ಇವುಗಳಿಂದ ಮೂಡಿ ಬಂದ ಎಂಟು ಆಶ್ವಾಸಗಳ ಕಾವ್ಯ ಇದಾಗಿದೆ ಎಂಬ ಅಭಿಪ್ರಾಯವನ್ನು ಈ ಕೃತಿಯ ಕುರಿತು ವಿಮರ್ಶಿಸಿದ ಹಿರಿಯ ವಿದ್ವಾಂಸ ಹಾಗೂ ಕೇಶವ ಭಟ್ಟರ ಸಹೋದರ ಪುತ್ರ ಪ್ರೊ. ತಾಳ್ತಜೆ ವಸಂತಕುಮಾರ್ ಕೃತಿಯ ಹಿರಿಮೆಯನ್ನು ಎತ್ತಿ ಹೇಳಿದ್ದಾರೆ. ಇವರ "ತೂಗುದೀವಿಗೆ" ಮೊದಲ ಕವನ ಸಂಕಲನ. ೧೭

ಕವಿತೆಯನ್ನೊಳಗೊಂಡ ಈ ಸಂಕಲನದಲ್ಲೂ ಪರಂಪರೆಯ ಛಂದೋಬಂಧಗಳ ರಚನೆಯನ್ನೇ ಅಳವಡಿಸಿಕೊಂಡಿದ್ದಾರೆ. ಖ್ಯಾತಕರ್ಣಾಟಕಗಳೆಂದು ಪ್ರಸಿದ್ಧವಾದ ಮತ್ತೇಭವಿಕ್ರೀಡಿತ, ಮಹಾಸ್ರಗ್ಧರ, ಉತ್ಪಲಮಾಲೆ, ಚಂಪಕ ಮಾಲೆಗಳಲ್ಲಿ, ಕೆಲವು ಷಟ್ಪದಿಗಳಲ್ಲಿ, ಕಂದ ಪದ್ಯಗಳಲ್ಲೂ ರಚಿಸಿ ಅಪೂರ್ವ ಕಾವ್ಯಗುಚ್ಛವೆಂಬಂತೆ ಮನ ಸೆಳೆದಿದ್ದಾರೆ.

'ಒಸರು ಬುಗ್ಗೆ' ಇವರ ಎರಡನೇ ಕವನ ಸಂಕಲನ ಇದರಲ್ಲಿ ಒಟ್ಟು ೪೩ ಕವಿತೆಗಳಿವೆ. ಇದರಲ್ಲಿಯೂ ವೃತ್ತ, ತ್ರಿಪದಿ, ರಗಳೆ, ಕಂದ, ಯಕ್ಷಗಾನ ಮಟ್ಟುಗಳು, ಸೋಬಾನೆ, ಷಟ್ಪದಿ ಅಲ್ಲದೇ ಅಧುನಿಕ ಮಟ್ಟುಗಳನ್ನೂ ಯಥೇಚ್ಛವಾಗಿ ಬಳಸಿಕೊಂಡು ಆ ಮೂಲಕ ತಮ್ಮ ಪಾಂಡಿತ್ಯವನ್ನು ಮೆರೆದಿದ್ದಾರೆ. ಪ್ರಾಸದ ಸಹಜ ಆವರ್ತನ, ಗತಿಯ ಸುಭಗತೆ, ಯತಿಯ ತಾರ್ಕಿಕ ನೆಲೆ ಎಲ್ಲವೂ ಉತ್ಕೃಷ್ಟವಾಗಿ ಇಲ್ಲಿಯ ಕವನಗಳಲ್ಲಿ ಬಳಕೆಯಾಗಿದೆ. ಈ ಸಂಕಲನದಲ್ಲಿ ಬರುವ 'ಶ್ರೀ ರಾಮಾಷ್ಟಕ' ಎಂಬ ಕವಿತೆ ಪೂರ್ಣವಾಗಿ ಸಂಸ್ಕೃತದಲ್ಲೇ ರಚಿತವಾಗಿ ರುವುದರಿಂದ, ಕೇಶವ ಭಟ್ಟರ ಸಂಸ್ಕೃತ ಪಾಂಡಿತ್ಯಕ್ಕೂ ಇದು ಕನ್ನಡಿಯಾಗಿದೆ. ''ಗುರುಚರಿತ್ರಾಮೃತಂ''ಎನ್ನುವುದು ಇವರು ಭಾಮಿನೀ ಷಟ್ಪದಿಯಲ್ಲಿ ರಚಿಸಿದ ಎಂಟು ಸಂಧಿಗಳುಳ್ಳ ಕಾವ್ಯ. ಶ್ರೀರಾಮಚಂದ್ರಾಪುರ ಮಠದ ಗುರುಪರಂಪರೆಯ ವಸ್ತುವುಳ್ಳ ಕೃತಿ ಇದಾಗಿದೆ. ಈ ಕೃತಿ ರಚನೆಗಾಗಿ ಕೇಶವ ಭಟ್ಟರಿಗೆ ಮಠದ ವತಿಯಿಂದ ವಿಶೇಷ ಮನ್ನಣೆ ಜತೆಗೆ 'ಕವಿಶೇಖರ' ಎಂಬ ಬಿರುದನ್ನೂ ನೀಡಿ ಗೌರವಿಸಿದೆ.

ಈ ಕೃತಿಗಳಲ್ಲದೆ 'ಶ್ರೀರಾಮ ವಿಜಯ ಕಾವ್ಯ' ಹಲವು ತಾಳೆಗರಿಯ ಮೂಲಪ್ರತಿಯಗಳಿಂದ ಸಂಪಾದಿಸಿ, ಶುದ್ಧಪಾಠ ನಿರ್ಣಯದೊಡನೆ ರೂಪಿಸಿದ, ಪದ್ಯಗಳಿಗೆಲ್ಲ ಅನುವಾದವನ್ನೂ ಬರೆದು ಪ್ರಕಟವಾಗಿರುವ ಸಾಂಗತ್ಯ ಕಾವ್ಯ. ಇದು ಜೈನರಾಮಾಯಣ ಕಾವ್ಯವಾದ ಕಾರಣ ಪಂಪರಾಮಾಯಣಕ್ಕಿಂತ ಭಿನ್ನ ರಚನೆಯಾಗಿದೆ. 'ಹವ್ಯಕರ ಸೋಬಾನೆಗಳು' ಶಿಷ್ಟ ಜಾನಪದ ಎನಿಸಬಹುದಾದ ಪ್ರಕಾರ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಯು.ಜಿ.ಸಿ ನೆರವಿನಿಂದ ಸಂಗ್ರಹಿಸಿ ಪ್ರಕಟಿಸಿದ ಈ ಗ್ರಂಥದಲ್ಲಿ ದೇಶೀಸಾಹಿತ್ಯಕ್ಕೆ ಸೇರಿದ ಸೋಬಾನೆಗಳಿವೆ. ಇದು ಯಕ್ಷಗಾನ ಬಯಲಾಟ ಅಕಾಡೆಮಿಯಿಂದ ಬಹುಮಾನ ಪಡೆದ ಕೃತಿಯೂ ಆಗಿದೆ. 'ರಾಷ್ಟ್ರಭಕ್ತಿ ಮಾನಸ' ಎಂಬುದು ಗೀತ, ನಾಟಕ, ಯಕ್ಷಗಾನಗಳ ತ್ರಿವೇಣಿ ಸಂಗಮ

ಕೃತಿ. 'ಹಾಡಿನ ಚೂಡಾಮಣಿ' ಎಂಬುದು ದಕ್ಷಿಣ ಕನ್ನಡ ಜಿಲ್ಲೆಯ ಜನಪದ ಗೀತೆಗಳ ಸಂಕಲನ. 'ಗೋವಿನ ಕಥೆ ಹಾಡು' ಎಂಬ ಧರಣಿ ಮಂಡಲ ಪದ್ಯದ ಸಂಕಥನದ ವಿಸ್ತಾರವಾದ ರೂಪ. ಇವುಗಳಲ್ಲಿ ಗೋವಿನ ಹಾಡು ಕೃತಿಯಲ್ಲಿ ಸೂಕ್ತ ರೀತಿಯ, ಶಾಸ್ತ್ರೋಕ್ತವಾದ ಗ್ರಂಥ ಸಂಪಾದನೆಯ ಕ್ರಮವನ್ನು ಅನುಸರಿಸಲಾಗಿದೆ. ಹಾಗಾಗಿ ಪಾಠಾಂತರಗಳುಳ್ಳ ಅಡಿಟಿಪ್ಪಣಿಗಳು, ಆಕರ ಗ್ರಂಥಸೂಚಿಗಳನ್ನು ನೀಡಲಾಗಿದೆ. ಇದಕ್ಕಾಗಿ ಭಟ್ಟರು ಬಹಳ ಶ್ರಮವಹಿಸಿದ್ದೂ ಕಂಡುಬರುತ್ತದೆ. ಮೂರು ಹಸ್ತಪ್ರತಿಗಳನ್ನು ಆಧರಿಸಿ ಶುದ್ಧ ಪಾಠವೊಂದನ್ನು ಅತ್ಯಂತ ಶ್ರಮ ಮತ್ತು ಶ್ರದ್ಧೆಯಿಂದ ಕೇಶವ ಭಟ್ಟರು ಸಂಪಾದಿಸಿ ಕೊಟ್ಟಿದ್ದಾರೆ. ಇದರ ಜತೆಗೆ 'ಗೋವಿನ ಕಥಾ ಸಾಹಿತ್ಯ' ಎನ್ನುವ ಗದ್ಯ ರಚನೆಯೂ ಇವರಿಂದ ಆಗಿದೆ. ಇದೊಂದು ವಿಶಿಷ್ಟ ಸಮೀಕ್ಷಾತ್ಮಕ ಕೃತಿ ಎನ್ನಬಹುದು.

ಈ ಕೃತಿಗಳಲ್ಲದೇ ಕೇಶವ ಭಟ್ಟರು 'ಸಂಶೋಧನ ರತ್ನಮಾಲಿಕೆ' ಎನ್ನುವ ಒಂಬತ್ತು ವಿದ್ವತ್ ಲೇಖನಗಳ ಸಂಕಲನವೊಂದನ್ನೂ ಹೊರತಂದಿದ್ದಾರೆ. ಅಕ್ಷರ ಸಂಜ್ಞಾಕಾರ, ನಾಮವಿಭಕ್ತಿಗಳು, ಛಂದಸ್ಸು ಮತ್ತು ಗುರು ಲಘುಗಳ ರಹಸ್ಯ, ಒನಕೆವಾಡು, ಸಾಂಗತ್ಯದ ಧಾಟಿ ಮತ್ತು ಛಂದಸ್ಸು ಇವೇ ಇಲ್ಲಿಯ ಪ್ರಮುಖ ಲೇಖನಗಳು. ಅತ್ಯಂತ ಗಂಭೀರ ವಿಷಯಗಳನ್ನು ತಮ್ಮದೇ ತರ್ಕ ಶೈಲಿಯಲ್ಲಿ ಈ ಲೇಖನಗಳಲ್ಲಿ ಶ್ರೀಯುತ ಭಟ್ಟರು ಚರ್ಚಿಸಿದ್ದಾರೆ. ಈ ಲೇಖನ ಮಾಲಿಕೆ ಭಟ್ಟರಿಗಿದ್ದ ವ್ಯಾಕರಣ, ಛಂದಸ್ಸುಗಳ ಮೇಲಿನ ಹಿಡಿತವನ್ನು ತಿಳಿಸಲು ಸಾಧ್ಯವಾಗಿದೆ. ಸ್ವತಃ ಸಂಗೀತಾಭ್ಯಾಸಿಯಾಗಿದ್ದ ಭಟ್ಟರು ತಾಳಜ್ಞಾನಿಯೂ ಆಗಿದ್ದರಿಂದ ಇಂತಹ ಬರೆಹಗಳನ್ನು ಸುಲಲಿತವಾಗಿ ರಚಿಸಲು ಸಾಧ್ಯವಾಯಿತು ಎನ್ನಬಹುದು. 'ಕನ್ನಡದ ಪ್ರಾಚೀನ ಸಾಹಿತ್ಯ ಲಕ್ಷಣಗಳು ಮರುನೋಟ' ಎಂಬ ಕೃತಿ ಗಾತ್ರದಲ್ಲಿ ಕಿರಿದಾದರೂ ಸತ್ವದಲ್ಲಿ ಹಿರಿದು. ವಿಶೇಷೋಪಾಖ್ಯಾನಗಳ ಈ ಲೇಖನ ಸಂಗ್ರಹವು ಕನ್ನಡ ಮಾರ್ಗಕಾವ್ಯದ ಪರಿಕಲ್ಪನೆ, ಗದ್ಯಕಥೆಯ ಮೂಲ ಜಾಲ ಹಾಗೂ ದೇಸಿಗಬ್ಬಗಳ ಸೊಬಗನ್ನು ನೀಡುತ್ತದೆ. ಈ ಕೃತಿಗಳಲ್ಲದೇ ಜನಪದ ಗೀತೆಗಳು, ಯಕ್ಷಗಾನ ಕಲಾದರ್ಶನ ಇವೇ ಮುಂತಾದ ವಿದ್ವತ್ ಪೂರ್ಣ ಕೃತಿಗಳ ರಚನೆಯನ್ನು ಮಾಡಿದ್ದಾರೆ. ಕೇಶವ ಭಟ್ಟರು ತಮ್ಮ ಕೃತಿಗಳನ್ನು ಚಿರಸಾಹಿತ್ಯ ಪ್ರಕಾಶನದ ಮೂಲಕ ಪ್ರಕಟಿಸುತ್ತಿದ್ದರು.

ವಿದ್ವತ್ತಿನೊಂದಿಗೆ ವಿನಯವನ್ನೂ ಸಜ್ಜನಿಕೆಯನ್ನೂ ಬೆಳೆಸಿಕೊಂಡಿದ್ದ ಪ್ರೊ. ಟಿ ಶಂಕರ ಭಟ್ಟರು ವಿದ್ವತ್ ವಲಯದ ಅನೇಕರನ್ನು ಇಷ್ಟಪಡುತ್ತಿದ್ದರು, ಹಾಗೇ ಅನೇಕ ವಿದ್ವಾಂಸರು ಕೂಡ ಅವರ ಬಗ್ಗೆ ಅಭಿಮಾನ ಪ್ರೀತಿ ಇಟ್ಟುಕೊಂಡಿದ್ದರು. ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈಯವರು ಭಟ್ಟರ ಕೃತಿಗಳ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ಆಡಿದ್ದಾರೆ. ನಾಡೋಜ ಡಾ. ದೇ ಜವರೇಗೌಡರು, "ಅವರೋರ್ವ ಶ್ರೇಷ್ಠ ವಿದ್ವಾಂಸರು ಹಾಗೂ ಉತ್ತಮ ಅಧ್ಯಾಪಕರು" ಎಂದು ಹೇಳಿದ್ದಾರೆ. ಪ್ರೊ. ಡಿ.ಎಲ್ ನರಸಿಂಹಾಚಾರ್ ರವರು, "ನನ್ನ ಮಾನ್ಯ ಮಿತ್ರರಾದ ವಿದ್ವಾನ್ ಟಿ. ಕೇಶವ ಭಟ್ಟರು ಕೆಲವು ಉತ್ತಮ ಗ್ರಂಥಗಳನ್ನು ರಚಿಸಿ, ಕನ್ನಡಿಗರಿಗೆ ಈ ಮೊದಲೇ ಪರಿಚಿತರಾಗಿದ್ದಾರೆ. ಗ್ರಂಥಸಂಪಾದನೆಯ ಕ್ಷೇತ್ರದಲ್ಲೂ ತಕ್ಕಷ್ಟು ಪರಿಣತಿ ಪಡೆದಿದ್ದಾರೆ" ಎಂದು ಶ್ಲಾಘಿಸಿದ್ದಾರೆ. ಪ್ರೊ.ಎಂ. ಮರಿಯಪ್ಪ ಭಟ್ಟರು, "ಕೇಶವ ಭಟ್ಟರದ್ದು ಕನ್ನಡ ಸಂಶೋಧನ ಕ್ಷೇತ್ರದಲ್ಲಿ ಉಪಯುಕ್ತ, ಸ್ವಾಗತಾರ್ಹ ಗೆಯ್ಮೆ" ಎಂದಿದ್ದಾರೆ. ಪ್ರೊ.ಎಸ್.ವಿ. ಪರಮೇಶ್ವರ ಭಟ್ಟರು, "ಶ್ರೀಯುತರ ಪ್ರತಿಭೆ, ವ್ಯುತ್ಪತ್ತಿ, ಅಭ್ಯಾಸಗಳಿಗೆ ಅವರ ಬರಹಗಳು ಕನ್ನಡಿ ಹಿಡಿದಿದೆ" ಎಂದು ಹೇಳಿದರೆ, ನಾಡೋಜ ಜಿ. ವೆಂಕಟಸುಬ್ಬಯ್ಯರವರು, "ಆಧುನಿಕ ಕನ್ನಡದಲ್ಲಿ ಹಳಗನ್ನಡ ಕಾವ್ಯಗಳನ್ನು ಬರೆದವರಿಲ್ಲ. ತನ್ನ ಶಬ್ದಶಕ್ತಿ ತುಂಬ ಹಿರಿದಾಗಿದೆ" ಎಂದು ಶ್ಲಾಘಿಸಿದ್ದಾರೆ. ಇವರಲ್ಲದೇ ಡಾ.ವಿ.ಕೃ. ಗೋಕಾಕ್, ಪ್ರೊ.ಸ.ಸ. ಮಾಳವಾಡ, ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ, ನಾಡೋಜ ಜಿ. ನಾರಾಯಣ, ವಿದ್ವಾನ್ ಎನ್. ರಂಗನಾಥ ಶರ್ಮಾ ಮೊದಲಾದ ನಾಡಿನ ಹಿರಿಯ-ಕಿರಿಯ ಸಾಹಿತಿಗಳು, ವಿದ್ವಾಂಸರು ಕೇಶವ ಭಟ್ಟರ ಕೆಲಸಗಳನ್ನು ತುಂಬು ಮನಸ್ಸಿನಿಂದ ಕೊಂಡಾಡಿದ್ದಾರೆ. ಪ್ರೊ. ಟಿ. ಕೇಶವ ಭಟ್ಟರು ಹಲವು ಸಂಪುಟಗಳ ಮತ್ತು ಸಂಚಿಕೆಗಳ ಸಂಪಾದಕರಾಗಿ ಕೆಲಸ ಮಾಡಿದ್ದಲ್ಲದೇ ತಾನು ಸಲ್ಲಿಸಿದ ಔದ್ಯೋಗಿಕ ಮತ್ತು ಸಾಹಿತ್ಯಕ ಸೇವೆಗಾಗಿ ಗೌರವ, ಸನ್ಮಾನಗಳಿಗೂ ಪಾತ್ರರಾಗಿದ್ದಾರೆ.

ಅವರ ಕೃತಿಗಳಿಗೆ ಬೇರೆಬೇರೆ ಸಂಘ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಬಹುಮಾನ, ಪ್ರಶಸ್ತಿಗಳನ್ನು ನೀಡಿವೆ. ಅಲ್ಲದೇ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕೇಂದ್ರ ಅಬಕಾರಿ ಮತ್ತು ಸುಂಕ ಇಲಾಖೆಯ ಪ್ರಶಸ್ತಿ, ಡಾ.ಎಂ.ಎಚ್. ಕೃಷ್ಣ ಶತಮಾನೋತ್ಸವ ಪ್ರಶಸ್ತಿ, ದ.ಕ ಜಿಲ್ಲಾ ಸಾಹಿತ್ಯ ಸಮೇಳನದ ಅಧ್ಯಕ್ಷತೆ, ಗಮಕ ಸಮ್ಮೇಳನದ ಕಲಾ ಉತ್ಸವ ಪ್ರಶಸ್ತಿ, ಜಾನಪದತಜ್ಞ ರಾಜ್ಯ ಪ್ರಶಸ್ತಿ, ಬಿ.ಎಂ.ಶ್ರೀ.

ಸಾಹಿತ್ಯ ಪ್ರಶಸ್ತಿ ಹೀಗೆ ಹಲವಾರು ಗೌರವ ಪ್ರಶಸ್ತಿಗಳು ಅವರಿಗೆ ಸಿಕ್ಕಿವೆ. ೧೯೨೦ ಫೆಬ್ರವರಿ ೨ರಂದು ಕರಾವಳಿಯ ಹಳ್ಳಿಗಾಡಿನಲ್ಲಿ ಜನಿಸಿದ ಕೇಶವ ಭಟ್ಟರು, ತಮ್ಮ ಅವಿರತ ಸಾಧನೆ, ಕಲಾಪ್ರಜ್ಞೆ ಹಾಗೂ ವಿದ್ವತ್ಪೂರ್ಣ ನಡೆಗಳಿಂದಾಗಿ ಕನ್ನಡ ನಾಡಿನ ಹಿರಿಯ ವಿದ್ವಾಂಸರಾಗಿ, ಮೌಲಿಕ ಕೃತಿಗಳ ಕರ್ತೃವಾಗಿ, ಯಕ್ಷಗಾನ ಭಾಗವತರಾಗಿ, ಹಿಮ್ಮೇಳ ವಾದಕರಾಗಿ, ಗಮಕಿಯಾಗಿ ಸಹೃದಯಿ ಸ್ನೇಹಿತನಾಗಿ ಅಲ್ಲದೇ ಅಜಾತಶತ್ರುವಾಗಿಯೂ ಹೆಸರು ಮಾಡಿದವರು. ತಮ್ಮ ಮೂವರು ಮಕ್ಕಳಿಗೂ ಉತ್ತಮ ವಿದ್ಯೆ ನೀಡಿದಲ್ಲದೇ ಪ್ರತಿಷ್ಠಿತ ಬದುಕು ಕಟ್ಟುವಂತೆಯೂ ನೋಡಿಕೊಂಡವರು. ತನ್ನ ಪತ್ನಿ (ಶ್ರೀಮತಿ ಗೌರಮ್ಮ) ಶಾಲಾ ಶಿಕ್ಷಕಿಯಾಗಿದ್ದರಿಂದ ಹಾಗೂ ತಾವು ಬೇರೆಬೇರೆ ಕ್ಷೇತ್ರಗಳಲ್ಲಿ ಆಳವಾಗಿ ತೊಡಗಿಕೊಂಡಿದ್ದರಿಂದ ಕಾರ್ಯಕ್ಷೇತ್ರವನ್ನು ಬೆಂಗಳೂರಿಗೆ ವರ್ಗಾಯಿಸಿಕೊಂಡ ಭಟ್ಟರು, ತುಂಬು, ಸಾರ್ಥಕ ಮತ್ತು ಸಂತೃಪ್ತ ಜೀವನ(೮೫ ವರ್ಷ)ದೊಂದಿಗೆ ೨೦೦೫ರಲ್ಲಿ ಬೆಂಗಳೂರಿ ನಲ್ಲಿ ನಿಧನರಾದರು. ಅವರೇ ಬರೆದ ಜೀವನ ವೃತ್ತಾಂತ 'ಕೇಶವಾಖ್ಯಾನ', ಅವರು ತೀರಿಕೊಂಡ ಬಳಿಕ ಬಂದ ಸಂಸ್ಮರಣ ಗ್ರಂಥ 'ಸುಕೃತ' (ಸಂಪಾದಕರು: ಡಾ. ಪಾದೇಕಲ್ಲು ವಿಷ್ಣು ಭಟ್ಟ) ಹಾಗೂ ಕಾಂತಾವರ ಕನ್ನಡ ಸಂಘ ಪ್ರಕಟಿಸಿದ ನಾಡಿಗೆ ನಮಸ್ಕಾರ ಮಾಲಿಕೆ(ಲೇಖಕರು: ಪ್ರೊ. ತಾಳ್ತಜೆ ವಸಂತ ಕುಮಾರ್) ಈ ಕೃತಿಗಳು ಹಾಗೂ ಭಟ್ಟರೇ ರಚಿಸಿದ ಹತ್ತು ಹಲವು ಕೃತಿಗಳು ಅವರ ಬದುಕಿನ ಸಾರ್ಥಕ್ಯವನ್ನು ಅವರ ಪಾಂಡಿತ್ಯದ ಹೊಳಹನ್ನು ಎತ್ತಿ ತೋರಿಸುತ್ತಾ ನಮ್ಮೊಂದಿಗಿವೆ. ಕನ್ನಡನಾಡು-ನುಡಿ ಕಟ್ಟಲು ತಮ್ಮದೇ ಆದ ಕೊಡುಗೆಯನ್ನು ನೀಡಿದ ಟಿ. ಕೇಶವ ಭಟ್ಟರನ್ನು ಸದಾ ಸ್ಮರಿಸಲೇಬೇಕಾದುದು ಈ ನಾಡಿನ ಕರ್ತವ್ಯ.

❐ ❐ ❐

ಎನ್. ಬಸವಾರಾಧ್ಯ

(೧೯೨೬–೨೦೧೩)

ಗೌರಮ್ಮ ಎಚ್.

ಕನ್ನಡ ಸಂಶೋಧನ ಕ್ಷೇತ್ರದಲ್ಲಿ ಎನ್. ಬಸವಾರಾಧ್ಯರು ಚಿರಪರಿಚಿತರು. ವಿದ್ವತ್ತು, ವ್ಯುತ್ಪತ್ತಿ ಮತ್ತು ಪ್ರತಿಭೆಗಳು ಮೇಳೈಸಿದ್ದ ಇವರು ಡಿ.ಎಲ್. ನರಸಿಂ ಹಾಚಾರ್, ತೀ.ನಂ.ಶ್ರೀ., ಎ.ಆರ್. ಕೃಷ್ಣಶಾಸ್ತ್ರಿ ಮೊದಲಾದ ವಿದ್ವತ್ಪರಂ ಪರೆಯನ್ನು ಮುಂದುವರಿಸಿದ ಹಲವು ಜನ ವಿದ್ವನ್ಮಣಿಗಳಲ್ಲಿ ಒಬ್ಬರು. ಗ್ರಂಥ ಸಂಪಾದನೆ, ಹಳಗನ್ನಡ ಸಾಹಿತ್ಯ ಅಧ್ಯಯನ ಮತ್ತು ನಿಘಂಟು ಕ್ಷೇತ್ರಗಳಲ್ಲಿ ವಿಶೇಷ ಅನುಭವವನ್ನು ಹೊಂದಿದ್ದ ಇವರು ಈ ಕ್ಷೇತ್ರದಲ್ಲಿ ನಾಲ್ಕು ದಶಕಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿದರು.

ಎನ್. ಬಸವಾರಾಧ್ಯರು ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲೂಕಿನ ನಾರಸಿಂಹನಹಳ್ಳಿಯಲ್ಲಿ ೧೯೨೬ ಫೆಬ್ರವರಿ ೨೦ ರಂದು ಜನಿಸಿದರು. ಇವರ ತಂದೆ ನಂಜುಂಡಾರಾಧ್ಯ, ತಾಯಿ ಗಿರಿಜಮ್ಮ. ಇವರ ಪ್ರಾಥಮಿಕ ಶಿಕ್ಷಣ ಗೌರಿಬಿದನೂರಿನಲ್ಲಿ ನಡೆಯಿತು. ಪ್ರೌಢಶಾಲಾ ವ್ಯಾಸಂಗಕ್ಕಾಗಿ ಬೆಂಗಳೂರಿನ ಕೋಟೆ ಪ್ರೌಢಶಾಲೆಗೆ ಸೇರಿ ಇಂಟರ್ಮೀಡಿಯೆಟ್ ಮುಗಿಸಿದರು. ಮುಂದೆ ಪದವಿ ವ್ಯಾಸಂಗಕ್ಕಾಗಿ ಮೈಸೂರಿನ ಮಹಾರಾಜ ಕಾಲೇಜು ಸೇರಿ ಬಿ.ಎ.(ಆನರ್ಸ್) ಪದವಿಯನ್ನೂ ೧೯೫೦ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ನಾತಕೋತ್ತರ ಪದವಿಯನ್ನೂ ಪೂರೈಸಿದರು. ಜಿ.ಪಿ. ರಾಜರತ್ನಂ, ಡಿ.ಎಲ್.ಎನ್., ತೀ.ನಂ.ಶ್ರೀ., ತ.ಸು. ಶಾಮರಾವ್, ಕೆ.ವಿ. ರಾಘವಾಚಾರ್, ವಿ. ಸೀತಾರಾಮಯ್ಯ, ಎ.ಎನ್. ಮೂರ್ತಿರಾಯ, ಎಸ್.ವಿ. ರಂಗಣ್ಣ, ಅನಂತರಂಗಾಚಾರ್ ಮೊದಲಾದ ಗುರು ಪರಂಪರೆಯ ಗರಡಿಯಲ್ಲಿ ಇವರು

ಬೆಳೆದರು. ಗುರುಗಳೊಡನೆ ಅವಿನಾಭಾವ ಸಂಬಂಧ ಹೊಂದಿದ್ದ ಇವರಿಗೆ ವಿಶೇಷವಾಗಿ ಡಿ.ಎಲ್. ನರಸಿಂಹಾಚಾರ್ಯರೆಂದರೆ ತುಂಬಾ ಗೌರವ ಮತ್ತು ಪ್ರೀತಿ. ಬೆಂಗಳೂರಿನಲ್ಲಿ ಬಸವಾರಾಧ್ಯರಿಗೆ ಇಂಟರ್ಮೀಡಿಯೆಟ್ ತರಗತಿಗಳಿಗೆ ಪಾಠ ಹೇಳಿದ ಡಿ.ಎಲ್.ಎನ್. ಅವರೇ ಮೈಸೂರಿನಲ್ಲಿ ಎಂ.ಎ. ಓದು ವಾಗಲೂ ಗುರುಗಳಾಗಿದ್ದರು. ಇದೊಂದು ರೀತಿಯ ಸೌಭಾಗ್ಯವೇ ಆಗಿತ್ತು. ಡಿ.ಎಲ್. ನರಸಿಂಹಾಚಾರ್ಯರ ಪ್ರವಚನ, ಮಾತಿನ ಧಾಟಿ, ಬೋಧನ ವಿಧಾನಗಳು ಬಸವಾರಾಧ್ಯರ ಮೇಲೆ ತುಂಬಾ ಪ್ರಭಾವ ಬೀರಿದುವು. ಎನ್. ಬಸವಾರಾಧ್ಯರ ಮತ್ತೊಬ್ಬ ಗುರು ತೀ.ನಂ.ಶ್ರೀ.ರವರಿಗೆ ಬಸವಾರಾಧ್ಯರ ಬಗ್ಗೆ ವಿಶೇಷವಾದ ಅಭಿಮಾನ ಮತ್ತು ಹೆಮ್ಮೆ ಇತ್ತು. ಬಸವಾರಾಧ್ಯರು ಜನರನ್ನು ಕಲೆ ಹಾಕುವುದರಲ್ಲಿ ಗ್ರಂಥಗಳನ್ನು ಕಲೆ ಹಾಕುವುದರಲ್ಲಿ ನಿಷ್ಣಾತರಾಗಿದ್ದರು. ಶಬ್ದಾರ್ಥ ನಿರ್ಣಯದಲ್ಲಿ ಅವರ ಪಾಂಡಿತ್ಯ ಎದ್ದು ಕಾಣುತ್ತಿತ್ತು. ಶಬ್ದಕ್ಕೆ ಅರ್ಥ, ಅದರ ಛಾಯೆ, ಉಪಛಾಯೆಗಳನ್ನು ಗುರುತಿಸಿ ದ್ರಾವಿಡ ಭಾಷೆಗಳ ಮೂಲದ ಅರ್ಥವನ್ನು ಹುಡುಕಿ ಶಾಸ್ತ್ರೀಯವಾಗಿ ನಿಘಂಟು ಕೆಲಸ ಮಾಡುವುದರಲ್ಲಿ ಅವರು ಪರಿಣತರಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಪ್ರಾರಂಭದಲ್ಲಿ ಎಲ್. ಗುಂಡಪ್ಪನವರು ಪ್ರಧಾನ ಸಂಪಾದಕರಾಗಿ, ಎನ್. ಬಸವಾರಾಧ್ಯರು ಉಪಸಂಪಾದಕರಾಗಿ ಕೆಲಸ ನಿರ್ವಹಿಸುತ್ತಿದ್ದರು. ಇವರ ಜೊತೆ ಹನುಮಂತರಾವ್ ಕುಲಕರ್ಣಿ, ಚಂದ್ರಶೇಖರ ಐತಾಳ ಮೊದಲಾದವರು ಸಹೋದ್ಯೋಗಿಗಳಾಗಿ ಕಾರ್ಯನಿರ್ವ ಹಿಸುತ್ತಿದ್ದರು.

ಬಸವಾರಾಧ್ಯರಿಗಿದ್ದ ಸಮಯಪಾಲನೆ, ಕರ್ತವ್ಯಪ್ರಜ್ಞೆ, ಅಚ್ಚುಕಟ್ಟುತನಗಳು ಅವರನ್ನು ಶೈಕ್ಷಣಿಕವಾಗಿ ಬಹು ಎತ್ತರಕ್ಕೆ ಕೊಂಡೊಯ್ದವು. ಅವರು ೧೯೪೯ ಬಿ.ಎ.(ಆನರ್ಸ್) ಪದವಿ ಪಡೆದ ಕೂಡಲೇ ಮೈಸೂರಿನ ಪ್ರಾಚ್ಯ ವಿದ್ಯಾಸಂಸ್ಥೆಯಲ್ಲಿ ಪದವೀಧರ ತಜ್ಞ (graduate Kannada specialist)ರಾಗಿ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದರು. ಇಲ್ಲಿ ಅವರು ಹಲವಾರು ಹಸ್ತಪ್ರತಿಗಳು ಹಾಗೂ ಐತಿಹಾಸಿಕ ದಾಖಲೆಗಳನ್ನು ಸಂಗ್ರಹಿಸುವುದರ ಜೊತೆ ಜೊತೆಗೆ ಬಿ.ಎಸ್. ಸಣ್ಣಯ್ಯನವರ ಜೊತೆ ಸೇರಿ ತೊರವೆ ರಾಮಾಯಣ ಕೃತಿಯನ್ನು ಸಂಪಾದಿಸಿದರು. ೧೯೫೫ ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ–ಕನ್ನಡ ನಿಘಂಟು ಯೋಜನೆಯಲ್ಲಿ ಸ್ನಾತಕಸಹಾಯಕರಾಗಿ ಕಾರ್ಯನಿರ್ವಹಿಸಲು ಅವರಿಗೆ ಆಹ್ವಾನ ಬಂದಿತು. ನಿಘಂಟು ಸಂಪಾದಕ ಸಮಿತಿಯ ಅಧ್ಯಕ್ಷರಾಗಿದ್ದ ಎ.ಆರ್. ಕೃಷ್ಣಶಾಸ್ತ್ರಿಗಳು ಇವರನ್ನು ಈ

ಕೆಲಸಕ್ಕಾಗಿ ಆಹ್ವಾನಿಸಿದಾಗ 'ನನ್ನ ಗುರುಗಳು ಕುಳಿತ ಕುರ್ಚಿಯಲ್ಲಿ ಕುಳಿತುಕೊಳ್ಳುವ ಯೋಗ್ಯತೆ ನನಗಿಲ್ಲ. ದಯವಿಟ್ಟು ಬೇರೆ ಯಾರನ್ನಾದರೂ ನೇಮಿಸಿ' ಎಂದು ಹೇಳಿ ತಮ್ಮ ವಿನಯವಂತಿಕೆಯನ್ನು ಮೆರೆದರಂತೆ. ಆಗ ಶಾಸ್ತ್ರಿಗಳು 'ಡಿ.ಎಲ್.ಎನ್. ಅವರ ಸೂಚನೆಯ ಮೇರೆಗೆ ತಮ್ಮನ್ನು ಈ ಕೆಲಸಕ್ಕೆ ಆಹ್ವಾನಿಸಲಾಗಿದೆ. ನೀವು ಈ ಕೆಲಸವನ್ನು ನಿರ್ವಹಿಸಲು ಸಮರ್ಥರೆಂದು' ಒತ್ತಾಯಿಸಿದಾಗ ಬಸವಾರಾಧ್ಯರು ಕನ್ನಡ–ಕನ್ನಡ ನಿಘಂಟು ಸಂಪಾದಕರಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಕೆಲಸಕ್ಕೆ ಸೇರಿದರು. ಅವರು ಮುಂದೆ ಅಲ್ಲಿ ಉಪಸಂಪಾದಕ ಸ್ಥಾನದಿಂದ ಸಂಪಾದಕರಾಗಿ, ಪ್ರಧಾನ ಸಂಪಾದಕರಾಗಿ ಪದೋನ್ನತಿ ಹೊಂದಿ ಸಮರ್ಥವಾಗಿ ಕೆಲಸವನ್ನು ನಿರ್ವಹಿಸಿದರು. ಹೀಗೆ ಕನ್ನಡ–ಕನ್ನಡ ನಿಘಂಟು ಸಂಪುಟಗಳು, ಸಂಕ್ಷಿಪ್ತ ಕನ್ನಡ ನಿಘಂಟು ಹೊರಬರುವಲ್ಲಿ ಬಸವಾರಾಧ್ಯರ ಅಪಾರವಾದ ಪರಿಶ್ರಮವಿದೆ.

ಅನಂತರ ಬಸವಾರಾಧ್ಯರು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಸಂಪಾದನ ವಿಭಾಗದ ಉಪ ನಿರ್ದೇಶಕರಾಗಿ (೧೯೭೧–೧೯೮೬) ಕಾರ್ಯನಿರ್ವಹಿಸಿದರು. ಈ ಸಮಯದಲ್ಲಿ ಹಲವಾರು ಪ್ರಾಚೀನ ಕಾವ್ಯಗಳನ್ನು ಶಾಸ್ತ್ರಬದ್ಧ ವಾಗಿ ಸಂಪಾದಿಸಿ ಪ್ರಕಟಿಸಿದರು. ಇದರ ಜೊತೆಗೆ ವಿಶ್ವವಿದ್ಯಾನಿಲಯ ಹಾಗೂ ಬೇರೆ ಬೇರೆ ಸಾರ್ವಜನಿಕ ಸಂಸ್ಥೆಗಳಲ್ಲಿ ಹಲವು ಕಾರ್ಯಗಳನ್ನು ನಿರ್ವಹಿಸುವಲ್ಲಿ ಸಹಭಾಗಿಯಾದರು. ೧೯೫೫ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಇಂಟರ್ಮೀ ಡಿಯೇಟ್ ಪರೀಕ್ಷೆಗಳಿಗೆ, ೧೯೭೯ರಲ್ಲಿ ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಕನ್ನಡ ಪಂಡಿತ ಪರೀಕ್ಷೆಗಳಿಗೆ, ಪರೀಕ್ಷಕರಾಗಿ ನೇಮಕವಾದರು. ಕರ್ನಾಟಕ ಸರ್ಕಾರದ ಪಠ್ಯಪುಸ್ತಕ ಸಮಿತಿಯ ಅಧ್ಯಕ್ಷರಾಗಿ, ೧೯೮೦ರಲ್ಲಿ ವಯಸ್ಕರ ಶಿಕ್ಷಣ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದರು. ಕನ್ನಡದಲ್ಲಿ ಕಚೇರಿ ಕೈಪಿಡಿ ತಯಾರಿಕಾ ಸಮಿತಿ, ಕರ್ನಾಟಕ ಸರ್ಕಾರದ ಭಾಷಾಂತರ ಸರಳೀಕರಣ ಸಮಿತಿ, ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟು ಸಮಿತಿಗಳಲ್ಲಿ ಸದಸ್ಯರಾಗಿದ್ದರು. ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗದಲ್ಲಿ ಇವರನ್ನು ವೀರಶೈವಾಮೃತ ಮಹಾಪ್ರಬಂಧದ ಸಂಪಾದನೆಗಾಗಿ ಇನ್ವೆಸ್ಟಿಗೇಟರಾಗಿ ನೇಮಿಸಿತು. ಕಾಮರಾಜ ವಿಶ್ವವಿದ್ಯಾನಿಲಯದಲ್ಲಿ ವಿಶೇಷ ತಜ್ಞರಾಗಿ ಸೇವೆ ಸಲ್ಲಿಸಿದರು. ೧೯೯೮–೨೦೦೧ರ ಅವಧಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಚುನಾಯಿತರಾಗಿ ಗಣನೀಯ ಸೇವೆ ಸಲ್ಲಿಸಿದರು. ನಿವೃತ್ತಿಯ ಬಳಿಕವೂ

ಇವರ ಸೇವೆ ಮುಂದುವರಿಯಿತು. ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಬಸವಾರಾಧ್ಯರು ಹತ್ತು ಹಲವು ಹೊಸ ಯೋಜನೆಗಳನ್ನು ರೂಪಿಸಿ ಕಾರ್ಯಗತ ಮಾಡಿದರು.

ಎನ್. ಬಸವಾರಾಧ್ಯರು ತಮ್ಮ ವಿದ್ವತ್ತು ಪಾಂಡಿತ್ಯದಿಂದ ಕನ್ನಡ ಸಾಹಿತ್ಯಕ್ಕೆ ಅನುಪಮವಾದ ಕೊಡುಗೆ ನೀಡಿದ್ದಾರೆ. ಅವರ ಈ ಕಾರ್ಯವನ್ನು ಗುರುತಿಸಿ ಹಲವು ಪ್ರಶಸ್ತಿ ಪುರಸ್ಕಾರಗಳು ಅವರನ್ನು ಅರಸಿ ಬಂದಿವೆ. ತೊರವೆ ರಾಮಾಯಣ (೧೯೫೬), ಧರ್ಮನಾಥ ಪುರಾಣ (೧೯೭೬) ಕೃತಿಗಳಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ ಬಂದಿದೆ. ಮೈಸೂರು ವಿಶ್ವವಿದ್ಯಾನಿಲಯ ಕೊಡಮಾಡುವ ತೀ.ನಂ.ಶ್ರೀ. ಸ್ಮಾರಕ ಬಹುಮಾನ ಕನ್ನಡ ನಿಘಂಟು ಕೃತಿಯ ಸಂಪಾದನೆಗಾಗಿ ಬಂದಿದೆ. ದೇವರಾಜ ಸಾಹಿತ್ಯಕ ಬಹುಮಾನ, ಶಿವರತ್ನ ಶಿವಕಮಲ ಪ್ರಶಸ್ತಿ, ೧೯೯೭ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳು ಬಂದಿವೆ. ೧೯೯೪ರಲ್ಲಿ ಕೋಲಾರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಶ್ರೇಷ್ಠ ಸಾಹಿತಿ ಪ್ರಶಸ್ತಿ ನೀಡಿ ಗೌರವಿಸಿದೆ. ಸುತ್ತೂರು ಮಠ, ಮಿಥಿಕ್ ಸೊಸೈಟಿ, ರಾಜಮರ ಸಂಸ್ಥಾನ ಮಠದಂತಹ ಹಲವಾರು ಸಂಘ ಸಂಸ್ಥೆಗಳು ಇವರನ್ನು ಗೌರವಿಸಿವೆ. ಇವರ ಅಭಿನಂದನ ಗ್ರಂಥಗಳು 'ಆರಾಧ್ಯ ಸಂಪದ' ಹಾಗೂ 'ಆರಾಧ್ಯ ಸಿರಿ'.

ಬಸವರಾಧ್ಯರು ತೊರವೆ ರಾಮಾಯಣ ಸಂಗ್ರಹ, ತ್ರಿಪುರದಹನ ಸಾಂಗತ್ಯ, ಚಂದ್ರಹಾಸನ ಕಥೆ, ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ, ಹರಿಶ್ಚಂದ್ರಕಾವ್ಯ (ಇತರರೊಡನೆ), ಚೇರಮಕಾವ್ಯ, ಸರ್ವಜ್ಞ ವಚನ ಸಂಗ್ರಹ, ಉದ್ಭಟದೇವ ಚರಿತೆ, ಆರಾಧ್ಯ ಚರಿತ್ರ, ಚತುರಾಚಾರ್ಯ ಚಾರಿತ್ರ, ಉದ್ಯೋಗ ಸಾರ, ಧರ್ಮನಾಥ ಪುರಾಣ. ನವಮುಗ್ಧ ಲೀಲೆ, ಅಬ್ಬಲೂರು ಚರಿತೆ ಮುಂತಾದ ೨೭ಕ್ಕೂ ಹೆಚ್ಚು ಪ್ರಾಚೀನ ಕಾವ್ಯಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಇವುಗಳಲ್ಲದೆ ವಡ್ಡಾರಾಧನೆ, ಸಚಿತ್ರ ಕನ್ನಡ ನಿಘಂಟು, ರಾಘವಾಂಕ, ಜ್ಯೋತಿಷಿಯ ಮಗ, ಕೊಡದಣ್ಣ ಬಿಡದಣ್ಣ, ಅಪ್ಪಯ್ಯ ಮತ್ತು ಬಾಯಿಶೂರ, ಕೈಶೂರ(ಮಕ್ಕಳ ಪುಸ್ತಕ) ಮೊದಲಾದ ಹಲವು ಕೃತಿಗಳನ್ನು ರಚಿಸಿದ್ದಾರೆ.

ಗ್ರಂಥಸಂಪಾದನಾ ಕ್ಷೇತ್ರದಲ್ಲಿ ಹೆಚ್ಚು ಆಸಕ್ತಿ ನಿಷ್ಠೆಯಿಂದ ಕಾರ್ಯನಿರ್ವಹಿಸಿ ಅನೇಕ ಗ್ರಂಥಗಳನ್ನು ಪರಿಷ್ಕರಿಸಿ ಸ್ವತಃ ಪ್ರಾಚ್ಯ ಕಾವ್ಯ ಪ್ರಕಾಶನವನ್ನು ಪ್ರಾರಂಭಿಸಿ

ಅದರ ಮೂಲಕ ಪ್ರಾಚೀನ ಕೃತಿಗಳನ್ನು ಪ್ರಕಟಿಸಿದ್ದು ಇವರ ಒಂದು ಸಾಧನೆಯೆ ಸರಿ. ಇವರು ಹಸ್ತಪ್ರತಿಗಳ ಆಧಾರದಿಂದ ಸಂಪಾದಿಸಿ ಮೊದಲು ಪ್ರಕಟಿಸಿದ ಕೃತಿ ತೊರವೆ ರಾಮಾಯಣ. ಬಿ.ಎಸ್. ಸಣ್ಣಯ್ಯನವರ ಜೊತೆಗೂಡಿ ಎರಡು ಸಂಪುಟಗಳಲ್ಲಿ ಪ್ರಾಚ್ಯ ವಿದ್ಯಾ ಸಂಶೋಧನಾಲಯದಿಂದ ಈ ಕೃತಿಯನ್ನು ಪ್ರಕಟಿಸಿದರು. ೧೯೫೬ರಲ್ಲಿ ಮೊದಲನೆಯ ಸಂಪುಟ ಮತ್ತು ೧೯೫೯ರಲ್ಲಿ ಎರಡನೆಯ ಸಂಪುಟ ಪ್ರಕಟವಾಯಿತು. ಈ ಎರಡು ಸಂಪುಟಗಳ ಸಂಪಾದನೆಗೆ ಏಳು ಓಲೆ ಹಸ್ತಪ್ರತಿಗಳು ಮತ್ತು ಒಂದು ಕಾಗದದ ಹಸ್ತಪ್ರತಿಯನ್ನು ಬಳಸಿಕೊಳ್ಳಲಾಯಿತು. ಪ್ರಥಮ ಸಂಪುಟದಲ್ಲಿ ಆರು ಖಂಡಗಳಿವೆ. ಮೊದಲ ಐದು ಖಂಡಗಳಲ್ಲಿರುವ ಪದ್ಯ ಸಂಖ್ಯೆಗಿಂತ ಆರನೆಯ ಯುದ್ಧಕಾಂಡವೇ ಹೆಚ್ಚು ಪದ್ಯವನ್ನೊಳಗೊಂಡಿದೆ. ಎರಡು ಸಂಪುಟಗಳಲ್ಲಿ ಕವಿ ಕಾವ್ಯಗಳ ಬಗ್ಗೆ ಸಂಕ್ಷಿಪ್ತ ವಿವರಣೆಯನ್ನು, ಅರ್ಥಕೋಶವನ್ನು ಕೊಡಲಾಗಿದೆ. ಕನ್ನಡದಲ್ಲಿ ರಚಿತವಾಗಿರುವ ಎಲ್ಲಾ ರಾಮಾಯಣಗಳನ್ನು ಪರಿಚಯಿಸುವ ವಿವರದ ಪಟ್ಟಿಯನ್ನು ಎರಡನೆಯ ಸಂಪುಟದಲ್ಲಿ ಕೊಡಲಾಗಿದೆ.

ಮಂ.ಅ. ರಾಮಾನುಜಯ್ಯಂಗಾರ್ ಮೊದಲು ಪರಿಷ್ಕರಿಸಿ ಪ್ರಕಟಿಸಿದ್ದ ಹರಿಶ್ಚಂದ್ರ ಕಾವ್ಯವನ್ನು ಮತ್ತೊಮ್ಮೆ ಬಸವಾ ರಾಧ್ಯರು ಎಸ್. ಬಸಪ್ಪನವರೊಂದಿಗೆ ಕೂಡಿ ಪರಿಷ್ಕರಿಸಿ ೧೯೫೫ರಲ್ಲಿ ಪ್ರಕಟಿಸಿದರು. 'ಈ ಆವೃತ್ತಿಯನ್ನು ಒಂಬತ್ತು ಪ್ರತಿಗಳ ಆಧಾರದಿಂದ ಪರಿಷ್ಕರಿಸಿದ್ದೇನೆ' ಎಂದು ಮುನ್ನುಡಿಯಲ್ಲಿ ಹೇಳಿದ್ದಾರೆ. ಇವುಗಳಲ್ಲಿ ಎರಡು ಮುದ್ರಿತ ಪ್ರತಿಗಳು ಸೇರಿವೆ. ಮಂ.ಅ. ರಾಮಾನುಜಯ್ಯಂಗಾರ್ ಸಂಪಾದಿಸಿದ ಪ್ರತಿ ಒಂದಾದರೆ ಮತ್ತೊಂದು ಟಿ.ಎಸ್. ವೆಂಕಣ್ಣಯ್ಯನವರು ಸಂಗ್ರಹ ರೂಪದಲ್ಲಿ ಪರಿಷ್ಕರಿಸಿದ ಕೃತಿಯಾಗಿದೆ.

೧೯೭೩ರಲ್ಲಿ ಅಬ್ಬಲೂರು ಚರಿತೆ ಕೃತಿ ಪ್ರಕಟವಾಯಿತು. ಆರು ಸಂಧಿಗಳನ್ನು, ೫೨೨ ಪದ್ಯಗಳನ್ನು ಒಳಗೊಂಡಿರುವ ಈ ಕೃತಿ ಏಕಾಂತರಾಮಿ ತಂದೆಯ ಭಕ್ತಿ ನಿಷ್ಠೆಯ ಪರಾಕಾಷ್ಠೆಯ ಕಥೆಯನ್ನು ಒಳಗೊಂಡಿದೆ. ಒಂದು ಓಲೆ ಪ್ರತಿ ಮತ್ತು ಮೂರು ಕಾಗದದ ಹಸ್ತಪ್ರತಿಗಳಿಂದ ಕೃತಿ ಸಂಪಾದಿಸಲು ಹೆಚ್. ದೇವಿರಪ್ಪನವರು ಪ್ರಾರಂಭ ಮಾಡಿದ್ದನ್ನು ಎನ್. ಬಸವಾರಾಧ್ಯರು ಪೂರೈಸಿದರು. ಕವಿ ಕಾವ್ಯಗಳ ಬಗೆಗೆ ಉತ್ತಮ ಪೀಠಿಕೆ ಇದೆ. ಅನುಬಂಧದಲ್ಲಿ ವಿವಿಧ ಮೂಲಗಳಿಂದ ಸಂಗ್ರಹವಾಗಿರುವ ಏಕಾಂತರಾಮಿಯ ತಂದೆಗೆ ಸಂಬಂಧಿಸಿದ ವಿವರಗಳನ್ನು ಒದಗಿಸಲಾಗಿದೆ. ಇದರಲ್ಲಿ ಶಬ್ದಾರ್ಥಕೋಶವು ಇದೆ.

ನೀಲಕಂಠಾಚಾರ್ಯನ ಆರಾಧ್ಯ ಚಾರಿತ್ರ ಒಂದು ಬೃಹತ್ ಗ್ರಂಥವಾಗಿದೆ. ಶೈವಮತ ಪಾರಮ್ಯವನ್ನು ನಿರೂಪಿಸುವ ಈ ಕೃತಿ ದೀಕ್ಷಾ, ಪುರಾತನ, ವಾದ, ಮಹಿಮಾ ಮತ್ತು ಪರ್ವತ ಪ್ರಕರಣವೆಂಬ ಐದು ವಿಭಾಗಗಳನ್ನು ಒಳಗೊಂಡಿದೆ. ಕವಿ, ಕಾಲ ವಿಚಾರ, ಕಥಾಸಾರ ಇತ್ಯಾದಿಗಳನ್ನು ಒಳಗೊಂಡ ೯೮ ಪುಟಗಳ ವಿಸ್ತಾರವಾದ ಪೀಠಿಕೆ ಇದೆ. ಧರ್ಮ, ಸಾಹಿತ್ಯ, ಸಂಸ್ಕೃತಿಗಳ ಉತ್ಕೃಷ್ಟವಾದ ಚಿತ್ರಣವನ್ನು ನೀಡುವ ಈ ಕೃತಿ ವೀರಶೈವರಿಗಷ್ಟೇ ಅಲ್ಲದೆ ಇತರರಿಗೂ ಆದರಣೀಯವಾಗಬಲ್ಲದು ಎಂಬುದನ್ನು ಪ್ರಸ್ತಾವನೆಯಲ್ಲಿ ಬಸವಾರಾಧ್ಯರೇ ತಿಳಿಸಿದ್ದಾರೆ. 'ಕೇವಲ ಬೃಹತ್ತಿನಿಂದಷ್ಟೇ ಅಲ್ಲದೆ ಮಹತ್ತಿನಿಂದಲೂ ಇದು ಮಿಗಿಲಾದ ಕೃತಿ. ಇಹಪರ ಸಾಧನವಾದ ಏಕೈಕ ಮಹತ್ಕೃತಿಯನ್ನು ರಚಿಸಿದ ನೀಲಕಂಠಾಚಾರ್ಯ ಕೃತಾರ್ಥನಾಗಿದ್ದಾನೆ' ಎಂದಿದ್ದಾರೆ. ಪಂಡಿತಾರಾಧ್ಯರನ್ನು ಕುರಿತು ರಚಿತವಾಗಿರುವ ತೆಲುಗು ಕನ್ನಡ ಮತ್ತು ಸಂಸ್ಕೃತ ಭಾಷೆಯ ಕೃತಿಗಳನ್ನು ತೌಲನಿಕವಾಗಿ ಅಧ್ಯಯನಕ್ಕೆ ಒಳಪಡಿಸುವ ಮೂಲಕ ಕೃತಿಯ ಓದುಗರಿಗೆ ಮತ್ತಷ್ಟು ವಿವರವಾದ ಮಾಹಿತಿಯನ್ನು ಒದಗಿಸಿಕೊಟ್ಟಿದ್ದಾರೆ. ಉದ್ಯೋಗಸಾರ ಇವರು ಸಂಪಾದಿಸಿದ ಮತ್ತೊಂದು ಕೃತಿ. ಇದು ಸಂಸ್ಕೃತಿ, ಇತಿಹಾಸ, ಭಾಷಾಚರಿತ್ರೆಗಳ ಸಮಗ್ರ ಅರಿವನ್ನು ಶಾಸ್ತ್ರೀಯವಾಗಿ ಒದಗಿಸಿಕೊಡುವ ಕೃತಿಯಾಗಿದೆ.

೧೯೭೬ರಲ್ಲಿ ಪ್ರಕಟವಾದ ಹಳಗನ್ನಡ ನಿಘಂಟು ಸುಮಾರು ೩೯ ಹಸ್ತಪ್ರತಿಗಳ ಸಹಾಯದಿಂದ ಶಾಸ್ತ್ರೀಯವಾಗಿ ಪರಿಷ್ಕಾರವಾಗಿ ಪ್ರಕಟವಾದ ಮೇರುಕೃತಿ. ರನ್ನಕಂದ, ಕರ್ನಾಟಕ ಶಬ್ದಸಾರ, ಕರ್ನಾಟಕ ನಿಘಂಟು, ಚತುರಾಸ್ಯನಿಘಂಟು, ಕಬ್ಬಿಗರ ಕೈಪಿಡಿ, ಕರ್ನಾಟಕಶಬ್ದಮಂಜರಿ, ಕರ್ನಾಟಕಭಾರತ ನಿಘಂಟು, ಕವಿಕಂಠಹಾರ, ಶಬ್ದಾರ್ಥಕೋಶ, ಕರ್ನಾಟಕ ಸಂಜೀವನಂ ಎಂಬ ಹತ್ತು ಪ್ರಾಚೀನ ಕನ್ನಡ ನಿಘಂಟುಗಳು ಈ ಕೃತಿಯಲ್ಲಿ ಸೇರ್ಪಡೆಯಾಗಿವೆ. ಎನ್. ಬಸವಾರಾಧ್ಯರು 'ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನ ಸಂಪಾದಕನಾಗಿದ್ದಾಗ ಈ ಸಂಪುಟದಲ್ಲಿ ಸೇರ್ಪಡೆಯಾಗಿರುವ ನಿಘಂಟುಗಳ ಅವಲೋಕನವನ್ನು ಮೇಲಿಂದ ಮೇಲೆ ಮಾಡಬೇಕಾದ ಪ್ರಸಂಗ ಒದಗಿತು. ಆಗ ಈ ಕೆಲಸವು ನಿಘಂಟುಗಳಲ್ಲಿನ, ಅವುಗಳ ಟೀಕೆಗಳಲ್ಲಿನ ಅಸಂಗತಗಳನ್ನು, ಅಶುದ್ಧ ರೂಪಗಳನ್ನು, ಅಲಭ್ಯ ಪ್ರಸಂಗಗಳನ್ನು ಮನಗಂಡು ಈ ನಿಘಂಟುಗಳ ಅಧಿಕೃತ ಪರಿಷ್ಕರಣ ಒಂದನ್ನು ಹೊರತರಬೇಕೆಂಬ ಬಯಕೆ ಅಂಕುರಿಸಿತು' ಎಂದಿದ್ದಾರೆ.

ಅವರಲ್ಲಿ ಹುಟ್ಟಿದ ಇಂತಹ ಒಂದು ಬಯಕೆ ಕನ್ನಡ ಸಾಹಿತ್ಯ ಲೋಕಕ್ಕೆ 'ಹಳೆಗನ್ನಡ ನಿಘಂಟು' ಎಂಬ ಮೇರು ಕೃತಿಯನ್ನು ಕೊಡುಗೆಯಾಗಿ ನೀಡಿತು.

ಪೆಮ್ಮಿಶೆಟ್ಟಿ ಎಂಬ ಕವಿ ರಚಿಸಿರುವ ಗುರುಭಕ್ತಾಂಡಾರಿ ಚರಿತೆಯನ್ನು ಬಸವಾರಾಧ್ಯರು ೧೯೬೯ರಲ್ಲಿ ಸಂಪಾದಿಸಿ ಪ್ರಕಟಿಸಿದರು. ಪಾಲ್ಕುರಿಕೆ ಸೋಮೇಶ್ವರನು ರಚಿಸಿರುವ ಪಂಡಿತಾರಾಧ್ಯ ಚರಿತ್ರೆಯನ್ನು ಮೂಲವಾಗಿಟ್ಟುಕೊಂಡು ರಚಿಸಿರುವ ಗುರುಭಕ್ತಾಂಡಾರಿ ಕಥೆ ಕನ್ನಡ ಕಾವ್ಯಗಳಲ್ಲಿ ಮಹಾಕಾವ್ಯವಲ್ಲದಿದ್ದರೂ ಶೃಂಗಾರ ಭರಿತ ಭಕ್ತಿ ಕಾವ್ಯವೆನಿಸಿಕೊಂಡಿದೆ.

೧೯೭೮ರಲ್ಲಿ ಪ್ರಕಟವಾದ ಲೇಖನ ಸಂಚಯ ಬಸವಾರಾಧ್ಯರು ಬರೆದಿರುವ ೧೩ ಲೇಖನಗಳನ್ನು ಒಳಗೊಂಡಿದೆ. ಇದರಲ್ಲಿ ಬಸವ ಪೂರ್ವದ ಕೆಲವು ಶರಣರು, ಬಸವಣ್ಣನವರ ಭಕ್ತಿ ಯೋಗ, ಕಾಯಕದ ಕಲೆ, ಮಡಿವಾಳ ಮಾಚಯ್ಯ, ಬುದ್ಧ ಬಸವ ಗಾಂಧಿ, ಹಳಗನ್ನಡ ಕಾವ್ಯಗಳು ಮತ್ತು ನಾಟಕ, ಕನ್ನಡ ಕಾವ್ಯಗಳಲ್ಲಿ ಸಂಪ್ರದಾಯ ಮತ್ತು ಪ್ರತಿಭಟನೆ ಮೊದಲಾದ ಲೇಖನಗಳನ್ನು ಈ ಕೃತಿ ಒಳಗೊಂಡಿದೆ. ಇಷ್ಟೇ ಅಲ್ಲದೆ ಬಸವಾರಾಧ್ಯರು ನಾಡಿನ ಬೇರೆ ಬೇರೆ ನಿಯತಕಾಲಿಕಗಳಲ್ಲಿ ಸುಮಾರು ೭೫ ಹೆಚ್ಚು ಲೇಖನಗಳನ್ನು ಪ್ರಕಟಿಸಿದ್ದಾರೆ.

''ಗ್ರಂಥಸಂಪಾದನೆ ನಿಘಂಟುಶಾಸ್ತ್ರ ಕ್ಷೇತ್ರಗಳಲ್ಲಿ ಇನ್ನೂ ಸಾಕಷ್ಟು ಕೆಲಸಗಳು ನಡೆಯಬೇಕಿದೆ. ಕನ್ನಡ ನಿಘಂಟಿಗೆ ಒಂದು ಸಾವಿರ ವರ್ಷದ ಇತಿಹಾಸವೇ ಇದೆ. ಆದರೆ ಇದರಲ್ಲಿ ಆಸಕ್ತಿ ತೋರುವವರು ತೀರಾ ಕಡಿಮೆ. ವೆಬ್‌ಸ್ಟರ್, ಆಕ್ಸ್ ಫರ್ಡ್, ರಾಂಡಮ್ ಹೌಸ್ ನ ನಿಘಂಟಿನ ಅನೇಕ ಮುದ್ರಣಗಳು ಬಂದಿವೆ. ಸಿನೋನಿಮ್ಸ್ ಡಿಕ್ಷನರಿ, ಬಯೋಗ್ರಾಫಿಕಲ್ ಡಿಕ್ಷನರಿ, ಜಿಯೋಗ್ರಾಫಿಕಲ್ ಡಿಕ್ಷನರಿ, ಅಂಟೋನಿಮ್ಸ್ ಡಿಕ್ಷನರಿ, ಟರ್ಮ್ಸ್ ಡಿಕ್ಷನರಿ ತರಹ ಕನ್ನಡದಲ್ಲಿ ಬರಬೇಕಾಗಿದೆ. ಇನ್ನು ಅಪ್ರಕಟಿತ ಕೃತಿಗಳು ಕನ್ನಡದಲ್ಲಿ ಸಹಸ್ರಾರು ಇವೆ. ಮೊದಲು ಆ ಕೃತಿಗಳು ಅಚ್ಚಾಗಬೇಕು. ನಾಶವಾಗುವ ಮುನ್ನ ನಾಡಿನಾದ್ಯಂತ ಹರಡಿರುವ ಹಸ್ತಪ್ರತಿಗಳು ಸಂಗ್ರಹ ಗೊಳ್ಳಬೇಕು'' ಎಂಬುದು ಈ ಕ್ಷೇತ್ರದ ತಜ್ಞರಾಗಿ ಬಸವಾರಾಧ್ಯರು ವ್ಯಕ್ತಪಡಿಸಿರುವ ಕಳಕಳಿಯ ಮಾತು.

ಹೀಗೆ ಹಳಗನ್ನಡ ಸಾಹಿತ್ಯ ಮತ್ತು ನಿಘಂಟು ಕ್ಷೇತ್ರದಲ್ಲಿ ಅಪಾರವಾದ ಕೊಡುಗೆ ನೀಡಿದ ವಿದ್ವನ್ಮಣಿ ಬಸವಾರಾಧ್ಯರು ೨೦೧೩ ಡಿಸೆಂಬರ್ ೬ರಂದು ತಮ್ಮ

ಅಲನೇ ವಯಸ್ಸಿನಲ್ಲಿ ಇಹಲೋಕ ತ್ಯಜಿಸಿದರು. ಕನ್ನಡ ಸಾಹಿತ್ಯ ಲೋಕಕ್ಕೆ ಅವರು ನೀಡಿದ ಕೊಡುಗೆಯಿಂದ ಕನ್ನಡ ಪಂಡಿತ ಪರಂಪರೆಯಲ್ಲಿ ಅವರು ಹೆಸರು ಅಮರವಾಗಿದೆ.

ಪರಾಮರ್ಶನ ಗ್ರಂಥಗಳು

೧. ಮಹಾಮಾರ್ಗ, ಸದಾನಂದ ಕನವಳ್ಳಿ, ವೀರಣ್ಣ ರಾಜೂರ (ಸಂ.), ವೀರಶೈವ ಅಧ್ಯಯನ ಸಂಸ್ಥೆ, ಗದಗ ಹಾಗೂ ವೀರಶೈವ ಅಧ್ಯಯನ ಅಕಾಡೆಮಿ, ಬೆಳಗಾವಿ, ೧೯೯೮.

೨. ಹೊಸಗನ್ನಡ ಅರುಣೋದಯ, ಶ್ರೀನಿವಾಸ ಹಾವನೂರು, ಮೈಸೂರು ವಿಶ್ವವಿದ್ಯಾನಿಲಯ,೧೯೭೪

೩. ಪ್ರಾಚೀನ ಕನ್ನಡ ಗ್ರಂಥಸಂಪಾದನೆ (೨೦ನೆಯ ಶತಮಾನದಲ್ಲಿ), ಬಿ.ಎಸ್. ಸಣ್ಣಯ್ಯ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೦.

❐ ❐ ❐

ಶ್ರೀನಿವಾಸ ಹಾವನೂರ

(೧೯೨೭–೨೦೧೦)

ಬಿ. ವೆಂಕಟರಾಮಣ್ಣ

ಶ್ರೀನಿವಾಸ ಹಾವನೂರರು ಈ ನಾಡು ಕಂಡ ಅಪರೂಪದ ಸಂಶೋಧಕರು. ಸಂಶೋಧನೆ ಮಾತ್ರವಲ್ಲದೆ ಸಾಹಿತ್ಯ ರಚನೆ, ಗ್ರಂಥಾಲಯ ಅಭಿವೃದ್ಧಿ, ಹೊಸಗನ್ನಡ ಸಾಹಿತ್ಯದ ಉಗಮ ಕುರಿತು ಕೃತಿರಚನೆ– ಹೀಗೆ ಹಲವು ಕ್ಷೇತ್ರಗಳಲ್ಲಿ ಕೃಷಿಮಾಡಿದವರು. ಇದಲ್ಲದೆ ಕಾದಂಬರಿ, ಸಣ್ಣಕತೆ, ವಿಮರ್ಶೆ, ಪ್ರಬಂಧ–ಹರಟೆ, ಗ್ರಂಥಸಂಪಾದನೆ, ಅಂಕಣ ಬರೆಹ, ವ್ಯಕ್ತಿಚಿತ್ರ, ಅನುಭಾವಸಾಹಿತ್ಯ, ಅನುವಾದ ಮೊದಲಾದ ಪ್ರಕಾರಗಳಲ್ಲೂ ಅವರು ತಮ್ಮ ಛಾಪು ಮೂಡಿಸಿದ್ದಾರೆ.

'ಹಾವನೂರ' ಎಂಬ ಅಡ್ಡ ಹೆಸರು ಇದ್ದರೂ ಶ್ರೀನಿವಾಸರು ಮೂಲತಃ ಗಲಗಲಿ ಮನೆತನದವರು. ೧೭ನೇ ಶತಮಾನದಲ್ಲಿ ಜೀವಿಸಿದ್ದ ಶ್ರೀಪತಿರಾಯ ಮತ್ತು ನರಸಿಂಗರಾಯ ಎಂಬ ಸಹೋದರರು ಈ ಮನೆತನದ ಮೂಲಪುರುಷರೆಂದು ಐತಿಹ್ಯ. ಮೊದಲಿಗೆ ಗಲಗಲಿಯಲ್ಲಿದ್ದ ಇವರ ವಂಶಜರು ೧೯ನೇ ಶತಮಾನದ ಆದಿಭಾಗದಲ್ಲಿ ತುಂಗಭದ್ರಾ ನದಿಯ ದಂಡೆಯ ಮೇಲೆ ಪುಟ್ಟ ಗ್ರಾಮವಾದ ಹಾವನೂರಿಗೆ ಬಂದು ನೆಲಸಿದರು. ನರಸಿಂಗಾಚಾರ್ಯ ಗಲಗಲಿ–ರಮಾಬಾಯಿ ದಂಪತಿಗಳಿಗೆ ೧೪ ಜನ ಮಕ್ಕಳು. ಶ್ರೀನಿವಾಸ ಹಾವನೂರರು ಅವರಲ್ಲಿ ಹಿರಿಯರು. ಇವರು ೧೯೨೭ರ ಡಿಸೆಂಬರ್ ೨೪ರಂದು (ಸರ್ಕಾರಿ ದಾಖಲೆಗಳ ಪ್ರಕಾರ ೧೯೨೯ ಜನವರಿ ೧೨) ಜನಿಸಿದರು. ಶ್ರೀನಿವಾಸ ಹಾವನೂರರ ಮತ್ತೊಂದು ಹೆಸರು ಶ್ರೀನಿವಾಸ ಐರಣಿ. ಶ್ರೀನಿವಾಸರನ್ನು ಐರಣಿ ಮನೆತನದವರು ದತ್ತು ಪಡೆದರು. ಹಾಗಾಗಿ ಇವರು ಯಮುನಾಬಾಯಿಯವರ ದತ್ತಪುತ್ರರು. ಶ್ರೀನಿವಾಸರು ತಮ್ಮ ತಂದೆ ನಡೆಸುತ್ತಿದ್ದ ಖಾಸಗಿ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದ ಮೇಲೆ ಹಾವೇರಿಯ ಮುನಿಸಿಪಲ್ ಹೈಸ್ಕೂಲ್‌ಗೆ ಸೇರಿದರು. ಹಲವರ ಮನೆಯಲ್ಲಿ

ವಾರಾನ್ನವನ್ನು ಮಾಡಿಕೊಂಡು ಓದುತ್ತಿದ್ದರಾದರೂ ಶಾಲೆಯ ಶುಲ್ಕ ಕಟ್ಟಲು ಹಣವಿಲ್ಲದಿದ್ದುದರಿಂದ ಎರಡನೆಯ ಟರ್ಮಿನಲ್ಲಿ ಇವರ ಓದು ಹಾವೇರಿಯಿಂದ ಧಾರವಾಡದ ಕರ್ನಾಟಕದ ಹೈಸ್ಕೂಲ್‌ಗೆ ಬದಲಾಯಿತು. ನೆಗಳೂರು ರಂಗನಾಥ, ಎನ್.ಪಿ. ಕುಲಕರ್ಣಿ ಮೊದಲಾದ ಶಿಕ್ಷಕರ ಪ್ರೋತ್ಸಾಹದ ಫಲವಾಗಿ ಹಾವನೂರ ಅವರಲ್ಲಿಲ್ಲಿ ಸಾಹಿತ್ಯಕ ಚಟುವಟಿಕೆಗಳ ಕಡೆಗೆ ಒಲವು ಮೂಡಿತು.

ಅನಂತರ ಕರ್ನಾಟಕ ಕಾಲೇಜಿನಲ್ಲಿದ್ದಾಗ ಸ.ಸ. ಮಾಳವಾಡ, ಮಳಗಿ ಶ್ರೀರಂಗನಾಥರಂತಹ ಹಿರಿಯರ ಮಾರ್ಗ ದರ್ಶನದಲ್ಲಿ ಸಾಹಿತ್ಯದ ಬಗ್ಗೆ ಆಸಕ್ತಿ ಹೆಚ್ಚಾಯಿತು. ಮುಂದೆ ಓದಲು ಬಡತನ ಅಡ್ಡಿ ಬಂದದ್ದರಿಂದ ಗುರುಗಳಾದ ಶ್ರೀರಂಗರು ವಿದ್ಯಾವರ್ಧಕ ಸಂಘದ ಗ್ರಂಥಾಲಯದಲ್ಲಿ(೧೯೪೫) ೫೫ ರೂಪಾಯಿ ಸಂಬಳಕ್ಕೆ ಒಪ್ಪೊತ್ತಿನ ಕೆಲಸ ಕೊಡಿಸಿದರು. ಗ್ರಂಥಾಲಯದಲ್ಲಿದ್ದಾಗ ಇವರಿಗೆ ಓದಲು ಬೇಕಾದಷ್ಟು ಪುಸ್ತಕಗಳು ದೊರೆತುವು. ಇಲ್ಲಿ ನೌಕರಿ ಮಾಡುತ್ತಾ ಬಿ.ಎ. ಅಧ್ಯಯನ ಮುಂದುವರಿಸಿದರು. ಒಮ್ಮೆ ರಂ.ಶ್ರೀ. ಮುಗಳಿಯವರು ಧಾರವಾಡದಲ್ಲಿ ಮಾಡಿದ ಭಾಷಣದಿಂದ ಪ್ರಭಾವಿತರಾದ ಹಾವನೂರರು ಮುಗಳಿಯವರಿದ್ದ ಸಾಂಗ್ಲಿಯ ವಿಲ್ಲಿಂಗ್ಟನ್ ಕಾಲೇಜಿನಲ್ಲಿ ಓದು ಮುಂದುವರಿಸಲು ತೆರಳಿದರು. ಆ ಸಮಯದಲ್ಲಿ ಕಾಲೇಜು ಶುಲ್ಕವನ್ನು ಮುಗಳಿಯವರೇ ತುಂಬಿದರಲ್ಲದೆ ವಿದ್ಯಾರ್ಥಿನಿಲಯದಲ್ಲಿ ಮೇಲ್ವಿಚಾರಣೆಯ ಕೆಲಸವನ್ನು ಕೊಡಿಸಿದರು. ಮುಗಳಿಯವರ ಮನೆಯಲ್ಲೇ ಊಟ. ಬಿ.ಎ. ಆನರ್ಸ್‌ನಲ್ಲಿ ಪ್ರಥಮ ದರ್ಜೆಯಲ್ಲಿ ಇವರು ಪಾಸಾದ್ದರಿಂದ ವಿದ್ಯಾರ್ಥಿನಿಲಯದ ಸೂಪರಿಂಟೆಂಡೆಂಟ್ ಕೆಲಸದ ಜೊತೆಗೆ ಇಂಗ್ಲಿಷ್ ಟ್ಯೂಟರ್ ಜವಾಬ್ದಾರಿಯು ಹಾವನೂರರಿಗೆ ದೊರೆಯಿತು. ಬಿ.ಎ. ಮುಗಿದ ಮೇಲೆ ವಿದ್ಯಾವರ್ಧಕ ಸಂಘದ ಹಾಗೂ ವಿಲ್ಲಿಂಗ್ಟನ್ ಕಾಲೇಜು ಲೈಬ್ರರಿಗಳನ್ನು ನೋಡಿ ಆಕರ್ಷಿತರಾಗಿದ್ದ ಇವರು ಲೈಬ್ರರಿ ಕೊರ್ಸ್ ಮಾಡಲು ನಿರ್ಧರಿಸಿದರು. ಎರಡು ವರ್ಷಗಳ ಸಾಂಗ್ಲಿಯ ವಾಸ್ತವ್ಯ ಮುಗಿಯುತ್ತಾ ಬಂದಂತೆ ಆ ಕಾಲಕ್ಕೆ ಲೈಬ್ರರಿ ಕ್ಷೇತ್ರದಲ್ಲಿ ಖ್ಯಾತನಾಮರಾಗಿದ್ದ ಕನ್ನಡಿಗರೇ ಆದ ಡಾ.ಎಸ್.ಆರ್. ರಂಗನಾಥನ್ ಅವರು ದೆಹಲಿಯಲ್ಲಿಯೇ ಲೈಬ್ರರಿ ಕೋರ್ಸ್ ಆರಂಭಿಸಬೇಕೆಂದು ಪ್ರಯತ್ನಿಸಿದರೂ ಅದು ಕೈಗೂಡಲಿಲ್ಲ. ೧೯೪೮ರಲ್ಲಿ ಮುಂಬೈನ ಪ್ರತಿಷ್ಠಿತ ಕನ್ನಡ ಸಂಘವಾದ ಮೈಸೂರು ಅಸೋಸಿಯೇಷನ್ ಆ ವೇಳೆಗೆ ನ್ಯಾಷನಲ್ ಕನ್ನಡ

ಎಜುಕೇಷನ್ ಸೊಸೈಟಿ ವತಿಯಿಂದ ಹೈಸ್ಕೂಲ್ ನಡೆಸುತ್ತಿತ್ತು. ಅಲ್ಲಿ ಹಾವನೂರರಿಗೆ ಕನ್ನಡ ಮಾಸ್ತರಾಗಿ ಉದ್ಯೋಗ ದೊರಕಿತು.

ಶ್ರೀನಿವಾಸ ಹಾವನೂರರಿಗೆ ಮುಂಬೈ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್ ಸಂಸ್ಥೆಯಲ್ಲಿ ಗ್ರಂಥಪಾಲಕರ ಹುದ್ದೆ ದೊರೆಯಿತು. ಈ ಅವಧಿಯಲ್ಲಿ ಅವರು ಪಿಎಚ್.ಡಿ. ಅಧ್ಯಯನದಲ್ಲಿ ತೊಡಗಿಸಿಕೊಂಡರು. ೧೯೪೮–೧೯೬೨ರ ಅವಧಿಯಲ್ಲಿ ಹಾವನೂರರು ಐದಾರು ಅಲ್ಪಾವಧಿಯ ನೌಕರಿಗಳನ್ನು ಮಾಡಬೇಕಾದ ಪರಿಸ್ಥಿತಿ ಒದಗಿತ್ತು. ಹಗಲು ಎನ್.ಕೆ.ಇ.ಎಸ್.ನಲ್ಲಿ ರಾತ್ರಿ ಪೋರ್ಟ್ ಫ್ರೀ ನೈಟ್ ಹೈಸ್ಕೂಲಿನಲ್ಲಿ ಕನ್ನಡ ಮಾಸ್ತರಿಕೆ, ಮಧ್ಯೆಮಧ್ಯೆ ಆಕಾಶವಾಣಿಯಲ್ಲಿ ಕಾರ್ಯಕ್ರಮದ ನಿರೂಪಣೆ, ಫ್ರೀಪ್ರೆಸ್ ಜರ್ನಲ್‌ನಲ್ಲಿ ಕನ್ನಡ ಪತ್ರಿಕೋದ್ಯಮದ ಕೆಲಸ, ಕೇಂದ್ರ ಸರ್ಕಾರದ ಸೇಲ್ಸ್ ಇಲಾಖೆಯ ಮುಂಬೈ ಶಾಖೆಯಲ್ಲಿ ಜೂನಿಯರ್ ಆಡಿಟರ್ ಮುಂತಾದ ಹಲವು ನೌಕರಿಗಳನ್ನು ಮಾಡಿದ್ದಾರೆ.

ಇದೇ ವೇಳೆಯಲ್ಲಿ ಅವರಿಗೆ ರಾಮಚಂದ್ರ ಉಚ್ಚಿಲ, ವ್ಯಾಸರಾಯ ಬಲ್ಲಾಳ, ಬಿ.ಎಸ್. ತುಂಗಾ, ಹನುಮೇಳ ಆಚಾರ್, ಎಂ.ವಿ. ಕಾಮತ್, ಹೆಚ್. ಸೋಮನಾಥ, ರಾಮಚಂದ್ರರಾವ್ ಮೊದಲಾದ ಉತ್ಸಾಹಿ ಕನ್ನಡ ಕಾರ್ಯಕರ್ತರ ಪರಿಚಯವಾಯಿತು. ಇವರೆಲ್ಲರ ಪ್ರೇರಣೆ–ಪ್ರೋತ್ಸಾಹದಿಂದ ೧೯೪೭ರಲ್ಲಿ 'ನುಡಿ' ಎಂಬ ಕನ್ನಡ ಸಾಪ್ತಾಹಿಕದ ಪ್ರಕಟನೆಯಲ್ಲಿ ಹಾವನೂರರು ಆಸಕ್ತಿಯಿಂದ ತೊಡಗಿಸಿಕೊಳ್ಳುವಂತಾಯಿತು.

ಸೇಲ್ಸ್ ಟ್ಯಾಕ್ಸ್ ಇಲಾಖೆಯಲ್ಲಿ ಇನ್‌ಸ್ಪೆಕ್ಟರ್ ಆಗಿದ್ದಾಗ ಇವರು ಸಂಜೆ ತರಗತಿಗಳಿಗೆ ಹೋಗಿ ಲೈಬ್ರರಿ ಕೋರ್ಸನ್ನು ಮುಗಿಸಿಕೊಂಡರು. ೧೯೫೬ರಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಗ್ರಂಥಾಲಯ ಸಹಾಯಕರಾಗಿ ಕೆಲಸಕ್ಕೆ ಸೇರಿದರಾದರೂ ಅದು ಸರಿಬಾರದೇ ಹೋದಾಗ ಮುಂಬೈನ ಟಾಟಾ ಇನ್‌ಸ್ಟಿಟ್ಯೂ ಟ್ ಆಫ್ ಫಂಡಮೆಂಟಲ್ ರಿಸರ್ಚ್‌ನಲ್ಲಿ ಸಹಾಯಕ ಗ್ರಂಥಪಾಲಕರಾಗಿ ಸೇರಿ ಕೊಂಡರು. ಕನ್ನಡ ಎಂ.ಎ. ಪದವಿಯನ್ನು ಕರ್ನಾಟಕ ವಿಶ್ವವಿದ್ಯಾಲಯದಲ್ಲಿದ್ದಾಗಲೇ ಪಡೆದುಕೊಂಡಿದ್ದರು. ಅನಂತರ ರಂ.ಶ್ರೀ ಮುಗಳಿ ಅವರ ಮಾರ್ಗದರ್ಶನ ದಲ್ಲಿ(೧೯೫೦) ೧೯ನೇ ಶತಮಾನದ ಕನ್ನಡ ಸಾಹಿತ್ಯವನ್ನು

ಕುರಿತು ಮಹಾಪ್ರಬಂಧವನ್ನು ರಚಿಸಿ ಪೂನಾ ವಿಶ್ವವಿದ್ಯಾಲಯದಿಂದ ೧೯೬೩ರಲ್ಲಿ ಪಿಎಚ್.ಡಿ. ಪದವಿಯನ್ನು ಪಡೆದರು.

೧೯೮೨ರಲ್ಲಿ ಮಂಗಳೂರಿನಲ್ಲಿ ಪ್ರಾರಂಭವಾದ ವಿಶ್ವವಿದ್ಯಾಲಯಕ್ಕೆ ಡಾ.ಹಾ.ಮಾ. ನಾಯಕರ ಪ್ರೇರಣೆ–ಪ್ರೋತ್ಸಾಹ ಗಳಿಂದ ಅಲ್ಲಿಯ ಕನ್ನಡ ವಿಭಾಗದ ಪ್ರಾಧ್ಯಾಪಕರಾದರು. ಈ ಸಂದರ್ಭದಲ್ಲಿ ಮಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗವನ್ನು ಮಾದರಿಯಾಗಿ ಬೆಳೆಸಬೇಕೆಂಬ ಮಹತ್ತ್ವಾಕಾಂಕ್ಷೆಯ ಕನಸನ್ನು ಇಟ್ಟುಕೊಂಡು ಹಾವನೂರರು ಹಲವಾರು ರಚನಾತ್ಮಕ ಯೋಜನೆಗಳನ್ನು ರೂಪಿಸಿ ಕಾರ್ಯರೂಪಕ್ಕೆ ತಂದರು. ಕೇಂದ್ರ ಸರ್ಕಾರದ ಸಂಸ್ಕೃತ ಇಲಾಖೆ, ಪತ್ರಾಗಾರ ಇಲಾಖೆಗಳ ಹಸ್ತಪ್ರತಿ ಸಂರಕ್ಷಣೆ ಹಾಗೂ ಪ್ರಕಟನಾ ಯೋಜನೆಗಳ ಆರ್ಥಿಕ ನೆರವನ್ನು ಕನ್ನಡ ವಿಭಾಗಕ್ಕೆ ಒದಗಿಸುವಲ್ಲಿ ಯಶಸ್ವಿಯಾದರು.

ಈ ಯೋಜನೆಯಲ್ಲಿ ವೆಂಕಟರಾಜು ಪುಣಿಂಚತ್ತಾಯರು ಸಂಪಾದಿಸಿದ ತುಳುವಿನ ಮೊತ್ತಮೊದಲ ಕಾವ್ಯ ಎಂದು ಗುರುತಿಸಲ್ಪಟ್ಟಿರುವ 'ಶ್ರೀ ಭಾಗವತೋ' ಮಹಾಕಾವ್ಯವನ್ನು ಪ್ರಕಟಿಸಿದರು. ಹಳೆಯ ತಾಡವೋಲೆ, ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ, ಪ್ರಕಟನೆಯ ಯೋಜನೆಗಳ ಜೊತೆಗೆ ಅವುಗಳ ಸೂಚಿಯನ್ನು ಸಿದ್ಧಗೊಳಿಸುವ ನಿಟ್ಟಿನಲ್ಲಿಯೂ ಯೋಜನೆಗಳನ್ನು ರೂಪಿಸಿದರು. ಇವಲ್ಲದೆ ಕನ್ನಡ, ತುಳು, ಕೊಡವ ಭಾಷೆ ಸಾಹಿತ್ಯ, ಕಲೆ, ಸಂಸ್ಕೃತಿ ಈ ಮೊದಲಾದ ವಿಷಯಗಳ ಕುರಿತು ನಡೆದಿರುವ ಅಧ್ಯಯನಗಳಿಗೆ ಸಂಬಂಧಿಸಿದ ಮಾಹಿತಿಗಳ ಕಡತಗಳನ್ನು ಸಿದ್ಧಗೊಳಿಸಿ ವಿಭಾಗ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರವನ್ನು ಸ್ಥಾಪಿಸಿದರು.

ಕನ್ನಡದ ಅಪೂರ್ವ ಪತ್ರಿಕೆಗಳಾದ 'ಸ್ವದೇಶಾಭಿಮಾನಿ', 'ವಸಂತ', 'ಜೀವನ', 'ಶ್ರೀಕೃಷ್ಣಸೂಕ್ತಿ', 'ಕನ್ನಡ ಸಹಕಾರಿ' ಇಂಥ ಅನೇಕ ಪತ್ರಿಕೆಗಳ ಹಳೆಯ ಸಂಪುಟಗಳು, ಕನ್ನಡ ಬರೆಹಗಾರರ ಬಗೆಗಿನ ಹಳೆಯ ಪತ್ರಿಕಾ ತುಣುಕುಗಳನ್ನು ಸಂಗ್ರಹಿಸಿ ಜೋಡಿಸಿರುವ ದಿ. ಚಂದ್ರರಾಜಶೆಟ್ಟಿಯವರ ಕನ್ನಡ ಬರಹಗಾರರ ಬಳಗದ ಸಂಪುಟಗಳು, ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳ ಪ್ರಸಾರಾಂಗದ ಪ್ರಕಟನೆಗಳು, ಲಂಡನ್ನಿನ ಬ್ರಿಟಿಷ್ ಲೈಬ್ರರಿಯಿಂದ ತರಿಸಿಕೊಂಡ ಕನ್ನಡ, ತುಳು, ಭಾಷೆ, ಸಾಹಿತ್ಯ, ಸಂಸ್ಕೃತಿ ಹಾಗೂ ಪತ್ರಿಕೆಗಳಿಗೆ ಸಂಬಂಧಿಸಿದ ಅಪೂರ್ವ ಲೇಖನಗಳಿರುವ ಸಂಚಿಕೆಗಳ ನೆರಳು ಪ್ರತಿಗಳು– ಹೀಗೆ ವಿಶೇಷವೂ ವಿಶಿಷ್ಟವೂ

ಆದ ಮಾಹಿತಿ ಆಕರಗಳನ್ನು ಸಂಗ್ರಹಿಸಿ ವಿಭಾಗೀಯ ಗ್ರಂಥಾಲಯವನ್ನು ವಿಸ್ತರಿಸಿದರು.

ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಗಳ ಅನೇಕ ಊರುಗಳಿಗೆ ಹೋಗಿ ಶಾಸನ, ನಾಣ್ಯಗಳಲ್ಲದೆ ಭೂತಾರಾಧನೆ, ಯಕ್ಷಗಾನ, ಕೃಷಿಗೆ ಸಂಬಂಧಿಸಿದ ಮತ್ತು ತುಳು, ಕೊಡವ ಸಂಸ್ಕೃತಿಗೆ ಸಂಬಂಧಿಸಿದ ಇನ್ನಿತರ ವಸ್ತುಸಾಮಗ್ರಿಗಳನ್ನು ಉತ್ಖನನದ ಮೂಲಕ ಸಂಗ್ರಹಿಸಿ ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳ ಸಾಂಸ್ಕೃತಿಕ ವಸ್ತುಸಂಗ್ರಹಾಲಯವನ್ನು ಆರಂಭಿಸಿದರು.

ಕನ್ನಡ ಸಂಶೋಧನೆಯ ವಿಧಿವಿಧಾನಗಳು, ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು ಕುರಿತಂತೆ ಅವರು ನಡೆಸಿದ ವಿಚಾರ ಸಂಕಿರಣಗಳು, ಕಮ್ಮಟಗಳು, ವಿಭಾಗದ ಚರಿತ್ರೆಯಲ್ಲಿ ಮಾತ್ರವಲ್ಲ, ಕನ್ನಡ ಸಾಹಿತ್ಯ ಸಂಶೋಧನೆಯ ಚರಿತ್ರೆಯಲ್ಲಿ ಅಭೂತಪೂರ್ವ ಸ್ಮರಣೆಯಾಗಿ ಉಳಿದಿವೆ.

ಹಾವನೂರರು ಮುಂಬೈ ವಿಶ್ವವಿದ್ಯಾಲಯಕ್ಕೆ ಪ್ರಾಧ್ಯಾಪಕರಾಗಿ ಬರುವ ಮೊದಲು ವಿಭಾಗದ ಮುಖ್ಯಸ್ಥರಾಗಿದ್ದ ಸಿ.ಕೆ. ದೀಕ್ಷಿತರು ಅಲ್ಲಿಯ ಕನ್ನಡ ವಿಭಾಗವನ್ನು ಬೆಳೆಸಲು ಪ್ರಯತ್ನಿಸಿದರಾದರೂ ಅದು ನಿರೀಕ್ಷಿತ ಪ್ರಮಾಣದಲ್ಲಿ ಫಲ ನೀಡಿರಲಿಲ್ಲ. ೧೯೪೪ರಲ್ಲಿ ಹಾವನೂರರು ಅಲ್ಲಿಗೆ ಬಂದಮೇಲೆ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಾಯಿತು. ಎಂ.ಫಿಲ್. ತರಗತಿಗಳನ್ನು ಪ್ರಾರಂಭಿಸಿದರು, ಗ್ರಂಥಾಲಯ ಗಳನ್ನು ಅಭಿವೃದ್ಧಿಪಡಿಸಿದರು. ಹತ್ತಾರು ಮಂದಿ ಪಿಎಚ್.ಡಿ. ಪದವಿಯನ್ನೂ ಪಡೆದರು. ಖ್ಯಾತ ಸಂಶೋಧಕರಾದ ಭೀಮರಾವ್ ಚಿಟಗುಪ್ಪಿ ಯವರಿಗೆ ಈ ಅವಧಿಯಲ್ಲಿಯೇ ಡಿ.ಲಿಟ್. ಪದವಿಯೂ ದೊರೆಯಿತು.

ಆದ್ಯ ರಂಗಾಚಾರ್ಯರ 'ಭಾರತೀಯ ರಂಗಭೂಮಿ ಪರಂಪರೆ', ರಂ.ಶ್ರೀ. ಮುಗಳಿಯವರ 'ಮಹಾಕೃತಿ' ಎಂಬ ಎರಡು ಕೃತಿಗಳನ್ನು ಹಾವನೂರರು ವಿಭಾಗದ ವತಿಯಿಂದ ಪ್ರಕಟಿಸಿದರು. ಮರಾಠಿ–ಕನ್ನಡ ಸೌಹಾರ್ದಕ್ಕೆ ಸಂಬಂಧಿಸಿದಂತೆ ಹಲವು ವಿಚಾರ ಸಂಕಿರಣಗಳನ್ನು ಆಯೋಜಿಸಿ ಅದರಲ್ಲಿ ಮಂಡಿತವಾದ ಪ್ರಬಂಧಗಳನ್ನು ಶಿವಾಜಿ ಮಲ್ಲಮ್ಮಾಜಿ ಸಮರೋತ್ಸವ, ಮಹಾರಾಷ್ಟ್ರೀಯರ ದೃಷ್ಟಿಯಲ್ಲಿ ಕಾರಂತರ ಕಾದಂಬರಿಗಳು, ಮಹಾರಾಷ್ಟ್ರದಲ್ಲಿಯ ಕನ್ನಡ ಶಾಸನಗಳು ಮುಂತಾದ ಶೀರ್ಷಿಕೆ ಗಳಲ್ಲಿ ಗ್ರಂಥರೂಪದಲ್ಲಿ ಹೊರತಂದರು.

ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದಾಗ ಶ್ರೀನಿವಾಸರು ವಿಭಾಗದವತಿಯಿಂದ ಕನ್ನಡವನ್ನು ಕನ್ನಡೇತರರಿಗೆ ಕಲಿಸುವ ವ್ಯವಸ್ಥೆ ಮಾಡಿ ಸಫಲರಾದರು. ಇವರು ೧೯೮೯ರಲ್ಲಿ ಮುಂಬೈ ವಿಶ್ವವಿದ್ಯಾಲಯದಿಂದ ನಿವೃತ್ತರಾದರು.

ಹಾವನೂರರು ಪುಣೆಯಲ್ಲಿದ್ದಾಗ ಮರಾಠಿ–ಕನ್ನಡ ಸ್ನೇಹವರ್ಧನ ಕೇಂದ್ರದ ಉಪಾಧ್ಯಕ್ಷರಾಗಿ ಅದನ್ನು ಬೆಳೆಸಿದರು. ೧೯೯೫–೯೬ರ ವೇಳೆಗೆ ಕರ್ನಾಟಕ ಸರ್ಕಾರದ ಸಮಗ್ರ ಹರಿದಾಸ ಸಾಹಿತ್ಯ ಪ್ರಕಟನೆ ಯೋಜನೆಯ ಕಾರ್ಯನಿರ್ವಾಹಕ ಸಂಪಾದಕರ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಬೆಂಗಳೂರಿಗೆ ಬಂದರು. ೧೯೯೬ರಿಂದ ೨೦೦೨ರವರೆಗೆ ಬೆಂಗಳೂರಿನ ಮಿಥಿಕ್ ಸೊಸೈಟಿಯ ಗ್ರಂಥಾಲಯದ ಗೌರವ ನಿರ್ದೇಶಕರಾಗಿ, ೨೦೦೩ರಿಂದ ೨೦೦೫ರವರೆಗೆ ಮಂಗಳೂರಿನ ಕರ್ನಾಟಕ ಥಿಯೋಲಾಜಿಕಲ್ ಕಾಲೇಜಿನ ಸಂಶೋಧನ ಕೇಂದ್ರದಲ್ಲಿ ಗೌರವ ಸಂಶೋಧಕರಾಗಿ ಪಾ.ವೆಂ. ಆಚಾರ್ಯರ ಸಮಗ್ರ ಕೃತಿ ಸಂಪಾದನೆ ಕಾರ್ಯವನ್ನು ಯಶಸ್ವಿಯಾಗಿ ಪೂರೈಸಿದರು.

ಹಾವನೂರರು ಕನ್ನಡ ಭಾಷೆ ಮತ್ತು ಸಾಹಿತ್ಯಗಳ ಸಂಶೋಧನೆಗೆ ಹೊಸದೊಂದು ಆಯಾಮವನ್ನು ಕೊಟ್ಟವರು. ಇದಕ್ಕೆ ಪ್ರೇರಣೆಯಾದುದು ಅವರ ಪಿಎಚ್.ಡಿ. ಮಹಾಪ್ರಬಂಧವಾದ 'ಹೊಸಗನ್ನಡ ಅರುಣೋದಯ' ಹಾಗೂ 'ಕನ್ನಡ ಪುಸ್ತ ಕೋದ್ಯಮ', 'ಪತ್ರಿಕೋದ್ಯಮ', 'ಸಾಂಸ್ಕೃತಿಕ ಇತಿಹಾಸ' ಮುಂತಾದವುಗಳನ್ನು ಕುರಿತಂತೆ ಅವರು ರಚಿಸಿರುವ ಹಲವಾರು ಸಂಪ್ರಬಂಧಗಳು.

ಹೊಸಗನ್ನಡದ ಅರುಣೋದಯ ಸುಮಾರು ೧೦೦ ವರ್ಷಗಳಷ್ಟು ಸುದೀರ್ಘವಾದ ಇತಿಹಾಸವನ್ನು ಹೊಂದಿರುವ ಕನ್ನಡ ಸಾಹಿತ್ಯ ಪರಂಪರೆಯ ಸಮಗ್ರ ಚರಿತ್ರೆಯನ್ನು ಕುರಿತದ್ದಾಗಿದೆ. ೧೯ನೇ ಶತಮಾನದ ಸಾಹಿತ್ಯವನ್ನು ಕುರಿತು ಮುಗಳಿಯವರು ಮಾಡಿದ ಭಾಷಣವನ್ನು ಕೇಳಿ ಪ್ರಭಾವಿತರಾದ ಹಾವನೂರರು ಈ ಕುರಿತು ಹುಡುಕಾಟ ನಡೆಸಿದಾಗ ಸಿಕ್ಕಿದ್ದು ಲಂಡನ್ನಿನ ಬ್ರಿಟಿಷ್ ವಸ್ತುಸಂಗ್ರಹಾಲಯದಿಂದ ೧೯೧೦ರಲ್ಲಿ ಪ್ರಕಟವಾಗಿದ್ದ ಎಲ್.ಡಿ. ಬಾರ್‌ನೆಟ್ ಸಂಪಾದಿಸಿದ್ದ 'Catalogue of the Kannada Badaga and Coorg books in the library of British Museum' ಎಂಬ ಕೃತಿ. ಇದರಲ್ಲಿ ಕಲೆ, ವಿಜ್ಞಾನ, ಧರ್ಮ, ಇತಿಹಾಸ, ಕಾನೂನು ಮುಂತಾದ ಹಲವು ಹತ್ತು ಕ್ಷೇತ್ರಗಳಿಗೆ ಸಂಬಂಧಿಸಿದ ಸುಮಾರು ೧೫೦

ಕನ್ನಡ ಕೃತಿಗಳ ಸಮಗ್ರ ವಿವರಗಳಿವೆ. ಹಾವನೂರರು ಆ ಕಾಲಘಟ್ಟದ ಸಾಹಿತಿ–ಸಾಹಿತ್ಯಗಳನ್ನು ಕುರಿತಾದ ಆಮೂಲಾಗ್ರ ವಿಶ್ಲೇಷಣೆ ಯನ್ನೇ ತಮ್ಮ ಪಿಎಚ್.ಡಿ. ವಿಷಯವಾಗಿ ಆರಿಸಿಕೊಂಡು ಪುಣೆ ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ನಡೆಸಿದರು. ಈ ಮಹಾಪ್ರಬಂಧದ ಪರೀಕ್ಷಕರಾದ ಡಾ.ಹಾ.ಮಾ. ನಾಯಕ ಮತ್ತು ಪ್ರೊ. ಮರಿಯಪ್ಪಭಟ್ಟ ಅದನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.

ಭಾರತೀಯ ಭಾಷಾ ಸಾಹಿತ್ಯ ಸಂಶೋಧನೆಗೆ ಮೊತ್ತಮೊದಲ ಬಾರಿಗೆ ಕಂಪ್ಯೂಟರ್ ಬಳಸಿದ ಆದ್ಯ ಸಂಶೋಧಕ ರೆಂಬ ಹೆಗ್ಗಳಿಕೆ ಇವರದು. ಹಾವನೂರರು ಮೊದಲಿಗೆ ಪರೀಕ್ಷಾರ್ಥವಾಗಿ ರೋಮನ್ ಲಿಪಿಯಲ್ಲಿ ಕಾಳಿದಾಸನ 'ಮೇಘ ದೂತ'ವನ್ನು ಕಂಪ್ಯೂಟರ್‌ಗೆ ಅಳವಡಿಸಿ ಅದರ ಪದಪ್ರಯೋಗ ಕೋಶವನ್ನು ತಯಾರಿಸಿದರು. ಕಂಪ್ಯೂಟರ್‌ನ್ನು ಬಳಸಿ, ಸಾಹಿತ್ಯ ಕೃತಿಗಳನ್ನು ವಿಶ್ಲೇಷಿಸುವ ನಿಟ್ಟಿನಲ್ಲಿ ಹಾವನೂರರು ಯಶಸ್ವಿಯಾದ ಬೃಹತ್ ಯೋಜನೆ ಎಂದರೆ ಸಮಗ್ರ ಸಾಹಿತ್ಯದ ವಿಷಯಾನುಗುಣ ವಿಂಗಡಣೆ. ಹಾವನೂರರ ಜತೆಗೆ ಹಲವು ವಿದ್ವಾಂಸರು ಸೇರಿ ಸುಮಾರು ೧೪೦ ಮಂದಿ ಹರಿದಾಸರ ೧೬,೦೦೦ ಹಾಡುಗಳನ್ನು ೫೦ ಸಂಪುಟಗಳಲ್ಲಿ ಹೊರತಂದರು.

ಕನ್ನಡ ಭಾಷೆ, ಸಾಹಿತ್ಯ, ಶಾಸನಶಾಸ್ತ್ರ ಹಾಗೂ ಸಂಶೋಧನ ವಲಯದಲ್ಲಿ ಇವರು ಮಾಡಿದ ಕೃಷಿಗಾಗಿ ಹಲವು ಪ್ರಶಸ್ತಿ ಸನ್ಮಾನಗಳು ಇವರಿಗೆ ಸಂದಿವೆ. ಕರ್ನಾಟಕ ರಾಜ್ಯ ಸರ್ಕಾರದ 'ರಾಜ್ಯೋತ್ಸವ ಪ್ರಶಸ್ತಿ'(೧೯೯೩), ಕರ್ನಾಟಕ ಸಾಹಿತ್ಯ ಅಕಾಡೆಮಿಯ 'ಗೌರವ ಪ್ರಶಸ್ತಿ'(೧೯೯೯), ಕರ್ನಾಟಕ ಇತಿಹಾಸ ಅಕಾಡೆಮಿಯ ೧೩ನೇ ವಾರ್ಷಿಕ ಸಮ್ಮೇಳನದ ಅಧ್ಯಕ್ಷ ಪದವಿ(೧೯೯೯), 'ಮಂಗಳೂರು ಸಂದೇಶ ಪ್ರಶಸ್ತಿ' (೨೦೦೩), 'ಮುಳಿಯ ತಿಮ್ಮಪ್ಪಯ್ಯ ಪ್ರಶಸ್ತಿ'(೨೦೦೪). ಕರ್ನಾಟಕ ಹಿಸ್ಟರಿ ಕಾಂಗ್ರೆಸ್‌ನ ಅಧ್ಯಕ್ಷ ಪದವಿ(೨೦೦೫), ಹಂಪಿ ವಿಶ್ವವಿದ್ಯಾನಿಲಯದ 'ನಾಡೋಜ ಪ್ರಶಸ್ತಿ'(೨೦೦೮), 'ಚಿದಾನಂದ ಪ್ರಶಸ್ತಿ' (೨೦೦೮) ಇವುಗಳಲ್ಲಿ ಸೇರಿವೆ. ೨೦೦೮ರಲ್ಲಿ ಹಾವನೂರರ ೮೦ನೇ ವರ್ಷದ ಹುಟ್ಟುಹಬ್ಬದ ಸಂದರ್ಭದಲ್ಲಿ ಅವರ ಆಯ್ದ ಬರೆಹಗಳ ಬೃಹತ್ ಸಂಪುಟ 'ಸಂಕಥನ' ಪ್ರಕಟವಾಯಿತು.

೨೦೧೦ರ ಏಪ್ರಿಲ್ ೨೦ರಂದು ಹಾವನೂರರು ನಿಧನರಾದರು.

❐ ❐ ❐

ಎಚ್.ತಿಪ್ಪೇರುದ್ರಸ್ವಾಮಿ

(೧೯೨೮-೧೯೯೪)

ನಾಗರತ್ನಮ್ಮ

ತಿಪ್ಪೇರುದ್ರಸ್ವಾಮಿಯವರು ವಿಮರ್ಶಕರು, ಕಾದಂಬರಿಕಾರರು, ನಾಟಕ ಕಾರರು, ಭಾಷಾಂತರಕಾರರು, ಸಂಶೋಧಕರು, ಗ್ರಂಥಸಂಪಾದನಕಾರರು. ಇವರು ದಾವಣಗೆರೆ ಜಿಲ್ಲೆಯ ಹೊನ್ನಾಳಿಯಲ್ಲಿ ೦೩ ಫೆಬ್ರವರಿ ೧೯೨೮ರಂದು ಜನಿಸಿದರು. ತಂದೆ ಚೆನ್ನಮಲ್ಲಯ್ಯ, ತಾಯಿ ಬಸಮ್ಮ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಹೊನ್ನಾಳಿ, ಆನವಟ್ಟಿ, ಶಿರಾಳಕೊಪ್ಪಗಳಲ್ಲಿ ಮುಗಿಸಿ ಪ್ರೌಢಶಾಲಾ ಶಿಕ್ಷಣಕ್ಕೆ ಶಿವಮೊಗ್ಗ ಹಾಗೂ ತೀರ್ಥಹಳ್ಳಿಗೆ ಹೋದರು. ಬಿ.ಎ. ಆನರ್ಸ್(ಕನ್ನಡ ೧೯೪೭-೫೧), ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಎಂ.ಎ. ಕನ್ನಡ(೧೯೫೧-೫೨) ಪದವಿಯನ್ನು ಚಿನ್ನದ ಪದಕದೊಂದಿಗೆ ಪಡೆದರು. ೧೯೫೪-೬೨ರಲ್ಲಿ ಧಾರವಾಡದ ಸ.ಸ. ಮಾಳವಾಡರ ಮಾರ್ಗದರ್ಶನದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ 'ಶರಣರ ಅನುಭಾವ ಸಾಹಿತ್ಯ' ಎಂಬ ಮಹಾಪ್ರಬಂಧಕ್ಕೆ ಪಿಎಚ್.ಡಿ. ಪದವಿ ಪಡೆದರು.

೧೯೫೨ರಲ್ಲಿ ಹಾಸನದ ಸರ್ಕಾರಿ ಇಂಟರ್ಮೀಡಿಯೆಟ್ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ವೃತ್ತಿಜೀವನ ಆರಂಭಿಸಿ, ಮೈಸೂರಿನ ಮಹಾರಾಣಿ ಮಹಿಳಾ ಕಾಲೇಜು, ಬೆಂಗಳೂರಿನ ಸರ್ಕಾರಿ ಕಲಾ ಮತ್ತು ವಿಜ್ಞಾನ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ಮುಂತಾದ ಕಡೆ ಸೇವೆ ಸಲ್ಲಿಸಿದರು. ೧೯೬೯-೭೪ರ ವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಗಾಂಧಿಭವನದ ನಿರ್ದೇಶಕರಾಗಿ ೧೯೭೧-೭೪ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯ ಪ್ರಪ್ರಥಮ ನಿರ್ದೇಶಕರಾದರು. ೧೯೭೪-೭೪ರ ಸಂದರ್ಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಶಿವಮೊಗ್ಗ ಜಿಲ್ಲೆಯ

ಬಿ.ಆರ್.ಪ್ರಾಜೆಕ್ಟ್ ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಾಗಿಯೂ ಅನಂತರ ೧೯೮೪–೮೭ರವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ ನವೆಂಬರ್ ೧ರಂದು ಸ್ವಯಂ ನಿವೃತ್ತಿ ಪಡೆದರು. ಅನಂತರವೂ ೧೯೮೫–೯೪ರವರೆಗೆ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಸಂಸ್ಥಾಪಕ ಅಧ್ಯಕ್ಷರಾಗಿ, ೧೯೯೩–೯೪ರಲ್ಲಿ ಅಖಿಲ ಕರ್ನಾಟಕ ವಚನ ಸಾಹಿತ್ಯ ಪರಿಷತ್ತಿನ ಗೌರವ ಸಂಸ್ಥಾಪಕ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ.

ಶಿರಾಳಕೊಪ್ಪದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮಾಡುತ್ತಿದ್ದಾಗ ಮೂಗೂರು ಮಲ್ಲಪ್ಪ ಇವರಿಗೆ ಉಪಾಧ್ಯಾಯರಾಗಿದ್ದರು. ತೀರ್ಥಹಳ್ಳಿ ಪ್ರೌಢಶಾಲೆಯಲ್ಲಿ ಕಮಕೋಡು ಶ್ರೀ ನರಸಿಂಹಶಾಸ್ತ್ರಿಗಳು ಕನ್ನಡ ಪಂಡಿತರಾಗಿ ಕನ್ನಡದಲ್ಲಿ ತಿಪ್ಪೇರುದ್ರಸ್ವಾಮಿಗಳಿಗೆ ಆಸಕ್ತಿ ಮೂಡುವಂತೆ ಮಾಡಿದರು. ಮಹಾರಾಜ ಕಾಲೇಜಿನಲ್ಲಿ ಆನರ್ಸ್ ಓದುವಾಗ ಎನ್. ಅನಂತರಂಗಾಚಾರ್, ಡಿ.ಎಲ್. ನರಸಿಂಹಾಚಾರ್, ಎಸ್.ವಿ. ಪರಮೇಶ್ವರ ಭಟ್ಟ, ದೇ. ಜವರೇಗೌಡ, ಉ.ಕ. ಸುಬ್ಬರಾಯಾಚಾರ್, ಕೆ.ವಿ. ರಾಘವಾಚಾರ್, ತ.ಸು. ಶಾಮರಾಯರು ಇವರ ಗುರುಗಳಾಗಿದ್ದರು.

ವಚನಗಳನ್ನು ಅನುಭಾವ ಸಾಹಿತ್ಯವಾಗಿ ಭಾರತೀಯ ಮತ್ತು ಜಾಗತಿಕ ಅನುಭಾವ ಪರಂಪರೆಯ ಬೆಳಕಿನಲ್ಲಿ ಗಂಭೀರ ವಿಶ್ಲೇಷಣೆಗೆ ಒಳಗುಮಾಡಿದವರಲ್ಲಿ ಎಚ್. ತಿಪ್ಪೇರುದ್ರಸ್ವಾಮಿಗಳು ಪ್ರಮುಖರು. ಭಾರತೀಯ ತತ್ತ್ವಶಾಸ್ತ್ರದ ಪರಂಪರೆಯ ಆಳವಾದ ವ್ಯಾಸಂಗ, ಶರಣರ ತತ್ತ್ವದರ್ಶನದ ಬಹುಮುಖ್ಯ ಅಧ್ಯಯನ, ಅನುಸಂಧಾನದ ನೆಲೆಯಲ್ಲಿ ರಚನೆಗೊಂಡಿರುವ 'ಶರಣರ ಅನುಭಾವ ಸಾಹಿತ್ಯ' ಶರಣ ಸಾಹಿತ್ಯದ ಅಧ್ಯಯನಕ್ಕೆ ಅಧಿಕೃತ ಆಕರ ಗ್ರಂಥವಾಗಿದೆ.

ವೇದಪೂರ್ವ ಕಾಲದಿಂದ ಅಸ್ತಿತ್ವದಲ್ಲಿದ್ದ ಶೈವಧರ್ಮವು ಹಲವು ಕವಲುಗಳಾಗಿ ವಿಕಾಸಗೊಳ್ಳುತ್ತ ಭಾರತೀಯ ಧರ್ಮದರ್ಶನಗಳನ್ನು ಪ್ರಭಾವಿಸಿದ ಬಗೆಯನ್ನು ಸಂಶೋಧನಾತ್ಮಕವಾಗಿ ಚರ್ಚಿಸುತ್ತ ಋಗ್ವೇದದ ಕಾಲದಿಂದ ಭಾರತೀಯ ಪರಂಪರೆಯಲ್ಲಿ ಆರಾಧನೆಗೊಳ್ಳುತ್ತಾ ಸಾಗಿಬಂದ ರುದ್ರನು, ಶಿವ ಮತ್ತು ಶಂಕರ ಹೆಸರಿನಲ್ಲಿ ಸಚ್ಚಿದಾನಂದ ಪರತತ್ತ್ವವಾಗಿ ಪೂಜೆಗೊಂಡ ಹಿನ್ನೆಲೆಯಲ್ಲಿ ಶೈವ ಧರ್ಮದ ಪ್ರಾಚೀನತೆಯನ್ನು ವಿಶದಪಡಿಸಲಾಗಿದೆ.

ಶೈವಧರ್ಮದ ಪ್ರಮುಖ ನಾಲ್ಕು ಶಾಖೆಗಳಾಗಿರುವ ಪಾಶುಪತ, ಕಾಪಾಲಿಕ, ಕಾಳಾಮುಖ, ಲಾಕುಳ ಪಂಥಗಳ ಇತಿಹಾಸ ಶಿವಾಗಮಗಳನ್ನು ಆಧರಿಸಿ ಹುಟ್ಟಿದ ಕಾಶ್ಮೀರಶೈವ, ತಮಿಳುಶೈವ, ವೀರಶೈವ ಶಾಖೆಗಳ ಕುರಿತ ಐತಿಹಾಸಿಕ ಚರ್ಚೆ ಮಹತ್ತ್ವಪೂರ್ಣವಾಗಿದೆ.

'ಕರ್ಣಾಟಕ ಸಂಸ್ಕೃತಿ ಸಮೀಕ್ಷೆ' ಕೃತಿಯಲ್ಲಿ ಕರ್ನಾಟಕದ ಸಾಹಿತ್ಯ, ಸಂಸ್ಕೃತಿಯನ್ನು ಸೈದ್ಧಾಂತಿಕವಾಗಿ ಕಟ್ಟಿಕೊಟ್ಟಿದ್ದಾರೆ. ಇದರಲ್ಲಿ ಭಾರತೀಯ ಸಂಸ್ಕೃತಿ ಮತ್ತು ನಾಗರಿಕತೆ ಕುರಿತ ವ್ಯಾಖ್ಯೆಗಳು, ವ್ಯಾಖ್ಯಾನಗಳು ಹಾಗೂ ಅರ್ಥವನ್ನು ವಿವರಿಸಿದ್ದಾರೆ. ಸಿಂಧು ಸಂಸ್ಕೃತಿ, ಸಂಹಿತೆ, ಬ್ರಾಹ್ಮಣಗಳು, ಆರಣ್ಯಕಗಳು, ವೇದ, ಉಪನಿಷತ್ತುಗಳು, ಇತಿಹಾಸ, ಪುರಾಣಗಳು, ಸ್ಮೃತಿ ಆಗಮಾದಿಗಳು, ಸಮನ್ವಯ ಸಂಸ್ಕೃತಿ ಮುಂತಾದ ಅಂಶಗಳನ್ನು ಅತ್ಯಂತ ವಸ್ತುನಿಷ್ಠವಾಗಿ ಕಟ್ಟಿಕೊಟ್ಟಿದ್ದಾರೆ. ಇಲ್ಲಿ ರಾಮಾಯಣ, ಮಹಾಭಾರತ ಕೃತಿಗಳನ್ನು ಇತಿಹಾಸಗಳೆಂದು ಕರೆಯಲಾಗಿದೆ. ರಾಮ-ಕೃಷ್ಣರ ಮತ್ತು ಪಾಂಡವರು-ಕೌರವರ ಚರಿತ್ರೆಯನ್ನು ಅವು ತಿಳಿಸುತ್ತವೆಂಬ ಕಾರಣದಿಂದ ಅದನ್ನು ಇತಿಹಾಸ ಎಂದು ಕರೆದಿಲ್ಲ. ಇಡೀ ಭರತಖಂಡದ ಸಂಸ್ಕೃತಿಯ ಸಮಗ್ರಸ್ವರೂಪದ ಇತಿಹಾಸವನ್ನು ಅವು ಚಿತ್ರಿಸುತ್ತವೆ ಎಂಬ ತಿಪ್ಪೇಸ್ವಾಮಿಯವರ ಮಾತು ಮಹತ್ವದ್ದಾಗಿದೆ. ವೇದಾಂಗಗಳಾದ ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು ಮತ್ತು ಜ್ಯೋತಿಷಗಳನ್ನು ಕುರಿತು ವಿವೇಚಿಸಲಾಗಿದೆ. ಕಲ್ಪಸೂತ್ರ, ಶ್ರೌತಸೂತ್ರ, ಗೃಹ್ಯಸೂತ್ರ, ಧರ್ಮಸೂತ್ರ ಇವುಗಳನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

'ಕರ್ನಾಟಕ ರಾಜ್ಯ' ಎಂಬ ಶೀರ್ಷಿಕೆಯಡಿಯಲ್ಲಿ ಕನ್ನಡನಾಡಿನ ಪ್ರಾಚೀನತೆ, ಶಾಸನಗಳು, ವಿದೇಶಿ ಪ್ರವಾಸಿಗರ ಪ್ರವಾಸಸಾಹಿತ್ಯ ಗ್ರಂಥಗಳು, ಖಾರವೇಲ, ಮೌರ್ಯ ವಂಶದ ಸುಪ್ರಸಿದ್ಧ ಚಕ್ರವರ್ತಿ ಅಶೋಕ ಮೊದಲಾದವರ ಶಾಸನಗಳು ತಮಿಳಿನ ಶಿಲಪ್ಪದಿಕಾರಂ, ಶೂದ್ರಕನ ಮೃಚ್ಛಕಟಿಕ, ವರಾಹಮಿಹಿರನ ಬೃಹತ್ ಸಂಹಿತೆ ಇತ್ಯಾದಿಗಳ ಹಿನ್ನೆಲೆಯಲ್ಲಿ ಕನ್ನಡಿಗರ ಮತ್ತು ಕನ್ನಡನಾಡಿನ ಪ್ರಾಚೀನತೆಯನ್ನು ಕುರಿತು ವಿಶ್ಲೇಷಿಸಿದ್ದಾರೆ. ಕರ್ನಾಟಕವನ್ನಾಳಿದ ಕದಂಬರು, ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು ಮೊದಲಾದ ರಾಜಮನೆತನಗಳ ರಾಜಕೀಯ ಹಾಗೂ ಸಾಂಸ್ಕೃತಿಕ ಚರಿತ್ರೆಯನ್ನು ವಿವರಿಸಿದ್ದಾರೆ. ಅರಸು ಮನೆತನಗಳ ಅವಧಿಯಲ್ಲಿ ನಿರ್ಮಿಸಲ್ಪಟ್ಟ ದೇವಾಲಯಗಳು

ಹಾಗೂ ಪ್ರಮುಖ ಸಾಹಿತ್ಯ ಕೃತಿಗಳ ವಿವರಗಳು ಹಾಗೂ ಅರಸು ಮನೆತನಗಳ ಸಾಂಸ್ಕೃತಿಕ ಕೊಡುಗೆಗಳನ್ನು ಸಮಗ್ರವಾಗಿ ಕಟ್ಟಿಕೊಟ್ಟಿದ್ದಾರೆ.

'ಶಾಸನಗಳಲ್ಲಿ ಸಂಸ್ಕೃತಿ'ಯಲ್ಲಿ ಪ್ರಾಚೀನ ಕರ್ನಾಟಕದಲ್ಲಿಯ ಶಾಸನ ಸಂಪತ್ತು, ಶಾಸನಗಳನ್ನು ಕುರಿತ ಅಧ್ಯಯನದ ಇತಿಹಾಸ, ಶಾಸನಗಳ ಪ್ರಭೇದಗಳು, ದಾನಶಾಸನಗಳು, ವೀರಗಲ್ಲು, ಮಾಸ್ತಿಕಲ್ಲು, ನಿಸಿದಿ ಶಾಸನಗಳು, ಸ್ಮಾರಕ ಶಿಲೆಗಳು ಹೀಗೆ ಶಾಸನಗಳ ಎಲ್ಲಾ ಪ್ರಭೇದಗಳನ್ನು ಕುರಿತು ವಿವರಿಸಲಾಗಿದೆ.

'ಸಾಹಿತ್ಯದಲ್ಲಿ ಸಂಸ್ಕೃತಿ', 'ಕನ್ನಡ ಸಾಹಿತ್ಯವಾಹಿನಿ' ಎಂಬ ಭಾಗದಲ್ಲಿ ಶ್ರೀವಿಜಯನ ಕವಿರಾಜಮಾರ್ಗದಿಂದ ಆರಂಭಿಸಿ ಪಂಪ, ಪೊನ್ನ, ರನ್ನ, ಹರಿಹರ, ರಾಘವಾಂಕ, ಜನ್ನ, ಕುಮಾರವ್ಯಾಸ, ಚಾಮರಸ, ರತ್ನಾಕರವರ್ಣಿ, ಲಕ್ಷೀಶ, ಸರ್ವಜ್ಞ, ಷಡಕ್ಷರದೇವ, ತಿರುಮಲಾರ್ಯ, ಚಿಕ್ಕುಪಾಧ್ಯಾಯ, ಸಂಚಿಹೊನ್ನಮ್ಮ, ಬಿ.ಎಂ.ಶ್ರೀ., ಕುವೆಂಪು, ಎಂ.ಎಸ್.ಪುಟ್ಟಣ್ಣ, ಗಳಗನಾಥ, ವೆಂಕಟಾಚಾರ್ಯ, ಮಾಸ್ತಿ ಮುಂತಾದವರ ಸಾಹಿತ್ಯವನ್ನು ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ.

ಜನಪದ ಸಾಹಿತ್ಯದ ಧಾರ್ಮಿಕ ಹಾಡುಗಳು, ಲೌಕಿಕ ಹಾಡುಗಳು, ಕೋಲಾಟದ ಪದಗಳು, ಸುಗ್ಗಿಯ ಪದಗಳು, ಮದುವೆಯ ಹಾಡುಗಳು, ಬಂಡಿ ಪದಗಳು, ಲಾವಣಿಗಳು, ಗೀಗಗೀ ಪದಗಳು, ಕಥನಗೀತೆಗಳು ಮೊದಲಾದವುಗಳಲ್ಲಿ ಜಾನಪದ ಸಾಹಿತ್ಯದ ಸಾಂಸ್ಕೃತಿಕ ಮಹತ್ತ್ವವನ್ನು ವಿಶ್ಲೇಷಿಸಿದ್ದಾರೆ.

ಒಟ್ಟಿನಲ್ಲಿ ಕರ್ನಾಟಕದ ಸುಮಾರು ಎರಡು ಸಾವಿರ ವರ್ಷಗಳ ಸಾಂಸ್ಕೃತಿಕ ಚರಿತ್ರೆಯನ್ನು ಈ ಗ್ರಂಥದಲ್ಲಿ ಪುನಾರಚಿಸಿದ್ದಾರೆ. ಶಾಸನಶಾಸ್ತ್ರ, ಪುರಾತತ್ವಶಾಸ್ತ್ರ, ಇತಿಹಾಸ, ವಾಸ್ತುಶಿಲ್ಪ, ಮೂರ್ತಿಶಿಲ್ಪ, ಸಾಹಿತ್ಯ, ಜಾನಪದ ನೃತ್ಯ, ಸಂಗೀತ, ಚಿತ್ರಕಲೆ ಹೀಗೆ ಸಾಂಸ್ಕೃತಿಕ ಅಂಶಗಳ ಸಮಗ್ರ ಮಾಹಿತಿಗಳನ್ನೊಳಗೊಂಡ ಕೋಶದಂತೆ ಮೂಡಿಬಂದಿದೆ.

'ವಚನಗಳಲ್ಲಿ ವೀರಶೈವ ಧರ್ಮ' ಕೃತಿಯಲ್ಲಿ ವಚನಗಳನ್ನು ಪ್ರಧಾನ ಆಕರವಾಗಿ ಬಳಸಿಕೊಂಡು ಧರ್ಮದ ವಿಕಾಸದ ಚರಿತ್ರೆಯನ್ನು ಕಟ್ಟಿಕೊಡಲು ಲೇಖಕರು ಇಲ್ಲಿ ಪ್ರಯತ್ನಿಸಿದ್ದಾರೆ. ಪ್ರಾಚೀನ ಧರ್ಮದ ಬೆಳೆವಣಿಗೆಯನ್ನು ಐದು ಘಟ್ಟಗಳಲ್ಲಿ ವಿಭಾಗೀಕರಿಸಿದ್ದಾರೆ. ಶೈವಧರ್ಮ ವಿಕಾಸದಲ್ಲಿ ಪುರಾಣಗಳ ಕೊಡುಗೆ ಮಹತ್ತ್ವದ್ದಾಗಿ ಕಂಡಿದೆ. ಹಾಗಾಗಿ ಶಿವಮಹಾಪುರಾಣದ ಒಳಗೆ ಅಡಗಿರಬಹುದಾದ

ವಿಷಯಗಳನ್ನು ಅಧ್ಯಯನ ಮಾಡಿ ಈ ಪುರಾಣ ಶಂಕರಾಚಾರ್ಯರಿಗಿಂತ ಹಿಂದಿನದು ಎಂಬುದನ್ನು ಖಚಿತಪಡಿಸಬೇಕಾದ ಎಲ್ಲಾ ಅಂಶಗಳನ್ನು ಚರ್ಚಿಸುತ್ತಾರೆ.

ಗ್ರಂಥಸಂಪಾದನೆಯ ಕ್ಷೇತ್ರಕ್ಕೂ ತಿಪ್ಪೇರುದ್ರಸ್ವಾಮಿ ಅವರ ಕೊಡುಗೆ ಗಮನಿಸತಕ್ಕದ್ದು. ಶಿವಲಿಂಗ ಕವಿಯ 'ಅಮುಗಿ ದೇವಯ್ಯಗಳ ಸಾಂಗತ್ಯ' ಮತ್ತು 'ಮಾಧವಾಲಂಕಾರ' ಗಳನ್ನು ಸಂಪಾದಿಸಿದ್ದಾರೆ. 'ಶರಣ ಚರಿತ ಮಾನಸ' ಎಂಬ ಸಂಗ್ರಹ ಗ್ರಂಥವನ್ನು ೧೯೫೬ರಲ್ಲಿ ಪ್ರಕಟಿಸಿದರು. 'ಸಿದ್ಧರಾಮನ ವಚನಗಳು ಮತ್ತು ಸರ್ವಜ್ಞನ ವಚನಗಳು'– ಇವುಗಳ ಸಂಗ್ರಹಗಳನ್ನು ಸಂಪಾದಿಸಿಕೊಟ್ಟರು. ತಮ್ಮ ಪ್ರತಿಭೆ, ವ್ಯುತ್ಪತ್ತಿ, ವಿದ್ವತ್ತು, ಇತಿಹಾಸ ಪ್ರಜ್ಞೆ, ಪ್ರಾಚೀನ ಸಾಹಿತ್ಯದ ಅಧ್ಯಯನ ಇವೇ ಮೊದಲಾದ ಗುಣಗಳಿಂದ ಇವರು ಆದರ್ಶ ಗ್ರಂಥಸಂಪಾದಕರೆನಿಸಿಕೊಂಡಿದ್ದಾರೆ.

ತಿಪ್ಪೇರುದ್ರಸ್ವಾಮಿ ಅವರ 'ಪರಿಪೂರ್ಣದೆಡೆಗೆ' ಕಾದಂಬರಿಗೆ ೧೯೬೨ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ೧೯೬೯ರಲ್ಲಿ 'ಕರ್ಣಾಟಕ ಸಂಸ್ಕೃತಿ ಸಮೀಕ್ಷೆ' ಸಂಶೋಧನ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿತು. ಕನ್ನಡ ವಿಶ್ವಕೋಶ, ಕನ್ನಡ ವಿಷಯ ವಿಶ್ವಕೋಶ, ಎಪಿಗ್ರಾಫಿಯ ಕರ್ನಾಟಿಕ ಪರಿಷ್ಕರಣ ಮತ್ತು ಪುನರ್ ಮುದ್ರಣಗಳ ಸಂಪಾದಕ ಸಮಿತಿಯ ಸದಸ್ಯರು, ಸಂಪಾದಕರು, ಕನ್ನಡ ಅಧ್ಯಯನ ಸಂಸ್ಥೆಯ ಪ್ರಕಟನೆಯ ಪಠ್ಯಪುಸ್ತಕಗಳು ಮತ್ತು ಇತರ ಗ್ರಂಥಗಳ ಪ್ರಧಾನ ಸಂಪಾದಕರು, (೧೯೮೫–೮೭) ಪ್ರಬುದ್ಧ ಕರ್ನಾಟಕ, ಮಾನವಿಕ ಕರ್ನಾಟಕ, ವಿಜ್ಞಾನ ಕರ್ನಾಟಕದ ಪ್ರಧಾನ ಸಂಪಾದಕರು ಆಗಿದ್ದರು. ೧೯೮೬ರಲ್ಲಿ ಇವರ ಒಟ್ಟು ಸಾಹಿತ್ಯ ಸಾಧನೆಗಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಗೌರವ ಪ್ರಶಸ್ತಿ ಪ್ರದಾನ, ೧೯೮೮ರಲ್ಲಿ ಇವರ ೬೦ನೆಯ ಹುಟ್ಟು ಹಬ್ಬದ ಪ್ರಯುಕ್ತ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳಿಂದ ಹಾಗೂ ಶ್ರೀಶೈಲ ಸಾರಂಗಮಠದ ಶ್ರೀ ಪರಮ ಶಿವರಾಜದೇಶೀಕೇಂದ್ರ ಮಹಾಸ್ವಾಮಿಗಳಿಂದ ಸನ್ಮಾನ ಹಾಗೂ 'ಶಿವಚಿಂತನ' ಅಭಿನಂದನ ಗ್ರಂಥ ಸಮರ್ಪಣೆ ಆಯಿತು. ೧೯೮೯ರ ಮೈಸೂರು ಜಿಲ್ಲಾ ೪ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿದ್ದರು. ಇವರು ೨೮ ಅಕ್ಟೋಬರ್ ೧೯೯೪ರಂದು ನಿಧನರಾದರು.

❐ ❐ ❐

ಬಿ.ಎಸ್.ಸಣ್ಣಯ್ಯ

(೧೯೨೮–೨೦೨೧)

ಅಕ್ಕಮಹಾದೇವಿ

ಬಿ.ಎಸ್. ಸಣ್ಣಯ್ಯ ಅವರು ಕನ್ನಡ ಗ್ರಂಥಸಂಪಾದನೆಯನ್ನೇ ಉಸಿರಾಗಿಸಿಕೊಂಡವರು. ಹಸ್ತಪ್ರತಿ ಮತ್ತು ಗ್ರಂಥ ಸಂಪಾದನಾ ಕ್ಷೇತ್ರಗಳಲ್ಲಿ ನಿಷ್ಠೆಯಿಂದ ದುಡಿದ ಪರಂಪರೆಯ ನಿರ್ಮಾಪಕರಲ್ಲಿ ಒಬ್ಬರು. ವಿಶೇಷವಾಗಿ ಜೈನಸಾಹಿತ್ಯ ಮತ್ತು ಪ್ರಾಚೀನ ಕೃತಿಗಳ ಸಂಪಾದನೆಯಲ್ಲಿ ಅಪಾರ ಕೊಡುಗೆ ಸಲ್ಲಿಸಿದ್ದಾರೆ. ಇವರು ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನ ಭೋಗನ ಹಳ್ಳಿಯಲ್ಲಿ ೧೮ ಜೂನ್ ೧೯೨೮ರಂದು ಜನಿಸಿದರು. ತಂದೆ ಸಣ್ಣೇಗೌಡ, ತಾಯಿ ಬೋರಮ್ಮ.

ಸಣ್ಣಯ್ಯನವರ ಮುಖ್ಯ ಕಾರ್ಯಕ್ಷೇತ್ರ ಗ್ರಂಥಸಂಪಾದನೆ. ಅವರು ಪರಿಷ್ಕರಿಸಿ ಸಂಪಾದಿಸಿದ ಪ್ರಾಚೀನ ಗ್ರಂಥಗಳು ಎಪ್ಪತ್ತಕ್ಕೂ ಹೆಚ್ಚು. ಚಂಪೂ, ಕಂದ, ವಚನ, ಷಟ್ಪದಿ, ಸಾಂಗತ್ಯ, ಗದ್ಯ– ಹೀಗೆ ಆ ರೂಪ ಪ್ರಕಾರಗಳು ವೈವಿಧ್ಯ ಮಯವಾಗಿವೆ. ಕಾವ್ಯ, ಶಾಸ್ತ್ರ, ವೈದ್ಯ, ಸ್ತೋತ್ರ ಇತ್ಯಾದಿಗಳಲ್ಲಿ ವಸ್ತು ವೈವಿಧ್ಯವನ್ನು ಗುರುತಿಸಬಹುದು. ಕನ್ನಡ, ಸಂಸ್ಕೃತ, ಪ್ರಾಕೃತ ಭಾಷೆಗಳ ಹಸ್ತಪ್ರತಿಸೂಚಿಯ ಸಂಪುಟಗಳ ತಯಾರಿಯಲ್ಲೂ ಅವರು ಕೆಲಸ ಮಾಡಿದ್ದಾರೆ. ಇದಲ್ಲದೆ ಸಂಶೋಧನ ಕ್ಷೇತ್ರಕ್ಕೆ ಅದರಲ್ಲೂ ಗ್ರಂಥಸಂಪಾದನೆ, ಸಂರಕ್ಷಣೆ, ಪ್ರಾಚೀನ ಸಾಹಿತ್ಯ ಅಧ್ಯಯನಕ್ಕೆ ಆಕರವಾಗಬಲ್ಲ ಕೃತಿಗಳನ್ನು ರಚಿಸಿದ್ದಾರೆ, ಅನುವಾದಗಳನ್ನು ಮಾಡಿದ್ದಾರೆ.

ಅಂದಿನ ಕಾಲಕ್ಕೆ ಹಳ್ಳಿಗಳಲ್ಲಿ ಪಾಠಶಾಲೆಗಳಿರಲಿಲ್ಲ. ಆದುದರಿಂದ ಸಣ್ಣಯ್ಯನವರಿಗೆ ಸಂಜೀವಯ್ಯ ಎನ್ನುವವರು ಸ್ವಲ್ಪಕಾಲ ಮನೆಯಲ್ಲಿಯೇ ಪಾಠ ಹೇಳಿಕೊಡುತ್ತಿದ್ದರು. ೧೯೩೮ರಲ್ಲಿ ರಾವಂದೂರಿನಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗೆ ಸೇರಿದರು. ಕೃಷ್ಣರಾಜನಗರದಲ್ಲಿ ಪ್ರೌಢಶಾಲೆ ಮುಗಿಸಿ(೧೯೪೯) ೧೯೫೧ರಲ್ಲಿ

ಮೈಸೂರಿನಲ್ಲಿ ಯುವರಾಜ ಕಾಲೇಜಿಗೆ ಸೇರಿದರು. ಇದೇ ಅವಧಿಯಲ್ಲಿ ಶ್ರೀಮತಿ ಜಯಲಕ್ಷ್ಮಿ ಅವರೊಂದಿಗೆ ವಿವಾಹವಾಯಿತು. ಇಂಟರ್ಮೀಡಿಯೆಟ್‌ನಲ್ಲಿ ಇತಿಹಾಸ, ತರ್ಕಶಾಸ್ತ್ರ ಮತ್ತು ಹಿಂದಿಯನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಂಡಿದ್ದರು. ಅನಂತರ ಮಹಾರಾಜ ಕಾಲೇಜಿನಲ್ಲಿ ಬಿ.ಎ. ಆನರ್ಸ್ ಸೇರಿದರು(೧೯೫೪). ಕೆ.ಎಚ್. ರಾಮಯ್ಯ ಅವರ ಅನಾಥಾಲಯದಲ್ಲಿ ಇದ್ದುಕೊಂಡು ಎಂ.ಎ. ಪದವಿಯನ್ನು ಪಡೆದರು(೧೯೫೫). ಬಿ.ಎ.ಆನರ್ಸ್ ಮುಗಿಸಿದ ಕೂಡಲೇ ಕೋಲಾರ ಜಿಲ್ಲಾ ಕಚೇರಿಗೆ ಪ್ರಥಮದರ್ಜೆ ಗುಮಾಸ್ತರಾಗಿ ಆಯ್ಕೆಯಾದರೂ ಅದನ್ನು ಬಿಟ್ಟು ದೇ. ಜವರೇಗೌಡರ ಮಾತಿನಂತೆ ಎಂ.ಎ.ಗೆ ಸೇರಿದರು. ಅನಂತರ ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿದ್ದ ಯುನೆಸ್ಕೋ ತಜ್ಞ ಶ್ರೀ ಎನ್. ಭದ್ರಯ್ಯ ಅವರ ಪುಸ್ತಕಪ್ರಪಂಚ ಮಾಸಿಕ ನಿಯತಕಾಲಿಕೆಯ ಉಪಸಂಪಾದಕರಾಗಿ ನೇಮಕವಾದರು(೧೯೫೫). ಮುಂದೆ ಪ್ರಾಚ್ಯವಿದ್ಯಾಸಂಶೋಧನಾಲಯದಲ್ಲಿ ಪದವೀಧರ ಸಂಶೋಧಕ ಹುದ್ದೆಗೆ ತಾತ್ಕಾಲಿಕವಾಗಿ ೧೯೫೫ರಲ್ಲಿ ಸೇರಿದರು. ದೇವೀರಪ್ಪನವರು ಆಗ ನಿರ್ದೇಶಕರಾಗಿದ್ದುದರಿಂದ ಅವರ ಸಹಕಾರದಿಂದ ಗ್ರಂಥಸಂಪಾದನ ಕ್ಷೇತ್ರಕ್ಕೆ ಪ್ರವೇಶ(೧೯೫೬) ದೊರೆಯಿತು.

ಅನಂತರ ಇದೇ ವಿಭಾಗದಲ್ಲಿ ಸಹಾಯಕ ನಿರ್ದೇಶಕರಾದರು. ೧೯೬೬ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಯನ ಸಂಸ್ಥೆ ಸ್ಥಾಪನೆಯಾದಾಗ ಬಿ.ಎಸ್. ಸಣ್ಣಯ್ಯ ಅವರು ಹುದ್ದೆ ಸಮೇತ ಅಲ್ಲಿಗೆ ಹೋದರು. ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿದ್ದ ಕನ್ನಡ ಹಸ್ತಪ್ರತಿಗಳ ಗ್ರಂಥಸಂಪಾದನ ವಿಭಾಗ ಈ ಸಂಸ್ಥೆಯೊಂದಿಗೆ ವಿಲೀನವಾಯಿತು. ೧೯೬೮ರಲ್ಲಿ ಅವರು ದೆಹಲಿಯ ನ್ಯಾಷನಲ್ ಆರ್ಕೈವ್ಸ್‌ನಲ್ಲಿ ಹೆಚ್ಚಿನ ಶಿಕ್ಷಣಕ್ಕಾಗಿ ಒಂದು ವರ್ಷ ಕಾಲ ಹೋಗಿದ್ದರು.

ಅನೇಕ ಕೃತಿಗಳನ್ನು ಸಣ್ಣಯ್ಯನವರು ಮೊತ್ತಮೊದಲಿಗೆ ಗುರುತಿಸಿ, ಅವುಗಳನ್ನು ಸಂಪಾದಿಸಿ, ಕವಿ ಕಾಲದ ವಿಚಾರವಾಗಿ ವಿದ್ವತ್ಪೂರ್ಣ ಪೀಠಿಕೆಯೊಂದಿಗೆ ಪ್ರಕಟಿಸಿದ್ದಾರೆ. ಕನ್ನಡದಲ್ಲಿ ಪ್ರಸಿದ್ಧವಾದ ಕಾವ್ಯಗಳನ್ನು ಪ್ರಕಟಿಸಿರುವಂತೆಯೇ ವಾಚಕ ಲೋಕಕ್ಕೆ ಗೊತ್ತಿಲ್ಲದ ವಿಶೇಷ ಕೃತಿಗಳನ್ನು ಪ್ರಕಟಿಸಿದ್ದಾರೆ. ಗ್ರಂಥಸಂಪಾದನೆಗೆ ಗದ್ಯಕೃತಿಗಳನ್ನೂ ಆರಿಸಿಕೊಂಡಿದ್ದಾರೆ. ಕಾವ್ಯಗಳಲ್ಲದೆ ಶಾಸ್ತ್ರಕೃತಿಗಳು ಇದರಲ್ಲಿ ಸೇರಿವೆ. ಕೆಲವು ಸಂಗ್ರಹಗಳನ್ನು ಸಂಪಾದಿಸಿ, ಕೆಲವು ಸಂಪಾದಿತ ಕೃತಿಗಳಿಗೆ

ಗದ್ಯಾನುವಾದವನ್ನು ಒದಗಿಸಿದ್ದಾರೆ. ಇವರು ೧೯೮೮ರಲ್ಲಿ ಸೇವೆಯಿಂದ ನಿವೃತ್ತರಾದರು.

೧೯೧೪ರಲ್ಲಿ ರಾಮಾನುಜಯ್ಯಂಗಾರ್ ಸಂಪಾದಿಸಿ ಹೊರತಂದಿದ್ದ ನೇಮಿನಾಥಪುರಾಣವನ್ನು ೧೯೬೧ರಲ್ಲಿ ಪ್ರಕಟಿ ಸಿದರು. ಈ ಕೃತಿಯನ್ನು ನಾಲ್ಕು ಹಸ್ತಪ್ರತಿಗಳ ಸಹಾಯದಿಂದ ಮತ್ತೊಮ್ಮೆ ಪರಿಷ್ಕರಿಸಿದ್ದಾರೆ. ಇದೇ ವಸ್ತುವನ್ನು ಆಧರಿಸಿ ರಚಿತವಾದ ಮಹಾಬಲನ ನೇಮಿನಾಥ ಪುರಾಣವನ್ನು ಇವರು ಸಂಪಾದಿಸಿದ್ದಾರೆ. ಇದನ್ನು ಹಸ್ತಪ್ರತಿಗಳ ಸಹಾಯದಿಂದ ಪರಿಷ್ಕರಿಸಲಾಗಿದೆ. ನೇಮಿಚಂದ್ರನ, ಮಹಾಬಲನ ಮತ್ತು ಬಂಧುವರ್ಮನ ನೇಮಿನಾಥ ಪುರಾಣಗಳನ್ನು ಇವರು ಸಂಪಾದಿಸಿರುವುದು ವಿಶೇಷ. ಈ ಕೃತಿಗಳ ಪೀಠಿಕೆಯಲ್ಲಿ ಕವಿ, ಕಾವ್ಯವಿಚಾರ, ಆಕರ, ವಿಷಯ, ಕಥಾಸಾರ, ವರ್ಣನೆ ಮತ್ತು ವಿಮರ್ಶಾ ಭಾಗಗಳಿವೆ.

ಕ್ರಿ.ಶ. ಸುಮಾರು ೧೨೦೦ರಲ್ಲಿದ್ದ ಬಂಧುವರ್ಮನ 'ಹರಿವಂಶಾ ಭ್ಯುದಯಂ', 'ಜೀವಸಂಬೋಧನಂ' ಮತ್ತು 'ಸತೀ ಧರ್ಮಸಾರ' ಎಂಬ ಈ ಮೂರು ಕಾವ್ಯಗಳನ್ನು ಪರಿಶೋಧಿಸಿ ಸಣ್ಣಯ್ಯನವರು ಪ್ರಕಟಿಸಿದ್ದಾರೆ. ಎರಡನೇ ನಾಗವರ್ಮನ ವರ್ಧಮಾನ ಪುರಾಣದ ಹಸ್ತಪ್ರತಿಯನ್ನು ಪತ್ತೆಹಚ್ಚಿ, ಪರಿಷ್ಕರಿಸಿ ೧೯೭೪ರಲ್ಲಿ ಪ್ರಕಟಿಸಿದರು. ಇದರ ಪ್ರಕಟನೆಯಿಂದಾಗಿ ಎರಡನೇ ನಾಗವರ್ಮನ ಕಾಲ ಖಚಿತವಾಯಿತು. ಶ್ರೀವಿಜಯ, ನಾಗವರ್ಮ(ಇನ್ನೊಬ್ಬ) ಮತ್ತು ನಾಗದೇವರು ಕ್ರಮವಾಗಿ ರಘುವಂಶ ಪುರಾಣ, ಮತ್ಸ್ಯರಾಜಚರಿತೆ ಮತ್ತು ಸುಲೋಚನಾ ಚರಿತಗಳನ್ನು ರಚಿಸಿರುವರೆಂಬ ವಿಷಯ ಬೆಳಕಿಗೆ ಬಂತು.

ಸಣ್ಣಯ್ಯನವರು ಹಾಗೂ ರಾಗೌ ಅವರು ಕೂಡಿ ಸಂಪಾದಿಸಿರುವ ಕೃತಿಗಳು ರನ್ನನ ಸಾಹಸಭೀಮವಿಜಯ ಮತ್ತು ಅಜಿತತೀರ್ಥಂಕರಪುರಾಣ. ಇವು ಕ್ರಮವಾಗಿ ೧೯೮೫–೧೯೮೮ರಲ್ಲಿ ಪ್ರಕಟವಾಗಿವೆ. ರನ್ನನ ಅಜಿತತೀರ್ಥಂಕರಪುರಾಣವನ್ನು ರಾಮಾನುಜಯ್ಯಂಗಾರ್, ಎಚ್. ದೇವೀರಪ್ಪ, ಮತ್ತು ದೇಜಗೌ ಅವರು ಈ ಹಿಂದೆಯೇ ಸಂಪಾದಿಸಿದ್ದರು. ಈ ಕೃತಿಯಲ್ಲಿ ಉತ್ತಮ ಪಾಠವನ್ನು ಆಯ್ಕೆ ಮಾಡಿ ಪಠ್ಯ ನಿಷ್ಕರ್ಷೆಯನ್ನು ಮಾಡಲಾಗಿದೆ.

ಷಟ್ಪದಿ ಪ್ರಕಾರದಲ್ಲಿ ಕುಮಾರವಾಲ್ಮೀಕಿಯ ತೊರವೆ ರಾಮಾಯಣದ ಎರಡನೆಯ ಸಂಪುಟವಾದ ಯುದ್ಧಕಾಂಡವನ್ನು ಕುರಿತ ಮಹತ್ತ್ವದ ಕೃತಿಯನ್ನು

೧೯೫೯ರಷ್ಟು ಹಿಂದೆಯೇ ಪ್ರಾಚ್ಯವಿದ್ಯಾ ಸಂಶೋಧನಾಲಯದಿಂದ ಪ್ರಕಟಿಸಿದ್ದಾರೆ. ಪೀಠಿಕೆಯಲ್ಲಿ ಕವಿ, ಕಾವ್ಯ ಪರಿಚಯದೊಡನೆ ಪ್ರಕಟಿತ ಹಾಗೂ ಅಪ್ರಕಟಿತ ರಾಮಾಯಣ ಕೃತಿಗಳ ಪರಿಚಯವನ್ನು ನೀಡಲಾಗಿದೆ. ಲಕ್ಷ್ಮೀಶನ ಜೈಮಿನಿ ಭಾರತವನ್ನು ರಾಗೌ ಅವರೊಡನೆ ಸಂಪಾದಿಸಿದ್ದಾರೆ. ಸಾಂಗತ್ಯ ಕೃತಿಗಳ ಸಂಪಾದನೆಯಲ್ಲಿ 'ಸೊಬಗಿನಸೋನೆ', 'ಮದನಮೋಹಿನಿಯಕಥೆ', 'ವರ್ಧಮಾನ ಚರಿತೆ', 'ವರ್ಧಮಾನಪುರಾಣ', 'ಬಸವಪುರಾಣ', 'ಭುಜಬಲಿಚರಿತೆ' ಮೊದಲಾದ ವನ್ನು ಹೆಸರಿಸಬಹುದು.

೧೬೫೦ರಲ್ಲಿದ್ದನೆಂದು ಭಾವಿಸಲಾದ ಕಾಡ ಕವಿಯ 'ಬಸವಶಿಖಾಮಣಿ' ಗ್ರಂಥವನ್ನು ಪರಸ್ಪರ ಹೊಂದಿಕೆಯಿಲ್ಲದ ಐದು ಪ್ರತಿಗಳ ನೆರವಿನಿಂದ ಸಂಪಾದಿಸಿದ್ದಾರೆ. ೧೬೫೦ರ ದೇವರಸ ಕವಿಯ 'ಮದನಚಕ್ರೇಶ್ವರಚರಿತೆ'ಯನ್ನು ೧೯೬೬ರಲ್ಲಿ ಪ್ರಸಾರಾಂಗ ಪ್ರಕಟಿಸಿದೆ. ೧೮೪೦ರಲ್ಲಿದ್ದ ದೇವಚಂದ್ರ ಗದ್ಯದಲ್ಲಿ ರಚಿಸಿರುವ ರಾಜಾವಳಿಕಥಾಸಾರವನ್ನು ಸಣ್ಣಯ್ಯನವರು ಸಂಪಾದಿಸಿದರು. ಸುಭಾಷಿತ ಗ್ರಂಥ ನೀತಿಸಾರೋದಯ, ಸೂಕ್ತಿಸುಧಾರ್ಣವ, ಕಾವ್ಯಸಾರ ಕೃತಿಗಳನ್ನೂ ಸಂಪಾದಿಸಿದ್ದಾರೆ.

ಆಯುರ್ವೇದಕ್ಕೆ ಸಂಬಂಧಿಸಿದ 'ಸಕಲವೈದ್ಯಸಂಹಿತಾಸಾರಾರ್ಣವ' ಇವರು ಸಂಪಾದಿಸಿರುವ ಕೃತಿಗಳಲ್ಲಿ ಮುಖ್ಯವಾದದ್ದು. ಮೂರು ಸಮಗ್ರ ಹಸ್ತಪ್ರತಿಗಳಿಂದ ಈ ಸಂಪುಟವನ್ನು ಪರಿಷ್ಕರಿಸಲಾಗಿದೆ. ಇದೇ ಸಾಲಿಗೆ ಸೇರಿದ್ದು ಬೊಮ್ಮಯ್ಯನ ವೈದ್ಯಕಂದ. ಕಂದಪದ್ಯ ಪ್ರಧಾನವಾದ ಈ ಕೃತಿ ೧೯೫೩ರಲ್ಲಿ ಹೊರಬಂತು. 'ಶಾಸ್ತ್ರಸಾರ ಸಮುಚ್ಚಯ' ೧೨ನೇ ಶತಮಾನದಲ್ಲಿದ್ದ ಮಾಘಣಂದಿಗಳು ಸಂಸ್ಕೃತದಲ್ಲಿ ಸೂತ್ರರೂಪದಲ್ಲಿ ರಚಿಸಿರುವ ಕೃತಿ. ಇದನ್ನು ಸಂಪಾದಿಸಿ ಪರಿಷ್ಕರಿಸಿಕೊಟ್ಟ ಕೀರ್ತಿ ಸಣ್ಣಯ್ಯನವರಿಗೆ ಸಲ್ಲುತ್ತದೆ. ಹೀಗೆ ಗ್ರಂಥಸಂಪಾದನೆಗೆ ತನ್ನನ್ನು ಸಮರ್ಪಿಸಿಕೊಳ್ಳುವ ಮೂಲಕ ಸಣ್ಣಯ್ಯ 'ಹಸ್ತಪ್ರತಿ ಅಧ್ಯಯನ ರಂಗದ ದೊಡ್ಡಯ್ಯ' ಎನಿಸಿಕೊಂಡಿದ್ದಾರೆ.

ಗ್ರಂಥಸಂಪಾದನೆಯಲ್ಲಿ ಅಪಾರ ಕೆಲಸ ಮಾಡಿರುವ ಸಣ್ಣಯ್ಯನವರು ಕೆಲವು ಸ್ವತಂತ್ರ ಕೃತಿಗಳನ್ನು ರಚಿಸಿದ್ದಾರೆ. ಇವರ 'ಹಸ್ತಪ್ರತಿಶಾಸ್ತ್ರ ಪರಿಚಯ' ಕೃತಿ ೧೯೬೨ರಲ್ಲಿ ಪ್ರಕಟವಾಯಿತು. ಇವರ 'ಗ್ರಂಥಸಂರಕ್ಷಣೆ' ಎಂಬ ಗ್ರಂಥ ೧೯೭೧ರಲ್ಲಿ

ಪ್ರಕಟವಾಯಿತು. ಇದು ಕುವೆಂಪು ಅವರ ಮುನ್ನುಡಿಯನ್ನು ಒಳಗೊಂಡಿದೆ. ೧೯೮೩ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕ ಮಾಲೆಗಾಗಿ ಹಳಗನ್ನಡ ಕವಿ ಬಂಧುವರ್ಮನನ್ನು ಕುರಿತು ಒಂದು ಚಿಕ್ಕ ಪುಸ್ತಕವನ್ನು ಬರೆದಿದ್ದಾರೆ. ೨೦೦೭ರಲ್ಲಿ 'ಮಹಾಕವಿ ಪಂಪ' ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ಜಿನವಲ್ಲಭನ ಕವಿ ಕಾಲ ಶಾಸನದ ಪ್ರಸ್ತಾಪ ಈ ಕೃತಿಯಲ್ಲಿದೆ. ಸಣ್ಣಯ್ಯನವರ ಪ್ರವಾಸ ಕಥನ 'ನಾನೂ ಹೋಗಿದ್ದೆ ಅಮೆರಿಕೆಗೆ'ಯನ್ನು ಸಂವಹನ ಪ್ರಕಾಶನ ಪ್ರಕಟಿಸಿದೆ.

ಇವರ 'ಪ್ರಾಚೀನ ಕನ್ನಡ ಗ್ರಂಥ ಸಂಪಾದನೆ'ಯಲ್ಲಿ ೧೯೦೦–೧೯೯೯ರ ನಡುವಿನ ಕಾಲದಲ್ಲಿ ಬೆಳಕು ಕಂಡ ಕನ್ನಡ ಕೃತಿಗಳ ಸಂಪಾದನೆ, ಸಂಗ್ರಹ ಹಾಗೂ ಪ್ರಕಟನೆಯನ್ನು ಪರಿಚಯಿಸಲಾಗಿದೆ. ಹಿಂದೆ ಪ್ರಕಟವಾಗಿರುವ ಜೈಮಿನಿ ಭಾರತ, ಬಸವ ಪುರಾಣ, ಗದುಗಿನ ಭಾರತ, ಕೀರ್ತನೆಗಳು, ಶಬ್ದಮಣಿದರ್ಪಣ ಮೊದಲಾದ ಅಪೂರ್ಣ ಅಥವಾ ಅಸಮರ್ಪಕ ಗ್ರಂಥಗಳನ್ನು ಕುರಿತು ಪರಿಚಯವಿದೆ.

ಗ್ರಂಥಸಂಪಾದನೆಯನ್ನು ನಿಶಿತಪಥವೆಂದು ನಂಬಿಕೊಂಡಿದ್ದ ಸಣ್ಣಯ್ಯನವರು ಅದನ್ನು ಕಾರ್ಯತತ್ಪರತೆ, ಶ್ರದ್ಧೆ, ಪರಿಶ್ರಮ ಮತ್ತು ತಜ್ಞತೆಯಿಂದ ಸತತವಾಗಿ ನಡೆಸಿಕೊಂಡು ಬಂದಿದ್ದಾರೆ. ಅವರ ಸಾಧನೆಯ ಸರಮಾಲೆಗೆ ಗೊಮ್ಮಟಸಾರ ಕೃತಿಯು ಮೆರಗನ್ನು ನೀಡಿದೆ. ಈ ಕೃತಿ ಶ್ರವಣಬೆಳಗೊಳದ ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆಯಿಂದ ಪ್ರಕಟವಾಗಿದೆ. ಸಣ್ಣಯ್ಯನವರು ಕೇಶವಣ್ಣನ ಶ್ರಾವಕಾಚಾರವನ್ನು ಸಂಪಾದಿಸಿದ್ದಾರೆ. ಇದು ಗೃಹಸ್ಥರು ಪಾಲಿಸಲೇಬೇಕಾದ ನೀತಿ–ನಡಾವಳಿಗಳನ್ನು ಹೇಳುವ ಜೈನ ಧಾರ್ಮಿಕ ಕೃತಿ. ಮೂಲದಲ್ಲಿ ೧೫ ಅಧ್ಯಾಯಗಳೂ ೧೫,೦೦೦ ಶ್ಲೋಕಗಳೂ ಇವೆ. ಶ್ಲೋಕಗಳ ಪ್ರತಿ ಪದಕ್ಕೆ ಅರ್ಥವನ್ನು ನೀಡಲಾಗಿದೆ. ಇದರಲ್ಲಿ ಅನೇಕ ಕನ್ನಡ ಪದಗಳನ್ನು ಟಂಕಿಸಲಾಗಿದೆಯೆಂದೂ ಇಂತಹ ಕೆಲವು ಕನ್ನಡ ಪದಗಳು ಕನ್ನಡ ಸಾಹಿತ್ಯ ಪರಿಷತ್ ಪ್ರಕಟಿಸಿರುವ ಕನ್ನಡ ನಿಘಂಟಿನಲ್ಲಿ ಇಲ್ಲವೆಂದೂ ಸಣ್ಣಯ್ಯನವರು ಅಭಿಪ್ರಾಯಪಟ್ಟಿದ್ದಾರೆ.

'ಶಾಸ್ತ್ರಸಾರ ಸಮುಚ್ಚಯ' ಮಾಘಣಂದಿ ಸಂಸ್ಕೃತದಲ್ಲಿ ಸೂತ್ರರೂಪದಲ್ಲಿ ರಚಿಸಿರುವ ಈ ಕೃತಿಯನ್ನು ಸಣ್ಣಯ್ಯನವರು ಸಂಪಾದಿಸಿ ಕೊಟ್ಟಿದ್ದಾರೆ. ಇದರ ಕನ್ನಡ ವ್ಯಾಖ್ಯಾನವನ್ನು ರಚಿಸಿದವರು ಈ ಮಾಘಣಂದಿಯ ಶಿಷ್ಯರಾದ ಇನ್ನೊಬ್ಬ

ಮಾಘಣಂದಿ. ಇದು ಜೈನ ಧಾರ್ಮಿಕ ತತ್ತ್ವ ಕೃತಿ. ಇದನ್ನು ಶುದ್ಧರೂಪದಲ್ಲಿ ಪರಿಷ್ಕರಿಸಿಕೊಟ್ಟ ಕೀರ್ತಿ ಸಣ್ಣಯ್ಯನವರಿಗೆ ಸಲ್ಲುತ್ತದೆ.

ಶಾಂತಿಕೀರ್ತಿ ಮುನಿ ವಿರಚಿತ ಪುರುದೇವ ಚರಿತೆ ಮತ್ತು ಪಾರ್ಶ್ವನಾಥ ಚರಿತ್ರೆಗಳನ್ನು ಸಂಪಾದಿಸಿ ಪ್ರಕಟಿಸಿರುವ ಸಣ್ಣಯ್ಯನವರು ಶಾಂತಿಕೀರ್ತಿ ಮುನಿಯ ಕಾಲ ಶಕ ೧೬೪೭ ಅಂದರೆ ಕ್ರಿ.ಶ.೧೭೨೫ ಆಗುತ್ತದೆ ಎಂದು ವಿವರಿಸಿದ್ದಾರೆ. ವೃಷಭದೇವ ತೀರ್ಥಂಕರನ ಜೀವನವನ್ನು ಆಧರಿಸಿ ಇರುವ ಪುರುದೇವ ಚರಿತೆ ಶಾಂತಿಕೀರ್ತಿ ಮುನಿಯ ಮತ್ತೊಂದು ಕೃತಿ. ಇದನ್ನು ಸಣ್ಣಯ್ಯನವರು ಸಂಪಾದಿಸಿ ೧೯೭೦ರಲ್ಲಿ ಪ್ರಕಟಿಸಿದರು. ದೇವರಸನ ಚಕ್ರೇಶ್ವರಚರಿತೆ ಕಾವ್ಯ ೧೯೬೬ರಲ್ಲಿ ಪರಿಷ್ಕೃತವಾಗಿ ಪ್ರಸಾರಾಂಗದಿಂದ ಪ್ರಕಟವಾಗಿದೆ. ಇದು ೧೨ ಆಶ್ವಾಸಗಳು ಮತ್ತು ೧೯೨೦ ಸಾಂಗತ್ಯ ಪದ್ಯಗಳನ್ನು ಒಳಗೊಂಡಿದೆ.

ಬಿ.ಎಸ್. ಸಣ್ಣಯ್ಯ ಮತ್ತು ಅಕ್ಕಮಹಾದೇವಿಯವರು ಎ. ವೆಂಕಟರಾವ್ ಮತ್ತು ಎಲ್. ಶೇಷಯ್ಯಂಗಾರ್ ಅವರು ಪ್ರಕಟಿಸಿದ್ದ 'ಓಷಧಿಕೋಶ' ಎಂಬ ಸಂಸ್ಕೃತ-ಕನ್ನಡ ನಿಘಂಟನ್ನು ಅನುಸರಿಸಿ ಕನ್ನಡ ಪದಗಳಿಗೆ ಇರುವ ಸಮಾನ ಸಂಸ್ಕೃತ ಪದಗಳನ್ನು ಪಟ್ಟಿಮಾಡಿ ಓಷಧಿಕೋಶವೆಂಬ ಮತ್ತೊಂದು ನಿಘಂಟನ್ನು ರಚಿಸಿದ್ದಾರೆ. ಖಗೆಂದ್ರಮಣಿದರ್ಪಣ ಗ್ರಂಥವನ್ನು ಎಂ. ವೆಂಕಟರಾವ್ ಮತ್ತು ಪಂಡಿತ ಎಚ್. ಶೇಷಯ್ಯಂಗಾರ್ ಅವರು ೧೯೪೭ರಲ್ಲಿ ಸಂಪಾದಿಸಿದ್ದ ಕೃತಿಯನ್ನು ಬಿ.ಎಸ್. ಸಣ್ಣಯ್ಯ ನವರು ೨೦೦೪ರಲ್ಲಿ ಗದ್ಯಾನುವಾದದೊಡನೆ ಮತ್ತೊಮ್ಮೆ ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಹೀಗೆ ಅಪ್ರಕಟಿತ ಕನ್ನಡ ಗ್ರಂಥಗಳನ್ನು ಪ್ರಕಟವಾಗಬೇಕೆಂಬ ಸಣ್ಣಯ್ಯನವರ ಆಸಕ್ತಿಯಿಂದಾಗಿ ಹಲವಾರು ಕನ್ನಡ ಕಾವ್ಯಗಳು ಬೆಳಕು ಕಂಡಿವೆ.

ಬಿ.ಎಸ್. ಸಣ್ಣಯ್ಯ ಅವರಿಂದ ಬೆಳಕುಕಂಡ ಇನ್ನೂ ಕೆಲವು ಕೃತಿಗಳು:

ವಚನಗಳು: ಮೋಳಿಗೆ ಮಾರಯ್ಯನ ವಚನಗಳು, ಕೋಲಶಾಂತಯ್ಯ ಮತ್ತು ಮಧುವಯ್ಯಗಳ ವಚನಗಳು, ಶಿವಲೆಂಕ ಮಂಚಣ ಮತ್ತು ಢಕ್ಕೆಯ ಬೊಮಣ್ಣಗಳ ವಚನಗಳು, ಮಾರಿತಂದೆಗಳ ವಚನಗಳು, ಬಬ್ಬಿಬಾಚಯ್ಯ ಮತ್ತು ಮೆರೆ ಮಿಂಡಯ್ಯಗಳ ವಚನಗಳು, ಉರಿಲಿಂಗಯ್ಯ ಮತ್ತು ಗಜೇಶ ಮಸಣಯ್ಯನ ವಚನಗಳು, ದಾಸಿಮಯ್ಯನ ವಚನಗಳು.

ಹಸ್ತಪ್ರತಿಸೂಚಿಗಳು: ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಗಳು, ಕನ್ನಡ ಹಸ್ತಪ್ರತಿಗಳ ಮೈಕ್ರೊಫಿಲಂ ಸೂಚಿ, ಪ್ರಾಕೃತ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಗಳು, ಸಂಸ್ಕೃತ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಗಳು.

ಅನುವಾದಿತ ಕೃತಿಗಳು: ವಸ್ತುಸಂಗ್ರಹಾಲಯದ ಮೂಲತತ್ತ್ವಗಳು, ಅಮರುಕವಿಯ ಪ್ರೇಮಗೀತೆಗಳು, ಜೀವಸಂಬೋಧನೆ (ಗದ್ಯಾನುವಾದ), ಖಗೇಂದ್ರಮಣಿದರ್ಪಣ (ಗದ್ಯಾನುವಾದ)

ಗೌರವಗಳು, ಪ್ರಶಸ್ತಿಗಳು:

ಮೈಸೂರು ಜಿಲ್ಲೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ (೨೦೧೪), ನಾಲ್ಕನೆಯ ಹಸ್ತಪ್ರತಿಶಾಸ್ತ್ರ ಸಮ್ಮೇಳನಾಧ್ಯಕ್ಷತೆ.

ನೇಮಿನಾಥ ಪುರಣ (1961), ವರ್ಧಮಾನ ಪುರಾಣ (1974), ಸಾಹಸಭೀಮವಿಜಯ (1985), ಅಜೀತತೀರ್ಥಂಕರ ಪುರಾಣ (1988) ಮತ್ತು ಜೈಮಿನಿ ಭಾರತ (1993)– ಇವುಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ. ದೇವರಾಜ ಬಹದ್ದೂರ್ ಬಹುಮಾನ (1974), ವರ್ಧಮಾನ ಪುರಾಣ (1974), ಮತ್ತು ಜೈಮಿನಿ ಭಾರತ (1993), 'ಪಾರ್ಶ್ವನಾಥ ಚರಿತೆ'ಗೆ ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಪ್ರಶಸ್ತಿ (1995) ತೀ.ನಂ. ಶ್ರೀಕಂಠಯ್ಯ ಬಹುಮಾನ ಲಭಿಸಿದೆ.

ಶ್ರೀ ಗೊಮ್ಮಟೇಶ್ವರ ವಿದ್ಯಾಪೀಠ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀ ಚಾವುಂಡರಾಯ ಪ್ರಶಸ್ತಿ (1999), ಜೀವಸಂಬೋಧನಂ ಕೃತಿಗೆ ಪಿ. ಶಾಂತಿಲಾಲ್ ಪ್ರಶಸ್ತಿ (2001), ರತ್ನಕರಂಡಕಂ ಕೃತಿಗೆ ಪಿ.ಶಾಂತಿಲಾಲ್ ಪ್ರಶಸ್ತಿ (2002) ಉಡುಪಿಯ ರಾಷ್ಟ್ರಕವಿ ಎಂ. ಗೋವಿಂದ ಪೈ ಸಂಶೋಧನಾ ಕೇಂದ್ರದ ಸೇಡಿಯಾಪು ಪ್ರಶಸ್ತಿ (2004), ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿತಜ್ಞ ಪ್ರಶಸ್ತಿ (2006), ದಕ್ಷಿಣ ಕೇಸರಿ ಕನ್ನಡ ಸಾಹಿತ್ಯ ಪ್ರಶಸ್ತಿ–ಲಯನ್ಸ್ ಕ್ಲಬ್ ಮೈಸೂರು, ಪಂಪಮಹಾಕವಿ ಕೃತಿಗೆ ಪಿ. ಶಾಂತಿಲಾಲ್ ಪ್ರಶಸ್ತಿ (2007), ತೀರ್ಥಂಕರ ವರ್ಧಮಾನ ಕಾವ್ಯ ಸಂಪುಟಕ್ಕೆ ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಪ್ರಶಸ್ತಿ (2011), ಬಾಗಲಕೋಟೆಯ ಕುಮಾರಶ್ರೀ ಪ್ರಶಸ್ತಿ (2012), ಬಿಎಂಶ್ರೀ ಸ್ಮಾರಕ ಪ್ರತಿಷ್ಠಾನದ ಶ್ರೀಸಾಹಿತ್ಯ ಪ್ರಶಸ್ತಿ, ಬೆಂಗಳೂರು (2015),

ಶಂಬಾ ಜೋಷಿ ಪ್ರಶಸ್ತಿ (2015), ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸುವರ್ಣ ಗೌರವ ಪ್ರಶಸ್ತಿ (2017), ಹೊಂಬೂಜದ ಸಿದ್ಧಾಂತ ಕೀರ್ತಿ ಪ್ರಶಸ್ತಿಗಳು ದೊರೆತಿವೆ.

ಬಿ.ಎಸ್. ಸಣ್ಣಯ್ಯ ಅವರಿಗೆ 'ಪರಿಣತ' ಎಂಬ ಅಭಿನಂದನಾ ಗ್ರಂಥವನ್ನು ಸಮರ್ಪಿಸಲಾಗಿದೆ.

ಶ್ರೀಯುತರು ದಿನಾಂಕ ೧೨.೧೫.೨೦೨೧ ರಂದು ನಿಧನರಾದರು.

ಆಕರ ಗ್ರಂಥಗಳು

- ರಾಗೌ(ಪ್ರ.ಸಂ), ಪರಿಣತ, ಶ್ರೀ ಬಿ.ಎಸ್. ಸಣ್ಣಯ್ಯನವರ ಅಭಿನಂದನ ಗ್ರಂಥ, ಬಿ.ಎಸ್. ಸಣ್ಣಯ್ಯ ಅಭಿನಂದನ ಸಮಿತಿ, ಮೈಸೂರು ೨೦೧೩.
- ಬಿ.ಎಸ್. ಸಣ್ಣಯ್ಯ, ಚಕ್ರೇಶ್ವರ ಚರಿತೆ, ಮೈಸೂರು ವಿಶ್ವವಿದ್ಯಾನಿಲಯ, ಪ್ರಸಾರಾಂಗ, ೧೯೯೬.
- ಬಿ.ಎಸ್. ಸಣ್ಣಯ್ಯ, ಗೊಮ್ಮಟಸಾರ, ಪ್ರಾಕ್ತನ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆ.

❐ ❐ ❐

ಬಾ.ರಾ. ಗೋಪಾಲ್

(೧೯೩೦-೧೯೯೭)

ಮಾಲಿನಿ ಎನ್. ಅಭ್ಯಂಕರ್

ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿಯೂ ಶಾಸನಶಾಸ್ತ್ರ ಹಾಗೂ ಇತಿಹಾಸ ಸಂಶೋಧನ ಕ್ಷೇತ್ರದಲ್ಲಿಯೂ ಸಮಾನ ಗೌರವವನ್ನು ಗಳಿಸಿದ ವಿದ್ವಾಂಸರು ಅಪರೂಪ. ಅಂಥ ವಿರಳ ವಿದ್ವಾಂಸರ ಸಾಲಿನಲ್ಲಿ ಅಗ್ರಸ್ಥಾನ ಪಡೆದವರು ಡಾ. ಬಾ.ರಾ. ಗೋಪಾಲ್. ಅವರ ಜೀವನ ಸಂಪೂರ್ಣವಾಗಿ ಅಧ್ಯಯನ, ಸಂಶೋಧನೆ ಮತ್ತು ಶಾಸನಗಳ ಸೇವೆಗೆ ಮೀಸಲಾಗಿತ್ತು. ಅಪಾರ ವಿದ್ವತ್ತು, ಬಹುಭಾಷಾ ಪಾಂಡಿತ್ಯ, ನಿರಂತರ ಪರಿಶ್ರಮ ಮತ್ತು ತೀಕ್ಷ್ಣ ಇತಿಹಾಸ ಪ್ರಜ್ಞೆಯಿಂದ ಅವರು ದಕ್ಷಿಣ ಭಾರತದ ಇತಿಹಾಸ ಅಧ್ಯಯನಕ್ಕೆ ಶಾಶ್ವತ ಕೊಡುಗೆ ನೀಡಿದ್ದಾರೆ. ಕನ್ನಡ ಮತ್ತು ತೆಲುಗು ಎರಡೂ ಭಾಷೆಗಳ ಶಾಸನ ಅಧ್ಯಯನದಲ್ಲಿ ಸಮಾನ ಪ್ರಾಮಾಣಿಕತೆ ಹಾಗೂ ನಿಷ್ಠೆ ಇದ್ದ ವಿರಳ ವಿದ್ವಾಂಸರ ಪೈಕಿ ಇವರು ಪ್ರಮುಖರು. ಶಾಸನಶಾಸ್ತ್ರವನ್ನು ಕೇವಲ ಪಠ್ಯವಿಮರ್ಶೆಯಾಗಿ ನೋಡದೆ, ಅದನ್ನು ಸಮಾಜ–ರಾಜಕೀಯ–ಸಾಂಸ್ಕೃತಿಕ ಇತಿಹಾಸದ ಜೀವಂತ ದಾಖಲೆ ಎಂದು ಅರ್ಥೈಸಿದ ವಿದ್ವಾಂಸರೆಂದು ಅವರನ್ನು ಗುರುತಿಸಬಹುದು.

ಬಾ.ರಾ. ಗೋಪಾಲರ ಪೂರ್ಣ ಹೆಸರು ಬಾಲಕೃಷ್ಣನ್ ರಾಜಗೋಪಾಲ್. ಅವರು ೧೯೩೦ ಅಕ್ಟೋಬರ್ ೨೧ರಂದು ಕರ್ನಾಟಕದ ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರದಲ್ಲಿ ಶ್ರೀವೈಷ್ಣವ ಸಂಪ್ರದಾಯದ ಕುಟುಂಬದಲ್ಲಿ ಜನಿಸಿದರು. ತಂದೆ ಬಾಲಕೃಷ್ಣನ್ ವೃತ್ತಿಯಿಂದ ವಕೀಲರು; ತಾಯಿ ಜಾನಕಿ. ಗಡಿ ಪ್ರದೇಶದಲ್ಲಿ ಬೆಳೆದ ಕಾರಣ ಅವರಿಗೆ ಬಾಲ್ಯದಲ್ಲೇ ಕನ್ನಡ (ನಾಡನುಡಿ), ತೆಲುಗು (ಗಡಿಭಾಷೆ), ತಮಿಳು (ಮನೆಮಾತು) ಮತ್ತು ಹಿರಿಯರ ಸಂಸ್ಕಾರದಿಂದ ಸಂಸ್ಕೃತ ಭಾಷೆಗಳ ಪರಿಚಯ

ಸಹಜವಾಗಿ ದೊರೆಯಿತು. ಈ ಬಹುಭಾಷಾ ಪರಿಸರವೇ ಮುಂದೆ ಅವರನ್ನು ಶ್ರೇಷ್ಠ ಶಾಸನಶಾಸ್ತ್ರಜ್ಞರನ್ನಾಗಿಸಲು ಭದ್ರ ನೆಲೆ ಒದಗಿಸಿತು.

ಬಾ.ರಾ. ಗೋಪಾಲ್ ಅವರ ಪ್ರಾಥಮಿಕ ಶಿಕ್ಷಣ ಚಿಕ್ಕಬಳ್ಳಾಪುರದಲ್ಲಿ, ಇಂಟರ್‌ಮೀಡಿಯೆಟ್ ಶಿಕ್ಷಣ ತುಮಕೂರಿನಲ್ಲಿ ನಡೆಯಿತು. ಅನಂತರ ಮೈಸೂರಿನ ಪ್ರಸಿದ್ಧ ಮಹಾರಾಜ ಕಾಲೇಜು ಸೇರಿದ ಅವರು ಇತಿಹಾಸ ಮತ್ತು ಇಂಡಾಲಜಿಯಲ್ಲಿ ಬಿ.ಎ. (ಆನರ್ಸ್) ಹಾಗೂ ೧೯೫೩ರಲ್ಲಿ ಎಂ.ಎ. ಪದವಿಗಳನ್ನು ಪಡೆದರು. ಕಾಲೇಜು ದಿನಗಳಲ್ಲಿ ಡಿ.ಎಲ್. ನರಸಿಂಹಾಚಾರ್ಯ, ಎಂ. ಯಾಮುನಾಚಾರ್ಯ, ರಾಳ್ಳಪಲ್ಲಿ ಅನಂತಕೃಷ್ಣಶರ್ಮ, ಎಸ್. ಶ್ರೀಕಂಠಶಾಸ್ತ್ರಿ ಮೊದಲಾದ ಮಹಾನ್ ವಿದ್ವಾಂಸರ ಸಾಂಗತ್ಯದಲ್ಲಿ ಬೆಳೆದ ಅವರು ಇತಿಹಾಸ ಮತ್ತು ಶಾಸನಶಾಸ್ತ್ರದತ್ತ ಆಕಎಷಿತರಾದರು. ಇತಿಹಾಸ ಮತ್ತು ಇಂಡಾಲಜಿ ವಿಷಯಗಳತ್ತ ವಿಶೇಷ ಆಸಕ್ತಿ ಬೆಳೆಸಿಕೊಂಡ ಅವರು, ಎಂ. ಶೇಷಾದ್ರಿಯವರ ಮಾರ್ಗದರ್ಶನದಲ್ಲಿ "The Chalukyas of Kalyana and the Kalachuris" ಎಂಬ ಮಹಾಪ್ರಬಂಧ ಮಂಡಿಸಿ ೧೯೬೪ರಲ್ಲಿ ಪಿಎಚ್.ಡಿ. ಪದವಿ ಗಳಿಸಿದರು. ಈ ಕೃತಿ ಇಂದಿಗೂ ಕಲ್ಯಾಣ ಚಾಲುಕ್ಯರ ಅಧ್ಯಯನಕ್ಕೆ ಮಾರ್ಗದರ್ಶಕ ಗ್ರಂಥವಾಗಿ ಪರಿಗಣಿತವಾಗಿದೆ.

೧೯೫೫ರಲ್ಲಿ ಡಾ. ಗೋಪಾಲರು ಉದಕಮಂಡಲದಲ್ಲಿದ್ದ ಕೇಂದ್ರ ಸರ್ಕಾರದ ಪುರಾತತ್ವ ಇಲಾಖೆಯ ಶಾಸನಶಾಸ್ತ್ರ ಅಧ್ಯಯನ ಸಂಸ್ಥೆಯಲ್ಲಿ ತೆಲುಗು ಸಂಶೋಧನ ಸಹಾಯಕರಾಗಿ ಸೇವೆ ಆರಂಭಿಸಿದರು. ಅಲ್ಪಾವಧಿಯಲ್ಲೇ ತೆಲುಗು ಮತ್ತು ಕನ್ನಡ ಶಾಸನಗಳ ಸಂಗ್ರಹಣೆ ಮತ್ತು ಸಂಪಾದನೆಯ ಹೊಣೆಗಾರಿಕೆಯನ್ನು ವಹಿಸಿಕೊಂಡರು. ದಕ್ಷಿಣ ಭಾರತದ ಹಳ್ಳಿಹಳ್ಳಿಗಳಲ್ಲಿ ಸಂಚರಿಸಿ ಹೊಸ ಶಾಸನಗಳನ್ನು ಪತ್ತೆಹಚ್ಚುವುದು, ಅವುಗಳ ಪಠ್ಯಸಂಪಾದನೆ, ಅರ್ಥವಿವರಣೆ ಮತ್ತು ಹೊಸ ಶಾಸನಗಳ ಪಾಠನಿರ್ಣಯ, ಇಂಗ್ಲಿಷ್ ಸಾರಾಂಶ ರಚನೆ, ವಾರ್ಷಿಕ ವರದಿಗಳ ಸಿದ್ಧತೆ, ಶಾಸನ ಸಂಪುಟಗಳ ಸಂಪಾದನೆ, ಇತಿಹಾಸಾತ್ಮಕ ವಿಶ್ಲೇಷಣೆ ಮಾಡುವುದೇ ಅವರ ದೈನಂದಿನ ಬದುಕಾಗಿತ್ತು. ಡಿ.ಸಿ. ಸರ್ಕಾರ್, ಪಿ.ಬಿ. ದೇಸಾಯಿ, ನೆಲಮಂಗಲ ಲಕ್ಷ್ಮೀನಾರಾ ಯಣರಾವ್, ಎಚ್.ಕೆ. ನರಸಿಂಹಸ್ವಾಮಿ ಮೊದಲಾದ ದಿಗ್ಗಜರ ಮಾರ್ಗದರ್ಶನದಲ್ಲಿ ಈ ಅವಧಿ (೧೯೫೫–೧೯೬೪) ಅವರ ವೃತ್ತಿಜೀವನದ ದೃಢ ಅಡಿಪಾಯವಾಯಿತು.

೧೯೬೪ರಲ್ಲಿ ಅವರು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಲ್ಲಿ ಪ್ರಾಚೀನ ಭಾರತದ ಚರಿತ್ರೆ ಮತ್ತು ಸಂಸ್ಕೃತಿ ವಿಭಾಗದ ಉಪನ್ಯಾಸಕರಾಗಿ ನೇಮಕಗೊಂಡರು. ಅಲ್ಲಿ ಸ್ನಾತಕೋತ್ತರ ಬೋಧನೆ, ಸಂಶೋಧನೆ, ವಿಚಾರ ಸಂಕಿರಣಗಳಲ್ಲಿ ಸಕ್ರಿಯ ಪಾತ್ರ ವಹಿಸಿದರು. ಭುವನೇಶ್ವರದಲ್ಲಿ ನಡೆದ Indian History Congress ನಲ್ಲಿ Epigraphy and Numismatics Sectionನ ಅಧ್ಯಕ್ಷರಾಗಿ ಆಯ್ಕೆಯಾದುದು ಅವರ ವಿದ್ವತ್ತಿಗೆ ಕೊಟ್ಟ ಗೌರವ. ೧೯೭೨ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಶಾಸನತಜ್ಞರಾಗಿ ಸೇರಿದ ಅವರು, ಬಿ.ಎಲ್. ರೈಸ್ ಸಂಪಾದಿಸಿದ Epigraphia Carnaticaದ ಐತಿಹಾಸಿಕ ಪುನರ್‌ಸಂಪಾದನೆ ಕಾರ್ಯವನ್ನು ಕೈಗೊಂಡರು. ಗೋಪಾಲ ಅವರು ಈ ಮಹತ್ತರ ಕಾರ್ಯವನ್ನು ಅತ್ಯಂತ ಸಮರ್ಥವಾಗಿ ನಿರ್ವಹಿಸಿದರು. ರೈಸ್ ಅವರ ಮೊದಲ ಐದು ಸಂಪುಟಗಳನ್ನು ಒಂಬತ್ತು ಸಂಪುಟಗಳಾಗಿ ವಿಸ್ತರಿಸಿ, ಅತ್ಯಲ್ಪ ಅವಧಿಯಲ್ಲಿ ಹೊರತಂದರು. ಹೊಸ ಶಾಸನಗಳ ಸೇರ್ಪಡೆ, ಹಳೆಯ ಶಾಸನಗಳ ಪಠ್ಯದ ಪರಿಷ್ಕರಣ ಮಾತ್ರವಲ್ಲದೆ, ಪ್ರತಿ ಸಂಪುಟಕ್ಕೂ ಅದರಲ್ಲಿರುವ ಶಾಸನಗಳ ಆಧಾರದ ಮೇಲೆ ಇತಿಹಾಸ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ವಿಶ್ಲೇಷಿಸುವ ಸುದೀರ್ಘ ಪ್ರಸ್ತಾವನೆಗಳನ್ನು ಬರೆದರು. ಈ ಪ್ರಸ್ತಾವನೆಗಳು ಕರ್ನಾಟಕದ ಸಮಗ್ರ ಇತಿಹಾಸದ ಒಂದೊಂದು ಸ್ವತಂತ್ರ ಅಧ್ಯಾಯಗಳಂತಿವೆ; ಇದು ಈ ಸಂಪುಟಗಳ ಮೌಲ್ಯವನ್ನು ದ್ವಿಗುಣಗೊಳಿಸಿದೆ. ಸಂಶೋಧನೆಯಲ್ಲಿ ತೊಡಗುವ ಯಾವುದೇ ಅಭ್ಯಾಸಿಗಳಿಗೆ ಈ ವಿಷಯವು ಮನದಟ್ಟಾಗದಿರದು. ಸಂಶೋಧಕರು ಇಂದು ಬಿ.ಎಲ್. ರೈಸ್ ಅವರನ್ನು ಎಷ್ಟು ಕೃತಜ್ಞತೆಯಿಂದ ನೆನೆಯುತ್ತಾರೋ, ಅಷ್ಟೇ ಗೌರವದಿಂದ ಗೋಪಾಲ ಅವರನ್ನೂ ಸ್ಮರಿಸುತ್ತಾರೆ.

ಇದೇ ಅವಧಿಯಲ್ಲಿ ಡಾ. ಗೋಪಾಲ ಅವರು ಏಷ್ಯಾ ಮತ್ತು ಆಫ್ರಿಕಾ ಅಧ್ಯಯನ ಕಾಂಗ್ರೆಸ್ (Congress of Asian and African Studies) ಅಧಿವೇಶನಗಳಲ್ಲಿ ಭಾಗವಹಿಸಲು ೧೯೬೨ರಲ್ಲಿ ಟೋಕಿಯೋಗೆ ಹಾಗೂ ಮತ್ತೊಮ್ಮೆ ಜರ್ಮನಿಯ ಹ್ಯಾಂಬರ್ಗ್‌ಗೆ ಪ್ರಯಾಣ ಬೆಳೆಸಿದರು. ಈ ಪ್ರವಾಸಗಳ ನಡುವೆಯೇ ಅವರ ಅನೇಕ ಮಹತ್ತ್ವದ ಲೇಖನಗಳು ಹಾಗೂ ಗ್ರಂಥಗಳು ಬೆಳಕು ಕಂಡವು.

ಡಾ. ಬಾ.ರಾ. ಗೋಪಾಲ್ ಅವರ ಸಂಶೋಧನಾ ಗ್ರಂಥಗಳಲ್ಲಿ ಅತ್ಯಂತ ಪ್ರಮುಖವಾದುದು 'ದ ಚಾಲುಕ್ಯಾಸ್ ಆಫ್ ಕಲ್ಯಾಣ ಅಂಡ್ ದ ಕಲಚೂರಿಸ್'

(The Chalukyas of Kalyana and the Kalachuris–1981). ಧಾರವಾಡದಲ್ಲಿದ್ದಾಗ ಅದನ್ನು ಪೂರ್ತಿಯಾಗಿ ಪರಿಷ್ಕರಿಸಿ, ಕಲಚೂರಿ ಮನೆತನವನ್ನೂ ಒಳಗೊಂಡಂತೆ ಚಾಲುಕ್ಯರ ಕಾಲದ ಸಮಗ್ರ ಇತಿಹಾಸವನ್ನು ಕೂಲಂಕಷವಾಗಿ ಅಭ್ಯಸಿಸಿ ಈ ಗ್ರಂಥವನ್ನು ರಚಿಸಿದರು. ಚಾಲುಕ್ಯರ ವಂಶಾವಳಿ, ರಾಜಧಾನಿಗಳು, ಚಾಲುಕ್ಯ–ಚೋಳರ ಸಂಬಂಧ, 'ಚಾಲುಕ್ಯ ವಿಕ್ರಮ ಶಕೆ'ಯ ಆರಂಭ ಹಾಗೂ ಕಲಚೂರಿಗಳ ರಾಜಕೀಯ ಹಸ್ತಕ್ಷೇಪ ಮುಂತಾದ ವಿಷಯಗಳ ಮೇಲೆ ಅವರು ಈ ಕೃತಿಯಲ್ಲಿ ಮೌಲಿಕ ವಿಚಾರಗಳನ್ನು ಮಂಡಿಸಿದ್ದಾರೆ.

ಅವರ ಮತ್ತೊಂದು ಪ್ರಮುಖ ಕೃತಿ 'ಮೈನರ್ ಡೈನಾಸ್ಟೀಸ್ ಆಫ್ ಸೌತ್ ಇಂಡಿಯಾ (ಕರ್ನಾಟಕ)' (Minor Dynasties of South India–1982). ಇದರಲ್ಲಿ ಅವರು ಕರ್ನಾಟಕದ ಇತಿಹಾಸದಲ್ಲಿ ಇದುವರೆಗೆ ಅಷ್ಟಾಗಿ ಪರಿಚಿತವಿಲ್ಲದ ಸಾಮಂತ ಮನೆತನಗಳ ಚರಿತ್ರೆಯನ್ನು ಮೂಲ ಶಾಸನಗಳ ಆಧಾರದ ಮೇಲೆ ಕಟ್ಟಿಕೊಟ್ಟಿದ್ದಾರೆ. ಚೆಂಗಾಳ್ವರು, ಕೊಂಗಾಳ್ವರು, ಹಾನಗಲ್ ಮತ್ತು ಗೋವೆಯ ಕದಂಬರು, ಶಿಲಾಹಾರರು ಹಾಗೂ ಸಿಂಧರು ಮುಂತಾದ ಮನೆತನಗಳ ಬಗ್ಗೆ ಅನೇಕ ಹೊಸ ವಿಷಯಗಳು ಈ ಗ್ರಂಥದಲ್ಲಿ ಅಡಕವಾಗಿವೆ.

೧೯೭೦ರಲ್ಲಿ ಪ್ರಕಟವಾದ 'ಎ ಹಿಸ್ಟರಿ ಆಫ್ ಕರ್ನಾಟಕ' (A History of Karnataka) ಒಂದು ಸಾಂಘಿಕ ಪ್ರಯತ್ನದ ಫಲ. ಡಾ. ಗೋಪಾಲ ಅವರು ಧಾರವಾಡದಲ್ಲಿದ್ದಾಗ ಡಾ. ಪಿ.ಬಿ. ದೇಸಾಯಿಯವರ ಮಾರ್ಗದರ್ಶನದಲ್ಲಿ ಈ ಯೋಜನೆ ರೂಪಿತವಾಯಿತು. ಡಾ. ದೇಸಾಯಿ, ಶ್ರೀನಿವಾಸ ರಿತ್ತಿ ಹಾಗೂ ಡಾ. ಗೋಪಾಲ ಅವರು ಈ ಗ್ರಂಥದ ಲೇಖಕರು; ಇದರ ಸಮನ್ವಯ ಸಂಪಾದನೆಯನ್ನು ಡಾ. ಪಿ.ಬಿ. ದೇಸಾಯಿಯವರು ನಿರ್ವಹಿಸಿದ್ದರು. ಇದು ಸಾಮಾನ್ಯ ಓದುಗರು ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ರಚಿತವಾಗಿದ್ದರೂ ಮೂಲ ಆಕರಗಳನ್ನು ಆಧರಿಸಿ ಬರೆದಿದ್ದರಿಂದ ಅತ್ಯಂತ ಮೌಲಿಕ ಸಂಶೋಧನ ಕೃತಿಯಾಗಿ ಹೊರಹೊಮ್ಮಿದೆ.

ಅನಂತಪುರದ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದಲ್ಲಿದ್ದಾಗ ಡಾ. ಗೋಪಾಲ ಅವರು 'ಹಿಸ್ಟರಿ ಆಫ್ ಆಂಧ್ರ ಪ್ರದೇಶ್' (History of Andhra Pradesh) ಕೃತಿಯನ್ನು ಎರಡು ಭಾಗಗಳಲ್ಲಿ ರಚಿಸಿದರು. ಎಂದಿನಂತೆ ಇಲ್ಲಿಯೂ

ಅವರು ಅಪ್ರಕಟಿತ ಶಾಸನಗಳನ್ನು ಆಧಾರವಾಗಿರಿಸಿಕೊಂಡರು. ಎರಡನೆಯ ಭಾಗದ ರಚನೆಯಲ್ಲಿ ತಮ್ಮ ಕಿರಿಯ ಸಹೋದ್ಯೋಗಿಗಳನ್ನು ಜೊತೆಗೂಡಿಸಿಕೊಂಡಿದ್ದು ಅವರ ಉದಾರತೆಗೆ ಸಾಕ್ಷಿಯಾಗಿದೆ.

'ಶ್ರೀ ರಾಮಾನುಜ ಇನ್ ಕರ್ನಾಟಕ' (Sri Ramanuja in Karna taka) ಕೃತಿಯು ಒಂದು ಹೊಸ ದೃಷ್ಟಿಕೋನ ದಿಂದ ರಚಿತವಾಗಿದೆ. ಕರ್ನಾಟಕಕ್ಕೆ ರಾಮಾನುಜಾಚಾರ್ಯರ ಆಗಮನ, ಶ್ರೀವೈಷ್ಣವ ಪಂಥದ ಪ್ರಸಾರ ಹಾಗೂ ಆ ಪಂಥದ ಗುರಿ–ಉದ್ದೇಶಗಳ ಸಮಗ್ರ ಅಧ್ಯಯನ ಈ ಗ್ರಂಥದಲ್ಲಿದೆ.

ಡಾ. ಗೋಪಾಲ ಅವರು ಕನ್ನಡದಲ್ಲಿಯೂ ಅನೇಕ ಗ್ರಂಥಗಳನ್ನು ರಚಿಸಿದ್ದಾರೆ:

- ಪ್ರಾಚೀನ ಭಾರತದ ಚರಿತ್ರೆ (1973): ಡಾ. ಪಿ.ಬಿ. ದೇಸಾಯಿಯವರ ಸಂಪಾದಕತ್ವದಲ್ಲಿ ಡಾ. ಗೋಪಾಲ ಮತ್ತು ಸಹಲೇಖಕರು ರಚಿಸಿದ ಕೃತಿ.
- ಕರ್ನಾಟಕದ ಇತಿಹಾಸ (1986): ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟಿತ.
- ಬನವಾಸಿಯ ಕದಂಬರು (1983): ಶಿರಸಿಯಿಂದ ಪ್ರಕಟವಾದ ಸಂಶೋಧನ ಕೃತಿ.
- ವಿಜಯನಗರದ ವಾಸ್ತುಶಿಲ್ಪ: ವಾಸ್ತು ಮತ್ತು ಶಿಲ್ಪಕಲೆಯ ಕುರಿತಾದ ಆಳವಾದ ಅಧ್ಯಯನ.

ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿಯನ್ನು ಜನಪ್ರಿಯಗೊಳಿಸುವ ನಿಟ್ಟಿನಲ್ಲಿ ಅವರು ಅನೇಕ ಕಿರುಹೊತ್ತಿಗೆಗಳನ್ನು ಬರೆದಿದ್ದಾರೆ. ಇವುಗಳನ್ನು ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗ, ಇಂಡಿಯಾ ಬುಕ್ ಹೌಸ್ ಮತ್ತು ಕನ್ನಡ ಸಾಹಿತ್ಯ ಪರಿಷತ್ತುಗಳು ಪ್ರಕಟಿಸಿವೆ.

ಡಾ. ಗೋಪಾಲ್ ಅವರು ೧೫೦ಕ್ಕೂ ಹೆಚ್ಚು ಶಾಸನ ಸಂಪುಟಗಳನ್ನು ಪ್ರಕಟಿಸಿದ್ದು, ಇಂಗ್ಲಿಷಿನಲ್ಲಿ ೮ ಮತ್ತು ಕನ್ನಡದಲ್ಲಿ ೧೭ ಗ್ರಂಥಗಳನ್ನು ರಚಿಸಿದ್ದಾರೆ. ವಿಜಯನಗರ ಕಾಲದ ಸಾವಿರಾರು ಶಾಸನಗಳನ್ನು ರಾಜ್ಯ–ಜಿಲ್ಲೆ–ತಾಲೂಕು ಮಟ್ಟದಲ್ಲಿ ವ್ಯವಸ್ಥಿತವಾಗಿ ಸಂಗ್ರಹಿಸಿದ ಅವರ ಕಾರ್ಯ ಶಾಸನ ಅಧ್ಯಯನದಲ್ಲಿ ಹೊಸ ಮಾನದಂಡ ಸ್ಥಾಪಿಸಿದೆ.

ಅಕಾಡೆಮಿಕ್ ಬರೆಹಗಳ ಜೊತೆಗೆ ಅವರು ಹಾಸ್ಯ ಸಾಹಿತ್ಯ, ಲಲಿತ ಪ್ರಬಂಧ ಹಾಗೂ ಪ್ರವಾಸಕಥನಗಳನ್ನೂ ರಚಿಸಿದ್ದು, ''ಅಮೇರಿಕಾದಲ್ಲೊಂದು ಇಣುಕುನೋಟ'' ಕೃತಿ ಅವರ ಬಹುಮುಖ ಪ್ರತಿಭೆಗೆ ಸಾಕ್ಷಿಯಾಗಿದೆ.

ಆಂಧ್ರಪ್ರದೇಶದ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದಲ್ಲಿ ಇತಿಹಾಸ ವಿಭಾಗದ ಪ್ರಾಧ್ಯಾಪಕ ಮತ್ತು ಮುಖ್ಯಸ್ಥರಾಗಿ ಸೇವೆ ಸಲ್ಲಿಸಿ ೧೯೯೦ರಲ್ಲಿ ನಿವೃತ್ತರಾದ ಅವರು, ನಿವೃತ್ತಿಯ ಅನಂತರವೂ ಸಂಶೋಧನ ಕಾರ್ಯವನ್ನು ಕೈಬಿಡಲಿಲ್ಲ. ೧೯೯೭ರ ಜೂನ್ ೧೬ರಂದು ಅವರು ವಿಧಿವಶರಾದರು.

ಈಗ ಅವರ ಸ್ಮರಣಾರ್ಥವಾಗಿ ಪ್ರತಿವರ್ಷ ''ಬಾ.ರಾ. ಗೋಪಾಲ್ ದತ್ತಿ ಪ್ರಶಸ್ತಿ'' ಯುವ ಸಂಶೋಧಕರಿಗೆ ಪ್ರದಾನ ವಾಗುತ್ತಿದೆ. ಇದು ಅವರ ದಣಿವರಿಯದ ಪರಿಶ್ರಮ ಮತ್ತು ಶಾಸನಶಾಸ್ತ್ರದ ಮೇಲಿನ ಅಪಾರ ನಿಷ್ಠೆಗೆ ದೊರೆತ ಶಾಶ್ವತ ಗೌರವವಾಗಿದೆ.

❐ ❐ ❐

ಎಂ. ಚಿದಾನಂದಮೂರ್ತಿ

(೧೯೩೧–೨೦೨೦)

ಬಿ. ವೆಂಕಟರಾಮಣ್ಣ

ಎಂ. ಚಿದಾನಂದಮೂರ್ತಿ ಅವರು ಕನ್ನಡದ ಹಿರಿಯ ಲೇಖಕರು, ವಿದ್ವಾಂಸರು, ಸಂಶೋಧಕರು ಹಾಗೂ ಇತಿಹಾಸ ತಜ್ಞರು, ಕನ್ನಡ ಭಾಷೆ, ಸಾಹಿತ್ಯ ಹಾಗೂ ಕರ್ನಾಟಕ ಇತಿಹಾಸದಲ್ಲಿ ವಿಶೇಷ ಕೃಷಿ ಮಾಡಿದವರು. ಇವರು ೧೯೩೧ನೇ ಮೇ ೧೦ರಂದು ದಾವಣಗೆರೆ ಜಿಲ್ಲೆಯ ಚೆನ್ನಗಿರಿ ತಾಲೂಕಿನ ಹಿರೇಕೋಗಲೂರಿನಲ್ಲಿ ಜನಿಸಿದರು. ತಂದೆ ಕೊಟ್ಟೂರಯ್ಯ, ತಾಯಿ ಪಾರ್ವತಮ್ಮ. ಮೂರ್ತಿಗಳ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾಭ್ಯಾಸ ಕೋಗಲೂರು, ಸಂತೇಬೆನ್ನೂರುಗಳಲ್ಲಿ ನಡೆಯಿತು. ಚಿದಾನಂದಮೂರ್ತಿಯವರು ಇಂಟರ್ ಓದುವಾಗ ಜಿ.ಎಸ್. ಶಿವರುದ್ರಪ್ಪ, ಎಲ್. ಬಸವರಾಜು, ತೀ.ನಂ.ಶ್ರೀ. ಮೊದಲಾದವರ ಪಾಠ ಪ್ರವಚನಗಳು ದೊರೆತುವು. ಅವರ ಒಡನಾಟದಿಂದಾಗಿ ಕನ್ನಡಸಾಹಿತ್ಯವನ್ನು ಅಧ್ಯಯನ ಮಾಡಬೇಕೆಂಬ ಬಯಕೆ ಅವರಲ್ಲಿ ಉಂಟಾಯಿತು.

ಮೂರ್ತಿ ಅವರು ೧೯೫೦ರಲ್ಲಿ ಮಹಾರಾಜ ಕಾಲೇಜಿನಲ್ಲಿ ಕನ್ನಡ ಆನರ್ಸ್ ವಿದ್ಯಾರ್ಥಿಯಾಗಿ ಸೇರಿದರು. ಕುವೆಂಪು ಅವರ ವಿದ್ಯಾರ್ಥಿಯಾದೆನಲ್ಲಾ ಎಂಬ ಹೆಮ್ಮೆ ಅವರ ಹೃದಯ ತುಂಬಿತ್ತು. ೧೯೫೩ರಲ್ಲಿ ಬಿ.ಎ. ಆನರ್ಸ್ ಪದವಿಯನ್ನು ಪ್ರಥಮ ರ್‍ಯಾಂಕ್ ಚಿನ್ನದ ಪದಕದೊಂದಿಗೆ ಪಡೆದರು. ತುಮಕೂರು, ಕೋಲಾರ ಸರ್ಕಾರಿ ಕಾಲೇಜುಗಳಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ ಅನಂತರ ಕನ್ನಡ ಎಂ.ಎ.ಗೆ ಸೇರಿದರು.

ಕನ್ನಡ ಎಂ.ಎ. ತರಗತಿಯಲ್ಲಿ ಇರುವಾಗಲೇ ಗುರುಗಳಾದ ಡಿ.ಎಲ್. ನರಸಿಂಹಚಾರ್ಯರ ಸೂಚನೆಯ ಮೇಲೆ ಕನ್ನಡ ಶಾಸನಗಳ ಆಧಾರದಿಂದ

ಪಂಪಕವಿಗೆ ಹಿನ್ನೆಲೆಯಾಗಿದ್ದ ಬದುಕನ್ನು ಪುನಾರಚಿಸುವ ಪ್ರಯತ್ನಕ್ಕೆ ಕೈ ಹಾಕಿದರು. ಈ ಅಧ್ಯಯನ ವನ್ನು 'ಪಂಪಕವಿ ಮತ್ತು ಮೌಲ್ಯಪ್ರಸಾರ' ಎಂಬ ಹೆಸರಿನಿಂದ ದ್ವಿತೀಯ ಎಂ.ಎ. ತರಗತಿಯ ಗೋಷ್ಠಿಯಲ್ಲಿ ಮಂಡಿಸುವುದರ ಮೂಲಕ ಮೂರ್ತಿಗಳು ಕನ್ನಡ ಸಂಶೋಧನ ಕ್ಷೇತ್ರ ಪ್ರವೇಶಿಸಿದರು. ಶಾಸನಗಳಲ್ಲಿ ಹುದುಗಿರುವ ಮಾಹಿತಿಯನ್ನು ಕಂಡು ಕುತೂಹಲಗೊಂಡ ಚಿದಾನಂದ ಮೂರ್ತಿಯವರು ಅದನ್ನೇ ಮುಂದೆ ತಮ್ಮ ಪ್ರಮುಖ ಸಂಶೋಧನ ಕ್ಷೇತ್ರವಾಗಿ ಆಯ್ಕೆ ಮಾಡಿಕೊಂಡರು. ೧೯೫೭ರಲ್ಲಿ ಕನ್ನಡ ಎಂ.ಎ. ಪದವಿಯನ್ನು ಪ್ರಥಮ ರ್‍ಯಾಂಕ್ ಚಿನ್ನದ ಪದಕದೊಂದಿಗೆ ಪಡೆದರು. 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಎಂಬ ಮಹಾಪ್ರಬಂಧ ಸಿದ್ಧಪಡಿಸಿ ತೀ.ನಂ. ಶ್ರೀಕಂಠಯ್ಯ ಅವರ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಪದವಿಯನ್ನು ೧೯೬೪ರಲ್ಲಿ ಪಡೆದರು.

ಇವರು ಹಲವಾರು ಶ್ರೇಷ್ಠ ಸಂಶೋಧನ ಗ್ರಂಥಗಳನ್ನು, ಸುಮಾರು ೩೦೦ಕ್ಕೂ ಹೆಚ್ಚು ಪ್ರಬಂಧಗಳನ್ನು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಪ್ರಕಟಿಸಿದ್ದಾರೆ. 'ಶೂನ್ಯ ಸಂಪಾದನೆಯನ್ನು ಕುರಿತು' ಎಂಬ ಪುಸ್ತಕದ ಮೂಲಕ ವಚನ ಸಾಹಿತ್ಯದ ಅಧ್ಯಯನಕ್ಕೆ ಶ್ರೀಕಾರ ಹಾಕಿದರು.

ಭಾಷೆ, ವ್ಯಾಕರಣ, ಸ್ಥಳನಾಮ, ಛಂದಸ್ಸು, ಗ್ರಂಥಸಂಪಾದನೆ, ಸಾಹಿತ್ಯಚರಿತ್ರೆ, ಜಾನಪದ, ಶಾಸನ, ಕರ್ನಾಟಕ ಇತಿಹಾಸ, ಸಂಸ್ಕೃತಿ– ಹೀಗೆ ಹಲವಾರು ಕ್ಷೇತ್ರಗಳಲ್ಲಿ ಅವರು ಸಂಶೋಧನೆ ಕೈಗೊಂಡಿದ್ದರು. ಅವರ ಸಂಶೋಧನೆಯಲ್ಲಿ ವ್ಯಾಪಕವಾದ ವ್ಯಾಸಂಗ, ಆಳವಾದ ಅಧ್ಯಯನ, ಅಪಾರವಾದ ಪರಿಶ್ರಮ, ಪ್ರತಿಭೆ ಮಿಳಿತಗೊಂಡಿವೆ.

೧೯೬೦ರ ದಶಕದಲ್ಲಿ ಪ್ರಕಟಿಸಲು ಸಿದ್ಧಪಡಿಸಿದ ಹಲವಾರು ಲೇಖನಗಳಲ್ಲಿ ಉಂಬರಿ, ಇರ್, ಡುಂಡುಚಿ, ಅಮ್ಮ, ಅಬ್ಬೆ, ಅಲ್ಲಮ, ಬಾದಬ್ಬೆ ಶಬ್ದಗಳನ್ನು ಕನ್ನಡ ಭಾಷೆ ವ್ಯಾಕರಣದ ಅವಸ್ಥಾಂತರಗಳ ಹಿನ್ನೆಲೆಯಲ್ಲಿ ಮೂರ್ತಿಗಳು ಪರಿಶೀಲಿ ಸಿದ್ದಾರೆ. ಅನಂತರ 'ಭಾಷಾವಿಜ್ಞಾನದ ಮೂಲತತ್ವಗಳು'(೧೯೬೫), 'ವಾಗರ್ಥ'(೧೯೮೧) ಎಂಬ ಭಾಷೆಗೆ ಸಂಬಂಧಿಸಿದ ಎರಡು ಮುಖ್ಯವಾದ ಕೃತಿಗಳು ಬಂದುವು.

'ಭಾಷಾವಿಜ್ಞಾನದಮೂಲತತ್ವಗಳು' ಕೃತಿ ವರ್ಣನಾತ್ಮಕ ಮತ್ತು ಐತಿಹಾಸಿಕ

ಭಾಷಾ ವಿಜ್ಞಾನದ ಪ್ರಾಥಮಿಕ ತತ್ತ್ವಪರಿ ಕಲ್ಪನೆಗಳನ್ನು ಸಮರ್ಥವಾಗಿ ಪರಿಚಯ ಮಾಡಿಕೊಡುತ್ತದೆ. ಭಾಷೆಯ ಉಗಮ, ಭಾಷಾಸ್ವರೂಪ, ಭಾಷಾ ವರ್ಗೀಕರಣ, ಭಾಷಾ ವ್ಯತ್ಯಾಸ, ಭಾಷೆ, ಉಪಭಾಷೆಗಳ ನಡುವಿನ ಸಂಬಂಧ, ಭಾಷೆ–ಬರಹ–ಭಾಷಾ ವಿಜ್ಞಾನದ ಇತಿಹಾಸಗಳನ್ನು ಸರಳವಾದ ಭಾಷೆಯಲ್ಲಿ ನಿರೂಪಿಸಲಾಗಿದೆ.

ವಾಗರ್ಥ ಎಂಬ ಸಂಪ್ರಬಂಧಗಳ ಸಂಕಲನ ಚಿದಾನಂದಮೂರ್ತಿ ಯವರು ಭಾಷಾವಿಜ್ಞಾನದ ದೃಷ್ಟಿಯಿಂದ ಕನ್ನಡ ಭಾಷೆ, ಸಾಹಿತ್ಯಗಳನ್ನು ಅಧ್ಯಯನ ಮಾಡಿದುದರ ಫಲ. ಇದರಲ್ಲಿ ಕನ್ನಡದಲ್ಲಿ ಸ್ಥಳನಾಮಗಳ ಅಧ್ಯಯನಕ್ಕೂ ನಾಂದಿಹಾಡಿ ಕನ್ನಡ ಸಂಶೋಧನಶಾಸ್ತ್ರದ ಪರಿಧಿಯನ್ನು ವಿಸ್ತರಿಸಿದರು.

'ಛಂದೋತರಂಗ' ಛಂದಸ್ಸಿಗೆ ಸಂಬಂಧಿಸಿದ ಅವರ ಲೇಖನಗಳ ಸಂಕಲನ. ತ್ರಿಪದಿಯ ಸ್ವರೂಪ ಇತಿಹಾಸ ಕುರಿತ ಅವರ ಲೇಖನ ವಿದ್ವಾಂಸರ ಮೆಚ್ಚುಗೆಗೆ ಪಾತ್ರವಾಯಿತು. ಲಯಗ್ರಾಹಿ–ಲಯೋತ್ತರಗಳ ನಡುವಿನ ಸಂಬಂಧ ಪ್ರಯೋಗಗಳನ್ನು ವಿಶ್ಲೇಷಿಸಿದ್ದಾರೆ. ಒನಕೆವಾಡಿನ ಸ್ವರೂಪ ಕುರಿತ ಚರ್ಚೆಯೂ ಕಗ್ಗದ ವ್ಯುತ್ಪತ್ತಿ, ಸ್ವರೂಪಗಳ ವಿವರಣೆಯೂ ಇದೆ.

ಹಳಗನ್ನಡ ಕೃತಿಗಳನ್ನು ಕುರಿತಂತೆ ಮೂರ್ತಿ ಅವರು ಅನೇಕ ಲೇಖನಗಳನ್ನು ಬರೆದಿದ್ದಾರೆ. ಉತ್ತಂಗಿಯವರ ಸರ್ವಜ್ಞನ ವಚನಗಳ ಆವೃತ್ತಿಗಳು, ಅಂಬಿಗರ ಚೌಡಯ್ಯನ ವಚನವೊಂದರ ಪಾಠನಿರ್ಣಯ, ಪಂಪಭಾರತ, ಯಶೋಧರ ಚರಿತೆ, ಅಭಿನವ ದಶಕುಮಾರ ಚರಿತೆಗಳ ಮೂಲ ಹಸ್ತಪ್ರತಿಯನ್ನು ಆಧರಿಸಿ ಆ ಕೃತಿಯ ಕೆಲವು ಪ್ರಚಲಿತ ಪಾಠಗಳ ದೋಷಗಳನ್ನು ಕುರಿತ ಅವರ ವಿವೇಚನೆ ಉಲ್ಲೇಖನೀಯ. ಗ್ರಂಥಸಂಪಾದನೆಯ ಮಹತ್ತ್ವ, ಪ್ರಯೋಜನ ಆವಶ್ಯಕತೆಗಳನ್ನು ವಿವರಿಸುವ ಅವರ ಇದೇ ಹೆಸರಿನ ಚಿಕ್ಕಲೇಖನ ಮೌಲಿಕ ವಾದದ್ದು. ರನ್ನನ ಗದಾಯುದ್ಧದ 'ಪಸವಿನೊಳ್ ಅನ್ನಮಂ' ಎಂಬ ಚಂಪಕಮಾಲಾ ವೃತ್ತವನ್ನು ಪರಿಷ್ಕರಿಸಿ ಕೊಟ್ಟಿರುವುದನ್ನು ಗಮನಿಸಬೇಕು.

ಚಿದಾನಂದಮೂರ್ತಿ ಅವರ ಸಾಹಿತ್ಯ ಬರೆವಣಿಗೆ ಕವಿರಾಜಮಾರ್ಗ ಕಾಲದ ಕನ್ನಡ ಸಾಹಿತ್ಯದಿಂದ ಹಿಡಿದು ಮುದ್ದಣ್ಣನವರಿಗೆ ವ್ಯಾಪಿಸಿದೆ. ಸಂಶೋಧನ ತರಂಗದ ಎರಡು ಸಂಪುಟಗಳು, ಲಿಂಗಾಯತ ಅಧ್ಯಯನಗಳು, ಹೊಸತು–ಹೊಸತು ಈ ದೃಷ್ಟಿಯಿಂದ ಮುಖ್ಯವಾದವು. ವಚನಸಾಹಿತ್ಯಕ್ಕೆ ಸಂಬಂಧಿಸಿದಂತೆ

'ವಚನ ಸಾಹಿತ್ಯ', 'ವಚನ ಶೋಧ-೧', 'ವಚನ ಶೋಧ-೨' ಎಂಬ ಪ್ರತ್ಯೇಕ ಪುಸ್ತಕಗಳನ್ನೇ ಹೊರಹೊಂದಿದ್ದಾರೆ.

'ಪಂಪಕವಿ ಮತ್ತು ಮೌಲ್ಯ ಪ್ರಸಾರ' ಲೇಖನವನ್ನಷ್ಟೇ ಪಂಪನನ್ನು ಕುರಿತ ಅನೇಕ ವಿಷಯಗಳನ್ನು 'ಹೊಸತು- ಹೊಸತು' ನಲ್ಲಿರುವ ಐದಾರು ಲೇಖನಗಳಲ್ಲಿ ನಿರೂಪಿಸಿದ್ದಾರೆ. ನಾಗವರ್ಮನ 'ವರ್ಧಮಾನ ಪುರಾಣ'ದ ಹೆಸರು ಆಶ್ವಾಸಾಂತ ಗದ್ಯದಲ್ಲಿ ಬರುವಂತೆ ವೀರವರ್ಧಮಾನ ಪುರಾಣ, 'ಸುಕುಮಾರ ಚರಿತೆ'ಯ ರಚನಾ ಕಾಲ ೧೦೬೬-೬೭ ಇತ್ಯಾದಿ ವಿಷಯಗಳನ್ನು ಅನೇಕ ಸಂಪ್ರಬಂಧಗಳಲ್ಲಿ ತೋರಿಸಿಕೊಟ್ಟಿದ್ದಾರೆ. ವೆಂಕಣ್ಣಯ್ಯನವರ ವಾದವನ್ನು ಪರಿಶೀಲಿಸುತ್ತಾ ಬೌದ್ಧರು ಕನ್ನಡದಲ್ಲಿ ಬರೆದಿರಲಿಲ್ಲ ಎಂದೇ ವಾದಿಸಿದ್ದಾರೆ. ಕವಿರಾಜಮಾರ್ಗಕ್ಕೆ ಹಿಂದಿನ ಕನ್ನಡ ಸಾಹಿತ್ಯ ಎಂಬುದರಲ್ಲಿ ಬಾದಾಮಿ ಚಾಲುಕ್ಯರ ಕಾಲದಲ್ಲಿ ಉನ್ನತ ಸಾಹಿತ್ಯ ರಚನೆಯ ಆರಂಭವಾಯಿತು ಎಂದು ತರ್ಕಿಸಿದ್ದಾರೆ. ಈ ಸಂಬಂಧವಾದ ಅದರ ಬಹುಪಾಲು ಬರೆಹಗಳು ಸಂಕಲನಗೊಂಡಿವೆ.

ವೀರಶೈವ ಸಾಹಿತ್ಯದ ವಿಷಯವಾಗಿ ೭೫ಕ್ಕೂ ಹೆಚ್ಚು ಲೇಖನಗಳನ್ನು ಚಿ.ಮೂ. ಬರೆದಿದ್ದಾರೆ. ವಚನಗಳನ್ನು ಆಧಾರ ವಾಗಿಟ್ಟುಕೊಂಡು ಅಲ್ಲಮನ ಜೀವನ ಮತ್ತು ಸಾಧನೆ, ಸಿದ್ಧರಾಮನ ಅಂತರಂಗದ ಚಲನವಲನಗಳು, ಬಸವಣ್ಣನವರ ಮಾನವತಾವಾದವನ್ನು ಕುರಿತು ವಿವೇಚಿಸಿದ್ದಾರೆ. ಅಲ್ಲಮನ ವಚನಗಳ ಅಂಕಿತ ಗೊಗ್ಗೇಶ್ವರ, ಅಕ್ಕನ ಗಂಡ ಕೌಶಿಕ, ಇತಿಹಾಸದ ಕಸಪಯ್ಯ ನಾಯಕ ಎಂಬುದನ್ನು ಸ್ಥಾಪಿಸಿದ್ದಾರೆ. ಹರಿಹರನ ಕಾಲದೊಂದಿಗೆ ಹಂಪೆಯಲ್ಲಿ ಹರಿಹರನ ವಾಸಸ್ಥಾನ, ಹರಿಹರನ ಹೂದೋಟ, ಚಾಮರಸನ ಆಶ್ರಯ, ಬೇಲೂರಿನಲ್ಲಿ ರಾಘವಾಂಕನ ಸಮಾಧಿ, ಮಾಗಡಿಯ ಕಲ್ಯ ಎಂಬಲ್ಲಿಯ ಪಾಲ್ಕುರಿಕೆ ಸೋಮನಾಥನ ಸಮಾಧಿ ಯನ್ನು ಕ್ಷೇತ್ರ ಶೋಧ ಮಾಡಿ ಗುರುತಿಸಿದ್ದಾರೆ. ದಲಿತವರ್ಗದ ಶರಣರಾದ ಉರಿಲಿಂಗಪೆದ್ದಿಯ ಜ್ಞಾನ, ವ್ಯಾಸಂಗ ಕುರಿತು ಬರೆದಿದ್ದಾರೆ. ಅಜಗಣ್ಣನ ವಚನಗಳ ಅಂಕಿತ ಮಹಾಘನ ಸೋಮೇಶ್ವರ ಎಂಬುದನ್ನು ಮೊದಲ ಬಾರಿಗೆ ಶೋಧಿಸಿದ್ದಾರೆ. ಸೋಮನಾಥರಂಥ ಅಲಕ್ಷಿತ ವಚನಕಾರರ ಬಗ್ಗೆ ಪ್ರಸ್ತಾವಿಸಿದ್ದಾರೆ.

ವಚನಸಾಹಿತ್ಯವನ್ನು ಕರ್ನಾಟಕ ಸಂಸ್ಕೃತಿಯ ಒಂದು ಮಹತ್ತ್ವದ ಭಾಗವಾಗಿ ಪರಿಗಣಿಸಿ ಹಲವು ಲೇಖನಗಳನ್ನು ಬರೆದಿದ್ದಾರೆ. ಶ್ವಪಚಯ್ಯನ ಕಥೆಯ

ಆಶಯ, ಹರಿಜನರಿಗಿದ್ದ ಹಿರಿಯ ಕುಲ, ಹಿರಿಯ ಮಹೇಶ್ವರ ಎಂಬ ಹೆಸರುಗಳ ಅಂತರ್ಜಾತೀಯ ವಿವಾಹದ ಬಗ್ಗೆ ಚನ್ನಬಸವಣ್ಣನ ವಚನ–ಈ ದೃಷ್ಟಿಯಿಂದ ಮುಖ್ಯವಾದವು. ಮಧ್ಯಕಾಲೀನ ಕನ್ನಡಸಾಹಿತ್ಯ ಮತ್ತು ಅಸ್ಪೃಶ್ಯತೆ ಎಂಬ ಕೃತಿಯಲ್ಲಿಯ ಮೊದಲ ಉಪನ್ಯಾಸದಲ್ಲಿ ವರ್ಣ, ಜಾತಿ, ಅಸ್ಪೃಶ್ಯತೆ, ೧೮ ಜಾತಿಗಳು, ಅವರ ವಸತಿ ಬಗೆಗೆ, ಎರಡನೆಯ ಉಪನ್ಯಾಸದಲ್ಲಿ ವೇಷಭೂಷಣ, ಆಹಾರ ಪಾನೀಯಗಳು, ಜಾತಿ ಸಮಾನತೆ, ಮತಾಂತರ, ಅಂತರ್ ಜಾತೀಯ ವಿವಾಹ, ಪ್ರೇರಣೆಗಳು, ಅಸ್ಪೃಶ್ಯ ವಚನಕಾರರ ಧೋರಣೆ ಆಶೋತ್ತರಗಳು ಮೊದಲಾದವನ್ನು ವಿವರಿಸಲಾಗಿದೆ. ಮೂರನೆಯ ಉಪನ್ಯಾಸದಲ್ಲಿ ಹರಿಹರ, ರಾಘವಾಂಕ, ಭೀಮ ಕವಿಗಳ ರಚನೆಗಳನ್ನು ಅವರ ಕಾವ್ಯಗಳಲ್ಲಿ ಬರುವ ಕೇಶಿರಾಜ, ಜೊಮ್ಮಣ್ಣ, ಮಾದಾರ ಚನ್ನಯ್ಯ, ಶ್ವಪಚಯ್ಯರ ಕಥೆಗಳನ್ನು 'ದಲಿತಪ್ರಜ್ಞೆ'ಯ ಹಿನ್ನೆಲೆಯಲ್ಲಿ ವಿವೇಚಿಸಿದೆ.

ಜಾನಪದ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮೂರ್ತಿಯವರು 'ಗ್ರಾಮೀಣ' ಹಾಗೂ 'ಪಗರಣ ಮತ್ತು ಇತರ ಸಂಪ್ರದಾಯಗಳು' ಎಂಬ ಎರಡು ಪುಸ್ತಕಗಳನ್ನು ರಚಿಸಿದ್ದಾರೆ. ಒಂದೊಂದು ಸಂಕಲನದಲ್ಲಿ ೧೯ ಸಂಪ್ರಬಂಧಗಳಿವೆ. ಪ್ರಾಚೀನ ಕರ್ನಾಟಕದ ಗಮಕ–ಗಮಕಿಗಳಿಂದ ಹಿಡಿದು ಗುಲಾಮರ ಮಾರಾಟದ ಗುಲಾಮಗಿರಿ ವಿಶೇಷಗಳವರೆಗೆ ಅದು ವ್ಯಾಪಿಸಿದೆ. ನಾಗಬೆತ್ತ, ಶೂಲದ ಹಬ್ಬ, ಒನಕೆವಾಡು, ಸೌಭಾಗ್ಯದ ಲಕ್ಷಣ, ಹಾದಿದೆವ್ವದ ಆಟ, ಹಾಗೂ ಜಗ್ಗಲಗೆಗಳ ಬಗ್ಗೆ ಇಲ್ಲಿ ವಿವೇಚಿಸಿದ್ದಾರೆ. ಪಗರಣ, ಜೋಕುಮಾರ, ಮೈಲಾರ–ನೊಳವ ಲೇಖನಗಳಲ್ಲಿ ಜಾನಪದ ಸಾಮಗ್ರಿಯನ್ನು, ಪ್ರಾಚೀನ ಕನ್ನಡ ಸಾಹಿತ್ಯದ ಉಲ್ಲೇಖಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ. ಜಾನಪದ ಶಾಸ್ತ್ರದಲ್ಲಿ ಅಂತರ್‌ಶಿಸ್ತೀಯ ಅಧ್ಯಯನ ಎಂಬುದಕ್ಕೆ ಸಂಬಂಧಿಸಿದಂತೆ 'ಕಬ್ಬಿಣದ ಒಂದು ನಿದರ್ಶನ' ಎಂಬ ಲೇಖನ ಗಮನಿಸತಕ್ಕದ್ದು. ಕಬ್ಬಿಣದ ಬಗ್ಗೆ ಇರುವ ವಿವಿಧ ರಾಜ್ಯಗಳಲ್ಲಿಯ ನಂಬಿಕೆಗಳು, ಸಾಂಸ್ಕೃತಿಕ ಮಾನವವಿಜ್ಞಾನದಲ್ಲಿ ಅದರ ಬಗ್ಗೆ ನಡೆದಿರುವ ಸಂಶೋಧನೆ, ಭಾಷಾವಿಜ್ಞಾನದ ವಿವರಗಳು ಇವೆಲ್ಲ ಜಾನಪದವಿಜ್ಞಾನದ ದೃಷ್ಟಿಯಿಂದ ಮಹತ್ವಪೂರ್ಣವಾದದ್ದಾಗಿವೆ.

ಚಿದಾನಂದಮೂರ್ತಿಯವರ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಮಹತ್ತ್ವದ ಕೃತಿ. ಕ್ರಿ.ಶ. ೪೫೦ ರಿಂದ ೧೧೫೦ರ ಅವಧಿಯ ಅನೇಕ ಶಾಸನಗಳನ್ನು

ಅಧ್ಯಯನ ಮಾಡಿ ರಚಿಸಿದಂಥದು. ಶಾಸನಗಳ ಆಧಾರದಿಂದ ಮೊತ್ತಮೊದಲ ಬಾರಿಗೆ ಅನೇಕ ಹೊಸ ವಿಷಯಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ವೇಳವಾಳಿ, ಲೆಂಕವಾಳಿ, ಸಹಗಮನ, ಸಮಾಧಿಮರಣ, ಅಗ್ರಹಾರ, ಬ್ರಹ್ಮಪುರಿ, ಘಟಿಕಾಸ್ಥಾನ, ತುರುಗೊಳ್, ಪೆಣ್ಬುಯಲ್, ಕಾಪಾಲಿಕ, ಕಾಳಾಮುಖ, ಲಾಕುಳಶೈವ ಮೊದಲಾದ ನೂರಾರು ವಿಷಯಗಳ ಬಗ್ಗೆ ಚರ್ಚಿಸಿದ್ದಾರೆ. ಜೈನ, ಬೌದ್ಧ, ಶೈವ, ವೈಷ್ಣವ ಧರ್ಮಗಳ ಬಗ್ಗೆ ಮಾಡಿರುವ ಶೋಧಗಳು ಗಮನಿಸತಕ್ಕ ವಿಚಾರಗಳು.

ಕನ್ನಡ, ಕರ್ನಾಟಕ ಕುರಿತು ಮೂರ್ತಿ ಅವರು ಮಾಡಿದ ಹೋರಾಟಗಳು ಹಲವು. ೧೯೮೨ರಲ್ಲಿ ಗೋಕಾಕ್ ವರದಿ ಜಾರಿಗೆ ಕನ್ನಡ ಸಾಹಿತಿಗಳು, ಕಲಾವಿದರು ಮಾಡಿದ ಹೋರಾಟದಿಂದ ಪ್ರೇರಿತರಾಗಿ ಅದೇ ವರ್ಷ ಏಪ್ರಿಲ್ ೧೩ರಂದು ಬೆಂಗಳೂರಿನಲ್ಲಿ 'ಸಾಹಿತಿಗಳ-ಕಲಾವಿದರ ಬಳಗ' ಅಸ್ತಿತ್ವಕ್ಕೆ ಬಂದಾಗ ಕನ್ನಡ ಚಳವಳಿಯ ನಾಯಕರಾಗಿ ಚಿದಾನಂದ ಮೂರ್ತಿಗಳು ಮುಂದೆ ಬಂದರು. ಆ ಮೂಲಕ ಕನ್ನಡ ಚಳವಳಿಯ ಬಗ್ಗೆ ಜನಸಾಮಾನ್ಯರಲ್ಲಿದ್ದ ಕೀಳು ಮನೋಭಾವ ತೊಲಗಲು ಮೂರ್ತಿಗಳು ಮಾಡಿದ ಪ್ರಯತ್ನ ಯಶಸ್ವಿಯಾಯಿತು. ೧೯೮೮ರಲ್ಲಿ ಕನ್ನಡ ಶಕ್ತಿಕೇಂದ್ರವನ್ನು ಸ್ಥಾಪಿಸಿ ಅದರ ಕಾರ್ಯಾಧ್ಯಕ್ಷರಾದರು. ಅನಂತರ ಅದು ಕರ್ನಾಟಕಾದ್ಯಂತ ವ್ಯಾಪಿಸಲು ಕಾರಣರಾದರು. ಜನಸಾಮಾನ್ಯರಲ್ಲಿ ಕನ್ನಡತನ ಉಂಟಾಜಾಗೃತವಾಗಲು 'ಕನ್ನಡ ಸಂಸ್ಕೃತಿ ನಮ್ಮ ಹೆಮ್ಮೆ' ಎಂಬ ಕಿರುಹೊತ್ತಿಗೆಯನ್ನು ಪ್ರಕಟಿಸಿದರು. 'ಕನ್ನಡ-ಕನ್ನಡಿಗ-ಕರ್ನಾಟಕ' ಎಂಬ ಮೌಲ್ಯಯುತ ಪುಸ್ತಕವನ್ನು ಸಂಪಾದಕ ಮಂಡಳಿಯ ನೆರವಿನೊಂದಿಗೆ ಹೊರತಂದರು. ತಂಜಾವೂರಿನಲ್ಲಿ ತಮಿಳು ವಿಶ್ವವಿದ್ಯಾನಲಯ ಸ್ಥಾಪನೆಯಾಗಿರುವಂತೆ ಕರ್ನಾಟಕದಲ್ಲಿ ಕನ್ನಡ ವಿಶ್ವವಿದ್ಯಾಲಯ ಸ್ಥಾಪನೆ ಮಾಡಲು ಪ್ರಯತ್ನಿಸಿ ಸಫಲರಾದರು. ಕರ್ನಾಟಕದ ಭಾಷೆ, ಸಾಹಿತ್ಯ, ಇತಿಹಾಸ, ಭೂಶೋಧ, ಲಲಿತ ಕಲೆ, ಸಮಾಜಶಾಸ್ತ್ರ, ಜಾನಪದ, ಅರ್ಥಶಾಸ್ತ್ರ, ವಿಜ್ಞಾನ, ಸಮೂಹ ಮಾಧ್ಯಮ ಮುಂತಾದವುಗಳ ಅಧ್ಯಯನ ನಡೆಯಲು ಪೂರ್ಣಪ್ರಮಾಣದ ಉನ್ನತ ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ಬರಬೇಕೆಂಬುದು ಅವರ ಆಶಯವಾಗಿತ್ತು.

ಎಂ. ಚಿದಾನಂದಮೂರ್ತಿ ಅವರಿಗೆ ಅನೇಕ ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ದೇವರಾಜ ಬಹದ್ದೂರ್ ಪ್ರಶಸ್ತಿ, ತೀ.ನಂ.ಶ್ರೀ. ಸ್ಮಾರಕ ಬಹುಮಾನ, ಶಿವರಾತ್ರೀಶ್ವರ ದತ್ತಿಪ್ರಶಸ್ತಿ, ಹೊಸತು ಹೊಸತು

ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಆಳ್ವಾಸ್ ನುಡಿಸಿರಿ ಪ್ರಶಸ್ತಿ ಬಂದಿವೆ. ಕನ್ನಡ ಸಾಹಿತ್ಯ ಪರಿಷತ್ ವಜ್ರಮಹೋತ್ಸವ ಗೌರವ, ಕರ್ನಾಟಕ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ, ಭೂಸನೂರು ಮಠ ಸ್ಮಾರಕ ಗೌರವ, ಅನಕೃ ಪ್ರತಿಷ್ಠಾನ ಪ್ರಶಸ್ತಿ, ಗೋವಿಂದ ಪೈ ಸಂಶೋಧನ ಕೇಂದ್ರದ ಸೇಡಿಯಾಪು ಪ್ರಶಸ್ತಿ, ಪಂಪ ಪ್ರಶಸ್ತಿ, ರಾಷ್ಟ್ರಪತಿಯಿಂದ ಶಾಸ್ತ್ರೀಯಭಾಷಾ ಪುರಸ್ಕಾರ ಇವರಿಗೆ ಲಭಿಸಿವೆ.

ಇವರು ಜನವರಿ ೧೧, ೨೦೨೦ರಂದು ನಿಧನರಾದರು.

❐ ❐ ❐

ಕಮಲಾ ಹಂಪನಾ

(೧೯೩೫–೨೦೨೪)

ಅಕ್ಕಮಹಾದೇವಿ

ಮಹಿಳಾ ಸಾಹಿತ್ಯದಲ್ಲಿ ಅಚ್ಚಳಿಯದ ಹೆಜ್ಜೆ ಗುರುತುಗಳನ್ನು ಮೂಡಿಸಿರುವ ಇವರು ಕಥೆ, ಕಾವ್ಯ, ನಾಟಕ, ಸಂಶೋಧನೆ, ಸಂಪಾದನೆ, ವಿಮರ್ಶೆ ಹೀಗೆ ಹಲವಾರು ಕ್ಷೇತ್ರಗಳಲ್ಲಿ ನಿರಂತರ ಕ್ರಿಯಾಶೀಲರಾಗಿ ದುಡಿದವರು. ಬೆಂಗಳೂರು ಜಿಲ್ಲೆಯ ದೇವನಹಳ್ಳಿಯಲ್ಲಿ ೨೮–೧೦–೧೯೩೫ ರಂದು ಕಮಲಮ್ಮ ಜನಿಸಿದರು. ಇವರ ತಂದೆ ರಂಗಧಾಮ ನಾಯಕ್, ತಾಯಿ ರಂಗಲಕ್ಷ್ಮಮ್ಮ. ಬಾಲ್ಯದಲ್ಲಿ ಶ್ರೀಮಂತಿಕೆಯ ಸುಖವನ್ನು ಅನುಭವಿಸಿದವರು. ಇವರ ಪ್ರಾಥಮಿಕ ಶಿಕ್ಷಣ ಚಳ್ಳಕೆರೆಯಲ್ಲಿ ಆರಂಭವಾಗಿ ಕ್ಯಾತಸಂದ್ರದಲ್ಲಿ ಮುಂದುವರಿಯಿತು. ತಂದೆ ತೀರಿಕೊಂಡ ಮೇಲೆ ಶ್ರೀಮಂತಿಕೆ ಕರಗಿತು. ಬಡತನ ಆವರಿಸಿತು. ಅಕ್ಕ ಸುಮಂಗಲಾದೇವಿ ಹಾಗೂ ಅಣ್ಣ ಕೇಶವಮೂರ್ತಿಯವರ ಆಶ್ರಯದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿದರು. ತುಮಕೂರಿನಲ್ಲಿ ಹೈಸ್ಕೂಲ್ ವಿದ್ಯಾಭ್ಯಾಸ ನಡೆಸಿ ೧೯೫೩ರಲ್ಲಿ ಎಸ್.ಎಸ್.ಎಲ್.ಸಿ. ಉತ್ತೀರ್ಣರಾದರು.

ತುಮಕೂರಿನಲ್ಲಿ ಸರ್ಕಾರಿ ಕಾಲೇಜಿನಲ್ಲಿ ಜೂನಿಯರ್ ಇಂಟರ್ ಮೀಡಿಯಟ್ ತರಗತಿಗೆ ಪ್ರವೇಶ ಪಡೆದರು. ಇಲ್ಲಿರುವಾಗಲೇ ಎಚ್.ಪಿ. ನಾಗರಾಜಯ್ಯ ಎಂಬ ಸಹಪಾಠಿಯ ಪರಿಚಯವಾಯಿತು. ಬಿ.ಎ. ಆನರ್ಸ್ ಮಾಡಲು ಮೈಸೂರಿಗೆ ಬಂದರು. ಹಿರಿಯಕ್ಕನ ನೆರವಿನಿಂದ ೧೯೫೫–೫೮ ರವರೆಗೆ ಬಿ.ಎ. ಆನರ್ಸ್ ಮುಗಿಸಿದರು. ಪದವಿ ತರಗತಿಗಳಲ್ಲಿ ಅವರಿಗೆ ಗುರುಗಳಾಗಿದ್ದ ತೀ.ನಂ. ಶ್ರೀಕಂಠಯ್ಯ, ಡಿ.ಎಲ್. ನರಸಿಂಹಾಚಾರ್, ತ.ಸು. ಶಾಮರಾಯರು, ಕೆ. ವೆಂಕಟರಾಮಪ್ಪ, ಎಸ್.ವಿ. ಪರಮೇಶ್ವರಭಟ್ಟರು, ಎಸ್. ಶ್ರೀಕಂಠಶಾಸ್ತ್ರಿಗಳು ಮೊದಲಾದ ಘನವಿದ್ವಾಂಸರು ಇವರ ಮೇಲೆ ಬೀರಿದ ಪ್ರಭಾವದಿಂದಲೇ ಎಂ.ಎ.ಗೆ

ಸೇರಿದರು. ಇಲ್ಲಿಯೂ ಇದೇ ಗುರುಗಳ ಪಾಠ ಕೇಳುವ ಸುಯೋಗ ದೊರೆಯಿತು. ಇವರ ಸಹಪಾಠಿಗಳಾಗಿದ್ದವರು ಅ.ರಾ. ಮಿತ್ರ, ಎಂ.ಎಚ್. ಕೃಷ್ಣಯ್ಯ, ಎಸ್. ಲಕ್ಷ್ಮಿನಾರಾಯಣ ಭಟ್ಟ, ಎಸ್.ಜಿ. ಸಣ್ಣಗುಡ್ಡಯ್ಯ ಮೊದಲಾದವರು. ೧೯೬೧ರಲ್ಲಿ ಹಂಪ ನಾಗರಾಜಯ್ಯ ಅವರನ್ನು ವಿವಾಹವಾದರು.

೧೯೪೮ರಲ್ಲಿ ಹಾ.ಮಾ. ನಾಯಕರ ಮಾರ್ಗದರ್ಶನದಲ್ಲಿ 'ಪರಮದೇವ ಕವಿಯ ತುರಂಗ ಭಾರತ–ಒಂದು ಅಧ್ಯಯನ' ಎಂಬ ವಿಷಯದಲ್ಲಿ ಸಂಶೋಧನೆ ನಡೆಸಿ ಮೈಸೂರು ವಿಶ್ವವಿದ್ಯಾನಿಲಯದಿಂದ ಪಿಎಚ್.ಡಿ. ಪದವಿ ಪಡೆದರು. ೧೯೫೯ರಿಂದ ಕನ್ನಡ ಅಧ್ಯಾಪಕರಾಗಿ ವೃತ್ತಿಕ್ಷೇತ್ರ ಪ್ರವೇಶಿಸಿದ ಕಮಲಾ ಹಂಪನಾ ಅವರು ಬೆಂಗಳೂರಿನ ಮಹಾರಾಣಿ ಕಾಲೇಜು, ಮೈಸೂರು ಮಹಾರಾಣಿ ಕಾಲೇಜುಗಳಲ್ಲಿ ಅಧ್ಯಾಪಕಿಯಾಗಿ ಸೇವೆಸಲ್ಲಿಸಿ, ವಿಜಯನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೆಂಗಳೂರು ಇಲ್ಲಿ ಪ್ರಾಂಶುಪಾಲರಾಗಿಯೂ ದುಡಿದರು. ಸರ್ಕಾರಿ ಸೇವೆಯ ವಯೋನಿವೃತ್ತಿಯ ಬಳಿಕ ಮೈಸೂರು ವಿಶ್ವವಿದ್ಯಾನಿಲಯದ ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರೂ ಅಧ್ಯಕ್ಷರೂ ಆಗಿ ಸೇವೆ ಸಲ್ಲಿಸಿ ನಿವೃತ್ತ ರಾದರು.

ಕಮಲಾ ಅವರು ಸೃಜನಶೀಲ, ಸೃಜನೇತರ ಪ್ರಕಾರಗಳೆರಡರಲ್ಲೂ ತೊಡಗಿಸಿಕೊಂಡವರಾದರೂ ಅವರು ಹೆಚ್ಚಿನ ಸಾಧನೆ ಮಾಡಿದ್ದು ಸಂಪಾದನೆ, ಸಂಶೋಧನೆ, ವಿಮರ್ಶೆಯಂತಹ ಶಿಸ್ತುಗಳಲ್ಲಿ. ಇವರ ಸಂಪಾದಿತ ಕೃತಿಗಳಲ್ಲಿ 'ಸುಕುಮಾರ ಚರಿತೆ' ೧೯೬೫ರಲ್ಲಿ ಪ್ರಕಟವಾಗಿ ಬೆಂಗಳೂರು ವಿಶ್ವವಿದ್ಯಾಲಯದ ಪದವಿ ತರಗತಿಗಳಿಗೆ ಪಠ್ಯಪುಸ್ತಕವಾಯಿತು. ಇದನ್ನು ಮೊದಲು ಡಿ.ಎಲ್.ಎನ್ ಮತ್ತು ತ.ಸು.ಶಾಮರಾಯರು ಸಂಪಾದಿಸಿದ್ದರು.

'ಸುಕುಮಾರ ಚರಿತೆಯ ಸಂಗ್ರಹ'ದ ಸಂಪಾದನ ಕಾರ್ಯದಲ್ಲಿ ಎದುರಾದ ಸಮಸ್ಯೆಗಳನ್ನು ಪರಿಹರಿಸಿಕೊಂಡ ರೀತಿಯನ್ನು ಸ್ಪಷ್ಟಪಡಿಸಿದ್ದಾರೆ. ಅನಗತ್ಯವಾದ ಪದ್ಯಗಳನ್ನು ಕೈಬಿಟ್ಟು ಸುಸಂಬದ್ಧ ಪದ್ಯಗಳನ್ನು ಆಯ್ಕೆ ಮಾಡಿದ್ದಾರೆ. ಜಿ. ಬ್ರಹ್ಮಪ್ಪ ಅವರೊಡನೆ ಸಂಪಾದಿಸಿದ 'ಭರತೇಶವೈಭವ'ಕ್ಕೆ ೧೨೦ ಪುಟಗಳಷ್ಟು ವಿಸ್ತಾರವಾದ ಕವಿ–ಕಾವ್ಯ ವಿಚಾರವನ್ನು ಬರೆಯಲಾಗಿದೆ. ಎಂ.ಎಚ್.

ಕೃಷ್ಣಯ್ಯನವರೊಂದಿಗೆ ಸಂಪಾದಿಸಿದ 'ಹಳೆಯ ಗದ್ಯಸಾಹಿತ್ಯ' ಬೆಂಗಳೂರು ವಿಶ್ವವಿದ್ಯಾಲಯದ ಪದವಿ ತರಗತಿಗಳಿಗೆ ಪಠ್ಯವಾಗಿತ್ತು.

ಕಮಲಾ ಹಂಪನಾ ಅವರ ಸಂಶೋಧನ ಗ್ರಂಥಗಳಲ್ಲಿ ಮುಖ್ಯವಾದವು ಶಾಂತಿನಾಥ, ಆದರ್ಶ ಜೈನಮಹಿಳೆಯರು, ಮಹಾವೀರರ ಜೀವನ ಸಂದೇಶ, ಜೈನ ಸಾಹಿತ್ಯ ಪರಿಸರ, ನಾಡು-ನುಡಿ-ನಾವು ಇತ್ಯಾದಿ. ಸುಕುಮಾರ ಚರಿತೆ ಪಂಪ ಪೊನ್ನ, ರನ್ನ ಇವರಲ್ಲಿಯ ಯಾವ ಕವಿಯ ಕಾವ್ಯ ಸಾಮರ್ಥ್ಯಕ್ಕೂ ಕಡಿಮೆಯಿಲ್ಲ ಎನ್ನುತ್ತಾರೆ. ಇಲ್ಲಿ ಶಾಂತಿನಾಥ ಕವಿಯ ಶೈಲಿ ಪದಬಂಧ, ಪದಪ್ರೌಢಿಮೆಯನ್ನು ಕಾಣಬಹುದಾಗಿದೆ. ಜೊತೆಗೆ ಪಂಪನ ಹಿತಮಿತ ಮೃದು ವಚನ, ರನ್ನಕವಿಯ ವಾಗ್ಧೋರಣೆಯ ಶಕ್ತಿ, ಕಥಾನಿರೂಪಣಾ ಪ್ರತಿಭೆ- ಇವೆಲ್ಲವೂ ಅಡಕವಾಗಿವೆ ಎಂದು ಹೇಳುತ್ತಾರೆ.

'ಆದರ್ಶ ಜೈನ ಮಹಿಳೆಯರು' ಎಂಬುದರಲ್ಲಿ ಅಜ್ಞಾತವಾಗಿ ಉಳಿದು ಶೌರ್ಯ, ಸಾಹಸ, ತ್ಯಾಗ, ಬಲಿದಾನ, ಪ್ರತಿಭೆ, ದಾನಗುಣ ಇತ್ಯಾದಿಗಳಿಂದ ಆದರ್ಶಪ್ರಾಯರೆನಿಸಿಕೊಂಡ ಜೈನಮಹಿಳೆಯರಾದ ಕಾಳಲದೇವಿ, ಕೆಂಪಾದೇವಿ, ಅತ್ತಿಮಬ್ಬೆ ಮೊದಲಾದವರನ್ನು ಪ್ರಾಕೃತ ಸಂಸ್ಕೃತ, ಹಳಗನ್ನಡ ಕಾವ್ಯ ಶಾಸನಗಳಿಂದ ಹೆಕ್ಕಿ ತೆಗೆದು ಅವರ ಉದಾತ್ತ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ. ನೇಮಿನಾಥನ ಹೆಂಡತಿ ರಾಜಮತಿ, ಮಹತ್ತಾರಾ, ಕಂತಿ, ಸಾವಿಯಬ್ಬೆ, ಬ್ರಹ್ಮಸುಂದರಿ, ಜಕ್ಕಯ್ಯಬ್ಬೆಯಂತಹವರನ್ನು ಇಲ್ಲಿ ಪರಿಚಯಿಸಲಾಗಿದೆ.

'ಜೈನಸಾಹಿತ್ಯ ಪರಿಸರ' ಜೈನ ಸಾಹಿತ್ಯ ಸಂಬಂಧವಾದ ೧೬ ಲೇಖನಗಳ ಸಂಕಲನ. ಇದರಲ್ಲಿ ಜೈನಸಾಹಿತ್ಯಕ್ಕೆ ಸಂಬಂಧಿಸಿದ ಅವರ ಸಂಶೋಧನೆ, ವಿಮರ್ಶೆ, ಪರಿಚಯಗಳೆಲ್ಲವೂ ಸೇರಿವೆ. ಕಥಾಸಂವಿಧಾನ, ಧರ್ಮಪ್ರಚಾರ, ಗದ್ಯಶೈಲಿ-ಹೀಗೆ ಒಂದೊಂದು ಕಥೆಯಲ್ಲಿರುವ ಘಟನೆಗಳಿಂದ ಉದಾಹರಣೆಗಳೊಂದಿಗೆ ವಿಶ್ಲೇಷಿಸಿದ್ದಾರೆ. ಮಹಾವೀರನ ಜೀವನ ಸಂದೇಶ, ೨೪ನೇ ತೀರ್ಥಂಕರನಾದ ವರ್ಧಮಾನ ಮಹಾವೀರನ ಬದುಕು, ಚಾರಿತ್ರ್ಯ, ಉಪದೇಶ, ಸಂದೇಶಗಳನ್ನು ವಿವರಿಸುವ ಕೃತಿ ಇದು. ಇಲ್ಲಿ ಪುರಾಣಕಲ್ಪನೆಯ ಅಂಶಗಳಿಗಿಂತ ಚಾರಿತ್ರಿಕ, ವೈಜ್ಞಾನಿಕ ದೃಷ್ಟಿಯೇ ಎದ್ದುಕಾಣುತ್ತದೆ.

'ಅನೇಕಾಂತವಾದ' ಜೈನಧರ್ಮ ಸಂಬಂಧಿತ ೧೩ ಲೇಖನಗಳ ನ್ನೊಳಗೊಂಡ ಸಂಕಲನ. ಜೈನಧರ್ಮ ತತ್ತ್ವವಿಚಾರ ಚಿಂತನೆಗಳೇ ಇಲ್ಲಿ ಪ್ರಮುಖ ವಾಗಿವೆ. ಜೈನಧರ್ಮ ಸಂಬಂಧವಿರುವ ವ್ಯಕ್ತಿಗಳು, ವಿಚಾರಗಳು, ನೋಂಪಿಗಳು ಮೊದಲಾದವುಗಳ ಬಗ್ಗೆ ಸಂಗ್ರಹಿಸಿದ ವಿವರಗಳನ್ನು ಇಲ್ಲಿಯ ಲೇಖನಗಳು ಒಳಗೊಂಡಿವೆ. ಇದೇ ಸಂಗ್ರಹದಲ್ಲಿ 'ಪಾರ್ಶ್ವನಾಥ ವಿಗ್ರಹಗಳು' ಎಂಬ ಲೇಖನದಲ್ಲಿ ಪಾರ್ಶ್ವನಾಥ ತೀರ್ಥಂಕರ ವಿಗ್ರಹಗಳ ವೈಶಿಷ್ಟ್ಯ, ಕಾಲ ಮುಂತಾದ ವಿವರಗಳನ್ನು ಸ್ಪಷ್ಟವಾಗಿ ನೀಡಿದ್ದಾರೆ. ಜೈನರಿಗೆ ಪವಿತ್ರವಾಗಿದ್ದ ಪುಣ್ಯಕ್ಷೇತ್ರಗಳು ಕಾಲಗರ್ಭದಲ್ಲಿ ಮರೆಯಾಗಿ ಹೋದಂಥವನ್ನು ಗುರುತಿಸಿದ್ದಾರೆ. ಜೈನಧರ್ಮದಲ್ಲಿ ಮಹಿಳೆಯರಿಗೆ ಇದ್ದ ವಿಶೇಷ ಸ್ಥಾನವನ್ನು ಹಾಗೂ ಮಹತ್ತ್ವವನ್ನು ಕುರಿತು ಜೈನಪುರಾಣ, ಕಾವ್ಯ ಸಂದರ್ಭಗಳಿಂದ ವಿವರಿಸಿದ್ದಾರೆ. ಜೈನ ದಿಗಂಬರ ಸಂಪ್ರದಾಯದಲ್ಲಿ ಮಾನ್ಯವಾದ ಮಹಾಪುರಾಣದಲ್ಲಿ ಸ್ತ್ರೀಯರ ವಿದ್ಯಾಭ್ಯಾಸಕ್ಕೆ ಒತ್ತು ಕೊಟ್ಟಿರುವುದನ್ನು ಉದಾಹ ರಿಸಿದ್ದಾರೆ. ಆದಿ ತೀರ್ಥಂಕರನಾದ ವೃಷಭದೇವನು ಗೃಹಸ್ಥನಾಗಿದ್ದಾಗ ಗಂಡುಮಕ್ಕಳಿಗೂ ಮೊದಲು ಹೆಣ್ಣು ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸುತ್ತಾ ''ನಿಮ್ಮ ಈ ಶರೀರವೂ ಈ ವಯಸ್ಸೂ ಅಸಮಾನವಾದ ಈ ಶೀಲವೂ ವಿದ್ಯೆಯಿಂದ ಅಲಂಕೃತವಾದರೆ ನಿಮ್ಮ ಜನ್ಮ ಸಫಲವಾಗುತ್ತದೆ. ವಿದ್ಯಾವತಿಯಾದ ಸ್ತ್ರೀಯು ಸ್ತ್ರೀ ಸೃಷ್ಟಿಯಲ್ಲಿ ಮೊದಲನೇ ಸ್ಥಾನವನ್ನು ಪಡೆಯುತ್ತಾಳೆ'' ಎಂದು ಹೇಳಿದ ಮಾತುಗಳನ್ನು ಉದ್ಧರಿಸುತ್ತಾರೆ.

'ತುರಂಗ ಭಾರತ' ಕಮಲಾ ಅವರ ಸಂಶೋಧನ ಮಹಾಪ್ರಬಂಧ. ೧೮ನೇ ಶತಮಾನದಲ್ಲಿದ್ದ ಪರಮದೇವನ ಕೃತಿ ಇದು; ೯೬ ಸಂಧಿಗಳಲ್ಲಿರುವ ೪೮೨೪ ಪದ್ಯಗಳ ದೊಡ್ಡ ಕಾವ್ಯ. ಇದರಲ್ಲಿ ಮಹಾಭಾರತದ ೧೮ ಪರ್ವಗಳಿವೆ. ಇದನ್ನು ಐದು ಅಧ್ಯಾಯಗಳಾಗಿ ವಿಭಾಗಿಸಿದ್ದಾರೆ. ಕವಿಯ ಕಾಲ, ಸ್ಥಳ, ಕೃತಿ, ವ್ಯಾಸಭಾರತದ ವ್ಯಾಪ್ತಿಯ ವಿವೇಚನೆ, ಕವಿಯ ಕಾವ್ಯಧೋರಣೆ, ತೌಲನಿಕ ವಿವೇಚನೆ, ಕಾವ್ಯದ ಸಮಗ್ರ ವಿಮರ್ಶೆ ಇಲ್ಲಿದೆ. ಕಾವ್ಯ ವಸ್ತು, ಶೈಲಿ, ಭಾಷೆ, ಛಂದಸ್ಸು, ವರ್ಣನೆ ಇತ್ಯಾದಿಗಳನ್ನು ವಿವರಿಸಲಾಗಿದೆ.

'ಬದ್ದವಣ' ಜೈನ ಸಾಹಿತ್ಯಕ್ಕೆ ಸಂಬಂಧಿಸಿದ ೩೯ ಲೇಖನಗಳಿರುವ ಕೃತಿ. 'ಬದ್ದವಣ' ಎಂದರೆ ಶುಭ ಸಮಾರಂಭಗಳಲ್ಲಿ ನುಡಿಸುವ ಮಂಗಳವಾದ್ಯ ಎಂದರ್ಥ. ಜೊತೆಗೆ 'ಉತ್ಕರ್ಷ' ಎಂಬ ಹುರುಳನ್ನು ಕೂಡಿಕೊಂಡಿದೆ. ಇದು

ಭಾದ್ರಪರ್ವ ಮತ್ತು ವರ್ಧಮಾನ ಎಂಬ ಸಂಸ್ಕೃತ ಶಬ್ದದಿಂದ ನಿಷ್ಪನ್ನವಾಗಿದೆ. ಬಸದಿಗಳ ಆರ್ಥಿಕ ವ್ಯವಸ್ಥೆ, ಸರ್ವಧರ್ಮ ಸಮನ್ವಯತತ್ತ್ವ, ಜೈನ ಕ್ಷೇತ್ರಗಳ ವಿವರ ಮತ್ತು ಕರ್ನಾಟಕದ ಅರಸು ಮನೆತನಗಳಿಗೂ ಜೈನ ಧರ್ಮಕ್ಕೂ ಇರುವ ಸಂಬಂಧ, ಬಾಹುಬಲಿಯ ಕಲ್ಪನೆ ಇತ್ಯಾದಿ ಸಂಗತಿಗಳು ಇದರಲ್ಲಿ ಕಂಡುಬರುತ್ತವೆ.

'ರೋಣದ ಬಸದಿ' ಭಗವಾನ್ ಶ್ರೀ ಪಾರ್ಶ್ವನಾಥ ತೀರ್ಥಂಕರ ಬಸದಿಯನ್ನು ಕುರಿತ ಕೃತಿ. ಈ ಬಸದಿಯ ಇತಿಹಾಸ, ವಾಸ್ತುಶಿಲ್ಪ ಮತ್ತು ಪಾರ್ಶ್ವನಾಥನ ಚರಿತ್ರೆಯನ್ನು ಇವರು ಶೋಧಿಸಿದ್ದಾರೆ. 'ಬಿತ್ತರ' ಕಮಲಾ ಅವರ ವೈಚಾರಿಕ ಚಿಂತನೆಗಳನ್ನೊಳಗೊಂಡ ೨೦ ಲೇಖನಗಳ ಸಂಕಲನ. ಪ್ರಾಚೀನ ಕಾಲದಿಂದ ಇಂದಿನವರೆಗಿನ ಕನ್ನಡ ಕವಿಗಳ ಸಂಕ್ಷಿಪ್ತ ಪರಿಚಯ ಇಲ್ಲಿದೆ. ಐದು ವಿಭಾಗಗಳ ಅಡಿಯಲ್ಲಿ ಕುಮಾರವ್ಯಾಸ ಭಾರತ, ಜೈನಸಾಹಿತ್ಯ, ಜೈನ ಪುರಾಣ, ಕನಕದಾಸರ ಕೃತಿಗಳು, ಷಡಕ್ಷರದೇವ ಮೊದಲಾದ ಲೇಖನಗಳಿವೆ. ಕಮಲಾ ಹಂಪನಾ ಅವರು ತಮ್ಮ ೮೯ನೇ ವಯಸ್ಸಿನಲ್ಲಿ ೨೨ ಜೂನ್ ೨೦೨೪ ರಂದು ನಿಧನರಾದರು.

ಕಮಲಾ ಹಂಪನಾ ಅವರಿಗೆ ಅನೇಕ ಪ್ರಶಸ್ತಿ/ಗೌರವಗಳು ಸಿಕ್ಕಿವೆ:

೧೯೮೫ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

೧೯೮೬ ಕನ್ನಡ ಸಾಹಿತ್ಯ ಪರಿಷತ್ತಿನ ದೇವೇಂದ್ರಕೀರ್ತಿ ಪ್ರಶಸ್ತಿ

೧೯೯೦ ಬಾಬಾ ಆಮ್ಟೆ ರಾಷ್ಟ್ರೀಯ ಪ್ರಶಸ್ತಿ

೧೯೯೩ ಪಿಪಿಟಿ ಮದರಾಸು ಕನ್ನಡ ಸಂಘ ರಜತೋತ್ಸವ ಪುರಸ್ಕಾರ

೧೯೯೩ ಶ್ರವಣಬೆಳಗೊಳ ಮಹಾಮಸ್ತಕಾಭಿಷೇಕ ರಾಷ್ಟ್ರೀಯ ಪುರಸ್ಕಾರ

೧೯೯೬ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ

೧೯೯೬ ವರ್ಷದ ಲೇಖಕಿ ಪ್ರಶಸ್ತಿ

೧೯೯೮ ದಾನಚಿಂತಾಮಣಿ ಅತ್ತಿಮಬ್ಬೆ ರಾಜ್ಯ ಪ್ರಶಸ್ತಿ.

ಕಲಬುರ್ಗಿ ಎಂ.ಎಂ.

(೧೯೩೮–೨೦೧೫)

ಬಿ. ವೆಂಕಟರಾಮಣ್ಣ

ಎಂ.ಎಂ. ಕಲಬುರ್ಗಿ ಕನ್ನಡದ ಪ್ರಸಿದ್ಧ ಸಂಶೋಧಕರಲ್ಲಿ ಒಬ್ಬರೆಂದು ಖ್ಯಾತಿ ಪಡೆದವರು. ಇವರು ಬಿಜಾಪುರ ಜಿಲ್ಲೆಯ ಸಿಂಧಗಿ ತಾಲೂಕಿನ ಗುಬ್ಬೇವಾಡ ದಲ್ಲಿ ೨೮.೧೧.೧೯೩೮ರಂದು ಜನಿಸಿದರು. ತಂದೆ ಮಡಿವಾಳಪ್ಪ, ತಾಯಿ ಗುರವ್ವ. ಯರಗಲ್ಲು ಮತ್ತು ಸಿಂಧಗಿಯಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಪಡೆದು, ವಿಜಾಪುರದ ವಿಜಯ ಕಾಲೇಜಿನಿಂದ ೧೯೬೨ರಲ್ಲಿ ಬಿ.ಎ. ಪದವಿಯನ್ನು ಪ್ರಥಮ ದರ್ಜೆಯಲ್ಲಿ ಪಡೆದರು. ಕರ್ನಾಟಕ ವಿಶ್ವವಿದ್ಯಾಲಯದಿಂದ ಕನ್ನಡ ಎಂ.ಎ. ಪದವಿಯನ್ನು ವಿಶ್ವವಿದ್ಯಾಲಯಕ್ಕೆ ಪ್ರಥಮರಾಗಿ ಅತ್ಯುನ್ನತ ದರ್ಜೆಯಲ್ಲಿ ಪಡೆದರು. ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಉಪನ್ಯಾಸಕರಾಗಿ, ಪ್ರವಾಚಕರಾಗಿ ಸೇವೆಸಲ್ಲಿಸಿದರು. ಬಸವಪೀಠದ ಪ್ರಾಧ್ಯಾಪಕರೂ ಆದರು. ಮುಂದೆ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳೂ ಆದರು.

ಆರ್.ಸಿ. ಹಿರೇಮಠರ ಮಾರ್ಗದರ್ಶನದಲ್ಲಿ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ವಿಷಯ ಕುರಿತು ಮಹಾಪ್ರಬಂಧ ಸಿದ್ಧಪಡಿಸಿ ಪಿಎಚ್.ಡಿ. ಪದವಿ ಗಳಿಸಿದರು. ಸಂಶೋಧನೆಯನ್ನು ತಮ್ಮ ಜೀವನದ ಪ್ರಧಾನ ಗುರಿ ಯಾಗಿಸಿ ಕೊಂಡು ಅವಿಶ್ರಾಂತವಾಗಿ ದುಡಿದವರು ಎಂ.ಎಂ. ಕಲಬುರ್ಗಿ. ಕನ್ನಡ ಹಸ್ತಪ್ರತಿಗಳ ಶೋಧಕ್ಕಾಗಿ ಲಂಡನ್, ಆಕ್ಸ್‌ಫರ್ಡ್, ಕೇಂಬ್ರಿಡ್ಜ್ ವಿಶ್ವವಿದ್ಯಾಲಯಗಳನ್ನು ಸಂದರ್ಶಿ ಸಿದರು. ಸಂಶೋಧನೆ, ಗ್ರಂಥಸಂಪಾದನೆ, ಹಸ್ತಪ್ರತಿಶಾಸ್ತ್ರ, ಜಾನಪದ, ವ್ಯಾಕರಣ, ಛಂದಸ್ಸು, ನಾಮವಿಜ್ಞಾನ, ಸಂಸ್ಕೃತಿ ಇತ್ಯಾದಿ ಹಲವಾರು ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರು.

ಕಲಬುರ್ಗಿಯವರ ಸಾಹಿತ್ಯ ಸಂಶೋಧನೆ ಅವರ ಪಿಎಚ್.ಡಿ. ಮಹಾಪ್ರಬಂಧ 'ಕವಿರಾಜಮಾರ್ಗ ಪರಿಸರದ ಕನ್ನಡದ ಸಾಹಿತ್ಯ'ದಿಂದ ಆರಂಭವಾಗುತ್ತದೆ. ಸಂಶೋಧನೆಯಲ್ಲಿ ಕ್ಷೇತ್ರಕಾರ್ಯದ ಅಗತ್ಯವನ್ನು ಒತ್ತಿ ಹೇಳುತ್ತಾರೆ. ಅವರ ಕ್ಷೇತ್ರಕಾರ್ಯಕ್ಕೆ ಸಂಬಂಧಿಸಿದಂತೆ ಧರ್ಮಪುರ, ಅಲ್ಲಮನ

ಕರೂರು(ಕರವೂರು) ಇವುಗಳನ್ನು ಉದಾಹರಿಸಬಹುದು. ಕಲಬುರ್ಗಿಯವರು ಧರ್ಮಪುರವು ತೆಲಂಗಾಣದ ಈಗಿನ ಗಂಗಾಧರಂ ಗ್ರಾಮದಲ್ಲಿ ಬೊಮ್ಮಲಮ್ಮಗುಟ್ಟ ಗುಡ್ಡದ ದಕ್ಷಿಣ ದಿಕ್ಕಿಗಿರುವ ಹಾಳಾದ ಗ್ರಾಮ ಪ್ರದೇಶವೆಂದು ನಿರ್ಧರಿಸಿದ್ದಾರೆ. ಅಲ್ಲಮನ ಜನ್ಮ ಗ್ರಾಮ ಬಳ್ಳಿಗಾವಿ ಬನವಾಸಿಗಳಲ್ಲ, ಶಿರಸಿ ತಾಲೂಕಿನ ಕರವೂರು ಎಂದೂ ಕಾವ್ಯ, ಶಾಸನ, ಕ್ಷೇತ್ರಕಾರ್ಯಗಳ ಆಧಾರದಿಂದ ಶೋಧಿಸಿ ಕೊಟ್ಟಿದ್ದಾರೆ.

'ಪಂಪನ ಪರಿಸರಗಳು' ಲೇಖನದಲ್ಲಿ ಪಂಪನ ವ್ಯಕ್ತಿತ್ವ ಮತ್ತು ಕಾವ್ಯ, ವ್ಯಕ್ತಿತ್ವಕ್ಕೆ ಸಾಮಾಜಿಕ, ಪ್ರಾಕೃತಿಕ ಪರಿಸರಗಳು ಹೇಗೆ ಹಿನ್ನೆಲೆಯಾಗಿ ನಿಂತವು ಎಂಬುದನ್ನು ವಿವರಿಸಿದ್ದಾರೆ. ಹರಿಹರ ಚಾಮರಸರ ಕಾವ್ಯಗಳ ವಿಮರ್ಶೆಯಲ್ಲಿ ಕೆಲವು ವಿಚಾರಗಳನ್ನು ಚರ್ಚಿಸುತ್ತಾರೆ. ಹರಿಹರನ ಬಸವರಾಜದೇವರ ರಗಳೆ, ಚಾಮರಸನ ಪ್ರಭುಲಿಂಗಲೀಲೆ ಕಾವ್ಯಗಳು, ಪಂಪನ ಆದಿಪುರಾಣವನ್ನು ಮೀರಿಸುವ ಕೃತಿಗಳಾಗಿ ಅವರಿಗೆ ಕಂಡಿವೆ. ಪುರಾಣ ಪರಂಪರೆಗೆ ಸೆರೆಯಾದ ಪಂಪನ ಪರಾಧೀನ ಸ್ಥಿತಿ ಅರ್ಥಾತ್ ಪ್ರಶ್ನಾತೀತ ಜೈನನಿಷ್ಠೆ ಇದಕ್ಕೆ ಕಾರಣ ಎಂದಿದ್ದಾರೆ. ಹರಿಹರ ಚಾಮರಸರು ಧಾರ್ಮಿಕವಾಗಿ ವೀರಶೈವವನ್ನು ಒಳಗಿನಿಂದ ಬಳಸಿದರೆ, ಪಂಪ ತನ್ನ ಧರ್ಮವನ್ನು ಹೊರಗಿನಿಂದ ಬರೆಯುವುದು ಒಂದು ಕಾರಣ ವಾಗಿರಬೇಕು ಎಂಬುದನ್ನು ಕಲಬುರ್ಗಿಯವರು ಗಮನಿಸಿದ್ದಾರೆ.

ಕನ್ನಡ ಸಾಹಿತ್ಯ ಚರಿತ್ರೆಗೆ ಸಂಬಂಧಿಸಿದಂತೆ ಕಲಬುರ್ಗಿಯವರ ಪ್ರಮುಖ ವಿಚಾರಗಳು ಕನ್ನಡ ಸಾಹಿತ್ಯದ ಮೊದಲ ಘಟ್ಟ; ಪಂಪ ಯುಗದ ವ್ಯಾಪ್ತಿ ಒಂದು ವಿವೇಚನೆ; ವೀರಶೈವ ಯುಗದ ವ್ಯಾಪ್ತಿ; ಕನ್ನಡ ಸಾಹಿತ್ಯದಲ್ಲಿ ಬ್ರಾಹ್ಮಣ ಯುಗ; ಅಭಿನವ ಪಂಪಯುಗ ಮೊದಲಾದ ಲೇಖನಗಳು ಬೆಳಕು ಚೆಲ್ಲುತ್ತವೆ.

ಕಲಬುರ್ಗಿ ಅವರ ಸಂಶೋಧನೆ ವಿಸ್ತಾರವಾದುದು. ಪಾಶ್ಚಾತ್ಯ ಜಾನಪದ ವಿದ್ವಾಂಸರ ಸಿದ್ಧಾಂತಗಳ ಗೋಜಿಗೆ ಹೋಗದೆ ದೇಶೀಯ ಚಿಂತನೆಯಲ್ಲಿ ಸಂಶೋಧನೆಗೆ ತೊಡಗಿದರು. ೧೯೭೮ರಲ್ಲಿ 'ಉತ್ತರ ಕರ್ನಾಟಕದ ಜಾನಪದ ಸಾಹಿತ್ಯ'ವನ್ನು, ೧೯೯೫ರಲ್ಲಿ 'ಜಾನಪದಮಾರ್ಗ' ಎಂಬ ಕೃತಿಯನ್ನು ಹೊರತಂದರು. 'ಕನ್ನಡ ನಾಮಜ್ಞಾನ' ಕೃತಿಯ ಮೂಲಕ ಹೊಸ ಜ್ಞಾನ ಶಾಖೆಯನ್ನು ಪ್ರವೇಶಿಸಿದ್ದಾರೆ. ಗ್ರಾಮನಾಮಗಳನ್ನು ಕುರಿತ ಅಧ್ಯಯನದ ಕೊರತೆಯನ್ನು ತುಂಬುವ ರೀತಿಯಲ್ಲಿ ಕಲಬುರ್ಗಿಯವರ 'ಕನ್ನಡ ನಾಮವಿಜ್ಞಾನ' ಮೂಡಿಬಂದಿದೆ.

ಗ್ರಂಥಸಂಪಾದನೆಗೆ ಸಂಬಂಧಿಸಿದಂತೆ ಕಲಬುರ್ಗಿಯವರು ೩೬ ಸಂಪಾದಿತ ಕೃತಿಗಳನ್ನು, ಹಲವಾರು ಲೇಖನಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ನೀಡಿದ್ದಾರೆ. 'ಕರ್ನಾಟಕದ ಕೈಫಿಯತ್ತುಗಳು' ಕಲಬುರ್ಗಿಯವರು ಸಂಪಾದಿಸಿದ ಮಹತ್ತ್ವದ ಕೃತಿಗಳಲ್ಲೊಂದು. ಇದು ಸಂಶೋಧನೆಗೆ ಅತ್ಯಗತ್ಯವಾಗಿರುವ ಆಕರ ಸಾಮಗ್ರಿ ಎಂದು ಪರಿಗಣಿಸಲ್ಪಟ್ಟಿದೆ. ಇದರಲ್ಲಿ ಒಂದೊಂದು ಊರಿನ ರಾಜಕೀಯ, ಸಾಮಾಜಿಕ, ಧಾರ್ಮಿಕ, ಆರ್ಥಿಕ ಮುಂತಾದ ವಿಚಾರಗಳು ಸಿಗುತ್ತವೆ. ಒಟ್ಟು ೩೨೪ ಕೈಫಿಯ ತ್ತುಗಳನ್ನು ಕಲಬುರ್ಗಿಯವರು ವಿಸ್ತಾರವಾದ ಪ್ರಸ್ತಾವನೆಯೊಂದಿಗೆ ಪ್ರಕಟಿಸಿದ್ದಾರೆ.

ಕರ್ನಾಟಕ ಸರ್ಕಾರ ಪ್ರಕಟಿಸಿದ ಸಮಗ್ರ ವಚನಗಳು ೧೫ ಸಂಪುಟಗಳಲ್ಲಿ ಕಲಬುರ್ಗಿಯವರ ನೇತೃತ್ವದಲ್ಲಿ ವ್ಯವಸ್ಥಿತವಾಗಿ ರೂಪುಗೊಂಡಿವೆ. ಇದರಲ್ಲಿ ೧೦೮ ಪ್ರಕಟಿತ, ಅಪ್ರಕಟಿತ ಆಕರಗಳಿಂದ ವಚನಗಳನ್ನು ಸಂಗ್ರಹಿಸಿದ್ದಲ್ಲದೆ ೧೧೦ ಕೃತಕ ವಚನಕಾರರನ್ನು ಕೈಬಿಟ್ಟು ೫೪ ಅಜ್ಞಾತ ವಚನಕಾರರನ್ನು ಬೆಳಕಿಗೆ ತಂದಿರುವುದು ವಿಶೇಷ. ವಚನಸಾಹಿತ್ಯ ಸಂಪಾದನೆ ಮತ್ತು ಪರಿಷ್ಕರಣದಲ್ಲಿ ಕಲಬುರ್ಗಿಯವರು ಫ.ಗು. ಹಳಕಟ್ಟಿ, ಶಿ.ಶಿ. ಬಸವನಾಳ, ಆರ್.ಸಿ. ಹಿರೇಮಠ, ಎಲ್. ಬಸವರಾಜು ಮೊದಲಾದ ಪ್ರಮುಖ ಸಂಪಾದಕರ ಸಾಲಿಗೆ ಸೇರುತ್ತಾರೆ.

ಶಾಸ್ತ್ರ ಸಂಶೋಧನೆಯಡಿಯಲ್ಲಿ ಇವರು ಗ್ರಂಥಸಂಪಾದನಶಾಸ್ತ್ರ, ಹಸ್ತಪ್ರತಿಶಾಸ್ತ್ರ, ನಾಮವಿಜ್ಞಾನ, ಭಾಷಾವಿಜ್ಞಾನ, ಜಾನಪದವಿಜ್ಞಾನ ಮೊದಲಾದ ಕ್ಷೇತ್ರಗಳಲ್ಲಿ ದುಡಿದು ಗಣನೀಯ ಕಾರ್ಯ ಮಾಡಿದ್ದಾರೆ. ಗ್ರಂಥಸಂಪಾದನಶಾಸ್ತ್ರದ ಆರಂಭದಲ್ಲಿ ಗ್ರಂಥಸಂಪಾದನೆಯ ಇತಿಹಾಸ, ಗ್ರಂಥರಕ್ಷಣೆ, ಗ್ರಂಥಲೇಖನ, ಪಾಠರಕ್ಷಣೆ, ಭಿನ್ನಪಾಠಸಂಗ್ರಹ ಮತ್ತು ಪಾಠನಿರ್ಣಯ ಇವುಗಳ ತಿಳಿವಳಿಕೆ ನಮ್ಮ ಪ್ರಾಚೀನರಿಗಿರುವುದನ್ನು ಸಾಧಾರವಾಗಿ ಉಲ್ಲೇಖಿಸಲಾಗಿದೆ. 'ಹಸ್ತಪ್ರತಿಕಾಂಡ'ದಲ್ಲಿ ಹಸ್ತಪ್ರತಿಯ ವಿವಿಧ ಭಾಗಗಳು ಮತ್ತು ಅವುಗಳ ಪರಸ್ಪರ ಸಂಬಂಧ ಚರ್ಚಿತವಾಗಿದೆ. 'ಸಂಪಾದನಾಕಾಂಡ'ದಲ್ಲಿ ಸಂಪಾದನಾ ಕಾರ್ಯ ಸಾರ್ಥಕಗೊಳ್ಳುವ ವಿವರಗಳಿವೆ. 'ಸ್ಖಲಿತ್ಯಕಾಂಡ'ದಲ್ಲಿ ಸ್ಖಲಿತ್ಯದ ನಾನಾ ಬಗೆಗಳ ನಿರೂಪಣೆ ಇದೆ. ಸಾಮಗ್ರಿ, ಸಂಕಲನ, ವಂಶಾವಳಿ, ಪಾಠಸಂಕಲನ, ಪಾಠಪರಿಷ್ಕರಣ, ಉನ್ನತವಿಮರ್ಶೆ ಎಂದು ಐದು ಹಂತಗಳಲ್ಲಿ ಪೂರ್ಣಗೊಳ್ಳ ಬೇಕಾದುದ್ದನ್ನು ವಿವೇಚಿಸಿದ್ದಾರೆ. 'ಶೇಷಕಾಂಡ'ದಲ್ಲಿ ಸಂಪಾದಕನ ಅರ್ಹತೆ ಮತ್ತು

ಸಂಪಾದನೆಯ ಮಹತ್ತ್ವ ನಿರೂಪಿತವಾಗಿದೆ.

'ಗ್ರಂಥ ಸಂಪಾದನಶಾಸ್ತ್ರ'ವು ಸಂಸ್ಕೃತಿಯ ಅಧ್ಯಯನಕ್ಕೆ ಸಾಧನವೆಂಬ ಪ್ರತಿಪಾದನೆ ಇಲ್ಲಿದೆ. ವ್ಯಾಕರಣ, ಛಂದಸ್ಸು, ವೈದ್ಯಶಾಸ್ತ್ರ, ಲೋಕೋಪಕಾರ ಮೊದಲಾದವುಗಳ ಅಭ್ಯಾಸಕ್ಕೆ ದುಷ್ಪಪಾಠಗಳು ಹೇಗೆ ಕಂಟಕವಾಗುತ್ತವೆ ಎಂಬುದರ ವಿವೇಚನೆಯೂ ಇದೆ. ಗ್ರಂಥಸಂಪಾದನ ಶಾಸ್ತ್ರದ ಸಂಪತ್ತನ್ನು ಹೆಚ್ಚಿಸಿರುವ ಈ ಗ್ರಂಥ ತನ್ನ ಅನನ್ಯತೆಯನ್ನು ಇಂದಿಗೂ ಉಳಿಸಿಕೊಂಡಿದೆ. 'ಸಂಶೋಧನಾಶಾಸ್ತ್ರ' ಕನ್ನಡಭಾಷೆ, ಸಾಹಿತ್ಯ, ಸಂಸ್ಕೃತಿ, ಜಾನಪದ, ಶಾಸನ ಕ್ಷೇತ್ರಗಳ ಸಂಶೋಧನೆಯ ಸ್ವರೂಪ, ವಿಧಿ-ವಿಧಾನಗಳ ಅಂತರ್ ಶಿಸ್ತೀಯ ಅಧ್ಯಯನಕ್ಕೆ ಆಕರಗ್ರಂಥವಾಗಿದೆ.

ಶಾಸನ ಸಂಶೋಧನೆಗೆ ಸಂಬಂಧಿಸಿದಂತೆ ಕಲಬುರ್ಗಿಯವರು ಗಣನೀಯ ಸೇವೆ ಮಾಡಿದ್ದಾರೆ. ಅವರು ರಚಿಸಿರುವ ೬೩ ಕೃತಿಗಳಲ್ಲಿ ಶಾಸನಕ್ಕೆ ಸಂಬಂಧಿಸಿದ ಕೃತಿಗಳು ೧೪. ಅವುಗಳನ್ನು ಮೂರು ರೀತಿಯಲ್ಲಿ ವಿಭಾಗಿಸಬಹುದು.

೧. ಆಕರ ಸಂಶೋಧನೆ-ಸೂಚಿಗಳು: ಧಾರವಾಡ, ವಿಜಾಪುರ ಜಿಲ್ಲೆಯ ಶಾಸನಸೂಚಿಗಳು, ಶಾಸನಗಳು: ಧಾರವಾಡ ತಾಲೂಕಿನ ಶಾಸನಗಳು, ಶಾಸನ ಸಂಪದ, ಶಾಸನ ಸೂಕ್ತಿ ಸುಧಾರ್ಣವ.

೨. ವಿಶ್ಲೇಷಣಾತ್ಮಕ ಸಂಶೋಧನೆ: ಬಸವಣ್ಣನವರನ್ನು ಕುರಿತ ಶಾಸನಗಳು, ಶಾಸನಗಳಲ್ಲಿ ಶಿವಶರಣರು, ಶಾಸನ ವ್ಯಾಸಂಗ ಭಾಗ-೧, ಮಹಾರಾಷ್ಟ್ರದ ಕನ್ನಡ ಶಾಸನಗಳು.

೩. ವ್ಯಾಖ್ಯಾನಾತ್ಮಕ ಸಂಶೋಧನೆ: ಶಾಸನ ವ್ಯಾಸಂಗ ಭಾಗ-೨, ಮಾರ್ಗ-೨ ಸಂಪುಟ ಶಾಸನ ಮಾರ್ಗ, ಐತಿಹಾಸಿಕ, ಮಾರ್ಗ-೨ ಸಂಪುಟದ ಕೆಲವು ಲೇಖನಗಳು, ಸಮಾಧಿ-ಬಲಿದಾನ ವಿವರಣ ಸ್ಮಾರಕಗಳು.

ಧಾರವಾಡ ಜಿಲ್ಲೆಯ ಶಾಸನ ಸೂಚಿ: ಧಾರವಾಡ ಜಿಲ್ಲೆಯ ೧೭ ತಾಲೂಕುಗಳಲ್ಲಿಯ ೧೦೧೫ ಊರುಗಳಲ್ಲಿ ಶಾಸನಗಳು ಸಿಕ್ಕಿದ್ದು ೫೪೬ ಊರುಗಳಲ್ಲಿ ಮಾತ್ರ. ಇವುಗಳಲ್ಲಿ ಪ್ರಕಟಿತ ಶಾಸನಗಳು ೧೧೯೬, ಅಪ್ರಕಟಿತ ೯೪೭. ಹಲವು ಸಂಪುಟಗಳಿಂದ ಸಂಗ್ರಹಿಸಿರುವ ಈ ಶಾಸನಗಳನ್ನು ವ್ಯವಸ್ಥಿತವಾಗಿ ಗ್ರಾಮಸಂಖ್ಯೆ, ಗ್ರಾಮದ ಹೆಸರು, ಶಾಸನದ ವರದಿ, ವರ್ಷ ಮತ್ತು ಸಂಖ್ಯೆ, ದೊರೆತ ಸ್ಥಳ, ಅರಸ, ಮಿತಿ, ಪ್ರಕಟನೆ ಹೀಗೆ ವಿಭಾಗಿಸಿಕೊಂಡು ದಾಖಲಿಸಲಾಗಿದೆ.

ಸವಣೂರು ತಾಲೂಕನ್ನು ಹೊರತುಪಡಿಸಿ ಉಳಿದೆಲ್ಲ ತಾಲೂಕುಗಳ ಶಾಸನಗಳು ಇಲ್ಲಿ ವ್ಯವಸ್ಥಿತವಾಗಿ ದಾಖಲಾಗಿದ್ದು ಶಾಸನ ಪರಿವೀಕ್ಷಣಾ ಕಾರ್ಯ ಕೈಗೊಳ್ಳುವವರಿಗೆ ಉಪಯುಕ್ತ ಆಕರವಾಗಿದೆ.

ವಿಜಾಪುರ ಜಿಲ್ಲೆಯ ಶಾಸನ ಸೂಚಿ: ಜಿಲ್ಲೆ, ತಾಲೂಕುಗಳ ೧೦೬೧ ಗ್ರಾಮಗಳಲ್ಲಿ ಶಾಸನಗಳಿರುವ ಹಳ್ಳಿಗಳ ಸಂಖ್ಯೆ ಕೇವಲ ೨೫೨. ಒಟ್ಟು ಶಾಸನಗಳು ೧೦೬೧. ಇವುಗಳಲ್ಲಿ ಪ್ರಕಟಿತ ೯೧೮, ಅಪ್ರಕಟಿತ ೧೪೩ ಶಾಸನಗಳು.

ಧಾರವಾಡ ತಾಲೂಕಿನ ಶಾಸನಗಳು: ಈ ತಾಲೂಕಿನ ೭೪ ಶಾಸನ ಪದ್ಯಗಳು ಇಲ್ಲಿ ಪ್ರಕಟಗೊಂಡಿದ್ದು ೨೫ ಹೊಸ ಶಾಸನಗಳು ಇದರಲ್ಲಿ ಸೇರಿವೆ. ಇದರಲ್ಲಿ ಪ್ರತಿಯೊಂದು ಶಾಸನದ ಪದ್ಯವನ್ನು ಮೂರು ಸ್ತರಗಳಲ್ಲಿ ನೀಡಲಾಗಿದೆ. ಶಾಸನ ಕ್ರಮಾಂಕ, ಗ್ರಾಮನಾಮ ಮತ್ತು ಕಾಲವನ್ನು ಕೊಡಲಾಗಿದೆ. ಎರಡನೆಯ ಸ್ತರದಲ್ಲಿ ಶಾಸನದ ಸ್ಥೂಲ ಪರಿಚಯ, ದೊರೆತ ಸ್ಥಳ, ಚಿತ್ರಗಳು, ಗಾತ್ರಗಳನ್ನು ನೀಡಿ ಕೊನೆಗೆ ಸಾರಾಂಶವನ್ನು ಕೊಡಲಾಗಿದೆ. ಮೂರನೇ ಸ್ತರದಲ್ಲಿ ಶಾಸನದ ಪರಿಷ್ಕೃತ ಪಾಠವನ್ನು ನೀಡಿದ್ದಾರೆ. ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಇರುವುದು ಇಲ್ಲಿಯ ವೈಶಿಷ್ಟ್ಯ.

ಬಸವಣ್ಣನವರನ್ನು ಕುರಿತ ಶಾಸನಗಳು: ೧೯೬೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದವರು ಏರ್ಪಡಿಸಿದ ಪ್ರಚಾರೋಪನ್ಯಾಸ ಮಾಲೆಯಲ್ಲಿ ನೀಡಿದ ಉಪನ್ಯಾಸದ ಸಂಗ್ರಹ ರೂಪವಿದು. ಅನೇಕ ಕೃತಿಗಳಲ್ಲಿ, ಸಂಪುಟಗಳಲ್ಲಿ, ಪತ್ರಿಕೆಗಳಲ್ಲಿ ಪ್ರಕಟಗೊಂಡ ಕರ್ನಾಟಕದ ೨೫೦೦೦ ಶಾಸನಗಳನ್ನು ಅಧ್ಯಯನ ಮಾಡಿ ೧೩೬ ಶಾಸನಗಳನ್ನು ಆಯ್ದುಕೊಂಡು ಅವುಗಳಲ್ಲಿ ಕಾಣಸಿಗುವ ೯೦ ಜನ ಶಿವಶರಣರನ್ನು ಗುರುತಿಸಿದ್ದಾರೆ. ಶಾಸನಗಳಲ್ಲಿ ಶಿವಶರಣರ ಬಗ್ಗೆ ಹೇಳಲಾಗಿರುವ ಅಲೌಕಿಕ, ಪವಾಡ ಘಟನೆಗಳನ್ನು ವಿವರಿಸಿ, ಶಾಸನಗಳಲ್ಲಿ ಷಟ್ ಸ್ಥಲ, ಅಷ್ಟಾವರಣಗಳ ಉಲ್ಲೇಖಗಳಿರುವುದನ್ನು ಪಟ್ಟಿ ಮಾಡಿದ್ದಾರೆ.

ಶಾಸನ ವ್ಯಾಸಂಗ, ಭಾಗ-೧: ಎಲ್ಲಾ ಶಾಸನಗಳನ್ನು ಮೂಲ ಆಕರ ಗಳನ್ನಾಗಿಸಿಕೊಂಡು ಶಾಸನಕವಿಗಳು, ಲಿಪಿಕಾರರು ಹಾಗು ರೂವಾರಿಗಳ ನಡುವಿನ ಅಂತರವನ್ನು ಖಚಿತಪಡಿಸುತ್ತಾರೆ. ಶಾಸನ ಸಾಹಿತ್ಯವನ್ನು ವಿವೇಚಿಸಿ ನೃಪತುಂಗ ಪೂರ್ವಯುಗ, ಅನಂತರದ ಯುಗ, ವಿಜಯನಗರ ಯುಗ ಎಂದು ಕಾಲ, ಭಾಷೆ,

ರಾಜಮನೆತನಗಳ ಆಧಾರದಿಂದ ವಿಭಜಿಸಿದ್ದಾರೆ. ಕಾವ್ಯಗಳ ಪ್ರಭಾವ ಶಾಸನಗಳ ಮೇಲೆ, ಶಾಸನಗಳ ಪ್ರಭಾವ ಕಾವ್ಯಗಳ ಮೇಲೆ ಒಡಮೂಡಿದ್ದನ್ನು ತಿಳಿಸಿ ಪಾಠಪರಿಷ್ಕರಣ ಹೇಗೆ ಮಾಡಬಹುದು ಎಂಬುದನ್ನು ತಿಳಿಸಿದ್ದಾರೆ.

ಮಹಾರಾಷ್ಟ್ರದ ಕನ್ನಡ ಶಾಸನಗಳು: ಮಹಾರಾಷ್ಟ್ರ ಭಾಗದಲ್ಲಿ ದೊರೆಯುವ ಒಟ್ಟು ಶಾಸನಗಳಲ್ಲಿ ಬಹುಪಾಲು ಕನ್ನಡ ಮತ್ತು ಸಂಸ್ಕೃತ ಶಾಸನಗಳು. ಇಂದಿನ ಕರ್ನಾಟಕಕ್ಕೆ ಭೂಗೋಲ ಸಣ್ಣದು ಇತಿಹಾಸ ದೊಡ್ಡದು; ಇಂದಿನ ಮಹಾರಾಷ್ಟ್ರಕ್ಕೆ ಭೂಗೋಲ ದೊಡ್ಡದು ಇತಿಹಾಸ ಸಣ್ಣದು ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಕಲ್ಬುರ್ಗಿಯವರ ಸಾಹಿತ್ಯ ಸಾಧನೆಗೆ ಅನೇಕ ಪ್ರಶಸ್ತಿಗಳು ಮತ್ತು ಗೌರವಗಳು ಸಂದಿವೆ.

ಮೈಸೂರಿನ ದೇಜಗೌ ಟ್ರಸ್‌ನ ವಿಶ್ವಮಾನವ ಪ್ರಶಸ್ತಿ (1990), ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ, ಪಂಪ ಪ್ರಶಸ್ತಿ (1996) ಚಿದಾನಂದ ಪ್ರಶಸ್ತಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಜಾನಪದತಜ್ಞ ಪ್ರಶಸ್ತಿ (1997) ವರ್ಧಮಾನ ಪ್ರಶಸ್ತಿ ಮತ್ತು 'ಮಾರ್ಗ-4' ಎಂಬ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (2007), ನೃಪತುಂಗ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಬಸವ ಪುರಸ್ಕಾರ ಲಭಿಸಿವೆ.

ತಂಜಾವೂರಿನಲ್ಲಿ ನಡೆದ ಅಖಿಲ ಭಾರತ ಸ್ಥಳನಾಮವಿಜ್ಞಾನ ಕುರಿತ ವಿಚಾರಸಂಕಿರಣದ ಅಧ್ಯಕ್ಷತೆ, ಮಹಾಲಿಂಗ ಪುರದಲ್ಲಿ ನಡೆದ ಅಖಿಲ ಕರ್ನಾಟಕ ಪ್ರಥಮ ಶ್ರೀಕೃಷ್ಣ ಪಾರಿಜಾತ ಸಮ್ಮೇಳನದ ಅಧ್ಯಕ್ಷತೆ, ಮೂಡಬಿದಿರೆಯ ವಿದ್ಯಾಗಿರಿಯಲ್ಲಿ ನಡೆದ ಆಳ್ವಾಸ್ ನುಡಿಸಿರಿ (2011) ಇದರ ಸರ್ವಾಧ್ಯಕ್ಷತೆಯ ಗೌರವಗಳು ಲಭಿಸಿವೆ.

'ಕಲ್ಬುರ್ಗಿ-60' ಮತ್ತು 'ಮಹಾಮಾರ್ಗ' ಎಂಬ ಅಭಿನಂದನ ಗ್ರಂಥಗಳನ್ನು ಇವರಿಗೆ ಸಮರ್ಪಿಸಲಾಗಿದೆ.

ಇವರು 30, ಆಗಸ್ಟ್ 2015 ರಂದು ನಿಧನರಾದರು.

❐ ❐

ಎಂ.ಬಿ. ನೇಗಿನಹಾಳ

(೧೯೪೦-೧೯೯೯)

ಗಿರೀಶ್ ಮೂಗ್ತಿಹಳ್ಳಿ

ಕನ್ನಡ ಭಾಷೆ ಮತ್ತು ಅದರ ಪ್ರಾಚೀನತೆಯನ್ನು, ಕನ್ನಡ ನಾಡು ಮತ್ತು ಅದರ ಸೊಗಸನ್ನು ಸಂಶೋಧನೆ ಮಾಡಲು ತೊಡಗಿಸಿಕೊಂಡವರ ವಲಯದಲ್ಲಿ ಸದಾ ನೆನಪಾಗುವ ಹೆಸರು ಡಾ.ಎಂ.ಬಿ. ನೇಗಿನಹಾಳ. ಪ್ರತಿಭೆ ಮತ್ತು ಪಾಂಡಿತ್ಯದ ಸಂಗಮವಾಗಿದ್ದ ಇವರು ಶಾಸನ ಸಾಹಿತ್ಯ, ಸಂಶೋಧನೆ, ಭಾಷಾಶಾಸ್ತ್ರ ಹಾಗೂ ಜಾನಪದ ವಲಯದಲ್ಲಿ ಸ್ವಯಂಪ್ರೇರಿತರಾಗಿ ತೊಡಗಿಸಿಕೊಂಡ ರೀತಿ ನಿಜಕ್ಕೂ ಅವಿಸ್ಮರಣೀಯ.

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಮಲಾಪಹಾರಿ ನದಿ ತಟದಲ್ಲಿ ನೇಗಿನಹಾಳ ಎಂಬ ಪುಟ್ಟ ಗ್ರಾಮ. ಇದೊಂದು ಸರ್ವಧರ್ಮ ಸಮನ್ವಯವಾಗಿರುವ ಸಾಂಸ್ಕೃತಿಕ ಹಳ್ಳಿ. ಇಲ್ಲಿ ೧೯೪೦ರಲ್ಲಿ ಜನಿಸಿದ ಎಂ.ಬಿ. ನೇಗಿನಹಾಳರು ತಮ್ಮ ಬಾಲ್ಯವನ್ನು ನೇಗಿನಹಾಳದಲ್ಲೇ ಕಳೆದರು. ಕಡುಬಡತನದಲ್ಲಿಯೇ ಬದುಕನ್ನು ಸಾಗಿಸುತ್ತಿದ್ದ ಇವರಿಗೆ ತಂದೆ ಬಾಳಪ್ಪನವರು ಸ್ವಾಭಿಮಾನದ ಬದುಕನ್ನು ಕಲಿಸಿದರು. ಪ್ರತಿಭಾ ಸಂಪನ್ನರಾದ ನೇಗಿನಹಾಳರು ಗಣಿತ, ಬಾಯಿಲೆಕ್ಕ, ಇತಿಹಾಸ, ಭೂಗೋಳ ಯಾವ ವಿಷಯವೇ ಇರಲಿ, ಕೇಳಿದ ಪ್ರಶ್ನೆಗಳಿಗೆ ತಕ್ಷಣ ದಿಟ್ಟತನದಿಂದ ಉತ್ತರ ನೀಡುತ್ತಿದ್ದರು. ಮುಲ್ಕೀ ಪರೀಕ್ಷೆಯಲ್ಲಿ ಅವರು ಇಡೀ ಕೇಂದ್ರಕ್ಕೆ ಪ್ರಥಮರಾಗಿ ಪಾಸಾದರು. ಅನಂತರ ಬೆಳಗಾವಿಗೆ ಬಂದ ನೇಗಿನಹಾಳರು ಬೆಳಗಾವಿಯಲ್ಲೇ ತಮ್ಮ ವಿದ್ಯಾಭ್ಯಾಸ ವನ್ನು ಮುಂದುವರಿಸಿದರು. ೧೯೬೩ರಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆಹೊಂದಿದರು. ಅನಂತರ ಬೆಳಗಾವಿಯ ಶಿಕ್ಷಕ ತರಬೇತಿ ಕೇಂದ್ರದಲ್ಲಿ ತರಬೇತಿ ಪಡೆದು ಶಿಕ್ಷಕರಾದರು. ೧೯೬೭ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಬಿ.ಎ., ೧೯೭೦ರಲ್ಲಿ ಎಂ.ಎ. ಪದವಿಯನ್ನು ಪಡೆದರು.

ಕೆ.ಎಲ್.ಇ. ಸಂಸ್ಥೆಯ ಕಾಡಸಿದ್ಧೇಶ್ವರ ಕಾಲೇಜಿನಲ್ಲಿ ಅಧ್ಯಾಪಕರಾಗಿ ಹದಿನಾಲ್ಕು ವರ್ಷಗಳ ಸೇವೆಯ ಬಳಿಕ ೧೯೮೪ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಎಂ.ಎಂ ಕಲಬುರ್ಗಿಯವರ ಸಲಹೆಯಂತೆ ಸಂದರ್ಶನದಲ್ಲಿ ಭಾಗವಹಿಸಿ ರೀಡರ್ ಹುದ್ದೆಗೇರಿದರು. ಮುಂದೆ ೧೯೯೨ರಲ್ಲಿ ಭೂತರಾಮನ ಹಟ್ಟಿಯಲ್ಲಿ ಸ್ನಾತಕೋತ್ತರ ಕೇಂದ್ರ ಆರಂಭವಾದಾಗ ಮೊದಲ ಆಡಳಿತ ಅಧಿಕಾರಿಯಾಗಿ ಜವಾಬ್ದಾರಿ ಹೊತ್ತುಕೊಂಡರು. ೧೯೯೪–೯೫ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ 'ಕನ್ನಡ ಅಧ್ಯಯನ ಪೀಠ'ಕ್ಕೆ ಮುಖ್ಯಸ್ಥರಾದರು. ಅಲ್ಲದೆ, ಸೆನೆಟ್ ಸದಸ್ಯರಾಗಿ, ಕಲಾನಿಕಾಯದ ಡೀನರಾಗಿ, ಅಕಾಡೆಮಿಕ್ ಕೌನ್ಸಿಲ್ಲಿನ ಸದಸ್ಯರಾಗಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ಎಂ.ಬಿ. ನೇಗಿನಹಾಳ ಅವರ ಅಧ್ಯಯನವು ಭಾಷಿಕ, ಜಾನಾಂಗಿಕ ಮತ್ತು ಜಾನಪದ– ಹೀಗೆ ವಿವಿಧ ನೆಲೆಗಳಲ್ಲಿ ಕಂಡುಬರುತ್ತದೆ. ಇವರ ಸಂಶೋಧನೆಯ ಬಹುಪಾಲು ಲೇಖನಗಳು ಕನ್ನಡ ಚಿಂತನ–ಮಂಥನದ ಸಂದರ್ಭಗಳಲ್ಲಿ ಮೊದಲ ಬಾರಿಗೆ ಚರ್ಚೆಯಾಗಿವೆ. ಈ ಮೂಲಕ ಇವರ ವ್ಯಾಪಕ ಓದು, ದೃಷ್ಟಿಕೋನ ಹೇಗಿದೆ ಎಂಬುದು ಅರ್ಥವಾಗುತ್ತದೆ.

ಡಾ. ಎಂ.ಬಿ. ನೇಗಿನಹಾಳ ಅವರು ಎಂ.ಎಂ. ಕಲಬುರ್ಗಿ ಅವರ ಮಾರ್ಗದರ್ಶನದಲ್ಲಿ ೧೯೭೧ರಲ್ಲಿ ಪ್ರಪ್ರಥಮವಾಗಿ ಬರೆದ ಲೇಖನ 'ಪೊನ್ನನ ಭುವನೈಕ ರಾಮಾಭ್ಯುದಯ'. ಈ ಕಾವ್ಯದ ನಾಯಕ ಯಾರು? ಎಂಬ ಪ್ರಶ್ನೆಗೆ 'ನಾಯಕ ಬನ ವಾಸಿಯ ಶಂಕರಗಂಡನೆಂದು' ಡಿ. ಎಲ್. ನರಸಿಂಹಾಚಾರ್ಯರು ವ್ಯಕ್ತಪಡಿಸಿದ ಅಭಿಪ್ರಾಯವನ್ನು ನಿರಾಕರಿಸಿದ ದ.ರಾ. ಬೇಂದ್ರೆಯವರು, "ಚಕ್ರವರ್ತಿಯಿಂದ ಕವಿಚಕ್ರವರ್ತಿಯೆಂದು ಬಿರುದು ಪಡೆಯಬೇಕಾದರೆ ಅವನನ್ನೆ ಕುರಿತು ಕಾವ್ಯವನ್ನು ಬರೆಯಬೇಕು; ಅವನ ಸಾಮಂತನನ್ನು ಕುರಿತಲ್ಲ"– ಎಂಬ ತರ್ಕವನ್ನು ಮುಂದೊಡ್ಡುತ್ತಾ ರಾಷ್ಟ್ರಕೂಟ ಮೂರನೆಯ ಕೃಷ್ಣನು ಅದರ ನಾಯಕ ನಿರಬೇಕೆಂಬ ಊಹೆ ಮಾಡಿದರು (ಪ್ರಬುದ್ಧ ಕರ್ನಾಟಕ, ಸಂಪುಟ–೧೫, ಸಂಚಿಕೆ–೨ ಮತ್ತು ೪). ಆದರೆ ನೇಗಿನಹಾಳರು 'ಭುವನೈಕ ರಾಮಾಭ್ಯುದಯ'ದ ಕಾವ್ಯನಾಯಕ ಶಂಕರಗಂಡನೆಂದು ಪ್ರತಿವಾದಿಸಿದರು.

ನೇಗಿನಹಾಳರ ಇಂತಹ ಸಂಶೋಧನ ಪ್ರವೃತ್ತಿಯನ್ನು ಅವರ ಗುರುಗಳಾದ ಎಂ.ಎಂ ಕಲಬುರ್ಗಿಯವರು ಒಪ್ಪಿ, ತಮ್ಮ ಶಿಷ್ಯನ ಬಗ್ಗೆ ಹೀಗೆ ಹೇಳುತ್ತಾರೆ: ''ನನ್ನ ಶಿಷ್ಯರಾಗಿದ್ದ ''ಡಾ. ನೇಗಿನಹಾಳ ಒಮ್ಮೊಮ್ಮೆ ನನಗಿಂತಲೂ ತೀಕ್ಷ್ಣವಾಗಿ ಕೆಲವು ಹೊಸ ಹೊಸ ಹೊಳಹುಗಳನ್ನು ಕಂಡುಹಿಡಿಯುತ್ತಿದ್ದರು. ಇಂಥ ಸಂದರ್ಭದಲ್ಲಿ ಅವರ ವಿಚಕ್ಷಣಾ ದೃಷ್ಟಿಗೆ ನಾನು ಬೆರಗಾಗುತ್ತಿದ್ದೆ''(ಕನ್ನಡ ಕಟ್ಟಿದವರು ಮಾಲೆ, ಡಾ. ಎಂ.ಬಿ. ನೇಗಿನಹಾಳ, ಪು.ಸಂ. ೧೦೨).

ಎಂ.ಬಿ. ನೇಗಿನಹಾಳ ಅವರು ತಮ್ಮ ಪಿಹೆಚ್.ಡಿ. ಪದವಿಯ ಆಯ್ಕೆ ಮಾಡಿಕೊಂಡ ವಿಷಯದ ಆಯ್ಕೆಯ ಹಿನ್ನೆಲೆ ಮತ್ತು ಮಹತ್ವದ ಬಗ್ಗೆ ಇವರ ಗುರುಗಳಾದ ಎಂ.ಎಂ ಕಲಬುರ್ಗಿ ಅವರು ಹೀಗೆ ಹೇಳುತ್ತಾರೆ: ''ನನ್ನ ಅತ್ಯಂತ ಆತ್ಮೀಯ ಶಿಷ್ಯರಲ್ಲಿ ವೀರಣ್ಣ ರಾಜೂರ ಮತ್ತು ಎಂ.ಬಿ. ನೇಗಿನಹಾಳ ಅತ್ಯಂತ ಪ್ರಮುಖರು. ಯಾಕೆಂದರೆ ಇಬ್ಬರು ನನ್ನ ಸಂಶೋಧನೆಯ ಕಾರ್ಯವನ್ನು ಅಚ್ಚುಕಟ್ಟಾಗಿ ಮುಂದುವರಿಸಿದರು. ಅವರು ಪಿಹೆಚ್.ಡಿ.ಗೆ ವಿಷಯ ಆಯ್ದುಕೊಂಡಿದ್ದು 'ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನ'. ಈ ವಿಷಯ ಕೇಳಿದಾಗ ನನಗೆ ಡಾ. ನೇಗಿನಹಾಳರ ಬಗ್ಗೆ ಒಲವು ಮೂಡಿತು. ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನದ ವಿಷಯದಲ್ಲಿ ಈ ಮೊದಲು ಪ್ರಯತ್ನ ಮಾಡಿದವರು ಡಾ. ಎ.ಎನ್. ನರಸಿಂಹಯ್ಯ ಮತ್ತು ಡಾ. ಜಿ.ಎಸ್. ಗಾಯಿ ಅವರು. ಆದರೆ ಅವರ ಅಧ್ಯಯನಕ್ಕೆ ಅವರದೇ ಆದ ಒಂದು ಮಿತಿ ಮತ್ತು ಶಕ್ತಿ ಇತ್ತು. ಡಾ. ನೇಗಿನಹಾಳ ಅವರು ಸಮಗ್ರ ಅಧ್ಯಯನದ ಕೊರತೆಯನ್ನು ನಿವಾರಿಸಿದರು, ಅಂತೆಯೇ ಅವರ ಮಹಾಪ್ರಬಂಧಕ್ಕೆ ಒಂದು ಬೆಲೆ ಇದೆ'' (ಕನ್ನಡ ಕಟ್ಟಿದವರು, ಡಾ. ಎಂ.ಬಿ ನೇಗಿನಹಾಳ, ಪು. ೯೯).

ಅನೇಕ ಸವಾಲುಗಳನ್ನು ಹೊತ್ತುಕೊಂಡು, ನೇಗಿನಹಾಳರು ಕರ್ನಾಟಕ ಶಾಸನಗಳಲ್ಲಿ ಪ್ರಾಕೃತ–ಸಂಸ್ಕೃತ–ಕನ್ನಡ ಪ್ರಭೇದಗಳನ್ನು ಸ್ಪಷ್ಟವಾಗಿ ಗುರುತಿಸಿದ್ದಾರೆ. ಜೊತೆಗೆ ಕನ್ನಡ ವರ್ಣಗಳು, ಶಬ್ದರೂಪ, ಸ್ವೀಕರಣ, ನಾಮಪದ, ಕ್ರಿಯಾಪದ, ವಾಕ್ಯ ಮುಂತಾದ ವಿಷಯಗಳನ್ನು ಅಧ್ಯಯನ ಮಾಡಿದ್ದಾರೆ. ಕನ್ನಡ ಭಾಷೆಯ ಪ್ರಪ್ರಥಮ ಆಧಾರಗಳು ಎರಡನೆಯ ಶತಮಾನದ ಮಳವಳ್ಳಿ ಮತ್ತು ಸನ್ನತಿಯ ಪ್ರಾಕೃತ ಶಾಸನಗಳಲ್ಲಿ ಕಂಡು ಬರುವುದನ್ನು ಇವರು ಗುರುತಿಸಿ ಕನ್ನಡದ ಪ್ರಾಚೀನತೆಯನ್ನು ಸ್ಪಷ್ಟಪಡಿಸಿದ್ದಾರೆ.

ಕನ್ನಡ ನಾಡು–ನುಡಿಗಳ ಪ್ರಾಚೀನತೆಯ ಬಗ್ಗೆ ಅನೇಕ ವಿದ್ವಾಂಸರು ತಮ್ಮದೇ ಆದ ರೀತಿಯಲ್ಲಿ ಸಂಶೋಧನೆ ನಡೆಸಿ ತಮ್ಮ ಅಭಿಪ್ರಾಯಗಳನ್ನು ದಾಖಲಿಸಿದ್ದಾರೆ. ಮುಂದುವರಿದ ಸಾಲಿನಲ್ಲಿ ಎಂ.ಬಿ. ನೇಗಿನಹಾಳ ಕೂಡ ಒಬ್ಬರು. ಇವರು ತಮಗೆ ಸಿಕ್ಕ ಆಧಾರಗಳ ಮೇಲೆ ತಮ್ಮದೇ ಆದ ಸಂಶೋಧನ ನಿಲುವುಗಳನ್ನು ಪ್ರತಿಪಾದಿಸುತ್ತಾ ನಾಡು–ನುಡಿಗಳ ಪ್ರಾಚೀನತೆಯನ್ನು ದಾಖಲಿಸಿದ್ದಾರೆ. ಬಿಂಜ ಎಂಬ ಪದದ ವಿಚಾರವಾಗಿ ಎಂ.ಬಿ ನೇಗಿನಹಾಳ ಅವರು 'ಕಣ್ಮರೆಯಾದ ಕನ್ನಡ–ಬಿಂಜ' ಎಂಬ ಸಂಶೋಧನ ಲೇಖನವನ್ನು ಬರೆದಿದ್ದಾರೆ. ಬಿಂಜ ಶಬ್ದ ವಿಂಧ್ಯದ ತದ್ಭವವೆಂದು ಕೇಶಿರಾಜ ಹೇಳುತ್ತಾನೆ ಎಂದು ಹೇಳುವ ಮೂಲಕ ಕನ್ನಡದ ಅನೇಕ ಕೃತಿಗಳಲ್ಲಿ ಬಿಂಜ ಶಬ್ದದ ಪ್ರಯೋಗವಿರುವುದನ್ನು ತಿಳಿಸುತ್ತಾರೆ. ''ಕರ್ನಾಟಕ ಶಬ್ದಸಾರ, ಕರ್ನಾಟಕ ಶಬ್ದಮಂಜರಿ, ಕರ್ನಾಟಕ ಭಾರತ ನಿಘಂಟುಗಳು ಈ ಪದಕ್ಕೆ ಕೇವಲ ಅಡವಿ, ಅರಣ್ಯ ಎಂಬ ಸಾಮಾನ್ಯಾರ್ಥ ನೀಡಿವೆಯೆ ಹೊರತು ವಿಂಧ್ಯ ಪರ್ವತವೆಂಬ ವಿಶಿಷ್ಟಾರ್ಥ ನೀಡಿಲ್ಲ. ಪ್ರಾಚೀನ ಕೃತಿಗಳ ಹಲವು ಪ್ರಯೋಗಗಳು ಇದನ್ನು ಸಾಮಾನ್ಯಾರ್ಥದಲ್ಲಿಯೇ ಪ್ರಯೋಗಿಸಿವೆ. ಇದು ಸಂಸ್ಕೃತ ಮೂಲದ ಪದವಲ್ಲ; ಆರ್ಯೇತರ–ದ್ರಾವಿಡ ಮೂಲದ್ದು. ಇದರ ಅರ್ಥ ಕಾಡು, ಅರಣ್ಯ ಎಂದೇ. ಹರಿಹರ ಕೇವಲ ಕಾಡು ಎಂದರ್ಥದಲ್ಲಿ ವಿಂಧ್ಯ ಶಬ್ದವನ್ನು ಪ್ರಯೋಗಿಸಿದ್ದಾನೆ. ವಿಂಧ್ಯವಾಸಿನಿ ಎಂದಿರುವ ದುರ್ಗೆಯ ಹೆಸರಿಗೆ ಕಾಡಿನಲ್ಲಿ ವಾಸಿಸುವ ಜೀವಿ ಎಂದು ಅರ್ಥ. ಈ ಪ್ರದೇಶದವನಾದ ಪ್ರಸಿದ್ಧ ವೈಯಾಕರಣಿ ವ್ಯಾಡಿ ಕೂಡ ವಿಂಧ್ಯವಾಸಿನ್ ಎಂದು ಪ್ರಸಿದ್ಧಿ ಪಡೆದವನು. ಆದ್ದರಿಂದ ಕಾಡು, ಕುಂದ, ಗುಡ್ಡ, ಬೆಟ್ಟ, ಮಲೆ ಮೊದಲಾದವುಗಳಂತೆ ವಿಂಜ/ಬಿಂಜವೂ ಕನ್ನಡ ಮೂಲದ್ದು. ತಮಿಳು ತೆಲುಗಿನಲ್ಲಿ ಇಂಥದೊಂದು ಪದವಿಲ್ಲ'' (ನೇಗಿನಹಾಳ ಪ್ರಬಂಧಗಳು, ಪು. ೩೨–೩೩) ಎಂದು ದಾಖಲಿಸಿದ್ದಾರೆ.

ಡಿ.ಎಲ್. ನರಸಿಂಹಚಾರ್ಯರು 'ಡಂಗ' ಎಂಬ ಪದವು ಪಂಪಭಾರತದ ಪದ್ಯಗಳಾದ ೨–೯೦ ಹಾಗೂ ೯–೩೯ರಲ್ಲಿ ಪ್ರಯೋಗವಾಗಿರುವುದನ್ನು ಗುರುತಿಸಿದ್ದಾರೆ. ಶಾಸನ ಅಥವಾ ಕಾವ್ಯಗಳಲ್ಲಿ ಈ ಪದ ಬಳಕೆಯಾಗಿರುವುದು ತೀರ ಅಪರೂಪ. ಇದರ ಅರ್ಥವಂತೂ ಪಂಪಭಾರತದ ಲಿಪಿಕಾರರಿಗೆ ಕತ್ತಲೆಯೊಳಗಿನ ಕಾಡಿಗೆ ಕಣ. ಆದುದರಿಂದ ಅವರು ತಮ್ಮ ಬುದ್ಧಿಗನುಸಾರವಾಗಿ ಈ ಪದ್ಯಗಳಿಗೆ ಅರ್ಥ ಹಚ್ಚಿ ಅವನ್ನು ತಿದ್ದುವ ಪ್ರಯತ್ನ ಮಾಡಿದ್ದಾರೆ. ಆದರೂ ಅವರು 'ಡಂಗ' ಪದವನ್ನು ವ್ಯತ್ಯಾಸಗೊಳಿಸಿಲ್ಲ''. (ನೇಗಿನಹಾಳ ಪ್ರಬಂಧಗಳು, ಪು.೮) ಎಂದು

ಹೇಳುತ್ತಲೇ ಇದಕ್ಕೊಂದು ತಾರ್ಕಿಕ ಅಭಿಪ್ರಾಯ ಕೊಡುತ್ತಾರೆ. 'ನಾಂದೇಡ ಜಿಲ್ಲೆಯ ಶಾಸನಗಳು' ಎಂಬ ಸಂಗ್ರಹದಲ್ಲಿ ತಡಖೇಲ ಶಾಸನದಲ್ಲಿ ದಂಡನಾಯಕ ನಾಗವರ್ಮನು ಡಂಗ, ಸವಲಕ್ಕವಿಂಜ, ವರಾಳ, ಲಂಜಿ, ಚಕ್ರಗೊಟ್ಟ ಮುಂತಾದ ರಾಜರನ್ನು ಸೋಲಿಸಿ ಚಕ್ರಿಗೆ ನೆಲವನ್ನು ನಿರ್ಮಿಸಿದನೆಂಬ ಉಲ್ಲೇಖದ ಆಧಾರದಲ್ಲಿ 'ಡಂಗ'ವನ್ನು 'ಸುಂಕದಕಟ್ಟೆ', 'ಠಾಣ್ಯ' ಎಂಬ ಅರ್ಥಗಳು ಹೊಂದುವುದಿಲ್ಲ. ಅದು ಒಂದು ಊರು ಅಥವಾ ಪ್ರದೇಶ ಎಂದು ಸ್ಪಷ್ಟಪಡಿಸಿದ್ದಾರೆ.

"ಅಶೋಕನ ಶಾಸನಗಳಲ್ಲಿ ಚೋಳ, ಪಾಂಡ್ಯ ಮತ್ತು ಕೇರಳಗಳ ಸ್ಪಷ್ಟ ನಿರ್ದೇಶನವಿದೆ. ಆದರೆ ಅವುಗಳಲ್ಲಿ ಕರ್ನಾಟಕದ ಭಾಗಗಳನ್ನು ಸ್ಪಷ್ಟವಾಗಿ ನಿರ್ದೇಶಿಸಲಿಲ್ಲ. 'ಸತಿಯಪುತ್ರ'ವೊಂದನ್ನು ಮಾತ್ರ ನಿರ್ದೇಶಿಸಲಾಗಿದೆ. 'ಸತಿಯ ಪುತ್ರ'ವೆಂದರೆ ಇಂದಿನ ದಕ್ಷಿಣ ಕನ್ನಡದ ಪ್ರದೇಶವೆಂದು ಊಹಿಸಲಾಗಿದೆ. ಇದು ಕೂಡ ದ್ರಾವಿಡ ಮೂಲದ ಪದವಲ್ಲ" (ನೇಗಿನಹಾಳ ಪ್ರಬಂಧಗಳು, ಪು.೨೭) ಎಂದು ಹೇಳಿದ್ದಾರೆ.

ಅಶೋಕನ ಬ್ರಹ್ಮಗಿರಿ ಶಾಸನದಲ್ಲಿ ಇರುವ 'ಇಸಿಲ' ಎಂಬ ಸ್ಥಳದ ಹೆಸರು ಕನ್ನಡ ಮೂಲದ್ದೆಂದು ಡಿ.ಎಲ್.ಎನ್. ಅಭಿಪ್ರಾಯ ಪಟ್ಟಿದ್ದಾರೆ. 'ಇಸಿಲ' ಎಂಬುದು 'ಎಸಿಲ್' ಎಂಬ ಕನ್ನಡ ಶಬ್ದದ ಪ್ರಾಕೃತ ರೂಪವೆಂದೂ ಅದರ ತಮಿಳು ಜ್ಞಾತಿಪದ 'ಎಯಿಲ್' ಎಂದೂ ಅವರು ತಿಳಿಸುತ್ತಾರೆ. ಆದರೆ ಇದು ಕನ್ನಡ ಭಾಷೆಯ ಯಾವ ಹಂತದಲ್ಲೂ ಪ್ರಯೋಗದಲ್ಲಿದ್ದುದು ಕಂಡುಬಂದಿರುವುದಿಲ್ಲ (ನೇಗಿನಹಾಳ ಪ್ರಬಂಧ ಗಳು, ಪು. ೨೭) ಎಂದು ಹೇಳುತ್ತಲೇ, ಇದರಲ್ಲಿಯ ಇಲ್/ಇಲ ಎಂಬುದು ಸ್ಥಳವಾಚಕಗಳಲ್ಲಿ ಕಂಡುಬರುವ ಒಂದು ವಾರ್ಗಿಕ ರೂಪ. ಆದರೆ 'ಇಸ್' ಎಂದರೆ ಏನೆಂದು ಹೇಳುವುದು ಕಷ್ಟ. (ನೇಗಿನಹಾಳ ಪ್ರಬಂಧಗಳು, ಪು. ೩೯) ಎಂದು ನೇಗಿನಹಾಳ ಅಭಿಪ್ರಾಯಪಡುತ್ತಾರೆ.

ಕ್ರಿ.ಪೂ.ಒಂದನೆಯ ಶತಮಾನದ ಮಾಧವಪುರ ವಡಗಾವಿ(ಬೆಳಗಾವಿ) ಶಾಸನದಲ್ಲಿ '(ಸ)ಣಾಟಪತಿ' ಎಂಬ ಪ್ರಯೋಗ ಕಂಡುಬರುತ್ತದೆ. ಇಲ್ಲಿ 'ಣಾಟಪತಿ' ಎಂಬ ಪ್ರಾತಿಪದಿಕಕ್ಕೆ 'ಸ' ಎಂಬ ಷಷ್ಠಿ ವಿಭಕ್ತಿ ಪ್ರತ್ಯಯ ಸೇರಿದೆ. ಪ್ರಾಕೃತ ಶಾಸನಗಳಲ್ಲಿ 'ನ'ಕಾರಕ್ಕೆ ಬದಲು 'ಣ'ಕಾರ ಬರುವುದು ಅವರೂಪವೇನಲ್ಲ. ಆದುದರಿಂದ ಇದು 'ನಾಟಪತಿ' ಎಂಬ ಅರಿಸಮಾಸ. 'ನಾಟ' ಎಂದರೆ 'ನಾಡು' ಎಂಬುದರ ಪ್ರಾಚೀನ

ರೂಪ. ಪುನ್ನಾಟ, ಕರ್ನಾಟ ಎಂಬ ರೂಪಗಳಲ್ಲಿಯೂ 'ನಾಟ' ಎಂಬುದು ಉತ್ತರ ಪದವಾಗಿರುವುದನ್ನು ನೋಡಬಹುದು. ಆದುದರಿಂದ ಕನ್ನಡ ಭಾಷೆಯ ನಿರ್ದಿಷ್ಟ ಪದವೆಂದು ಇದನ್ನು ಸ್ವೀಕರಿಸಬಹುದು. (ನೇಗಿನಹಾಳ ಪ್ರಬಂಧಗಳು, ಪು.೩೯)

"ಕ್ರಿ.ಶ. ನಾಲ್ಕನೆಯ ಶತಮಾನಕ್ಕೆ ಸೇರಿದ ಚಂದ್ರವಳ್ಳಿ ಶಾಸನದಲ್ಲಿ 'ಪುನಾಟ' (ಅಥವಾ ಪುಣಡ) ಎಂಬ ಉಲ್ಲೇಖವಿದೆ. ಇದು ಪುನ್ನಾಟ ಎಂಬುದರ ಪ್ರಾಕೃತಿಕ ರೂಪ. ಡಿ.ಎಲ್.ಎನ್ ಇದನ್ನು 'ಪುನಲ್+ನಾಟ' ಎಂದು ಬಿಡಿಸಿದ್ದಾರೆ. ಇದರ ಉತ್ತರ ಪದವಾದ 'ನಾಟ' ಎಂಬ ರೂಪವು ಕನ್ನಡ ಮೂಲದ್ದೆಂಬ ಬಗೆಗೆ ಭಿನ್ನಾಭಿ ಪ್ರಾಯವಿರಲಾರದು. ಕ್ರಿ.ಶ. ಆರನೆಯ ಶತಮಾನದ ಸಂಸ್ಕೃತ ಶಾಸನವೊಂದು 'ಪುಂರಾಷ್ಟ್ರ' ಎಂದು ಪುನ್ನಾಟವನ್ನು ಹೆಸರಿಸಿದೆ. ಇಂದಿನ ಮೈಸೂರು ಜಿಲ್ಲೆಯಲ್ಲಿ ಪ್ರಾಚೀನ ಕಾಲದಲ್ಲಿದ್ದ ಚಿಕ್ಕ ರಾಜ್ಯವೇ ಈ 'ಪುನ್ನಾಟ'. ಕ್ರಿ.ಶ. ಎರಡನೆಯ ಶತಮಾನದ ಗ್ರೀಕ್ ಭೂಗೋಲಜ್ಞ ಟಾಲೆಮಿ ಕೂಡ ಇದನ್ನು ಹೆಸರಿಸಿದ್ದಾರೆ" (ನೇಗಿನಹಾಳ ಪ್ರಬಂಧಗಳು, ಪು. ೨೯).

ಕನ್ನಡ ನಾಡು–ನುಡಿಗಳ ಬಗೆಗೆ, ಹೀಗೆ ತಮ್ಮದೇ ಆದ ವಿಶಿಷ್ಟ ಆಲೋಚನೆಗಳನ್ನು ವ್ಯಕ್ತಪಡಿಸುವುದರ ಜತೆಗೆ 'ಕಾಲ ವಿಷಯಕ ಚರ್ಚೆಯಲ್ಲಿ ವಡ್ಡಾರಾಧನೆಯ ಭಾಷೆ', 'ಕವಿರಾಜಮಾರ್ಗ ಪೂರ್ವದ ಕೆಲವು ಅಪೂರ್ವ ಛಂದೋಬಂಧಗಳು', 'ಕರ್ನಾಟಕದ ಪ್ರಾಕೃತ ಶಾಸನಗಳಲ್ಲಿನ ವ್ಯಕ್ತಿನಾಮಗಳು', 'ಕರ್ನಾಟಕದ ಶಾಸನಗಳು', 'ಹಲ್ಮಿಡಿ ಶಾಸನದ ಅರ್ಥವಿವೇಚನೆ' ಇತ್ಯಾದಿ ಹಲವಾರು ಸಂಗತಿಗಳನ್ನು ತಮ್ಮ ವಿವೇಚನೆಯ ಹಾದಿಯಲ್ಲಿ ವಿಸ್ತರಿಸಿದ್ದಾರೆ. ಈ ಮೂಲಕ ಕನ್ನಡ ಪರಂಪರೆಯ ದೃಷ್ಟಿಯಿಂದ ಗಟ್ಟಿಯಾದ ಕೆಲಸಮಾಡಿ; ಅಪರೂಪದ ಸಂಸ್ಕೃತಿಯ ಶೋಧಕರೂ ಕನ್ನಡ ನಾಡು ಕಂಡ ಶ್ರೇಷ್ಠ ಚಿಂತಕರೂ ಆಗಿದ್ದಾರೆ. ಅವರ ಕೆಲವು ಪ್ರಕಟಿತ ಪುಸ್ತಕಗಳು ಹೀಗಿವೆ:

ಚಿಕ್ಕದೇವರಾಯ ವಂಶಾವಳಿ, ಗದ್ಯಾನುವಾದ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೧.

ಆಯ್ದ ರಗಳೆಗಳು (ಹರಿಹರ ಕೃತ) (ಸಂ) ೧೯೮೧.

ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೮೨.

ಮೈಲಾರಲಿಂಗನ ಪದಗಳು ಭಾಗ–೧, ೧೯೮೩.

ಮೈಲಾರಲಿಂಗನ ಪದಗಳು ಭಾಗ–೨, ೧೯೯೦.

ಶಿವಲೆಂಕಮಂಚಣ್ಣನ ವಚನಗಳು(ಸಂ), ಮೂರುಸಾವಿರಮಠ,ಹುಬ್ಬಳ್ಳಿ, ೧೯೮೭.

ಪೂರ್ವದ ಹಳಗನ್ನಡ ಶಾಸನಗಳ ಸಾಹಿತ್ಯಕ ಅಧ್ಯಯನ, ಕರ್ನಾಟಕ ವಿಶ್ವವಿದ್ಯಾಲಯ, ೧೯೯೪.

ಸಿದ್ಧರಾಮ ಚಾರಿತ್ರ (ರಾಘವಾಂಕಕೃತ, ಸಂ.) ತೋಂಟದಾರ್ಯ ಮಠ, ಗದಗ, ೧೯೯೯.

ನೇಗಿನಹಾಳ ಪ್ರಬಂಧಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

ನೇಗಿನಹಾಳ ಅವರ ಪರಿಶ್ರಮ, ಸಂಶೋಧನ ಪ್ರವೃತ್ತಿ, ಸತ್ಯಾನ್ವೇಷಣೆ ಮೆಚ್ಚತಕ್ಕವು. ಪ್ರಾಚೀನ ಶಾಸನಗಳ ಭಾಷಿಕ ಅಧ್ಯಯನವನ್ನು ಪ್ರಾಮಾಣಿಕವಾಗಿ ನಿರ್ವಹಿಸಿದ್ದಲ್ಲದೆ ಪ್ರಾಚೀನ ಕನ್ನಡ ಭಾಷೆಯ ಮೇಲೆ ಪ್ರಾಕೃತ ಪ್ರಭಾವದ ಬಗೆಗೆ ಅವರು ವಿವೇಚನೆ ಮಾಡಿದರು. ನೇಗಿನಹಾಳ ಅವರಿಗೆ ಅನೇಕ ಪ್ರಶಸ್ತಿ, ಗೌರವಗಳು ಸಂದಿವೆ. 'ಮೈಲಾರಲಿಂಗ–ಖಂಡೋಬಾ' ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ ಲಭಿಸಿದೆ. ನೇಗಿನಹಾಳ ಅವರು ೪ ಮೇ ೧೯೯೯ರಂದು ನಿಧನರಾದರು.

❐ ❐ ❐

ಮುಖ್ಯ ಆಕರಗಳು

ಆಪ್ತರು ಆಚಾರ್ಯರು, ಡಾ.ಟಿವಿ. ವೆಂಕಟಾಚಲ ಶಾಸ್ತ್ರೀ, ಸಂಸ್ಕೃತಿ ಪಬ್ಲಿಷಿಂಗ್ ಹೌಸ್, ಮೈಸೂರು, ೨೦೦೫.

'ನಾಡಿಗೆ ನಮಸ್ಕಾರ' ಸಾಹಿತ್ಯ ಸಂಸ್ಕೃತಿ ಚಿಂತನ ಗ್ರಂಥಮಾಲೆ ಪ್ರಕಟಿಸಿದ ಪುಸ್ತಕಗಳು, ಕಾಂತಾವರ ಕನ್ನಡ ಸಂಘ, ಕಾಂತಾವರ.

ಮಹಾಮಾರ್ಗ, ತೋಂಟದಾರ್ಯಮಠ, ಡೊಂಬಳ, ಗದಗ, ೧೯೯೮.

ಮಾರ್ಗದರ್ಶಕಮಹನೀಯರು, ಡಾ.ಟಿವಿ. ವೆಂಕಟಾಚಲ ಶಾಸ್ತ್ರೀ, ಸಪ್ನ, ಬೆಂಗಳೂರು, ೨೦೦೨.

ಮುಲಕನಾಡು ಮಹನೀಯರು ಪುಸ್ತಕಗಳು, ಮೈಸೂರು ಮುಲಕನಾಡು ಸಭಾ, ಮೈಸೂರು.

ಸಾಲುದೀಪಗಳು, ಸಂಪಾದಕರು: ಜಿ.ಎಸ್. ಸಿದ್ಧಲಿಂಗಯ್ಯ, ಎಂ.ಎಚ್. ಕೃಷ್ಣಯ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೧೬ (ಐದನೆಯ ಮುದ್ರಣ).

ಸಾಹಿತ್ಯಪರ್ವ, (ಶಾಸ್ತ್ರೀಯ–ಸಂ.೧೪), ಡಾ.ಟಿವಿ. ವೆಂಕಟಾಚಲ ಶಾಸ್ತ್ರೀ, ಸಪ್ನ, ಬೆಂಗಳೂರು, ೨೦೨೪.

ಸಾಹಿತ್ಯ ಸನ್ನಿಧಿ, (ಶಾಸ್ತ್ರೀಯ–ಸಂ.೭), ಡಾ.ಟಿವಿ. ವೆಂಕಟಾಚಲ ಶಾಸ್ತ್ರೀ, ಸಪ್ನ, ಬೆಂಗಳೂರು, ೨೦೦೮.

Sons of Sarasvatī, Chinya Ravishankar, Permanent Black, Ashoka University, Ranikher, 2017.

ನಮ್ಮ ಲೇಖಕರು

ಡಾ. ಅಕ್ಕಮಹಾದೇವಿ
56, ಸಿ.ಎಚ್.7, ಎರಡನೇ ಕ್ರಾಸ್
ಕುಕ್ಕರಹಳ್ಳಿ, ಸರಸ್ವತಿಪುರಂ
ಮೈಸೂರು 570009

ಡಾ. ಅನ್ನಪೂರ್ಣ ಎನ್.ಎಸ್.
ಹಿರಿಯ ಸಂಶೋಧಕರು
ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ, ಮೈಸೂರು 570006

ಡಾ. ಕಲಾಶ್ರೀ ಎಚ್ ಎಂ
ನಿವೃತ್ತ ಕನ್ನಡ ಪ್ರಾಧ್ಯಾಪಕರು
ಸ್ವಸ್ಥಿಶ್ರೀ , ೫ ನೇ ಅಡ್ಡರಸ್ತೆ, ಮಾರುತಿ ದೇವಸ್ಥಾನದ ರಸ್ತೆ, ಸರಸ್ವತೀಪುರಂ,
ಮೈಸೂರು –೫೭೦೦೯

ಡಾ. ಗಿರೀಶ್ ಎಂ. ಬಿ.
ಮೂಗ್ತಿಹಳ್ಳಿ, ಚಿಕ್ಕಮಗಳೂರು–೫೭೭೧೩೩

ಗೀತಾ ನಾವಲ್
'ಹಂಸನಾದ', ಕೆಸರೆ 2ನೆ ಹಂತ, ಧೋಭಿ ಘಾಟ್ ಹಿಂಭಾಗ,
ಆರ್. ಎಸ್. ನಾಯ್ಡು ನಗರ, ಮೈಸೂರು 570007.

ಡಾ. ಗೌರಮ್ಮ ಎಚ್
ಉಪ ನಿರ್ದೇಶಕರು (ಪ್ರಭಾರ)
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸ ಗಂಗೋತ್ರಿ, ಮೈಸೂರು 570006

ಡಾ. ನಾಗರತ್ನಮ್ಮ
ನಂ. 632, ಏಳನೇ ತಿರುವು
ಜನತಾನಗರ, ಮೈಸೂರು

ಪವಿತ್ರ ಬಿ.
ಬುಕ್ಕನಹಳ್ಳಿ (ಗ್ರಾ), ಎನ್.ಕೊತ್ತೂರು (ಅಂ),
ಕಾಗತಿ (ಪಂ), ಚಿಂತಾಮಣಿ (ತಾ), ಚಿಕ್ಕಬಳ್ಳಾಪುರ (ಜಿ), ೫೬೩೧೨೫

ಡಾ. ಮಾಲಿನಿ ಎನ್. ಅಭ್ಯಂಕರ್
ಖಾಯಂ ವಿಳಾಸ– ಬಳ್ಳೂರು ಗ್ರಾಮ ಮತ್ತು ಅಂಚೆ,
ಸಾಲಿಗ್ರಾಮ ಹೋಬಳಿ ಮತ್ತು ತಾಲ್ಲೂಕು, ಕೆ. ಆರ್. ನಗರ,
ಮೈಸೂರು ಜಿಲ್ಲೆ 571604.

Poornima C.S.
#9533, 2nd phase, 4th stage
Vijayanagara, Mysuru 570032

Radhamani M.A c/o Shankaiah
Bannikuppe village and post
Hunsur taluq, Mysore district, 571105.

ಡಾ.ವಿನೋದ
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಎಂಎಂಕೆ ಮತ್ತು ಎ ಸ್ಡಿ ಎಂಮಹಿಳಾ ಮಹಾ ವಿದ್ಯಾಲಯ, ಮೈಸೂರು

Dr.Veeranna M.D.
Muratipalya village
Chamarajanagara tq and dist.

ಡಾ. ಬಿ. ವೆಂಕಟರಾಮಣ್ಣ
ನಂ. 632, ಏಳನೇ ತಿರುವು,
ಜನತಾನಗರ, ಮೈಸೂರು

Santhoshi Subrahmanya,
#4306, Trendz whispering woods,
Bogadi Gaddige main road, Mysore –27

ಡಾ. ಸಣ್ಣಪಾಪಯ್ಯ,
ಮನೆ ನಂಬರ್ 921, ಮೊದಲ ಮಹಡಿ, 5ನೇ ಅಡ್ಡರಸ್ತೆ,
ಆಶ್ರಮ ರಸ್ತೆ, ಹಿನಕಲ್, ಮೈಸೂರು, 570017